|| ಓಂ ಓಂ ನಮೋ ನಾರಾಯಣಾಯ|| ಶ್ರೀ ವೇದವ್ಯಾಸಾಯ ನಮಃ ||

## ಶ್ರೀ ಕೃಷ್ಣದ್ವೈಪಾಯನ ವೇದವ್ಯಾಸ ವಿರಚಿತ

# ಶ್ರೀ ಮಹಾಭಾರತ



## ಮುಖ್ಯ ಕಥಾ ಪ್ರಸಂಗಗಳು (ಸಂಪುಟ ೬)

ಡಾ| ಬಿ. ಎಮ್. ರಮೇಶ್


2011/09/27

# ಮುಖ್ಯ ಕಥಾ ಪ್ರಸಂಗಗಳು


ಸ್ತ್ರೀ ಪರ್ವ ........................................................................ 5

ಧೃತರಾಷ್ಟ್ರ ಶೋಕ ................................................................ 5

ಧೃತರಾಷ್ಟ್ರನು ಪಾಂಡವರನ್ನು ಭೇಟಿಮಾಡಿದುದು ........................ 38

ಗಾಂಧಾರೀ ಶಾಪ ............................................................... 64

ಶ್ರಾದ್ಧ ಮತ್ತು ಜಲತರ್ಪಣ ..................................................118

ಶಾಂತಿಪರ್ವ ......................................................................129

ಯುಧಿಷ್ಠಿರನ ಶೋಕ ............................................................129

ಯುಧಿಷ್ಠಿರನ ವೈರಾಗ್ಯ..........................................................156

ಯುಧಿಷ್ಠಿರನ ಪಟ್ಟಾಭಿಷೇಕ ..................................................281

ಕೃಷ್ಣನು ಯುಧಿಷ್ಠಿರನನ್ನು ಭೀಷ್ಮನ ಬಳಿ ಕರೆದುಕೊಂಡು ಹೋದುದು .307

ಯುಧಿಷ್ಠಿರ-ಭೀಷ್ಮ ಸಂವಾದ ..................................................347

ಅನುಶಾಸನ ಪರ್ವ ...............................................................364

ಭೀಷ್ಮಸ್ವರ್ಗಾರೋಹಣ .........................................................364

ಅಶ್ವಮೇಧಿಕ ಪರ್ವ ..............................................................379

ಪಾಂಡವರಿಗೆ ಮರುತ್ತನಿಧಿಲಾಭ ಮತ್ತು ಪರೀಕ್ಷಿತ್ಸಂಜೀವನ............444

ಅಶ್ವಮೇಧ ಯಜ್ಞ....................................................472
ಆಶ್ರಮವಾಸಿಕ ಪರ್ವ ....................................................569
ಧೃತರಾಷ್ಟ್ರ ವನಪ್ರಸ್ಥಾನ....................................................569
ಧೃತರಾಷ್ಟ್ರ ಶುಶ್ರೂಷಾ ....................................................569
ಪುತ್ರದರ್ಶನ....................................................657
ದಾವಾಗ್ನಿಯಲ್ಲಿ ಧೃತರಾಷ್ಟ್ರಾದಿಗಳ ದಹನ ....................................................716
ಮೌಸಲ ಪರ್ವ ....................................................732
ಯಾದವರ ವಿನಾಶ; ಕೃಷ್ಣಾವತಾರ ಸಮಾಪ್ತಿ....................................................732
ಮಹಾಪ್ರಸ್ಥಾನಿಕ ಪರ್ವ ....................................................779
ಮಹಾಪ್ರಸ್ಥಾನ....................................................779
ಸ್ವರ್ಗಾರೋಹಣ ಪರ್ವ ....................................................801
ಸ್ವರ್ಗದಲ್ಲಿ ಯುಧಿಷ್ಠಿರಾದಿಗಳು ....................................................801

# ಸ್ತ್ರೀ ಪರ್ವ




# ಧೃತರಾಷ್ಟ್ರ ಶೋಕ

## ಧೃತರಾಷ್ಟ್ರ-ಸಂಜಯರ ಸಂವಾದ

ಪುತ್ರಶತರನ್ನು ಕಳೆದುಕೊಂಡು ರೆಂಬೆಗಳು ಕಡಿದ ವೃಕ್ಷದಂತೆ ದೀನನಾಗಿದ್ದ, ಪುತ್ರಶೋಕದಿಂದ ಸಂತಪ್ತನಾಗಿದ್ದ, ಧ್ಯಾನ-

ಮೂಕತ್ವಗಳನ್ನು ಪಡೆದಿದ್ದ, ಚಿಂತೆಯಲ್ಲಿ ಮುಳುಗಿಹೋಗಿದ್ದ ಮಹೀಪತಿ ಧೃತರಾಷ್ಟ್ರನ ಬಳಿಹೋಗಿ ಮಹಾಪ್ರಾಜ್ಞ ಸಂಜಯನು ಇಂತೆಂದನು:

> “ಮಹಾರಾಜ! ಏಕೆ ಶೋಕಿಸುತ್ತಿರುವೆ? ಶೋಕದಿಂದ ಯಾವ ಸಹಾಯವೂ ದೊರಕುವುದಿಲ್ಲ! ಹದಿನೆಂಟು ಅಕ್ಷೌಹಿಣೀ ಸೇನೆಗಳು ನಾಶವಾದವು. ನಿರ್ಜನವಾಗಿರುವ ಈ ವಸುಮತಿಯು ಕೇವಲ ಶೂನ್ಯವಾಗಿ ತೋರುತ್ತಿದೆ! ನಾನಾ ದಿಕ್ಕುಗಳಿಂದ, ನಾನಾದೇಶಗಳಿಂದ ಬಂದು ಸೇರಿದ್ದ ನರಾಧಿಪರೆಲ್ಲರೂ ನಿನ್ನ ಪುತ್ರರೊಂದಿಗೆ ನಿಧನಹೊಂದಿದರು. ಪಿತೃಗಳ, ಪುತ್ರ-ಪೌತ್ರರ, ಬಾಂಧವರ, ಸುಹೃದಯರ ಮತ್ತು ಗುರುಜನರ ಪ್ರೇತಕಾರ್ಯಗಳನ್ನು ಯಥಾನುಕ್ರಮವಾಗಿ ಮಾಡಿಸು!”

ಆ ಕರುಣ ವಾಕ್ಯವನ್ನು ಕೇಳಿ ಪುತ್ರ-ಪೌತ್ರರ ವಧೆಯಿಂದ ದುಃಖಿತನಾಗಿದ್ದ ಧೃತರಾಷ್ಟ್ರನು ಭಿರುಗಾಳಿಯು ಬಡಿದ ವೃಕ್ಷದಂತೆ ಭೂಮಿಯಮೇಲೆ ಬಿದ್ದನು. ಧೃತರಾಷ್ಟ್ರನು ಹೇಳಿದನು:

> “ಪುತ್ರರನ್ನು ಕಳೆದುಕೊಂಡ, ಅಮಾತ್ಯರನ್ನು ಕಳೆದುಕೊಂಡ ಮತ್ತು ಸರ್ವ ಸುಹೃಜ್ಜನರನ್ನು ಕಳೆದುಕೊಂಡ ನಾನು ಈ

ಭೂಮಿಯಲ್ಲಿ ಸಂಚರಿಸುವ ದುಃಖವೇ ಆಗಿಬಿಟ್ಟಿದ್ದೇನೆ! ರೆಕ್ಕೆಗಳನ್ನು ಕಳೆದುಕೊಂಡು ಮುಪ್ಪಿನಿಂದ ಜೀರ್ಣವಾದ ಪಕ್ಷಿಯಂತಿರುವ ನನಗೆ ಇಂದು ಜೀವಿತವಿರುವುದರಿಂದ ಆಗಬೇಕಾದುದಾದರೂ ಏನಿದೆ? ರಾಜ್ಯದಿಂದ ಅಪಹೃತನಾದ, ಸುಹೃದ್ ಜನರು ಹತರಾದ ನಾನು ಕಿರಣಗಳನ್ನು ಕಳೆದುಕೊಂಡ ಸೂರ್ಯನಂತೆ ಇನ್ನು ಬೆಳಗಲಾರೆ! ಬಾರಿಬಾರಿ ಹೇಳುತ್ತಿದ್ದ ಸುಹೃದರಾಗಿದ್ದ ಜಾಮದಗ್ನಿ ಪರಶುರಾಮನ, ದೇವರ್ಷಿ ನಾರದನ ಮತ್ತು ಕೃಷ್ಣದ್ವೈಪಾಯನರ ಮಾತುಗಳನ್ನು ನಾನು ನಡೆಸಿಕೊಡಲಿಲ್ಲ. ಸಭಾಮಧ್ಯದಲ್ಲಿ ಕೃಷ್ಣನು – ರಾಜನ್! ಈ ವೈರವನ್ನು ಸಾಕುಮಾಡಿ ನಿನ್ನ ಮಗನನ್ನು ಹತೋಟಿಯಲ್ಲಿಟ್ಟುಕೋ – ಎಂದು ನನಗೆ ಹೇಳಿದ ಶ್ರೇಯ-ಹಿತ ವಚನವನ್ನು ದುರ್ಮತಿಯಾದ ನಾನು ಮಾಡದೇ ಇದ್ದುದಕ್ಕೆ ಈಗ ತುಂಬಾ ಪರಿತಪಿಸುತ್ತಿದ್ದೇನೆ! ಭೀಷ್ಮನು ಹೇಳಿದ್ದ ಧರ್ಮಯುಕ್ತ ಮಾತುಗಳನ್ನೂ, ದುರ್ಯೋಧನನ ಗೂಳಿಯಂಥಹ ಕೂಗನ್ನೂ ನಾನು ಕೇಳಲಿಲ್ಲ! ಇಂದು ದುಃಶಾಸನನು ಹತನಾದುದನ್ನು, ಕರ್ಣನು ವಿನಾಶಗೊಂಡಿದುದನ್ನು ಮತ್ತು ಸೂರ್ಯನಂತಹ

ದ್ರೋಣನಿಗೂ ಗ್ರಹಣವಾದುದನ್ನು ಕೇಳಿ ನನ್ನ ಹೃದಯವು ಸೀಳಿಹೋಗುತ್ತಿದೆ! ಸಂಜಯ! ಮೂಢನಾದ ನಾನು ಯಾವುದರ ಫಲವೆಂದು ಇದನ್ನು ಅನುಭವಿಸುತ್ತಿದ್ದೇನೋ ಅಂತಹ ದುಷ್ಕೃತವನ್ನು ಈ ಹಿಂದೆ ಮಾಡಿದುದು ನನ್ನ ನೆನಪಿಗೇ ಬರುತ್ತಿಲ್ಲ! ನನ್ನ ಹಿಂದಿನ ಜನ್ಮದಲ್ಲಿ ನಾನು ಏನಾದರೂ ಅಪಕೃತವನ್ನು ಮಾಡಿರಬೇಕು. ಅದರಿಂದಾಗಿಯೇ ಧಾತನು ನನ್ನನ್ನು ಈ ದುಃಖವನ್ನು ತರುವ ಕರ್ಮಗಳಲ್ಲಿ ನನ್ನನ್ನು ತೊಡಗಿಸಿದ್ದಾನೆ! ದೈವಯೋಗದ ಪರಿಣಾಮವಾಗಿಯೇ ವೃದ್ಧನಾಗಿರುವ ನನಗೆ ಸರ್ವಬಂಧುಗಳ ನಾಶ ಮತ್ತು ಸುಹೃದಯರ ವಿನಾಶವು ಬಂದೊದಗಿದೆ! ನನಗಿಂಥಲೂ ಹೆಚ್ಚು ದುಃಖಿತನಾಗಿರುವ ಇನ್ನೊಬ್ಬ ಪುರುಷನು ಈ ಲೋಕದಲ್ಲಿ ಬೇರೆ ಯಾರಿದ್ದಾರೆ? ಸಂಶಿತವ್ರತನಾಗಿ ನಾನು ಇಂದು ತೆರೆದಿರುವ ಈ ಬ್ರಹ್ಮಲೋಕದ ದೀರ್ಘಮಾರ್ಗವನ್ನೇ ಆಶ್ರಯಿಸುವುದನ್ನು ಪಾಂಡವರು ನೋಡಲಿ!”

ಹೀಗೆ ಬಹುಶೋಕಿತನಾಗಿ ಒಂದೇ ಸಮನೆ ಪ್ರಲಾಪಿಸುತ್ತಿರುವ ನರೇಂದ್ರನ ಶೋಕವನ್ನು ಹೋಗಲಾಡಿಸುವಂತಹ ಈ ಮಾತುಗಳನ್ನು

ಸಂಜಯನು ಹೇಳಿದನು:

“ರಾಜನ್! ಶೋಕವನ್ನು ತೊರೆ! ನೀನು ವೃದ್ಧರು ಹೇಳಿದ ವೇದನಿಶ್ಚಯಗಳನ್ನೂ, ವಿವಿಧ ಶಾಸ್ತ್ರ-ಆಗಮಗಳನ್ನೂ ಕೇಳಿದ್ದೀಯೆ. ಹಿಂದೆ ಪುತ್ರಶೋಕಾರ್ತನಾಗಿದ್ದ ಸೃಂಜಯನಿಗೆ ಮುನಿಗಳು ಹೇಳಿದುದನ್ನೂ ಕೇಳಿದ್ದೀಯೆ. ಯೌವನದಿಂದುಂಟಾದ ದರ್ಪವನ್ನು ನಿನ್ನ ಮಗನು ಆಶ್ರಯಿಸಿದ್ದಾಗ ನೀನು ಆಡುತ್ತಿರುವ ಸುಹೃದಯರ ಮಾತುಗಳನ್ನು ಗಮನಿಸಲಿಲ್ಲ. ಸ್ವಾರ್ಥ ಮತ್ತು ಫಲವನ್ನು ಭೋಗಿಸಲು ಇಚ್ಛಿಸಿದ್ದ ಅವನು ಲುಬ್ಧನಾಗಿ ಯಾವ ಪುರುಷಾರ್ಥ ಸಾಧನೆಯನ್ನೂ ಮಾಡಲಿಲ್ಲ. ದುಃಶಾಸನ, ದುರಾತ್ಮ ರಾಧೇಯ, ದುಷ್ಟಾತ್ಮ ಶಕುನಿ, ದುರ್ಮತಿ ಚಿತ್ರಸೇನ ಮತ್ತು ಇಡೀ ಜಗತ್ತಿಗೇ ಮುಳ್ಳಿನಂತಿದ್ದ ಶಲ್ಯರು ನಿನ್ನ ಮಂತ್ರಿಗಳಾಗಿದ್ದರು. ಕುರುವೃದ್ಧ ಭೀಷ್ಮ, ಗಾಂಧಾರೀ, ಮತ್ತು ವಿದುರರ ಮಾತಿನಂತೆ ನಿನ್ನ ಪುತ್ರನು ನಡೆದುಕೊಳ್ಳಲಿಲ್ಲ. ನಿತ್ಯವೂ ಯುದ್ಧಮಾಡಬೇಕೆಂದು ಹೇಳುತ್ತಿದ್ದನೇ ಹೊರತು ಉತ್ತಮವಾಗಿ ಯಾವ ಧರ್ಮಾಚರಣೆಯನ್ನೂ ಅವನು ಮಾಡಲಿಲ್ಲ. ಅವನು ಸರ್ವ ಕ್ಷತ್ರಿಯರನ್ನೂ

ವಿನಾಶಗೊಳಿಸಿದನು ಮತ್ತು ಶತ್ರುಗಳ ಯಶಸ್ಸನ್ನು ವರ್ಧಿಸಿದನು. ನೀನು ಮಧ್ಯಸ್ಥನಾಗಿದ್ದರೂ ತಕ್ಕುದಾದ ಯಾವ ಮಾತುಗಳನ್ನೂ ಆಡಲಿಲ್ಲ. ನೀನು ದುರ್ಧರನಾಗಿದ್ದೆ. ಆದರೂ ನೀನು ತಕ್ಕಡಿಯಂತೆ ಸಮನಾಗಿರಲಿಲ್ಲ. ಒಂದೇ ಕಡೆ ಭಾರವನ್ನು ಹೆಚ್ಚಿಸಿದೆ.  ನಡೆದುಹೋದ ನಂತರ ಪಶ್ಚಾತ್ತಾಪ ಪಡಬೇಕಾಗದಂತೆ, ಮನುಷ್ಯನು ಮೊದಲೇ ಯೋಗ್ಯರೀತಿಯಲ್ಲಿ ವರ್ತಿಸಬೇಕು. ಪುತ್ರನ ಮೇಲಿನ ವ್ಯಾಮೋಹದಿಂದ ನೀನು ಅವನಿಗೆ ಪ್ರಿಯವಾಗುವಂತೆ ಮಾಡಿಕೊಂಡು ಬಂದೆ. ಈಗ ಪಶ್ಚಾತ್ತಾಪಪಡುವ ಕಾಲವು ಬಂದಿದೆ. ನೀನು ಶೋಕಿಸಬಾರದು! ಮಧುವಿನ ಆಸೆಯಿಂದ ಕೇವಲ ಮಧುವನ್ನು ನೋಡಿಕೊಂಡು ಕೆಳಗಿರುವ ಪ್ರಪಾತವನ್ನು ಕಾಣದೇ ಭ್ರಷ್ಟನಾದವನಂತೆ ನೀನು ಈಗ ಶೋಕಿಸುತ್ತಿರುವೆ! ಶೋಕಿಸುವುದರಿಂದ ಯಾವ ಫಲವೂ ದೊರಕುವುದಿಲ್ಲ. ಶೋಕಿಸುವವನಿಗೆ ಸುಖವೂ ಇಲ್ಲ. ಶೋಕಿಸುವವನಿಗೆ ಸಂಪತ್ತು ದೊರಕುವುದಿಲ್ಲ. ಶೋಕಿಸಿದರೆ ಪರಮ ಗತಿಯೂ ದೊರಕುವುದಿಲ್ಲ. ಬೆಂಕಿಯನ್ನು ತಾನೇ ಹೊತ್ತಿಸಿ, ಬಟ್ಟೆಯಲ್ಲಿ ಅದನ್ನು ಕಟ್ಟಿಕೊಂಡು, ಅದು ಪ್ರಜ್ವಲಿಸಿ

ತನ್ನನ್ನೇ ಸುಡುವಾಗ ಪರಿತಾಪ ಪಡುವವನು ಖಂಡಿತವಾಗಿಯೂ ಪಂಡಿತನೆಂದೆನಿಸಿಕೊಳ್ಳುವುದಿಲ್ಲ. ನೀನೇ ನಿನ್ನ ಮಕ್ಕಳೊಂದಿಗೆ ಕಠೋರ ಮಾತೆಂಬ ಗಾಳಿಯನ್ನು ಬೀಸಿ, ಲೋಭವೆಂಬ ತುಪ್ಪವನ್ನು ಸುರಿದು ಪಾರ್ಥನೆಂಬ ಅಗ್ನಿಯನ್ನು ಪ್ರಜ್ವಲಿಸಿದ್ದೆ. ಉರಿಯುತ್ತಿರುವ ಆ ಅಗ್ನಿಯಲ್ಲಿ ಶಲಭಗಳಂತೆ ನಿನ್ನ ಪುತ್ರರು ಬೀಳಲು, ಕೇಶವನೆಂಬ ಜ್ವಾಲೆಯು ಅವರನ್ನು ಸುಟ್ಟುಹಾಕಿತು. ಅದರ ಕುರಿತು ನೀನು ಶೋಕಿಸುವುದು ಸರಿಯಲ್ಲ! ಕಣ್ಣೀರು ಬಿದ್ದು ಕಲುಷವಾದ ಮುಖವು ಅಶಾಸ್ತ್ರವಾದುದು. ಪಂಡಿತರು ಇದನ್ನು ಪ್ರಶಂಸಿಸುವುದಿಲ್ಲ. ಕಣ್ಣೀರು ಬೆಂಕಿಯ ಕಿಡಿಗಳಂತೆ ಮನುಷ್ಯರನ್ನು ಸುಡುತ್ತದೆ. ಆದುದರಿಂದ ಬುದ್ಧಿಯಿಂದ ಮನಸ್ಸನ್ನು ಗೆಲ್ಲು! ನಿನ್ನನ್ನು ನೀನೇ ಸ್ಥಿರಗೊಳಿಸಿಕೋ!”

## ವಿದುರನು ಆಧ್ಯಾತ್ಮ ವಿಷಯಗಳನ್ನು ತಿಳಿಸಿ ಧೃತರಾಷ್ಟ್ರನನ್ನು ಸಂತೈಸಿದುದು

ಮಹಾತ್ಮ ಸಂಜಯನು ಹೀಗೆ ಅವನನ್ನು ಸಂತವಿಸಲು ವಿದುರನು ಈ ಬುದ್ಧಿಪೂರ್ವಕ ಮಾತುಗಳನ್ನಾಡಿದನು:

“ಮೇಲೇಳು ರಾಜನ್! ಏಕೆ ಮಲಗಿರುವೆ? ಬುದ್ಧಿಯಿಂದ ನಿನ್ನ ಮನಸ್ಸನ್ನು ಸ್ಥಿರಗೊಳಿಸಿಕೋ! ಸ್ಥಿರಜಂಗಮಗಳು ಮತ್ತು ಮನುಷ್ಯರು ಎಲ್ಲರ ನಿರ್ಣಯವೂ ಒಂದೇ! ಸಂಗ್ರಹಿಸಿದುದೆಲ್ಲವೂ ಕಡಿಮೆಯಾಗುತ್ತವೆ. ಮೇಲೇರಿದವು ಕೆಳಗೆ ಬೀಳುತ್ತವೆ. ಸೇರುವಿಕೆಯು ವಿಯೋಗದಲ್ಲಿ ಕೊನೆಯಾಗುತ್ತದೆ. ಮತ್ತು ಜೀವನವು ಮರಣದಲ್ಲಿ ಕೊನೆಗೊಳ್ಳುತ್ತದೆ. ಶೂರನಾಗಿರಲಿ ಹೇಡಿಯಾಗಿರಲಿ ಯಮನು ಎಳೆದುಕೊಂಡು ಹೋಗುತ್ತಾನೆ. ಹೀಗಿರುವಾಗ ಕ್ಷತ್ರಿಯರು ಏಕೆ ಯುದ್ಧಮಾಡುವುದಿಲ್ಲ? ಯುದ್ಧಮಾಡದೇ ಉಳಿದುಕೊಂಡಿರುವವರು ಮತ್ತು ಯುದ್ಧಮಾಡಿಯೂ ಜೀವಂತವಿರುವವರು ಎಲ್ಲರಿಗೂ ಕಾಲವು ಒಂದೇರೀತಿಯಲ್ಲಿ ವರ್ತಿಸುತ್ತದೆ. ಶಾಸ್ತ್ರಗಳ ಪ್ರಮಾಣದ ಪ್ರಕಾರ ಯುದ್ಧದಲ್ಲಿ ಹತರಾದವರ ಕುರಿತು ಶೋಕಿಸಬಾರದು. ಏಕೆಂದರೆ ಅವರು ಪರಮ ಗತಿಯನ್ನು ಪಡೆದಿರುತ್ತಾರೆ. ಎಲ್ಲರೂ ವೇದಾಧ್ಯಯನ ಮಾಡಿದ್ದರು. ಎಲ್ಲರೂ ವ್ರತಗಳನ್ನು ನಡೆಸಿದ್ದರು. ಎಲ್ಲರೂ ಶತ್ರುಗಳನ್ನು ಎದುರಿಸಿಯೇ ಮಡಿದರು. ಅದರಲ್ಲಿ ದುಃಖಿಸುವುದೇನಿದೆ. ಕಣ್ಣಿಗೆ ಕಾಣಿಸದೇ ಇರುವಲ್ಲಿಂದ ಬಂದ

ಅವರು ಪುನಃ ಕಣ್ಣಿಗೆ ಕಾಣಿಸದೇ ಇರುವಲ್ಲಿಗೆ ಹೋಗಿದ್ದಾರೆ! ಅವರು ನಿನ್ನವರೂ ಅಲ್ಲ. ನೀನು ಅವರವನೂ ಅಲ್ಲ. ಅದರಲ್ಲಿ ದುಃಖಿಸುವುದೇನಿದೆ? ಸತ್ತರೂ ಸ್ವರ್ಗವನ್ನು ಪಡೆಯುತ್ತಾರೆ. ಕೊಂದರೂ ಯಶಸ್ಸನ್ನು ಪಡೆಯುತ್ತಾರೆ. ಇವೆರಡೂ ಮಹಾಗುಣಯುಕ್ತವಾದವುಗಳು. ಆದುದರಿಂದ ರಣದಲ್ಲಿ ಯಾವುದೂ ನಿಷ್ಫಲವಾಗುವುದಿಲ್ಲ. ಅವರ ಕಾಮನೆಗಳಿಗೆ ತಕ್ಕಂತೆ ಇಂದ್ರನೇ ಲೋಕಗಳನ್ನು ಸಿದ್ಧಪಡಿಸುತ್ತಾನೆ. ಅವರು ಇಂದ್ರನ ಅತಿಥಿಗಳೇ ಆಗುತ್ತಾರೆ. ರಣದಲ್ಲಿ ಹತರಾದ ಶೂರ ನರರು ಸ್ವರ್ಗಕ್ಕೆ ಹೋಗುವಂತೆ ಬಹಳ ದಕ್ಷಿಣೆಗಳನ್ನಿತ್ತು ಯಜ್ಞಗಳನ್ನು ಮಾಡುವುದರಿಂದಲೂ, ತಪಸ್ಸಿನಿಂದಲೂ ವಿದ್ಯೆಯಿಂದಲೂ ಸಾಧ್ಯವಿಲ್ಲ. ಈ ಸಂಸಾರದಲ್ಲಿ ನಾವು ಸಾವಿರಾರು ಮಾತಾ-ಪಿತೃಗಳನ್ನು, ನೂರಾರು ಮಕ್ಕಳು-ಪತ್ನಿಯರನ್ನು ಅನುಭವಿಸಿದ್ದೇವೆ. ಆದರೆ ಈಗ ಅವರು ಯಾರವರು ಮತ್ತು ನಾವು ಯಾರು? ಶೋಕಪಡಲು ಸಹಸ್ರಾರು ಕಾರಣಗಳಿರುತ್ತವೆ ಮತ್ತು ಭಯಪಡಲು ಸಹಸ್ರಾರು ಕಾರಣಗಳಿರುತ್ತವೆ. ಆದರೆ ಅವು ಕೇವಲ ಮೂಢರನ್ನು ದಿನನಿತ್ಯವೂ ಬಾಧಿಸುತ್ತಿರುತ್ತದೆ. ಪಂಡಿತರನ್ನಲ್ಲ.

ಕಾಲಕ್ಕೆ ಯಾರೂ ಪ್ರಿಯರಾದವರಿಲ್ಲ; ದ್ವೇಷಿಗಳೂ ಇಲ್ಲ. ಪ್ರೀತಿ-ದ್ವೇಷಗಳಿಲ್ಲದ ಮಧ್ಯಸ್ಥನೂ ಇಲ್ಲ. ಕಾಲವು ಸರ್ವವನ್ನೂ ಎಳೆದುಕೊಂಡು ಹೋಗುತ್ತದೆ. ಜೀವಿತ, ರೂಪ, ಯೌವನ, ದ್ರವ್ಯಸಂಚಯ, ಆರೋಗ್ಯ, ಪ್ರಿಯರೊಂದಿಗೆ ವಾಸ ಇವೆಲ್ಲರೂ ಅನಿತ್ಯವಾದವುಗಳು. ಪಂಡಿತನು ಇವುಗಳಲ್ಲಿ ಆಸೆಪಡುವುದಿಲ್ಲ. ದೇಶಕ್ಕೇ ಒದಗಿಬಂದಿರುವ ದುಃಖವನ್ನು ನಿನಗೊಬ್ಬನಿಗೇ ಬಂದಿರುವ ದುಃಖವೆಂದು ಶೋಕಿಸುವುದು ಸರಿಯಲ್ಲ. ಶೋಕಿಸುತ್ತಲೇ ಮರಣಹೊಂದಿದರೂ ಅವನ ಶೋಕವು ಹೋಗುವುದಿಲ್ಲ. ಪರಾಕ್ರಮವಿರುವವನು ಶೋಕಿಸುವುದಕ್ಕೆ ಬದಲಾಗಿ ಅದಕ್ಕೆ ಪರಿಹಾರವನ್ನು ಕಂಡುಕೊಳ್ಳಬೇಕು. ನಡೆದುಹೋಗಿದುದರ ಕುರಿತು ಚಿಂತಿಸದಿರುವುದೇ ದುಃಖಕ್ಕೆ ಚಿಕಿತ್ಸೆ. ಚಿಂತೆಯಿಂದ ದುಃಖವು ಇನ್ನೂ ಹೆಚ್ಚಾಗುವುದೇ ಹೊರತು ಶೋಕವು ಹೊರಟುಹೋಗುವುದಿಲ್ಲ. ಅಲ್ಪಬುದ್ಧಿಯ ಮನುಷ್ಯರು ಅನಿಷ್ಟವನ್ನು ಪಡೆಯುವುದರಿಂದ ಮತ್ತು ಪ್ರಿಯವಾದದ್ದನ್ನು ಕಳೆದುಕೊಳ್ಳುವುದರಿಂದ ಮಾನಸಿಕ ದುಃಖವನ್ನು ಅನುಭವಿಸುತ್ತಾರೆ. ಈ ಶೋಕವು ಅರ್ಥ-ಧರ್ಮ-ಸುಖಗಳ

ಸಾಧಕವಲ್ಲ. ಈ ರೀತಿಯ ದುಃಖವು ಮನುಷ್ಯನನ್ನು ಮಾಡಬೇಕಾದ ಕರ್ತವ್ಯದಿಂದ ಭ್ರಷ್ಟನನ್ನಾಗಿಸುತ್ತದೆ. ಧನದ ಬೇರೆ ಬೇರೆ ಅವಸ್ಥಾವಿಶೇಷಗಳನ್ನು ಹೊಂದಿ ಅಸಂತುಷ್ಟರಾಗಿ ನರರು ವಿಮೋಹಗೊಳ್ಳುತ್ತಾರೆ. ಆದರೆ ಪಂಡಿತರು ಅವುಗಳಿಂದ ಸಂತೋಷವನ್ನೇ ಪಡೆಯುತ್ತಾರೆ. ಮಾನಸಿಕ ದುಃಖವನ್ನು ಪ್ರಜ್ಞೆಯಿಂದಲೂ, ಶರೀರ ದುಃಖವನ್ನು ಔಷಧಗಳಿಂದಲೂ ಪರಿಹರಿಸಿಕೊಳ್ಳಬೇಕು. ಇದು ಜ್ಞಾನದ ಸಾಮರ್ಥ್ಯ. ಬಾಲಕರ ಸಮನಾಗಿರಬಾರದು. ಪೂರ್ವಕೃತ ಕರ್ಮವು ಮನುಷ್ಯನು ಮಲಗಿರುವಾಗ ಜೊತೆಯಲ್ಲಿಯೇ ಮಲಗುತ್ತದೆ, ನಿಂತಿರುವಾಗ ಜೊತೆಯಲ್ಲಿಯೇ ನಿಂತಿರುತ್ತದೆ ಮತ್ತು ಓಡಿ ಹೋಗುವಾಗ ಜೊತೆಯಲ್ಲಿಯೇ ಓಡಿ ಬರುತ್ತದೆ. ಯಾವ ಯಾವ ಅವಸ್ಥೆಗಳಲ್ಲಿ ಶುಭಾಶುಭ ಕರ್ಮಗಳನ್ನು ಮಾಡಿರುತ್ತಾನೋ ಅವುಗಳನ್ನು ಮನುಷ್ಯನು ಆಯಾ ಅವಸ್ಥೆಗಳಲ್ಲಿ ಅದೇ ಫಲಗಳನ್ನು ಪಡೆಯುತ್ತಾನೆ.”

ಧೃತರಾಷ್ಟ್ರನು ಹೇಳಿದನು:

“ಮಹಾಪ್ರಾಜ್ಞ! ಈ ಸುಭಾಷಿತಗಳಿಂದ ನನ್ನ ಶೋಕವು ದೂರವಾಗುತ್ತಿದೆ. ಇನ್ನೂ ಇಂತಹ ತತ್ತ್ವಯುಕ್ತ ಮಾತುಗಳನ್ನು

ಕೇಳಬಯಸುತ್ತೇನೆ. ಇಷ್ಟವಿಲ್ಲದವುಗಳ ಸಂಸರ್ಗದಿಂದಲೂ ಮತ್ತು ಇಷ್ಟವಾದವುಗಳ ತೊಗಲಿಕೆಯಿಂದಲೂ ಉಂಟಾಗುವ ಮಾನಸಿಕ ದುಃಖಗಳಿಂದ ಪಂಡಿತರು ಹೇಗೆ ಬಿಡುಗಡೆ ಹೊಂದುತ್ತಾರೆ?"

ವಿದುರನು ಹೇಳಿದನು:

"ಯಾವ-ಯಾವ ಸಾಧನಗಳಿಂದ ಮನಸ್ಸು ದುಃಖ-ಸುಖಗಳಿಂದ ಮುಕ್ತವಾಗುವುದೇ ಆಯಾ ಸಾಧನಗಳನ್ನು ಬಳಸಿ ಮನಸ್ಸನ್ನು ಶಾಂತಗೊಳಿಸಿ ತಿಳಿದವರು ಸುಗತಿಯನ್ನು ಹೊಂದುತ್ತಾರೆ. ಆಲೋಚಿಸಿದರೆ ಇವೆಲ್ಲವೂ ಅಶಾಶ್ವತವು. ಬಾಳೆಯ ದಿಂಡಿನಂತೆ ಈ ಲೋಕವು ಸಾರವಿಲ್ಲದ್ದು. ಮರ್ತ್ಯರ ದೇಹಗಳು ಮನೆಗಳಂತೆ ಎಂದು ಪಂಡಿತರು ಹೇಳುತ್ತಾರೆ. ಕಾಲಾಂತರದಲ್ಲಿ ನಷ್ಟವಾಗಿಹೋಗುತ್ತದೆ. ಆದರೆ ಅದರೊಳಗಿರುವ ಶೋಭಿಸುವ ಸತ್ತ್ವವೊಂದೇ ಉಳಿದುಕೊಳ್ಳುತ್ತದೆ. ಮನುಷ್ಯನು ಹೇಗೆ ಉಟ್ಟಿದ ವಸ್ತ್ರವು ಹಳೆಯದಾಗಿರಲಿ ಅಥವಾ ಹಳೆಯದಾಗದೇ ಇರಲಿ ಬೇರೊಂದನ್ನು ಬಯಸುತ್ತಾನೋ ಹಾಗೆ ಶರೀರಗಳಲ್ಲಿರುವುದೂ ಹೊಸ ದೇಹಗಳನ್ನು ಬಯಸುತ್ತದೆ.

ಭೂತಗಳು ಸುಖ ಅಥವಾ ದುಃಖಗಳನ್ನು ತಾವೇ ಮಾಡಿದ ಕರ್ಮಗಳಿಂದ ಪಡೆಯುತ್ತಾರೆ. ಕರ್ಮಗಳಿಂದಲೇ ಸ್ವರ್ಗ, ಸುಖ ಮತ್ತು ದುಃಖಗಳು ದೊರೆಯುತ್ತವೆ. ಸ್ವಾಧೀನನಾಗಿರಲಿ ಅಥವಾ ಪರಾಧೀನನಾಗಿರಲಿ ಮನುಷ್ಯನು ಅವುಗಳ ಭಾರವನ್ನು ಹೊರಲೇ ಬೇಕಾಗುತ್ತದೆ. ಶರೀರವು ಮಣ್ಣಿನ ಮಡಿಕೆಯಂತೆ. ಅದನ್ನು ತಯಾರಿಸುವ ಪ್ರತಿಯೊಂದು ಹಂತದಲ್ಲಿಯೂ ಅದು ಒಡೆದುಹೋಗಬಹುದು. ಹದಮಾಡಿದ ಮಣ್ಣನ್ನು ಚಕ್ರದಮೇಲೆ ಇರಿಸಿ ಚಕ್ರವನ್ನು ಒಂದೆರಡು ಬಾರಿ ತಿರುಗಿಸುತ್ತಲೇ ಅದು ಒಡೆಯಬಹುದು. ಅರ್ಧಾಕಾರವು ಬಂದಮೇಲೆ ಅಥವಾ ಸಂಪೂರ್ಣ ಮಡಿಕೆಯ ಆಕಾರ ಬಂದಾಗ ಅಥವಾ ಮಡಿಕೆಯನ್ನು ಚಕ್ರದಿಂದ ಮೇಲೆತ್ತುವಾಗ ಅಥವಾ ಕೆಳಕ್ಕಿಡುವಾಗ ಅಥವಾ ಒಣಗಿದ ಮೇಲೂ ಅಥವಾ ಬೇಯಿಸುವಾಗಲೂ, ಬೇಯಿಸಿ ಮೇಲೆತ್ತುವಾಗ ಅಥವಾ ಕಟ್ಟಕಡೆಗೆ ಉಪಯೋಗಿಸುವಾಗಲೂ ಮಡಿಕೆಯು ಒಡೆದುಹೋಗಬಹುದು. ದೇಹಗಳೂ ಹಾಗೆಯೇ. ಗರ್ಭಸ್ಥನಾಗಿರುವಾಗ, ಅಥವಾ ಹುಟ್ಟುವಾಗ, ಅಥವಾ ಹುಟ್ಟಿ ಒಂದು ದಿನಸದ ನಂತರ, ಅಥವಾ ಅರ್ಧಮಾಸದಲ್ಲಿ,

ಅಥವಾ ಒಂದೇ ತಿಂಗಳಿನಲ್ಲಿ, ಅಥವಾ ಒಂದು ಸಂವತ್ಸರವಾದಮೇಲೆ, ಅಥವಾ ಎರಡು ವರ್ಷಗಳಲ್ಲಿ, ಅಥವಾ ಯೌವನಾವಸ್ಥೆಯಲ್ಲಿದ್ದಾಗ ಅಥವಾ ಮಧ್ಯವಯಸ್ಸಿನಲ್ಲಿದ್ದಾಗ, ಅಥವಾ ವೃದ್ಧಾಪ್ಯದಲ್ಲಿ ಶರೀರವು ನಾಶವಾಗಬಹುದು. ಹಿಂದಿನ ಕರ್ಮಗಳಿಗನುಗುಣವಾಗಿ ಭೂತಗಳು ಇರುತ್ತವೆ ಅಥವಾ ಇಲ್ಲವಾಗುತ್ತವೆ. ಈ ರೀತಿ ಲೋಕವು ನಡೆಯುತ್ತಿರುವಾಗ ಅದರಲ್ಲಿ ಏಕೆ ಪರಿತಪಿಸುತ್ತೀಯೆ? ಕ್ರೀಡಾರ್ಥವಾಗಿ ನೀರಿನಲ್ಲಿ ಕೆಲವೊಮ್ಮೆ ಮುಳುಗಿ ಮತ್ತು ಕೆಲವೊಮ್ಮೆ ಮೇಲೆ ತೇಲಿ ಈಸುವಂತೆ ಈ ಗಹನ ಸಂಸಾರದಲ್ಲಿ ಮೇಲೆದ್ದುಕೊಂಡು ಅಥವಾ ಮುಳುಗಿಕೊಂಡು ಈಸುತ್ತೇವೆ. ಕರ್ಮಭೋಗಕ್ಕೆ ಬದ್ಧರಾದ ಅಲ್ಪಬುದ್ಧಿಗಳು ಇದರಿಂದ ದುಃಖಿತರಾಗುತ್ತಾರೆ. ಸತ್ಯದಲ್ಲಿಯೇ ಇದ್ದುಕೊಂಡು ಸಂಸಾರದಲ್ಲಿ ಸರ್ವ ಭೂತಗಳ ಸಮಾಗಮಗಳ ರಹಸ್ಯವನ್ನು ತಿಳಿದುಕೊಂಡಿರುವ ಪ್ರಾಜ್ಞರು ಪರಮ ಗತಿಯನ್ನು ಹೊಂದುತ್ತಾರೆ.”

ಧೃತರಾಷ್ಟ್ರನು ಹೇಳಿದನು:

“ಮಾತುನಾಡುವವರಲ್ಲಿ ಶ್ರೇಷ್ಠ! ಈ ಅಗಾಧ ಸಂಸಾರವನ್ನು

ಹೇಗೆ ತಿಳಿದುಕೊಳ್ಳಬೇಕು? ಇದನ್ನು ಕೇಳಲು ಬಯಸುತ್ತೇನೆ. ಕೇಳುತ್ತಿರುವ ನನಗೆ ಈ ತತ್ತ್ವವನ್ನು ಹೇಳು.”

ವಿದುರನು ಹೇಳಿದನು:

“ಪ್ರಭೋ! ಜನ್ಮಪ್ರಭೃತಿ ಭೂತಗಳ ಕ್ರಿಯೆಗಳೆಲ್ಲವನ್ನೂ ಕೇಳು. ಜನ್ಮಕ್ಕೆ ಮೊದಲು ಸ್ವಲ್ಪಕಾಲ ಗರ್ಭವು ಕಲಲದಲ್ಲಿ ವಾಸಿಸಿರುತ್ತದೆ. ಅನಂತರ ಐದು ತಿಂಗಳು ಕಳೆಯಲು ಮಾಂಸದ ರೂಪವನ್ನು ಪಡೆಯುತ್ತದೆ. ಆಗ ಗರ್ಭವು ಸರ್ವಾಂಗಗಳನ್ನು ಪಡೆದು ಸಂಪೂರ್ಣವಾಗುತ್ತದೆ. ಮಾಂಸರಕ್ತಗಳಿಂದ ಲೇಪನಗೊಂಡು ಅದು ಅಮೇಧ್ಯದ ಮಧ್ಯದಲ್ಲಿ ವಾಸಮಾಡುತ್ತದೆ. ಅನಂತರ ವಾಯುವೇಗದ ಕಾರಣದಿಂದ ಗರ್ಭವು ತಲೆಕೆಳಗೆ ಕಾಲು ಮೇಲೆಮಾಡಿಕೊಳ್ಳುತ್ತದೆ. ಯೋನಿದ್ವಾರಕ್ಕೆ ಬಂದು ಅದು ಅನೇಕ ಕ್ಲೇಶಗಳನ್ನು ಅನುಭವಿಸುತ್ತದೆ. ಪೂರ್ವಕರ್ಮಗಳನ್ನು ಹೊತ್ತುತಂದಿರುವ ಅದು ಯೋನಿಪೀಡನೆಯನ್ನು ಅನುಭವಿಸುತ್ತದೆ. ಯೋನಿಪೀಡೆಯಿಂದ ಬಿಡುಗಡೆಹೊಂದಿ ಸಂಸಾರದಲ್ಲಿ ಅನ್ಯ ಉಪದ್ರವಗಳನ್ನು ಕಾಣುತ್ತದೆ. ನಾಯಿಗಳು ಮಾಂಸವನ್ನು ಹುಡುಕಿಕೊಂಡು ಹೋಗುವಂತೆ ಗ್ರಹಗಳು

ಹುಟ್ಟಿದ ಮಗುವನ್ನು ಕಾಡುತ್ತವೆ. ಸಮಯವು ಕಳೆಯುತ್ತಿದ್ದಂತೆ ತನ್ನ ಕರ್ಮಗಳಿಂದಲೇ ಬಂಧಿತನಾದ ಜೀವವನ್ನು ವ್ಯಾಧಿಗಳು ಸಮೀಪಿಸುತ್ತವೆ. ಇಂದ್ರಿಯಗಳೆಂಬ ಹಗ್ಗಗಳಿಂದ ಬಂಧಿತನಾದ ಮತ್ತು ವಿಷಯಗಳಿಗೆ ಅಂಟಿಕೊಂಡಿರುವ ಆ ಜೀವವನ್ನು ವ್ಯಸನಗಳೂ ಕಾಡುತ್ತವೆ. ಅವುಗಳಿಂದ ಬಂಧಿತನಾದ ಅವನು ತೃಪ್ತಿಯನ್ನೇ ಹೊಂದುವುದಿಲ್ಲ. ಆಗ ಅವನಿಗೆ ಯಮಲೋಕಕ್ಕೆ ಹೋಗುವೆನೆಂಬ ಅರಿವೆಯೇ ಇರುವುದಿಲ್ಲ. ಸಮಯಬಂದಾಗ ಯಮದೂತರಿಂದ ಎಳೆಯಲ್ಪಟ್ಟ ಅವನು ಮೃತ್ಯುವನ್ನು ಹೊಂದುತ್ತಾನೆ. ಮಾತನಾಡಲೂ ಶಕ್ಯನಾಗಿರದ ಅವನ ಮುಂದೆ ತಾನು ಮಾಡಿದ ಇಷ್ಟಾನಿಷ್ಟ ಕರ್ಮಗಳು ನಿಲ್ಲುತ್ತವೆ. ಮತ್ತೊಮ್ಮೆ ಆ ಕರ್ಮಗಳು ಅವನನ್ನು ಬಂಧಿಸುತ್ತಿದ್ದರೂ ಅವನು ಸುಮ್ಮನೇ ನೋಡುತ್ತಿರಬೇಕಾಗುತ್ತದೆ. ಲೋಭಕ್ಕೆ ಅಧೀನವಾಗಿ ಲೋಕವು ಮೋಸಹೋಗಿಬಿಟ್ಟಿದೆ! ಲೋಭ-ಕ್ರೋಧ-ಮದೋನ್ಮತ್ತವಾಗಿ ತನ್ನನ್ನು ತಾನೇ ತಿಳಿದುಕೊಳ್ಳದಾಗಿದೆ. ಉತ್ತಮ ಕುಲದಲ್ಲಿ ಹುಟ್ಟಿದವನು ಕೀಳುಕುಲದಲ್ಲಿ ಹುಟ್ಟಿದವನನ್ನು ನಿಂದಿಸುತ್ತಾ ರಮಿಸುತ್ತಾನೆ. ಧನದ ದರ್ಪದಿಂದ ಗರ್ವಿತರಾಗಿ ದರಿದ್ರರನ್ನು

ಅಪಹಾಸ್ಯಮಾಡುತ್ತಾರೆ. ಇತರರು ಮೂರ್ಖರೆಂದು ಹೇಳುತ್ತಾನೆಯೇ ಹೊರತು ತನ್ನನ್ನು ತಾನು ಪರೀಕ್ಷಿಸಿಕೊಳ್ಳುವುದಿಲ್ಲ. ಇತರರ ಮೇಲೆ ದೋಷಗಳನ್ನು ಹೊರಿಸುತ್ತಾನೆಯೇ ಹೊರತು ತನ್ನನ್ನು ತಾನು ಹಿಡಿತದಲ್ಲಿಟ್ಟುಕೊಳ್ಳುವುದಿಲ್ಲ. ಅಶಾಶ್ವತವಾದ ಈ ಜಗತ್ತಿನಲ್ಲಿ ಯಾರು ಜನ್ಮಪ್ರಭೃತಿ ಧರ್ಮವನ್ನು ಅನುಸರಿಸಿ ಜೀವನ ನಡೆಸುತ್ತಾರೋ ಅವರು ಪರಮ ಗತಿಯನ್ನು ಹೊಂದುತ್ತಾರೆ. ಹೀಗೆ ಸರ್ವವನ್ನೂ ತಿಳಿದುಕೊಂಡು ಆ ತತ್ತ್ವದಂತೆಯೇ ವರ್ತಿಸುವವನು ಮೋಕ್ಷದ ದಾರಿಯನ್ನು ಪಡೆಯುತ್ತಾನೆ.”

ಧೃತರಾಷ್ಟ್ರನು ಹೇಳಿದನು:

“ಗಹನವಾದ ಈ ಧರ್ಮವನ್ನು ಬುದ್ಧಿಯಿಂದಲೇ ಅರ್ಥಮಾಡಿಕೊಳ್ಳಬಹುದಾದರೆ ಬುದ್ಧಿಮಾರ್ಗವನ್ನು ನನಗೆ ವಿಸ್ತಾರವಾಗಿ ಎಲ್ಲವನ್ನೂ ಹೇಳು!”

ವಿದುರನು ಹೇಳಿದನು:

“ಸ್ವಯಂಭುವಿಗೆ ನಮಸ್ಕರಿಸಿ ಪರಮ ಋಷಿಗಳು ಸಂಸಾರವನ್ನು ಗಹನ ಅರಣ್ಯವೆಂದು ವರ್ಣಿಸಿರುವುದನ್ನು

ನಿನಗೆ ಹೇಳುತ್ತೇನೆ. ಈ ಮಹಾಸಂಸಾರದಲ್ಲಿ ವಾಸಿಸುತ್ತಿದ್ದ ಓರ್ವ ದ್ವಿಜನು ಮಾಂಸಾಹಾರೀ ಮೃಗಗಳಿಂದ ತುಂಬಿದ್ದ ದುರ್ಗಮ ವನವೊಂದನ್ನು ಸೇರಿದನು. ಎಲ್ಲಕಡೆಗಳಿಂದ ಅತಿ ಘೋರ ಸಿಂಹ, ಹುಲಿ, ಆನೆ ಮತ್ತು ಕರಡಿಗಳ ಮಹಾ ಗರ್ಜನೆಗಳಿಂದ ಕೂಡಿದ್ದ ಆ ವನವು ಮೃತ್ಯುವಿಗೂ ಭಯವನ್ನುಂಟುಮಾಡುವಂತಿತ್ತು. ಅದನ್ನು ನೋಡಿ ಪರಮ ಉದ್ವೇಗವು ಅವನ ಹೃದಯವನ್ನು ಆವರಿಸಿತು. ರೋಮಗಳು ನಿಮಿರಿ ನಿಂತು ಅನೇಕ ವಿಕಾರಗಳನ್ನು ಅವನು ಅನುಭವಿಸಿದನು. ಆ ವನದಲ್ಲಿ ಅಲ್ಲಿಂದಿಲ್ಲಿಗೆ ಧಾವಿಸುತ್ತಾ ಆ ವಿಪ್ರನು ಎಲ್ಲಿಯಾದರೂ ರಕ್ಷಣೆಯು ಸಿಕ್ಕೀತೇ ಎಂದು ಎಲ್ಲ ದಿಕ್ಕುಗಳಲ್ಲಿಯೂ ನೋಡತೊಡಗಿದನು. ಭಯಪೀಡಿತನಾದ ಅವನು ಭಯಗಳಿಲ್ಲದ ಒಂದು ದಾರಿಯನ್ನೇ ಹಿಡಿದು ಓಡತೊಡಗಿದನು. ಆದರೆ ಆ ವಿಪ್ರನಿಗೆ ಬಹಳ ದೂರ ಓಡಲಿಕ್ಕಾಗಲಿಲ್ಲ. ಕೂಡಲೇ ಆ ಘೋರ ವನವು ಸುತ್ತಲೂ ಬಲೆಯಿಂದ ಆವೃತವಾಗಿರುವುದನ್ನೂ, ಪರಮ ಘೋರ ಸ್ತ್ರೀಯೊಬ್ಬಳು ತನ್ನೆರಡು ಕೈಗಳಿಂದ ಬಲೆಯನ್ನು ಎಳೆದು ವನವನ್ನು ಮುಚ್ಚುತ್ತಿರುವುದನ್ನು ಅವನು ನೋಡಿದನು. ಆ

ಮಹಾವನವು ಪರ್ವತಗಳಷ್ಟು ಎತ್ತರವಾಗಿರುವ ಐದು ಹೆಡೆಗಳ ನಾಗಗಳಿಂದಲೂ ಆಕಾಶವನ್ನು ಮುಟ್ಟುವ ಮಹಾ ವೃಕ್ಷಗಳಿಂದಲೂ ವ್ಯಾಪ್ತವಾಗಿತ್ತು. ಆ ವನದ ಮಧ್ಯದಲ್ಲಿ ಹುಲ್ಲು-ಬಳ್ಳಿಗಳಿಂದ ಮುಚ್ಚಿ ಕಾಣದಂತಿದ್ದ ಬಾವಿಯೊಂದಿದ್ದಿತು. ನಿಗೂಢವಾಗಿದ್ದ ಆ ಬಾವಿಯಲ್ಲಿ ದ್ವಿಜನು ಬಿದ್ದನು. ಆದರೆ ಗಟ್ಟಿಯಾದ ಬಳ್ಳಿಗಳ ಬಲೆಯಲ್ಲಿ ಸಿಕ್ಕಿಹಾಕಿಕೊಂಡನು. ದೊಡ್ಡ ಹಲಸಿನ ಹಣ್ಣು ತನ್ನ ತೊಟ್ಟಿನಿಂದ ಹಿಡಿಯಲ್ಪಟ್ಟು ಮರದಲ್ಲಿ ನೇತಾಡುವಂತೆ ಅವನು ಕಾಲು ಮೇಲೆ ಮತ್ತು ತಲೆ ಕೆಳಗಾಗಿ ನೇತಾಡುತ್ತಿದ್ದನು. ಆ ಪರಿಸ್ಥಿತಿಯಲ್ಲಿ ಕೂಡ ಅವನಿಗೆ ಇನ್ನೊಂದು ಉಪದ್ರವವು ಒದಗಿ ಬಂದಿತು. ಬಾವಿಯ ದಡದ ಮೇಲೆ ದೊಡ್ಡ ಆನೆಯೊಂದನ್ನು ನೋಡಿದನು. ಅದಕ್ಕೆ ಆರು ಮುಖಗಳಿದ್ದವು. ಕಪ್ಪಾಗಿಯೂ ಬಿಳುಪಾಗಿಯೂ ಇತ್ತು. ಅದಕ್ಕೆ ಹನ್ನೆರಡು ಕಾಲುಗಳಿದ್ದವು. ಅದು ಬಳ್ಳಿ-ಮರಗಳಿಂದ ತುಂಬಿದ್ದ ಆ ಬಾವಿಯ ಕಡೆ ಕ್ರಮೇಣ ಬರುತ್ತಿತ್ತು. ಅವನು ನೇತುಬಿದ್ದಿದ್ದ ಮರದ ರೆಂಬೆಗಳ ಶಾಖೋಪಶಾಖೆಗಳಲ್ಲಿ ನಾನಾರೂಪದ, ಘೋರರೂಪದ, ಭಯವನ್ನುಂಟುಮಾಡುವ ಜೇನುಹುಳುಗಳು

ಗೂಡುಕಟ್ಟಿದ್ದವು. ಮೊದಲೇ ಸಂಗ್ರಹಿಸಿದ್ದ ಜೇನುತುಪ್ಪವನ್ನು ಅವುಗಳು ಸವಿಯುತ್ತಿದ್ದವು. ಜೀವಿಗಳಿಗೆ ಸ್ವಾದನೀಯವಾದ ಮತ್ತು ಬಾಲಕರಿಗೆ ತೃಪ್ತಿಯನ್ನೀಡುವ ಆ ಜೇನುತುಪ್ಪವನ್ನು ಅವುಗಳು ಪುನಃ ಪುನಃ ಹೀರುತ್ತಿದ್ದವು. ಆ ಜೇನುಗೂಡುಗಳಿಂದ ಧಾರಾಕಾರವಾಗಿ ಬಹಳಷ್ಟು ಜೇನುತುಪ್ಪವು ಸುರಿಯುತ್ತಿದ್ದು. ಅಲ್ಲಿ ನೇತಾಡುತ್ತಿದ್ದ ಆ ಬ್ರಾಹ್ಮಣನು ಜೇನುತುಪ್ಪಿನ ಧಾರೆಯನ್ನು ಕುಡಿಯುತ್ತಿದ್ದನು. ಸಂಕಟದಲ್ಲಿದ್ದರೂ ಜೇನುತುಪ್ಪವನ್ನು ಕುಡಿಯುತ್ತಿದ್ದ ಅವನಿಗೆ ತೃಪ್ತಿಯೇ ಆಗಲಿಲ್ಲ. ಆಗಲೂ ಕೂಡ ಅವನು ನಿತ್ಯವೂ ಅತೃಪ್ತನಾಗಿ ಪುನಃ ಪುನಃ ಜೇನುತುಪ್ಪವನ್ನು ಬಯಸುತ್ತಿದ್ದನು. ಆಗಲೂ ಕೂಡ ಅವನಿಗೆ ಜೀವನದಲ್ಲಿ ವೈರಾಗ್ಯವುಂಟಾಗಲಿಲ್ಲ. ಅಲ್ಲಿ ಕೂಡ ಮನುಷ್ಯನ ಜೀವಿತದ ಆಸೆಯು ದೃಢವಾಗಿತ್ತು. ಬಿಳಿ ಮತ್ತು ಕಪ್ಪು ಬಣ್ಣದ ಇಲಿಗಳು ಆ ಮರವನ್ನು ಕಡಿಯುತ್ತಿದ್ದವು. ದುರ್ಗಮ ವನದಲ್ಲಿದ್ದ ಸರ್ಪಗಳು, ಪರಮ ಉಗ್ರರೂಪದ ಸ್ತ್ರೀ, ಬಾವಿಯೊಳಗಿದ್ದ ನಾಗ ಮತ್ತು ಬಾವಿಯ ಮೇಲಿದ್ದ ಆನೆ, ಐದನೆಯದು ಇಲಿಗಳಿಂದ ಕಡಿಯಲ್ಪಡುತ್ತಿದ್ದ ಮರವು ಬೀಳುವ ಭಯ,

ಮತ್ತು ಆರನೆಯದಾಗಿ ಜೇನುತುಪ್ಪವನ್ನು ಸವಿಯುತ್ತಿದ್ದ ತನ್ನನ್ನು ಜೇನುಹುಳುಗಳು ಕಡಿಯುವ ಮಹಾಭಯ! ಈ ರೀತಿ ಸಂಸಾರವೆಂಬ ಮಹಾಸಾಗರದಲ್ಲಿ ಮುಳುಗಿದವನು ಜೀವಿಸಿರುತ್ತಾನೆ. ಜೀವದ ಆಸೆಯಿಂದ ಅವನು ಖಂಡಿತವಾಗಿಯೂ ವೈರಾಗ್ಯವನ್ನು ಹೊಂದುವುದಿಲ್ಲ."

ಧೃತರಾಷ್ಟ್ರನು ಹೇಳಿದನು:

"ಶ್ರೇಷ್ಠ ಮಾತುಗಾರನೇ! ಅಯ್ಯೋ! ಅಂಥಹ ಮಹಾದುಃಖ ಮತ್ತು ಕಷ್ಟದಲ್ಲಿ ಬದುಕಿದ್ದ ಅವನು ಹೇಗೆ ತಾನೇ ಅಲ್ಲಿ ಆನಂದಿಸುತ್ತಿದ್ದನು ಅಥವಾ ತೃಪ್ತಿಹೊಂದುತ್ತಿದ್ದನು? ಅವನು ಧರ್ಮಸಂಕಟದಲ್ಲಿ ಬದುಕಿದ್ದ ಅದು ಯಾವ ಪ್ರದೇಶವಾಗಿತ್ತು? ಅಂಥಹ ಮಹಾಭಯಗಳಿಂದ ಮನುಷ್ಯನು ಹೇಗೆ ಬಿಡುಗಡೆಹೊಂದಬಲ್ಲನು? ಏನು ಮಾಡಿದರೆ ಅವನಿಗೆ ಒಳ್ಳೆಯದಾಗುತ್ತದೆ? ಇವೆಲ್ಲವನ್ನೂ ನನಗೆ ಹೇಳು. ಅವನ ಮೇಲೆ ನನಗೆ ತುಂಬಾ ಮರುಕವುಂಟಾಗುತ್ತಿದೆ. ಅವನ ಉದ್ಧಾರಕ್ಕೆ ಪ್ರಯತ್ನಿಸಬೇಕೆನಿಸುತ್ತದೆ!"

ವಿದುರನು ಹೇಳಿದನು:

“ರಾಜನ್! ಮೋಕ್ಷವನ್ನು ತಿಳಿದಿರುವವರು ಸಂಸಾರವನ್ನು ಉದಾಹರಿಸಿ ಕೊಟ್ಟಿರುವ ಉಪಮಾನವಿದು. ಇದನ್ನು ತಿಳಿದುಕೊಂಡ ಮನುಷ್ಯನು ಪರಲೋಕದಲ್ಲಿ ಉತ್ತಮ ಗತಿಯನ್ನು ಹೊಂದುತ್ತಾನೆ. ಸಂಸಾರವನ್ನೇ ಇಲ್ಲಿ ಮಹಾವನವೆಂದು ಹೇಳಿದ್ದಾರೆ. ಆ ವನವು ಎಷ್ಟು ದುರ್ಗಮವಾಗಿತ್ತೋ ಸಂಸಾರವೂ ಅಷ್ಟೇ ಗಹನವಾದುದು ಎಂದರ್ಥ. ಅಲ್ಲಿ ಹೇಳಿರುವ ಸರ್ಪಗಳೇ ವ್ಯಾಧಿಗಳು. ಬಲೆಯನ್ನು ಬೀಸುತ್ತಿದ್ದ ಆ ದೊಡ್ಡದೇಹದ ನಾರಿಯನ್ನು ಪ್ರಾಜ್ಞರು ವರ್ಣ-ರೂಪಗಳನ್ನು ನಾಶಗೊಳಿಸುವ ಮುಪ್ಪು ಎಂದು ಕರೆಯುತ್ತಾರೆ. ಅಲ್ಲಿದ್ದ ಬಾವಿಯೇ ಶರೀರಿಗಳ ದೇಹ. ಅದರೊಳಗೆ ವಾಸಿಸುತ್ತಿದ್ದ ಸರ್ಪವೇ ಇರುವ ಎಲ್ಲವುಗಳ ದೇಹಗಳಲ್ಲಿ ವಾಸಿಸುತ್ತಿರುವ, ಸರ್ವವನ್ನೂ ಅಪಹರಿಸುವ, ಅಂತಕ ಮಹಾಕಾಲ. ಆ ಬಾವಿಯ ಮಧ್ಯದಲ್ಲಿ ಬೆಳೆದಿದ್ದ ಮತ್ತು ಆ ಮನುಷ್ಯನು ಸಿಲುಕಿ ನೇತಾಡುತ್ತಿದ್ದ ಬಳ್ಳಿಯೇ ಶರೀರಿಗಳ ಜೀವದ ಆಶೆ. ಬಾವಿಯ ಸಮೀಪದಲ್ಲಿ ಒಂದು ಮರದ ಕಡೆ ಹೋಗುತ್ತಿದ್ದ ಆನೆಯೇ ಸಂವತ್ಸರವು. ಅದರ ಆರು ಮುಖಗಳು ಋತುಗಳು ಮತ್ತು ಪಾದಗಳೇ ಹನ್ನೆರಡು

ಮಾಸಗಳು. ಎಚ್ಚರದಿಂದಿದ್ದು ಆ ಮರವನ್ನು ಕಡಿಯುತ್ತಿದ್ದ ಬಿಳಿ ಮತ್ತು ಕಪ್ಪುಬಣ್ಣದ ಇಲಿಗಳು ಹಗಲು-ರಾತ್ರಿಗಳೆಂದು ಹೇಳುತ್ತಾರೆ. ಅಲ್ಲಿದ್ದ ಜೇನುಹುಳುಗಳೇ ಕಾಮಗಳು. ಅನೇಕ ಧಾರೆಗಳಾಗಿ ಸುರಿಯುತ್ತಿದ್ದ ಜೇನುತುಪ್ಪವೇ ಮಾನವರನ್ನು ಮುಳುಗಿಸುವ ಕಾಮರಸಗಳೆಂದು ತಿಳಿಯಬೇಕು. ಈ ರೀತಿ ಸಂಸಾರಚಕ್ರವು ತಿರುಗುತ್ತಿರುತ್ತದೆಯೆಂದು ತಿಳಿದವರು ಹೇಳುತ್ತಾರೆ. ತಿಳಿದವರು ಅದೇ ಸಂಸಾರಚಕ್ರದ ಪಾಶಗಳನ್ನು ಕಡಿದುಹಾಕುತ್ತಾರೆ."

ಧೃತರಾಷ್ಟ್ರನು ಹೇಳಿದನು:

"ಅಯ್ಯಾ! ತತ್ತ್ವದರ್ಶಿಯಾದ ನಿನ್ನಿಂದ ಈ ಅದ್ಭುತ ಆಖ್ಯಾನವನ್ನು ಕೇಳಿದೆನು. ನಿನ್ನ ವಚನಾಮೃತವನ್ನು ಇನ್ನೂ ಕೇಳಲು ನನಗೆ ಹರ್ಷವಾಗುತ್ತದೆ."

ವಿದುರನು ಹೇಳಿದನು:

"ಇದರ ಮಾರ್ಗವನ್ನು ವಿಸ್ತಾರವಾಗಿ ಇನ್ನೊಮ್ಮೆ ಹೇಳುತ್ತೇನೆ. ಕೇಳು. ಇದನ್ನು ಕೇಳಿದ ವಿಚಕ್ಷಣರು ಸಂಸಾರಬಂಧನದಿಂದ ವಿಮುಕ್ತರಾಗುತ್ತಾರೆ. ದೀರ್ಘ ಯಾತ್ರೆಯನ್ನು ಕೈಗೊಂಡಿರುವ

ಪುರುಷನು ಹೇಗೆ ಮಧ್ಯದಲ್ಲಿ ಸ್ವಲ್ಪ ಸ್ವಲ್ಪ ಸಮಯ ಕೆಲವೆಡೆಗಳಲ್ಲಿ ತಂಗುತ್ತಾನೋ ಹಾಗೆ ಈ ಸಂಸಾರವೆಂಬ ಪಯಣದಲ್ಲಿ ಅನೇಕ ಗರ್ಭಗಳಲ್ಲಿ ಜೀವನು ತಂಗುತ್ತಾನೆ. ಆದರೆ ತಿಳುವಳಿಕೆಯಿಲ್ಲದವರು ಮಾಡುವ ಈ ವಿಶ್ರಾಂತಿಯ ವಾಸದಿಂದ ಪಂಡಿತರಾದವರು ಮುಕ್ತರಾಗಿರುತ್ತಾರೆ. ಸಂಸಾರವನ್ನು ಗಹನ ವನಕ್ಕೆ ಹೇಗೆ ಮನೀಷಿಣರು ಹೋಲಿಸುತ್ತಾರೋ ಹಾಗೆ ಶಾಸ್ತ್ರಗಳನ್ನು ತಿಳಿದವರು ಗರ್ಭಾವಾಸವನ್ನು ದೀರ್ಘಯಾತ್ರೆಯ ತಂಗುದಾಣವೆಂದು ನಿರೂಪಿಸಿರುತ್ತಾರೆ. ಈ ರೀತಿ ಮರ್ತ್ಯರ, ಸ್ಥಾವರ-ಚರಗಳ ಲೋಕಚಕ್ರವು ತಿರುಗುತ್ತಿರುತ್ತದೆ. ಪಂಡಿತರು ಇದರಲ್ಲಿ ಆಸಕ್ತರಾಗುವುದಿಲ್ಲ. ಮನುಷ್ಯರ ಶಾರೀರಿಕ ಮತ್ತು ಮಾನಸಿಕ, ಪ್ರತ್ಯಕ್ಷ ಮತ್ತು ಪರೋಕ್ಷ ವ್ಯಾಧಿಗಳನ್ನು ವಿಷಸರ್ಪಗಳೆಂದು ತಿಳಿದವರು ಹೇಳುತ್ತಾರೆ. ಸ್ವಕರ್ಮಗಳ ಫಲಗಳಾಗಿರುವ ಇವುಗಳಿಂದ ನಿತ್ಯವೂ ಪೀಡಿಸಲ್ಪಟ್ಟು ಸಾಯುತ್ತಿದ್ದರೂ ಅಲ್ಪಬುದ್ಧಿಯವರು ಈ ವಿಷಸರ್ಪಗಳಿಂದ ಉದ್ವಿಗ್ನರಾಗುವುದಿಲ್ಲ. ಪುರುಷನು ವ್ಯಾಧಿಗಳಿಂದ ಬಿಡುಗಡೆ ಹೊಂದಿದರೂ, ನಂತರ ಅವನನ್ನು ರೂಪವಿನಾಶಿನೀ ಮುಪ್ಪು

ಆವರಿಸುವುದು ನಿಶ್ಚಿತ! ವಿವಿಧ ಶಬ್ಧ-ರೂಪ-ರಸ-ಸ್ಪರ್ಶ-ಗಂಧಗಳೆಂಬ ಮಹಾ ಕೆಸರಿನಲ್ಲಿ ಸುತ್ತಲೂ ಆಶ್ರಯವಿಲ್ಲದೇ ಮುಳುಗುತ್ತಿರುವವನ ರೂಪ-ವಯಸ್ಸುಗಳನ್ನು ಸಂವತ್ಸರ-ಮಾಸ-ಪಕ್ಷ-ಆಹೋ-ರಾತ್ರಿ-ಸಂಧ್ಯಾಕಾಲಗಳು ಕ್ರಮೇಣವಾಗಿ ಕ್ಷೀಣಿಸುತ್ತಾ ಬರುತ್ತವೆ. ಇವೇ ಕಾಲದ ಪ್ರತಿನಿಧಿಗಳು. ದುರ್ಬುಧರು ಇವುಗಳನ್ನು ಅರಿತುಕೊಂಡಿರುವುದಿಲ್ಲ. ಸರ್ವಭೂತಗಳ ಕರ್ಮಗಳನ್ನು ಮೊದಲೇ ಬರೆದಿಡಲಾಗಿದೆ ಎಂದು ಹೇಳುತ್ತಾರೆ. ಭೂತಗಳ ಶರೀರವನ್ನು ರಥವೆಂದೂ, ಸಾರಥಿಯನ್ನು ಅದರೊಳಗಿರುವ ಸತ್ತ್ವವೆಂದೂ ಹೇಳುತ್ತಾರೆ. ಇಂದ್ರಿಯಗಳನ್ನು ಕುದುರೆಗಳೆಂದೂ ಕರ್ಮಮಾಡುವ ಬುದ್ಧಿಯನ್ನು ಕಡಿವಾಣಗಳೆಂದೂ ಹೇಳುತ್ತಾರೆ. ಆ ಕುದುರೆಗಳು ಯಾವ ವೇಗದಲ್ಲಿ ಹೋಗುತ್ತಿರುತ್ತವೆಯೋ ಅದೇ ವೇಗದಲ್ಲಿ ಹೋಗುತ್ತಿರುವವನು ಈ ಸಂಸಾರ ಚಕ್ರದಲ್ಲಿ ಚಕ್ರದಂತೆ ತಿರುಗುತ್ತಿರುತ್ತಾನೆ. ಬುದ್ಧಿಯಿಂದ ಯಾರು ಇದನ್ನು ನಿಯಂತ್ರಣದಲ್ಲಿಟ್ಟುಕೊಂಡಿರುತ್ತಾನೋ ಅವನು ಸಂಸಾರಚಕ್ರಕ್ಕೆ ಹಿಂದಿರುಗುವುದಿಲ್ಲ. ಯಾಮ್ಯರಥವೆಂದು ಕರೆಯಲ್ಪಡುವ ಇದರಿಂದ ಮೂಢರು

ವ್ಯಾಮೋಹಿತರಾಗಿರುತ್ತಾರೆ. ನೀನು ಪಡೆದಿರುವ ರಾಜ್ಯನಾಶ, ಸುಹೃದಯರ ನಾಶ ಮತ್ತು ಮಕ್ಕಳ ನಾಶ ಮೊದಲಾದ ಅವಸ್ಥೆಯನ್ನೇ ಅವರೂ ಪಡೆಯುತ್ತಾರೆ. ಅತಿವ್ಯಾಮೋಹವೇ ದುಃಖಕ್ಕೆ ಕಾರಣವಾಗುತ್ತದೆ. ಸಾಧುವಾದವನು ಪರಮದುಃಖಿಗಳಿಗೆ ದುಃಖದ ಚಿಕಿತ್ಸೆಯನ್ನು ಮಾಡಿಕೊಳ್ಳಬೇಕು. ಆತ್ಮದ ಸ್ಥಿರ-ಸಂಯಮಗಳಿಂದ ದೊರೆಯುವ ದುಃಖಾದಿಗಳ ಬಿಡುಗಡೆಯು ವಿಕ್ರಮದಿಂದಾಗಲೀ, ಸಂಪತ್ತಿನಿಂದಾಲೀ, ಮಿತ್ರ-ಸುಹೃಜ್ಜನರಿಂದಾಗಲೀ ದೊರೆಯುವುದಿಲ್ಲ. ಆದುದರಿಂದ ಸರ್ವತ್ರ ಸರ್ವರಲ್ಲಿಯೂ ಮೈತ್ರೀಭಾವವನ್ನು ಹೊಂದಿ ಶೀಲವನ್ನು ಪಡೆದುಕೋ! ದಮ, ತ್ಯಾಗ ಮತ್ತು ಅಪ್ರಮಾದ ಈ ಮೂರು ಬ್ರಹ್ಮನ ಸ್ಥಾನಕ್ಕೊಯ್ಯುವ ಕುದುರೆಗಳು. ಮನಸ್ಸಿನಲ್ಲಿ ಶೀಲವೆಂಬ ಕಡಿವಾಣವನ್ನು ಹಿಡಿದು ರಥದಲ್ಲಿ ಕುಳಿತಿರುವವನು ಮೃತ್ಯುಭಯವನ್ನು ತ್ಯಜಿಸಿ ಬ್ರಹ್ಮಲೋಕಕ್ಕೆ ಹೋಗುತ್ತಾನೆ.”

## ವ್ಯಾಸನು ಧೃತರಾಷ್ಟ್ರನಿಗೆ ದೇವರಹಸ್ಯವನ್ನು ತಿಳಿಸಿ ಸಂತೈಸಿದುದು

ವಿದುರನ ಆ ಮಾತನ್ನು ಕೇಳಿ ಕುರುಸತ್ತಮನು ಪುತ್ರಶೋಕದಿಂದ ಸಂತಪ್ತನಾಗಿ ಮೂರ್ಛಿತನಾಗಿ ನೆಲದ ಮೇಲೆ ಬಿದ್ದನು. ಹಾಗೆ ನಿಃಸಂಜ್ಞನಾಗಿ ಅವನು ನೆಲದ ಮೇಲೆ ಬಿದ್ದುದನ್ನು ನೋಡಿ ಅಲ್ಲಿದ್ದ ಬಾಂಧವರು – ಕೃಷ್ಣದ್ವೈಪಾಯನ, ಕ್ಷತ್ತ ವಿದುರ - ಮತ್ತು ಅನ್ಯ ವಿಶ್ವಸನೀಯ ಸುಹೃದಯರು – ಸಂಜಯ ಮತ್ತು ದ್ವಾರಪಾಲಕರು – ಸುಖಶೀತಲ ನೀರನ್ನು ಚುಮಿಕಿಸಿ ಬೀಸಣಿಗೆಯನ್ನು ಬೀಸಿದರು. ಕೈಗಳಿಂದ ಅವನ ಶರೀರವನ್ನು ಮುಟ್ಟುತ್ತಾ ಎಬ್ಬಿಸಲು ಪ್ರಯತ್ನಿಸುತ್ತಿದ್ದ ಅವರು ಹಾಗೆಯೇ ಬಹಳ ಹೊತ್ತಿನವರೆಗೆ ಧೃತರಾಷ್ಟ್ರನ ಬಳಿಯೇ ಇದ್ದರು. ದೀರ್ಘಕಾಲದ ನಂತರ ಎಚ್ಚರಗೊಂಡ ಮಹೀಪತಿಯು ಪುತ್ರವ್ಯಸನದಿಂದ ಮುಳುಗಿಹೋಗಿ ಬಹಳ ಹೊತ್ತು ವಿಲಪಿಸುತ್ತಿದ್ದನು.

> “ಮನುಷ್ಯಜನ್ಮಕ್ಕೇ ಧಿಕ್ಕಾರ! ಮನುಷ್ಯನಾಗಿ ಹುಟ್ಟಿದಾಗಿನಿಂದ ಪುನಃ ಪುನಃ ದುಃಖಗಳು ಬರುತ್ತಲೇ ಇರುತ್ತವೆ! ಪುತ್ರನಾಶ, ಅರ್ಥನಾಶ, ಜ್ಞಾತಿ-ಸಂಬಂಧಿಗಳ ನಾಶಗಳಿಂದ ವಿಷ ಮತ್ತು ಅಗ್ನಿಗಳಿಗೆ ಸಮಾನ

ಮಹಾದುಃಖವು ಪ್ರಾಪ್ತವಾಗಿದೆ. ಇವುಗಳಿಂದ ದೇಹವು ಸುಡುತ್ತಿದೆ. ಪ್ರಜ್ಞೆಯು ನಾಶವಾಗುತ್ತಿದೆ. ಇದನ್ನು ಅನುಭವಿಸುತ್ತಿರುವ ಮನುಷ್ಯನಿಗೆ ಮರಣವೇ ಲೇಸೆನಿಸುತ್ತದೆ. ದ್ವಿಜಸತ್ತಮ! ಭಾಗ್ಯವಿಪರ್ಯಾಸದಿಂದ ನನಗೆ ಈ ವ್ಯಸನವು ಪ್ರಾಪ್ತವಾಗಿದೆ. ಇಂದೇ ನಾನು ಪ್ರಾಣತ್ಯಾಗಮಾಡುತ್ತೇನೆ!"

ಹೀಗೆ ಅವನು ಮಹಾತ್ಮ ಬ್ರಹ್ಮವಿತ್ತಮ ತಂದೆಗೆ ಹೇಳಿ ಮೂಢನಾಗಿ ಪರಮ ಶೋಕಾನ್ವಿತನಾದನು. ಯೋಚನಾಮಗ್ನನಾಗಿದ್ದ ರಾಜ ಮಹೀಪತಿಯು ಸುಮ್ಮನಾದನು. ಅವನ ಆ ಮಾತನ್ನು ಕೇಳಿ ಪ್ರಭು ಕೃಷ್ಣದ್ವೈಪಾಯನನು ಪುತ್ರಶೋಕದಿಂದ ಸಂತಪ್ತನಾಗಿದ್ದ ಪುತ್ರನಿಗೆ ಈ ಮಾತನ್ನಾಡಿದನು:

"ಧೃತರಾಷ್ಟ್ರ! ನಾನು ನಿನಗೆ ಹೇಳುವುದನ್ನು ಕೇಳು. ನೀನು ವೇದಾಧ್ಯಯನ ಮಾಡಿರುವೆ. ಮೇಧಾವಿಯೂ ಧರ್ಮಾರ್ಥಕುಶಲನೂ ಆಗಿರುವೆ. ನಿನಗೆ ತಿಳಿಯದೇ ಇರುವುದು ಯಾವುದೂ ಇಲ್ಲ. ತಿಳಿಯಬೇಕಾಗಿರುವುದೂ ಯಾವುದೂ ಇಲ್ಲ. ಮನುಷ್ಯರ ಅನಿತ್ಯತೆಯನ್ನು ನೀನು ಅರಿತುಕೊಂಡಿದ್ದೀಯೆ. ಅದರಲ್ಲಿ ಸಂಶಯವಿಲ್ಲ! ಜೀವಲೋಕವೇ ಅಶಾಶ್ವತವಾದುದು. ಸತ್ಯರ ಸ್ಥಾನವೇ

ಶಾಶ್ವತವಾದುದು. ಜೀವಿಸಿರುವವನಿಗೆ ಮರಣವೇ ಅಂತ್ಯವಾದುದು. ಅದಕ್ಕಾಗಿ ಏಕೆ ದುಃಖಿಸುತ್ತಿರುವೆ? ನಿನ್ನ ಪುತ್ರನನ್ನೇ ಕಾರಣವನ್ನಾಗಿಸಿಕೊಂಡು ಕಾಲಯೋಗದಿಂದ ನಿನ್ನ ಪ್ರತ್ಯಕ್ಷದಲ್ಲಿಯೇ ಈ ವೈರವು ಹುಟ್ಟಿಕೊಂಡಿತು. ಅವಶ್ಯವಾಗಿದ್ದ ಕುರುಗಳ ವಿನಾಶವು ನಡೆದುಹೋಯಿತು. ಪರಮ ಗತಿಯನ್ನು ಸೇರಿದ ಆ ಶೂರರಿಗಾಗಿ ಏಕೆ ನೀನು ಶೋಕಿಸುತ್ತಿರುವೆ? ಇದನ್ನು ತಿಳಿದಿದ್ದ ಮಹಾಬಾಹು ಮಹಾತ್ಮ ವಿದುರನು ಸರ್ವಶಕ್ತಿಗಳಿಂದ ಶಾಂತಿಗಾಗಿ ಪ್ರಯತ್ನಿಸಿದನು. ಬಹುಕಾಲ ಪ್ರಯತ್ನಿಸಿದರೂ ದೈವವು ಮಾಡಿದ ಮಾರ್ಗವನ್ನು ಇರುವ ಯಾವುದೂ ತಡೆಯಲಾರದೆನ್ನುವುದು ನನ್ನ ಅಭಿಪ್ರಾಯ. ದೇವತೆಗಳ ಕಾರ್ಯವನ್ನು ನಾನು ಪ್ರತ್ಯಕ್ಷ ನೋಡಿದ್ದೇನೆ ಮತ್ತು ಕೇಳಿದ್ದೇನೆ. ಅದನ್ನು ನಿನಗೆ ಹೇಳುತ್ತೇನೆ. ಅದರಿಂದ ನಿನಗೆ ಸ್ಥೈರ್ಯವುಂಟಾಗಬಹುದು. ಶ್ರಮವನ್ನು ಜಯಿಸಿರುವ ನಾನು ಹಿಂದೆ ತ್ವರೆಮಾಡಿ ಇಂದ್ರನ ಸಭೆಗೆ ಹೋಗಿದ್ದೆನು. ಅಲ್ಲಿ ದಿವೌಕಸರು, ಮತ್ತು ನಾರದನೇ ಮೊದಲಾದ ಸರ್ವ ದೇವಋಷಿಗಳು ನೆರೆದಿರುವುದನ್ನು ನೋಡಿದೆನು. ಅಲ್ಲಿ ಕಾರ್ಯಾರ್ಥವಾಗಿ ದೇವತೆಗಳ ಸಮೀಪ

ಬಂದಿದ್ದ ಪೃಥ್ವಿಯನ್ನೂ ನೋಡಿದೆ. ಆಗ ಧರಿತ್ರಿಯು ಬಳಿಸಾರಿ ನೆರೆದಿದ್ದ ದೇವತೆಗಳಿಗೆ ಹೇಳಿದಳು: “ಮಹಾಭಾಗರೇ! ಬ್ರಹ್ಮಸದನದಲ್ಲಿ ನೀವು ಪ್ರತಿಜ್ಞೆಮಾಡಿದ್ದ ನನ್ನ ಕಾರ್ಯವನ್ನು ಶೀಘ್ರವಾಗಿ ನಡೆಸಿಕೊಡಿರಿ!” ಅವಳ ಆ ಮಾತನ್ನು ಕೇಳಿ ಲೋಕನಮಸ್ಕೃತ ವಿಷ್ಣುವು ನಗುತ್ತಾ ದೇವಸಂಸದಿಯಲ್ಲಿ ಪೃಥ್ವಿಗೆ ಈ ಮಾತನ್ನಾಡಿದನು: “ಧೃತರಾಷ್ಟ್ರನ ನೂರು ಪುತ್ರರಲ್ಲಿ ಜ್ಯೇಷ್ಠನಾದ ದುರ್ಯೋಧನನೆಂದು ಖ್ಯಾತನಾಗಿರುವ ಅವನು ನಿನ್ನ ಕಾರ್ಯವನ್ನು ಮಾಡಿಕೊಡುತ್ತಾನೆ. ಆ ಮಹೀಪಾಲನನ್ನು ಹೊಂದಿದ ನೀನು ಕೃತಕೃತ್ಯಳಾಗುವೆ! ಅವನಿಗೋಸ್ಕರವಾಗಿ ಪೃಥ್ವೀಪಾಲರು ಕುರುಕ್ಷೇತ್ರದಲ್ಲಿ ಸೇರಿ ದೃಢ ಶಸ್ತ್ರ ಪ್ರಹಾರಗಳಿಂದ ಅನ್ಯೋನ್ಯರನ್ನು ಸಂಹರಿಸುತ್ತಾರೆ. ದೇವೀ! ಆ ಯುದ್ಧದಲ್ಲಿ ನೀನು ಹೊತ್ತಿರುವ ಭಾರವು ನಾಶವಾಗುತ್ತದೆ. ಶೀಘ್ರವಾಗಿ ನಿನ್ನ ಸ್ವಸ್ಥಾನಕ್ಕೆ ತೆರಳಿ ಲೋಕಗಳನ್ನು ಧರಿಸು!” ಲೋಕಸಂಹಾರದ ಕಾರಣಾರ್ಥವಾಗಿ ಕಲಿಯ ಅಂಶದಿಂದ ಅವನು ಗಾಂಧಾರಿಯ ಜಠರದಲ್ಲಿ ನಿನ್ನ ಸುತನಾಗಿ ಹುಟ್ಟಿದನು. ದೈವಯೋಗದಿಂದ ಅಸಹನಶೀಲನೂ,

ಚಪಲನೂ, ಕೋಪಿಷ್ಠನೂ, ಅಸಂತುಷ್ಟನೂ ಆಗಿದ್ದ ಅವನಂತೆಯೇ ಅವನ ಸಹೋದರರೂ ಹುಟ್ಟಿಕೊಂಡರು. ಪೃಥ್ವಿಯ ನೃಪರನ್ನು ಒಟ್ಟಾಗಿ ವಿನಾಶಗೊಳಿಸಲಿಕ್ಕಾಗಿಯೇ ಅವನ ಮಾವ ಶಕುನಿಯೂ ಪರಮ ಸಖ ಕರ್ಣನೂ ಹುಟ್ಟಿದ್ದರು. ಇದರ ಅರ್ಥವನ್ನು ನಾರದನು ತತ್ತ್ವತಃ ತಿಳಿದುಕೊಂಡಿದ್ದಾನೆ. ತಾವೇ ಮಾಡಿದ ಅಪರಾಧಗಳಿಂದ ನಿನ್ನ ಪುತ್ರರು ವಿನಾಶಹೊಂದಿದ್ದಾರೆ. ಅವರ ಕುರಿತು ಶೋಕಿಸಬೇಡ! ಇದರಲ್ಲಿ ಶೋಕಿಸುವ ಕಾರಣವೇ ಇಲ್ಲ! ಪಾಂಡವರೂ ಕೂಡ ನಿನ್ನನ್ನು ಅಪರಾಧಿಯೆಂದು ಸ್ವಲ್ಪವೂ ತಿಳಿದುಕೊಳ್ಳುವುದಿಲ್ಲ. ದುರಾತ್ಮರಾದ ನಿನ್ನ ಮಕ್ಕಳೇ ಈ ಮಹಿಯನ್ನು ವಿನಾಶಮಾಡಿದರು. ನಿನಗೆ ಮಂಗಳವಾಗಲಿ! ನಾರದನು ಹಿಂದೆಯೇ ಯುಧಿಷ್ಠಿರನ ರಾಜಸೂಯದ ಸಭೆಯಲ್ಲಿ ಇದನ್ನು ಹೇಳಿದ್ದನು. ಅದರಲ್ಲಿ ಸಂಶಯವೇ ಇಲ್ಲ. "ಕೌಂತೇಯ! ಪಾಂಡವರು ಮತ್ತು ಕೌರವರು ಪರಸ್ಪರರನ್ನು ಎದುರಿಸಿ ಇಲ್ಲವಾಗುತ್ತಾರೆ. ನೀನು ಮಾಡಬೇಕಾದ ಕರ್ತವ್ಯವನ್ನು ಮಾಡು!" ನಾರದನ ಮಾತನ್ನು ಕೇಳಿ ಪಾಂಡವರು ವ್ಯಥೆಪಟ್ಟಿದ್ದರು. ಇಗೋ ಸನಾತನವಾಗಿರುವ

ಈ ದೇವರಹಸ್ಯವೆಲ್ಲವನ್ನೂ ಹೇಳಿದ್ದೇನೆ. ಇದನ್ನು ಕೇಳಿದ ನಂತರವಾದರೂ ದೈವವು ನಡೆಸಿದ ವಿಧಿಯನ್ನು ತಿಳಿದು ನಿನ್ನ ಶೋಕವು ನಾಶವಾಗಲಿ. ಪ್ರಾಣಗಳ ಮೇಲೆ ದಯವುಂಟಾಗಲಿ. ಮತ್ತು ಪಾಂಡುಪುತ್ರರೊಡನೆ ಸ್ನೇಹವು ಬೆಳೆಯಲಿ. ಇದರ ಅರ್ಥವನ್ನು ನಾನು ಬಹಳ ಹಿಂದೆಯೇ ಕೇಳಿದ್ದೆ. ಉತ್ತಮ ಕ್ರತು ರಾಜಸೂಯದಲ್ಲಿ ಧರ್ಮರಾಜನಿಗೂ ಇದನ್ನು ಹೇಳಿದ್ದೆ. ಈ ಗುಟ್ಟನ್ನು ನನ್ನಿಂದ ಕೇಳಿದ ಧರ್ಮಪುತ್ರನೂ ಕೌರವರೊಂದಿಗೆ ಕಲಹವಾಗದಂತೆ ಬಹಳವಾಗಿ ಪ್ರಯತ್ನಿಸಿದನು. ಆದರೆ ದೈವವೇ ಬಲವತ್ತರವಾದುದು. ಕೃತಾಂತನ ಈ ವಿಧಿಯನ್ನು ಚರಾಚರ ಪ್ರಾಣಿಗಳಲ್ಲಿ ಯಾರಿಗೂ ಎಂದೂ ಅತಿಕ್ರಮಿಸಲಾಗುವುದಿಲ್ಲ. ನೀನು ಕರ್ಮಪರನಾಗಿರುವೆ! ಬುದ್ಧಿಶ್ರೇಷ್ಠನೂ ಆಗಿರುವೆ. ಪ್ರಾಣಿಗಳ ಆಗಮನ-ನಿರ್ಗಮನಗಳ ಕುರಿತು ತಿಳಿದಿರುವ ನೀನು ಏಕೆ ಮೋಹಿತನಾಗುವೆ? ನೀನು ಶೋಕಸಂತಪ್ತನಾಗಿ ಪುನಃ ಪುನಃ ಮೂರ್ಛಿತನಾಗುತ್ತಿರುವೆ ಎಂದು ತಿಳಿದು ರಾಜಾ ಯುಧಿಷ್ಠಿರನು ಪ್ರಾಣಗಳನ್ನೂ ತ್ಯಜಿಸಿಯಾನು! ತಿರ್ಯಗ್ಯೋನಿಗಳಲ್ಲಿ ಜನಿಸಿರುವ ಪಶು-ಪಕ್ಷಿಗಳ ಮೇಲೂ

ಕೃಪಾಲುವಾಗಿರುವ ಆ ವೀರನು ನಿನ್ನ ಮೇಲೆ ಏಕೆ ಕೃಪೆಯಿಂದ ನಡೆದುಕೊಳ್ಳುವುದಿಲ್ಲ? ನನ್ನ ನಿಯೋಗದಿಂದ ವಿಧಿಯು ಅನತಿಕ್ರಮಣೀಯವೆಂದು ತಿಳಿದು ಪಾಂಡವರ ಮೇಲಿನ ಕಾರುಣ್ಯದಿಂದ ಪ್ರಾಣಧಾರಣೆಯನ್ನು ಮಾಡಿಕೊಂಡಿರು! ಹೀಗೆ ನಡೆದುಕೊಂಡರೆ ಲೋಕದಲ್ಲಿ ಕೀರ್ತಿಯುಂಟಾಗುತ್ತದೆ. ಮಗೂ! ಮಹಾ ಧರ್ಮವನ್ನೂ ದೀರ್ಘಕಾಲದ ತಪಸ್ಸನ್ನೂ ಪಡೆದುಕೊಳ್ಳಬಹುದು. ಪುತ್ರಶೋಕದಿಂದ ಹುಟ್ಟಿ ಪ್ರಜ್ವಲಿಸುತ್ತಿರುವ ಅಗ್ನಿಯನ್ನು ಪ್ರಜ್ಞೆಯೆಂಬ ನೀರಿನಿಂದ ಸದಾಕಾಲಕ್ಕಾಗಿ ಆರಿಸು!”

ಅಮಿತತೇಜಸ್ವಿ ವ್ಯಾಸನ ಈ ಮಾತನ್ನು ಕೇಳಿ ಮುಹೂರ್ತಕಾಲ ಯೋಚಿಸಿ ಧೃತರಾಷ್ಟ್ರನು ಹೇಳಿದನು: “ದ್ವಿಜೋತ್ತಮ! ಮಹಾ ಶೋಕಜಾಲದಲ್ಲಿ ಸಿಲುಕಿಬಿಟ್ಟಿದ್ದೇನೆ! ಪುನಃಪುನಃ ಮೂರ್ಛಿತನಾಗಿ ನನ್ನನ್ನು ನಾನೇ ತಿಳಿಯದಂತಾಗಿದ್ದೇನೆ. ದೈವವು ನಿಶ್ಚಯಿಸಿದುದು ಎಂಬ ನಿನ್ನ ಮಾತನ್ನು ಕೇಳಿ ಪ್ರಾಣಗಳನ್ನು ಹಿಡಿದುಕೊಳ್ಳುತ್ತೇನೆ ಮತ್ತು ಶೋಕಿಸದಿರಲು ಪ್ರಯತ್ನಿಸುತ್ತೇನೆ.”

ರಾಜೇಂದ್ರ ಧೃತರಾಷ್ಟ್ರನ ಆ ಮಾತನ್ನು ಕೇಳಿ ಸತ್ಯವತೀಸುತ ವ್ಯಾಸನು ಅಲ್ಲಿಯೇ ಅಂತರ್ಧಾನನಾದನು.

# ಧೃತರಾಷ್ಟ್ರನು ಪಾಂಡವರನ್ನು ಭೇಟಿಮಾಡಿದುದು

## ಸ್ತ್ರೀಯರು ಮತ್ತು ಪುರಜನರೊಂದಿಗೆ ಧೃತರಾಷ್ಟ್ರನು ರಣಭೂಮಿಗೆ ಹೊರಟಿದುದು

ಇದನ್ನು ಕೇಳಿ ಆ ನರಶ್ರೇಷ್ಠನು ಬಹುಕಾಲ ಧ್ಯಾನಮಗ್ನನೂ ಅಚೇತನನೂ ಆಗಿದ್ದನು. ಅನಂತರ ಸಂಜಯನಿಗೆ ರಥವನ್ನು ಸಿದ್ಧಪಡಿಸಲು ಹೇಳಿ ವಿದುರನೊಡನೆ ಇಂತೆಂದನು:

> "ಬೇಗನೇ ಗಾಂಧಾರಿಯನ್ನೂ ಸರ್ವ ಭರತಸ್ತ್ರೀಯರನ್ನೂ ಕರೆದುಕೊಂಡು ಬಾ! ನಾದಿನಿ ಕುಂತಿಯನ್ನೂ ಅವಳ ಬಳಿಯಿರುವ ಅನ್ಯ ಸ್ತ್ರೀಯರನ್ನು ಕರೆದುಕೊಂಡು ಬಾ!"

ಧರ್ಮಾತ್ಮಾ ಧರ್ಮವಿತ್ತಮ ವಿದುರನಿಗೆ ಹೀಗೆ ಹೇಳಿ ಶೋಕದಿಂದ ಪ್ರಜ್ಞೆಯನ್ನೇ ಕಳೆದುಕೊಂಡಿದ್ದ ಅವನು ರಥವನ್ನೇರಿದನು. ಶೋಕಾರ್ತಳಾದ ಗಾಂಧಾರಿಯೂ ಕೂಡ ಪತಿಯ ಮಾತಿನಂತೆ ಕುಂತಿ ಮತ್ತು ಇತರ ಸ್ತ್ರೀಯರೊಂದಿಗೆ ರಾಜನಿದ್ದಲ್ಲಿಗೆ ಆಗಮಿಸಿದಳು. ರಾಜನ

ಬಳಿಬಂದೊಡನೆಯೇ ಶೋಕಸಮನ್ವಿತರಾದ ಅವರೆಲ್ಲರೂ ಅನ್ಯೋನ್ಯರ ಹೆಸರನ್ನು ಕೂಗಿಕೊಳ್ಳುತ್ತಾ ಅನ್ಯೋನ್ಯರ ಕುತ್ತಿಗೆಯನ್ನು ತಬ್ಬಿಹಿಡಿದು ಬಿಕ್ಕಿ ಬಿಕ್ಕಿ ಅಳತೊಡಗಿದರು. ಅವರನ್ನು ಸಮಾಧಾನಗೊಳಿಸುತ್ತಿದ್ದ ಕ್ಷತ್ತ ವಿದುರನು ಅವರಿಂದಾಗಿ ಸ್ವಯಂ ತಾನೇ ದುಃಖಿತನಾದನು. ಕಂಬನಿಯಿಂದ ಮಾತುಕಟ್ಟಿದ್ದ ಅವರೆಲ್ಲರನ್ನೂ ರಥದಲ್ಲಿ ಕುಳ್ಳಿರಿಸಿಕೊಂಡು ವಿದುರನು ಹಸ್ತಿನಾಪುರದಿಂದ ಹೊರಟನು. ಕುರುಗಳ ಎಲ್ಲರ ಮನೆಯಲ್ಲಿಯೂ ಆಗ ಹೃದಯವನ್ನೇ ಸೀಳಿಬಿಡುವ ದೊಡ್ಡ ಆರ್ತನಾದವು ಕೇಳಿಬರುತ್ತಿತ್ತು. ಕುಮಾರರಿಂದ ಹಿಡಿದು ಹಸ್ತಿನಾಪುರದಲ್ಲಿ ಎಲ್ಲರೂ ಶೋಕಪೀಡಿತರಾಗಿದ್ದರು. ಹಿಂದೆ ದೇವತೆಗಳಿಗೂ ನೋಡಲು ದೊರೆಯದಿದ್ದ ಕುರುನಾರಿಯರು ತಮ್ಮ ಪತಿಗಳನ್ನು ಕಳೆದು ನಗರದ ಸಾಮಾನ್ಯ ಜನರ ದೃಷ್ಟಿಗೂ ಬೀಳುವಂತಾದರು! ಸುಂದರ ಕೇಶರಾಶಿಗಳನ್ನು ಕೆದರಿ, ಆಭರಣಗಳನ್ನು ಕಳಚಿ, ಏಕವಸ್ತ್ರಧಾರಿಯರಾದ ಕುರು ನಾರಿಯರು ಅನಾಥರಂತೆ ಹೋಗುತ್ತಿದ್ದರು. ಹಿಂಡಿನ ನಾಯಕನನ್ನು ಕಳೆದುಕೊಂಡ ಹೆಣ್ಣುಜಿಂಕೆಗಳು ಪರ್ವತದ ಗುಹೆಗಳಿಂದ ಹೊರಬರುವಂತೆ ಶ್ವೇತಪರ್ವತಗಳಂತಿದ್ದ ಭವನಗಳಿಂದ ಅವರು ಹೊರಬರುತ್ತಿದ್ದರು. ಅಂಗಳದಲ್ಲಿ ಸೇರಿದ್ದ ಕಿಶೋರಿಯರ ಗುಂಪಿನಂತಿದ್ದ ಶೋಕಾರ್ತ

ನಾರಿಯರ ಅನೇಕ ಗುಂಪುಗಳು ರಣಭೂಮಿಯ ಕಡೆ ಹೊರಟವು. ಪರಸ್ಪರರ ತೋಳನ್ನು ಹಿಡಿದು ತಮ್ಮ ಪುತ್ರರು, ಸಹೋದರರು ಮತ್ತು ತಂದೆಯರ ಹೆಸರನ್ನು ಹೇಳಿ ಕೂಗಿಕೊಳ್ಳುತ್ತಿದ್ದ ಅವರು ಯುಗಾಂತದ ಲೋಕವಿನಾಶವು ಹೇಗಿರುತ್ತದೆಯೆಂದು ತೋರಿಸುವಂತಿದ್ದರು. ವಿಲಪಿಸುತ್ತಿದ್ದ, ರೋದಿಸುತ್ತಿದ್ದ, ಮತ್ತು ಅಲ್ಲಿಂದಿಲ್ಲಿಗೆ ಓಡುತ್ತಾ ಶೋಕದಿಂದ ಪೀಡಿತರಾದ ಅವರು ಬುದ್ಧಿಯನ್ನೇ ಕಳೆದುಕೊಂಡು ಏನು ಮಾಡಬೇಕೆಂದು ತಿಳಿಯದಾಗಿದ್ದರು. ಇದಕ್ಕೆ ಮೊದಲು ತಮ್ಮ ದಾಸಿ ಮತ್ತು ಸಖಿಯರ ಮುಂದೆ ಬರಲೂ ನಾಚಿಕೊಳ್ಳುತ್ತಿದ್ದ ಅವರು ಈಗ ಏಕವಸ್ತ್ರರಾಗಿ ನಿರ್ಲಜ್ಜೆಯಿಂದ ತಮ್ಮ ಅತ್ತೆಯರ ಮುಂದೆ ನಿಂತಿದ್ದರು. ಮೊದಲು ಸಣ್ಣಪುಟ್ಟ ವ್ಯಸನಗಳಲ್ಲಿಯೂ ಪರಸ್ಪರರನ್ನು ಸಮಾಧಾನಪಡಿಸುತ್ತಿದ್ದ ಆ ಶೋಕವಿಹ್ವಲರು ಈಗ ಪರಸ್ಪರರನ್ನು ನೋಡುತ್ತಿದ್ದರು. ರೋದಿಸುತ್ತಿದ್ದ ಸಹಸ್ರಾರು ನಾರಿಯರಿಂದ ಪರಿವೃತನಾಗಿ ದೀನ ರಾಜನು ನಗರದಿಂದ ರಣಭೂಮಿಯ ಕಡೆ ಬೇಗನೇ ಪ್ರಯಾಣಮಾಡಿದನು.

ಆ ರಾಜನನ್ನು ಹಿಂಬಾಲಿಸುತ್ತಾ ಶಿಲ್ಪಿಗಳು, ವರ್ತಕರು, ವೈಶ್ಯರು ಮತ್ತು ಸರ್ವ ಕರ್ಮಗಳಿಂದ ಉಪಜೀವನವನ್ನು ಮಾಡುತ್ತಿದ್ದವರು ನಗರದಿಂದ ಹೊರಟರು. ಕುರುಸಂಕ್ಷಯದಿಂದುಂಟಾದ ಶೋಕದಿಂದ



धृतराष्ट्र विलापः।

ಕೂಗಿಕೊಳ್ಳುತ್ತಿದ್ದ ಅವರ ಮಹಾಶಬ್ಧವು ಮೇಲೇರಿ ಭುವನಗಳನ್ನೂ ವ್ಯಥೆಗೊಳಿಸಿತು. ಇರುವವೆಲ್ಲವನ್ನೂ ಸುಟ್ಟುಬಿಡುವ ಯುಗಾಂತದ ಸಮಯವು ಈಗಲೇ ಒದಗಿಬಂದಿತೋ ಎಂದು ಭೂತಗಳು ತಿಳಿದುಕೊಂಡವು. ಕುರುನಾಶದಿಂದ ತುಂಬಾ ಉದ್ವಿಗ್ನಮನಸ್ಕರಾಗಿದ್ದ ತಮ್ಮಲ್ಲಿಯೇ ಅನುರಕ್ತರಾಗಿದ್ದ ಪೌರರು ಗಟ್ಟಿಯಾಗಿ ಅಳತೊಡಗಿದರು.

## ಕೃಪ, ಕೃತವರ್ಮ, ಅಶ್ವತ್ಥಾಮರು ಧೃತರಾಷ್ಟ್ರನನ್ನು ಮಾರ್ಗದಲ್ಲಿಯೇ ಭೇಟಿ ಮಾಡಿ ರಣರಂಗದಿಂದ ಪಲಾಯನ ಮಾಡಿದುದು

ಕ್ರೋಶಮಾತ್ರ ದೂರ ಹೋಗಿ ಅಲ್ಲಿ ಅವನು ಆ ಮಹಾರಥರನ್ನು – ಶಾರದ್ವತ ಕೃಪ, ದ್ರೌಣಿ ಮತ್ತು ಕೃತವರ್ಮರನ್ನು – ಕಂಡನು. ಪ್ರಜ್ಞಾಚಕ್ಷು ಒಡೆಯ ರಾಜನನ್ನು ನೋಡಿದೊಡನೆಯೇ ಅವರು ನಿಟ್ಟುಸಿರು ಬಿಡುತ್ತಾ ಮತ್ತು ಅಳುತ್ತಾ ಗದ್ಗದ ಕಂಠದಿಂದ ಇಂತೆಂದರು:

> “ಮಹಾರಾಜ! ನಿನ್ನ ಮಗ ಮಹೀಪತಿಯು ಸುದುಷ್ಕರ ಕರ್ಮವನ್ನೆಸಗಿ ಅನುಚರರೊಂದಿಗೆ ಶಕ್ರಲೋಕಕ್ಕೆ ಹೋದನು. ದುರ್ಯೋಧನನ ಸೇನೆಯಲ್ಲಿ ನಾವು ಮೂವರು ರಥರು ಮಾತ್ರ ಉಳಿದುಕೊಂಡಿದ್ದೇವೆ. ನಿನ್ನ ಸೇನೆಯಲ್ಲಿ ಅನ್ಯರೆಲ್ಲರೂ

ನಾಶವಾಗಿದ್ದಾರೆ.”

ಹೀಗೆ ಹೇಳಿ ಕೃಪ ಶಾರದ್ವತನು ಪುತ್ರಶೋಕಾರ್ತರಾದ ರಾಜ ಮತ್ತು ಗಾಂಧಾರಿಯರಿಗೆ ಈ ಮಾತನ್ನಾಡಿದನು:

“ಅಭೀತರಾಗಿ ಯುದ್ಧ ಮಾಡುತ್ತಿದ್ದ ಅವರು ಶತ್ರುಗಣಗಳಿಂದ ಹತರಾದರು. ಅನೇಕ ವೀರಕರ್ಮಗಳನ್ನು ಮಾಡಿದ ನಿನ್ನ ಪುತ್ರರು ನಿಧನ ಹೊಂದಿದರು. ನಿಶ್ಚಯವಾಗಿಯೂ ಅವರು ನಿರ್ಮಲ ಶಸ್ತ್ರಗಳಿಂದ ನಿಧನಹೊಂದಿ ಉತ್ತಮ ಲೋಕಗಳನ್ನು ಪಡೆದು ಹೊಳೆಯುವ ದೇಹಗಳನ್ನು ಧರಿಸಿ ಅಮರರಂತೆ ಅಲ್ಲಿ ವಿಹರಿಸುತ್ತಿದ್ದಾರೆ. ಆ ಶೂರರಲ್ಲಿ ಯಾರೂ ಯುದ್ಧಮಾಡುತ್ತಿರುವಾಗ ಪರಾಙ್ಮುಖರಾಗಲಿಲ್ಲ. ಶಸ್ತ್ರಗಳಿಂದ ಸಾವನ್ನು ಪಡೆದ ಅವರಲ್ಲಿ ಯಾರೂ ಶತ್ರುಗಳ ಮುಂದೆ ಕೈಜೋಡಿಸಿ ನಿಂತಿರಲಿಲ್ಲ. ಈ ರೀತಿ ಯುದ್ಧದಲ್ಲಿ ಶಸ್ತ್ರಗಳಿಂದ ನಿಧನಹೊಂದಿದ ಕ್ಷತ್ರಿಯರು ಪರಮ ಗತಿಯನ್ನು ಹೊಂದುತ್ತಾರೆಂದು ಪುರಾಣರು ಹೇಳಿದ್ದಾರೆ. ಆದುದರಿಂದ ಅದರ ಕುರಿತು ಶೋಕಿಸಬಾರದು. ಅವರ ಶತ್ರುವಾದ ಪಾಂಡವರು ಮತ್ತು ಅವರ ರಾಣಿಯೂ ರೋದಿಸುತ್ತಿದ್ದಾರೆ. ಅಶ್ವತ್ಥಾಮನ ನಾಯಕತ್ವದಲ್ಲಿ ನಾವೇನು

ಮಾಡಿದೆವೆನ್ನುವುದನ್ನು ಕೇಳು. ನಿನ್ನ ಮಗನು ಭೀಮಸೇನನಿಂದ ಅಧರ್ಮರೀತಿಯಿಂದ ಹತನಾದನೆಂದು ಕೇಳಿ ನಾವು ಮಲಗಿದ್ದ ಪಾಂಡವರ ಶಿಬಿರವನ್ನು ಪ್ರವೇಶಿಸಿ ಕದನವಾಡಿದೆವು. ಧೃಷ್ಟದ್ಯುಮ್ನನನ್ನು ಮೊದಲ್ಗೊಂಡು ಪಾಂಚಾಲರೆಲ್ಲರೂ ಹತರಾದರು. ದ್ರುಪದನ ಮಕ್ಕಳೂ ದ್ರೌಪದೇಯರೂ ಕೆಳಗುರುಳಿದರು. ಹಾಗೆ ನಿನ್ನ ಪುತ್ರನ ಶತ್ರುಗಣವನ್ನು ನಾಶಮಾಡಿ ನಾವು ಓಡಿ ಬಂದಿದ್ದೇವೆ. ನಾವು ಮೂವರು ರಣದಲ್ಲಿ ಅವರನ್ನು ಎದುರಿಸಿ ನಿಲ್ಲಲಾರೆವು. ಕ್ರೋಧವಶರಾದ ಆ ಶೂರ ಮಹೇಷ್ವಾಸ ಪಾಂಡವರು, ವೈರಕ್ಕೆ ಪ್ರತೀಕಾರವನ್ನು ಮಾಡಲು ಬಯಸಿ ವೇಗದಿಂದ ಬರುತ್ತಾರೆ. ಮಕ್ಕಳು ಹತರಾದರೆಂದು ಕೇಳಿ ಪ್ರಮತ್ತರಾದ ಆ ಶೂರ ಪುರುಷರ್ಷಭರು ನಮ್ಮ ದಾರಿಯನ್ನೇ ಹಿಡಿದು ಬೇಗ ಬಂದುಬಿಡುತ್ತಾರೆ. ಪಾಂಡವರಿಗೆ ಕೆಟ್ಟದ್ದನ್ನು ಮಾಡಿ ಇಲ್ಲಿ ನಿಂತುಕೊಳ್ಳಲು ಇಚ್ಛಿಸುವುದಿಲ್ಲ. ನಮಗೆ ಅನುಮತಿಯನ್ನು ನೀಡು. ರಾಣಿ! ಮನಸ್ಸನ್ನು ಶೋಕದಲ್ಲಿ ತೊಡಗಿಸಬೇಡ! ರಾಜನ್! ನೀನೂ ಕೂಡ ಅನುಮತಿಯನ್ನು ನೀಡು. ಉತ್ತಮ ಧೈರ್ಯವನ್ನು ತಂದುಕೋ! ಕೇವಲ ಕ್ಷತ್ರಧರ್ಮವನ್ನು

ಗಮನದಲ್ಲಿಟ್ಟುಕೊಂಡು ಆಗಿಹೋದುದನ್ನು ಕಾಣು.”

ಹೀಗೆ ಹೇಳಿ, ರಾಜನಿಗೆ ಪ್ರದಕ್ಷಿಣೆ ಹಾಕಿ, ಕೃಪ, ಕೃತವರ್ಮ ಮತ್ತು ದ್ರೋಣಪುತ್ರರು ಮಹಾತ್ಮ ಮನೀಷಿಣಿ ರಾಜ ಧೃತರಾಷ್ಟ್ರನನ್ನು ತಿರುಗಿ ನೋಡುತ್ತಲೇ ಗಂಗಾನದಿಯ ಕಡೆ ಶೀಘ್ರವಾಗಿ ಅಶ್ವಗಳನ್ನು ಓಡಿಸಿದರು. ಗಂಗಾನದಿಯನ್ನು ದಾಟಿ ಉದ್ವಿಗ್ನರಾಗಿ ಮಂತ್ರಾಲೋಚನೆಮಾಡಿ ಆ ಮೂವರು ಮಹಾರಥರೂ ಪ್ರತ್ಯೇಕ ಮೂರುದಾರಿಗಳನ್ನು ಹಿಡಿದು ಹೊರಟುಹೋದರು. ಕೃಪ ಶಾರದ್ವತನು ಹಸ್ತಿನಾಪುರಕ್ಕೆ ಹೋದನು. ಹಾರ್ದಿಕ್ಯನು ತನ್ನ ದೇಶಕ್ಕೆ ಹೊರಟುಹೋದನು. ಮತ್ತು ದ್ರೌಣಿಯು ವ್ಯಾಸಾಶ್ರಮಕ್ಕೆ ಹೋದನು. ಮಹಾತ್ಮ ಪಾಂಡುಪುತ್ರರಿಗೆ ಮಹಾಪರಾಧವನ್ನೆಸಗಿದ್ದ ಆ ವೀರರು ಭಯಾರ್ತರಾಗಿ ಪರಸ್ಪರರನ್ನೇ ನೋಡುತ್ತಾ ಹೀಗೆ ಹೊರಟುಹೋದರು. ರಾಜ ಧೃತರಾಷ್ಟ್ರನನ್ನು ಭೇಟಿಯಾಗಿ ಆ ವೀರ ಅರಿಂದಮರು ಸೂರ್ಯೋದಯವಾಗುವುದರೊಳಗಾಗಿ ಇಚ್ಛೈಸಿದ್ದ ಸ್ಥಳಗಳನ್ನು ಸೇರಿದರು.

## ಪಾಂಡವರು ಧೃತರಾಷ್ಟ್ರ-ಗಾಂಧಾರಿಯರನ್ನು ಭೇಟಿಮಾಡಿದುದು

ಸರ್ವಸೇನೆಗಳೂ ಹತಗೊಳ್ಳಲು ಧರ್ಮರಾಜ ಯುಧಿಷ್ಠಿರನು ತನ್ನ ವೃದ್ಧ ದೊಡ್ಡಪ್ಪನು ಹಸ್ತಿನಾಪುರದಿಂದ ಹೊರಟಿರುವನೆಂದು ಕೇಳಿದನು. ಆ ಪುತ್ರಶೋಕಾರ್ತನು ಪುತ್ರಶೋಕದಲ್ಲಿ ಮುಳುಗಿ ಶೋಕಿಸುತ್ತಿದ್ದ ಮಹಾರಾಜನನ್ನು ನೋಡಲು ಭ್ರಾತೃಗಳೊಂದಿಗೆ ಹೊರಟನು. ಮಹಾತ್ಮ ವೀರ ಧಾಶಾರ್ಹನೂ ಯುಯುಧಾನ ಮತ್ತು ಯುಯುತ್ಸುವೂ ಅವನನ್ನು ಹಿಂಬಾಲಿಸಿದರು. ಅಲ್ಲಿ ಬಂದು ಸೇರಿದ್ದ ಅತೀವ ದುಃಖಾರ್ಥಳೂ ಶೋಕಕರ್ಶಿತಳೂ ಆಗಿದ್ದ ದ್ರೌಪದಿಯು ಪಾಂಚಾಲ ಸಖಿಯರೊಂದಿಗೆ ಅವರನ್ನು ಅನುಸರಿಸಿದಳು. ಅವನು ಗಂಗಾನದೀ ತೀರದಲ್ಲಿ ಕುರರೀ ಪಕ್ಷಿಗಳಂತೆ ಕೂಗಿಕೊಳ್ಳುತ್ತಾ ರೋದಿಸುತ್ತಿದ್ದ ಕುರುಸ್ತ್ರೀಯರ ಗುಂಪುಗಳನ್ನು ಕಂಡನು. ಪ್ರಿಯ ಮತ್ತು ಅಪ್ರಿಯ ಮಾತುಗಳನ್ನಾಡುತ್ತಾ ತೋಳುಗಳನ್ನು ಮೇಲೆತ್ತಿ ಬಹಳವಾಗಿ ಆರ್ತನಾದಗೈದು ರೋದಿಸುತ್ತಿದ್ದ ಸಹಸ್ರಾರು ಸ್ತ್ರೀಯರು ರಾಜಾ ಯುಧಿಷ್ಠಿರನನ್ನು ಮುತ್ತಿಕೊಂಡರು.

> “ಪಿತೃಗಳನ್ನೂ, ಭ್ರಾತೃಗಳನ್ನೂ, ಗುರುಗಳನ್ನೂ, ಪುತ್ರರನ್ನೂ, ಸ್ನೇಹಿತರನ್ನೂ ವಧಿಗೀಡುಮಾಡಿದ ರಾಜನ ಆ ಧರ್ಮಜ್ಞತೆ, ದಯೆ ಮತ್ತು ಅಹಿಂಸೆಗಳು ಈಗ ಎಲ್ಲಿಹೋದವು? ಮಹಾಬಾಹೋ! ದ್ರೋಣ, ಪಿತಾಮಹ ಭೀಷ್ಮ ಮತ್ತು

> ಜಯದ್ರಥನನ್ನು ಸಂಹರಿಸಿ ನಿನ್ನ ಮನಸ್ಸು ಈಗ ಹೇಗಿದೆ? ಪಿತೃಗಳನ್ನೂ, ಭ್ರಾತೃಗಳನ್ನೂ, ದುರ್ಧರ್ಷ ಅಭಿಮನ್ಯುವನ್ನೂ ಮತ್ತು ದ್ರೌಪದೇಯರನ್ನು ಇನ್ನು ನೋಡಲಿಕ್ಕಾಗದಿರುವಾಗ ಈ ರಾಜ್ಯವನ್ನಿಟ್ಟುಕೊಂಡು ನೀನು ಏನು ಮಾಡುವೆ?"

ಕುರರೀ ಪಕ್ಷಿಗಳಂತೆ ಅಳುತ್ತಿರುವ ಆ ಸ್ತ್ರೀಯರನ್ನು ಸರಿಸಿ ಮುಂದೆಹೋಗಿ ಮಹಾಬಾಹು ಧರ್ಮರಾಜ ಯುಧಿಷ್ಠಿರನು ತನ್ನ ದೊಡ್ಡಪ್ಪನಿಗೆ ವಂದಿಸಿದನು. ಆಗ ಆ ಅಮಿತ್ರಕರ್ಶನ ಪಾಂಡವರೆಲ್ಲರೂ ತಮ್ಮ ತಮ್ಮ ನಾಮಧೇಯಗಳನ್ನು ಹೇಳಿಕೊಂಡು ದೊಡ್ಡಪ್ಪನಿಗೆ ನಮಸ್ಕರಿಸಿದರು. ಪುತ್ರವಧೆಯಿಂದ ಪೀಡಿತನಾಗಿ ಶೋಕಾರ್ತನಾಗಿದ್ದ ಆ ತಂದೆಯು ಅಂತಃಕರಣದಲ್ಲಿ ಪ್ರೀತಿಸದಿದ್ದರೂ ಪಾಂಡವನನ್ನು ಆಲಂಗಿಸಿದನು. ಧರ್ಮರಾಜನನ್ನು ಬಿಗಿದಪ್ಪಿ ಸಂತವಿಸಿದ ಆ ದುಷ್ಟಾತ್ಮನು ಭಸ್ಮೀಭೂತನನ್ನಾಗಿಸುವ ಪಾವಕನಂತೆ ಭೀಮನನ್ನು ಆಲಂಗಿಸಲು ಬಯಸಿದನು. ಶೋಕವೆಂಬ ವಾಯುವಿನಿಂದ ಭುಗಿಲೆದ್ದ ಅವನ ಕೋಪಾಗ್ನಿಯು ಭೀಮಸೇನನನ್ನು ಸುಟ್ಟುಬಿಡುತ್ತದೆಯೋ ಎನ್ನುವಂತೆ ಕಾಣುತ್ತಿತ್ತು. ಅವನ ಸಂಕಲ್ಪವನ್ನು ತಿಳಿದ ಹರಿಯು ಕೈಗಳಿಂದ ಭೀಮನನ್ನು ಹಿಂದಕ್ಕೆಳೆದುಕೊಂಡು ಭೀಮನ ಆಕಾರದ ಲೋಹದ

ಮೂರ್ತಿಯೊಂದನ್ನು ಮುಂದಿಟ್ಟನು. ಮೊದಲೇ ಅವನ ಇಂಗಿತವನ್ನು ಅರಿತಿದ್ದ ಮಹಾಬುದ್ಧಿ ಮಹಾಪ್ರಾಜ್ಞ ಹರಿ ಜನಾರ್ದನನು ಅದರ ವ್ಯವಸ್ಥೆಯನ್ನು ಮಾಡಿದ್ದನು. ವೃಕೋದರನೆಂದು ತಿಳಿದು ಭೀಮಸೇನನ ಆ ಲೋಹದ ಮೂರ್ತಿಯನ್ನು ತೋಳುಗಳಿಂದ ಹಿಡಿಯುತ್ತಲೇ ಆ ಬಲವಾನ್ ರಾಜನು ಅದನ್ನು ಪುಡಿಪುಡಿ ಮಾಡಿದನು. ಹತ್ತುಸಾವಿರ ಆನೆಗಳ ಬಲವನ್ನು ಹೊಂದಿದ್ದರೂ ಭೀಮನ ಲೋಹದ ಮೂರ್ತಿಯನ್ನು ತೋಳಿನಿಂದ ಅಪ್ಪಿಕೊಂಡು ಒಡೆದು ಹಾಕಿದುದರಿಂದ ಅವನ ಮುಖದಿಂದ ರಕ್ತವು ಸೋರತೊಡಗಿತು. ರಕ್ತದಿಂದ ತೋಯ್ದು ಹೋಗಿದ್ದ ಅವನು ಪುಷ್ಪಗಳಿಂದ ತುಂಬಿಹೋಗಿದ್ದ ಪಾರಿಜಾತ ವೃಕ್ಷದಂತೆ ಭೂಮಿಯ ಮೇಲೆ ಬಿದ್ದನು. ಆಗ ವಿದ್ವಾನ್ ಸೂತ ಗಾವಲ್ಗಣಿಯು ಅವನನ್ನು ಹಿಡಿದೆತ್ತಿ ಸಂತವಿಸುತ್ತಾ, ಶಾಂತಗೊಳಿಸುತ್ತಾ “ಹೀಗೆ ಮಾಡಬಾರದಾಗಿತ್ತು!” ಎಂದು ಹೇಳಿದನು. ಮಹಾಮನಸ್ವಿ ಧೃತರಾಷ್ಟ್ರನು ಕೋಪವನ್ನು ತೊರೆದು ಸಿಟ್ಟಿಲ್ಲದವನಾಗಿ “ಅಯ್ಯೋ ಭೀಮ!” ಎಂದು ಪುನಃ ಶೋಕಸಮನ್ವಿತನಾಗಿ ಕೂಗಿದನು. ಭೀಮಸೇನನನ್ನು ಕೊಂದೆನೆಂಬ ಕಾರಣದಿಂದ ರಾಜನು ಸಂಕಟಪಡುತ್ತಿರುವುದನ್ನೂ ಮತ್ತು ಅವನ ಕ್ರೋಧವು ಹೊರಟುಹೋದುದನ್ನೂ ನೋಡಿದ ಪುರುಷಶ್ರೇಷ್ಠ ವಾಸುದೇವನು



ಇಂತೆಂದನು:

"ರಾಜನ್! ಧೃತರಾಷ್ಟ್ರ! ಶೋಕಿಸದಿರು! ನೀನು ಭೀಮನನ್ನು ಕೊಲ್ಲಲಿಲ್ಲ! ನೀನು ಕೆಳಗುರುಳಿಸಿದುದು ಒಂದು ಲೋಹದ ಪ್ರತಿಮೆ! ನೀನು ಕ್ರೋಧವಶನಾಗಿದ್ದೀಯೆ ಎಂದು ತಿಳಿದು ನಾನು ಮೃತ್ಯುವಿನ ದವಡೆಗಳ ಮಧ್ಯೆ ಹೋಗುತ್ತಿದ್ದ

ಕೌಂತೇಯ ಭೀಮನನ್ನು ಹಿಂದಕ್ಕೆಳೆದುಕೊಂಡೆನು. ಬಲದಲ್ಲಿ ನಿನ್ನ ಸಮಾನರು ಯಾರೂ ಇಲ್ಲ. ನಿನ್ನ ಬಾಹುಬಂಧನವನ್ನು ಯಾರು ತಾನೇ ಸಹಿಸಿಕೊಳ್ಳಬಲ್ಲರು? ಯಮನ ಬಳಿಹೋದವನು ಎಂದೂ ಜೀವಂತ ಬಿಡುಗಡೆಹೊಂದದಂತೆ ನಿನ್ನ ಬಾಹುಗಳ ಮಧ್ಯೆ ಸಿಲುಕಿದವರು ಯಾರೂ ಜೀವಿತರಾಗಿರುವುದಿಲ್ಲ. ಆದುದರಿಂದ ಭೀಮಸೇನನೊಡನೆ ಯುದ್ಧದ ಅಭ್ಯಾಸಕ್ಕಾಗಿ ನಿನ್ನ ಪುತ್ರನು ಮಾಡಿಸಿಟ್ಟುಕೊಂಡಿದ್ದ ಉಕ್ಕಿನ ಪ್ರತಿಮೆಯನ್ನು ನಾನು ಅಪಹರಿಸಿದ್ದೆ. ಪುತ್ರಶೋಕದಿಂದ ಸಂತಪ್ತನಾದ ನಿನ್ನ ಮನಸ್ಸು ಧರ್ಮದಿಂದ ವಿಚಲಿತಗೊಂಡಿದೆ. ಆದುದರಿಂದಲೇ ನೀನು ಭೀಮಸೇನನನ್ನು ಕೊಲ್ಲಲು ಬಯಸಿದೆ. ನಿನ್ನಂಥವನಿಗೆ ಅದು ಸರಿಯೆನಿಸುವುದಿಲ್ಲ! ಒಂದು ವೇಳೆ ನೀನು ವೃಕೋದರನನ್ನು ಕೊಂದಿದ್ದರೂ ನಿನ್ನ ಪುತ್ರರು ಯಾವುದೇ ಕಾರಣದಿಂದಲೂ ಜೀವಂತರಾಗಿ ಹಿಂದೆ ಬರುತ್ತಿರಲಿಲ್ಲ! ಆದುದರಿಂದ ಶಾಂತಿಯ ಸಲುವಾಗಿ ನಾವು ಮಾಡಿದುದೆಲ್ಲಕ್ಕೂ ನೀನು ಅನುಮತಿನೀಡು. ವೃಥಾ ನಿನ್ನ ಮನಸ್ಸನ್ನು ಶೋಕದಲ್ಲಿ ತೊಡಗಿಸಬೇಡ!”

ಆಗ ಶೌಚಕ್ಕಾಗಿ ಅವನನ್ನು ಅವನ ಪರಿಚಾರಕರು ಮೇಲೆತ್ತಿದರು. ಅವನು ಶೌಚವನ್ನು ಮಾಡಿದ ನಂತರ ಮಧುಸೂದನನು ಪುನಃ ಇದನ್ನು ಹೇಳಿದನು:

> “ರಾಜನ್! ನೀನು ವೇದಗಳನ್ನೂ ವಿವಿಧ ಶಾಸ್ತ್ರಗಳನ್ನು ಅಧ್ಯಯನ ಮಾಡಿರುವೆ. ಪುರಾಣಗಳನ್ನೂ ರಾಜಧರ್ಮಗಳನ್ನೂ ಕೇಳಿರುವೆ. ಈ ರೀತಿ ವಿಧ್ವಾಂಸನಾಗಿರುವ ನೀನು ಬಲ ಮತ್ತು ಶೌರ್ಯಗಳಲ್ಲಿ ಪಾಂಡವರು ಅಧಿಕರೆಂದು ತಿಳಿದೂ ಆಗ ಋಷಿಗಳ ವಚನವನ್ನು ಕೇಳಲಿಲ್ಲ. ಯಾವ ರಾಜನು ಸ್ಥಿರಪ್ರಜ್ಞನಾಗಿದ್ದುಕೊಂಡು ದೇಶ-ಕಾಲಗಳಿಗೆ ತಕ್ಕಂತೆ ತನ್ನ ದೋಷಗಳನ್ನು ತಾನೇ ಅರಿತುಕೊಳ್ಳುತ್ತಾನೋ ಅವನಿಗೆ ಪರಮ ಶ್ರೇಯಸ್ಸುಂಟಾಗುತ್ತದೆ. ಶ್ರೇಯಮಾತುಗಳನ್ನು ಹೇಳುತ್ತಿದ್ದರು ಅವುಗಳ ಹಿತಾಹಿತವನ್ನು ಗಮನಿಸದೇ ಗ್ರಹಣಮಾಡದಿರುವವನು ಅನ್ಯಾಯಮಾರ್ಗದಲ್ಲಿ ನಡೆದು ಆಪತ್ತನ್ನು ಪಡೆದು ಮುಂದೆ ಶೋಕಿಸುತ್ತಾನೆ. ಆಗ ನೀನು ವ್ಯವಹರಿಸಿದುದನ್ನು ನೀನೇ ವಿಮರ್ಶಿಸು. ಆಗ ನೀನು ನಿನ್ನ ಅಧೀನನಾಗಿರದೇ ದುರ್ಯೋಧನನ ವಶದಲ್ಲಿದ್ದೆ. ನಿನ್ನದೇ

ಅಪರಾಧದಿಂದ ಆದುದಕ್ಕೆ ಭೀಮಸೇನನನ್ನು ಏಕೆ ಕೊಲ್ಲಲು ಬಯಸುವೆ? ಆದುದರಿಂದ ನೀನು ಮಾಡಿದ ದುಷ್ಕೃತ್ಯಗಳನ್ನು ಸ್ಮರಿಸಿಕೊಂಡು ನಿನ್ನ ಕೋಪವನ್ನು ಹಿಡಿತದಲ್ಲಿಟ್ಟುಕೋ! ಸ್ಪರ್ಧಾಭಾವದಿಂದ ಪಾಂಚಾಲಿಯನ್ನು ಸಭೆಗೆ ಎಳೆದುತಂದ ಆ ಕ್ಷುದ್ರನು ಭೀಮಸೇನನಿಂದ ಹತನಾಗಿ, ವೈರಕ್ಕೆ ಪ್ರತೀಕಾರವಾಯಿತು. ನಿನ್ನ ಮತ್ತು ನಿನ್ನ ಮಗ ಆ ದುರಾತ್ಮನ ಅನ್ಯಾಯಗಳನ್ನು ನೋಡು. ನಿರಪರಾಧಿಗಳಾದ ಪಾಂಡವರನ್ನು ಆಗ ನೀನು ಪರಿತ್ಯಜಿಸಿದೆ."

ಕೃಷ್ಣನಿಂದ ಹೀಗೆ ಸರ್ವ ಸತ್ಯವನ್ನೂ ಹೇಳಿಸಿಕೊಂಡ ಜನಾಧಿಪ ಮಹೀಪತಿ ಧೃತರಾಷ್ಟ್ರನು ದೇವಕೀಪುತ್ರನಿಗೆ ಇಂತೆಂದನು:

"ಮಾಧವ! ಧರ್ಮಾತ್ಮನ್! ನೀನು ಹೇಳಿದಂತೆಯೇ ನಡೆದುಹೋಯಿತು! ಪುತ್ರಸ್ನೇಹವೇ ನನ್ನ ಧೈರ್ಯವನ್ನು ಕೆಡಿಸಿತು! ಕೃಷ್ಣ! ಒಳ್ಳೆಯದಾಯಿತು ನಿನ್ನಿಂದ ರಕ್ಷಿತನಾದ ಪುರುಷವ್ಯಾಘ್ರ ಬಲವಾನ್ ಸತ್ಯವಿಕ್ರಮಿ ಭೀಮನು ನನ್ನ ಬಾಹುಗಳ ಮಧ್ಯೆ ಬರಲಿಲ್ಲ! ಈಗ ನಾನು ಏಕಾಗ್ರಚಿತ್ತನಾಗಿದ್ದೇನೆ. ಸಿಟ್ಟು ಹೊರಟುಹೋಗಿದೆ. ತಾಪವೂ ಇಲ್ಲವಾಗಿದೆ. ಮಧ್ಯಮ ಪಾಂಡವ ವೀರನನ್ನು ಮುಟ್ಟಲು

ಬಯಸುತ್ತೇನೆ. ಪಾರ್ಥಿವೇಂದ್ರರು ಮತ್ತು ಪುತ್ರರು ಹತರಾದ ಮೇಲೆ ಪಾಂಡುಪುತ್ರರ ಮೇಲೆಯೇ ನನ್ನ ಸುಖ ಮತ್ತು ಪ್ರೀತಿಗಳು ಪ್ರತಿಷ್ಠಿತವಾಗಿರುತ್ತವೆ.”

ಅನಂತರ ಅವನು ಭೀಮ, ಧನಂಜಯ, ಮತ್ತು ಪುರುಷಪ್ರವೀರ ಮಾದ್ರೀಪುತ್ರರ ಅಂಗಾಂಗಗಳನ್ನು ಮುಟ್ಟಿ ನೇವರಿಸಿದನು. ಅವರನ್ನು ಸಂತಯಿಸಿ ಮಂಗಳವಾಗಲೆಂದು ಆಶೀರ್ವಾದಿಸಿದನು. ಧೃತರಾಷ್ಟ್ರನಿಂದ ಅನುಜ್ಞೆಯನ್ನು ಪಡೆದು ಆ ಕುರುಪುಂಗವ ಭ್ರಾತರರೆಲ್ಲರೂ ಕೇಶವನೊಡಗೂಡಿ ಗಾಂಧಾರಿಯ ಬಳಿಬಂದರು.

ಋಷಿ ಸತ್ಯವತೀ ಪುತ್ರನು ಪುತ್ರಶೋಕಾರ್ತಳಾಗಿದ್ದ ಅನಿಂದಿತೆ ಗಾಂಧಾರಿಯು ಅಮಿತ್ರರನ್ನು ಸಂಹರಿಸಿದ್ದ ಧರ್ಮರಾಜಯುಧಿಷ್ಠಿರನನ್ನು ಶಪಿಸಲು ಇಚ್ಛಿಸುತ್ತಿದ್ದಾಳೆಂದು ಮತ್ತು ಪಾಂಡವರ ಕುರಿತು ಅವಳಿಗಿದ್ದ ಅಭಿಪ್ರಾಯವನ್ನು ಆ ಮೊದಲೇ ತಿಳಿದುಕೊಂಡನು. ಆ ಪರಮ ಋಷಿಯು ಪವಿತ್ರವೂ ಸುಗಂಧಿತವೂ ಆದ ಗಂಗೆಯ ಶುದ್ಧನೀರಿನಲ್ಲಿ ಆಚಮನ ಮಾಡಿ ಮನೋವೇಗದಲ್ಲಿ ಅವಳಿದ್ದ ಪ್ರದೇಶಕ್ಕೆ ಆಗಮಿಸಿದನು. ಮನಸ್ಸನ್ನು ಕೇಂದ್ರೀಕರಿಸಿ ದಿವ್ಯ ದೃಷ್ಟಿಯಿಂದ ಅವನು ಸರ್ವ ಪ್ರಾಣಿಗಳ ಭಾವವನ್ನು ತಿಳಿದುಕೊಳ್ಳುತ್ತಿದ್ದನು. ಹಿತವಾದೀ ಮಹಾತಪಸ್ವಿಯು ಶಾಪಕಾಲವನ್ನು



ಕಳೆದು ಶಾಂತಿಯ ಕಾಲವನ್ನು ಬರಗೊಳಿಸಲೋಸುಗ ತನ್ನ  ಸೊಸೆಗೆ ಕಾಲಕ್ಕೆ ತಕ್ಕಂತಹ ಮಾತುಗಳನ್ನಾಡಿದನು:

> "ಗಾಂಧಾರೀ! ಪಾಂಡವರ ಮೇಲೆ ಕೋಪಿಸಬೇಡ! ಶಾಂತಳಾಗು! ಸಿಟ್ಟನ್ನು ನಿಯಂತಿಸಿಕೋ! ನನ್ನ ಈ ಮಾತನ್ನು ಕೇಳು! ಹದಿನೆಂಟು ದಿನಗಳ ಹಿಂದೆ ವಿಜಯವನ್ನು ಇಚ್ಛಿಸಿದ ನಿನ್ನ ಪುತ್ರನು "ಅಮ್ಮಾ! ಶತ್ರುಗಳೊಂದಿಗೆ ಯುದ್ಧಮಾಡುವ ನನಗೆ ಮಂಗಳವನ್ನು ಆಶೀರ್ವದಿಸು!" ಎಂದು ನಿನ್ನಲ್ಲಿ ಕೇಳಿಕೊಂಡಿದ್ದನು. ವಿಜಯೈಷಿಣಿಯಾದ ಅವನು ನಿನ್ನಲ್ಲಿ ಪದೇ ಪದೇ ಅದನ್ನೇ ಬೇಡುತ್ತಿದ್ದನು. ಗಾಂಧಾರೀ! ಆಗ "ಧರ್ಮವೆಲ್ಲಿರುವುದೋ ಅಲ್ಲಿ ಜಯವಿರುತ್ತದೆ!" ಎಂದು ಹೇಳುತ್ತಿದ್ದೆ. ನೀನಾಡಿದ ಯಾವೊಂದು ಮಾತೂ ಇದಕ್ಕೆ ಮೊದಲು ಸುಳ್ಳಾದುದು ನನಗೆ ನೆನಪಿಲ್ಲ. ನೀನು ಯಾವಾಗಲೂ ಪ್ರಾಣಿಗಳ ಹಿತದಲ್ಲಿಯೇ ತತ್ಪರಳಾಗಿರುವವಳು. ನೀನಾಡಿದ ಆ ಧರ್ಮದ ಮಾತನ್ನು ನೆನಪಿಸಿಕೊಂಡು ಕೋಪವನ್ನು ಉಪಶಮನಗೊಳಿಸು! ಪುನಃ ಹೀಗೆ ಮಾಡಬೇಡ!"

ಗಾಂಧಾರಿಯು ಹೇಳಿದಳು:

“ಭಗವನ್! ನಾನು ಅಸೂಯೆಪಡುತ್ತಿಲ್ಲ. ಅವರ ನಾಶವನ್ನೂ ಬಯಸುತ್ತಿಲ್ಲ. ಆದರೆ ಪುತ್ರಶೋಕದಿಂದ ನನ್ನ ಮನೋಬಲವು ವಿಹ್ವಲಗೊಂಡಿದೆ. ಕುಂತಿಯು ಹೇಗೆ ಕೌಂತೇಯರನ್ನು ರಕ್ಷಿಸುವಳೋ ಹಾಗೆಯೇ ನಾನೂ ಅವರನ್ನು ರಕ್ಷಿಸಬೇಕು. ಧೃತರಾಷ್ಟ್ರನು ಹೇಗೆ ಅವರನ್ನು ರಕ್ಷಿಸುತ್ತಾನೋ ಹಾಗೆ ನಾನೂ ರಕ್ಷಿಸಬೇಕು. ದುರ್ಯೋಧನ, ಸೌಬಲ ಶಕುನಿ, ಮತ್ತು ಕರ್ಣ-ದುಃಶಾಸನರ ಅಪರಾಧದಿಂದಾಗಿ ಈ ಕುರುಸಂಕ್ಷಯವು ನಡೆದುಹೋಯಿತು. ಬೀಭತ್ಸುವಾಗಲೀ, ಪಾರ್ಥ ವೃಕೋದರನಾಗಲೀ, ನಕುಲ-ಸಹದೇವರಾಗಲೀ ಅಥವಾ ಯುಧಿಷ್ಠಿರನಾಗಲೀ ಅಪರಾಧ ಮಾಡಿರುವುದು ತಿಳಿದಿಲ್ಲ. ಕೌರವರು ಪರಸ್ಪರವಾಗಿ ಯುದ್ಧಮಾಡುತ್ತಾ ಅನ್ಯರನ್ನು ಕೊಚ್ಚಿಹಾಕುತ್ತಾ ಹತರಾದರು. ಅದರಲ್ಲಿ ನನಗೆ ಅಸಮಾಧಾನವೇನೂ ಇಲ್ಲ. ಆದರೆ ವಾಸುದೇವನು ನೋಡುತ್ತಿದ್ದಂತೆಯೇ ಮಹಾಮನಸ್ವಿ ಭೀಮನು ದುರ್ಯೋಧನನನ್ನು ಗದಾಯುದ್ಧಕ್ಕೆ ಆಹ್ವಾನಿಸಿ, ಶಿಕ್ಷಣದಲ್ಲಿ ಅವನು ತನಗಿಂತಲೂ ಅಧಿಕನೆಂದು ತಿಳಿದು, ರಣದಲ್ಲಿ ಅನೇಕ ರೀತಿಗಳಲ್ಲಿ ತಿರುಗುತ್ತಿದ್ದ ಅವನನ್ನು ನಾಭಿಯ ಕೆಳಗೆ

ಹೊಡೆದನೆಂದು ನನ್ನ ಕೋಪವು ಹೆಚ್ಚುತ್ತಿದೆ. ಮಹಾತ್ಮರು ಹಾಕಿಕೊಟ್ಟ ಧರ್ಮವನ್ನು, ಯುದ್ಧದಲ್ಲಿ ಪ್ರಾಣವನ್ನು ಉಳಿಸಿಕೊಳ್ಳುವುದಕ್ಕೋಸ್ಕರ ಧರ್ಮಜ್ಞರು ಹೇಗೆ ತಾನೇ ತ್ಯಾಗಮಾಡುತ್ತಾರೆ?"

ಅವಳ ಆ ಮಾತನ್ನು ಕೇಳಿದ ಭೀಮಸೇನನು ಭಯಗೊಂಡು ಗಾಂಧಾರಿಗೆ ಈ ಅನುನಯ ಮಾತುಗಳನ್ನಾಡಿದನು:

"ನನ್ನ ಪ್ರಾಣಗಳನ್ನು ಉಳಿಸಿಕೊಳ್ಳಲೋಸುಗ, ಭಯದಿಂದ ನಾನು ಅಲ್ಲಿ ಅಧರ್ಮದ ಅಥವಾ ಧರ್ಮದ ಆ ಕೃತ್ಯವನ್ನು ಮಾಡಿದೆ. ನನ್ನನ್ನು ನೀನು ಕ್ಷಮಿಸಬೇಕು! ಧರ್ಮಪೂರ್ವಕವಾಗಿ ನಿನ್ನ ಮಗನೊಂದಿಗೆ ಯುದ್ಧಮಾಡಲು ಮಹಾಬಲಶಾಲಿಗೂ ಶಕ್ಯವಾಗಿರಲಿಲ್ಲ. ಆದುದರಿಂದಲೇ ನಾನು ಧರ್ಮಕ್ಕೆ ವಿಪರೀತವಾಗಿ ನಡೆದುಕೊಂಡೆನು. ಸೈನ್ಯಗಳಲ್ಲಿ ಉಳಿದುಕೊಂಡಿರುವ ಆ ಒಬ್ಬನೇ ವೀರ್ಯವಾನನು ಗದಾಯುದ್ಧದಲ್ಲಿ ನನ್ನನ್ನು ಸಂಹರಿಸಿ ರಾಜ್ಯವನ್ನು ಅಪಹರಿಸಬಹುದು ಎಂದು ನಾನು ಹಾಗೆ ಮಾಡಿದೆ. ಏಕವಸ್ತ್ರವನ್ನು ಧರಿಸಿದ್ದ ರಜಸ್ವಲೆ ರಾಜಪುತ್ರೀ ಪಾಂಚಾಲಿಯನ್ನು ಕಾಡಿದಾಗ ನಿನ್ನ ಮಗನಿಗೆ ನಾನು

ಹೇಳಿದುದೆಲ್ಲವೂ ನಿನಗೆ ತಿಳಿದೇ ಇದೆ. ದುರ್ಯೋಧನನನ್ನು ಇಲ್ಲವಾಗಿಸದೇ ಸಾಗರಗಳೊಂದಿಗೆ ಈ ಭೂಮಿಯನ್ನು ಭೋಗಿಸಲು ನಾವು ಶಕ್ಯರಾಗಿರಲಿಲ್ಲ. ಆದುದರಿಂದ ನಾನು ಹಾಗೆ ಮಾಡಿದೆ. ಸಭಾಮಧ್ಯದಲ್ಲಿ ದ್ರೌಪದಿಗೆ ತನ್ನ ಎಡತೊಡೆಯನ್ನು ತೋರಿಸಿ ನಿನ್ನ ಮಗನೂ ಕೂಡ ನಮ್ಮೊಡನೆ ಅಪ್ರಿಯವಾಗಿ ನಡೆದುಕೊಂಡಿದ್ದನು. ಅಮ್ಮಾ ! ಆಗಲೇ ದುರಾಚಾರನಾದ ನಿನ್ನ ಮಗನನ್ನು ನಾವು ಸಂಹರಿಸಬೇಕಾಗಿತ್ತು. ಆದರೆ ಧರ್ಮರಾಜನ ಆಜ್ಞೆಯಂತೆ ನಿಯಮಕ್ಕೆ ಕಟ್ಟುಬಿದ್ದು ಸುಮ್ಮಲೇ ಕುಳಿತಿದ್ದೆವು. ನಿನ್ನ ಮಗನೇ ಈ ವೈರವನ್ನು ಉರಿಸಿ ಬೆಳೆಸಿದನು. ವನದಲ್ಲಿಯೂ ನಿತ್ಯವೂ ಮಹಾ ಕಷ್ಟಗಳನ್ನು ಅನುಭವಿಸುವಂತೆ ಮಾಡಿದನು. ಆದುದರಿಂದಲೇ ನಾನು ಹೀಗೆ ಮಾಡಿದೆ. ರಣದಲ್ಲಿ ದುರ್ಯೋಧನನನ್ನು ಸಂಹರಿಸಿ ನಾವು ವೈರವನ್ನು ಪಾರುಮಾಡಿದ್ದೇವೆ. ಯುಧಿಷ್ಠಿರನು ರಾಜ್ಯವನ್ನು ಪಡೆದು ನಮ್ಮ ಕೋಪವೂ ಹೊರಟುಹೋಗಿದೆ.”

ಗಾಂಧಾರಿಯು ಹೇಳಿದಳು:

“ನನ್ನ ಮಗನನ್ನು ನೀನು ಪ್ರಶಂಸಿಸುತ್ತಿರುವೆಯಾದುದರಿಂದ

ಅವನ ವಧೆಯೇ ನಡೆಯಲಿಲ್ಲವೆಂದು ತಿಳಿಯುತ್ತೇನೆ. ನನ್ನಲ್ಲಿ ಹೇಳಿದಂತೆ ನೀನು ಅವೆಲ್ಲವನ್ನೂ ಮಾಡಿದ್ದೀಯೆ ಹೌದು. ವೃಷಸೇನನು ನಕುಲನ ಕುದುರೆಗಳನ್ನು ಸಂಹರಿಸಲು ರಣದಲ್ಲಿ ನೀನು ದುಃಶಾಸನನ ಶರೀರದ ರಕ್ತವನ್ನು ಕುಡಿದೆಯಲ್ಲವೇ? ಸತ್ಪುರುಷರಿಂದ ನಿಂದನೀಯವೂ, ಘೋರವೂ, ಅನಾರ್ಯರು ಮಾಡುವಂಥಹುದೂ ಆದ ಆ ಕ್ರೂರ ಕರ್ಮವನ್ನು ನೀನು ಮಾಡಿದ್ದೀಯೆ. ವೃಕೋದರ! ಅದು ನಿನಗೆ ಹೇಗೆ ಯುಕ್ತವಾದುದು?”

ಭೀಮಸೇನನು ಹೇಳಿದನು:

“ಬೇರೆಯವರಿಂದ ಸುರಿಯುತ್ತಿರುವ ರಕ್ತವನ್ನೇ ಕುಡಿಯಬಾರದೆಂದಿರುವಾಗ ನನ್ನದೇ ರಕ್ತವನ್ನು ನಾನೇಕೆ ಕುಡಿಯುತ್ತೇನೆ? ನನ್ನಂತೆಯೇ ನನ್ನ ಸಹೋದರ ದುಃಶಾಸನ ಕೂಡ. ನಮ್ಮಿಬ್ಬರಲ್ಲಿ ವ್ಯತ್ಯಾಸವೇ ಇರಲಿಲ್ಲ. ಅಮ್ಮಾ! ಅವನ ರಕ್ತವು ನನ್ನ ತುಟಿ ಮತ್ತು ಹಲ್ಲುಗಳನ್ನು ದಾಟಿ ಒಳಗೆ ಹೋಗಲೇ ಇಲ್ಲ. ಶೋಕಿಸಬೇಡ! ಇದಕ್ಕೆ ಸೂರ್ಯಪುತ್ರ ಯಮನೇ ಸಾಕ್ಷಿ! ನನ್ನೆರಡು ಕೈಗಳೂ ರಕ್ತದಿಂದ ತೋಯ್ದುಹೋಗಿದ್ದವು. ಯುದ್ಧದಲ್ಲಿ ವೃಷಸೇನನಿಂದ

ನಕುಲನ ಕುದುರೆಗಳು ಹತವಾದುದನ್ನು ಕಂಡು ಸಂಪ್ರಹೃಷ್ಟರಾದ ಸಹೋದರರು ನನ್ನಲ್ಲಿ ಭಯವುಂಟಾಯಿತು. ದ್ಯೂತವಾಡುವಾಗ ದ್ರೌಪದಿಯ ಕೇಶಗಳನ್ನು ಹಿಡಿದು ಎಳೆದುತರುವಾಗ ನಾನು ಕ್ರೋಧದಿಂದ ಆಡಿದ ಮಾತು ನನ್ನ ಹೃದಯದಲ್ಲಿ ತಿರುಗುತ್ತಲೇ ಇತ್ತು. ಆ ಪ್ರತಿಜ್ಞೆಯನ್ನು ಪೂರೈಸದಿದ್ದರೆ ಶಾಶ್ವತವಾಗಿ ಕ್ಷತ್ರಧರ್ಮದಿಂದ ಚ್ಯುತನಾಗುವೆನೆಂಬ ಭಯದಿಂದ ನಾನು ಹಾಗೆ ಮಾಡಿದೆ. ನಮಗೆ ಅಪಕಾರವನ್ನೆಸಗಿದ ಪುತ್ರರನ್ನು ಮೊದಲೇ ನಿಯಂತ್ರಿಸಿಟ್ಟುಕೊಳ್ಳದೇ ಈಗ ನನ್ನನ್ನು ದೋಷಿತನೆಂದು ಪರಿಶಂಕಿಸುವುದು ಸರಿಯಲ್ಲ.”

ಗಾಂಧಾರಿಯು ಹೇಳಿದಳು:

“ಈ ವೃದ್ಧರ ನೂರು ಮಕ್ಕಳನ್ನೂ ಸಂಹರಿಸಿ ಅಪರಾಜಿತನಾಗಿರುವ ನೀನು ಅಲ್ಪ ಅಪರಾಧಮಾಡಿದ್ದ ಒಬ್ಬನನ್ನಾದರೂ ಏಕೆ ಉಳಿಸಲಿಲ್ಲ? ಮಗನೇ! ರಾಜ್ಯವನ್ನು ಕಳೆದುಕೊಂಡ ಈ ವೃದ್ಧರಿಗೆ ಒಂದು ಸಂತಾನವೂ ಇಲ್ಲವಾಗಿದೆ. ಈ ಅಂಧರಿಬ್ಬರಿಗೆ ಊರುಗೋಲಾಗಿರಲು ಒಬ್ಬನನ್ನಾದರೂ ನೀನು ಏಕೆ ಜೀವಸಹಿತ ಬಿಡಲಿಲ್ಲ?

ಪುತ್ರರನ್ನು ಕೊಲ್ಲುವಾಗ ನೀನು ಧರ್ಮವನ್ನಾಚರಿಸಿ ಒಬ್ಬನನ್ನಾದರೂ ಉಳಿಸಿದ್ದರೆ ನನಗೆ ಇಷ್ಟೊಂದು ದುಃಖವಾಗುತ್ತಿರಲಿಲ್ಲ!”

ಹೀಗೆ ಹೇಳಿ ಮಕ್ಕಳು-ಮೊಮ್ಮಕ್ಕಳ ವಧೆಯಿಂದ ಪೀಡಿತಳಾಗಿದ್ದ ಗಾಂಧಾರಿಯು ಕ್ರೋಧದಿಂದ “ಆ ರಾಜನೆಲ್ಲಿ?” ಎಂದು ಯುಧಿಷ್ಠಿರನನ್ನು ಕೇಳಿದಳು. ರಾಜೇಂದ್ರ ಯುಧಿಷ್ಠಿರನು ಕೈಮುಗಿದು ನಡುಗುತ್ತಾ ಅವಳ ಬಳಿಹೋಗಿ ಈ ಮಧುರ ಮಾತನ್ನಾಡಿದನು:

“ದೇವೀ! ನಿನ್ನ ಪುತ್ರರನ್ನು ವಧಿಸಿದ ಮಹಾಕ್ರೂರಿ ಯುಧಿಷ್ಠಿರನು ನಾನು. ಪೃಥ್ವಿಯ ವಿನಾಶಕ್ಕೆ ಕಾರಣನಾಗಿರುವ ನಾನು ಶಾಪಾರ್ಹನಾಗಿದ್ದೇನೆ. ನನ್ನನ್ನು ಶಪಿಸು! ಸುಹೃದರಿಗೆ ದ್ರೋಹವನ್ನೆಸಗಿ ಅಂಥಹ ಸುಹೃದರನ್ನು ಸಂಹರಿಸಿದ ಈ ಮೂಢನಿಗೆ ಜೀವದಲ್ಲಾಗಲೀ, ರಾಜ್ಯದಲ್ಲಾಗಲೀ ಅಥವಾ ಧನದಲ್ಲಾಗಲೀ ಆಗಬೇಕಾದುದೇನೂ ಇಲ್ಲ!”

ಹತ್ತಿರದಲ್ಲಿಯೇ ಭೀತನಾಗಿ ನಿಂತಿದ್ದ ಆ ಅನಿಂದಿತನಿಗೆ ಸುದೀರ್ಘವಾಗಿ ನಿಟ್ಟುಸಿರು ಬಿಡುತ್ತಿದ್ದ ಗಾಂಧಾರಿಯು ಏನನ್ನೂ ಹೇಳಲಿಲ್ಲ. ನೃಪತಿ ಯುಧಿಷ್ಠಿರನು ದೇಹವನ್ನು ಬಗ್ಗಿಸಿ ಅವಳ ಪಾದಗಳಲ್ಲಿ

ಬೀಳುವುದರಲ್ಲಿದ್ದಾಗ ಧರ್ಮಜ್ಞಾ ಧರ್ಮದರ್ಶಿನೀ ದೇವೀ ಗಾಂಧರಿಯು ತನ್ನ ಕಣ್ಣಿಗೆ ಕಟ್ಟಿದ್ದ ಪಟ್ಟಿಯ ಸಂಧಿಯಿಂದ ಅವನ ಬೆರಳ ತುದಿಗಳನ್ನು ನೋಡಿದಳು. ಕೂಡಲೇ ಆ ನೃಪನ ಸುಂದರ ಉಗುರುಗಳ ಬೆರಳುಗಳು ವಿಕಾರರೂಪವನ್ನು ತಾಳಿದವು. ಅದನ್ನು ನೋಡಿ ಅರ್ಜುನನು ವಾಸುದೇವನ ಹಿಂದೆ ಅಡಗಿಕೊಂಡನು. ಅವರೆಲ್ಲರೂ ಕೂಡ ಹೀಗೆ ಅಲ್ಲಿಂದಿಲ್ಲಿಗೆ ಓಡಾಡತೊಡಗಿದರು. ಆಗ ಗಾಂಧಾರಿಯು ಕ್ರೋಧವನ್ನು ತೊರೆದು ತಾಯಿಯಂತೆ ಅವರನ್ನು ಸಂತವಿಸಿದಳು. ಅವಳಿಂದ ಅನುಜ್ಞೆಯನ್ನು ಪಡೆದು ಆ ವಿಶಾಲವಕ್ಷರು ಒಟ್ಟಿಗೇ ವೀರಮಾತೆ ತಾಯಿ ಪೃಥೆಯ ಬಳಿ ಹೋದರು.

ಬಹಳ ಕಾಲದ ನಂತರ ತನ್ನ ಪುತ್ರರನ್ನು ಕಂಡು ಕುಂತೀದೇವಿಯು ಸೆರಗಿನಿಂದ ಮುಖವನ್ನು ಮುಚ್ಚಿ ಪುತ್ರರೊಂದಿಗೆ ಕಣ್ಣೀರು ಸುರಿಸಿದಳು. ಅನಂತರ ಕಣ್ಣೀರನ್ನು ಒರೆಸಿಕೊಂಡು ಪೃಥೆಯು ಶಸ್ತ್ರಪ್ರಹಾರಗಳಿಂದ ಗಾಯಗೊಂಡಿದ್ದ ತನ್ನ ಪುತ್ರರನ್ನು ನೋಡಿದಳು. ಒಬ್ಬೊಬ್ಬರನ್ನಾಗಿ ಅವಳು ತನ್ನ ಮಕ್ಕಳನ್ನು ಪುನಃ ಪುನಃ ಮೈದಡವಿದಳು. ಅನಂತರ ಮಕ್ಕಳನ್ನು ಕಳೆದುಕೊಂಡು ದುಃಖಾರ್ತಳಾಗಿ ರೋದಿಸುತ್ತಾ ನೆಲದ ಬೇಲೆ ಬಿದ್ದ ಪಾಂಚಾಲೀ ದ್ರೌಪದಿಯನ್ನು ನೋಡಿ ಶೋಕಿಸಿದಳು.

ದ್ರೌಪದಿಯು ಹೇಳಿದಳು:

> “ಆರ್ಯೇ! ಸೌಭದ್ರ ಅಭಿಮನ್ಯು ಸಹಿತರಾಗಿ ನಿನ್ನ ಮೊಮ್ಮಕ್ಕಳೆಲ್ಲಾ ಎಲ್ಲಿ ಹೋದರು? ಬಹಳ ಕಾಲ ನೋಡದಿದ್ದ ತಪಸ್ವಿನೀ ನಿನ್ನನ್ನು ನೋಡಲು ಅವರು ಏಕೆ ಬಂದಿಲ್ಲ? ಮಕ್ಕಳನ್ನು ಕಳೆದುಕೊಂಡ ನನಗೆ ಈ ರಾಜ್ಯದಿಂದ ಏನಾಗಬೇಕಾಗಿದೆ?”

ವಿಶಾಲಲೋಚನೆ ಕುಂತಿಯು ಶೋಕಕರ್ಶಿತಳಾಗಿ ರೋದಿಸುತ್ತಿರುವ ಯಾಜ್ಞಸೇನೆಯನ್ನು ಮೇಲಕ್ಕೆತ್ತಿ ಸಮಾಧಾನಗೊಳಿಸತೊಡಗಿದಳು. ಅವಳನ್ನೂ ತನ್ನ ಪುತ್ರರನ್ನೂ ಜೊತೆಯಲ್ಲಿ ಕರೆದುಕೊಂಡು ಪೃಥೆಯು ತನಗಿಂತಲೂ ಆರ್ತಳಾಗಿದ್ದ ಮಾತೆ ಗಾಂಧಾರಿಯ ಬಳಿ ಹೋದಳು. ಯಶಸ್ವಿನೀ ಕುಂತಿಯೊಡನಿದ್ದ ಸೊಸೆಗೆ ಗಾಂಧಾರಿಯು ಹೇಳಿದಳು:

> “ಪುತ್ರೀ! ಹೀಗೆ ಶೋಕಾರ್ತಳಾಗಬೇಡ! ದುಃಖಿತಳಾಗಿರುವ ನನ್ನನ್ನೂ ನೋಡು! ಈ ಲೋಕವಿನಾಶವು ಕಾಲಚಕ್ರದಿಂದ ಪ್ರಚೋದಿತವಾದುದೆಂತು ನನಗನ್ನಿಸುತ್ತದೆ. ಅವಶ್ಯವಾಗಿ ಆಗಬೇಗಾಗಿದ್ದುದು ಆಗಿಹೋಯಿತು. ಸ್ವಾಭಾವಿಕವಾಗಿಯೇ ಇದು ರೋಮಹರ್ಷಣವಾದುದು. ಕೃಷ್ಣನು ಶಾಂತಿಗಾಗಿ ಬಂದಾಗ ಮಹಾಮತಿ ವಿದುರನು ಯಾವ ಮಹಾ ಮಾತುಗಳನ್ನಾಡಿದ್ದನೋ ಅದರಂತೆಯೇ ಆಗಿಹೋಯಿತು.

ಯಾವುದಕ್ಕೆ ಪರಿಹಾರವೇ ಇಲ್ಲವೋ, ಅದರಲ್ಲೂ ವಿಶೇಷವಾಗಿ ಯಾವುದು ಆಗಿ ಮುಗಿದು ಹೋಗಿದೆಯೋ ಅದರ ಕುರಿತು ಶೋಕಿಸಬೇಡ! ಸಂಗ್ರಾಮದಲ್ಲಿ ನಿಧನಹೊಂದಿದವರ ಸಲುವಾಗಿ ನೀನು ಶೋಕಿಸಬೇಕಾಗಿಲ್ಲ. ನಿನ್ನಂತೆ ನಾನೂ ಕೂಡ. ಯಾರು ಯಾರನ್ನು ಸಮಾಧಾನಗೊಳಿಸಬಲ್ಲರು? ನನ್ನ ಅಪರಾಧದಿಂದಲೇ ಈ ಉಚ್ಛ ಕುಲವು ನಾಶವಾಯಿತು.”

# ಗಾಂಧಾರೀ ಶಾಪ

ಹೀಗೆ ಹೇಳಿ ಗಾಂಧಾರಿಯು ನಿಂತಲ್ಲಿಂದಲೇ ತನ್ನ ದಿವ್ಯ ದೃಷ್ಟಿಯಿಂದ ಕುರುಗಳ ವಿನಾಶಸ್ಥಳವೆಲ್ಲವನ್ನೂ ನೋಡಿದಳು. ಆ ಸಮಾನವ್ರತಚಾರಿಣೀ, ಪ್ರತಿವ್ರತೆ, ಮಹಾಭಾಗೆ ಸತ್ಯವಾದಿನಿಯು ಸತತವೂ ಉಗ್ರ ತಪೋನಿರತಳಾಗಿದ್ದು, ಪುಣ್ಯಕರ್ಮಿ ಮಹರ್ಷಿ ಕೃಷ್ಣನ ವರದಾನದಿಂದ ಪಡೆದ ದಿವ್ಯಜ್ಞಾನದ ಬಲವನ್ನು ಪಡೆದು ವಿವಿಧ ರೀತಿಗಳಲ್ಲಿ ಶೋಕಿಸಿದಳು. ಅಷ್ಟು ದೂರದಿಂದ ಕೂಡ ಆ ಬುದ್ಧಿಮತಿಯು ಅತಿ ಹತ್ತಿರದಿಂದಲೋ ಎಂಬಂತೆ ನರವೀರರ

ಲೋಮಹರ್ಷಣ ರಣಭೂಮಿಯನ್ನು ನೋಡಿದಳು. ರಣಭೂಮಿಯು ಮೂಳೆಗಳಿಂದಲೂ, ತಲೆಗೂದಲುಗಳಿಂದಲೂ ವ್ಯಾಪ್ತವಾಗಿತ್ತು. ರಕ್ತದಿಂದ ತುಂಬಿಹೋಗಿತ್ತು. ಅನೇಕ ಸಾವಿರ ಶರೀರಗಳು ಎಲ್ಲಕಡೆ ಚದುರಿಹೋಗಿದ್ದವು. ರಕ್ತಸಿಕ್ತವಾಗಿದ್ದ ಆನೆ-ಕುದುರೆ-ರಥ ಮತ್ತು ಯೋಧರ ತಲೆಗಳಿಲ್ಲದ ಶರೀರಗಳಿಂದಲೂ, ಶರೀರಗಳಿಲ್ಲದ ತಲೆಗಳಿಂದಲೂ ರಣಭೂಮಿಯು ಮುಚ್ಚಿಹೋಗಿತ್ತು. ಆನೆ, ಕುದುರೆ ಮತ್ತು ನರವೀರರ ಹೆಣಗಳಿಂದ ತುಂಬಿಹೋಗಿದ್ದ ಆ ರಣರಂಗದಲ್ಲಿ ನರಿ-ಬಕಪಕ್ಷಿ-ಕಾಗಿ-ಗೂಬೆ ಮತ್ತು ರಣಹದ್ದುಗಳು ಸಂಚರಿಸುತ್ತಿದ್ದವು. ನರಭಕ್ಷಕ ರಾಕ್ಷಸರು ಅಲ್ಲಿ ವಿನೋದಿಸುತ್ತಿದ್ದರು. ಕಡಲಹದ್ದುಗಳು, ಅಮಂಗಳಕರವಾಗಿ ಕೂಗುತ್ತಿದ್ದ ನರಿಗಳು ಮತ್ತು ರಣಹದ್ದುಗಳಿಂದ ಅದು ತುಂಬಿಹೋಗಿತ್ತು.

ಅನಂತರ ಮಹೀಪತಿ ಧೃತರಾಷ್ಟ್ರನು ವ್ಯಾಸನ ಅನುಜ್ಞೆಯನ್ನು ಪಡೆದನು. ಯುಧಿಷ್ಠಿರನನೇ ಮೊದಲಾದ ಪಾಂಡುಪುತ್ರರೆಲ್ಲರೂ ಬಂಧುಗಳನ್ನು ಕಳೆದುಕೊಂಡ ರಾಜ ಮತ್ತು ವಾಸುದೇವನನ್ನು ಮುಂದೆಮಾಡಿಕೊಂಡು, ಕುರುಸ್ತ್ರೀಯರನ್ನು ಜೊತೆಯಲ್ಲಿ ಕರೆದುಕೊಂಡು, ರಣರಂಗದ ಕಡೆ ಹೊರಟರು. ಕುರುಕ್ಷೇತ್ರವನ್ನು ತಲುಪಿ ಪತಿಗಳನ್ನು ಕಳೆದುಕೊಂಡಿದ್ದ ಆ ಸ್ತ್ರೀಯರು ಅಲ್ಲಿ ಹತರಾಗಿದ್ದ ಪುತ್ರರನ್ನೂ,

ಸಹೋದರರರನ್ನೂ, ಪಿತೃಗಳನ್ನೂ, ಪತಿಗಳನ್ನೂ ಕಂಡರು. ಮಾಂಸಾಹಾರಿ ನರಿ, ಕಾಗೆ, ಭೂತ, ಪಿಶಾಚಿ, ರಾಕ್ಷಸರೇ ಮೊದಲಾದ ವಿವಿಧ ನಿಶಾಚರರು ಭಕ್ಷಿಸಲ್ಪಡುತ್ತಿದ್ದ, ರುದ್ರನ ಕ್ರೀಡಾಂಗಣದಂತೆ ತೋರುತ್ತಿದ್ದ ಆ ರಣಭೂಮಿಯನ್ನು ನೋಡಿ ದುಃಖಿತರಾದ ಸ್ತ್ರೀಯರು ಅತ್ಯಮೂಲ್ಯ ರಥಗಳಿಂದ ಕೂಗುತ್ತಾ ಕೆಳಗೆ ಬಿದ್ದರು. ಹಿಂದೆಂದೂ ಇಂಥದ್ದನ್ನು ನೋಡಿರದ ದುಃಖಾರ್ತ ಭರತಸ್ತ್ರೀಯರು ಅಲ್ಲಿದ್ದ ಶರೀರಗಳ ಮೇಲೆಯೇ ಬಿದ್ದರು. ಅನ್ಯರು ನೆಲದಮೇಲೆ ಬಿದ್ದರು. ಅನಾಥರಾಗಿ ಬಳಲಿದ್ದ ಅವರಲ್ಲಿ ಚೇತನವೇ ಇರಲಿಲ್ಲ. ಪಾಂಚಾಲ-ಕುರುಸ್ತ್ರೀಯರು ಆಗ ಅತ್ಯಂತ ದೀನರಾಗಿದ್ದರು. ದುಃಖದಿಂದ ಬುದ್ಧಿಕಳೆದುಕೊಂಡು ಕೂಗುತ್ತಿರುವವರ ಧ್ವನಿಯು ಸುತ್ತಲೂ ಕೇಳಿಬರುತ್ತಿರಲು, ಅತಿ ಉಗ್ರವಾಗಿದ್ದ ಆ ರಣಭೂಮಿಯನ್ನು ನೋಡಿ, ಕುರುಗಳ ಆ ಮಹಾಸಂಹಾರವನ್ನು ಕಂಡು ಧರ್ಮಜ್ಞೆ ಸುಬಲಾತ್ಮಜೆಯು ಪುರುಷೋತ್ತಮ ಪುಂಡರೀಕಾಕ್ಷನನ್ನು ಕರೆದು ದುಃಖದಿಂದ ಹೀಗೆ ಹೇಳಿದಳು:

> “ಪುಂಡರೀಕಾಕ್ಷ! ಮಾಧವ! ಪತಿಗಳನ್ನು ಕಳೆದುಕೊಂಡ ನನ್ನ ಸೊಸೆಯಂದಿರು ತಲೆಗೂದಲುಗಳನ್ನು ಕೆದರಿಕೊಂಡು ಕಡಲಹದ್ದುಗಳಂತೆ ಚೀರುತ್ತಿರುವುದನ್ನು ನೋಡು! ಇವರು ಆ

ಭರತರ್ಷಭರನ್ನು ಸ್ಮರಿಸಿಕೊಳ್ಳುತ್ತಾ ಅವರ ಪುತ್ರರು, ಸಹೋದರರು, ಪಿತೃಗಳು ಮತ್ತು ಪತಿಗಳನ್ನು ಹುಡುಕುತ್ತಾ ಒಬ್ಬೊಬ್ಬರು ಒಂದೊಂದು ಕಡೆ ಓಡಿಹೋಗುತ್ತಿದ್ದಾರೆ! ಪುತ್ರರನ್ನು ಕಳೆದುಕೊಂಡ ವೀರಮಾತೆಯರಿಂದಲೂ ವೀರಪತಿಯರನ್ನು ಕಳೆದುಕೊಂಡ ವೀರಪತ್ನಿಯರಿಂದಲೂ ಈ ರಣಭೂಮಿಯು ತುಂಬಿಹೋಗಿದೆ! ಪ್ರಜ್ವಲಿಸುವ ಪಾವಕರಂತಿರುವ ಭೀಷ್ಮ-ಕರ್ಣ-ಅಭಿಮನ್ಯು-ದ್ರೋಣ-ದ್ರುಪದ-ಶಲ್ಯ ಮೊದಲಾದ ಪುರುಷವ್ಯಾಘ್ರರಿಂದ ಶೋಭಿಸುತ್ತಿದೆ. ಮಹಾತ್ಮರ ಕಾಂಚನ ಕವಚಗಳಿಂದಲೂ, ಮಣಿಗಳ ಹಾರಗಳಿಂದಲೂ, ಅಂಗದ-ಹಸ್ತ ಕೇಯೂರಗಳಿಂದಲೂ, ಮಾಲೆಗಳಿಂದಲೂ ರಣಭೂಮಿಯು ಸಮಲಂಕೃತವಾಗಿದೆ. ವೀರರ ಬಾಹುಗಳಿಂದ ಪ್ರಯೋಗಿಸಲ್ಪಟ್ಟ ಶಕ್ತಿ, ಪರಿಘ, ವಿಮಲ ತೀಕ್ಷ್ಣ ಖಡ್ಗ, ಶರಗಳು ಮತ್ತು ಭತ್ತಳಿಕೆಗಳಿಂದ ಈ ರಣಭೂಮಿಯು ತುಂಬಿಹೋಗಿದೆ. ಸಂತೋಷಭರಿತವಾಗಿರುವ ಮಾಂಸಾಶೀ ಪಕ್ಷಿಗಳು ಕೆಲವೆಡೆ ಗುಂಪುಗುಂಪಾಗಿ ನಿಂತುಕೊಂಡಿವೆ, ಕೆಲವಡೆ ಆಟವಾಡುತ್ತಿವೆ, ಮತ್ತೆ ಇನ್ನು ಕೆಲವಡೆ ಮಲಗಿಕೊಂಡಿವೆ! ಈ ವಿಧದ

ಭಯಂಕರ ರಣಭೂಮಿಯನ್ನು ನೋಡಿ ಶೋಕದಿಂದ ನಾನು ಸುಡುತ್ತಿದ್ದೇನೆ. ಪಂಚಭೂತಗಳು ನಾಶವಾಗದಂತೆ ಪಾಂಚಲ-ಕುರುಗಳು ಹೀಗೆ ನಾಶವಾಗುತ್ತಾರೆಂದು ನಾನು ಯೋಚಿಸಿರಲಿಲ್ಲ. ಆ ಹದ್ದುಗಳು ಮತ್ತು ಇತರ ಪಕ್ಷಿಗಳು ಸಹಸ್ರಾರು ಸಂಖ್ಯೆಗಳಲ್ಲಿ ಕವಚಗಳ ಸಂಧಿನಿಂದ ಕುಕ್ಕಿ ಎಳೆದು ಮಾಂಸವನ್ನು ಭಕ್ಷಿಸುತ್ತಿವೆ! ಜಯದ್ರಥ, ಕರ್ಣ, ದ್ರೋಣ, ಬೀಷ್ಮ ಮತ್ತು ಅಭಿಮನ್ಯುವಿನ ವಿನಾಶವನ್ನು ಯಾರುತಾನೇ ಆಲೋಚಿಸಿದ್ದರು? ನಾವು ಯಾರನ್ನು ಅವಧ್ಯರೆಂದು ತಿಳಿದುಕೊಂಡಿದ್ದೆವೋ ಅವರೇ ಹತರಾಗಿ ಹದ್ದು-ಗಿಡುಗ-ನರಿ-ನಾಯಿ-ತೋಳಗಳಿಗೆ ಆಹಾರವಾಗುತ್ತಿದ್ದುದನ್ನು ನಾನು ನೋಡುತ್ತಿದ್ದೇನೆ! ದುರ್ಯೋಧನನ ವಶದಲ್ಲಿ ಬಂದು ಕೋಪಪರವಶರಾಗಿದ್ದ ಪುರುಷವ್ಯಾಘ್ರರು ಆರಿಹೋದ ಅಗ್ನಿಯಂತೆ ತಣ್ಣಗಾಗಿರುವುದನ್ನು ನೋಡು! ಮೃದುವಾದ ಶುಭ್ರವಾದ ಹಾಸಿಗೆಗಳ ಮೇಲೆ ಮಲಗಲು ಯೋಗ್ಯರಾದ ಎಲ್ಲರೂ ಇಂದು ಹತರಾಗಿ ನೆಲದ ಮೇಲೆ ಮಲಗಿದ್ದಾರೆ! ಹಿಂದೆ ಸತತವೂ ವಂದಿ-ಮಾಗಧರಿಂದ ಸ್ತುತಿಸಲ್ಪಡುತ್ತಿದ್ದ ಅನಿಂದಿತರು ಈಗ ನರಿಗಳ ವಿವಿಧ ಅಮಂಗಳಕರ, ಘೋರ

ಶಬ್ಧಗಳನ್ನು ಕೇಳುತ್ತಿದ್ದಾರೆ! ಹಿಂದೆ ಚಂದನ-ಅಗರು ಮುಂತಾದವುಗಳನ್ನು ಲೇಪಿಸಿಕೊಂಡು ಹಾಸಿಗೆಯ ಮೇಲೆ ಮಲಗುತ್ತಿದ್ದ ಈ ಯಶಸ್ವೀ ವೀರರು ಇಂದು ಕೆಸರಿನಲ್ಲಿ ಮಲಗಿದ್ದಾರೆ! ಹದ್ದು-ನರಿ-ಕಾಗೆಗಳು ಅವರ ಆಭರಣಗಳನ್ನು ಕಿತ್ತು ಎಸೆಯುತ್ತಾ ಅಶುಭವಾಗಿ ಮತ್ತು ಘೋರವಾಗಿ ಪುನಃ ಪುನಃ ಕೂಗುತ್ತಿವೆ! ಆ ಯುದ್ಧಾಭಿಮಾನಿಗಳು ಪ್ರೀತಿಯಿಂದ ಹಿಡಿದಿರುವ ಬಿಲ್ಲುಗಳು, ಪೀತಲ ನಿಶಿತ ವಿಶಿಖಗಳು, ಮತ್ತು ವಿಮಲ ಗದೆಗಳು ಇನ್ನೂ ಜೀವಂತವಾಗಿಯೆವೋ ಎಂಬಂತೆ ಹೊಳೆಯುತ್ತಿವೆ. ಗೂಳಿಗಳ ಕಣ್ಣುಗಳಂಥಹ ಕಣ್ಣುಗಳಿರುವ, ಸುಂದರ ರೂಪ ವರ್ಣಗಳ ಇನ್ನೂ ಮಾಸಿರದ ಮಾಲೆಗಳನ್ನು ತೊಟ್ಟ ಅನೇಕರನ್ನು ಕ್ರವ್ಯಾದಗಳು ಛಿದ್ರ-ವಿಛಿದ್ರ ಮಾಡುತ್ತಿವೆ. ಪರಿಘದಂಥಹ ಬಾಹುಗಳುಳ್ಳ ಇತರರು ಪ್ರೇಯಸಿಯನ್ನು ತಬ್ಬಿಕೊಂಡಿರುವವರಂತೆ ಗದೆಯನ್ನೇ ತಬ್ಬಿಕೊಂಡು ಅಂಗತ್ತರಾಗಿ ಮಲಗಿದ್ದಾರೆ. ಅನ್ಯರು ವಿಮಲ ಆಯುಧ-ಕವಚಗಳಿಂದ ಹೊಳೆಯುತ್ತಿರುವುದರಿಂದ ಅವರು ಜೀವಂತವಾಗಿರುವರೆಂದು ಭಾವಿಸಿ ಕ್ರವ್ಯಾದಗಳು ಅವರನ್ನು ತಿನ್ನುತ್ತಿಲ್ಲ! ಕ್ರವ್ಯಾದಗಳಿಂದ ಎಳೆಯಲ್ಪಡುತ್ತಿರುವ ಇತರ

ಮಹಾತ್ಮರ ಸುವರ್ಣಮಯ ಚಿತ್ರಿತ ಮಾಲೆಗಳು ಚೆಲ್ಲಾಪಿಲ್ಲಿಯಾಗಿ ಸುತ್ತಲೂ ಹರಡಿವೆ. ಹತರಾಗಿರುವ ಯಶಸ್ವಿಗಳ ಕಂಠಗಳಲ್ಲಿರುವ ಹಾರಗಳನ್ನು ಸಹಸ್ರಾರು ಭಯಂಕರ ನರಿಗಳು ಎಳೆದಾಡುತ್ತಿವೆ! ಅಪರರಾತ್ರಿಗಳಲ್ಲಿಯೂ ಯಾರನ್ನು ಪ್ರಶಿಕ್ಷಿತ ಬಂದಿಗಳು ಸ್ತುತಿಗಳಿಂದಲೂ ಉತ್ತಮ ಉಪಚಾರಗಳಿಂದಲೂ ಸೇವಿಸುತ್ತಿದ್ದರೋ ಅವರನ್ನು ಇಂದು ದುಃಖಾರ್ತರಾದ ಪರಮಾಂಗನೆಯರು ಕರುಣಾಜನಕ ವಿಲಾಪಗಳಿಂದ ಸಂಸೇವಿಸುತ್ತಿದ್ದಾರೆ! ಬಾಡಿಹೋಗಿರುವ ಈ ಪರಮಸ್ತ್ರೀಯರ ಮುಖಗಳು ಕೆಂಪು ಕಮಲದ ವನಗಳಂತೆ ಬಹಳ ಸುಂದರವಾಗಿ ಕಾಣುತ್ತಿವೆ. ಕೆಲವು ಕುರುಸ್ತ್ರೀಯರು ಅಳುವುದನ್ನು ನಿಲ್ಲಿಸಿ ತಮ್ಮವರು ಎಲ್ಲಿರುವರೆಂದು ಚಿಂತಿಸಿ ಹುಡುಕುತ್ತಾ ಅವರು ಸಿಕ್ಕಿದಾಗ ಪುನಃ ದುಃಖಿತರಾಗುತ್ತಿದ್ದಾರೆ! ಸೂರ್ಯನ ಕಾಂತಿಯನ್ನೂ ಚಿನ್ನದ ಹೊಳಪನ್ನೂ ಹೊಂದಿದ್ದ ಕುರುಸ್ತ್ರೀಯರ ಮುಖಗಳು ರೋಷ-ರೋದನಗಳಿಂದಾಗಿ ಕೆಂಪಾಗಿವೆ! ಇತರೇತರ ಸ್ತ್ರೀಯರ ರೋದನಗಳು ಎಲ್ಲ ಒಂದಾಗಿ ಯಾರು ಹೇಗೆ ರೋದಿಸುತ್ತಿದ್ದಾರೆನ್ನುವುದೂ ತಿಳಿಯದಾಗುತ್ತಿಲ್ಲ! ಈ

ವೀರಸ್ತ್ರೀಯರು ದೀರ್ಘವಾಗಿ ನಿಟ್ಟುಸಿರು ಬಿಡುತ್ತಾ, ಜೋರಾಗಿ ವಿಲಪಿಸುತ್ತಾ, ದುಃಖದಿಂದ ಚಡಪಡಿಸುತ್ತಾ ಕೊನೆಯಲ್ಲಿ ಜೀವವನ್ನೇ ತೊರೆಯುತ್ತಾರೆ! ಅನೇಕ ಸ್ತ್ರೀಯರು ಶರೀರಗಳನ್ನು ನೋಡಿ ಜೋರಾಗಿ ಕೂಗಿ ವಿಲಪಿಸುತ್ತಿದ್ದರೆ. ಇತರರು ತಮ್ಮ ಮೃದು ಕೈಗಳಿಂದ ತಲೆಯನ್ನು ಹೊಡೆದುಕೊಳ್ಳುತ್ತಿದ್ದಾರೆ. ಬಿದ್ದಿರುವ ಶಿರಗಳಿಂದಲೂ, ಕೈಗಳಿಂದಲೂ, ಗುಂಪು ಗುಂಪಾಗಿ ಬಿದ್ದಿರುವ ಸರ್ವಾಂಗಗಳಿಂದಲೂ ರಣಭೂಮಿಯು ಇತರೇತರರ ಅವಯವಗಳಿಂದ ತುಂಬಿಹೋಗಿರುವಂತೆ ಕಾಣುತ್ತಿದೆ. ಶಿರಗಳಿಲ್ಲದ ಕಾಯಗಳನ್ನೂ ಶರೀರಗಳಿಲ್ಲದ ಶಿರಗಳನ್ನೂ ನೋಡಿ ಘೋರದೃಶ್ಯವನ್ನು ನೋಡಿದವರಂತೆ ನಾರಿಯರು ಮೂರ್ಛೆಹೋಗುತ್ತಿದ್ದಾರೆ. ಶಿರವನ್ನು ಶರೀರಕ್ಕೆ ಜೋಡಿಸಿ ಅದು ಸರಿಯಾಗದೇ ತಕ್ಕ ಶಿರವು ಇಲ್ಲಿ ಕಾಣುತ್ತಿಲ್ಲವೆಂದು ಹೇಳುತ್ತಾ ಬುದ್ಧಿಕಳೆದುಕೊಂಡು ದುಃಖಿಸುತ್ತಿದ್ದಾರೆ. ಕತ್ತರಿಸಲ್ಪಟ್ಟಿರುವ ಬಾಹುಗಳನ್ನೂ, ಕಾಲುಗಳನ್ನೂ ಮತ್ತು ಅನ್ಯ ಅವಯವಗಳನ್ನು ಕಷ್ಟಪಟ್ಟು ಜೋಡಿಸುತ್ತಾ ತಮ್ಮ ವ್ಯರ್ಥಪ್ರಯತ್ನಕ್ಕಾಗಿ ಪುನಃ ಪುನಃ ಮೂರ್ಛೆಹೋಗುತ್ತಿದ್ದಾರೆ.

ಶಿರಗಳು ಕತ್ತರಿಸಲ್ಪಟ್ಟಿರುವುದರಿಂದ ಮತ್ತು ಮೃಗ-ಪಕ್ಷಿಗಳು ಕಿತ್ತು ತಿಂದಿರುವುದರಿಂದ ಈ ಭರತಸ್ತ್ರೀಯರು ತಮ್ಮ ಪತಿಯಂದಿರು ಯಾರೆಂದೂ ಗುರುತಿಸಲಾಗುತ್ತಿಲ್ಲ! ಅನ್ಯರು ಶತ್ರುಗಳಿಂದ ಹತರಾಗಿರುವ ಸಹೋದರರರನ್ನೂ, ತಂದೆಯರನ್ನೂ, ಪುತ್ರರನ್ನೂ, ಪತಿಗಳನ್ನೂ ನೋಡಿ ಕೈಗಳಿಂದ ತಮ್ಮ ತಲೆಗಳನ್ನು ಬಡಿದುಕೊಳ್ಳುತ್ತಿದ್ದಾರೆ! ಖಡ್ಗಗಳನ್ನು ಹಿಡಿದಿರುವ ಬಾಹುಗಳಿಂದಲೂ, ಕುಂಡಲಗಳನ್ನು ಧರಿಸಿದ್ದ ಶಿರಗಳಿಂದಲೂ, ಮಾಂಸ-ರಕ್ತಗಳ ಕೆಸರಿನಿಂದ ತುಂಬಿಹೋಗಿರುವ ಈ ರಣಭೂಮಿಯಲ್ಲಿ ಓಡಾಡಲೂ ಕಷ್ಟವಾಗುತ್ತಿದೆ! ಹಿಂದೆಂದೂ ಈ ವಿಧವಾದ ದುಃಖವನ್ನು ಅನುಭವಿಸಿರದಿದ್ದ ಈ ಅನಿಂದಿತೆಯರು ಸಹೋದರರು, ತಂದೆಯರು ಮತ್ತು ಪುತ್ರರಿಂದ ತುಂಬಿಹೋಗಿರುವ ಈ ವಸುಂಧರೆಯನ್ನು ನೋಡಿ ದುಃಖದಲ್ಲಿ ಮುಳುಗಿಹೋಗಿದ್ದಾರೆ! ಸುಂದರ ಕೇಶರಾಶಿಗಳ ಧೃತರಾಷ್ಟ್ರನ ಈ ಕಿಶೋರೀ ಸೊಸೆಯರು ಹೆಣ್ಣು ಕುದುರೆ ಮರಿಗಳ ಹಿಂಡಿನಂತೆ ಗೋಳಿಡುತ್ತಿರುವುದನ್ನು ನೋಡು! ಎಲ್ಲ ಸ್ತ್ರೀಯರು ಇಲ್ಲಿಗೆ ಬಂದು ಜೋರಾಗಿ ಕೂಗಿಕೊಳ್ಳುತ್ತಿರುವುದನ್ನು ನಾನು

ನೋಡುತ್ತಿದ್ದೇನೆ. ಇದಕ್ಕಿಂತಲೂ ಹೆಚ್ಚಿನ ದುಃಖವು ನನ್ನ ನೆನಪಿಗೆ ಬರುತ್ತಿಲ್ಲ! ಹತರಾದ ಪುತ್ರರನ್ನೂ, ಪೌತ್ರರನ್ನೂ, ಸಹೋದರರರನ್ನೂ ನಾನು ನೋಡುತ್ತಿದ್ದೇನೆಂದರೆ ನನ್ನ ಪೂರ್ವ ಜನ್ಮದಲ್ಲಿ ನಿಶ್ಚಯವಾಗಿಯೂ ನಾನು ಪಾಪವನ್ನೆಸಗಿರಬೇಕು!"

ಹೀಗೆ ವಿಲಪಿಸುತ್ತಾ ಆರ್ತಳಾಗಿದ್ದ ಗಾಂಧಾರಿಯು ಹತನಾಗಿದ್ದ ತನ್ನ ಮಗನನ್ನು ನೋಡಿದಳು. ದುರ್ಯೋಧನನನ್ನು ನೋಡಿ ಶೋಕಕರ್ಶಿತಳಾದ ಗಾಂಧಾರಿಯು ವನದಲ್ಲಿ ಕಡಿದುಬಿದ್ದ ಬಾಳೆಯ ಮರದಂತೆ ದೊಪ್ಪನೆ ಭೂಮಿಯ ಮೇಲೆ ಬಿದ್ದಳು. ಪುನಃ ಎಚ್ಚರಗೊಂಡು ರಕ್ತದಿಂದ ತೋಯ್ದುಹೋಗಿ ಮಲಗಿದ್ದ ದುರ್ಯೋಧನನನ್ನು ನೋಡಿ ಪುನಃ ಪುನಃ ಗಟ್ಟಿಯಾಗಿ ಅಳುತ್ತಾ ದೀನ ಗಾಂಧಾರಿಯು ಅವನನ್ನು ಆಲಂಗಿಸಿ ದೈನ್ಯದಿಂದ ಶೋಕಿಸಿದಳು. "ಹಾ ಹಾ ಪುತ್ರ!" ಎಂದು ಕೂಗಿಕೊಳ್ಳುತ್ತಾ ಶೋಕಾರ್ತಳಾಗಿ ಇಂದ್ರಿಯಗಳು ವ್ಯಾಕುಲವಾಗಿದ್ದ ಅವಳು ತನ್ನ ಕಣ್ಣೀರಿನಿಂದ ವಿಶಾಲವೂ ದಷ್ಟಪುಷ್ಟವೂ ಚಿನ್ನದ ಹಾರದಿಂದ ಶುಶೋಭಿತವೂ ಆಗಿದ್ದ ದುರ್ಯೋಧನನ ವಕ್ಷಸ್ಥಳವನ್ನು ನೆನೆಯಿಸುತ್ತಾ ಸಮೀಪದಲ್ಲಿದ್ದ ಹೃಷೀಕೇಶನಿಗೆ ಈ ಮಾತನ್ನಾಡಿದಳು:

"ವಾರ್ಷ್ಣೇಯ! ಜ್ಞಾತಿಗಳ ವಿನಾಶಕಾರೀ ಈ ಸಂಗ್ರಾಮವು



ಸನ್ನಿಹಿತವಾಗಿದ್ದಾಗ ಈ ನೃಪಸತ್ತಮನು ಕೈಮುಗಿದು "ಅಮ್ಮಾ! ಜ್ಞಾತಿಗಳ ನಡುವೆ ನಡೆಯುವ ಈ ಯುದ್ಧದಲ್ಲಿ ನನಗೆ ಜಯವಾಗಲೆಂದು ಹೇಳು!" ಎಂದು ನನ್ನಲ್ಲಿ ಕೇಳಿಕೊಂಡಿದ್ದನು! ಮುಂದೆ ನನಗೇ ಬರಲಿರುವ ದುಃಖವನ್ನು ಅರಿತುಕೊಂಡಿದ್ದ ನಾನು "ಪುರುಷವ್ಯಾಘ್ರ! ಧರ್ಮವಿರುವಲ್ಲಿಯೇ ಜಯವೂ ಇರುತ್ತದೆ!" ಎಂದು ಹೇಳಿದ್ದೆ. "ಮಗನೇ! ಯುದ್ಧಮಾಡುತ್ತಿರುವಾಗ ಯಾವಾಗಲೂ ನೀನು ಮೋಹಗೊಳ್ಳುವುದಿಲ್ಲ. ನಿಶ್ಚಯವಾಗಿಯೂ ನೀನು ಶಸ್ತ್ರಗಳಿಂದ ಅಮರರಂತೆ ಉತ್ತಮ ಲೋಕಗಳನ್ನು ಪಡೆಯುತ್ತೀಯೆ!" ಎಂದು ಆಗಲೇ ನಾನು ಅವನಿಗೆ ಹೇಳಿದ್ದೆ. ಆದುದರಿಂದ ನಾನು ಅಷ್ಟೊಂದು ಶೋಕಿಸುತ್ತಿಲ್ಲ. ಆದರೆ ಹತಬಾಂಧವನಾದ ದೀನನಾದ ಧೃತರಾಷ್ಟ್ರನ ಕುರಿತು ಶೋಕಿಸುತ್ತಿದ್ದೇನೆ. ವೀರ ಶಯನದಲ್ಲಿ ಮಲಗಿರುವ ಅಸಹನಶೀಲ, ಯೋದ್ಧಶ್ರೇಷ್ಠ, ಅಸ್ತ್ರವಿದ್ಯಾಪಾರಂಗತ, ಯುದ್ಧದುರ್ಮದ ನನ್ನ ಮಗನನ್ನು ನೋಡು! ಮೂರ್ಧಾಭಿಷಿಕ್ತ ರಾಜರ ಮುಂದೆ ಮುಂದೆಯೇ ಹೋಗುತ್ತಿದ್ದ ಈ ಪರಂತಪನು ಇಂದು ಕೆಸರಿನಲ್ಲಿ ಮಲಗಿದ್ದಾನೆಂದರೆ ಕಾಲದ

ವಿಪರ್ಯಾಸವನ್ನು ನೋಡು! ವೀರರಿಗೆ ತಕ್ಕುದಾದ ಭೂಶಯ್ಯೆಯಲ್ಲಿ ಅಂಗಾತನಾಗಿಯೇ ಮಲಗಿರುವ ಈ ದುರ್ಯೋಧನನು ನಿಶ್ಚಯವಾಗಿಯೂ ಪಡೆಯಲು ಸುಲಭವಲ್ಲದ ವೀರಗತಿಯನ್ನೇ ಪಡೆದಿರುತ್ತಾನೆ. ಹಿಂದೆ ಸೋಪಾನದ ಮೇಲೆ ಸ್ತ್ರೀಯರು ರಮಿಸುತ್ತಿದ್ದ ಮಹೀಕ್ಷಿತನು ಹತನಾಗಿ ನೆಲದ ಮೇಲೆ ಮಲಗಿರಲು ಹದ್ದುಗಳು ಅವನ ಸೇವೆ ಮಾಡುತ್ತಿವೆ. ಹಿಂದೆ ಸ್ತ್ರೀಯರು ಉತ್ತಮ ವ್ಯಜನಗಳಿಂದ ಗಾಳಿಬೀಸುತ್ತಿದ್ದ ಅವನಿಗೆ ಇಂದು ಪಕ್ಷಿಗಳು ತಮ್ಮ ರೆಕ್ಕೆಗಳಿಂದ ಗಾಳಿಬೀಸುತ್ತಿವೆ. ಯುದ್ಧದಲ್ಲಿ ಸಿಂಹದಿಂದ ಆನೆಯಂತೆ ಭೀಮಸೇನನಿಂದ ಕೆಳಗುರುಳಿಸಲ್ಪಟ್ಟ ಮಹಾಬಾಹು ಬಲವಾನ್ ಸತ್ಯವಿಕ್ರಮಿಯು ಇಲ್ಲಿ ಮಲಗಿದ್ದಾನೆ. ಕೃಷ್ಣ! ಭೀಮಸೇನನಿಂದ ಹತನಾಗಿ ರಕ್ತಸಿಕ್ತನಾಗಿ ಗದೆಯನ್ನು ಹಿಡಿದು ಮಲಗಿರುವ ದುರ್ಯೋಧನನನ್ನು ನೋಡು! ಹಿಂದೆ ಹನ್ನೊಂದು ಅಕ್ಷೋಹಿಣೀ ಸೇನೆಯನ್ನು ಒಂದುಗೂಡಿಸಿದ್ದ ಅವನು ಯುದ್ಧದಲ್ಲಿ ಅನ್ಯಾಯರೀತಿಯಲ್ಲಿ ನಿಧನಹೊಂದಿದ್ದಾನೆ. ಸಿಂಹದಿಂದ ಕೆಳಗುರುಳಿಸಲ್ಪಟ್ಟ ಶಾರ್ದೂಲದಂತೆ

ಭೀಮಸೇನನಿಂದ ಪಾತಿತನಾಗಿ ಇಗೋ ಮಹಾರಥ ಮಹೇಷ್ವಾಸ ದುರ್ಯೋಧನನು ಮಲಗಿದ್ದಾನೆ. ವಿದುರನನ್ನೂ ತನ್ನ ತಂದೆಯನ್ನೂ ಅವಮಾನಿಸಿ ಆ ಮಂದಭಾಗ್ಯ, ಬಾಲಬುದ್ಧಿಯ ಮೂಢನು ವೃದ್ಧರನ್ನು ಅವಮಾನಿಸಿದುದರಿಂದ ಮೃತ್ಯುವಿನ ವಶನಾದನು. ಸ್ಪರ್ಧೆಯೇ ಇಲ್ಲದೇ ಹದಿಮೂರು ವರ್ಷಗಳು ಈ ಭೂಮಂಡಲು ಯಾರ ಅಧೀನದಲ್ಲಿತ್ತೋ ಆ ನನ್ನ ಪುತ್ರ ಪೃಥಿವೀಪತಿಯು ಹತನಾಗಿ ಭೂಮಿಯ ಮೇಲೆ ಮಲಗಿದ್ದಾನೆ! ಈ ಧಾರ್ತರಾಷ್ಟ್ರನ ಅನುಶಾಸನದಲ್ಲಿ ಪೃಥ್ವಿಯು ಆನೆ-ಗೋವು-ಕುದುರೆಗಳಿಂದ ಸಮೃದ್ಧವಾಗಿದ್ದುದನ್ನು ನಾನು ನೋಡಿದ್ದೆನು. ಇಂದು ಅನ್ಯರ ಅನುಶಾಸನದಡಿಯಲ್ಲಿರುವ ಈ ಭೂಮಿಯು ಆನೆ-ಕುದುರೆ-ಗೋವುಗಳಿಂದ ವಿಹೀನವಾಗಿರುವುದನ್ನು ನಾನು ನೋಡುತ್ತಿದ್ದೇನೆ! ನಾನೇಕೆ ಜೀವಿಸಿರಬೇಕು ಮಾಧವ! ನನ್ನ ಪುತ್ರನ ವಧೆಗಿಂತಲೂ ಕಷ್ಟಕರವಾದುದನ್ನು ನೋಡು! ರಣದಲ್ಲಿ ಹತರಾದ ಶೂರರನ್ನು ಈ ಸ್ತ್ರೀಯರು ಉಪಾಸಿಸುತ್ತಿದ್ದಾರೆ! ಚಿನ್ನದ ವೇದಿಯಂತೆ ಬೆಳಗುತ್ತಿರುವ

ಸುಶ್ರೋಣೀ ಲಕ್ಷ್ಮಣನ ತಾಯಿಯು ಕೂದಲುಗಳನ್ನು ಕೆದರಿಕೊಂಡು ದುರ್ಯೋಧನನ ತೊಡೆಯ ಸಮೀಪದಲ್ಲಿ ಕುಳಿತಿರುವುದನ್ನು ನೋಡು! ಹಿಂದೆ ಆ ಮಹಾಭುಜನು ಜೀವಿಸಿರುವಾಗ ಈ ಮನಸ್ವಿನೀ ಬಾಲೆಯು ಅವನ ಸುಂದರ ಬಾಹುಗಳನ್ನಾಶ್ರಯಿಸಿ ರಮಿಸುತ್ತಿದ್ದಳಲ್ಲವೇ? ರಣದಲ್ಲಿ ಪುತ್ರನೊಂದಿಗೆ ಹತನಾಗಿರುವ ಈ ಪುತ್ರನನ್ನು ನೋಡಿಯೂ ಹೇಗೆ ನನ್ನ ಈ ಹೃದಯವು ನೂರು ಚೂರಾಗಿ ಒಡೆದುಹೋಗುತ್ತಿಲ್ಲ? ಆ ವಾಮೋರುವು ರಕ್ತದಿಂದ ತೋಯ್ದುಹೋಗಿರುವ ಮಗ ಲಕ್ಷ್ಮಣನ ಮುಖವನ್ನು ಆಘ್ರಾಣಿಸುತ್ತಿದ್ದಾಳೆ ಮತ್ತು ದುರ್ಯೋಧನನನ್ನು ಕೈಯಿಂದ ಸವರುತ್ತಿದ್ದಾಳೆ. ಈ ಮನಸ್ವಿನಿಯು ಯಾರಿಗಾಗಿ ಶೋಕಿಸುತ್ತಿದ್ದಾಳೆ? ಪುತ್ರನಿಗಾಗಿಯೋ ಅಥವಾ ಪತಿಗಾಗಿಯೋ? ಅವಳು ಮಗನನ್ನು ನೋಡುತ್ತಿರುವ ರೀತಿಯಿಂದ ಅವಳು ಈ ಸಂದಿಗ್ಧ ಪರಿಸ್ಥಿತಿಯಲ್ಲಿದ್ದಾಳೆಂದು ನಮಗನ್ನಿಸುತ್ತದೆ. ಆ ಆಯತೇಕ್ಷಣೆಯು ಎರಡೂ ಕೈಗಳಿಂದ ತನ್ನ ತಲೆಯನ್ನು ಚಚ್ಚಿಕೊಳ್ಳುತ್ತಿದ್ದಾಳೆ ಮತ್ತು ವೀರ ಪತಿ ಕುರುರಾಜನ ಎದೆಯಮೇಲೆ ಬೀಳುತ್ತಿದ್ದಾಳೆ! ಕಮಲದ

ಪ್ರಭೆಯುಳ್ಳ ಆ ತಪಸ್ವಿನಿಯು ಒಮ್ಮೆ ಮಗನ ಮತ್ತು ಇನ್ನೊಮ್ಮೆ ಪತಿಯ ಮುಖವನ್ನು ಒರೆಸುತ್ತಾ ಕಾಂತಿಹೀನಳಾಗಿ ತೋರುತ್ತಿದ್ದಾಳೆ. ಆಗಮ-ಶ್ರುತಿಗಳು ಸತ್ಯವನ್ನೇ ಪ್ರತಿಪಾದಿಸುವುದಾದರೆ ನಿಶ್ಚಯವಾಗಿ ನೃಪನು ಬಾಹುಬಲದಿಂದ ಆರ್ಜಿಸಿದ ಪುಣ್ಯ ಲೋಕಗಳನ್ನೇ ಸೇರಿರಬಹುದು!

ಮಾಧವ! ಆಯಾಸವೇ ಇಲ್ಲದೇ ಯುದ್ಧಮಾಡುತ್ತಿದ್ದ ನನ್ನ ನೂರು ಮಕ್ಕಳು ರಣದಲ್ಲಿ ಭೀಮಸೇನನ ಗದೆಯಿಂದ ಹತರಾಗಿರುವುದನ್ನು ನೋಡು! ನನ್ನ ಬಾಲ ಸೊಸೆಯರು ಪುತ್ರರನ್ನು ಕಳೆದುಕೊಂಡು ಕೂದಲುಗಳನ್ನು ಕೆದರಿಕೊಂಡು ರಣದಲ್ಲಿ ಓಡಾಡುತ್ತಿರುವುದಕ್ಕಿಂತಲೂ ಹೆಚ್ಚಿನ ದುಃಖವು ಇಂದು ಯಾವುದಿದೆ? ಭೂಷಣಗಳಿಂದ ಅಲಂಕೃತ ಕಾಲ್ನಡುಗೆಯಲ್ಲಿ ಅರಮನೆಯ ನೆಲವನ್ನು ಸ್ಪರ್ಷಿಸುತ್ತಿದ್ದ ಅವರು ರಕ್ತದಿಂದ ನೆನೆದಿರುವ ಭೂಮಿಯನ್ನು ಅದೇ ಕಾಲುಗಳಿಂದ ಸ್ಪರ್ಷಿಸುತ್ತಿದ್ದಾರೆ! ಶೋಕದಿಂದ ಆರ್ತರಾಗಿ ಅವರು ಅಮಲೇರಿದ ಸ್ತ್ರೀಯರಂತೆ ತೂರಾಡುತ್ತಾ ಹದ್ದು-ನರಿ-ಕಾಗೆಗಳನ್ನು ಬಹಳ ಕಷ್ಟದಿಂದ ಓಡಿಸುತ್ತಿದ್ದಾರೆ! ತೆಳು

ಸೊಂಟದ ನನ್ನ ಇನ್ನೊಬ್ಬ ಸೊಸೆಯು ಈ ಘೋರ ವಿನಾಶವನ್ನು ನೋಡಿ ಅತ್ಯಂತ ದುಃಖಿತಳಾಗಿ ಇಗೋ ಕೆಳಗೆ ಬೀಳುತ್ತಿದ್ದಾಳೆ! ರಾಜಪುತ್ರಿ, ಲಕ್ಷ್ಮಣನ ತಾಯಿ, ಪಾರ್ಥಿವಸುತೆಯನ್ನು ನೋಡಿ ನನ್ನ ಮನಸ್ಸು ಶಾಂತವಾಗುತ್ತಿಲ್ಲ! ಹತರಾಗಿ ಭೂಮಿಯ ಮೇಲೆ ಬಿದ್ದಿರುವ ಸಹೋದರರರನ್ನು, ಇನ್ನು ಕೆಲವರು ಪತಿಗಳನ್ನು ಮತ್ತು ಇನ್ನು ಕೆಲವರು ಪುತ್ರರನ್ನು ನೋಡಿ ತಮ್ಮ ಸುಂದರ ಬಾಹುಗಳನ್ನು ಮೇಲೆತ್ತಿ ಪರಿತಪಿಸುತ್ತಿದ್ದಾರೆ! ಬಂಧುಗಳು ಹತರಾಗಿರುವುದನ್ನು ನೋಡಿ ದಾರುಣವಾಗಿ ಕಷ್ಟದಿಂದ ರೋದಿಸುತ್ತಿರುವ ಮಧ್ಯವಯಸ್ಸಿನ ಮತ್ತು ವೃದ್ಧ ನಾರಿಯರ ಆಕ್ರಂದವನ್ನು ಕೇಳು! ಶ್ರಮದಿಂದ ಬಳಲಿದ ಆ ಸ್ತ್ರೀಯರು ರಥದ ನೊಗಗಳನ್ನೂ, ಸತ್ತುಹೋದ ಆನೆ-ಕುದುರೆಗಳ ದೇಹವನ್ನೂ ಆಶ್ರಯಿಸಿ ನಿಂತಿರುವುದನ್ನು ನೋಡು! ಇನ್ನೊಬ್ಬಳು ಶರೀರದಿಂದ ತುಂಡಾಗಿರುವ ಸುಂದರ ಕುಂಡಲಗಳನ್ನು ಧರಿಸಿದ್ದ ತನ್ನ ಬಂಧುವಿನ ಶಿರವನ್ನು ಹಿಡಿದು ನಿಂತಿರುವುದನ್ನು ನೋಡು! ಹಿಂದಿನ ಜನ್ಮದಲ್ಲಿ ನಾವು ಮಾಡಿದ ಪಾಪಗಳು ಅಲ್ಪವಾಗಿರಲಾರದು. ಆದುದರಿಂದಲೇ

ಮಂದಬುದ್ಧಿಯುಳ್ಳ ನಾನು ಇಂತಹ ಕೀಳು ಪರಿಸ್ಥಿತಿಗೆ ಇಳಿದಿದ್ದೇನೆ! ಅದಕ್ಕಾಗಿಯೇ ಧರ್ಮರಾಜನು ನಮಗೆ ಈ ನೋವನ್ನಿತ್ತಿದ್ದಾನೆ! ಶುಭ-ಪಾಪ ಕರ್ಮಗಳು ಎಂದೂ (ಫಲವನ್ನು ಕೊಡದೇ) ನಾಶವಾಗುವುದಿಲ್ಲ! ಇನ್ನೂ ಹೆಚ್ಚು ವಯಸ್ಸಾಗಿರದ, ಸುಂದರ ಮುಖ-ಕುಚಗಳುಳ್ಳ, ಸತ್ಕುಲಪ್ರಸೂತೆಯರಾದ, ಲಜ್ಜಾಶೀಲರಾದ, ಕಪ್ಪು ರೆಪ್ಪೆ-ಕಣ್ಣುಗಳುಳ್ಳ, ಹಂಸಪಕ್ಷಿಗಳಂತೆ ಗದ್ಗದಸ್ವರದಲ್ಲಿ ಕೂಗುತ್ತಿರುವ, ದುಃಖಶೋಕಗಳಿಂದ ಮೂರ್ಛಿತರಾಗಿ ಸಾರಸ ಪಕ್ಷಿಗಳಂತೆ ರೋದಿಸುತ್ತಾ ಬೀಳುತ್ತಿರುವವರನ್ನು ನೋಡು! ಅರಳಿದ ಕಮಲದ ಕಾಂತಿಯಿಂದ ಪ್ರಕಾಶಿಸುತ್ತಿರುವ ಸ್ತ್ರೀಯರ ಸುಂದರ ಮುಖಗಳನ್ನು ಸೂರ್ಯನು ತನ್ನ ಪ್ರಖರ ಕಿರಣಗಳಿಂದ ಸುಡುತ್ತಿದ್ದಾನೆ! ಮತ್ತ ಮಾತಂಗದ ದರ್ಪವುಳ್ಳ ನನ್ನ ಪುತ್ರರು ಅಸೂಯೆಪಟ್ಟು ಬೇರೆ ಯಾರೂ ನೋಡಬಾರದೆನ್ನುತ್ತಿದ್ದರೋ ಅವರ ಪತ್ನಿಯರನ್ನು ಇಂದು ಸಾಮಾನ್ಯ ಜನರೂ ನೋಡುತ್ತಿದ್ದಾರೆ! ನೂರು ಚಂದ್ರರ ಚಿಹ್ನೆಗಳುಳ್ಳ ನನ್ನ ಪುತ್ರರ ಗುರಾಣಿಗಳು, ಆದಿತ್ಯಸನ್ನಿಭ ಧ್ವಜಗಳು, ಚಿನ್ನದ ಕವಚಗಳು ಮತ್ತು ಕಾಂಚನ ಪದಕಗಳು ಮತ್ತು ಕಿರೀಟಗಳು ಭೂಮಿಯ

ಮೇಲೆ ಬಿದ್ದು ಉರಿಯುತ್ತಿರುವ ಅಗ್ನಿಯಂತೆ ಬೆಳಗುತ್ತಿರುವುದನ್ನು ನೋಡು! ಶತ್ರುಸೂದನ ಶೂರ ಭೀಮಸೇನನು ಸರ್ವಾಂಗಗಳಿಂದ ಸುರಿಯುತ್ತಿದ್ದ ರಕ್ತವನ್ನು ಕುಡಿದು ಕೆಳಗುರುಳಿಸಿದ ದುಃಶಾಸನನು ಇಲ್ಲಿ ಮಲಗಿದ್ದಾನೆ! ದ್ಯೂತದ ಸಮಯದಲ್ಲಿ ದ್ರೌಪದಿಗೆ ಕೊಟ್ಟ ಕ್ಲೇಶಗಳ ಸ್ಮರಣೆಯಿಂದ ಪ್ರೇರಿತನಾದ ವೀರಘಾತೀ ಭೀಮನ ಗದೆಯಿಂದ ಕೆಳಗುರುಳಿಸಲ್ಪಟ್ಟು ಬಿದ್ದಿರುವ ನನ್ನ ಮಗನನ್ನು ನೋಡು! ಇವನು ತನ್ನ ಅಣ್ಣ ಮತ್ತು ಕರ್ಣನಿಗೆ ಪ್ರಿಯವಾದುದನ್ನು ಮಾಡಲು ಬಯಸಿ ದ್ಯೂತದಲ್ಲಿ ಸೋತ ಪಾಂಚಾಲಿಯೊಡನೆ ಸಭೆಯಲ್ಲಿ ಹೀಗೆ ಹೇಳಿದ್ದನು: "ಪಾಂಚಾಲೀ! ದಾಸರಾದ ಸಹದೇವ-ನಕುಲ-ಅರ್ಜುನರ ಪತ್ನಿಯಾದ ನೀನೂ ಕೂಡ ದಾಸಿಯಂತೆ. ಆದುದರಿಂದ ಬೇಗನೇ ನೀನು ನಮ್ಮ ಮನೆಗಳನ್ನು ಪ್ರವೇಶಿಸು!" ಆಗ ನಾನು ನೃಪ ದುರ್ಯೋಧನನಿಗೆ ಹೀಗೆ ಹೇಳಿದ್ದೆನು: "ಮಗನೇ! ಮೃತ್ಯುಪಾಶದಿಂದ ಬಂಧಿಸಲ್ಪಟ್ಟಿರುವ ಶಕುನಿಯನ್ನು ಪರಿತ್ಯಜಿಸು! ಈ ನಿನ್ನ ಮಾವ ದುರ್ಬುದ್ಧಿಯು ಕಲಹಪ್ರಿಯನೆನ್ನುವುದನ್ನು ತಿಳಿದುಕೋ. ಬೇಗನೇ ಇವನನ್ನು

ಪರಿತ್ಯಜಿಸಿ ಪಾಂಡವರೊಂದಿಗೆ ಸಂಧಿಮಾಡಿಕೋ! ಕೋಪಿಷ್ಟ ಭೀಮಸೇನನನ್ನು ನೀನು ಅರಿತಿಲ್ಲ! ಉರಿಯುತ್ತಿರುವ ಕೊಳ್ಳಿಗಳಿಂದ ಆನೆಯನ್ನು ತಿವಿದು ಕೆರಳಿಸುವಂತೆ ನೀನು ಮಾತುಗಳೆಂಬ ತೀಕ್ಷ್ಣ ಬಾಣಗಳಿಂದ ಚುಚ್ಚುತ್ತಿರುವೆ!" ರಭಸದಿಂದಾಡಿದ ಆ ಕ್ರೂರ ಮಾತಿನ ಮುಳ್ಳುಗಳನ್ನು ಸಹಿಸಿಟ್ಟುಕೊಂಡಿದ್ದ ಭೀಮಸೇನನು ಸರ್ಪವು ಗೂಳಿಗಳ ಮೇಲೆ ಹೇಗೋ ಹಾಗೆ ನನ್ನ ಮಕ್ಕಳ ಮೇಲೆ ವಿಷವನ್ನು ಕಾರಿದ್ದಾನೆ! ಸಿಂಹದಿಂದ ಹತವಾದ ಮಹಾಸಲಗದಂತೆ ಭೀಮಸೇನನಿಂದ ಹತನಾದ ದುಃಶಾಸನನು ಇಗೋ ಇಲ್ಲಿ ತನ್ನ ಎರಡು ವಿಪುಲ ಭುಜಗಳನ್ನೂ ಚಾಚಿ ಮಲಗಿದ್ದಾನೆ! ಅತ್ಯಂತ ಅಸಹನಶೀಲನಾದ ಭೀಮಸೇನನು ಕ್ರುದ್ಧನಾಗಿ ರಣದಲ್ಲಿ ದುಃಶಾಸನನ ರಕ್ತವನ್ನು ಕುಡಿದು ರೌದ್ರಕರ್ಮವನ್ನೇ ಎಸಗಿದನು!

ಮಾಧವ! ಪ್ರಾಜ್ಞಸಮ್ಮತನಾಗಿದ್ದ ನನ್ನ ಮಗ ಈ ವಿಕರ್ಣನೂ ಕೂಡ ಭೀಮನಿಂದ ನೂರುಚೂರಾಗಿಸಲ್ಪಟ್ಟು ಇಲ್ಲೆ ನೆಲದ ಮೇಲೆ ಮಲಗಿದ್ದಾನೆ! ಆನೆಗಳ ಮಧ್ಯ ಮಲಗಿರುವ ವಿಕರ್ಣನು ಶರತ್ಕಾಲದಲ್ಲಿ ಕಪ್ಪುಮೋಡಗಳಿಂದ ಮುಚ್ಚಲ್ಪಟ್ಟ

ದಿವಾಕರನಂತೆ ತೋರುತ್ತಿದ್ದಾನೆ. ಧನುಸ್ಸನ್ನು ಹಿಡಿಯುತ್ತಿದ್ದುದರಿಂದ ಅವನ ಕೈಯು ಜಡ್ಡುಗಟ್ಟಿಹೋಗಿದೆ. ಕೈಚೀಲವನ್ನು ಧರಿಸಿದ್ದ ಅವನ ಕೈಗಳನ್ನು ತಿನ್ನಲು ಬಯಸಿ ಹದ್ದುಗಳು ಕುಕ್ಕಲು ಪ್ರಯತ್ನಿಸುತ್ತಿವೆ. ಮಾಂಸವನ್ನು ತಿನ್ನಲು ಬಯಸುತ್ತಿರುವ ಹದ್ದುಗಳನ್ನು ಓಡಿಸಲು ಅವನ ಪತ್ನಿ ಬಾಲ ತಪಸ್ವಿನಿಯು ಪ್ರಯತ್ನಿಸುತ್ತಿದ್ದರೂ ಅವಳಿಗೆ ಅದು ಸಾಧ್ಯವಾಗುತ್ತಿಲ್ಲ! ದೇವತೆಗಳಂತೆ ಕಾಂತಿಯುಕ್ತನಾಗಿದ್ದ ಯುವಕ ಶೂರ ವಿಕರ್ಣನು ಸುಖದಿಂದಲೇ ಬೆಳೆದವನು. ಸುಖದಿಂದಿರಲು ಯೋಗ್ಯನಾದ ಅವನು ಕೆಸರಿನಲ್ಲಿ ಮಲಗಿದ್ದಾನೆ! ಕರ್ಣಿ-ನಾಲೀಕ-ನಾರಾಚ ಬಾಣಗಳಿಂದ ಯುದ್ಧದಲ್ಲಿ ಮರ್ಮಸ್ಥಾನಗಳೆಲ್ಲವೂ ಗಾಯಗೊಂಡು ಹತನಾಗಿದ್ದರೂ ಶರೀರಕಾಂತಿಯು ಆ ಭರತಸತ್ತಮನನ್ನು ಇನ್ನೂ ಬಿಟ್ಟುಹೋಗಿಲ್ಲ! ರಣದಲ್ಲಿ ಶತ್ರುಗಣಗಳನ್ನು ಸಂಹರಿಸುತ್ತಿದ್ದ ದುರ್ಮುಖನೂ ಕೂಡ ಪ್ರತಿಜ್ಞೆಯನ್ನು ಪಾಲಿಸಿದ ಸಂಗ್ರಾಮ ಶೂರ ಭೀಮನಿಂದ ಹತನಾಗಿ ಇದೋ ಇಲ್ಲಿ ಅಂಗಾತನಾಗಿ ಮಲಗಿದ್ದಾನೆ! ಕ್ರೂರಮೃಗಗಳಿಂದ ತಿನ್ನಲ್ಪಟ್ಟ ಅವನ ಮುಖವು ಸಪ್ತಮಿಯ ಚಂದ್ರನಂತೆ

ಅಧಿಕವಾಗಿ ಬೆಳಗುತ್ತಿದೆ! ರಣದಲ್ಲಿ ಆ ಶೂರನ ಮುಖವು ಈ ರೀತಿ ತೇಜಸ್ಸಿನಿಂದ ಕೂಡಿರುವುದನ್ನು ನೋಡಿದರೆ ಇವನು ಶತ್ರುಗಳಿಂದ ಹೇಗೆ ಹತನಾಗಿರಬಹುದು? ಹೇಗೆ ನನ್ನ ಮಗನು ಕೆಸರಿನಲ್ಲಿ ಸಿಲುಕಿಕೊಂಡಿದ್ದಾನೆ? ಯುದ್ಧದಲ್ಲಿ ಇವನನ್ನು ಎದುರಿಸಿ ಹೋರಾಡುವವರು ಯಾರೂ ಇರಲಿಲ್ಲ. ದೇವಲೋಕವನ್ನೇ ಜಯಿಸಲು ಸಮರ್ಥನಾಗಿದ್ದ ಈ ದುರ್ಮುಖನು ಹೇಗೆ ತಾನೇ ಶತ್ರುಗಳಿಂದ ಹತನಾದನು? ಧನುಷ್ಮತರಿಗೇ ಆದರ್ಶಪ್ರಾಯನಾದ ಧೃತರಾಷ್ಟ್ರನ ಮಗ ಚಿತ್ರಸೇನನು ಹತನಾಗಿ ಭೂಮಿಯ ಮೇಲೆ ಮಲಗಿರುವುದನ್ನು ನೋಡು! ಚಿತ್ರತರ ಮಾಲ್ಯಾಭರಣಗಳನ್ನು ಧರಿಸಿರುವ ಅವನನ್ನು ಶೋಕಕರ್ಶಿತ ಯುವತಿಯರು ಮಾಂಸಾಶಿ ಪ್ರಾಣಿಗಳೊಡನೆ ರೋದಿಸುತ್ತಾ ಸುತ್ತುವರೆದಿದ್ದಾರೆ. ಸ್ತ್ರೀಯರ ರೋದನದ ಶಬ್ಧ ಮತ್ತು ಮಾಂಸಾಶಿ ಪ್ರಾಣಿಗಳ ಗರ್ಜನೆಗಳು ನನಗೆ ನೋಡಲು ಅದ್ಭುತವಾಗಿಯೂ ವಿಚಿತ್ರವಾಗಿಯೂ ಕಾಣುತ್ತಿವೆ! ನಿತ್ಯವೂ ಶ್ರೇಷ್ಠ ಸ್ತ್ರೀಯರಿಂದ ಸೇವಿಸಲ್ಪಡುತ್ತಿದ್ದ, ದೇವಸದೃಶ ಯುವಕ ವಿವಿಂಶತಿಯು ವಿಧ್ವಸ್ತನಾಗಿ ಇಗೋ ಇಲ್ಲ ಧೂಳಿನಲ್ಲಿ ಮಲಗಿಕೊಂಡಿದ್ದಾನೆ!, ಶರಗಳಿಂದ

ಕತ್ತರಿಸಲ್ಪಟ್ಟ ಕವಚವುಳ್ಳ, ಯುದ್ಧದಲ್ಲಿ ಹತನಾದ ವೀರ ವಿವಿಂಶತಿಯನ್ನು ಸುತ್ತುವರೆದು ಹದ್ದುಗಳು ಕುಳಿತುಕೊಂಡಿವೆ! ಆ ವೀರನು ಸಮರದಲ್ಲಿ ಪಾಂಡವರ ಸೇನೆಯನ್ನು ಪ್ರವೇಶಿಸಿ ಪುನಃ ಸತ್ಪುರುಷರಿಗೆ ಉಚಿತವಾದ ವೀರಶಯದಲ್ಲಿ ಮಲಗಿದ್ದಾನೆ! ಮಂದಹಾಸವನ್ನು ಬೀರುತ್ತಿರುವ, ಸುಂದರ ಮುಖ ಮತ್ತು ಹುಬ್ಬುಗಳುಳ್ಳ, ತಾರಾಧಿಪ ಚಂದ್ರನಂತಿರುವ ವಿವಿಂಶತಿಯ ಶುಭ್ರ ವದನವನ್ನು ನೋಡು! ಕ್ರೀಡಿಸುತ್ತಿರುವ ಗಂಧರ್ವನನ್ನು ಸಹಸ್ರಾರು ದೇವಕನ್ಯೆಯರು ಹೇಗೋ ಹಾಗೆ ವಿವಿಂಶತಿಯನ್ನು ಅನೇಕ ಸುಂದರ ಸ್ತ್ರೀಯರು ಸುತ್ತುವರೆದು ಕುಳಿತಿದ್ದಾರೆ! ವೀರಸೇನೆಗಳನ್ನು ಸಂಹರಿಸುತ್ತಿದ್ದ, ಸಮಿತಿ ಶೋಭನ ಶೂರ ದುಃಸಹನನ್ನು ಯಾರುತಾನೇ ಎದುರಿಸಿ ನಿಲ್ಲುತ್ತಿದ್ದರು? ಶರಗಳಿಂದ ಮುಚ್ಚಿಹೋಗಿರುವ ದುಃಸಹನ ಶರೀರವು ಹೂಬಿಟ್ಟಿರುವ ಕರ್ಣಿಕೆ ಗಿಡಗಳಿಂದ ತುಂಬಿಹೋಗಿರುವ ಪರ್ವತದಂತೆ ತೋರುತ್ತಿದೆ! ಶ್ವೇತಪರ್ವತವು ಅಗ್ನಿಯಿಂದ ಶೋಭಾಯಮಾನವಾಗಿ ಕಾಣುವಂತೆ ಪ್ರಾಣಹೋಗಿದ್ದರೂ ದುಃಸಹನು ಚಿನ್ನದ ಹಾರಗಳು ಮತ್ತು ಕವಚದಿಂದ ಹೊಳೆಯುತ್ತಿದ್ದಾನೆ!

ಮಾಧವ! ಬಲ ಮತ್ತು ಶೌರ್ಯಗಳಲ್ಲಿ ತನ್ನ ತಂದೆ ಮತ್ತು ನಿನಗಿಂತಲೂ ಒಂದೂವರೆಯಷ್ಟು ಗುಣವುಳ್ಳವನೆಂದು ಹೇಳುವ, ಸಿಂಹದ ಬಲವಿದ್ದ, ದರ್ಪನಾಗಿದ್ದ ಅಭಿಮನ್ಯುವು ನನ್ನ ಮಗನ ದುರಾಸದ ಸೇನೆಯನ್ನು ಭೇದಿಸಿ, ಅನ್ಯರ ಮೃತ್ಯುವಿಗೆ ಕಾರಣನಾಗಿ ತಾನೇ ಮೃತ್ಯುವಶನಾಗಿಹೋದನು! ಅರ್ಜುನನ ಮಗ ಅಮಿತ ತೇಜಸ್ವಿ ಅಭಿಮನ್ಯುವು ಹತನಾಗಿದ್ದರೂ ಅವನ ಪ್ರಭೆಯು ಕುಂದಿರದೇ ಇರುವುದನ್ನು ನಾನು ನೋಡುತ್ತಿದ್ದೇನೆ! ವಿರಾಟನ ಮಗಳು, ಗಾಂಡೀವಧನ್ವಿಯ ಸೊಸೆ ಅನಿಂದಿತೆ ಬಾಲೆಯು ವೀರ ಪತಿಯನ್ನು ನೋಡಿ ಆರ್ತಳಾಗಿ ಶೋಕಿಸುತ್ತಿದ್ದಾಳೆ! ಅವನ ಭಾರ್ಯೆ ವಿರಾಟಸುತೆಯು ತನ್ನ ಪತಿಯ ಬಳಿಸಾರಿ ಕೈಗಳಿಂದ ಅವನನ್ನು ನೇವರಿಸುತ್ತಿದ್ದಾಳೆ! ಅರಳಿದ ಕಮಲದಂತಿರುವ ಶಂಖದಂತೆ ದುಂಡಾಗಿರುವ ಕತ್ತುಳ್ಳ ಸೌಭದ್ರನ ಶಿರವನ್ನು ಕಮನೀಯ ರೂಪವತಿ ಯಶಸ್ವಿನೀ ಭಾಮಿನೀ ಉತ್ತರೆಯು ಆಘ್ರಾಣಿಸಿ ಆಲಂಗಿಸಿಕೊಂಡಿದ್ದಾಳೆ. ಹಿಂದೆ ಅವಳು ಮಧುಪಾನದಿಂದ ಉನ್ಮತ್ತಳಾಗಿ ಲಜ್ಜೆಯಿಂದ ಅಭಿಮನ್ಯುವನ್ನು ಆಲಂಗಿಸುತ್ತಿದ್ದಳು. ರಕ್ತದಿಂದ

ಅಂಟಿಕೊಂಡಿದ್ದ ಸುವರ್ಣಮಯ ಕವಚವನ್ನು ಬಿಚ್ಚಿ ಅವಳು ಅವನ ಶರೀರವನ್ನು ವೀಕ್ಷಿಸುತ್ತಿದ್ದಾಳೆ! ಅವನನ್ನು ನೋಡುತ್ತಾ ಆ ಬಾಲೆಯು ನಿನಗೆ ಹೇಳುತ್ತಿದ್ದಾಳೆ: "ಪುಂಡರೀಕಾಕ್ಷ! ನಿನ್ನಂತೆಯೇ ಇದ್ದ ಇವನು ಹತನಾಗಿ ಕೆಳಗುರುಳಿದ್ದಾನೆ! ಬಲ-ವೀರ್ಯ-ತೇಜಸ್ಸು-ರೂಪಗಳಲ್ಲಿ ನಿನ್ನಂತೆಯೇ ಇದ್ದ ಇವನು ಕೆಳಗುರುಳಿಸಲ್ಪಟ್ಟು ಭೂಮಿಯ ಮೇಲೆ ಮಲಗಿದ್ದಾನೆ! ರಂಕುಮೃಗದ ಚರ್ಮದ ಮೇಲೆ ಮಲಗುತ್ತಿದ್ದ ನಿನ್ನ ಈ ಅತ್ಯಂತ ಸುಕುಮಾರ ಶರೀರವು ಇಂದು ಭೂಮಿಯ ಮೇಲೆ ಬಿದ್ದು ಪರಿತಪಿಸುತ್ತಿಲ್ಲವೇ? ಮೌರ್ವಿಯನ್ನು ಸೆಳೆದು ಜಡ್ಡುಗಟ್ಟಿದ ಚರ್ಮಯುಕ್ತವಾದ, ಕಾಂಚನ ಅಂಗದಗಳನ್ನು ಧರಿಸಿರುವ, ಆನೆಯ ಸೊಂಡಿಲಿನಂತಿರುವ ಎರಡೂ ವಿಪುಲ ಭುಜಗಳನ್ನು ಚಾಚಿ ಮಲಗಿರುವೆಯಲ್ಲ! ಬಹಳ ಶ್ರಮದಿಂದ ಯುದ್ಧಮಾಡಿ ಆಯಾಸಕಳೆಯಲೆಂದು ಸುಖವಾಗಿ ನೀನು ಮಲಗಿರುವಂತಿದೆ! ಆದುದರಿಂದಲೇ ನೀನು ಆರ್ತಳಾಗಿ ವಿಲಪಿಸುತ್ತಿರುವ ನನ್ನೊಡನೆ ಮಾತನಾಡುತ್ತಿಲ್ಲ! ಆರ್ಯಳಾದ ಸುಭದ್ರೆಯನ್ನೂ, ದೇವೋಪಮರಾದ ನಿನ್ನ ಪಿತೃಗಳನ್ನೂ ಮತ್ತು ದುಃಖಾರ್ತಳಾಗಿರುವ ನನ್ನನ್ನೂ ತೊರೆದು ನೀನು

ಎಲ್ಲಿಗೆ ಹೋಗುವೆ?" ಅಭಿಮನ್ಯುವಿನ ತಲೆಯನ್ನು ತನ್ನ ತೊಡೆಯಮೇಲಿರಿಸಿಕೊಂಡು ಉತ್ತರೆಯು ಅವನ ಮುಖದ ಮೇಲೆ ರಕ್ತದಿಂದ ತೋಯ್ದು ಅಂಟಿಕೊಂಡಿರುವ ತಲೆಗೂದಲುಗಳನ್ನು ಮೆಲ್ಲಗೆ ಬಿಡಿಸುತ್ತ, ಅವನಿನ್ನೂ ಜೀವಂತನಾಗಿರುವನೆಂದೇ ಭಾವಿಸಿ, ಅವನನ್ನು ಪ್ರಶ್ನಿಸುತ್ತಿದ್ದಾಳೆ! "ವಾಸುದೇವನ ಅಳಿಯನೂ ಗಾಂಡೀವಧನ್ವಿಯ ಪುತ್ರನೂ ಆದ ನಿನ್ನನ್ನು ರಣರಂಗದ ಮಧ್ಯದಲ್ಲಿ ಆ ಮಹಾರಥರು ಹೇಗೆ ತಾನೇ ಸಂಹರಿಸಿದರು? ನನ್ನನ್ನು ಹೀಗೆ ವಿಧವೆಯನ್ನಾಗಿ ಮಾಡಿದ ಆ ಕ್ರೂರಕರ್ಮಿ ಕೃಪ-ಕರ್ಣ-ಜಯದ್ರಥ-ದ್ರೋಣ-ದ್ರೌಣಿಗಳಿಗೆ ಧಿಕ್ಕಾರ! ನನಗೆ ದುಃಖವನ್ನುಂಟುಮಾಡುವುದಕಾಗಿಯೇ ಬಾಲಕನಾದ ನೀನೊಬ್ಬನನ್ನೇ ಸುತ್ತುವರೆದಾಗ ಆ ಎಲ್ಲ ರಥರ್ಷಭರ ಮನಸ್ಸು ಹೇಗಿದ್ದೀತು? ಪಾಂಡವರು ಮತ್ತು ಪಾಂಚಾಲರು ನೋಡುತ್ತಿದ್ದಂತೆಯೇ, ರಕ್ಷಕರನ್ನು ಪಡೆದಿದ್ದ ನೀನು ಅನಾಥನಂತೆ, ಹೇಗೆ ನಿಧನ ಹೊಂದಿದೆ? ಅನೇಕರ ಆಕ್ರಮಣಕ್ಕೊಳಪಟ್ಟು ಅನಾಥನಂತೆ ನೀನು ಹತನಾದುದನ್ನು ನೋಡಿ ವೀರ ಪುರುಷಶಾರ್ದೂಲ ಪಾಂಡವ ಅರ್ಜುನನು

ಹೇಗೆ ಜೀವಿಸಿರುತ್ತಾನೆ? ನೀನಿಲ್ಲದೇ ವಿಪುಲ ರಾಜ್ಯಲಾಭವಾಗಲೀ ಶತ್ರುಗಳ ಪರಾಭವವಾಗಲೀ ಪಾರ್ಥರಿಗೆ ಸಂತೋಷವನ್ನು ಕೊಡುವುದಿಲ್ಲ! ಶಸ್ತ್ರಗಳಿಂದ ನೀನು ಜಯಿಸಿದ ಲೋಕಗಳನ್ನು ಬೇಗನೇ ನಾನು ಧರ್ಮ-ದಮಗಳಿಂದ ಪಡೆದುಕೊಂಡು ಬರುತ್ತೇನೆ. ಅಲ್ಲಿ ನನ್ನನ್ನು ಪ್ರತಿಪಾಲಿಸು! ಮರಣಕಾಲವು ಸನ್ನಿಹಿತವಾಗದೇ ಯಾರಿಗೂ ಮರಣಹೊಂದಲು ಸಾಧ್ಯವಿಲ್ಲ. ಏಕೆಂದರೆ ರಣದಲ್ಲಿ ಹತನಾಗಿರುವ ನಿನ್ನನ್ನು ನೋಡಿಯೂ ಕೂಡ ದುರ್ಭಾಗ್ಯಳಾದ ನಾನು ಜೀವಿಸಿರುವೆನಲ್ಲಾ! ಇಲ್ಲಿ ನನ್ನನ್ನು ಪ್ರೀತಿಪೂರ್ವಕವಾಗಿ ಮಾತನಾಡಿಸುತ್ತಿದ್ದಂತೆ ಪಿತೃಲೋಕದಲ್ಲಿ ಬೇರೆ ಯಾರನ್ನು ಸುಮಧುರವಾಗಿ ಸ್ಮಿತಪೂರ್ವಕವಾಗಿ ಮಾತನಾಡಿಸುವೆ? ನಿನ್ನ ಪರಮ ರೂಪದಿಂದ ಮತ್ತು ಮುಗುಳ್ನಗೆಯ ಮಾತುಗಳಿಂದ ನೀನು ನಿಜವಾಗಿಯೂ ಸ್ವರ್ಗದಲ್ಲಿ ಅಪ್ಸರೆಯರ ಮನಸ್ಸನ್ನು ಕಲಕಿಬಿಡುತ್ತೀಯೆ! ಪುಣ್ಯಕೃತರ ಲೋಕಗಳನ್ನೂ ಅಪ್ಸರೆಯರನ್ನೂ ಸೇರಿಕೊಂಡು ವಿಹರಿಸುತ್ತಿರುವಾಗ ನೀನು ಖಂಡಿತವಾಗಿಯೂ ನನ್ನ ಸುಕೃತಗಳನ್ನು ಸ್ಮರಿಸಿಕೊಳ್ಳುತ್ತೀಯೆ!

ನನ್ನೊಡನೆ ನಿನ್ನ ಸಹವಾಸವು ಕೇವಲ ಆರು ತಿಂಗಳುಗಳು ಮಾತ್ರವೇ ವಿಹಿತವಾಗಿತ್ತು! ಏಳನೆಯ ತಿಂಗಳಿನಲ್ಲಿಯೇ ನೀನು ನಿಧನ ಹೊಂದಿದೆ!" ಹೀಗೆ ಹೇಳಿಕೊಂಡು ವ್ಯರ್ಥಮನೋರಥಳಾಗಿ ಶೋಕಿಸುತ್ತಿರುವ ಉತ್ತರೆಯನ್ನು ಮತ್ಸ್ಯರಾಜಕುಲದ ಸ್ತ್ರೀಯರು ಹಿಂದಕ್ಕೆ ಎಳೆಯುತ್ತಿದ್ದಾರೆ! ಉತ್ತರೆಯನ್ನು ಹಿಂದಕ್ಕೆಳದ ಆ ಸ್ತ್ರೀಯರು ಸ್ವಯಂ ತಾವೇ ಅತ್ಯಂತ ಆರ್ತರಾಗಿದ್ದಾರೆ. ವಿರಾಟನು ಹತನಾದುದನ್ನು ನೋಡಿ ವಿಲಪಿಸುತ್ತಾ ಕೂಗಿಕೊಳ್ಳುತ್ತಿದ್ದಾರೆ! ದ್ರೋಣನ ಅಸ್ತ್ರ-ಶರಗಳಿಂದ ಗಾಯಗೊಂಡು ರಕ್ತದಿಂದ ತೋಯ್ದು ಮಲಗಿರುವ ವಿರಾಟನನ್ನು ಹದ್ದು-ನರಿ-ಕಾಗೆಗಳು ಕಿತ್ತು ತಿನ್ನುತ್ತಿವೆ! ವಿರಾಟನನ್ನು ಕುಕ್ಕುತ್ತಿರುವ ಪಕ್ಷಿಗಳನ್ನು ಕಪ್ಪುಕಣ್ಣಿನ ಆತುರ ವಿವಶ ಸ್ತ್ರೀಯರು ಓಡಿಸಲು ಪ್ರಯತ್ನಿಸಿದರೂ ಅಶಕ್ಯರಾಗಿದ್ದಾರೆ. ಬಿಸಿಲಿನಿಂದಲೂ ಆಯಾಸದಿಂದಲೂ ಪರಿತಪ್ತರಾಗಿರುವ ಸ್ತ್ರೀಯರು ವಿವರ್ಣರಾಗಿ ಅವರ ಸುಂದರ ಮುಖಗಳು ಬಾಡಿಹೋಗಿವೆ! ರಣರಂಗದ ಮಧ್ಯದಲ್ಲಿ ಹತರಾಗಿ ಮಲಗಿರುವ ಬಾಲಕರಾಗಿದ್ದ ಉತ್ತರ, ಅಭಿಮನ್ಯು, ಕಾಂಬೋಜದ ಸುದಕ್ಷಿಣ, ಮತ್ತು ಸುಂದರ ಲಕ್ಷ್ಮಣ ಇವರನ್ನು

ನೋಡು!

ಪಾರ್ಥನ ತೇಜಸ್ಸಿನಿಂದ ಯುದ್ಧದಲ್ಲಿ ಶಾಂತಗೊಂಡ ಪ್ರಜ್ವಲಿಸುತ್ತಿರುವ ಅಗ್ನಿಯಂತಿದ್ದ ಮಹಾರಥ ಮಹೇಷ್ವಾಸ ವೈಕರ್ತನನು ಇಲ್ಲಿ ಮಲಗಿದ್ದಾನೆ! ಅನೇಕ ಅತಿರಥರನ್ನು ಸಂಹರಿಸಿ ಅಂಗಾಂಗಗಳು ರಕ್ತದಿಂದ ತೋಯ್ದುಹೋಗಿ ಭೂಮಿಯ ಮೇಲೆ ಬಿದ್ದು ಮಲಗಿರುವ ವೈಕರ್ತನ ಕರ್ಣನನ್ನು ನೋಡು! ಅಸಹನಶೀಲನೂ, ದೀರ್ಘಕೋಪಿಯೂ ಆಗಿದ್ದ ಆ ಮಹೇಷ್ವಾಸ ಮಹಾರಥಿ ಶೂರನು ಗಾಂಡೀವಧನ್ವಿಯಿಂದ ರಣದಲ್ಲಿ ಹತನಾಗಿ ಮಲಗಿದ್ದಾನೆ! ಪಾಂಡವರಿಗೆ ಭಯಗೊಂಡ ನನ್ನ ಮಹಾರಥ ಪುತ್ರರು ಆನೆಗಳು ಸಲಗವನ್ನು ಮುಂದೆ ಬಿಟ್ಟುಕೊಂಡು ಹೋಗುವಂತೆ ಕರ್ಣನನ್ನು ಮುಂದಿಟ್ಟುಕೊಂಡು ಯುದ್ಧಮಾಡಿದರು. ಸಿಂಹವು ಇನ್ನೊಂದು ಸಿಂಹವನ್ನು ಹೇಗೋ ಹಾಗೆ ಮತ್ತು ಮದಿಸಿದ ಆನೆಯನ್ನು ಇನ್ನೊಂದು ಆನೆಯು ಹೇಗೋ ಹಾಗೆ ಸವ್ಯಸಾಚಿಯು ಸಮರದಲ್ಲಿ ಇವನನ್ನು ಕೆಳಗುರುಳಿಸಿದನು. ತಲೆಗೆದರಿದ ಅವನ ಪತ್ನಿಯರು ಗೋಳಾಡುತ್ತಾ ಯುದ್ಧದಲ್ಲಿ ಹತನಾಗಿರುವ ಆ ಶೂರನನ್ನು ಸುತ್ತುವರೆದು ಕುಳಿತಿದ್ದಾರೆ!

ಯಾರ ಪರಾಕ್ರಮದಿಂದ ಉದ್ವಿಗ್ನನಾಗಿ ಧರ್ಮರಾಜ ಯುಧಿಷ್ಠಿರನು ಹದಿಮೂರು ವರ್ಷಗಳು ಚಿಂತೆಯಿಂದ ನಿದ್ರೆಮಾಡಲಿಲ್ಲವೋ, ಇಂದ್ರನಂತೆ ಯಾರು ಶತ್ರುಗಳು ಎದುರಿಸಲು ಅಸಾಧ್ಯನಾಗಿದ್ದನೋ, ಯಾರು ಪ್ರಳಯಕಾಲದ ಅಗ್ನಿಯಂತೆ ತೇಜಸ್ವಿಯೂ ಹಿಮವಂತನಂತೆ ದೃಢನೂ ಆಗಿದ್ದನೋ, ಯಾವ ವೀರನನ್ನು ಧಾರ್ತರಾಷ್ಟ್ರರು ಶರಣುಹೊಂದಿದ್ದರೋ ಆ ಕರ್ಣನು ಭಿರುಗಾಳಿಸಿ ಸಿಲುಕಿದ ಮರದಂತೆ ಹತನಾಗಿ ನೆಲದಮೇಲೆ ಮಲಗಿದ್ದಾನೆ! ಕರ್ಣನ ಪತ್ನಿ ಮತ್ತು ವೃಷಸೇನನ ತಾಯಿಯು ಭೂಮಿಯ ಮೇಲೆ ಬಿದ್ದುಕೊಂಡು ಕಾರುಣ್ಯದಿಂದ ರೋದಿಸುತ್ತಿರುವುದನ್ನು ನೋಡು! “ನಿಶ್ಚಯವಾಗಿಯೂ ಆಚಾರ್ಯನ ಶಾಪವು ನಿನ್ನನ್ನೇ ಅನುಸರಿಸಿ ಬಂದು ನಿನ್ನ ರಥಚಕ್ರವು ಭೂಮಿಯಲ್ಲಿ ಹುಗಿದುಹೋಯಿತು! ಆಗ ಯುದ್ಧದಲ್ಲಿ ಶತ್ರುಗಳ ಮಧ್ಯೆ ಧನಂಜಯನು ಶರದಿಂದ ನಿನ್ನ ಶಿರವನ್ನು ಅಪಹರಿಸಿದನು!” ಅಯ್ಯೋ! ಅಲ್ಲಿ ನೋಡು! ಸುಷೇಣನ ತಾಯಿಯು ಹೀಗೆ ಹೇಳುತ್ತಿರುವಂತೆಯೇ ಸುವರ್ಣಮಯ ಕವಚಧಾರಿ, ಮಹಾಬಾಹು, ಮಹಾಸತ್ವ ಕರ್ಣನನ್ನು ನೋಡಿ ಗಟ್ಟಿಯಾಗಿ

ಅಳುತ್ತಾ ಅವಳು ಮೂರ್ಛಿತಳಾಗಿ ಕೆಳಗೆ ಬಿದ್ದಳು! ಯುದ್ಧಕ್ಕೆ ಧಿಕ್ಕಾರ! ಶರೀರಗಳನ್ನು ಭಕ್ಷಿಸುವ ಪ್ರಾಣಿಗಳು ಮಹಾತ್ಮ ಕರ್ಣನ ಶರೀರವನ್ನು ಆತುರವಾಗಿ ಭಕ್ಷಿಸುತ್ತಿದ್ದು ಸ್ವಲ್ಪ ಭಾಗ ಮಾತ್ರವೇ ಉಳಿದುಕೊಂಡಿದೆ! ಕೃಷ್ಣಪಕ್ಷದ ಚತುರ್ದಶಿಯ ಚಂದ್ರನಂತೆ ಬಹುಭಾಗ ನಶಿಸಿಹೋದ ಶರೀರದಿಂದ ಕೂಡಿದ ಕರ್ಣನನ್ನು ನೋಡಲು ನಮಗೆ ಸಾಧ್ಯವೇ ಆಗುತ್ತಿಲ್ಲ! ಭೂಮಿಯ ಮೇಲೆ ಬಿದ್ದು ಸುಷೇಣನ ತಾಯಿಯು ಪುನಃ ಎದ್ದು ಕರ್ಣನ ಮುಖವನ್ನು ಚುಂಬಿಸುತ್ತಾ ಪತ್ರವಧಿಯಿಂದ ಪರಿತಪ್ತಳಾಗಿ ರೋದಿಸುತ್ತಿದ್ದಾಳೆ!

ಭೀಮಸೇನನು ಕೆಳಗುರುಳಿಸಿದ ಅವಂತಿಯ ಶೂರನನ್ನು, ಅನೇಕ ಬಂಧುಗಳಿದ್ದರೂ ಬಂಧುಗಳ್ಯಾರೂ ಇಲ್ಲವೇನೋ ಎಂಬಂತೆ, ಹದ್ದು-ನರಿಗಳು ತಿನ್ನುತ್ತಿವೆ. ಮಧುಸೂದನ! ಶತ್ರುಗಳೊಡನೆ ಕದನವಾಡಿ ರಕ್ತದಿಂದ ತೋಯ್ದುಹೋಗಿ ವೀರಶಯ್ಯೆಯಲ್ಲಿ ಮಲಗಿರುವ ಅವನನ್ನು ನೋಡು! ಅವನನ್ನು ತೋಳಗಳೂ, ಹದ್ದುಗಳೂ, ಇತರ ಮಾಂಸಾಹಾರೀ ಪ್ರಾಣಿಗಳೂ ಎಳೆದು ತಿನ್ನುತ್ತಿವೆ. ಕಾಲದ ವೈಪರೀತ್ಯವನ್ನಾದರೂ ನೋಡು! ವೀರತನದಿಂದ

ಯುದ್ಧಮಾಡಿ ವೀರಶಯನದಲ್ಲಿ ಮಲಗಿರುವ ಅವಂತಿದೇಶದ ರಾಜನನ್ನು ಅವನ ಪತ್ನಿಯರು ರೋದಿಸುತ್ತಾ ಸುತ್ತುವರೆದಿದ್ದಾರೆ. ಪ್ರತೀಪನ ಮಗ ಮಹೇಷ್ವಾಸ ಮನಸ್ವಿ ಬಾಹ್ಲಿಕನು ಭಲ್ಲದಿಂದ ಹತನಾಗಿ ಸಿಂಹದಂತೆ ಮಲಗಿರುವುದನ್ನು ನೋಡು! ಹತನಾಗಿದ್ದರೂ ಇವನ ಮುಖದ ಬಣ್ಣವು ಹುಣ್ಣಿಮೆಯಲ್ಲಿ ಉದಯಿಸುತ್ತಿರುವ ಪೂರ್ಣಚಂದ್ರನಂತೆ ಶೋಭಿಸುತ್ತಿದೆ. ಪುತ್ರಶೋಕದಿಂದ ಸಂತಪ್ತನಾಗಿದ್ದ ಪಾಕಶಾಸನನ ಮಗನು ಪ್ರತಿಜ್ಞೆಯನ್ನು ಪಾಲಿಸುತ್ತಾ ಯುದ್ಧದಲ್ಲಿ ವೃದ್ಧಕ್ಷತ್ರನ ಮಗ ಜಯದ್ರಥನನ್ನು ಕೆಳಗುರುಳಿಸಿದನು. ಪ್ರತಿಜ್ಞೆಯನ್ನು ಸತ್ಯವನ್ನಾಗಿಸಲು ಮಹಾತ್ಮ ಅರ್ಜುನನು ಜಯದ್ರಥನನ್ನು ರಕ್ಷಿಸುತ್ತಿದ್ದ ಹನ್ನೊಂದು ಅಕ್ಷೌಹಿಣೀ ಸೇನೆಗಳನ್ನೂ ಗೆದ್ದು ಅವನನ್ನು ಸಂಹರಿಸಿದುದನ್ನು ನೋಡು! ಸಿಂಧುಸೌವೀರರ ರಾಜ, ದರ್ಪದಿಂದ ತುಂಬಿದ್ದ, ಮನಸ್ವಿ ಜಯದ್ರಥನನ್ನು ಹದ್ದು-ನರಿಗಳು ತಿನ್ನುತ್ತಿವೆ! ಅವನಲ್ಲಿಯೇ ಅನುರಕ್ತರಾದ ಭಾರ್ಯೆಯರು ಅವನನ್ನು ರಕ್ಷಿಸುತ್ತಿದ್ದರೂ ಅವು ಹತ್ತಿರದಲ್ಲಿಯೇ ಅವನ ದೇಹವನ್ನು ಬಹಳ ಆಳದಿಂದಲೇ

ಕಿತ್ತು ತಿನ್ನುತ್ತಿವೆ! ಆ ಮಹಾಭುಜನನ್ನು ರಕ್ಷಿಸುತ್ತಾ ಸಿಂಧು-ಸೌವೀರ-ಗಾಂಧಾರ-ಕಾಂಬೋಜ-ಯವನ ಸ್ತ್ರೀಯರು ಸುತ್ತುವರೆದು ಕುಳಿತಿದ್ದಾರೆ. ಕೇಕರಯೊಂದಿಗೆ ದ್ರೌಪದಿಯನ್ನು ಎತ್ತಿಕೊಂಡು ಓಡಿಹೋದಾಗಲೇ ಜಯದ್ರಥನನ್ನು ಪಾಂಡವರು ವಧಿಸಬೇಕಿತ್ತು! ಆಗ ದುಃಶಲೆಯನ್ನು ಗೌರವಿಸುತ್ತಾ ಜಯದ್ರಥನನ್ನು ಬಿಟ್ಟುಬಿಟ್ಟಿದ್ದರು. ಆದರೆ ಈಗ ಏಕೆ ಅವರು ಪುನಃ ಅವಳನ್ನು ಗೌರವಿಸಲಿಲ್ಲ? ನನ್ನ ಮಗಳು ಬಾಲಕಿಯು ತುಂಬಾ ದುಃಖಿತಳಾಗಿ ವಿಲಪಿಸುತ್ತಿದ್ದಾಳೆ. ಪಾಂಡವರನ್ನು ನಿಂದಿಸುತ್ತಾ ತನ್ನ ಎದೆಯನ್ನು ಬಡಿದುಕೊಳ್ಳುತ್ತಿದ್ದಾಳೆ. ನನ್ನ ಮಗಳು ಬಾಲಕಿಯು ವಿಧವೆಯಾಗಿ ಹೋದಳು. ನನ್ನ ಸೊಸೆಯಂದಿರು ಗಂಡಂದಿರನ್ನು ಕಳೆದುಕೊಂಡರು. ನನಗೆ ಇದಕ್ಕಿಂತಲೂ ಹೆಚ್ಚಿನ ದುಃಖವು ಬೇರೆ ಯಾವುದಿದೆ? ಅಯ್ಯೋ ಧಿಕ್ಕಾರವೇ! ನೋಡು! ದುಃಶಲೆಯು ತನ್ನ ಪತಿಯ ಶಿರವನ್ನು ಕಾಣದೇ ಶೋಕ-ಭಯಗಳನ್ನು ತೊರೆದಿರುವಳೋ ಎನ್ನುವಂತೆ ಅಲ್ಲಿಂದಿಲ್ಲಿಗೆ ಓಡಾಡುತ್ತಿದ್ದಾಳೆ! ಮಗ ಅಭಿಮನ್ಯುವನ್ನು ಅನುಸರಿಸಿಬಂದ ಎಲ್ಲ ಪಾಂಡವರನ್ನೂ ತಡೆದು, ವಿಶಾಲ

ಸೇನೆಯನ್ನು ಸಂಹರಿಸಿ ಜಯದ್ರಥನು ಸ್ವಯಂ ಮೃತ್ಯುವಶನಾದನು. ಮದಿಸಿದ ಮಾತಂಗದಂತಿರುವ, ಚಂದ್ರನಂಥಹ ಮುಖವಿದ್ದ ಆ ಪರಮದುರ್ಜಯ ವೀರನನ್ನು ಸ್ತ್ರೀಯರು ಸುತ್ತುವರೆದು ರೋದಿಸುತ್ತಿದ್ದಾರೆ!

ಅಯ್ಯಾ! ಸತ್ಯ ಧರ್ಮಜ್ಞ ಧರ್ಮರಾಜನಿಂದ ಯುದ್ಧದಲ್ಲಿ ಹತನಾಗಿ ಇಗೋ ಇಲ್ಲಿ ನಕುಲನ ಸೋದರಮಾವ ಸಾಕ್ಷಾತ್ ಶಲ್ಯನು ಮಲಗಿದ್ದಾನೆ! ಯಾವಾಗಲೂ ಎಲ್ಲಕಡೆ ನಿನ್ನೊಡನೆ ಸ್ಪರ್ಧಿಸುತ್ತಿದ್ದ ಮಹಾರಥ ಮದ್ರರಾಜನು ಹತನಾಗಿ ಇಗೋ ಮಲಗಿದ್ದಾನೆ! ಆಧಿರಥ ಕರ್ಣನ ರಥದ ಕುದುರೆಗಳ ಕಡಿವಾಣಗಳನ್ನು ಹಿಡಿಯುವಾಗ ಇವನು ಪಾಂಡುಪುತ್ರರಿಗೆ ಜಯವಾಗಲೆಂದು ಅವನ ತೇಜೋವಧೆಯನ್ನು ಮಾಡಿದನು. ಅಯ್ಯೋ ಧಿಕ್ಕಾರವೇ! ಪೂರ್ಣಚಂದ್ರನಂತೆ ಸುಂದರವಾಗಿರುವ ಶಲ್ಯನ ಮುಖವನ್ನು ನೋಡು! ಪದ್ಮದಳಗಳಂಥಹ ಕಣ್ಣುಗಳುಳ್ಳ ಅವನ ಮುಖದಲ್ಲಿ ಸ್ವಲ್ಪವಾದರೂ ಗಾಯದ ಚಿಹ್ನೆಗಳೇ ಇಲ್ಲ! ಪುಟಕ್ಕೆ ಹಾಕಿದ ಚಿನ್ನದಂತೆ ಕಾಂತಿಯುಕ್ತವಾದ ಇವನ ನಾಲಗೆಯು ಬಾಯಿಯಿಂದ ಹೊರಬಂದಿದೆ, ಮತ್ತು ಅದನ್ನು ಕಾಗೆಗಳು

ಕುಕ್ಕಿ ತಿನ್ನುತ್ತಿವೆ! ಯುಧಿಷ್ಠಿರನಿಂದ ಹತನಾದ ಸಮಿತಿಶೋಭನ ಶಲ್ಯನನ್ನು ಮದ್ರರಾಜ ಕುಲದ ಸ್ತ್ರೀಯರು ಸುತ್ತುವರೆದು ರೋದಿಸುತ್ತಿದ್ದಾರೆ. ಅತ್ಯಂತ ಸೂಕ್ಷ್ಮ ವಸ್ತ್ರಗಳನ್ನು ಧರಿಸಿದ ಕ್ಷತ್ರಿಯ ಸ್ತ್ರೀಯರು ಕ್ಷತ್ರಿಯರ್ಷಭ ನರರ್ಷಭ ಮದ್ರರಾಜನ ಬಳಿಯಲ್ಲಿ ಸಂಕಟದಿಂದ ಕೂಗಿಕೊಳ್ಳುತ್ತಿದ್ದಾರೆ. ಚೊಚ್ಚಲ ಮರಿಹಾಕಿದ ಹೆಣ್ಣಾನೆಗಳು ಕೆಸರಿನಲ್ಲಿ ಹುಗಿದುಹೋಗಿರುವ ಗಂಡಾನೆಯನ್ನು ಕಾತರದಿಂದ ನೋಡುವಂತೆ ರಣದಲ್ಲಿ ಬಿದ್ದಿರುವ ಶಲ್ಯನನ್ನು ನಾರಿಯರು ಸುತ್ತುವರೆದು ನೋಡುತ್ತಿದ್ದಾರೆ! ಶರಣ್ಯನೂ, ಶೂರನೂ, ರಥಸತ್ತಮನೂ ಆದ ಶಲ್ಯನನ್ನು ನೋಡು! ಅವನು ಶರಗಳಿಂದ ವಿಭಿನ್ನನಾಗಿ ವೀರಶಯ್ಯೆಯಲ್ಲಿ ಮಲಗಿದ್ದಾನೆ! ಇಗೋ ಇಲ್ಲಿ ಪರ್ವತದೇಶಗಳ ರಾಜ, ಆನೆಯ ಅಂಕುಶವನ್ನು ಹಿಡಿದಿರುವ ಶ್ರೇಷ್ಠ ಪ್ರತಾಪವಾನ್ ಭಗದತ್ತನು ಕೆಳಗುರುಳಿ ಭೂಮಿಯ ಮೇಲೆ ಮಲಗಿದ್ದಾನೆ! ಶ್ವಾಪದಗಳಿಂದ ಭಕ್ಷಿಸಲ್ಪಡುತ್ತಿರುವವನ ಅವನ ಶರೀರದಲ್ಲಿರುವ ಚಿನ್ನದ ಮಾಲೆಯು ಅವನ ತಲೆಗೂದಲುಗಳನ್ನು ಬೆಳಗಿಸುವಂತೆ ವಿರಾಜಿಸುತ್ತಿದೆ! ಬಲಿ ಮತ್ತು ಶಕ್ರರ ನಡುವೆ ಹೇಗೋ ಹಾಗೆ ಇವನ ಮತ್ತು ಪಾರ್ಥನ

ನಡುವೆ ಉಗ್ರವಾದ ಸುದಾರುಣ ಯುದ್ಧವು ನಡೆಯಿತಲ್ಲವೇ? ಈ ಮಹಾಬಾಹುವು ಪಾರ್ಥ ಧನಂಜಯನೊಡನೆ ಯುದ್ಧಮಾಡಿ, ಯಾರು ಗೆಲ್ಲುವರು ಎನ್ನುವ ಸಂಶಯವನ್ನುಂಟುಮಾಡಿ, ಕೊನೆಯಲ್ಲಿ ಕುಂತೀಪುತ್ರನಿಂದ ಕೆಳಗುರುಳಿಸಲ್ಪಟ್ಟನು! ಶೌರ್ಯ ಮತ್ತು ವೀರ್ಯಗಳಲ್ಲಿ ಯಾರ ಸಮನು ಲೋಕಗಳಲ್ಲಿಯೇ ಇಲ್ಲವೋ ಅಂತಹ ಭೀಷ್ಮನು ಭಯಂಕರ ಯುದ್ಧಮಾಡಿ ಇಲ್ಲಿ ಹತನಾಗಿ ಮಲಗಿದ್ದಾನೆ! ಯುಗಾಂತದಲ್ಲಿ ಅಂಬರದಿಂದ ಕಾಲನು ಕೆಳಗುರುಳಿಸಿದ ಸೂರ್ಯನಂತೆ ಮಲಗಿರುವ ಸೂರ್ಯವರ್ಚಸ ಶಾಂತನವನನ್ನು ನೋಡು! ನರಸೂರ್ಯನಂತಿದ್ದ ಭೀಷ್ಮನು ತನ್ನ ಶಸ್ತ್ರಗಳ ತಾಪದಿಂದ ರಣದಲ್ಲಿ ಶತ್ರುಗಳನ್ನು ಸುಟ್ಟು ಸೂರ್ಯನು ಅಸ್ತಂಗತನಾಗುವಂತೆ ಅಸ್ತಂಗತನಾಗಿದ್ದಾನೆ! ಧರ್ಮದಲ್ಲಿ ದೇವತೆಗಳಿಗೂ ಸಮನಾದ ವೀರನು ಶೂರರು ಬಯಸುವ ಶರತಲ್ಪದ ವೀರಶಯನದಲ್ಲಿ ಮಲಗಿರುವುದನ್ನು ನೋಡು! ಭಗವಾನ್ ಸ್ಕಂದನು ಜೊಂಬುಹುಲ್ಲಿನ ಮೇಲೆ ಮಲಗಿರುವಂತೆ ಕರ್ಣಿ-ನಾಲೀಕ-ನಾರಾಚಗಳನ್ನೇ ಹರಡಿ ಕಲ್ಪಿಸಿರುವ ಶ್ರೇಷ್ಠ ಹಾಸಿಗೆಯ ಮೇಲೆ ಮಲಗಿರುವ

ಭೀಷ್ಮನನ್ನು ನೋಡು! ಹತ್ತಿಯಿಂದ ತುಂಬಿದ್ದ ತಲೆದಿಂಬನ್ನು ಇಷ್ಟಪಡದ ಗಾಂಗೇಯನು ಗಾಂಡೀವಧನ್ವಿಯು ಮೂರು ಬಾಣಗಳಿಂದ ಇತ್ತ ಶ್ರೇಷ್ಠ ತಲೆದಿಂಬನ್ನು ಸ್ವೀಕರಿಸಿದನು. ತಂದೆಯನ್ನು ಪರಿಪಾಲಿಸಲು ಶಾಸ್ತ್ರೋಕ್ತವಾಗಿ ಬ್ರಹ್ಮಚಾರಿಯಾಗಿರುವ ಮಹಾಯಶಸ್ವಿ, ಯೋಧರಲ್ಲಿ ಅಪ್ರತಿಮನಾದ ಶಾಂತನವನು ಇಲ್ಲಿ ಮಲಗಿದ್ದಾನೆ! ಅಯ್ಯೋ! ಮನುಷ್ಯನಾಗಿದ್ದರೂ ಅಮರರಂತಿರುವ, ಪರಂಪರೆಗಳನ್ನು ನಿರ್ಣಯಿಸುವ, ಧರ್ಮಾತ್ಮಾ ಧರ್ಮಜ್ಞ ಭೀಷ್ಮನು ತನ್ನ ಪ್ರಾಣಗಳನ್ನು ಧಾರಣೆಮಾಡಿಕೊಂಡಿರುತ್ತಾನೆ. ಶತ್ರುಗಳಿಂದ ಹತನಾಗಿ ಶಾಂತನವ ಭೀಷ್ಮನು ಮಲಗಿದ್ದನೆಂದರೆ ಇನ್ನು ಮುಂದೆ ಯುದ್ಧಕುಶಲಿಯೂ, ಪರಾಕ್ರಮಿಯೂ, ವಿದ್ವಾಂಸನೂ ಇಲ್ಲವೆಂದಾಯಿತು! ಪಾಂಡವರು ಕೇಳಲು ಈ ಶೂರ ಸತ್ಯವಾದಿ ಧರ್ಮಜ್ಞನು ತಾನೇ ಯುದ್ಧದಲ್ಲಿ ಅವನ ಮೃತ್ಯುವು ಹೇಗಾಗಬಹುದೆಂದು ಅವರಿಗೆ ಹೇಳಿದನು. ಕುರುವಂಶವನ್ನು ನಷ್ಟವಾಗುವುದರಿಂದ ಯಾರು ರಕ್ಷಿಸುತ್ತಿದ್ದನೋ ಆ ಮಹಾಬುದ್ಧಿಯೇ ಕುರುಗಳೊಡನೆ ಪರಾಭವವನ್ನು ಹೊಂದಿದನು. ದೇವತುಲ್ಯನಾದ ನರರ್ಷಭ

ದೇವವ್ರತನು ಸ್ವರ್ಗಕ್ಕೆ ಹೋದನಂತರ ಧರ್ಮದ ವಿಷಯದಲ್ಲಿ ಕುರುಗಳು ಬೇರೆ ಯಾರನ್ನು ಪ್ರಶ್ನಿಸುತ್ತಾರೆ? ಅರ್ಜುನನ ಶಿಕ್ಷಕನೂ, ಸಾತ್ಯಕಿಯ ಆಚಾರ್ಯನೂ, ಕುರುಗಳ ಗುರುಸತ್ತಮನೂ ಆದ ದ್ರೋಣನು ಕೆಳಗುರುಳಿದುದನ್ನು ನೋಡು! ತ್ರಿದಶೇಶ್ವರ ಇಂದ್ರನಂತೆ ಅಥವಾ ಭಾರ್ಗವ ಪರಶುರಾಮನಂತೆ ಮಹಾವೀರ್ಯ ದ್ರೋಣನೂ ಕೂಡ ನಾಲ್ಕು ವಿಧದ ಅಸ್ತ್ರವಿದ್ಯೆಯನ್ನು ತಿಳಿದವನಾಗಿದ್ದನು. ಯಾರ ಪ್ರಸಾದದಿಂದ ಪಾಂಡವ ಬೀಭತ್ಸುವು ದುಷ್ಕರ ಕರ್ಮಗಳನ್ನೆಸಗಿದನೋ ಆ ದ್ರೋಣನೇ ಇಂದು ಹತನಾಗಿ ಮಲಗಿದ್ದಾನೆ! ಅವನ ಅಸ್ತ್ರಗಳ್ಯಾವುವೂ ಅವನನ್ನು ರಕ್ಷಿಸಲಿಲ್ಲ! ಯಾರನ್ನು ಮುಂದಿಟ್ಟುಕೊಂಡು ಕೌರವರು ಪಾಂಡವರನ್ನು ಯುದ್ಧಕ್ಕೆ ಆಹ್ವಾನಿಸಿದ್ದರೋ ಆ ಶಸ್ತ್ರಧಾರಿಗಳಲ್ಲಿ ಶ್ರೇಷ್ಠ ದ್ರೋಣನೇ ಶಸ್ತ್ರಗಳಿಂದ ಗಾಯಗೊಂಡಿ ಮಲಗಿದ್ದಾನೆ! ಅಗ್ನಿಯಂತೆ ಸಂಚರಿಸಿ ಸೇನೆಗಳನ್ನು ದಹಿಸುತ್ತಿದ್ದ ದ್ರೋಣನೇ ಆರಿಹೋದ ಅಗ್ನಿಯಂತೆ ಹತನಾಗಿ ಭೂಮಿಯ ಮೇಲೆ ಮಲಗಿದ್ದಾನೆ! ದ್ರೋಣನು ಹತನಾಗಿದ್ದರೂ ಅವನು ಧನುಸ್ಸನ್ನು

ಹಿಡಿದಿರುವುದನ್ನು ಮತ್ತು ಕೈಚೀಲವನ್ನು ನೋಡಿದರೆ ಇನ್ನೂ ಜೀವಿತನಾಗಿರುವನೋ ಎನ್ನುವಂತೆ ತೋರುತ್ತಿದ್ದಾನೆ! ವೇದಗಳು ಪ್ರಜಾಪತಿಯನ್ನು ಹೇಗೆ ಬಿಟ್ಟಿರಲಾರವೋ ಹಾಗೆ ನಾಲ್ಕೂ ವೇದಗಳೂ, ಸರ್ವ ಅಸ್ತ್ರಗಳೂ ಇವನನ್ನು ಬಿಟ್ಟಿರಲಿಲ್ಲ! ಶಿಷ್ಯರಿಂದ ಅರ್ಚಿತಗೊಳ್ಳುತ್ತಿದ್ದ, ಬಂದಿಗಳು ವಂದಿಸುತ್ತಿದ್ದ, ವಂದನಾರ್ಹವಾದ ಅವನ ಶುಭ ಪಾದಗಳನ್ನು ಇಂದು ಗುಳ್ಳೇ ನರಿಗಳು ಎಳೆದಾಡುತ್ತಿವೆ! ದ್ರುಪದಪುತ್ರನಿಂದ ಹತನಾದ ದ್ರೋಣನ ಬಳಿ ದುಃಖದಿಂದ ಹತಚೇತನಳಾದ ಕೃಪಿಯು ದೀನಳಾಗಿ ಕುಳಿತಿದ್ದಾಳೆ! ಹತನಾಗಿರುವ ಶಸ್ತ್ರಧಾರಿಗಳಲ್ಲಿ ಶ್ರೇಷ್ಠ ದ್ರೋಣನ ಬಳಿ ಕೂದಲು ಕೆದರಿಕೊಂಡು ಮುಖ ಕೆಳಗೆಮಾಡಿಕೊಂಡು ಆರ್ತಳಾಗಿ ರೋದಿಸುತ್ತಿರುವ ಅವಳನ್ನು ನೋಡು! ಧೃಷ್ಟದ್ಯುಮ್ನನ ಬಾಣಗಳಿಂದ ತುಂಡಾಗಿರುವ ಕವಚವನ್ನು ಧರಿಸಿರುವ ದ್ರೋಣನ ಬಳಿ ರಣರಂಗದಲ್ಲಿ ಜಟಾಧಾರಿಯಾಗಿರುವ ಬ್ರಹ್ಮಚಾರಿಣೀ ಕೃಪಿಯು ಕುಳಿತಿದ್ದಾಳೆ! ದೀನಳಾಗಿರುವ, ಆತುರಳಾಗಿರುವ ಸುಕುಮಾರೀ ಯಶಸ್ವಿನೀ ಕೃಪಿಯು ಸಮರದಲ್ಲಿ

ಹತನಾಗಿರುವ ಪತಿಯ ಪ್ರೇತಕಾರ್ಯಗಳನ್ನು ಮಾಡಲು ಪ್ರಯತ್ನಿಸುತ್ತಿದ್ದಾಳೆ. ವಿಧಿವತ್ತಾಗಿ ಅಗ್ನಿಯನ್ನು ಆಹ್ವಾನಿಸಿ, ವಿಧಿವತ್ತಾಗಿ ಸುತ್ತಲೂ ಚಿತೆಯನ್ನು ಹೊತ್ತಿಸಿ, ದ್ರೋಣನನ್ನು ಇಟ್ಟು ಸಾಮಗರು ಮೂರು ಸಾಮಗಳನ್ನೂ ಹಾಡುತ್ತಿದ್ದಾರೆ. ಜಟಾಧಾರೀ ಬ್ರಹ್ಮಚಾರೀ ದ್ರೋಣಶಿಷ್ಯರು ಧನುಸ್ಸುಗಳನ್ನೂ, ಶಕ್ತಿಗಳನ್ನೂ, ರಥನೀಡುಗಳನ್ನೂ ಚಿತೆಯ ಮೇಲೆ ಇಡುತ್ತಿದ್ದಾರೆ. ಅನ್ಯ ವಿವಿಧ ಶಸ್ತ್ರಗಳನ್ನೂ ಇಟ್ಟು ಭೂರಿತೇಜಸ ದ್ರೋಣನನ್ನು ದಹಿಸುತ್ತಾ ಅವನನ್ನು ಪ್ರಶಂಸಿಸುತ್ತಿದ್ದಾರೆ ಮತ್ತು ರೋದಿಸುತ್ತಿದ್ದಾರೆ ಕೂಡ! ಇತರರು ಕಡೆಯಲ್ಲಿ ಹೇಳಬೇಕಾದ ಮೂರು ಸಾಮಗಳನ್ನೂ ಹಾಡುತ್ತಿದ್ದಾರೆ. ಚಿತೆಯ ಅಗ್ನಿಯಲ್ಲಿ ದ್ರೋಣನನ್ನು ಹವಿಸ್ಸನ್ನಾಗಿ ಹೋಮಮಾಡಿ, ಕೃಪಿಯನ್ನು ಮುಂದಿಟ್ಟುಕೊಂಡು ಚಿತೆಯನ್ನು ಎಡಭಾಗಕ್ಕೆ ಬಿಟ್ಟುಕೊಂಡು ಪರದಕ್ಷಿಣವಾಗಿ ಸುತ್ತಿಬಂದು ಬ್ರಾಹ್ಮಣ ಶೇಷ್ಠ ದ್ರೋಣ ಶಿಶ್ಃಯರು ಗಂಗಾನದಿಯ ಕಡೆ ಹೋಗುತ್ತಿದ್ದಾರೆ!

ಯುಯುಧಾನನಿಂದ ಕೆಳಗುರುಳಿಸಲ್ಪಟ್ಟ ಸೋಮದತ್ತನ ಮಗ ಭೂರಿಶ್ರವನನ್ನು ನೋಡು! ಮಾಧವ! ಅನೇಕ ಪಕ್ಷಿಗಳು

ಅವನ ಹತ್ತಿರದಲ್ಲಿಯೇ ಕುಳಿತು ಅವನನ್ನು ಕುಕ್ಕುತ್ತಿವೆ! ಪುತ್ರಶೋಕದಿಂದ ಸಂತಪ್ತನಾಗಿರುವ ಸೋಮದತ್ತನು ಮಹೇಷ್ವಾಸ ಯುಯುಧಾನನನ್ನು ನಿಂದಿಸುತ್ತಿರುವಂತೆ ಕಾಣುತ್ತಿದ್ದಾನೆ. ಶೋಕದಲ್ಲಿ ಮುಳುಗಿಹೋಗಿರುವ ಭೂರಿಶ್ರವನ ಅನಿಂದಿತೆ ತಾಯಿಯು ಪತಿ ಸೋಮದತ್ತನನ್ನು ಹೀಗೆಂದು ಸಮಾಧಾನಗೊಳಿಸುತ್ತಿದ್ದಾಳೆ: “ಮಹಾರಾಜ! ಸೌಭಾಗ್ಯವಶಾತ್ ನೀನು ಈ ದಾರುಣ ಭರತರ ನಾಶವನ್ನೂ, ಕುರುಗಳ ಆಕ್ರಂದನಗಳನ್ನೂ, ಘೋರ ಯುಗಾಂತವನ್ನೂ ನೋಡುತ್ತಿಲ್ಲ! ಸೌಭಾಗ್ಯವಶಾತ್ ನೀನು ಯೂಪಧ್ವಜ, ಸಾವಿರಾರು ಚಿನ್ನದ ನಾಣ್ಯಗಳನ್ನು ದಕ್ಷಿಣೆಯನ್ನಾಗಿ ಕೊಡುತ್ತಿದ್ದ, ಅನೇಕ ಯಾಗಗಳನ್ನು ಮಾಡಿದ ನಿನ್ನ ಆ ವೀರ ಪುತ್ರ ಭೂರಿಶ್ರವನು ಹತನಾದುದನ್ನು ನೋಡುತ್ತಿಲ್ಲ! ಒಳ್ಳೆಯದಾಯಿತು ಕಡಲ ಹದ್ದುಗಳಂತೆ ಘೋರವಾಗಿ ಬಹಳವಾಗಿ ವಿಲಪಿಸುತ್ತಿರುವ ನಿನ್ನ ಸೊಸೆಯಂದಿರ ಆಕ್ರಂದನವನ್ನು ನೀನು ಕೇಳುತ್ತಿಲ್ಲ! ಪತಿಗಳನ್ನು ಕಳೆದುಕೊಂಡು ಹತೇಶ್ವರರಾಗಿರುವ ನಿನ್ನ ಸೊಸೆಯಂದಿರು ಒಂದು ವಸ್ತ್ರವನ್ನೋ ಅಥವಾ ಅರ್ಧ ವಸ್ತ್ರವನ್ನೋ

ಉಟ್ಟುಕೊಂಡು ಕಪ್ಪು ಕೂದಲುಗಳನ್ನು ಕೆದರಿಕೊಂಡು ಸುತ್ತುತ್ತಿದ್ದಾರೆ. ಅರ್ಜುನನಿಂದ ಬಾಹುಗಳು ಕತ್ತರಿಸಲ್ಪಟ್ಟು ಬಿದ್ದಿರುವ ನರವ್ಯಾಘ್ರನನ್ನು ಮಾಂಸಾಹಾರಿ ಪ್ರಾಣಿಗಳು ತಿನ್ನುತ್ತಿರುವುದನ್ನು ನೀನು ನೋಡುತ್ತಿಲ್ಲವೆನ್ನುವುದು ಅದೃಷ್ಟವೇ ಸರಿ! ಒಳ್ಳೆಯದಾಯಿತು ನೀನು ಯುದ್ಧದಲ್ಲಿ ಶಲ ಮತ್ತು ಭೂರಿಶ್ರವರು ಹತರಾದುದನ್ನಾಗಲೀ ಮತ್ತು ವಿಧವೆಯರಾದ ಸೊಸೆಯಂದಿರೆಲ್ಲರನ್ನೂ ಇಂದು ನೋಡುತ್ತಿಲ್ಲ. ಒಳ್ಳೆಯದಾಯಿತು ನೀನು ಮಹಾತ್ಮ ಸೌಮದತ್ತಿಯ ರಥಯೂಪದ ಮೇಲೆ ಹಾರಾಡುತ್ತಿದ್ದ ಕಾಂಚನ ಚತ್ರವು ತುಂಡಾಗಿ ಕೆಳಗಿಬಿದ್ದುದನ್ನು ನೀನು ನೋಡುತ್ತಿಲ್ಲ. ಸಾತ್ಯಕಿಯಿಂದ ಹತನಾದ ಬೂರಿಶ್ರವನ ಕಪ್ಪುಕಣ್ಣಿನ ಭಾರ್ಯೆಯರು ಅವನ ಮೃತದೇಹವನ್ನು ಸುತ್ತುವರೆದು ಅಳುತ್ತಿದ್ದಾರೆ!" ಪತಿಶೋಕದಿಂದ ಬಹಳವಾಗಿ ಸೋತುಹೋಗಿರುವ ಇವರು ವಿಲಪಿಸುತ್ತಾ ನೆಲದ ಮೇಲೆ ಬಿದ್ದಿದ್ದಾರೆ. ಯಾಗಗಳನ್ನು ಮಾಡಿದ್ದ ಅವನು ಪ್ರಮತ್ತನಾಗಿದ್ದಾಗ ಆ ಶೂರನ ಬಾಹುವನ್ನು ಕತ್ತರಿಸುವಂಥಹ ಬೀಭತ್ಸಕ್ಕಿಂತಲೂ ಅತಿ ಬೀಭತ್ಸವಾಗಿರುವ ಕೃತ್ಯವನ್ನು ಹೇಗೆ

ಮಾಡಿದರು? ಅದಕ್ಕಿಂತಲೂ ಹೆಚ್ಚಿನ ಪಾಪಕರ್ಮವನ್ನು ಸಾತ್ಯಕಿಯು ಪ್ರಾಯೋಪವಿಷ್ಟನಾದ ಆ ಸಂಶಿತಾತ್ಮನ ಶಿರವನ್ನು ಅಪಹರಿಸಿ ಮಾಡಿದನು! "ಯೂಪಧ್ವಜನೇ! ಇಬ್ಬರು ಅಧರ್ಮಪೂರ್ವಕವಾಗಿ ಒಬ್ಬನನ್ನೇ ಕೊಂದುದರಿಂದ ಧಾರ್ಮಿಕನಾದ ನೀನು ಹತನಾಗಿ ಮಲಗಿರುವೆ!" ಎಂದು ಅವನ ಸ್ತ್ರೀಯರು ದುಃಖದಿಂದ ಕೂಗಿಕೊಳ್ಳುತ್ತಿದ್ದಾರೆ. ಮುಷ್ಟಿಮಾತ್ರ ಪರಿಮಿತವಾಗಿರುವ ಸೊಂಟವುಳ್ಳ ಯೂಪಧ್ವಜನ ಪತ್ನಿಯು ಗಂಡನ ಭುಜವನ್ನು ತೊಡೆಯ ಮೇಲಿಟ್ಟುಕೊಂಡು ದೀನಳಾಗಿ ವಿಲಪಿಸುತ್ತಿದ್ದಾಳೆ. "ಈ ಹಸ್ತವು ನಮ್ಮ ಒಡ್ಯಾಣಗಳನ್ನು ಬಿಚ್ಚುತ್ತಿತ್ತು. ಪುಷ್ಟ ಮೊಲೆಗಳನ್ನು ಹಿಸುಕುತ್ತಿತ್ತು. ಹೊಕ್ಕಳು-ತೊಡೆ-ಕಟಿಪ್ರದೇಶಗಳನ್ನು ಮುಟ್ಟುತ್ತಿತ್ತು. ಸೊಂಟದಲ್ಲಿರುವ ಸೀರೆಯ ಗಂಟನ್ನು ಬಿಚ್ಚುತ್ತಿತ್ತು! ಅಂತಹ ಕೈಯನ್ನು ವಾಸುದೇವನ ಸಾನ್ನಿಧ್ಯದಲ್ಲಿ ಅಕ್ಲಿಷ್ಟಕರ್ಮಿ ಪಾರ್ಥನು ಸಮರದಲ್ಲಿ ಬೇರೆಯವರೊಡನೆ ಯುದ್ಧದಲ್ಲಿ ಮಗ್ನನಾಗಿರುವಾಗ ಕತ್ತರಿಸಿಬಿಟ್ಟನಲ್ಲ! ಸಂಸದಿಗಳಲ್ಲಿ ಮಾತನಾಡುವಾಗ ಸ್ವಯಂ ನೀನಾಗಲೀ ಕಿರೀಟಿಯಾಗಲೀ ಅರ್ಜುನನ ಈ

ಮಹಾಕಾರ್ಯದ ಕುರಿತು ಹೇಗೆ ಹೇಳುವಿರಿ?” ಹೀಗೆ ನಿಂದಿಸುತ್ತಾ ಆ ವರಾಂಗನೆಯು ಸುಮ್ಮನಾದಳು. ಅತ್ತೆಯು ಸೊಸೆಗಾಗಿ ಶೋಕಪಡುವಂತೆ ಅವಳ ಸವತಿಯರೂ ಅವಳಿಗಾಗಿ ಶೋಕಿಸುತ್ತಿದ್ದಾರೆ. ಸೋದರಳಿಯ ಸಹದೇವನಿಂದ ಸೋದರ ಮಾವ ಗಾಂಧಾರರಾಜ, ಬಲವಾನ್, ಸತ್ಯವಿಕ್ರಮ ಶಕುನಿಯು ಹತನಾಗಿದ್ದಾನೆ. ಹೇಮದಂಡವುಳ್ಳ ವ್ಯಜನಗಳಿಂದ ಹಿಂದೆ ಯಾರಿಗೆ ಗಾಳಿಬೀಸಲಾಗುತ್ತಿತ್ತೋ ಅವನಿಗೆ ಈಗ ರಣಭೂಮಿಯಲ್ಲಿ ಮಲಗಿರುವಾಗ ಪಕ್ಷಿಗಳೇ ತಮ್ಮ ರೆಕ್ಕೆಗಳಿಂದ ಗಾಳಿ ಬೀಸುತ್ತಿವೆ! ನೂರಾರು ಸಹಸ್ರಾರು ರೂಪಗಳನ್ನು ಮಾಡುತ್ತಿದ್ದ ಆ ಮಾಯಾವಿಯು ಮಾಯೆಯಿಂದಲೇ ಪಾಂಡವನ ತೇಜಸ್ಸಿನಿಂದ ಸುಟ್ಟು ಭಸ್ಮವಾಗಿದ್ದಾನೆ! ಮೋಸಗಾರನಾಗಿ ಮಾಯೆಯಿಂದ ಸಭೆಯಲ್ಲಿ ಯುಧಿಷ್ಠಿರನ ವಿಪುಲ ರಾಜ್ಯವನ್ನು ಗೆದ್ದ ಅವನೇ ಈಗ ಜೀವವನ್ನು ಪಣವನ್ನಾಗಿಟ್ಟು ಸೋತುಹೋಗಿದ್ದಾನೆ! ನನ್ನ ಪುತ್ರರ ವಿನಾಶಕ್ಕಾಗಿಯೇ ದ್ಯೂತವನ್ನು ಕಲಿತಿದ್ದ ಶಕುನಿಯನ್ನು ಪಕ್ಷಿಗಳು ಮುತ್ತಿಕೊಂಡಿವೆ! ನನ್ನ ಮಕ್ಕಳ ಮತ್ತು ತನ್ನವರೊಂದಿಗೆ ತನ್ನ

ವಧೆಗೋಸ್ಕರವಾಗಿಯೇ ಇವನು ನನ್ನ ಮಕ್ಕಳು ಪಾಂಡವರೊಂದಿಗೆ ಮಹಾವೈರವನ್ನು ಕಟ್ಟಿಕೊಳ್ಳುವಂತೆ ಮಾಡಿದನು. ಶಸ್ತ್ರಗಳಿಂದ ನನ್ನ ಪುತ್ರರು ಉತ್ತಮ ಲೋಕಗಳನ್ನು ಪಡೆದಿರುವಂತೆ ಈ ದುರ್ಬುದ್ಧಿಯೂ ಕೂಡ ಶಸ್ತ್ರಗಳಿಂದಲೇ ನಿಧನಹೊಂದಿ ಉತ್ತಮ ಲೋಕಗಳನ್ನು ಪಡೆದಿದ್ದಾನೆ. ಸುಳ್ಳನಾಗಿರುವ ಇವನು ಅಲ್ಲಿಕೂಡ ಸತ್ಯಪ್ರಜ್ಞರಾಗಿರುವ ನನ್ನ ಮಕ್ಕಳು ಮತ್ತು ಅವರ ಸಹೋದರ ನಡುವೆ ವಿರೋಧವನ್ನುಂಟುಮಾಡುವನೋ ಹೇಗೆ?

ಮಾಧವ! ಕಾಂಬೋಜದ ಮೆತ್ತನೆಯ ಶಯನದಲ್ಲಿ ಮಲಗಲು ಯೋಗ್ಯನಾದ ಋಷಭಸ್ಕಂಧ ದುರ್ಧರ್ಷ ಕಾಂಬೋಜನು ಹತನಾಗಿ ಕೆಸರಿನಲ್ಲಿ ಮಲಗಿರುವುದನ್ನು ನೋಡು! ಆ ಕೃಪಣನ ಚಂದನಲೇಪಿತ ಬಾಹುಗಳು ಗಾಯಗೊಂಡು ರಕ್ತದಿಂದ ತೋಯ್ದುಹೋಗಿರುವುದನ್ನು ನೋಡಿ ಅವನ ಭಾರ್ಯೆಯು ದುಃಖಿತಳಾಗಿ ವಿಲಪಿಸುತ್ತಿದ್ದಾಳೆ. "ಶುಭ ಅಂಗೈ-ಬೆರಳುಗಳಿಂದ ಕೂಡಿದ್ದ ಪರಿಘದಂತಿದ್ದ ನಿನ್ನ ಬಾಹುಗಳ ಮಧ್ಯದಲ್ಲಿ ಸೇರಿಕೊಂಡು ಹಿಂದೆ ರಮಿಸುತ್ತಿದ್ದ ನನ್ನನ್ನು ಅನುರಾಗವು ಬಿಟ್ಟುಹೋಗಿರಲಿಲ್ಲ. ನೀನಿಲ್ಲದೇ ನಾನು

ಯಾವ ಮಾರ್ಗದಲ್ಲಿ ಹೋಗುವೆನೋ!" ಎಂಬುದಾಗಿ ಬಂಧುಗಳಿಲ್ಲದ ಅನಾಥಳಂತೆ ಅವಳು ಮಧುರಸ್ವರದಲ್ಲಿ ರೋದಿಸುತ್ತಿದ್ದಾಳೆ. ಬಿಸಿಲಿನಲ್ಲಿ ಬಾಡಿಹೋಗಿರುವ ವಿವಿಧ ಹೂವಿನ ಮಾಲೆಗಳಂತೆ ಬಾಡಿಹೋಗಿದ್ದರೂ ಈ ನಾರಿಯರ ಸೌಂದರ್ಯವು ಅವರ ದೇಹಗಳನ್ನು ಬಿಟ್ಟುಹೋಗಿಲ್ಲ. ಇಲ್ಲಿಯೇ ಹತ್ತಿರದಲ್ಲಿ ಬೆಳಗುತ್ತಿರುವ ಅಂಗದಗಳನ್ನು ಕಟ್ಟಿಕೊಂಡಿರುವ ಆ ಮಹಾಭುಜ ಶೂಲ ಕಾಲಿಂಗನು ಮಲಗಿರುವುದನ್ನು ನೋಡು. ಅಲ್ಲಿ ಮಾಗಧ ಸ್ತ್ರೀಯರು ಮಾಗಧಾಧಿಪನನ್ನು ಸುತ್ತುವರೆದು ರೋದಿಸುತ್ತಿರುವುದನ್ನು ನೋಡು! ಆ ವಿಶಾಲನೇತ್ರೆಯರು ಕೇಳಿದವರ ಮನಸ್ಸನ್ನು ಅಪಹರಿಸುವ ಸುಸ್ವರದಲ್ಲಿ ಕೂಗಿಕೊಳ್ಳುತ್ತಿರುವುದನ್ನು ಕೇಳಿ ನನ್ನ ಮನಸ್ಸು ಅತೀವವಾಗಿ ಮೋಹಗೊಳ್ಳುತ್ತಿದೆ. ಸರ್ವಾಭರಣಗಳನ್ನೂ ಕಿತ್ತು ಹರಡಿ ಸುಂದರ ಹಚ್ಚಡವನ್ನು ಹಾಸಿದ ಹಾಸಿಗೆಯ ಮೇಲೆ ಮಲಗಲು ಯೋಗ್ಯರಾಗಿದ್ದ ಈ ಮಾಗಧ ನಾರಿಯರು ಶೋಕಕರ್ಶಿತರಾಗಿ ರೋದಿಸುತ್ತಾ ನೆಲದ ಮೇಲೆ ಮಲಗಿದ್ದಾರೆ! ಕೋಸಲರ ಅಧಿಪತಿ ರಾಜಪುತ್ರ ಬೃಹದ್ಬಲನನ್ನು ಅವನ ಪತ್ನಿಯರು ಸುತ್ತುವರೆದು

ಪ್ರತ್ಯೇಕ-ಪ್ರತ್ಯೇಕವಾಗಿ ರೋದಿಸುತ್ತಿದ್ದಾರೆ. ಅಭಿಮನ್ಯುವಿನ ಬಲದಿಂದ ಪ್ರಯೋಗಿಸಲ್ಪಟ್ಟು ಅವನ ಶರೀರವನ್ನು ಹೊಕ್ಕಿರುವ ಬಾಣಗಳನ್ನು ಕಷ್ಟದಿಂದ ಕಿತ್ತು ತೆಗೆಯುತ್ತಾ ಅವರು ಪುನಃ ಪುನಃ ಮೂರ್ಛಿತರಾಗುತ್ತಿದ್ದಾರೆ. ಪರಿಶ್ರಮದಿಂದಾಗಿ ಸರ್ವಸುಂದರಿಯರಾದ ಅವರ ಮುಖಗಳು ಬಿಸಿಲಿನಲ್ಲಿ ಬಾಡಿದದ್ ಕಮಲಗಳಂತೆ ಕಾಣುತ್ತಿವೆ. ಸುಂದರ ಅಂಗದಗಳನ್ನು ಧರಿಸಿದ್ದ ಐವರು ಶೂರ ಕೇಕಯ ಸಹೋದರರೆಲ್ಲರೂ ದ್ರೋಣನನ್ನು ಎದುರಿಸಿ ದ್ರೋಣನಿಂದ ಹತರಾಗಿ ಮಲಗಿದ್ದಾರೆ. ಅಪ್ಪಟ ಚಿನ್ನದ ಕವಚಗಳನ್ನು ಧರಿಸಿ ತಾಮ್ರಧ್ವಜ ಸಮೂಹಗಳನ್ನೇ ಹೊಂದಿದ್ದ ಕೇಕಯರು ಪ್ರಜ್ವಲಿಸುವ ಅಗ್ನಿಗಳೋ ಎಂಬಂತೆ ತಮ್ಮ ಕಾಂತಿಯಿಂದ ಭೂಮಿಯನ್ನೇ ಬೆಳಗಿಸುತ್ತಿದ್ದಾರೆ! ಅರಣ್ಯದಲ್ಲಿ ಮಹಾಗಜವೊಂದು ಸಿಂಹದಿಂದ ಹತವಾದಂತೆ ರಣದಲ್ಲಿ ದ್ರೋಣನಿಂದ ಹತನಾಗಿ ಬಿದ್ದಿರುವ ದ್ರುಪದನನ್ನು ನೋಡು! ಪಾಂಚಲರಾಜನ ಶ್ವೇತಚ್ಛತ್ರವು ಶರತ್ಕಾಲದ ಚಂದ್ರನಂತೆ ವಿಪುಲವಾಗಿ ಬೆಳಗುತ್ತಿದೆ. ವೃದ್ಧ ಪಾಂಚಾಲ್ಯ ದ್ರುಪದನನ್ನು ಚಿತೆಯೇರಿಸಿ ದುಃಖಿತರಾದ ಅವನ

ಭಾರ್ಯೆಯರು ಮತ್ತು ಸೊಸೆಯಂದಿರು ರಾಜನನ್ನು ಪ್ರದಕ್ಷಿಣೆ ಮಾಡಿ ಹೋಗುತ್ತಿದ್ದಾರೆ! ದ್ರೋಣನಿಂದ ಹತನಾದ ಚೇದಿರಾಜ ಮಹೇಷ್ವಾಸ ಶೂರ ಧೃಷ್ಟಕೇತುವನ್ನು ಅವನ ಪತ್ನಿಯರು ಬುದ್ಧಿಯನ್ನೇ ಕಳೆದುಕೊಂಡವರಾಗಿ ದಹನಕ್ಕೆ ಕೊಂಡೊಯ್ಯುತ್ತಿದ್ದಾರೆ! ದ್ರೋಣನ ಅಸ್ತ್ರಗಳಿಂದ ಪ್ರಹರಿಸಲ್ಪಟ್ಟ ಆ ಮಹೇಷ್ವಾಸನು ನದಿಯ ಪ್ರವಾಹದಿಂದ ಕೆಳಗುರುಳಿಸಲ್ಪಟ್ಟ ವೃಕ್ಷದಂತೆ ಹತನಾಗಿ ಮಲಗಿದ್ದಾನೆ. ಈ ಚೇದಿಪತಿ ಶೂರ ಮಹಾರಥ ಧೃಷ್ಟಕೇತುವು ಯುದ್ಧದಲ್ಲಿ ಸಹಸ್ರಾರು ಶತ್ರುಗಳನ್ನು ಸಂಹರಿಸಿ ತಾನೇ ಹತನಾಗಿ ಮಲಗಿದ್ದಾನೆ! ಸೇನೆ-ಬಾಂಧವರೊಂದಿಗೆ ಹತನಾಗಿ, ಪಕ್ಷಿಗಳಿಂದ ಕುಕ್ಕಲ್ಪಟ್ಟಿರುವ ಚೇದಿರಾಜನನ್ನು ಅವನ ಭಾರ್ಯೆಯರು ಸುತ್ತುವರೆದು ಕುಳಿತಿದ್ದಾರೆ! ಮಲಗಿರುವ ವೀರ, ಸತ್ಯವಿಕ್ರಮ, ದಾಶಾರ್ಹೀ ಶ್ರುತಶ್ರವಳ ಮೊಮ್ಮಗನನ್ನು ತೊಡೆಯಮೇಲೆ ಇಟ್ಟುಕೊಂಡು ಚೇದಿರಾಜನ ವರಾಂಗನೆಯರು ರೋದಿಸುತ್ತಿದ್ದಾರೆ! ಸುಂದರವದನ, ಸುಂದರ ಕುಂಡಲಗಳನ್ನು ಧರಿಸಿರುವ ಧೃಷ್ಟಕೇತುವಿನ ಮಗನನ್ನು ಸಮರದಲ್ಲಿ ದ್ರೋಣನು ಅನೇಕ ಶರಗಳಿಂದ

ಗಾಯಗೊಳಿಸಿರುವುದನ್ನು ನೋಡು! ಶತ್ರುಗಳೊಂದಿಗೆ ಯುದ್ಧಮಾಡುತ್ತಿದ್ದ ತನ್ನ ತಂದೆಯನ್ನು ಬಿಟ್ಟುಹೋಗದ ಇದ್ದ ಈ ವೀರನು ಹತನಾದ ಮೇಲೂ ಅವನ ಜೊತೆಯೇ ಮಲಗಿದ್ದಾನೆ! ಹಾಗೆಯೇ ನನ್ನ ಮಗನ ಮಗ ಪರವೀರಹ ಲಕ್ಷ್ಮಣನು ತಂದೆ ದುರ್ಯೋಧನನನ್ನು ಅಸುಸರಿಸಿಯೇ ಹೋಗುತ್ತಿದ್ದನು. ಹೇಮಂತಋತುವಿನ ಕೊನೆಯಲ್ಲಿ ಪುಷ್ಪಿತ ಶಾಲವೃಕ್ಷಗಳು ಭಿರುಗಾಳಿಯ ಬಡಿತಕ್ಕೆ ಕೆಳಗೆ ಬಿದ್ದಿರುವಂತೆ ಅವಂತಿಯ ವಿಂದಾನುವಿಂದರು ಬಿದ್ದಿರುವುದನ್ನು ನೋಡು! ವೃಷಭದ ಕಣ್ಣುಗಳಂತಹ ಕಣ್ಣುಗಳುಳ್ಳ ಅವರಿಬ್ಬರೂ ಕಾಂಚನದ ಅಂಗದ-ಕವಚಗಳನ್ನು ಧರಿಸಿ, ಬಾಣ-ಖಡ್ಗಗಳನ್ನು ಹಿಡಿದು ಮಲಗಿದ್ದಾರೆ. ನಿನ್ನ ರಕ್ಷಣೆಯಲ್ಲಿರುವ ಪಾಂಡವರೆಲ್ಲರೂ ಅವಧ್ಯರೇ ಸರಿ! ಅವರು ಮಹಾರಥರೂ ಶೂರರೂ ಆದ ದ್ರೋಣ, ಭೀಷ್ಮ, ವೈಕರ್ತನ ಕರ್ಣ, ಕೃಪ, ದುರ್ಯೋಧನ, ದ್ರೋಣಸುತ, ಸೈಂಧವ, ಸೋಮದತ್ತ, ವಿಕರ್ಣ ಮತ್ತು ಕೃತವರ್ಮರಿಂದ ಮುಕ್ತರಾಗಿದ್ದಾರೆ. ಈ ನರಶರ್ಷಭರು ದೇವತೆಗಳ ಶಸ್ತ್ರವೇಗದಿಂದಲೂ ಹತರಾಗುತ್ತಿರಲಿಲ್ಲ. ಇವರೆಲ್ಲರೂ ಯುದ್ಧದಲ್ಲಿ

ಹತರಾಗಿದ್ದಾರೆಂದರೆ ಕಾಲದ ಮಹಿಮೆಯನ್ನು ನೋಡು! ದೈವಕ್ಕೆ ಭಾರವಾದುದು ಯಾವುದೂ ಇಲ್ಲವೆನ್ನುವುದು ಸತ್ಯ! ಈ ಶೂರ ಕ್ಷತ್ರಿಯರ್ಷಭರು ಕ್ಷತ್ರಿಯರಿಂದಲೇ ನಿಹತರಾದರು. ಯಾವಾಗ ನೀನು ನಿನ್ನ ಕಾರ್ಯವು ಸಫಲವಾಗದೇ ಪುನಃ ಉಪಪ್ಲವ್ಯಕ್ಕೆ ಹೋದೆಯೋ ಅಂದೇ ನನ್ನ ತರಸ್ವೀ ಪುತ್ರರು ಹತರಾದರು. ಶಂತನು ಪುತ್ರ ಮತ್ತು ಪ್ರಾಜ್ಞ ವಿದುರರು ನಿನ್ನ ಮಕ್ಕಳೊಂದಿಗೆ ಸ್ನೇಹವನ್ನಿಟ್ಟುಕೊಳ್ಳಬೇಡವೆಂದು ಆಗಲೇ ನನಗೆ ಹೇಳಿದ್ದರು. ಅವರು ಕಂಡಿದ್ದುದು ಮಿಥ್ಯವಾಗಲು ಸಾಧ್ಯವಿಲ್ಲ. ಅಲ್ಪಕಾಲದಲ್ಲಿಯೇ ನನ್ನ ಪುತ್ರರು ಭಸ್ಮೀಭೂತರಾದರು!”

## ಗಾಂಧಾರಿಯು ಕೃಷ್ಣನಿಗೆ ಶಾಪವನ್ನಿತ್ತಿದುದು

ಹೀಗೆ ಹೇಳಿ ಶೋಕಕರ್ಶಿತ ಗಾಂಧಾರಿಯು ನೆಲದ ಮೇಲೆ ಬಿದ್ದಳು. ದುಃಖದಿಂದ ಅವಳ ವಿಶೇಷ ಜ್ಞಾನವೇ ಹೊರಟುಹೋಗಿತ್ತು. ಧೈರ್ಯವು ತೊಲಗಿಹೋಗಿತ್ತು. ಆಗ ಕೋಪದಿಂದ ಅವಳ ಅಂಗಾಂಗಗಳೂ ಉರಿಯುತ್ತಿರಲು, ಪುತ್ರಶೋಕದಲ್ಲಿ ಮುಳುಗಿಹೋಗಿದ್ದ, ಇಂದ್ರಿಯಗಳು ವ್ಯಥೆಗೊಂಡಿರಲು ಇವಕ್ಕೆಲ್ಲಾ ಶೌರಿಯನ್ನೇ ದೋಷಿತನೆಂದು ಗಾಧಾರಿಯು ತಿಳಿದು ಹೇಳಿದಳು:



“ಕೃಷ್ಣ ! ಜನಾರ್ದನ ! ಪಾಂಡವರು ಮತ್ತು ಧಾರ್ತರಾಷ್ಟ್ರರು ಪರಸ್ಪರರನ್ನು ಸುಟ್ಟುಹಾಕಿದರು. ನೀನೇಕೆ ಅವರ

ವಿನಾಶವಾಗಲು ಬಿಟ್ಟೆ? ನಿನ್ನಲ್ಲಿ ಶಕ್ತಿ, ಅನೇಕ ಸೇವಕರು ಮತ್ತು ಅಪಾರ ಸೇನೆಯು ಇತ್ತು. ಎರಡೂ ಪಕ್ಷಗಳಿಗೂ ಹೀಗೆಯೆ ನಡೆದುಕೊಳ್ಳಬೇಕೆಂದು ಆಜ್ಞೆಮಾಡಲೂ ನೀನು ಸಮರ್ಥನಾಗಿದ್ದೆ. ಉದ್ದೇಶಪೂರ್ವಕವಾಗಿಯೇ ನೀನು ಕುರುಗಳ ನಾಶವನ್ನು ಉಪೇಕ್ಷಿಸಿದೆ! ಇದರ ಫಲವನ್ನು ನೀನು ಪಡೆಯುತ್ತೀಯೆ. ಚಕ್ರಗದಾಧರ! ಪತಿಶುಶ್ರೂಷೆಯಿಂದಾಗಿ ನಾನು ಸ್ವಲ್ಪ ತಪಸ್ಸನ್ನು ಸಂಪಾದಿಸಿರುತ್ತೇನೆ. ದುರ್ಲಭವಾಗಿರುವ ಈ ತಪಃಫಲದಿಂದ ನಾನು ನಿನ್ನನ್ನು ಶಪಿಸುತ್ತೇನೆ. ನೀನು ತಡೆಯದೆ ಉಪೇಕ್ಷಿಸಿದುದಕ್ಕಾಗಿ ಹೇಗೆ ಕುರುಪಾಂಡವ ದಾಯಾದಿಗಳು ಪರಸ್ಪರರನ್ನು ಸಂಹರಿಸಿದರೋ ಹಾಗೆ ನಿನ್ನ ಬಾಂಧವರನ್ನೂ ನೀನು ವಧಿಸುತ್ತೀಯೆ. ಇಂದಿನಿಂದ ಮೂವತ್ತಾರನೇ ವರ್ಷದಲ್ಲಿ ನಿನ್ನ ಬಾಂಧವ-ಅಮಾತ್ಯ-ಪುತ್ರರನ್ನು ಕಳೆದುಕೊಂಡು ನೀನು ವನದಲ್ಲಿ ಸಂಚರಿಸುತ್ತಿರುವಾಗ ಯಾವುದೋ ಒಂದು ಹೀನರೀತಿಯಲ್ಲಿ ನಿಧನವನ್ನು ಹೊಂದುತ್ತೀಯೆ! ಭರತಸ್ತ್ರೀಯರಂತೆ ನಿನ್ನ ಕುಲದ ಸ್ತ್ರೀಯರೂ ಪುತ್ರರನ್ನೂ, ಜ್ಞಾತಿ-ಬಾಂಧವರನ್ನೂ ಕಳೆದುಕೊಂಡು ಪರಿತಪಿಸುತ್ತಾರೆ!”

ಆ ಘೋರ ಮಾತನ್ನು ಕೇಳಿ ಮಹಾಮನಸ್ವಿ ವಾಸುದೇವನು ನಸುನಗುತ್ತಿರುವನೋ ಎನ್ನುವಂತೆ ದೇವೀ ಗಾಂಧಾರಿಗೆ ಇಂತೆಂದನು:

> "ಕ್ಷತ್ರಿಯೇ! ಶುಭೇ! ವೃಷ್ಣಿಚಕ್ರವನ್ನು ಬೇರೆ ಯಾರೂ ಸಂಹರಿಸಲಾರದೆಂದು ನನಗೆ ತಿಳಿದೇ ಇದೆ. ಇದು ಹೀಗೆಯೇ ಆಗುತ್ತದೆಯೆಂದು ನನಗೆ ತಿಳಿದಿತ್ತು. ಅದನ್ನೇ ನೀನು ಮಾಡಿರುವೆ! ಅನ್ಯ ನರರಿಂದಾಗಲೀ  ಅಥವಾ ದೇವದಾನವರಿಂದಾಗಲೀ ಅವರು ಅವಧ್ಯರು. ಆದುದರಿಂದ ಯಾದವರು ಪರಸ್ಪರರೊಡನೆಯೇ ಕಾದಾಡಿ ನಾಶಹೊಂದುತ್ತಾರೆ!"

ದಾಶಾರ್ಹನು ಹೀಗೆ ಹೇಳಲು ಭಯಭೀತರಾದ ಪಾಂಡವರು ತುಂಬಾ ಉದ್ವೇಗಗೊಂಡು ತಮ್ಮ ಜೀವಿತದಲ್ಲಿಯೇ ನಿರಾಶೆಹೊಂದಿದರು. ಆಗ ವಾಸುದೇವನು ಹೇಳಿದನು:

> "ಏಳು ಗಾಂಧಾರೀ! ಏಳು! ಮನಸ್ಸನ್ನು ಶೋಕದಲ್ಲಿ ಮುಳುಗಿಸಬೇಡ. ನಿನ್ನ ಅಪರಾಧದಿಂದಲೇ ಕುರುಗಳು ನಿಧನ ಹೊಂದಿದರು. ದುರಾತ್ಮ, ಮಾತ್ಸರ್ಯಿ, ಅತ್ಯಂತ ಅಭಿಮಾನಿ, ನಿಷ್ಠುರನಾಗಿದ್ದ, ಹಿರಿಯರ ಮಾತನ್ನು ಮೀರುತ್ತಿದ್ದ

ವೈರಪುರುಷ ನಿನ್ನ ಪುತ್ರ ದುರ್ಯೋಧನನನ್ನು ಮುಂದಿಟ್ಟು ಮಾಡಿರುವ ದುಷ್ಕರ್ಮವನ್ನು ನೀನು ಸತ್ಕರ್ಮವೆಂದು ಭಾವಿಸುತ್ತಿರುವೆ! ನಿನ್ನದೇ ದೋಷವನ್ನು ನನ್ನ ಮೇಲೆ ಏಕೆ ಹಾಕುತ್ತಿರುವೆ? ಮೃತನಾದವರ, ನಷ್ಟವಾದುದರ ಮತ್ತು ಆಗಿಹೋದುದರ ಕುರಿತು ಶೋಕಿಸಿ ದುಃಖಿಸುವುದರಿಂದ ದುಃಖವೇ ದೊರೆಯುತ್ತದೆಯಲ್ಲದೇ ಯಾವ ಪರಿಹಾರವೂ ದೊರಕುವುದಿಲ್ಲ. ಬ್ರಾಹ್ಮಣಿಯು ತಪಸ್ಸು ಮಾಡಲಿಚ್ಛಿಸುವವನ ಸಲುವಾಗಿ, ಹಸುವು ಹೊರೆಯನ್ನು ಹೊರುವ ಎತ್ತಿಗಾಗಿ, ಕುದುರೆಯು ವೇಗವಾಗಿ ಓಡಬಲ್ಲ ಕುದುರೆಯ ಸಲುವಾಗಿ, ಶೂದ್ರಳು ದಾಸನಿಗಾಗಿ, ವೈಶ್ಯಳು ಪಶುಪಾಲನಿಗಾಗಿ, ಮತ್ತು ನಿನ್ನಂಥಹ ರಾಜಪುತ್ರಿಯು ವಧಿಸಲ್ಪಡಲು ಇಚ್ಛಿಸುವವನಿಗಾಗಿಯೇ ಗರ್ಭವನ್ನು ಧರಿಸುತ್ತಾರೆ.”

ವಾಸುದೇವನು ಪುನಃ ಆಡಿದ ಆ ಅಪ್ರಿಯ ವಚನವನ್ನು ಕೇಳಿ ಶೋಕ-ವ್ಯಾಕುಲ ಲೋಚನೆ ಗಾಂಧಾರಿಯು ಸುಮ್ಮನಾದಳು.

# ಶ್ರಾದ್ಧ ಮತ್ತು ಜಲತರ್ಪಣ

ರಾಜರ್ಷಿ ಧರ್ಮಾತ್ಮಾ ಧೃತರಾಷ್ಟ್ರನಾದರೋ ಅಜ್ಞಾನದಿಂದುಂಟಾಗಿದ್ದ ತಮವನ್ನು ತೊಲಗಿಸಿಕೊಂಡು ಧರ್ಮರಾಜ ಯುಧಿಷ್ಠಿರನಿಗೆ ಕೇಳಿದನು:

> “ಪಾಂಡವ! ಸೈನ್ಯಗಳಲ್ಲಿ ಜೀವಂತವಿರುವವರೆಷ್ಟು ಎನ್ನುವುದನ್ನು ನೀನು ತಿಳಿದಿದ್ದೀಯೆ. ಹತರಾದವರ ಸಂಖ್ಯೆ ಎಷ್ಟೆಂದು ನಿನಗೆ ತಿಳಿದಿದ್ದರೆ ನನಗೆ ಹೇಳು!”

ಯುಧಿಷ್ಠಿರನು ಹೇಳಿದನು:

> “ರಾಜನ್! ಒಂದುನೂರಾ ಅರವತ್ತಾರು ಕೋಟಿ ಇಪ್ಪತ್ತು ಸಾವಿರ ಯೋಧರು ಈ ಯುದ್ಧದಲ್ಲಿ ಹತರಾದರು. ಏನಾದರೆಂದು ತಿಳಿಯದೇ ಇರುವ ವೀರರ ಸಂಖ್ಯೆಯು ಇಪ್ಪತ್ನಾಲ್ಕು ಸಾವಿರದ ಒಂದು ನೂರ ಅರವತ್ತೈದು.”

ಧೃತರಾಷ್ಟ್ರನು ಹೇಳಿದನು:

> “ಯುಧಿಷ್ಠಿರ! ನೀನು ಸರ್ವಜ್ಞನೆಂದು ನನಗನ್ನಿಸುತ್ತದೆ. ನಿಧನ

ಹೊಂದಿದ ಆ ಪುರುಷಸತ್ತಮರು ಯಾವ ಗತಿಯನ್ನು ಹೊಂದಿದ್ದಾರೆ ಎನ್ನುವುದನ್ನೂ ಹೇಳು!”

ಯುಧಿಷ್ಠಿರನು ಹೇಳಿದನು:

“ತಮ್ಮ ಶರೀರಗಳನ್ನು ಈ ಪರಮಸಂಯುಗದಲ್ಲಿ ಸಂತೋಷದಿಂದ ಆಹುತಿಯನ್ನಾಗಿತ್ತ ಸತ್ಯವಿಕ್ರಮಿಗಳು ಇಂದ್ರಲೋಕದ ಸಮಾನ ಲೋಕಗಳಿಗೆ ಹೋಗಿದ್ದಾರೆ. ಸಾಯಬೇಕೆಂಬ ಮನಸ್ಸಿನಿಂದ ಮಾತ್ರ ರಣದಲ್ಲಿ ಯುದ್ಧಮಾಡಿ ಸಂತೋಷವಿಲ್ಲದೇ ಸತ್ತವರು ಗಂಧರ್ವರ ಲೋಕಗಳಿಗೆ ಹೋಗಿದ್ದಾರೆ. ಯುದ್ಧಭೂಮಿಯಲ್ಲಿದ್ದುಕೊಂಡು, ಪ್ರಾಣಭಿಕ್ಷೆಯನ್ನು ಬೇಡುತ್ತಾ ಪರಾಙ್ಮುಖರಾಗುತ್ತಿದ್ದಾಗ ಶಸ್ತ್ರದಿಂದ ನಿಧನ ಹೊಂದಿದವರು ಗುಹ್ಯಕರ ಲೋಕಗಳಿಗೆ ಹೋಗಿದ್ದಾರೆ. ನಿರಾಯುಧರಾಗಿ ಕೆಳಗೆ ಬಿದ್ದು ಪೀಡಿಸಲ್ಪಟ್ಟರೂ ನಾಚದೇ ರಣದಲ್ಲಿ ಶತ್ರುಗಳನ್ನು ಎದುರಿ, ನಿಶಿತ ಶಸ್ತ್ರಗಳಿಂದ ವಧಿಸಲ್ಪಟ್ಟ ಕ್ಷತ್ರಧರ್ಮಪರಾಯಣ ಮಹಾತ್ಮ ಸುವರ್ಚಸ ವೀರರು ಬ್ರಹ್ಮಸದನಕ್ಕೆ ಹೋಗಿದ್ದಾರೆ. ಯುದ್ಧಭೂಮಿಯೊಳಗೆ ಇದ್ದು ಈ ಮೊದಲು ಹೇಳಿದ ರೀತಿಗಳಲ್ಲದೇ ಬೇರೆ ಯಾವುದೇ ರೀತಿಯಲ್ಲಿಯಾದರೂ

ಹತರಾದವರು ಉತ್ತರಕುರುದೇಶದಲ್ಲಿ ಜನ್ಮತಾಳುತ್ತಾರೆ."

ಧೃತರಾಷ್ಟ್ರನು ಹೇಳಿದನು:

"ಪುತ್ರ! ಯಾವ ಜ್ಞಾನಬಲದಿಂದ ನೀನು ಸಿದ್ಧನಂತೆ ಎಲ್ಲವನ್ನೂ ಕಾಣುತ್ತಿದ್ದೀಯೆ? ನಾನು ಕೇಳಬಹುದಾದರೆ ಅದನ್ನು ನನಗೆ ಹೇಳು!"

ಯುಧಿಷ್ಠಿರನು ಹೇಳಿದನು:

"ನಿನ್ನ ನಿರ್ದೇಶನದಂತೆ ಹಿಂದೆ ನಾನು ವನದಲ್ಲಿ ಸಂಚರಿಸುತ್ತಿರುವಾಗ ತೀರ್ಥಯಾತ್ರಾ ಪ್ರಸಂಗದಲ್ಲಿ ನನಗೆ ಈ ಅನುಗ್ರಹವು ಪ್ರಾಪ್ತವಾಯಿತು. ಅಲ್ಲಿ ಕಂಡ ದೇವರ್ಷಿ ಲೋಮಶನಿಂದ ನನಗೆ ಅನುಸ್ಮೃತಿಯು ಪ್ರಾಪ್ತವಾಯಿತು. ಜ್ಞಾನಯೋಗದಿಂದ ಹಿಂದೆ ದಿವ್ಯದೃಷ್ಟಿಯೂ ದೊರಕಿತು."

ಧೃತರಾಷ್ಟ್ರನು ಹೇಳಿದನು:

"ಭಾರತ! ಇಲ್ಲಿ ಅನೇಕ ಅನಾಥ ಮತ್ತು ಸನಾಥ ಯೋಧರ ಶವಗಳಿವೆ. ಇವರ ಶರೀರಗಳನ್ನು ಕೂಡ ವಿಧಿಪೂರ್ವಕವಾಗಿ ದಹನಮಾಡುತ್ತೀಯೆ ತಾನೇ? ಇವರಲ್ಲಿ ಕೆಲವರಿಗೆ

ದಹನಸಂಸ್ಕಾರಗಳನ್ನು ಮಾಡುವವರಿಲ್ಲ. ಕೆಲವರಿಗೆ ಅಗ್ನಿಯಲ್ಲಿ ದಹನವು ಅವರ ಸಂಪ್ರದಾಯಗಳಿಲ್ಲದೇ ಇರುವ ಕಾರಣದಿಂದ ಅಹಿತವೂ ಆಗಿರಬಹುದು. ಮಗೂ! ಅನೇಕರ ದಹನಕಾರ್ಯಗಳನ್ನು ಮಾಡಬೇಕಾಗಿರುವ ನಾವು ಯಾರ ಯಾರ ಕರ್ಮಗಳನ್ನು ಮಾಡೋಣ? ಗರುಡ ಪಕ್ಷಿಗಳು ಮತ್ತು ಹದ್ದುಗಳು ಅಲ್ಲಲ್ಲಿ ಎಳೆದಾಡುತ್ತಿರುವವರಿಗೆ ಕೇವಲ ಶ್ರಾದ್ಧಕರ್ಮದಿಂದಲೇ ಪುಣ್ಯ ಲೋಕಗಳು ಪ್ರಾಪ್ತವಾಗುತ್ತವೆ."

ಮಹಾಪ್ರಾಜ್ಞನು ಹೀಗೆ ಹೇಳಲು ಕುಂತೀಪುತ್ರ ಯುಧಿಷ್ಠಿರನು ಸುಧರ್ಮ, ಧೌಮ್ಯ, ಸೂತ ಸಂಜಯ, ಮಹಾಬುದ್ಧಿ ವಿದುರ, ಕೌರವ ಯುಯುತ್ಸು, ಸೇವಕ ಇಂದ್ರಸೇನ ಮತ್ತು ಎಲ್ಲ ಸೂತರಿಗೂ

"ನೀವು ಯಾರ ಶರೀರವೂ ಅನಾಥ ಶರೀರದಂತೆ ವಿನಾಶವಾಗದಂತೆ ಎಲ್ಲರಿಗೂ ಪ್ರೇತಕಾರ್ಯಗಳನ್ನು ಮಾಡಿ!" ಎಂದು ಆದೇಶವಿತ್ತನು.

ಧರ್ಮರಾಜನ ಶಾಸನದಂತೆ ಕ್ಷತ್ತ ವಿದುರ, ಸೂತ ಸಂಜಯ, ಧೌಮ್ಯನ ಸಹಿತ ಸುಧರ್ಮ ಮತ್ತು ಇಂದ್ರಸೇನಾದಿಗಳು ಚಂದನ, ಅಗರು, ಕಾಷ್ಠ, ಸುಗಂಧದ್ರವ್ಯ, ತುಪ್ಪ, ಎಣ್ಣೆ, ಗಂಧ, ಮತ್ತು ನವುರಾದ ವಸ್ತ್ರಗಳನ್ನು

ಸಂಗ್ರಹಿಸಿದರು. ಮುರಿದು ಹೋಗಿದ್ದ ರಥಗಳಿಂದಲೂ, ನಾನಾ ಶಸ್ತ್ರಗಳಿಂದಲೂ ಮತ್ತು ಸಂಗ್ರಹಿಸಿದ ರಾಶಿಗಟ್ಟಲೆ ಕಟ್ಟಿಗೆಗಳಿಂದ ಚಿತೆಗಳನ್ನು ಮಾಡಿ, ಮುಖ್ಯರಿಂದ ಮೊದಲ್ಗೊಂಡು ಕ್ರಮೇಣವಾಗಿ ಎಲ್ಲ ನರಾಧಿಪರಿಗೂ ವೇದಗಳಲ್ಲಿ ಹೇಳಿದ ಕರ್ಮಗಳ ಮೂಲಕ ದಹನಕರ್ಮಗಳನ್ನು ಅವ್ಯಗ್ರರಾಗಿ ಪ್ರಯತ್ನಪಟ್ಟು ಮಾಡಿ ನೆರವೇರಿಸಿದರು. ರಾಜಾ ದುರ್ಯೋಧನ, ಅವನ ನೂರು ಸಹೋದರರರು, ಶಲ್ಯ, ಶಲ, ರಾಜಾ ಭೂರಿಶ್ರವ, ರಾಜ ಜಯದ್ರಥ, ಅಭಿಮನ್ಯು, ದುಃಶಾಸನನ ಮಗ, ಲಕ್ಷ್ಮಣ, ರಾಜ ಧೃಷ್ಟಕೇತು, ಬೃಹಂತ, ಸೋಮದತ್ತ, ನೂರಕ್ಕಿಂತಲೂ ಹೆಚ್ಚು ಸೃಂಜಯರು, ರಾಜ ಕ್ಷೇಮಧನ್ವಿ, ವಿರಾಟ ಮತ್ತು ದ್ರುಪದರು, ಪಾಂಚಾಲ್ಯ ಶಿಖಂಡಿ, ಪಾರ್ಷತ ಧೃಷ್ಟದ್ಯುಮ್ನ, ಯುಧಾಮನ್ಯು, ವಿಕ್ರಾಂತ ಉತ್ತಮೌಜಸ, ಕೌಸಲ್ಯ, ದ್ರೌಪದೇಯರು, ಸೌಬಲ ಶಕುನಿ, ಅಚಲ, ವೃಷಕ, ರಾಜ ಭಗದತ್ತ, ಪುತ್ರರೊಂದಿಗೆ ಅಮರ್ಷಣ ವೈಕರ್ತನ ಕರ್ಣ, ಮಹೇಷ್ವಾಸ ಕೇಕಯ ಸಹೋದರರರು, ಮಹಾರಥ ತ್ರಿಗರ್ತರು, ರಾಕ್ಷಸೇಂದ್ರ ಘಟೋತ್ಕಚ, ಬಕನ ಸಹೋದರ ಅಲಂಬುಸ, ರಾಜ ಜಲಸಂಧ, ಮತ್ತು ಇನ್ನೂ ಅನೇಕ ನೂರಾರು ಸಹಸ್ರಾರು ರಾಜರನ್ನು ಆಜ್ಯಧಾರೆಗಳಿಂದ ಪ್ರದೀಪ್ತವಾದ ಅಗ್ನಿಗಳ ಮೂಲಕ ದಹಿಸಿದರು. ಕೆಲವರ



ಪಿತೃಮೇಧಕರ್ಮಗಳೂ ನಡೆದವು. ಸಾಮವೇದವನ್ನೂ ಹಾಡಿದರು. ಅನ್ಯರು ಶೋಕಿಸುತ್ತಿದ್ದರು. ಋಕ್-ಸಾಮಗಳ ನಿನಾದದಿಂದಲೂ, ಸ್ತ್ರೀಯರ ರೋದನ ಶಬ್ಧಗಳಿಂದಳು ಆ ರಾತ್ರಿ ಎಲ್ಲ ಪ್ರಾಣಿಗಳ ಮನಸ್ಸೂ ವ್ಯಾಕುಲಗೊಂಡಿತು. ಹೊಗೆಯಿಲ್ಲದೇ ಉರಿದು ಪ್ರಜ್ವಲಿಸುತ್ತಿರುವ ಚಿತಾಗ್ನಿಗಳು ಆಕಾಶದಲ್ಲಿ ಮೋಡಗಳಿಂದ ಸುತ್ತುವರೆಯಲ್ಪಟ್ಟ ಗ್ರಹಗಳಂತೆ ತೋರುತ್ತಿದ್ದವು. ನಾನಾದೇಶಗಳಿಂದ ಬಂದು ಇಲ್ಲಿ ಅನಾಥರಾಗಿ ಸತ್ತಿದ್ದ ಎಲ್ಲರನ್ನೂ ಒಂದುಗೂಡಿಸಿ, ಸಹಸ್ರಾರು ರಾಶಿಗಳನ್ನು ಮಾಡಿ, ಕಟ್ಟಿಗೆ, ಮತ್ತು ತುಪ್ಪಗಳಿಂದ ಎಲ್ಲರ ದಹನ ಸಂಸ್ಕಾರಗಳನ್ನೂ ವಿದುರನು ಧರ್ಮರಾಜನ ಶಾಸನದಂತೆ ಮಾಡಿಸಿದನು. ಅವರ ಕ್ರಿಯೆಗಳನ್ನು ಮಾಡಿಸಿ ಕುರುರಾಜ ಯುಧಿಷ್ಠಿರನು ಧೃತರಾಷ್ಟ್ರನನ್ನು ಮುಂದಿಟ್ಟುಕೊಂಡು ಗಂಗಾನದಿಯ ಕಡೆ ಹೊರಟನು.

ಪುಣ್ಯಜನರಿಗೆ ಉಚಿತವಾದ, ಅನೇಕ ಮಡುಗಳಿದ್ದ, ಮಹಾರಣ್ಯಗಳಿಂದ ಕೂಡಿದ್ದ ಪ್ರಸನ್ನವೂ ವಿಶಾಲವೂ ಆದ ಮಂಗಳಕರ ಗಂಗೆಯನ್ನು ಅವರು ತಲುಪಿದರು. ಅತ್ಯಂತ ದುಃಖಿತರಾಗಿದ್ದ ಕುರುಸ್ತ್ರೀಯರು ಎಲ್ಲರೂ ರೋದಿಸುತ್ತಲೇ ಭೂಷಣಗಳನ್ನೂ, ಉತ್ತರೀಯಗಳನ್ನೂ, ಶಿರೋವೇಷ್ಟಿಗಳನ್ನೂ ಕಳಚಿಟ್ಟು ಪಿತೃಗಳಿಗೆ, ಮಕ್ಕಳು-ಮೊಮ್ಮಕ್ಕಳಿಗೆ, ಸಹೋದರರಿಗೆ,

ಬಂಧುಗಳಿಗೆ, ಮಾವಂದಿರಿಗೆ, ಮತ್ತು ಪತಿಯಂದಿರಿಗೆ ಉದಕ ಕ್ರಿಯೆಗಳನ್ನು ಮಾಡಿದರು. ಆ ದರ್ಮಜ್ಞರು ಸ್ನೇಹಿತರಿಗೂ ಜಲತರ್ಪಣಗಳನ್ನಿತ್ತರು. ವೀರಪತ್ನಿಯರು ವೀರರಿಗೆ ತರ್ಪಣಗಳನ್ನು ನೀಡುವಾಗ ತೀರ್ಥೆ ಗಂಗೆಯ ತೀರವು ಇನ್ನೂ ವಿಸ್ತಾರವಾಯಿತು. ಅಲ್ಲಿ ಸೇರಿದ್ದ ವೀರಪತ್ನಿಯರ ಗುಂಪುಗಳಲ್ಲಿ ಆನಂದವಾಗಲೀ ಉತ್ಸವವಾಗಲೀ ಇಲ್ಲದಿದ್ದರೂ ಆ ಗಂಗಾತೀರವು ಮಹಾಸಾಗರದಂತೆ ತೋರಿತು. ಆಗ ಒಡನೆಯೇ ಶೋಕಕರ್ಶಿತ ಕುಂತಿಯು ರೋದಿಸುತ್ತಾ ತನ್ನ ಪುತ್ರರಿಗೆ ಮೆಲುದನಿಯಲ್ಲಿ ಈ ಮಾತನ್ನಾಡಿದಳು:

> “ಪಾಂಡವರೇ! ರಣದಲ್ಲಿ ಅರ್ಜುನನಿಂದ ಹತನಾದ ಆ ಶೂರ ಮಹೇಷ್ವಾಸ ರಥಯೂಥಪಯೂಥಪ ವೀರಲಕ್ಷಣಗಳಿಂದ ಕೂಡಿದ್ದ, ಯಾರನ್ನು ಸೂತಪುತ್ರನೆಂದೂ ರಾಧೇಯನೆಂದು ತಿಳಿದಿದ್ದರೋ, ಯಾರು ಸೇನೆಗಳ ಮಧ್ಯೆ ಪ್ರಭು ದಿವಾಕರನಂತೆ ಪ್ರಕಾಶಿಸುತ್ತಿದ್ದನೋ, ಅನುಚರರೊಂದಿಗೆ ನಿಮ್ಮೆಲ್ಲರನ್ನೂ ಎದುರಿಸಿ ಯಾರು ಯುದ್ಧಮಾಡಿದನೋ, ದುರ್ಯೋಧನನ ಸರ್ವಸೇನೆಗಳನ್ನೂ ಸೆಳೆದು ಬೆಳಗುತ್ತಿದ್ದ, ವೀರ್ಯದಲ್ಲಿ ಯಾರ ಸಮನಾಗಿರುವವನು ಈ ಭೂಮಿಯಲ್ಲಿಯೇ ಇಲ್ಲವೋ ಆ ಸತ್ಯಸಂಧ ಶೂರ ಸಂಗ್ರಾಮದಲ್ಲಿ ಪಲಯಾನಮಾಡದಿದ್ದ

> ನಿಮ್ಮ ಸಹೋದರ ಅಕ್ಲಿಷ್ಟಕರ್ಮಿಗೆ ಉದಕ ಕಾರ್ಯಗಳನ್ನು ಮಾಡಿ. ಕುಂಡಲ-ಕವಚಗಳನ್ನು ಧರಿಸಿಯೇ ದಿವಾಕರಸಮ ಪ್ರಭೆಯನ್ನು ಹೊಂದಿ ಹುಟ್ಟಿದ್ದ ಅವನು ನಿಮಗಿಂತಲೂ ಮೊದಲು ಭಾಸ್ಕರನಿಂದ ನನ್ನಲ್ಲಿ ಹುಟ್ಟಿದ್ದ ನಿಮ್ಮ ಹಿರಿಯಣ್ಣ!"

ತಾಯಿಯ ಆ ಅಪ್ರಿಯ ಮಾತನ್ನು ಕೇಳಿ ಪಾಂಡವರೆಲ್ಲರೂ ಕರ್ಣನ ಕುರಿತು ಶೋಕಿಸುತ್ತಾ ಇನ್ನೂ ಹೆಚ್ಚು ಆರ್ತರಾದರು. ಆಗ ಆ ಪುರುಷವ್ಯಾಘ್ರ ವೀರ ಕುಂತೀಪುತ್ರ ಯುಧಿಷ್ಠಿರನು ಹಾವಿನಂತೆ ದೀರ್ಘ ನಿಟ್ಟುಸಿರು ಬಿಡುತ್ತಾ ತಾಯಿಗೆ ಹೇಳಿದನು:

> "ಯಾರ ಬಾಣಗಳನ್ನು ಧನಂಜಯನಲ್ಲದೇ ಬೇರೆ ಯಾರೂ ಎದುರಿಸಬಲ್ಲವರಾಗಿದ್ದರೋ ಅಂಥಹ ದೇವಗರ್ಭನು ಹಿಂದೆ ಹೇಗೆ ನಿನ್ನ ಪುತ್ರನಾಗಿ ಜನಿಸಿದನು? ಅವನ ಬಾಹುಪ್ರತಾಪದಿಂದ ನಾವು ಎಲ್ಲಕಡೆಗಳಿಂದ ಸುಟ್ಟುಹೋಗುತ್ತಿದ್ದರೂ ಹೇಗೆ ತಾನೇ ನೀನು ಅಗ್ನಿಯನ್ನು ಬಟ್ಟೆಯಲ್ಲಿ ಮುಚ್ಚಿಟ್ಟುಕೊಳ್ಳುವಂತೆ ಅದನ್ನು ಗುಟ್ಟಾಗಿಯೇ ಇಟ್ಟುಕೊಂಡಿದ್ದೆ? ಧಾರ್ತರಾಷ್ಟ್ರರು ಅವನ ಘೋರ ಬಾಹುಬಲವನ್ನು ಆಶ್ರಯಿಸಿದ್ದರು. ರಥಿಗಳಲ್ಲಿ ಶ್ರೇಷ್ಠನಾಗಿದ್ದ

ಕುಂತೀಸುತ ಕರ್ಣನಲ್ಲದೇ ಬೇರೆ ಯಾರೂ ಸೇನೆಯನ್ನು ಎದುರಿಸಿ ನಿಲ್ಲುತ್ತಿರಲಿಲ್ಲ! ಆ ಸರ್ವಶಸ್ತ್ರಧಾರಿಗಳಲ್ಲಿ ಶ್ರೇಷ್ಠನು ಮೊದಲು ಹುಟ್ಟಿದ್ದ ನಮ್ಮ ಅಣ್ಣ! ಅಂಥಹ ಅದ್ಭುತವಿಕ್ರಮಿಯನ್ನು ನಮ್ಮೆಲ್ಲರಿಗೆ ಮೊದಲೇ ನೀನು ಹೇಗೆ ಹೆತ್ತೆ? ಅಯ್ಯೋ! ನೀನು ಈ ರಹಸ್ಯವನ್ನು ಮುಚ್ಚಿಟ್ಟಿದುದರಿಂದ ನಾವೆಲ್ಲರೂ ಹತರಾದಂತೆಯೇ! ಕರ್ಣನ ನಿಧನದಿಂದ ಬಾಂಧವರೊಂದಿಗೆ ನಾವೆಲ್ಲರೂ ಪೀಡಿತರಾಗಿದ್ದೇವೆ! ಈ ದುಃಖವು ಅಭಿಮನ್ಯುವಿನ ವಿನಾಶ, ದ್ರೌಪದೇಯರ ವಧೆ, ಪಾಂಚಾಲರ ನಾಶ ಮತ್ತು ಕುರುಗಳ ಪತನಕ್ಕಿಂತಲೂ ನೂರು ಪಟ್ಟು ಹೆಚ್ಚಾಗಿ ನನ್ನನ್ನು ಸಂಕಟಕ್ಕೀಡುಮಾಡಿದೆ. ಕರ್ಣನ ಕುರಿತೇ ದುಃಖಿಸಿ ನಾನು ಉರಿಯುತ್ತಿರುವ ಬೆಂಕಿಯನ್ನು ಪ್ರವೇಶಿಸಿದವನಂತಾಗಿದ್ದೇನೆ! ಅವನು ನಮ್ಮ ಅಣ್ಣನೆಂದು ಮೊದಲೇ ತಿಳಿದಿದ್ದರೆ ನಮಗೆ ಪ್ರಾಪ್ತವಾಗದಿರುವುದು ಯಾವುದೂ ಇರಲಿಲ್ಲ, ಸ್ವರ್ಗದಲ್ಲಿಯೇ ಇದ್ದರೂ ಅದನ್ನು ನಾವು ಪಡೆದುಕೊಳ್ಳುತ್ತಿದ್ದೆವು. ಈ ಘೋರ ದುಃಖಕರ ಕೌರವರ ಅಂತ್ಯವೂ ನಡೆಯುತ್ತಿರಲಿಲ್ಲ!”

ಹೀಗೆ ಧರ್ಮರಾಜ ಯುಧಿಷ್ಠಿರನು ಬಹಳವಾಗಿ ವಿಲಪಿಸಿದನು.

ಮೆಲ್ಲನೇ ಅಳುತ್ತಲೇ ಆ ಪ್ರಭುವು ಕರ್ಣನಿಗೆ ಉದಕ ಕ್ರಿಯೆಗಳನ್ನು ಮಾಡಿದನು. ಅವನು ಉದಕಕ್ರಿಯೆಗಳನ್ನು ಮಾಡುವಾಗ ಸುತ್ತಲೂ ನಿಂತಿದ್ದ ಸ್ತ್ರೀ-ಪುರುಷರೆಲ್ಲರೂ ಒಡನೆಯೇ ಜೋರಾಗಿ ರೋದಿಸಿದರು. ಅನಂತರ ಭ್ರಾತೃ ಪ್ರೇಮದಿಂದ ಕುರುಪತಿ ಯುಧಿಷ್ಠಿರನು ಕರ್ಣನ ಸ್ತ್ರೀಯರನ್ನು ಅವರ ಪರಿವಾರಸಮೇತರಾಗಿ ಕರೆಯಿಸಿದನು.

# ಶಾಂತಿಪರ್ವ



## ಯುಧಿಷ್ಠಿರನ ಶೋಕ

ಪಾಂಡುನಂದನರು, ವಿದುರ, ಧೃತರಾಷ್ಟ್ರ ಮತ್ತು ಸರ್ವ ಭರತಸ್ತ್ರೀಯರು ಎಲ್ಲ ಸುಹೃದಯರಿಗೂ ಉದಕ ಕ್ರಿಯೆಗಳನ್ನು ಪೂರೈಸಿದರು. ಬಳಿಕ ಮಹಾತ್ಮ ಕುರುನಂದನರು ಶುದ್ಧಿಕಾರ್ಯಗಳನ್ನಾಚರಿಸುತ್ತಾ ಒಂದು ತಿಂಗಳ ಕಾಲ ಪುರದಿಂದ

ಹೊರಗೆ ಗಂಗಾತೀರದಲ್ಲಿಯೇ ಉಳಿದುಕೊಂಡರು. ಉದಕ ಕ್ರಿಯೆಗಳನ್ನು ಪೂರೈಸಿದ ರಾಜಾ ಧರ್ಮಾತ್ಮ ಯುಧಿಷ್ಠಿರನಲ್ಲಿಗೆ ಮಹಾತ್ಮ ಸಿದ್ಧ ಬ್ರಹ್ಮರ್ಷಿಸತ್ತಮರು ಆಗಮಿಸಿದರು. ದ್ವೈಪಾಯನ, ನಾರದ, ಮಹಾನ್ ಋಷಿ ದೇವಲ, ದೇವಸ್ಥಾನ, ಕಣ್ವ ಮತ್ತು ಅವನ ಸತ್ತಮ ಶಿಷ್ಯರು, ಅನ್ಯ ವೇದವಿದ್ವಾಂಸರೂ, ಕೃತಪ್ರಜ್ಞ ದ್ವಿಜಾತಿಯರೂ, ಗೃಹಸ್ಥರೂ, ಸ್ನಾತಕರೂ ಎಲ್ಲರೂ ಕುರುಸತ್ತಮನನ್ನು ಕಂಡರು. ಆಗಮಿಸಿದ ಮಹಾಋಷಿಗಳು ಯಥಾವಿಧಿಯಾಗಿ ಪೂಜಿಸಲ್ಪಟ್ಟು ಅಮೂಲ್ಯ ಆಸನಗಳಲ್ಲಿ ಕುಳಿತುಕೊಂಡರು. ಆ ಶೋಕಸಮಯಕ್ಕೆ ತಕ್ಕುದಾದ ಪೂಜೆಗಳನ್ನು ಸ್ವೀಕರಿಸಿ ನೂರಾರು ಸಹಸ್ರಾರು ವಿಪ್ರರು ಆ ಪುಣ್ಯ ಭಾಗೀರಥೀ ತೀರದಲ್ಲಿ ಶೋಕವ್ಯಾಕುಲ ಚೇತಸ ರಾಜ ಯುಧಿಷ್ಠಿರನನ್ನು ಯಥಾನ್ಯಾಯವಾಗಿ ಗೌರವಿಸಿ ಸುತ್ತುವರೆದು ಕುಳಿತು ಸಮಾಧಾನಪಡಿಸುತ್ತಿದ್ದರು.

ಆ ಸಮಯದಲ್ಲಿ ಇತರ ಮುನಿಗಳೊಂದಿಗೆ ವಿಚಾರಿಸಿ ನಾರದನು ಆ ಕಾಲಕ್ಕೆ ತಕ್ಕುದಾದ ಈ ಮಾತುಗಳನ್ನು ಧರ್ಮಾತ್ಮ ಯುಧಿಷ್ಠಿರನಿಗೆ ಹೇಳಿದನು:

> “ಯುಧಿಷ್ಠಿರ! ನಿನ್ನ ಬಾಹುವೀರ್ಯದಿಂದ ಮತ್ತು ಮಾಧವನ ಪ್ರಸಾದದಿಂದ ನೀನು ಈ ಇಡೀ ಭೂಮಿಯನ್ನು



ಧರ್ಮಪೂರ್ವಕವಾಗಿ ಗೆದ್ದಿರುವೆ! ಸೌಭಾಗ್ಯವಾಶಾತ್ ನೀನು ಆ ಲೋಕಭಯಂಕರ ಸಂಗ್ರಾಮದಿಂದ ಮುಕ್ತನಾಗಿರುವೆ. ಕ್ಷತ್ರಧರ್ಮರತನಾಗಿದ್ದುಕೊಂಡು ಈಗಲಾದರೂ ಸಂತೋಷದಿಂದಿರುವೆಯಲ್ಲವೇ? ಅಮಿತ್ರರನ್ನು ಸಂಹರಿಸಿ ಮಿತ್ರರಿಗೆ ಪ್ರೀತಿಯನ್ನುಂಟುಮಾಡಿರುವೆ ತಾನೇ? ಈ ಶ್ರೀಯನ್ನು ಪಡೆದ ನಿನ್ನನ್ನು ಬೇರೆ ಯಾವ ಶೋಕವೂ ಬಾಧಿಸುತ್ತಿಲ್ಲ ತಾನೇ?”

ಯುಧಿಷ್ಠಿರನು ಹೇಳಿದನು:

“ಕೃಷ್ಣನ ಬಾಹುಬಲವನ್ನಾಶ್ರಯಿಸಿ, ಬ್ರಾಹ್ಮಣರ ಪ್ರಸಾದದಿಂದ ಮತ್ತು ಭೀಮಾರ್ಜುನರ ಬಲದಿಂದ ಇಡೀ ಭೂಮಿಯನ್ನೇ ಗೆದ್ದದ್ದಾಯಿತು! ಆದರೆ ಲೋಭಕ್ಕಾಗಿ ಈ ಮಹಾ ಜ್ಞಾತಿಕ್ಷಯವನ್ನು ಮಾಡಿದೆನಲ್ಲಾ ಎಂಬ ಮಹಾದುಃಖವು ನಿತ್ಯವೂ ನನ್ನ ಹೃದಯದಲ್ಲಿ ನೆಲೆಗೊಂಡಿದೆ! ಭಗವನ್! ಪ್ರಿಯ ಸುತರಾದ ಸೌಭದ್ರ ಮತ್ತು ದ್ರೌಪದೇಯರನ್ನು ಸಾಯಗೊಳಿಸಿ ನನಗೆ ಈ ಜಯವೂ ಸೋಲಾಗಿ ಕಾಣುತ್ತಿದೆ. ಇಲ್ಲಿಂದ ಕೃಷ್ಣನು ಹಿಂದಿರುಗಿದಾಗ ನನ್ನ ಸೊಸೆ ವಾರ್ಷ್ಣೇಯೀ ಸುಭದ್ರೆಯು ಮಧುಸೂದನನಿಗೆ

ಏನೆನ್ನುವಳು? ದ್ವಾರಕಾವಾಸಿಗಳು ಹರಿಯನ್ನು ಏನೆಂದು ಪ್ರಶ್ನಿಸುವರು? ಪುತ್ರರನ್ನೂ ಬಾಂಧವರನ್ನೂ ಕಳೆದುಕೊಂಡ ದ್ರೌಪದಿಯು ದೀನಳಾಗಿದ್ದಾಳೆ. ನಮ್ಮ ಪ್ರಿಯಹಿತದಲ್ಲಿಯೇ ನಿರತಳಾಗಿದ್ದ ಅವಳು ಈಗ ನನ್ನನ್ನು ಪೀಡಿಸುತ್ತಿರುವಳೋ ಎನ್ನುವಂತೆ ನನಗನ್ನಿಸುತ್ತದೆ. ಜೊತೆಗೆ ಇನ್ನೊಂದು ದುಃಖದ ಕುರಿತು ನಿನಗೆ ಹೇಳುತ್ತೇನೆ. ಕುಂತಿಯು ರಹಸ್ಯವಾಗಿಟ್ಟಿದ್ದುದನ್ನು ಕೇಳಿ ಅತೀವ ದುಃಖಿತನಾಗಿದ್ದೇನೆ. ಹತ್ತುಸಾವಿರ ಆನೆಗಳ ಬಲವಿದ್ದ, ಲೋಕದಲ್ಲಿಯೇ ಅಪ್ರತಿಮ ಮಹಾರಥ, ರಣದಲ್ಲಿ ಸಿಂಹದಂತೆ ಸಂಚರಿಸುತ್ತಿದ್ದ ಧೀಮಾನ್, ದಯಾಳು, ಅಭಿಮಾನೀ, ತೀಕ್ಷ್ಣ ಪರಾಕ್ರಮಿ, ಧಾರ್ತರಾಷ್ಟ್ರರ ಆಶ್ರಯ, ಅಸಹನಶೀಲ, ನಿತ್ಯಕೋಪೀ, ರಣರಣದಲ್ಲಿಯೂ ನಮ್ಮನ್ನು ಸೋಲಿಸುತ್ತಿದ್ದ ಆ ಶೀಘ್ರಾಸ್ತ್ರ, ಚಿತ್ರಯೋಧೀ, ಧನುರ್ವೇದ ಪಂಡಿತ, ಅದ್ಭುತ ವಿಕ್ರಮಿಯು ರಹಸ್ಯದಲ್ಲಿ ಹುಟ್ಟಿದ ಕುಂತಿಯ ಮಗ ಮತ್ತು ನಮ್ಮ ಸಹೋದರ ಅಣ್ಣನಾಗಿದ್ದನು! ಉದಕಕ್ರಿಯೆಗಳನ್ನು ಮಾಡುತ್ತಿದ್ದಾಗ ಕುಂತಿಯು ಸೂರ್ಯನಿಂದ ಹುಟ್ಟಿದ ಆ ಸರ್ವಗುಣೋಪೇತ ಪುತ್ರನನ್ನು ಹಿಂದೆ ನೀರಿನಲ್ಲಿ ತೇಲಿಸಿ

ಬಿಟ್ಟಿದುದನ್ನು ನಮಗೆ ಹೇಳಿದಳು. ಈ ಲೋಕವು ಯಾರನ್ನು ರಾಧೇಯ ಸೂತಪುತ್ರನೆಂದು ಅಪಮಾನಿಸುತ್ತಿತ್ತೋ ಅವನು ಕುಂತಿಯ ಜ್ಯೇಷ್ಠಪುತ್ರ ಮತ್ತು ನಮ್ಮ ತಾಯಲ್ಲಿ ಹುಟ್ಟಿದ ನಮ್ಮ ಅಣ್ಣನಾಗಿದ್ದನು. ಅದನ್ನು ತಿಳಿಯದೇ ನಾನು ರಾಜ್ಯಲೋಭದಿಂದ ರಣದಲ್ಲಿ ಅವನನ್ನು ಕೊಲ್ಲಿಸಿದೆ. ಅಗ್ನಿಯು ಹತ್ತಿಯ ರಾಶಿಯನ್ನು ಹೇಗೋ ಹಾಗೆ ಅದು ನನ್ನ ಅಂಗಾಂಗಳನ್ನು ಸುಡುತ್ತಿದೆ. ಅವನು ಅಣ್ಣನೆಂದು ಶ್ವೇತವಾಹನ ಪಾರ್ಥನಿಗಾಗಲೀ, ನನಗಾಗಲೀ, ಭೀಮನಿಗಾಗಲೀ, ಯಮಳರಿಗಾಗಲೀ ತಿಳಿದಿರಲಿಲ್ಲ. ಆದರೆ ನಾವು ಅವನ ಸಹೋದರರೆಂದು ಆ ಸುವ್ರತನಿಗೆ ತಿಳಿದಿತ್ತು! ನಮ್ಮೊಡನೆ ಶಾಂತಿಯನ್ನು ಬಯಸಿ ಪೃಥೆಯು ಅವಳ ಬಳಿ ಹೋಗಿ "ನೀನು ನನ್ನ ಮಗ" ಎಂದು ಹೇಳಿದ್ದಳೆಂದು ನಾವು ಕೇಳಿದ್ದೇವೆ. ಆದರೆ ಆ ಮಹಾತ್ಮನು ಪೃಥೆಯು ಬಯಸಿದಂತೆ ಮಾಡಲಿಲ್ಲ. ಅದೂ ಅಲ್ಲದೆ ಅವನು ತಾಯಿಗೆ ಇದನ್ನು ಹೇಳಿದನೆಂದು ನಾವು ಕೇಳಿದ್ದೇವೆ. "ರಣದಲ್ಲಿ ನೃಪ ದುರ್ಯೋಧನನನ್ನು ತ್ಯಜಿಸಲು ನಾನು ಶಕ್ತನಿಲ್ಲ. ನಾನು ಅನಾರ್ಯನೂ, ಕ್ರೂರಿಯೂ, ಕೃತಘ್ನನು ಆಗುವುದು ಬೇಡ!

ನಿನ್ನ ಸಲಹೆಯಂತೆ ನಾನೇನಾದರೂ ಯುಧಿಷ್ಠಿರನೊಡನೆ ಸಂಧಿಮಾಡಿಕೊಂಡರೆ ರಣದಲ್ಲಿ ಶ್ವೇತವಾಹನನಿಗೆ ಹೆದರಿ ಹೀಗೆ ಮಾಡಿದೆನೆಂದು ಜನರು ತಿಳಿದುಕೊಳ್ಳುತ್ತಾರೆ. ಸಮರದಲ್ಲಿ ನಾನು ಕೇಶವನೊಡನೆ ವಿಜಯ ಅರ್ಜುನನನ್ನು ಸೋಲಿಸಿದ ನಂತರ ನಾನು ಧರ್ಮಪುತ್ರನೊಂದಿಗೆ ಸಂಧಿಮಾಡಿಕೊಳ್ಳುತ್ತೇನೆ" ಎಂದು ಅವನು ಹೇಳಿದನಂತೆ. ಪುನಃ ಪೃಥೆಯು ಆ ವಿಶಾಲವಕ್ಷಸ್ಥಳನಿಗೆ "ಬೇಕಾದರೆ ಫಲ್ಗುನನೊಡನೆ ಯುದ್ಧಮಾಡು, ಆದರೆ ಉಳಿದ ನಾಲ್ವರಿಗೆ ಅಭಯವನ್ನು ನೀಡು" ಎಂದು ಕೇಳಿಕೊಂಡಳಂತೆ! ಆಗ ಆ ಧೀಮಂತನು ನಡುಗುತ್ತಾ ಅಂಜಲೀಬದ್ಧನಾಗಿ ತಾಯಿಗೆ "ನಿನ್ನ ಆ ನಾಲ್ವರು ಮಕ್ಕಳೂ ನನ್ನಿಂದಾಗಿ ವಿಷಮ ಸ್ಥಿತಿಯನ್ನು ಹೊಂದಿದರೂ ನಾನು ಅವರನ್ನು ಸಂಹರಿಸುವುದಿಲ್ಲ. ಪಾರ್ಥನು ಹತನಾದರೆ ಕರ್ಣ ಮತ್ತು ನಾನು ಹತನಾದರೆ ಅರ್ಜುನನೂ ಸೇರಿ ನಿನಗೆ ಐವರು ಮಕ್ಕಳು ಇರುತ್ತಾರೆ. ಮಾತೇ! ಇದು ಸತ್ಯ!" ಪುತ್ರಪ್ರಿಯಳಾದ ಆ ಮಾತೆಯು ತನ್ನ ಮಗನಿಗೆ ಪುನಃ "ನೀನು ಯಾರಿಗೆ ಮಂಗಳವನ್ನುಂಟುಮಾಡಲು ಬಯಸುತ್ತೀಯೋ ಆ

ಸಹೋದರರಿಗೆ ಮಂಗಳವನ್ನುಂಟುಮಾಡು!" ಎಂದು ಹೇಳಿದಳಂತೆ. ಪೃಥೆಯು ಹಾಗೆ ಹೇಳಲು ಅವರಿಬ್ಬರೂ ಬೀಳ್ಕೊಂಡು ತಮ್ಮ ತಮ್ಮ ಮನೆಗಳಿಗೆ ತೆರಳಿದರಂತೆ. ಆ ವೀರನೇ ಅರ್ಜುನನಿಂದ ಹತನಾದನು. ಅಣ್ಣನನ್ನು ತಮ್ಮನು ಸಂಹರಿಸಿದನು! ಈ ರಹಸ್ಯವನ್ನು ಪೃಥೆಯಾಗಲೀ ಕರ್ಣನಾಗಲೀ ಅಂತ್ಯದವರೆಗೂ ಹೊರಗೆಡಹಲೇ ಇಲ್ಲ! ಈಗ ಆ ಶೂರ ಮಹೇಷ್ವಾಸನು ಪಾರ್ಥನಿಂದ ಹತನಾಗಿದ್ದಾನೆ. ಅವನ ಮರಣಾನಂತರವೇ ನಾನು ಪೃಥೆಯ ವಚನದಂತೆ ಕರ್ಣನು ನಮ್ಮ ಸಹೋದರನೆಂದೂ, ನಮ್ಮೆಲ್ಲರ ಮೊದಲು ಹುಟ್ಟಿದ ಅಣ್ಣನೆಂದೂ ತಿಳಿದುಕೊಂಡೆನು. ಸಹೋದರನನ್ನು ಕೊಲ್ಲಿಸಿದ ನನ್ನ ಈ ಹೃದಯವು ಅತೀವವಾಗಿ ದುಃಖಿಸುತ್ತಿದೆ. ಕರ್ಣಾರ್ಜುನರ ಸಹಾಯದಿಂದ ನಾನು ವಾಸವನನ್ನೂ ಜಯಿಸಬಹುದಾಗಿತ್ತು! ಸಭೆಯಲ್ಲಿ ದುರಾತ್ಮ ಧಾರ್ತರಾಷ್ಟ್ರರಿಂದ ಕಷ್ಟಕ್ಕೊಳಗಾದಾಗ ಒಮ್ಮೆಲೇ ಮೇಲೇರುತ್ತಿದ್ದ ನನ್ನ ಕ್ರೋಧವು ಕರ್ಣನನ್ನು ನೋಡಿದೊಡನೆಯೇ ತಣ್ಣಗಾಗುತ್ತಿತ್ತು! ಸಭೆಯಲ್ಲಿ ದ್ಯೂತವನ್ನಾಡುತ್ತಿದ್ದಾಗ ದುರ್ಯೋಧನನ ಹಿತೈಷಿ ಕರ್ಣನ

ಕಠೋರ ಚುಚ್ಚುಮಾತುಗಳನ್ನು ಕೇಳಿ ಉಂಟಾದ ನನ್ನ ಕೋಪವು ಅವನ ಪಾದಗಳನ್ನು ನೋಡಿದೊಡನೆಯೇ ನಾಶವಾಗುತ್ತಿತ್ತು. ಕರ್ಣನ ಆ ಎರಡು ಪಾದಗಳು ಕುಂತಿಯ ಪಾದಗಳಂತಿದ್ದವು ಎಂದು ನನಗೆ ಅನ್ನಿಸುತ್ತಿತ್ತು. ಪೃಥೆಯ ಮತ್ತು ಅವನ ಪಾದಗಳ ಸಾದೃಶ್ಯತೆಯ ಕಾರಣವೇನೆಂದು ಎಷ್ಟೇ ಚಿಂತಿಸಿದರೂ ನನಗೆ ಆ ಕಾರಣವು ತಿಳಿದಿರಲಿಲ್ಲ. ಸಂಗ್ರಾಮದಲ್ಲಿ ಅವನ ರಥಚಕ್ರಗಳನ್ನು ಭೂಮಿಯು ಹೇಗೆ ನುಂಗಿಬಿಟ್ಟಳು? ನನ್ನ ಸಹೋದರನು ಹೇಗೆ ಶಪಿತನಾದನು? ಇದನ್ನು ನೀನು ನನಗೆ ಹೇಳಬೇಕು! ಭಗವನ್! ಅವೆಲ್ಲವನ್ನೂ ಯಥಾವತ್ತಾಗಿ ಕೇಳಬಯಸುತ್ತೇನೆ. ನೀನು ಲೋಕದಲ್ಲಿ ನಡೆದುಹೋದ ಮತ್ತು ನಡೆಯಲಿರುವ ಎಲ್ಲವನ್ನೂ ತಿಳಿದಿದ್ದೀಯೆ."

## ನಾರದನು ಕರ್ಣನ ರಹಸ್ಯಗಳನ್ನು ವಿವರಿಸಿದುದು

ಯುಧಿಷ್ಠಿರನು ಹೀಗೆ ಹೇಳಲು ಮಾತನಾಡುವವರಲ್ಲಿ ಶ್ರೇಷ್ಠ ಮುನಿ ನಾರದನು ಸೂತಜನು ಹೇಗೆ ಶಪಿತನಾದನೆನ್ನುದೆಲ್ಲವನ್ನೂ ಹೇಳಿದನು:

"ಭಾರತ! ರಣದಲ್ಲಿ ಕರ್ಣಾರ್ಜುನರು ಜಯಿಸಲಾರದವರು

ಯಾರೂ ಇಲ್ಲ ಎಂದು ನೀನು ಹೇಳಿದುದು ಸತ್ಯ. ದೇವತೆಗಳ ಈ ರಹಸ್ಯವನ್ನು ನಿನಗೆ ಹೇಳುತ್ತೇನೆ. ಹಿಂದೆ ನಡೆದುದನ್ನು ಕೇಳು. ಶಸ್ತ್ರಗಳಿಂದ ಪವಿತ್ರರನ್ನಾಗಿಸಿ ಕ್ಷತ್ರಿಯರನ್ನು ಸ್ವರ್ಗಕ್ಕೆ ಹೇಗೆ ಕರೆಯಿಸಿಕೊಳ್ಳಬೇಕೆಂದು ನಿಶ್ಚಯಿಸಿ ಸಂಘರ್ಷವನ್ನು ಹುಟ್ಟಿಸುವುದಕ್ಕೋಸ್ಕರ ಕನ್ಯೆ ಕುಂತಿಯಲ್ಲಿ ಗರ್ಭವನ್ನಿರಸಲಾಯಿತು. ತೇಜಾಯುಕ್ತನಾದ ಆ ಬಾಲಕನು ಸೂತಪುತ್ರತ್ವವನ್ನು ಪಡೆದನು. ನಿನ್ನ ಗುರುವಾದ ಆಂಗಿರಸ ಶ್ರೇಷ್ಠ ದ್ರೋಣನಲ್ಲಿ ಧನುರ್ವೇದವನ್ನು ಕಲಿತನು. ಅವನು ಭೀಮಸೇನನ ಬಲವನ್ನೂ, ಫಲ್ಗುನನ ಹಸ್ತಲಾಘವವನ್ನೂ, ನಿನ್ನ ಬುದ್ಧಿಯನ್ನೂ, ಯಮಳರ ವಿನಯವನ್ನೂ, ಗಾಂಡೀವಧನ್ವಿಯೊಡನೆ ವಾಸುದೇವನಿಗಿದ್ದ ಸಖ್ಯವನ್ನೂ, ನಿಮ್ಮ ಮೇಲೆ ಪ್ರಜೆಗಳಿಗಿದ್ದ ಅನುರಾಗವನ್ನೂ ನೋಡಿ ಬಾಲ್ಯದಲ್ಲಿಯೇ ಅಸೂಯೆಯಿಂದ ಸುಡುತ್ತಿದ್ದನು. ಬಾಲ್ಯದಲ್ಲಿಯೇ ಅವನು ರಾಜಾ ದುರ್ಯೋಧನನ ಸಖ್ಯದಲ್ಲಿ ಬಂದನು. ದೈವೇಚ್ಛೆಯಿಂದ ಸ್ವಭಾವತಃ ಅವನು ನಿತ್ಯವೂ ನಿಮ್ಮನ್ನು ದ್ವೇಷಿಸುತ್ತಿದ್ದನು. ಧನಂಜಯನು ಧನುರ್ವೇದವಿಧ್ಯೆಯಲ್ಲಿ ತನ್ನನ್ನೂ ಮೀರಿಸಿರುವುದನ್ನು ನೋಡಿ

ಕರ್ಣನು ರಹಸ್ಯದಲ್ಲಿ ದ್ರೋಣನ ಬಳಿಸಾರಿ ಹೀಗೆಂದನು: "ಅದನ್ನು ಹಿಂತೆಗೆದುಕೊಳ್ಳುವ ರಹಸ್ಯದೊಂದಿಗೆ ಬ್ರಹ್ಮಾಸ್ತ್ರವನ್ನು ತಿಳಿದುಕೊಳ್ಳಲು ಬಯಸುತ್ತೇನೆ. ಯುದ್ಧದಲ್ಲಿ ಅರ್ಜುನನ ಸಮನಾಗಬೇಕೆಂದು ನನ್ನ ನಿಶ್ಚಯ. ನಿಮ್ಮ ಸ್ನೇಹವು ನಿಶ್ಚಯವಾಗಿಯೂ ಪುತ್ರರಲ್ಲಿ ಮತ್ತು ಶಿಷ್ಯರಲ್ಲಿ ಸಮನಾಗಿದೆ. ಆದುದರಿಂದ ನನ್ನನ್ನು ಅಸ್ತ್ರಗಳಲ್ಲಿ ಅಸಂಪೂರ್ಣನೆಂದು ತಿಳಿದವರು ಕರೆಯುವಂತಾಗದಿರದಂತೆ ಅನುಗ್ರಹಿಸಿ." ಕರ್ಣನು ಹಾಗೆ ಹೇಳಲು ಕರ್ಣನ ದುರಾತ್ಮತೆಯನ್ನು ತಿಳಿದು, ಫಲ್ಗುನನ ಕುರಿತು ಪಕ್ಷಪಾತವಿದ್ದ ದ್ರೋಣನು ಅವನಿಗೆ ಹೇಳಿದನು: "ವ್ರತನಿರತನಾಗಿರುವ ಬ್ರಾಹ್ಮಣನಾಗಲೀ ತಪಸ್ವಿಯಾದ ಕ್ಷತ್ರಿಯನಾಗಲೀ ಬ್ರಹ್ಮಾಸ್ತ್ರವನ್ನು ತಿಳಿದುಕೊಳ್ಳಬಹುದು. ಬೇರೆ ಯಾರೂ ಎಂದೂ ಅದನ್ನು ತಿಳಿದುಕೊಳ್ಳಲಾರರು!"

ಆಂಗಿರಸ ಶ್ರೇಷ್ಠನು ಹೀಗೆ ಹೇಳಲು ಅವನನ್ನು ಪ್ರತಿಪೂಜಿಸಿ ಅನುಮತಿಯನ್ನು ಪಡೆದು ಕೂಡಲೇ ಮಹೇಂದ್ರ ಪರ್ವತದಲ್ಲಿದ್ದ ರಾಮನ ಬಳಿ ನಡೆದನು. ಅವನು ರಾಮನ ಬಳಿಸಾರಿ ಗೌರವದಿಂದ ಶಿರಸಾ ಸಮಸ್ಕರಿಸಿ "ನಾನು

ಭಾರ್ಗವ ವಂಶದ ಬ್ರಾಹ್ಮಣ!" ಎಂದು ಹೇಳಿದನು. ಗೋತ್ರ ಮೊದಲಾದ ಎಲ್ಲವನ್ನೂ ಕೇಳಿ ತಿಳಿದುಕೊಂಡು ರಾಮನು ಅವನನ್ನು "ಸ್ವಾಗತ! ಇಲ್ಲಿಯೇ ಇರು!" ಎಂದು ಅವನನ್ನು ಅತ್ಯಂತ ಪ್ರೀತಿಯಿಂದ ಸ್ವೀಕರಿಸಿದನು. ಉತ್ತಮ ಮಹೇಂದ್ರಪರ್ವತದಲ್ಲಿ ವಾಸಿಸುತ್ತಿರುವಾಗ ಗಂಧರ್ವ-ರಾಕ್ಷಸ-ಯಕ್ಷ-ದೇವತೆಗಳೊಂದಿಗೆ ಕರ್ಣನ ಸಂದರ್ಶನವೂ ಆಯಿತು. ಅಲ್ಲಿ ಅವನು ಭೃಗುಶ್ರೇಷ್ಠನಿಂದ ಯಥಾವಿಧಿಯಾಗಿ ಅಸ್ತ್ರಗಳನ್ನು ಕಲಿತುಕೊಂಡನು ಮತ್ತು ದೇವ-ಗಂಧರ್ವ-ರಾಕ್ಷಸರ ಪ್ರಿಯಪಾತ್ರನೂ ಆದನು.

ಒಮ್ಮೆ ಸೂತಜ ಕರ್ಣನು ಆಶ್ರಮ ಸಮೀಪದಲ್ಲಿ ಸಮುದ್ರತೀರದಲ್ಲಿ ಖಡ್ಗ-ಧನುಷ್ಪಾಣಿಯಾಗಿ ಒಬ್ಬನೇ ಸಂಚರಿಸುತ್ತಿದ್ದನು. ಅಲ್ಲಿ ಅವನು ಅಗ್ನಿಹೋತ್ರದಲ್ಲಿ ತೊಡಗಿದ್ದ ಯಾರೋ ಒಬ್ಬ ಬ್ರಹ್ಮವಾದಿನಿಯ ಹೋಮಧೇನುವನ್ನು ತಿಳಿಯದೇ ಆಕಸ್ಮಿಕವಾಗಿ ಕೊಂದುಬಿಟ್ಟನು. ತಾನು ತಿಳಿಯದೇ ಮಾಡಿದ ಆ ಕೃತ್ಯವನ್ನು ಬ್ರಾಹ್ಮಣನಿಗೆ ಹೇಳಿಕೊಂಡನು. ಅವನನ್ನು ಪ್ರಸನ್ನಗೊಳಿಸಲು ಕರ್ಣನು ಈ ಮಾತನ್ನಾಡಿದನು: "ಭಗವನ್! ಮೊದಲೇ ತಿಳಿದುಕೊಳ್ಳದೇ ಅಜ್ಞಾನದಿಂದ ನಿನ್ನ



ಈ ಹಸುವನ್ನು ಕೊಂದುಬಿಟ್ಟೆನು! ನನ್ನ ಮೇಲೆ ಕರುಣೆ ತೋರಬೇಕು" ಎಂದು ಪುನಃ ಪುನಃ ಕೇಳಿಕೊಂಡನು. ಆ ವಿಪ್ರನಾದರೋ ಕ್ರುದ್ಧನಾಗಿ ಅವನನ್ನು ಹೆದರಿಸುವನೋ ಎನ್ನುವಂತೆ ಹೀಗೆ ಹೇಳಿದನು: "ದುರ್ಮತೇ! ನಿನ್ನ ಈ ದುರಾಚಾರವು ವಧಾರ್ಹವು. ಇದರ ಫಲವನ್ನು ನೀನು ಪಡೆಯುತ್ತೀಯೆ! ಯಾರೊಂದಿಗೆ ನೀನು ನಿತ್ಯವೂ ಸ್ಪರ್ಧಿಸುತ್ತೀಯೋ ಮತ್ತು ಯಾರನ್ನು ಕೊಲ್ಲಲು ನೀನು ಅಹೋರಾತ್ರಿ ಪ್ರಯತ್ನಿಸುವೆಯೋ ಅವನೊಡನೆ

ಯುದ್ಧಮಾಡುವಾಗ ಪಾಪಿಯಾದ ನಿನ್ನ ರಥಚಕ್ರವನ್ನು ಭೂಮಿಯು ನುಂಗಿಬಿಡುತ್ತದೆ! ನೆಲದಲ್ಲಿ ಹುಗಿದುಹೋದ ಚಕ್ರವನ್ನು ನೋಡಿ ಕಂಗಾಲಾದ ನಿನ್ನ ಶಿರವನ್ನು ಶತ್ರುವು ವಿಕ್ರಮದಿಂದ ಕೆಳಗುರುಳಿಸುತ್ತಾನೆ! ಹೊರಟುಹೋಗುಮೂಢ! ಹೇಗೆ ನೀನು ಪ್ರಮತ್ತತೆಯಿಂದ ನನ್ನ ಗೋವನ್ನು ಸಂಹರಿಸಿದೆಯೋ ಹಾಗೆ ನೀನು ಪ್ರಮತ್ತನಾಗಿದ್ದಾಗ ಅನ್ಯನು ನಿನ್ನ ಶಿರವನ್ನು ಕೆಳಗುರುಳಿಸುತ್ತಾನೆ!" ಅನಂತರ ಕರ್ಣನು ಆ ದ್ವಿಜಸತ್ತಮನನ್ನು ಪುನಃ ಗೋವು-ಧನ-ರತ್ನಗಳಿಂದ ಪ್ರಸನ್ನಗೊಳಿಸಲು ಪ್ರಯತ್ನಿಸಲು, ಅವನು ಪುನಃ ಹೀಗೆ ಹೇಳಿದನು: "ಸರ್ವಲೋಕಗಳಿಗೂ ಇದನ್ನು ಸುಳ್ಳನ್ನಾಗಿಸಲು ಸಾಧ್ಯವಿಲ್ಲ! ಹೋಗು ಅಥವಾ ಇಲ್ಲಿಯೇ ಇರು! ನೀನು ಏನು ಮಾಡಿದರೂ ವ್ಯರ್ಥವೇ ಸರಿ!" ಬ್ರಾಹ್ಮಣನು ಹೀಗೆ ಹೇಳಲು ಕರ್ಣನು ದೈನ್ಯದಿಂದ ಅಧೋಮುಖನಾಗಿ ಅದನ್ನೇ ಮನಸ್ಸಿನಲ್ಲಿ ಚಿಂತಿಸುತ್ತಾ ಭಯಗೊಂಡವನಾಗಿ ರಾಮನ ಬಳಿ ಹೋದನು.

ಕರ್ಣನ ಬಾಹುವೀರ್ಯ, ಪರಿಶ್ರಮ, ಜಿತೇಂದ್ರಿಯತೆ ಮತ್ತು ಗುರುಶುಶ್ರೂಷೆಗಳಿಂದ ಭೃಗುಶಾರ್ದೂಲನು

ಸಂತುಷ್ಟನಾದನು. ಉತ್ತಮ ತಪೋನಿರತನಾಗಿದ್ದ ತಪಸ್ವಿ ರಾಮನು ಅವ್ಯಗ್ರ ಕರ್ಣನಿಗೆ ವಿಧಿವತ್ತಾಗಿ ಸಂಪೂರ್ಣ ಬ್ರಹ್ಮಾಸ್ತ್ರ ಪ್ರಯೋಗ-ಉಪಸಂಹಾರಗಳೊಂದಿಗೆ ಎಲ್ಲವನ್ನೂ ಉಪದೇಶಿಸಿದನು. ಬ್ರಹ್ಮಾಸ್ತ್ರವನ್ನು ಕಲಿತುಕೊಂಡ ಅದ್ಭುತವಿಕ್ರಮಿ ಕರ್ಣನು ಭೃಗುವಿನ ಆ ಆಶ್ರಮದಲ್ಲಿ ಸಂತೋಷದಿಂದಲೇ ಇದ್ದುಕೊಂಡು ಧನುರ್ವೇದವನ್ನು ಹಸ್ತಗತಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದನು.

ಅನಂತರ ಒಮ್ಮೆ ರಾಮನು ಕರ್ಣನ ಸಹಿತ ಆಶ್ರಮದ ಬಳಿಯಲ್ಲಿಯೇ ತಿರುಗಾಡುತ್ತಿದ್ದನು. ಆ ಧೀಮಂತನು ಉಪವಾಸದಿಂದ ಕೃಶನಾಗಿದ್ದನು. ಅವನ ಮನಸ್ಸೂ ಕೂಡ ಬಹಳವಾಗಿ ಆಯಾಸಗೊಂಡಿತ್ತು. ಆಗ ಗುರು ಜಾಮದಗ್ನಿಯು ಸೌಹಾರ್ದತೆಯು ಬೆಳೆದಿದ್ದ ಕರ್ಣನ ತೊಡೆಯ ಮೇಲೆ ತನ್ನ ಶಿರವನ್ನಿತ್ತು ವಿಶ್ವಾಸದಿಂದ ಮಲಗಿದನು. ಅದೇ ಸಮಯದಲ್ಲಿ ಕಫ, ಮೇಧಸ್ಸು, ಮಾಂಸ-ರಕ್ತಗಳನ್ನೇ ಭುಂಜಿಸುವ, ದಾರುಣವಾಗಿ ಕಚ್ಚಬಲ್ಲ, ದಾರುಣ ಕ್ರಿಮಿಯೊಂದ ಕರ್ಣನ ಬಳಿ ಬಂದಿತು. ರಕ್ತಾಹಾರಿಯಾದ ಆ ಕ್ರಿಮಿಯು ಅವನ ತೊಡೆಯ ಮೇಲೆ ಕುಳಿತು ತೊಡೆಯನ್ನು ಕೊರೆಯ ತೊಡಗಿತು.



ಗುರುವಿನ ಭಯದಿಂದ ಅದನ್ನು ಎತ್ತಿ ಒಗೆಯಲು ಅಥವಾ ಕೊಲ್ಲಲು ಅವನಿಗೆ ಸಾಧ್ಯವಾಗಲಿಲ್ಲ. ಆ ಕೃಮಿಯು ತನ್ನನ್ನು ಕೊರೆಯುತ್ತಿದ್ದರೂ ಗುರುವಿಗೆ ಎಚ್ಚರವಾಗಬಹುದೆಂಬ ಶಂಕೆಯಿಂದ ಸೂತಜನು ಅದನ್ನು ಉಪೇಕ್ಷಿಸಿದನು.

ವೇದನೆಯು ಸಹಿಸಲಸಾಧ್ಯವಾಗಿದ್ದರೂ ಕರ್ಣನು ಧೈರ್ಯದಿಂದ ಅದನ್ನು ಸಹಿಸಿಕೊಂಡು, ತನ್ನ ದೇಹವನ್ನು ಕಂಪಿಸದೇ ಭಾರ್ಗವನನ್ನು ತೊಡೆಯಮೇಲೆ ಮಲಗಿಸಿಕೊಂಡೇ ಇದ್ದನು. ಕರ್ಣನ ತೊಡೆಯಿಂದ ಹರಿಯುತ್ತಿದ್ದ ರಕ್ತವು ಭೃಗೂದ್ವಹನನ್ನು ಸ್ಪರ್ಶಿಸಲು ಆ ತೇಜಸ್ವಿಯು ಎಚ್ಚೆದ್ದು ಸಂತಪ್ತನಾಗಿ ಹೇಳಿದನು: "ಅಯ್ಯೋ! ರಕ್ತಸ್ಪರ್ಶದಿಂದ ನಾನು ಅಶುಚಿಯಾಗಿಬಿಟ್ಟೆನು! ನೀನೇನು ಮಾಡಿಬಿಟ್ಟೆ? ಭಯವನ್ನು ತೊರೆದು ಯಥಾವತ್ತಾಗಿ ಏನಾಯಿತೆಂದು ನನ್ನೊಡನೆ ಹೇಳು!" ಕರ್ಣನು ಅವನಿಗೆ ಕ್ರಿಮಿಯು ತನ್ನ ತೊಡೆಯನ್ನು ಕೊರೆದು ತಿನ್ನುತ್ತಿದ್ದುದನ್ನು ಹೇಳಿದನು. ರಾಮನೂ ಕೂಡ ಹಂದಿಯಂತಿದ್ದ ಆ ಕ್ರಿಮಿಯನ್ನು ನೋಡಿದನು. ಎಂಟು ಕಾಲುಗಳಿದ್ದ, ತೀಕ್ಷ್ಣ ಹಲ್ಲುಗಳಿದ್ದ, ಸೂಜಿಗಳಂಥ ರೋಮಗಳಿಂದ ಆವೃತವಾಗಿದ್ದ, ಅಂಗಾಂಗಗಳನ್ನು ಸಂಕೋಚಿಸಿಕೊಂಡಿದ್ದ ಆ ಕ್ರಿಮಿಯು ಅಲರ್ಕ ಎಂಬ ನಾಮದಿಂದ ತಿಳಿಯಲ್ಪಟ್ಟಿತ್ತು. ರಾಮನ ದೃಷ್ಟಿಮಾತ್ರದಿಂದಲೇ ಕರ್ಣನ ರಕ್ತದಿಂದ ತೋಯ್ದುಹೋಗಿದ್ದ ಆ ಕೃಮಿಯು ಪ್ರಾಣವನ್ನು ತೊರೆಯಿತು.

ಅದೊಂದು ಅದ್ಭುತವಾಗಿತ್ತು.

ಆಗ ಅಂತರಿಕ್ಷದಲ್ಲಿ ಕರಾಲ ರೂಪಧರಿಸಿದ್ದ, ಕೆಂಪುಕುತ್ತಿಗೆಯ, ಕಪ್ಪು ದೇಹದ, ಮೇಘವಾಹನ ರಾಕ್ಷಸನು ಕಾಣಿಸಿಕೊಂಡನು. ಪೂರ್ಣಮನಸ್ಕನಾದ ಅವನು ರಾಮನಿಗೆ ಕೈಮುಗಿದು ಹೇಳಿದನು: "ಭೃಗುಶಾರ್ದೂಲ! ನಿನಗೆ ಮಂಗಳವಾಗಲಿ! ಎಲ್ಲಿಂದ ಬಂದಿದ್ದೆನೋ ಅಲ್ಲಿಗೆ ಹೊರಟು ಹೋಗುತ್ತೇನೆ! ಈ ನರಕದಿಂದ ನೀನು ನನಗೆ ಬಿಡುಗಡೆಯನ್ನು ನೀಡಿರುವೆ! ನಿನಗೆ ಮಂಗಳವಾಗಲಿ! ನೀನು ನನಗೆ ಪ್ರಿಯವಾದುದನ್ನೇ ಮಾಡಿ ಸಂತೋಷವನ್ನಿತ್ತಿರುವೆ!" ಮಹಾಬಾಹು ಜಾಮದಗ್ನ್ಯ ಪ್ರತಾಪವಾನನು ಅವನಿಗೆ ಹೇಳಿದನು: "ನೀನು ಯಾರು? ಯಾವ ಕಾರಣದಿಂದ ಈ ನರಕದಲ್ಲಿ ಬಿದ್ದಿರುವೆ? ಅದನ್ನು ಹೇಳು!" ಅವನು ಹೇಳಿದನು: "ಅಯ್ಯಾ! ನಾನು ಹಿಂದೆ ಸತ್ಯಯುಗದಲ್ಲಿ ಗೃತ್ಸ ಎಂಬ ಹೆಸರಿನ ಮಹಾಸುರನಾಗಿದ್ದೆನು. ವಯಸ್ಸಿನಲ್ಲಿ ನಾನು ಭೃಗುವಿನ ಸಮನಾಗಿದ್ದೆನು. ಭೃಗುವಿನ ಪ್ರಿಯ ಭಾರ್ಯೆಯನ್ನು ನಾನು ಬಲಾತ್ಕಾರದಿಂದ ಅಪಹರಿಸಿದ್ದೆನು. ಆ ಮಹರ್ಷಿಯ ಶಾಪದಿಂದ ಕ್ರಿಮಿಯಾಗಿ ಭೂಮಿಯ ಮೇಲೆ ಬಿದ್ದೆನು. ಕ್ರೋಧಿತನಾದ ನಿನ್ನ ಮುತ್ತಜ್ಜನು

ನನಗೆ "ಮೂತ್ರ-ಕಫಗಳನ್ನು ತಿನ್ನುತ್ತಾ ನೀನು ಪಾಪ ನರಕದಲ್ಲಿ ಬೀಳುವೆ!" ಎಂದು ಹೇಳಿದನು. "ಬ್ರಹ್ಮನ್! ಈ ಶಾಪವು ಅಂತ್ಯವಾಗುವಂತೆ ಅನುಗ್ರಹಿಸು!" ಎಂದು ನಾನು ಕೇಳಿಕೊಳ್ಳಲು "ಭಾರ್ಗವ ರಾಮನಿಂದ ಶಾಪವಿಮೋಚನೆಯಾಗುತ್ತದೆ" ಎಂದು ಭೃಗುವು ಹೇಳಿದನು. ಯಾವರೀತಿಯ ಕುಶಲವನ್ನೂ ಕಾಣದೇ ನಾನು ಈ ದುರ್ಗತಿಯನ್ನು ಅನುಭವಿಸಿದೆನು. ಸಾಧುವೇ! ನಿನ್ನ ಸಮಾಗಮದಿಂದಾಗಿ ನಾನು ಈ ಪಾಪಜನ್ಮದಿಂದ ಮುಕ್ತನಾಗಿದ್ದೇನೆ!" ಹೀಗೆ ಹೇಳಿ ರಾಮನಿಗೆ ನಮಸ್ಕರಿಸಿ ಮಹಾಸುರನು ಹೊರಟುಹೋದನು.

ರಾಮನಾದರೋ ಕ್ರೋಧದಿಂದ ಕರ್ಣನಿಗೆ ಹೀಗೆ ಹೇಳಿದನು: "ಮೂಢ! ಇಂಥಹ ಅತಿದುಃಖವನ್ನು ಬ್ರಾಹ್ಮಣನಾದವನು ಎಂದಿಗೂ ಸಹಿಸಿಕೊಳ್ಳಲಾರ! ನಿನ್ನ ಈ ಧೈರ್ಯವು ಕ್ಷತ್ರಿಯನದ್ದೇ! ನೀನಾಗಿಯೇ ಸತ್ಯವನ್ನು ಹೇಳು!" ಶಾಪಕ್ಕೆ ಹೆದರಿದ ಕರ್ಣನು ಅವನನ್ನು ಪ್ರಸನ್ನಗೊಳಿಸುತ್ತಾ ಹೇಳಿದನು: "ಭಾರ್ಗವ! ಬ್ರಾಹ್ಮಣ-ಕ್ಷತ್ರಿಯರಿಗೆ ಭಿನ್ನರಾದ ಸೂತರಲ್ಲಿ ಹುಟ್ಟಿದವನೆಂದು ತಿಳಿ. ರಾಧೇಯ ಕರ್ಣನೆಂದು ಭುವಿಯಲ್ಲಿ



ಜನರು ನನ್ನನ್ನು ಕರೆಯುತ್ತಾರೆ. ಅಸ್ತ್ರಲೋಭಿಯಾದ ನನ್ನ ಮೇಲೆ ಕುರುಣೆತೋರಿಸು ! ವೇದವಿದ್ಯೆಗಳನ್ನು ನೀಡುವ ಪ್ರಭು ಗುರುವು ತಂದೆಯಂತೆ ಎಂದು ನನಗೆ ಸಂದೇಹವಿರಲಿಲ್ಲ. ಆದುದರಿಂದ ನನ್ನದು ಭಾರ್ಗವ ಗೋತ್ರವೆಂದು ಹೇಳಿ ನಿನ್ನ ಬಳಿ ಬಂದೆ !" ನೆಲದ ಮೇಲೆ ಬಿದ್ದು ದೀನನಾಗಿ ಕೈಮುಗಿದು

ನಡುಗುತ್ತಿದ್ದ ಅವನಿಗೆ ರೋಷದಿಂದ ನಗುತ್ತಿರುವನೋ ಎನ್ನುವಂತೆ ಆ ಭೃಗುಶ್ರೇಷ್ಠನು ಹೇಳಿದನು: “ಮೂಢ! ಅಸ್ತ್ರಲೋಭದಿಂದ ನೀನು ನನ್ನೊಡನೆ ಸುಳ್ಳಾಗಿ ನಡೆದುಕೊಂಡಿದುದರಿಂದ ನಿನ್ನ ವಧೆಯ ಕಾಲವಲ್ಲದಾಗ ಮತ್ತು ನಿನ್ನ ಸಮಾನರೊಡನೆ ಯುದ್ಧಮಾಡುವಾಗ ಮಾತ್ರ ಬ್ರಹ್ಮಾಸ್ತ್ರವು ನಿನಗೆ ಹೊಳೆಯುತ್ತದೆಯೆಂದು ತಿಳಿದುಕೋ! ಅಬ್ರಾಹ್ಮನಲ್ಲಿ ಬ್ರಹ್ಮಾಸ್ತ್ರವು ಎಂದೂ ನಿಲ್ಲುವುದಿಲ್ಲವೆನ್ನುವುದು ಸತ್ಯ! ಅನೃತವಾದಿಗೆ ಇಲ್ಲಿ ಯಾವ ಸ್ಥಾನವೂ ಇಲ್ಲ. ಕೂಡಲೇ ಇಲ್ಲಿಂದ ಹೊರಟು ಹೋಗು! ಯುದ್ಧದಲ್ಲಿ ನಿನ್ನ ಸಮಾನನಾದ ಕ್ಷತ್ರಿಯನು ಭುವಿಯಲ್ಲಿಯೇ ಇರುವುದಿಲ್ಲ!” ರಾಮನು ಹೀಗೆ ಹೇಳಲು ನ್ಯಾಯರೀತಿಯಲ್ಲಿ ಅವನಿಂದ ಬೀಳ್ಕೊಂಡು ದುರ್ಯೋಧನನ ಬಳಿಸಾರಿ “ನಾನು ಅಸ್ತ್ರವಿದ್ಯಾಪಾರಂಗತನಾಗಿದ್ದೇನೆ!” ಎಂದು ಹೇಳಿದನು. ಭಾರ್ಗವನಂದನನಿಂದ ಆ ಅಸ್ತ್ರವನ್ನು ಪಡೆದು ಕರ್ಣನು ದುರ್ಯೋಧನನೊಂದಿಗೆ ಆನಂದಿಸಿದನು.

ಅನಂತರ ಒಮ್ಮೆ ಕಲಿಂಗದೇಶದ ರಾಜ ಚಿತ್ರಾಂಗದನಲ್ಲಿಗೆ ಸ್ವಯಂವರಕ್ಕೆಂದು ರಾಜರು ಬಂದು ಸೇರಿದರು. ಆ ನಗರದ

ಹೆಸರು ಶ್ರೀಮದ್ರಾಜಪುರವೆಂದಿತ್ತು. ಅಲ್ಲಿಗೆ ಕನ್ಯೆಗೋಸ್ಕರವಾಗಿ ನೂರಾರು ರಾಜರು ಆಗಮಿಸಿದರು. ಸರ್ವ ಪಾರ್ಥಿವರೂ ಅಲ್ಲಿ ಸೇರಿರುವರೆಂದು ಕೇಳಿದ ದುರ್ಯೋಧನನು ಕರ್ಣನೊಂದಿಗೆ ಕಾಂಚನ ರಥದಲ್ಲಿ ಕುಳಿತು ಹೋದನು. ನಡೆಯುತ್ತಿದ್ದ ಆ ಸ್ವಯಂವರ ಮಹೋತ್ಸವಕ್ಕೆ ಕನ್ಯೆಗಾಗಿ ಈ ಎಲ್ಲ ನೃಪತಿಯರು ಸೇರಿದ್ದರು: ಶಿಶುಪಾಲ, ಜರಾಸಂಧ, ಭೀಷ್ಮಕ, ವಕ್ರ, ಕಪೋತರೋಮ, ನೀಲ, ರುಕ್ಮಿ, ಸ್ತ್ರೀರಾಜ್ಯಾಧಿಪತಿ ಸೃಗಾಲ, ಅಶೋಕ, ಶತಧನ್ವ, ಭೋಜ ಮತ್ತು ವೀರನೆನ್ನುವ ರಾಜ. ಇವರಲ್ಲದೇ ಇನ್ನೂ ಇತರ ಅನೇಕ ದಕ್ಷಿಣದೇಶದವರು, ಮ್ಲೇಚ್ಛರು, ಆರ್ಯರು, ಪೂರ್ವೋತ್ತರ ದಿಕ್ಕಿನ ರಾಜರು ಬಂದಿದ್ದರು. ಅವರೆಲ್ಲರೂ ಕಾಂಚನ ಅಂಗದಗಳನ್ನೂ, ಚಿನ್ನದ ಹಾರಗಳನ್ನೂ ಧರಿಸಿದ್ದರು. ಎಲ್ಲರ ದೇಹಗಳೂ ಕಾಂತಿಯುಕ್ತವಾಗಿದ್ದವು ಮತ್ತು ಎಲ್ಲರೂ ವ್ಯಾಘ್ರರಂತೆ ಮದೋತ್ಕಟರಾಗಿದ್ದರು. ಆ ರಾಜರು ಕುಳಿತುಕೊಂಡಿರಲು ಕನ್ಯೆಯು ಅನೇಕ ಸೇವಕಿಯರಿಂದ ಸುತ್ತುವರೆಯಲ್ಪಟ್ಟು ರಂಗವನ್ನು ಪ್ರವೇಶಿಸಿದಳು. ರಾಜರ ಹೆಸರುಗಳನ್ನು ಹೇಳುತ್ತಿರುವಾಗ ಆ ವರವರ್ಣಿನೀ ಕನ್ಯೆಯು

ಧಾರ್ತರಾಷ್ಟ್ರ ದುರ್ಯೋಧನನನ್ನು ದಾಟಿ ಮುಂದುವರೆದಳು. ಆ ರೀತಿ ಅವಳು ತನ್ನನ್ನು ದಾಟಿಹೋದುದನ್ನು ಕೌರವ್ಯ ದುರ್ಯೋಧನನು ಸಹಿಸಿಕೊಳ್ಳಲಿಲ್ಲ. ಅಲ್ಲಿದ್ದ ನರಾಧಿಪರನ್ನು ಕಡೆಗಣಿಸಿ ಅವನು ಆ ಕನ್ಯೆಯನ್ನು ತಡೆದನು. ಭೀಷ್ಮ-ದ್ರೋಣರ ಆಶ್ರಯವನ್ನು ಪಡೆದಿದ್ದ ವೀರ್ಯಮದದಿಂದ ಮತ್ತನಾಗಿದ್ದ ಅವನು ಆ ಕನ್ಯೆಯನ್ನು ರಥದಲ್ಲಿ ಕುಳ್ಳಿರಿಸಿಕೊಂಡು ಅಪಹರಿಸಿದನು. ಆಗ ಗೋಧಾಂಗುಲಿಗಳನ್ನು ಕಟ್ಟಿಕೊಂಡು ಖಡ್ಗಧಾರಿಯಾಗಿ ರಥವೇರಿ ಶಸ್ತ್ರಭೃತರಲ್ಲಿ ಶ್ರೇಷ್ಠ ಕರ್ಣನು ಅವನನ್ನು ಅನುಸರಿಸಿ ಹೋದನು. ಆಗ ರಾಜರ ಮಹಾ ಯುದ್ಧವೇ ನಡೆಯಿತು. ಕುಪಿತರಾದ ರಾಜರು ಕವಚಗಳನ್ನು ಧರಿಸಿ ರಥಗಳನ್ನು ಸಿದ್ಧಗೊಳಿಸಿದರು. ಮೇಘಗಳು ಪರ್ವತಗಳ ಮೇಲೆ ಹೇಗೋ ಹಾಗೆ ಸಂಕ್ರುದ್ಧರಾದ ಅವರು ಕರ್ಣ-ದುರ್ಯೋಧನರ ಮೇಲೆ ಶರವರ್ಷಗಳನ್ನು ಸುರಿಸಿದರು. ಕರ್ಣನು ತನ್ನ ಮೇಲೆ ಬೀಳುತ್ತಿದ್ದ ಅವರ ಬಾಣಗಳನ್ನು ಒಂದೊಂದಾಗಿ ಕ್ಷುರದಿಂದ ಕತ್ತರಿಸಿ ಅವರ ಧನುಸ್ಸು-ಬತ್ತಳಿಕೆಗಳನ್ನೂ ಭೂಮಿಯ ಮೇಲೆ ಬೀಳಿಸಿದನು. ಆಗ

ಕೆಲವರು ಧನುಸ್ಸುಗಳನ್ನು ಕಳೆದುಕೊಂಡಿದ್ದರು. ಕೆಲವರು ಬಾಣಗಳಲ್ಲಿದೇ ಕೇವಲ ಧನುಸ್ಸುಗಳನ್ನು ಎತ್ತಿ ಹಿಡಿದಿದ್ದರು. ಕೆಲವರು ಬಾಣಗಳನ್ನೂ, ರಥ-ಶಕ್ತಿ-ಗದೆಗಳನ್ನೂ ಕಳೆದುಕೊಂಡಿದ್ದರು. ಪ್ರಹರಿಗಳಲ್ಲಿ ಶ್ರೇಷ್ಠ ಕರ್ಣನು ತನ್ನ ಹಸ್ತಲಾಘವದಿಂದ ಅವರನ್ನು ಆಯುಧಹೀನರನ್ನಾಗಿಸಿ, ಅವರ ಸಾರಥಿಗಳನ್ನೂ ಸಂಹರಿಸಿ, ಆ ನರಾಧಿಪರನ್ನು ಇನ್ನೂ ಹೆಚ್ಚಿನ ಕಷ್ಟಗಳಿಗೀಡುಮಾಡಿದನು. ಸ್ವಯಂ ರಾಜರೇ ಹೋಗು ಹೋಗೆಂದು ಕುದುರೆಗಳನ್ನು ಓಡಿಸುತ್ತಾ, ಭಗ್ನಮಾನಸರಾಗಿ ರಣವನ್ನು ತೊರೆದು ಹೊರಟು ಹೋದರು. ದುರ್ಯೋಧನನಾದರೋ ಕರ್ಣನಿಂದ ರಕ್ಷಿಸಲ್ಪಟ್ಟು ಸಂತೋಷದಿಂದ ಕನ್ಯೆಯನ್ನು ಕರೆದುಕೊಂಡು ಹಸ್ತಿನಾಪುರ ನಗರಕ್ಕೆ ಪ್ರಯಾಣಿಸಿದನು.

ಸರ್ವತ್ರ ಖ್ಯಾತವಾಗಿದ್ದ ಕರ್ಣನ ಬಲವನ್ನು ಕೇಳಿ ಮಗಧ ದೇಶದ ರಾಜ ಮಹೀಪತಿ ಜರಾಸಂಧನು ಅವನನ್ನು ದ್ವೈರಥಯುದ್ಧಕ್ಕೆ ಆಹ್ವಾನಿಸಿದನು. ದಿವ್ಯಾಸ್ತ್ರಗಳಲ್ಲಿ ಪರಿಣಿತರಾಗಿದ್ದ ಅವರಿಬ್ಬರ ನಡುವೆ ಯುದ್ಧವು ಪ್ರಾರಂಭವಾಯಿತು. ಯುದ್ಧದಲ್ಲಿ ನಾನಾ ಪ್ರಹಾರಗಳಿಂದ

ಅನ್ಯೋನ್ಯರನ್ನು ತೋಯಿಸಿದರು. ಬಾಣಗಳು ಮುಗಿದುಹೋಗಲು, ಧನುಸ್ಸೂ ಇಲ್ಲವಾಗಲು, ಮತ್ತು ಖಡ್ಗಗಳು ತುಂಡಾಗಲು ಆ ಇಬ್ಬರು ಬಲಾನ್ವಿತರೂ ನೆಲದ ಮೇಲೆ ನಿಂತು ಬಾಹುಯುದ್ಧದಲ್ಲಿ ತೊಡಗಿದರು. ಬಾಹುಕಂಟಕ ಯುದ್ಧದಲ್ಲಿ ತೊಡಗಿದ್ದ ಕರ್ಣನು ಜರೆಯು ಜೋಡಿಸಿದ್ದ ಜರಾಸಂಧನ ಸಂಧಿಬಂಧವನ್ನು ಭೇದಿಸತೊಡಗಿದನು. ತನ್ನ ಶರೀರವು ವಿಕಾರವಾಗುತ್ತಿರುವನ್ನು ನೋಡಿ ಆ ನೃಪತಿಯು ವೈರವನ್ನು ತೊರೆದು "ನಿನ್ನಿಂದ ನಾನು ಪ್ರೀತನಾಗಿದ್ದೇನೆ!" ಎಂದು ಕರ್ಣನಿಗೆ ಹೇಳಿದನು. ಅವನು ಪ್ರೀತಿಯಿಂದ ಕರ್ಣನಿಗೆ ಮಾಲಿನೀ ನಗರವನ್ನು ಕೊಟ್ಟನು. ಶತ್ರುವಿಜಯಿ ಅಂಗದ ರಾಜನು ಅದನ್ನು ಆಳಿದನು. ಪರಬಲಾರ್ದನ ಕರ್ಣನು ದುರ್ಯೋಧನನ ಅನುಮತಿಯಂತೆ ಚಂಪಾಪುರವನ್ನೂ ಆಳುತ್ತಿದ್ದನು. ಹೀಗೆ ಶಸ್ತ್ರಪ್ರತಾಪದಿಂದ ಅವನು ಭೂಮಿಯಲ್ಲಿ ಖ್ಯಾತನಾದನು.

ನಿನ್ನ ಹಿತಕ್ಕಾಗಿ ಸುರೇಂದ್ರನು ಅವನ ಕವಚ-ಕುಂಡಲಗಳನ್ನು ಭಿಕ್ಷೆಯಾಗಿ ಬೇಡಿದನು. ದೇವಮಾಯೆಯಿಂದ ಮೋಹಿತನಾದ ಅವನು ಹುಟ್ಟುವಾಗಲೇ ಇದ್ದಿದ್ದ ಕುಂಡಲಗಳನ್ನೂ

ಹುಟ್ಟುವಾಗಲೇ ಇದ್ದಿದ್ದ ಕವಚವನ್ನೂ ಇಂದ್ರನಿಗೆ ಕೊಟ್ಟುಬಿಟ್ಟನು. ಸಹಜ ಕವಚ-ಕುಂಡಲಗಳಿಂದ ವಿಹೀನನಾಗಿದ್ದ ಅವನನ್ನು ವಿಜಯ ಅರ್ಜುನನು ವಾಸುದೇವನ ಸಮಕ್ಷಮದಲ್ಲಿಯೇ ಸಂಹರಿಸಿದನು. ಬ್ರಾಹ್ಮಣನ ಮತ್ತು ಮಹಾತ್ಮ ರಾಮನ ಶಾಪದಿಂದ, ಕುಂತಿಯ ಮತ್ತು ಶತುಕ್ರತುವಿಗೆ ಮೋಸಹೋಗಿ ನೀಡಿದ ವರದಿಂದ, ರಥಾಥಿರಥರನ್ನು ಎಣಿಸುವಾಗ ಭೀಷ್ಮನು ಅವನನ್ನು ಅರ್ಧರಥನೆಂದು ಹೇಳಿದುದರಿಂದ, ಶಲ್ಯನ ತೇಜೋವಧೆಯಿಂದ, ವಾಸುದೇವನ ನೀತಿ, ಮತ್ತು ರದ್ರ-ದೇವರಾಜ-ಯಮ-ವರುಣ-ಕುಬೇರ-ದ್ರೋಣ ಮತ್ತು ಮಹಾತ್ಮಕೃಪರಿಂದ ದಿವ್ಯಾಸ್ತ್ರಗಳನ್ನು ಪಡೆದಿದ್ದ ಗಾಂಡೀವ ಧನ್ವಿ ಇವೆಲ್ಲ ಕಾರಣಗಳಿಂದ ದಿವಾಕರ ಸಮಾನ ಕಾಂತಿಯಿದ್ದ ವೈಕರ್ತನ ಕರ್ಣನು ಯುದ್ಧದಲ್ಲಿ ಹತನಾದನು. ಹೀಗೆ ಅನೇಕರಿಂದ ಶಾಪಗ್ರಸ್ತನಾಗಿ ಮತ್ತು ಅನೇಕರಿಂದ ವಂಚಿತನಾಗಿ ನಿನ್ನ ಅಣ್ಣ ನರವ್ಯಾಘ್ರನು ಯುದ್ಧದಲ್ಲಿ ನಿಧನಹೊಂದಿದನು. ಅವನಿಗಾಗಿ ಶೋಕಿಸಬೇಡ!”

## ಯುಧಿಷ್ಠಿರನು ಸ್ತ್ರೀಯರಿಗಿತ್ತ ಶಾಪ

ಹೀಗೆ ಹೇಳಿ ದೇವರ್ಷಿ ನಾರದನು ಸುಮ್ಮನಾದನು. ರಾಜರ್ಷಿ ಯುಧಿಷ್ಠಿರನಾದರೋ ಶೋಕಸಾಗರದಲ್ಲಿ ಮುಳುಗಿಹೋದನು. ದೀನಮನಸ್ಕನಾಗಿ ಮುಖ ಕೆಳಗೆಮಾಡಿಕೊಂಡು, ಆತುರನಾಗಿ ನಾಗದಂತೆ ನಿಟ್ಟುಸಿರುಬಿಡುತ್ತಾ ಕಣ್ಣೀರನ್ನು ಸುರಿಸುತ್ತಿದ್ದ ಅವನಿಗೆ ಶೋಕದಿಂದ ಸುಡುತ್ತಿದ್ದ, ದುಃಖದಿಂದ ಚೇತನವನ್ನೇ ಕಳೆದುಕೊಂಡಿದ್ದ ಕುಂತಿಯು ಮಧುರಭಾಷೆಯಲ್ಲಿ ಕಾಲಕ್ಕೆ ತಕ್ಕಂತಹ ಈ ಮಾತುಗಳನ್ನಾಡಿದಳುಃ

> “ಯುಧಿಷ್ಠಿರ! ನೀನು ಈ ರೀತಿ ಶೋಕಿಸಬಾರದು! ಶೋಕವನ್ನು ತೊರೆ! ನನ್ನ ಈ ಮಾತನ್ನು ಕೇಳು! ನೀವು ಸಹೋದರರರೆಂದು ಮೊದಲೇ ಅವನಿಗೆ ತಿಳಿಸಲು ನಾನೂ ಮತ್ತು ಅವನ ತಂದೆ ದೇವ ಭಾಸ್ಕರನೂ ಪ್ರಯತ್ನಿಸಿದ್ದೆವು. ಹಿತವನ್ನು ಬಯಸಿ ಸುಹೃದಯರಿಗೆ ಏನನ್ನು ಹೇಳಬೇಕೋ ಅದನ್ನೇ ದಿವಾಕರನು ಸ್ವಪ್ನದಲ್ಲಿ ಮತ್ತು ನನ್ನ ಸಮಕ್ಷಮದಲ್ಲಿ ಕರ್ಣನಿಗೆ ಹೇಳಿದ್ದನು. ದುರ್ಯೋಧನನೊಂದಿಗೆ ಅವನಿಗಿದ್ದ ಸ್ನೇಹದ ಕಾರಣದಿಂದಾಗಿ ಭಾನುವಾಗಲೀ ನಾನಾಗಲೀ ಕರ್ಣನು ನಿನ್ನೊಡನೆ ಸೇರಿಸುವಂತೆ ಅಥವಾ ಒಂದಾಗಿರುವಂತೆ ಮಾಡಲು ಶಕ್ಯರಾಗಲಿಲ್ಲ. ಅನಂತರ

ಕಾಲವಶದಿಂದಾಗಿ ಅವನು ನಿಮ್ಮೊಡನೆ ವೈರವನ್ನು ಬೆಳೆಸುವುದರಲ್ಲಿಯೇ ನಿರತನಾಗಿದ್ದನು ಮತ್ತು ನಿಮಗೆ ವಿರುದ್ಧವಾಗಿಯೇ ನಡೆದುಕೊಳ್ಳುತ್ತಿದ್ದನು. ಆದುದರಿಂದ ನಾನು ಅವನನ್ನು ಉಪೇಕ್ಷಿಸಿದೆ!”

ತಾಯಿಯು ಹೀಗೆ ಹೇಳಲು ಕಣ್ಣೀರುತುಂಬಿದ ಶೋಕವ್ಯಾಕುಲಚೇತನನಾಗಿದ್ದ ಧರ್ಮಾತ್ಮ ಧರ್ಮರಾಜನು

“ನೀನು ಈ ವಿಷಯವನ್ನು ರಹಸ್ಯವಾಗಿಯೇ ಇಟ್ಟಿದುದರಿಂದ ನಾನು ಬಹಳ ಪೀಡಿತನಾಗಿದ್ದೇನೆ!”

ಎಂದು ತಾಯಿಗೆ ಹೇಳಿದನು. ಅತಿ ದುಃಖ ಸಮನ್ವಿತನಾದ ಆ ಮಹಾತೇಜಸ್ವಿಯು ಸರ್ವಲೋಕಗಳಲ್ಲಿನ ಸ್ತ್ರೀಯರಿಗೆ “ರಹಸ್ಯವನ್ನು ಹಿಡಿದಿಟ್ಟುಕೊಳ್ಳಲಾರಿರಿ!” ಎಂದು ಶಪಿಸಿದನು.

# ಯುಧಿಷ್ಠಿರನ ವೈರಾಗ್ಯ

ತನ್ನ ಪುತ್ರ-ಪೌತ್ರರನ್ನೂ ಸಂಬಂಧಿ-ಸ್ನೇಹಿತರನ್ನೂ ನೆನಪಿಸಿಕೊಂಡು ರಾಜನು ಉದ್ವಿಗ್ನ ಹೃದಯಿಯಾಗಿ ಅಸ್ವಸ್ಥಚೇತನನಾದನು. ಆಗ

ಹೊಗೆಯಿಂದ ತುಂಬಿದ ಅಗ್ನಿಯಂತೆ ಶೋಕಪರೀತಾತ್ಮನಾದ ಆ ಧೀಮಾನ್ ರಾಜನು ಸಂತಾಪಪೀಡಿತನಾಗಿ ವೈರಾಗ್ಯವನ್ನು ತಾಳಿದನು. ಧರ್ಮಾತ್ಮ ಯುಧಿಷ್ಠಿರನಾದರೋ ಶೋಕವ್ಯಾಕುಲ ಚೇತನನಾಗಿ ಮಹಾರಥ ಕರ್ಣನನ್ನು ಸ್ಮರಿಸಿಕೊಂಡು ದುಃಖಸಂತಪ್ತನಾಗಿ ಶೋಕಿಸಿದನು. ದುಃಖ-ಶೋಕಗಳಿಂದ ಆವಿಷ್ಟನಾಗಿ ಪುನಃ ಪುನಃ ನಿಟ್ಟುಸಿರು ಬಿಡುತ್ತಾ ಶೋಕಕರ್ಶಿತನಾಗಿ ಅರ್ಜುನನನ್ನು ನೋಡಿ ಹೀಗೆಂದನು:

> “ಒಂದು ವೇಳೆ ನಾವು ವೃಷ್ಣಿ-ಅಂಧಕರ ಪುರದಲ್ಲಿ ಭಿಕ್ಷಾಟನೆಯನ್ನೇ ಮಾಡಿದ್ದರೆ ಬಾಂಧವರನ್ನು ನಿರ್ಮೂಲನ ಮಾಡಿ ಈ ದುರ್ಗತಿಯನ್ನು ಪಡೆಯುತ್ತಿರಲಿಲ್ಲ. ನಮ್ಮ ಶತ್ರುಗಳಾದ ಕೌರವರೇ ಸಮೃದ್ಧರೂ ಪರಮಾರ್ಥವುಳ್ಳವರೂ ಆಗಲಿಲ್ಲವೇ? ನಮ್ಮವರನ್ನೇ ಕೊಂದ ನಾವಾದರೋ ಯಾವ ಧರ್ಮಫಲವನ್ನು ಪಡೆದೆವು? ಯಾವುದರಿಂದಾಗಿ ನಾವು ಈ ಆಪತ್ತನ್ನು ಪಡೆದಿದ್ದೇವೋ ಆ ಕ್ಷತ್ರಿಯ ಆಚಾರಕ್ಕೆ ಧಿಕ್ಕಾರ! ಬಲವಂತಿಕೆಗೆ ಧಿಕ್ಕಾರ! ಕ್ರೋಧಕ್ಕೆ ಧಿಕ್ಕಾರ! ವನಚಾರಿಗಳಿಗೆ ಕ್ಷಮೆ, ಇಂದ್ರಿಯನಿಗ್ರಹ, ಶುದ್ಧಿ, ವಿರೋಧಿಸದಿರುವುದು, ಅಸೂಯೆಪಡದಿರುವುದು, ಅಹಿಂಸೆ ಮತ್ತು ಸತ್ಯವಚನಗಳೇ

ನಿತ್ಯವೂ ಸಾಧುವೆನಿಸಿಕೊಂಡಿರುವ ಧರ್ಮಗಳು. ನಾವಾದರೋ ರಾಜ್ಯವನ್ನು ಗಳಿಸಿ ಭೋಗಿಸುವ ಸಲುವಾಗಿ ಲೋಭ, ಮೋಹ, ದಂಭ-ದುರಭಿಮಾನಗಳನ್ನಾಶ್ರಯಿಸಿ ಈ ಅವಸ್ಥೆಯನ್ನು ಪಡೆದುಕೊಂಡಿದ್ದೇವೆ. ಭೂಮಿಯ ಆಸೆಯಿಂದಾಗಿ ಬಾಂಧವರು ಹತರಾಗಿರುವುದನ್ನು ನೋಡಿದರೆ ತ್ರೈಲೋಕ್ಯವೇ ನಮ್ಮ ರಾಜ್ಯವಾದರೂ ನಮಗೆ ಎಂದೂ ಸಂತೋಷವೆನಿಸುವುದಿಲ್ಲ! ಭೂಮಿಗಾಗಿ ನಾವು ಅವಧ್ಯರಾದ ಪೃಥ್ವೀಶರನ್ನು ಸಂಹರಿಸಿ ಈಗ ಬಾಂಧವರನ್ನು ಕಳೆದುಕೊಂಡು ಅರ್ಥವಿಹೀನರಾಗಿ ಜೀವಿಸಬೇಕಾಗಿದೆ! ಮಾಂಸದ ತುಂಡಿಗಾಗಿ ಕಚ್ಚಾಡುವ ನಾಯಿಗಳಂತೆ ನಾವು ಆಸೆಪಟ್ಟು ಯುದ್ಧಮಾಡಿದೆವು. ಆ ಮಾಂಸದ ತುಂಡನ್ನು ತಿನ್ನುವವರೇ ಇಲ್ಲವಾದಮೇಲೆ ಅದರ ಪ್ರಯೋಜನವಾದರೂ ಏನು? ಈ ಸಕಲ ಭೂಮಿಗಾಗಿಯಾಗಲೀ, ಸುವರ್ಣ ರಾಶಿಗಳಿಗಾಗಿಯಾಗಲೀ, ಸಮಸ್ತ ಗೋವು-ಕುದುರೆಗಳಿಗಾಗಿಯಾಗಲೀ ಇವರನ್ನು ಬಲಿಕೊಡಬಾರದಾಗಿತ್ತು! ಕಾಮ-ಕ್ರೋಧಗಳಿಂದ ಕೂಡಿದ್ದ, ಕ್ರೋಧ-ರೋಷಗಳಿಂದ ಕೂಡಿದ್ದ ಅವರು

ಮೃತ್ಯುಯಾನಗಳನ್ನೇರಿ ವೈವಸ್ವತಕ್ಷಯಕ್ಕೆ ತೆರಳಿದರು. ಪಿತೃಗಳು ತಪಸ್ಸು, ಬ್ರಹ್ಮಚರ್ಯೆ, ಸತ್ಯನಿಷ್ಠೆ, ಮತ್ತು ಕ್ಷಮೆಗಳನ್ನು ಆಚರಿಸಿಕೊಂಡು ಕಲ್ಯಾಣಗುಣಸಂಪನ್ನ ಮಕ್ಕಳನ್ನು ಬಯಸುತ್ತಾರೆ. ಹಾಗೆಯೇ ತಾಯಂದಿರೂ ಉಪವಾಸ, ಯಜ್ಞ, ವ್ರತ ಮತ್ತು ಅನೇಕ ಮಂಗಲ ಕಾರ್ಯಗಳ ಮೂಲಕ ಗುಣಶಾಲೀ ಪುತ್ರರನ್ನು ಪಡೆಯಲೋಸುಗ ಹತ್ತು ತಿಂಗಳ ಗರ್ಭವನ್ನು ಹೊರುತ್ತಾರೆ. ದೀನರಾದ ತಂದೆ-ತಾಯಿಯರು "ಚೆನ್ನಾದ ಮಗುವು ಹುಟ್ಟುವುದೇ? ಹುಟ್ಟಿದ ಮಗು ಜೀವಿಸುತ್ತದೆಯೇ? ಬೆಳೆದ ಮೇಲೆ ಬಲಶಾಲಿಗಳಾಗುತ್ತಾರೆಯೇ? ನಮಗೆ ಸುಖವನ್ನು ನೀಡುತ್ತಾರೆಯೇ?" ಎಂದೆಲ್ಲ ಆಸೆಗಳನ್ನಿಟ್ಟುಕೊಂಡು ಯೋಚಿಸುತ್ತಿರುತ್ತಾರೆ. ಅವರ ಪ್ರಯತ್ನ-ಆಕಾಂಕ್ಷೆಗಳು ಈ ಯುದ್ಧದಿಂದಾಗಿ ನಿಷ್ಫಲವಾಗಿಬಿಟ್ಟವು.
ಸುವರ್ಣಕುಂಡಲಗಳನ್ನು ಧರಿಸಿದ್ದ ಅವರ ಯುವ ಪುತ್ರರು ಹತರಾದರು! ಪಾರ್ಥಿವರು ಭೋಗಗಳನ್ನು ಭೋಗಿಸದೇ, ಪಿತೃ-ದೇವತೆಗಳ ಋಣಗಳನ್ನು ತೀರಿಸದೆಯೇ ವೈವಸ್ವತಕ್ಷಯಕ್ಕೆ ಹೋಗಿಬಿಟ್ಟರು! ತಂದೆ-ತಾಯಿಗಳು

ಹುಟ್ಟಿದ ಮಕ್ಕಳ ಬಲ-ರೂಪಗಳನ್ನು ಅನುಭವಿಸಿ ಸಂತೋಷಪಡಬೇಕೆಂದಿರುವಾಗಲೇ ನೃಪರು ಹತರಾಗಿ ಹೋದರು. ಕಾಮ-ಕ್ರೋಧಗಳಿಂದ ಕೂಡಿರುವವರು ಮತ್ತು ಕ್ರೋಧ-ಹರ್ಷಗಳಲ್ಲಿ ಸಮತೋಲನವನ್ನಿಟ್ಟುಕೊಂಡಿರದೇ ಇದ್ದವರು ಜನ್ಮಫಲವನ್ನು ಎಂದೂ ಯಾವಕಾರಣಕ್ಕೂ ಭೋಗಿಸಲಾರರು. ಕುರು-ಪಾಂಚಾಲರು ಹತರಾದರೂ ಹತರಾಗಿಲ್ಲ. ಆದರೆ ನಮ್ಮ ಕರ್ಮಗಳಿಂದ ನಾವು ಮಾತ್ರ ಅಧಮ ಲೋಕಗಳನ್ನು ಪಡೆದುಕೊಳ್ಳುತ್ತೇವೆ. ಲೋಕದ ವಿನಾಶಕ್ಕೇ ನಾವೇ ಕಾರಣವೆಂದು ಹೇಳುತ್ತಾರೆ.

ಆದರೆ ಇದಕ್ಕೆಲ್ಲ ಧೃತರಾಷ್ಟ್ರಪುತ್ರನ ದುಷ್ಟಕರ್ಮಗಳೇ ಸಂಪೂರ್ಣ ಕಾರಣವು. ದ್ವೇಷದಿಂದ ಅವನು ಸದೈವವೂ ವಂಚನೆಮಾಡುವುದನ್ನೇ ಯೋಚಿಸುತ್ತಿದ್ದನು. ಮಾಯೆಗಳನ್ನು ಬಳಸುತ್ತಿದ್ದನು. ಮಿಥ್ಯಾಚಾರಿಯಾಗಿದ್ದನು. ಸತತವೂ ನಮಗೆ ಅಪಕಾರ ಮಾಡುತ್ತಿದ್ದನು. ಬಯಸಿದ್ದಿದು ನಮಗೂ ಸಿಗಲಿಲ್ಲ, ಅವರಿಗೂ ದೊರಕಲಿಲ್ಲ. ನಾವೂ ಗೆಲ್ಲಲಿಲ್ಲ, ಅವರೂ ಗೆಲ್ಲಲಿಲ್ಲ. ಅವರು ಈ ಭೂಮಿಯನ್ನೂ, ನಾರಿಯರನ್ನೂ, ಗೀತವಾದ್ಯಗಳನ್ನೂ ಭೋಗಿಸಲಿಲ್ಲ. ಅವರು ಅಮಾತ್ಯರ

ಸಲಹೆಗಳನ್ನಾಗಲೀ ತಿಳಿದವರ ಹಿತವಚನಗಳನ್ನಾಗಲೀ ಕೇಳಲೇ ಇಲ್ಲ. ರತ್ನಗಳಾಗಲೀ, ಭೂಮಿಯಾಗಲೀ, ಕಪ್ಪ-ಕಾಣಿಕೆಗಳಾಗಲೀ ಅವರಿಗೆ ಸಂತೋಷವನ್ನು ನೀಡಲಿಲ್ಲ. ನಮ್ಮ ಸಮೃದ್ಧಿಯನ್ನು ನೋಡಿ ದುರ್ಯೋಧನನು ಬಿಳಿಚಿಕೊಂಡು ವಿವರ್ಣನಾಗಿ ಕೃಶನಾಗಿಬಿಟ್ಟಿದ್ದನು. ಅದನ್ನು ಸೌಬಲನು ನೃಪತಿ ಧೃತರಾಷ್ಟ್ರನಿಗೆ ನಿವೇದಿಸಿದನು. ತಂದೆಯು ಮಗನ ಮೇಲಿನ ಪ್ರೀತಿಯಿಂದಾಗಿ ಅವನ ದುಷ್ಟಯೋಜನೆಗಳಿಗೆ ಅನುಮತಿಯನ್ನಿತ್ತನು. ತಂದೆ ಗಾಂಗೇಯ ಮತ್ತು ವಿದುರರ ಮಾತುಗಳನ್ನೂ ತಿರಸ್ಕರಿಸಿದನು. ಇದರಿಂದಾಗಿಯೇ ಇಂದು ಧೃತರಾಷ್ಟ್ರನು ನನ್ನಂತೆಯೇ ಎಲ್ಲವನ್ನೂ ಕಳೆದುಕೊಂಡಿದ್ದಾನೆ. ಅದರಲ್ಲಿ ಸಂಶಯವೇ ಇಲ್ಲ. ಅಶುಚಿಯೂ, ಲುಬ್ಧನೂ, ಕಾಮವಶನಾಗಿ ನಡೆದುಕೊಳ್ಳುತ್ತಿದ್ದವನೂ ಆಗಿದ್ದ ಪುತ್ರನನ್ನು ನಿಯಂತ್ರಿಸದೇ ಧೃತರಾಷ್ಟ್ರನು ಆ ಸಹೋದರರ ಸಾವಿಗೆ ಕಾರಣನಾಗಿ ಉಜ್ವಲ ಯಶಸ್ಸಿನಿಂದ ಭ್ರಷ್ಟನಾಗಿದ್ದಾನೆ. ನಮ್ಮೊಡನೆ ಸದೈವವೂ ದ್ವೇಷಯುಕ್ತನಾಗಿದ್ದ ಆ ಪಾಪಬುದ್ಧಿ ಸುಯೋಧನನು ಈ ಇಬ್ಬರು ವೃದ್ಧರನ್ನೂ ಶೋಕಾಗ್ನಿಯಲ್ಲಿ

ನೂಕಿ ಬೀಳಿಸಿ ಹೊರಟು ಹೋದನು! ವೃಷ್ಣಿವೀರರಾದ ಕೃಷ್ಣ ಮತ್ತು ಸಾತ್ಯಕಿಯರ ಸನ್ನಿಧಿಯಲ್ಲಿ ಯುದ್ಧೋತ್ಸುಕನಾಗಿ ಆ ಕ್ಷುದ್ರ ದುರ್ಯೋಧನನು ಹೇಳಿದ ಮಾತನ್ನು ಕುಲೀನನಾದ ಯಾವ ಬಂಧುವು ತಾನೇ ಸುಹೃದಯರ ವಿಷಯದಲ್ಲಿ ಆಡುತ್ತಾನೆ? ಭಾಸ್ಕರನು ತೇಜಸ್ಸಿನಿಂದ ಸರ್ವ ದಿಕ್ಕುಗಳನ್ನೂ ಸುಡುವಂತೆ ನಮ್ಮದೇ ದೋಷದಿಂದಾಗಿ ನಾವು ಶಾಶ್ವತವಾಗಿ ವಿನಾಶಹೊಂದಿದೆವು. ದುಷ್ಟಮಂತ್ರಿಗಳ ಹಿಡಿತದಲ್ಲಿದ್ದ ನಮ್ಮ ಆ ವೈರಪುರುಷ ದುರ್ಯೋಧನನು ಮಾಡಿದ ಕರ್ಮಗಳಿಂದಾಗಿಯೇ ನಮ್ಮ ಈ ಕುಲವು ವಿನಾಶವಾಗಿಹೋಯಿತು. ಅವಧ್ಯರ ವಧೆಗೈದು ನಾವು ಲೋಕನಿಂದೆಗೆ ಪಾತ್ರರಾದೆವು. ಕುಲದ ಅಂತಕನಂತಿದ್ದ ದುರ್ಮತಿ ಪಾಪಕಾರಿಣಿ ದುರ್ಯೋಧನನನ್ನು ರಾಷ್ಟ್ರೇಶ್ವರನನ್ನಾಗಿ ಮಾಡಿ ರಾಜಾ ಧೃತರಾಷ್ಟ್ರನು ಇಂದು ಶೋಕಿಸುತ್ತಿದ್ದಾನೆ. ಶೂರರು ಹತರಾದರು. ಪಾಪಕರ್ಮವು ನಡೆದುಹೋಯಿತು. ರಾಷ್ಟ್ರವೂ ವಿನಾಶವಾಯಿತು. ಶತ್ರುಗಳನ್ನು ಸಂಹರಿಸಿ ಕ್ರೋಧವೇನೋ ಹೊರಟುಹೋಯಿತು. ಆದರೆ ಈ ಶೋಕವು ನನ್ನನ್ನು

ಪೀಡಿಸುತ್ತಿದೆ.

ಧನಂಜಯ ! ಮಾಡಿದ ಪಾಪವನ್ನು ಕಲ್ಯಾಣಕರ್ಮಗಳಿಂದ ಉಪಶಮನಗೊಳಿಸಬಹುದು. ಆದರೆ ತ್ಯಾಗಮಾಡಿದವನು ಪುನಃ ಪಾಪವನ್ನೇ ಮಾಡುವುದಿಲ್ಲ ಎಂದು ಶ್ರುತಿಗಳು ಹೇಳುತ್ತವೆ. ತ್ಯಾಗಿಯು ಜನನ-ಮರಣಗಳನ್ನೂ ಹೊಂದುವುದಿಲ್ಲವೆಂದು ಶ್ರುತಿಗಳು ಹೇಳುತ್ತವೆ. ತ್ಯಾಗಿಯು ನಿಯತ ಬುದ್ಧಿಯುಳ್ಳವನಾಗಿ ಬ್ರಹ್ಮಸಾಕ್ಷಾತ್ಕಾರವನ್ನು ಸುಲಭವಾಗಿ ಪಡೆದುಕೊಳ್ಳುತ್ತಾನೆ. ಜ್ಞಾನಸಮನ್ವಿತನಾದ ಮುನಿಯು ನಿರ್ದ್ವಂದ್ವನಾಗಿರುತ್ತಾನೆ. ನಿಮ್ಮೆಲ್ಲರ ಅನುಮತಿಯನ್ನು ಪಡೆದು ನಾನು ವನಕ್ಕೆ ಹೋಗುತ್ತೇನೆ. ತ್ಯಾಗಿಯಲ್ಲದವನಿಗೆ ಸಂಪೂರ್ಣ ಧರ್ಮಾಚರಣೆಯು ಶಕ್ಯವಿಲ್ಲವೆಂದು ಶ್ರುತಿಗಳು ಹೇಳುತ್ತವೆ. ಅದನ್ನು ನಾನು ಪ್ರತ್ಯಕ್ಷ್ಯವಾಗಿ ಕಂಡುಕೊಂಡಿದ್ದೇನೆ ಕೂಡ. ಪಡೆದುಕೊಳ್ಳಲು ಬಯಸುತ್ತಿದ್ದ ನಾನು ಪಾಪದ ರಾಶಿಯನ್ನೇ ಕೂಡಿಕೊಂಡೆನು. ಜನ್ಮ-ಮೃತ್ಯುಗಳಿಗೆ ಕಾರಣವಾದ ಇದು ಮುಕ್ತಿಯನ್ನು ನೀಡಲು ಶಕ್ಯವಿಲ್ಲವೆಂದು ಶ್ರುತಿಗಳು ಹೇಳುತ್ತವೆ. ಆ ಪಡೆದುಕೊಳ್ಳಬೇಕೆಂಬ ಆಸೆಯನ್ನು ಮತ್ತು ಸಂಪೂರ್ಣ

ರಾಜ್ಯವನ್ನು ತೊರೆದು ವಿಮುಕ್ತನಾಗಿ, ಶೋಕರಹಿತನಾಗಿ, ಮಮತಾರಹಿತನಾಗಿ ಕಾಡಿಗೆ ಹೊರಟುಹೋಗುತ್ತೇನೆ! ಕಂಟಕರನ್ನು ಕಳೆದುಕೊಂಡು ಕ್ಷೇಮದಿಂದಿರುವ ಈ ಭೂಮಿಯನ್ನು ನೀನು ಆಳು. ನನಗೆ ಈ ರಾಜ್ಯವಾಗಲೀ ಭೋಗವಾಗಲೀ ಯಾವ ಪ್ರಯೋಜನಕ್ಕೂ ಇಲ್ಲ."

ಹೀಗೆ ಹೇಳಿ ಧರ್ಮರಾಜ ಯುಧಿಷ್ಠಿರನು ಸುಮ್ಮನಾದನು.

ಆಗ ವಾದದಲ್ಲಿ ದೃಢ ಪರಾಕ್ರಮಿಯಾಗಿದ್ದ ಮಹಾತೇಜಸ್ವೀ ಐಂದ್ರಿ ಅರ್ಜುನನು ತನ್ನ ಉಗ್ರ ಪರಾಕ್ರಮವನ್ನು ತೋರಿಸುತ್ತಾ ಅವಡುಗಳನ್ನು ಕಚ್ಚುತ್ತಾ, ಗಹ-ಗಹಿಸಿ ನಗುತ್ತಾ ಈ ನೀತಿತರ ವಾಕ್ಯಗಳನ್ನಾಡಿದನು:

"ಅಯ್ಯೋ! ಅಮಾನುಷ ಕರ್ಮಗಳನ್ನು ಮಾಡಿ ಪಡೆದಿರುವ ಈ ಉತ್ತಮ ರಾಜ್ಯಲಕ್ಷ್ಮಿಯನ್ನು ತ್ಯಜಿಸಬೇಕೆಂದಿರುವ ನಿನ್ನ ಈ ನಿರ್ಧಾರವು ಅತ್ಯಂತ ದುಃಖಕರವೂ, ಕಷ್ಟಕರವೂ, ಮಿತಿಮೀರಿದುದೂ ಆಗಿದೆ. ಶತ್ರುಗಳನ್ನು ಸಂಹರಿಸಿ ಸ್ವಧರ್ಮದಿಂದ ಜಯಿಸಲ್ಪಟ್ಟಿರುವ ಈ ಭೂಮಿಯನ್ನು ಪಡೆದುಕೊಂಡ ನಂತರ ಎಲ್ಲ ಶತ್ರುಗಳನ್ನು ಕಳೆದುಕೊಂಡ ನೀನು ನಿನ್ನ ಅಲ್ಪಬುದ್ಧಿಯಿಂದ ಹೇಗೆ ತಾನೇ ತ್ಯಜಿಸಬಲ್ಲೆ?

ಹೇಡಿಗಾಗಲೀ ಸೋಮಾರಿಗಾಗಲಿ ರಾಜ್ಯವು ಹೇಗೆ ಲಭಿಸೀತು? ನಿನಗೆ ರಾಜ್ಯವು ಬೇಡವಾಗಿದ್ದರೆ ಯಾವಕಾರಣಕ್ಕಾಗಿ ಕ್ರೋಧಮೂರ್ಛಿತನಾಗಿ ಮಹೀಪಾಲರನ್ನು ವಧಿಸಿದೆ? ಎಲ್ಲ ಸಾಧನಗಳೆಲ್ಲವೂ ನಷ್ಟವಾಗಿರುವವನು, ದಟ್ಟ ದರಿದ್ರನು, ಪ್ರಪಂಚದಲ್ಲಿ ಹೇಳಹೆಸರಿಲ್ಲದವನು, ಪುತ್ರ-ಪಶುಗಳಿಲ್ಲದವನು ಭಿಕ್ಷೆಯ ಜೀವನವನ್ನು ನಡೆಸಲು ಅಪೇಕ್ಷಿಸುವುದು ಯೋಗ್ಯವಾಗಿದೆ. ನೃಪ! ಸಮೃದ್ಧ ರಾಜ್ಯವನ್ನು ತೊರೆದು, ಕಪಾಲವನ್ನು ಹಿಡಿದು, ಅತ್ಯಂತ ನೀಚವೃತ್ತಿಯಿಂದ ಜೀವಿಸುವ ನಿನ್ನನ್ನು ನೋಡಿ ಈ ಲೋಕವಾದರೂ ಏನೆಂದೀತು? ಪ್ರಭೋ! ಎಲ್ಲವನ್ನೂ ಪರಿತ್ಯಜಿಸಿ, ಮಂಗಳಕರ ಕಾರ್ಯಗಳೆಲ್ಲವುಗಳ ವಿಹೀನನಾಗಿ, ಓರ್ವ ಸಾಮಾನ್ಯನಂತೆ ಏಕೆ ಭಿಕ್ಷುಕನಂತೆ ತಿರುಗಲು ಬಯಸುತ್ತಿರುವೆ? ಈ ರಾಜಕುಲದಲ್ಲಿ ಹುಟ್ಟಿ, ಇಡೀ ವಸುಂಧರೆಯನ್ನು ಗೆದ್ದು, ಧರ್ಮಾರ್ಥಗಳೆಲ್ಲವನ್ನೂ ತೊರೆದು ಮೂಢನಾಗಿ ವನಕ್ಕೆ ತೆರಳಲು ಸಿದ್ಧನಾಗಿರುವೆಯಲ್ಲ! ಒಂದು ವೇಳೆ ಈ ಹವಿಸ್ಸು-ಯಜ್ಞಸಾಮಗ್ರಿಗಳನ್ನು ದುಷ್ಟ ಜನರು ನಾಶಗೊಳಿಸಿದರೆ ನಿನ್ನಿಂದಲೇ ವಿಪ್ರರು ನಾಶರಾಗಿ ನಿನಗೇ

ಪಾಪವು ತಗಲುತ್ತದೆ. ನಹುಷನು ನಿರ್ಧನನಾಗಿದ್ದಾಗ ಕ್ರೂರ ಕರ್ಮಗಳನ್ನೆಸಗಿ "ನಿರ್ಧನತ್ವಕ್ಕೆ ಧಿಕ್ಕಾರ! ಸರ್ವವನ್ನೂ ತ್ಯಾಗಮಾಡಿ ದಾರಿದ್ರ್ಯವನ್ನು ಅನುಭವಿಸುವುದು ಮುನಿಗಳ ಧರ್ಮವಾಗಿದೆ. ಅದು ರಾಜನ ಧರ್ಮವಲ್ಲ!" ನಾಳೆಗೆಂದು ಸಂಗ್ರಹಿಸದೇ ಆ ದಿನಕ್ಕೆ ಮಾತ್ರ ಭಿಕ್ಷೆಬೇಡುವುದು ಋಷಿಗಳ ಧರ್ಮವೆಂದು ನಿನಗೆ ತಿಳಿದೇ ಇದೆ. ಅದೇ ರೀತಿಯಲ್ಲಿ ಯಾವುದನ್ನು ಕ್ಷತ್ರಿಯ ಧರ್ಮವೆಂದು ಕರೆಯುತ್ತಾರೋ ಅದು ಧನದಿಂದಲೇ ಸಂಪನ್ನವಾಗುತ್ತದೆ. ಯಾರ ಧನವನ್ನು ಅಪಹರಿಸಿದರೂ ಅವರ ಧರ್ಮವನ್ನು ಅಪಹರಿಸಿದಂತೆ. ರಾಜನ್! ಧನವನ್ನೇ ಅಪಹರಿಸಿದರೆ ನಾವು ಯಾವ ಧರ್ಮಾಚರಣೆಯನ್ನು ಮಾಡಲು ಸಮರ್ಥರಾಗಿರುತ್ತೇವೆ? ಪಕ್ಕದಲ್ಲಿ ನಿಂತಿರುವ ದರಿದ್ರನನ್ನು ನೋಡಿ ಜನರು "ಇವನೆಲ್ಲೋ ಶಾಪಗ್ರಸ್ತನಾಗಿ ಹುಟ್ಟಿದ್ದಾನೆ!" ಎಂದು ಭಾವಿಸುತ್ತಾರೆ. ಲೋಕದಲ್ಲಿ ಪಾತಕವೆಂದೇ ತಿಳಿಯಲ್ಪಟ್ಟಿರುವ ದಾರಿದ್ರ್ಯವನ್ನು ನೀನು ಹೇಗೆ ಪ್ರಶಂಸಿಸುತ್ತಿರುವೆ? ರಾಜನ್! ಪತಿತನು ಶೋಕದಲ್ಲಿರುತ್ತಾನೆ. ನಿರ್ಧನನೂ ಶೋಕಿಸುತ್ತಿರುತ್ತಾನೆ. ಆದುದರಿಂದ ಪತಿತ ಮತ್ತು

ನಿರ್ಧನಸ್ಯನಲ್ಲಿ ಯಾವ ವ್ಯತ್ಯಾಸವೂ ಇರುವುದಿಲ್ಲ. ಪರ್ವತಗಳಿಂದ ಅನೇಕ ನದಿಗಳು ಹುಟ್ಟಿ ಹರಿಯುವಂತೆ ಅಲ್ಲಲ್ಲಿಂದ ಕಪ್ಪ-ಕಾಣಿಕೆಗಳ ರೂಪದಲ್ಲಿ ವೃದ್ಧಿಹೊಂದುವ ಐಶ್ವರ್ಯಗಳಿಂದಲೇ ಎಲ್ಲ ಶುಭಕರ್ಮಗಳೂ ಪ್ರವೃತ್ತವಾಗುತ್ತವೆ. ನರಾಧಿಪ! ಅರ್ಥದಿಂದಲೇ ಧರ್ಮ, ಕಾಮ ಮತ್ತು ಸ್ವರ್ಗಗಳ ಸಾಧ್ಯತೆಗಳಿವೆ. ಅರ್ಥವಿಲ್ಲದೇ ಲೋಕದ ಪ್ರಾಣಯಾತ್ರೆಯೇ ನಡೆಯುವುದಿಲ್ಲ. ಗ್ರೀಷ್ಮ ಋತುವಿನಲ್ಲಿ ಚಿಕ್ಕ-ಪುಟ್ಟ ನದಿಗಳು ಒಣಗಿಹೋಗುವಂತೆ ಅಲ್ಪಬುದ್ಧಿಯುಳ್ಳ ಮತ್ತು ಧನವಿಹೀನನಾದ ಪುರುಷನ ಕಾರ್ಯಗಳೆಲ್ಲವೂ ನಾಮಾವಶೇಷವಾಗುತ್ತವೆ. ಧನವಿರುವವನಿಗೆ ಮಿತ್ರರಿರುತ್ತಾರೆ. ಧನವಿರುವವನಿಗೆ ಬಾಂಧವರಿರುತ್ತಾರೆ. ಧನವಿದ್ದರೇ ಲೋಕದಲ್ಲಿ ಪುರುಷನೆನಿಸಿಕೊಳ್ಳುತ್ತಾನೆ. ಐಶ್ವರ್ಯಗಳುಳವನನ್ನೇ ಪಂಡಿತನೆಂದೂ ಕರೆಯುವರು. ದರಿದ್ರನಾದವನು ಬಯಸಿದರೂ ಅಧಿಕ ಧನವನ್ನು ಸಂಪಾದಿಸಲು ಶಕ್ಯನಾಗುವುದಿಲ್ಲ. ಆನೆಗಳಿಂದ ಮಹಾಗಜಗಳು ಹುಟ್ಟುವಂತೆ ಧನದಿಂದಲೇ ಅಪಾರ

ಸಂಪತ್ತನ್ನು ಗಳಿಸಬಲ್ಲೆವು. ನರಾಧಿಪ! ಧರ್ಮ, ಕಾಮ, ಸ್ವರ್ಗ, ಹರ್ಷ, ಕ್ರೋಧ, ವಿದ್ಯೆ, ದಮ, ಇವೆಲ್ಲವೂ ಧನದಿಂದಲೇ ಹುಟ್ಟುತ್ತವೆ. ಪುರುಷೋತ್ತಮ! ಧನದಿಂದ ಕುಲವು ವೃದ್ಧಿಹೊಂದುತ್ತದೆ ಮತ್ತು ಧನದಿಂದ ಧರ್ಮವು ಬೆಳೆಯುತ್ತದೆ. ಧನವಿಲ್ಲದವನಿಗೆ ಈ ಲೋಕದಲ್ಲಿ ಸುಖವಿಲ್ಲ. ನಿರ್ಧನನು ಧರ್ಮಕೃತ್ಯಗಳನ್ನು ಯಥಾಶಾಸ್ತ್ರವಾಗಿ ಅನುಷ್ಠಾನ ಮಾಡದ್ದು ಸಾಧ್ಯವಿಲ್ಲ. ಶೈಲದಿಂದ ಗಿರಿನದಿಯು ಸ್ರವಿಸುವಂತೆ ಧನದಿಂದಲೇ ಧರ್ಮವು ಸ್ರವಿಸುತ್ತದೆ. ರಾಜನ್! ಕೇವಲ ಶರೀರದಲ್ಲಿ ಕೃಶನಾಗಿರುವವನಿಗೆ ಕೃಶನೆಂದು ಕರೆಯುವುದಿಲ್ಲ. ಅಶ್ವಧನವಿಲ್ಲದವನು, ಗೋಧನವಿಲ್ಲದವನು, ಸೇವಕರಿಲ್ಲದವನ್ನು ಮತ್ತು ಅತಿಥಿಗಳಿಲ್ಲದವನನ್ನೂ ಕೃಶನೆಂದೇ ಕರೆಯುತ್ತಾರೆ. ರಾಜನ್! ಯಥಾನ್ಯಾಯವಾಗಿ ದೇವಾಸುರರನ್ನು ನೋಡು! ದೇವತೆಗಳು ವೃದ್ಧಿಗಾಗಿ ತಮ್ಮ ದಾಯಾದಿಗಳಾದ ಅಸುರರ ವಧೆಯನ್ನಲ್ಲದೇ ಬೇರೆ ಏನನ್ನು ಬಯಸುತ್ತಾರೆ? ರಾಜನಾದವನು ಇನ್ನೊಬ್ಬರ ಧನವನ್ನು ತೆಗೆದುಕೊಳ್ಳದೇ ಧರ್ಮಕಾರ್ಯಗಳನ್ನು ಹೇಗೆ ಮಾಡಬಹುದು? ಇದನ್ನೇ

ರಾಜಧರ್ಮವೆಂದು ತಿಳಿದವರು ವೇದಗಳಲ್ಲಿ ನಿಶ್ಚಯಿಸಿದ್ದಾರೆ. ರಾಜನಾದವನು ವೇದಾಧ್ಯಯನ ಮಾಡುತ್ತಿರಬೇಕು. ವಿದ್ವಾಂಸನಾಗಿರಬೇಕು. ಸರ್ವಪ್ರಕಾರಗಳಿಂದಲೂ ಧನವನ್ನು ಸಂಗ್ರಹಿಸಬೇಕು ಮತ್ತು ಪ್ರಯತ್ನಪಟ್ಟು ಯಜ್ಞಗಳನ್ನು ಮಾಡಬೇಕು. ದ್ರೋಹದಿಂದಲೇ ದೇವತೆಗಳು ದಿವಿಯಲ್ಲಿ ಎಲ್ಲ ಸ್ಥಾನಗಳನ್ನೂ ಪಡೆದಿದ್ದಾರೆ. ಇದನ್ನೇ ದೇವತೆಗಳು ಲೋಕವ್ಯವಸ್ಥೆಯನ್ನಾಗಿ ಮಾಡಿರುತ್ತಾರೆ. ಶಾಶ್ವತ ವೇದಗಳೂ ಇವನ್ನೇ ಹೇಳುತ್ತವೆ. ಧನದಿಂದಲೇ ಬ್ರಾಹ್ಮಣರು ಅಧ್ಯಯನಮಾಡುತ್ತಾರೆ. ತಪಸ್ಸನ್ನಾಚರಿಸುತ್ತಾರೆ. ಯಜ್ಞಮಾಡುತ್ತಾರೆ ಮತ್ತು ಮಾಡಿಸುತ್ತಾರೆ. ಇವೆಲ್ಲವೂ ಮತ್ತು ಶ್ರೇಯಸ್ಸೂ ಧನದಿಂದಲೇ ದೊರೆಯುತ್ತದೆ. ಬೇರೆಯಾವುದರಿಂದಲೂ ಅಲ್ಲ. ಇನ್ನೊಬ್ಬನಿಂದ ಅಪಹರಿಸದೇ ಸಂಪಾದಿಸಿರುವ ಕಿಂಚಿತ್ತು ಧನವನ್ನೂ ನಾವು ಕಾಣುವುದಿಲ್ಲ. ಇದೇ ರೀತಿಯಲ್ಲಿ ರಾಜರು ಈ ಭೂಮಿಯನ್ನು ಜಯಿಸುತ್ತಾರೆ. ಮಕ್ಕಳು ತಂದೆಯ ಆಸ್ತಿಯನ್ನು ತಮ್ಮದೆಂದೇ ಹೇಳಿಕೊಳ್ಳುವಂತೆ ಶತ್ರುವಿನಿಂದ ಗೆದ್ದ ಭೂಮಿಯನ್ನೂ ರಾಜರು ತಮ್ಮದೆಂದೇ ಹೇಳಿಕೊಳ್ಳುತ್ತಾರೆ. ಈ ರೀತಿ

ಧರ್ಮಮಾರ್ಗದಲ್ಲಿ ನಡೆದು ರಾಜರ್ಷಿಗಳು ಸ್ವರ್ಗಗಳನ್ನು ಗೆದ್ದಿದ್ದಾರೆ. ಮೋಡಗಳ ಮೂಲಕ ಸಮುದ್ರದ ನೀರು ಹತ್ತು ದಿಕ್ಕುಗಳಿಗೂ ಪಸರಿಸುವಂತೆ ರಾಜಕುಲದ ವಿತ್ತದಿಂದ ಪೃಥ್ವಿಯಲ್ಲಿ ಪಸರಿಸಿಕೊಳ್ಳುತ್ತದೆ. ಈ ಪೃಥ್ವಿಯು ಹಿಂದೆ ದಿಲೀಪನದಾಗಿತ್ತು. ನೃಗ, ನಹುಷ, ಅಂಬರೀಷ ಮತ್ತು ಮಾಂಧಾತರದ್ದಾಗಿತ್ತು. ಅದೇ ಭೂಮಿಯು ಈಗ ನಿನ್ನನ್ನು ಅವಲಂಬಿಸಿದೆ. ರಾಜನ್! ಸರ್ವದಕ್ಷಿಣೆಗಳಿಂದ ಕೂಡಿದ ದ್ರವ್ಯಮಯ ಯಜ್ಞಗಳನ್ನು ನೀನು ಯಜಿಸದೇ ಇದ್ದರೆ ದೇವತೆಗಳಿಗೆಸಗುವ ಪಾಪವನ್ನು ಪಡೆದುಕೊಳ್ಳುವೆ. ರಾಜನು ದಕ್ಷಿಣೆಗಳಿಂದ ಕೂಡಿದ ಅಶ್ವಮೇಧಯಜ್ಞವನ್ನು ಯಜಿಸಿದರೆ ಅದರ ಅವಭೃಥಕ್ಕೆ ಸೇರಿದ ಎಲ್ಲರೂ ಪವಿತ್ರರಾಗುತ್ತಾರೆ. ವಿಶ್ವರೂಪೀ ಮಹಾದೇವನು ಸರ್ವಮೇಧವೆಂಬ ಮಹಾ ಯಜ್ಞದಲ್ಲಿ ಸರ್ವಭೂತಗಳನ್ನೂ ಆಹುತಿಯನ್ನಾಗಿತ್ತು ಅತ್ಮಾರ್ಪಣೆಯನ್ನೂ ಮಾಡಿಕೊಂಡನು. ರಾಜನ್! ಇದೊಂದು ಶಾಶ್ವತ ಮಾರ್ಗವಾಗಿರುವುದು. ಇದೊ ಕೊನೆಗೊಂಡಿದುದರ ಕುರಿತು ನಾವು ಕೇಳೇ ಇಲ್ಲ. ಹತ್ತು ರಥಗಳುಳ್ಳ ಈ ಯಜ್ಞಗಳ ಮಹಾ ಮಾರ್ಗವನ್ನು  ಬಿಟ್ಟು ಕೆಟ್ಟದಾರಿಯಲ್ಲಿ

ಹೋಗಬೇಡ!”

ಯುಧಿಷ್ಠಿರನು ಹೇಳಿದನು:

“ನನ್ನ ಈ ಮಾತನ್ನು ಏಕಾಗ್ರಚಿತ್ತನಾಗಿ ಕೇಳಿ ಮುಹೂರ್ತಕಾಲ ಮನಸ್ಸು-ಕಿವಿಗಳನ್ನು ಅಂತರಾತ್ಮನಲ್ಲಿ ಸ್ಥಾಪಿಸಿ ಧ್ಯಾನಮಾಡು. ಅನಂತರ ನಾನು ಹೇಳುವುದು ನಿನಗೆ ಹಿತಕರವೆನಿಸಬಹುದು. ನೀನು ಆಗ್ರಹಿಸುತ್ತಿರುವ ಧನದಿಂದ ಕೂಡಿರುವ ಮಾರ್ಗದಲ್ಲಿ ನಾನು ಪುನಃ ಹೋಗುವುದಿಲ್ಲ. ಗ್ರಾಮ್ಯಸುಖಗಳನ್ನು ತೊರೆದು ಹೋಗುವಂತಹ ಮಾರ್ಗದಲ್ಲಿ ಹೋಗುತ್ತೇನೆ. ಏಕಾಕಿಯಾಗಿ ಹೋಗುವ ಕ್ಷೇಮಮಾರ್ಗವು ಯಾವುದು ಎಂದು ನನ್ನನ್ನು ಕೇಳು. ಅಥವಾ ನನ್ನನ್ನು ಕೇಳಲು ಇಚ್ಛಿಸದಿದ್ದರೆ, ಆದರೂ ನಾನು ಹೇಳುವುದನ್ನು ಕೇಳು. ಗ್ರಾಮ್ಯ ಸುಖಾಚಾರವನ್ನು ತೊರೆದು ಮಹಾತಪಸ್ಸನ್ನು ತಪಿಸುತ್ತಾ, ಅರಣ್ಯದಲ್ಲಿ ಫಲಮೂಲಗಳನ್ನು ತಿಂದುಕೊಂಡು ಮೃಗಗಳೊಂದಿಗೆ ಸಂಚರಿಸುತ್ತೇನೆ. ಎರಡೂ ಕಾಲಗಳಲ್ಲಿ ಕಾಲಕ್ಕೆ ತಕ್ಕಂತೆ ಶುಚಿಯಾಗಿ ಅಗ್ನಿಯಲ್ಲಿ ಆಹುತಿಗಳನ್ನು ನೀಡುತ್ತೇನೆ. ಮಿತ ಆಹಾರವನ್ನು ಸೇವಿಸಿಕೊಂಡು ನನ್ನ ಶರೀರವನ್ನು ಕೃಶಗೊಳಿಸುತ್ತೇನೆ. ವಲ್ಕಲಗಳನ್ನು ಧರಿಸುತ್ತೇನೆ. ಜಟೆಯನ್ನು

ಧರಿಸುತ್ತೇನೆ. ಛಳಿ-ಗಾಳಿ-ಬಿಸಿಲುಗಳನ್ನು ಸಹಿಸಿಕೊಳ್ಳುತ್ತೇನೆ. ಹಸಿವು-ಬಾಯಾರಿಕೆ-ಆಯಾಸಗಳನ್ನು ಸಹಿಸಿಕೊಳ್ಳುತ್ತೇನೆ. ವಿಧಿದೃಷ್ಟವಾದ ತಪಸ್ಸಿನಿಂದ ಶರೀರವನ್ನು ಶೋಷಿಸುತ್ತೇನೆ. ಅರಣ್ಯದಲ್ಲಿ ವಾಸಿಸುವ ಮುದಿತ ಮೃಗ-ಪಕ್ಷಿಗಳ ಜೋರಾಗಿ ಕೂಗುವ ಧ್ವನಿಗಳನ್ನು ಕೇಳಿ ಮನಸ್ಸು-ಕಿವಿಗಳಿಗೆ ಸುಖವನ್ನು ಹೊಂದುತ್ತೇನೆ. ಹೂಬಿಟ್ಟಿರುವ ಮರ-ಗಿಡ-ಬಳ್ಳಿಗಳ ಸುಗಂಧಗಳನ್ನು ಸೇವಿಸುತ್ತಾ, ರಮಣೀಯರಾದ ನಾನಾರೂಪದ ವನವಾಸಿಗಳನ್ನು ನೋಡುತ್ತಾ ಇರುತ್ತೇನೆ. ವಾನಪ್ರಸ್ಥದಲ್ಲಿರುವವರನ್ನೂ, ಗುರುಕುಲ ವಾಸಿಗಳನ್ನೂ ಸಂದರ್ಶಿಸುತ್ತೇನೆ. ಅವರಿಗೆ ಅಪ್ರಿಯವಾಗದಂತೆ ನಡೆದುಕೊಳ್ಳುತ್ತೇನೆ. ಇನ್ನು ಪುನಃ ಗ್ರಾಮವಾಸಿಗಳ ಕುರಿತೇನು? ಏಕಾಂತದಲ್ಲಿದ್ದುಕೊಂಡು ವಿಮರ್ಶಿಸುತ್ತೇನೆ. ಪಕ್ವವಾಗಿರಲಿ ಪಕ್ವವಾಗದಿರಲಿ, ದೊರಕಿದ ಆಹಾರವನ್ನು ಸೇವಿಸಿಕೊಂಡಿರುತ್ತೇನೆ. ವನದಲ್ಲಿ ದೊರಕುವ ಕಂದಮೂಲ-ಫಲಗಳಿಂದ, ನೀರಿನಿಂದ ಮತ್ತು ಉತ್ತಮ ಮಾತುಗಳಿಂದ ಪಿತೃಗಳನ್ನೂ ದೇವತೆಗಳನ್ನೂ ತೃಪ್ತಿಪಡಿಸುತ್ತೇನೆ. ಈ ರೀತಿ ಅರಣ್ಯವಾಸಿಗಳಿಗೆ ಶಾಸ್ತ್ರಗಳಲ್ಲಿ ಹೇಳಿರುವ ಉಗ್ರವೂ ಅತಿ

ಉಗ್ರವೂ ಆದ ವಿಧಿಗಳನ್ನು ಆಚರಿಸುತ್ತಾ ಈ ದೇಹದ ಸಮಾಪನವನ್ನು ಪ್ರತೀಕ್ಷಿಸುತ್ತಿರುತ್ತೇನೆ. ಅಥವಾ ಮುಂಡನ ಮಾಡಿಕೊಂಡು ಮುನಿಯಾಗಿ ಪ್ರತಿದಿನವೂ ಒಂದೊಂದೇ ವೃಕ್ಷದಿಂದ ಆ ದಿನ ಬಿದ್ದ ಹಣ್ಣನ್ನು ಮಾತ್ರ ಸೇವಿಸುತ್ತಾ ಈ ಶರೀರವನ್ನು ಕ್ಷಯಿಸುತ್ತೇನೆ. ಧೂಳಿನಿಂದ ತುಂಬಿಕೊಂಡಿದ್ದು, ಶೂನ್ಯ ಗೃಗದಲ್ಲಿ ಅಥವಾ ಮರದ ಬುಡದಲ್ಲಿ ವಾಸಿಸುತ್ತೇನೆ. ಮತ್ತು ಪ್ರಿಯ-ಅಪ್ರಿಯ ಎಲ್ಲವನ್ನೂ ಪರಿತ್ಯಜಿಸುತ್ತೇನೆ. ನಿಂದನೆ-ಸಂಸ್ತುತಿಗಳನ್ನು ಸಮನಾಗಿ ಕಾಣುತ್ತಾ ಶೋಕಿಸುವುದೂ ಇಲ್ಲ ಮತ್ತು ಹರ್ಷಿತನಾಗುವುದೂ ಇಲ್ಲ. ಏನನ್ನೂ ಬಯಸದೇ, ಯಾವುದನ್ನೂ ಅತಿಯಾಗಿ ಪ್ರೀತಿಸದೇ ನಿರ್ದ್ವಂದ್ವನಾಗಿಯೂ ಆವುದನ್ನೂ ತೆಗೆದುಕೊಳ್ಳದೆಯೂ ಇರುತ್ತೇನೆ. ಆತ್ಮಾರಾಮನಾಗಿದ್ದುಕೊಂಡು ಪ್ರಸನ್ನಾತ್ಮನಾಗಿರುತ್ತೇನೆ. ಜಡ-ಅಂಧ-ಕಿವುಡನಂತಿರುತ್ತೇನೆ. ಇನ್ನೊಬ್ಬರಿಂದ ಏನನ್ನೂ ಮಾಡಿಸಿಕೊಳ್ಳುವುದಿಲ್ಲ. ಯಾರೊಂದಿಗೂ ಮಾತನ್ನೂ ಆಡುವುದಿಲ್ಲ. ನಾಲ್ಕು ವಿಧದ ಚರಾಚರ ಪ್ರಾಣಿಗಳಲ್ಲಿ ಯಾರನ್ನೂ ಹಿಂಸಿಸುವುದಿಲ್ಲ. ಸ್ವಧರ್ಮನಿರತರಾಗಿರುವ ಎಲ್ಲ ಪ್ರಜೆಗಳನ್ನೂ

ಪ್ರಾಣವಿರುವವನ್ನೂ ಸಮನಾಗಿ ಕಾಣುತ್ತೇನೆ. ಯಾರನ್ನೂ ಹಾಸ್ಯಮಾಡುವುದಿಲ್ಲ. ಯಾರ ಮೇಲೂ ಕುಪಿತನಾಗುವುದಿಲ್ಲ. ನಿತ್ಯವೋ ಸರ್ಮ ಇಂದ್ರಿಯಗಳನ್ನೂ ನಿಯಂತ್ರಿಸಿಕೊಂಡು ಪ್ರಸನ್ನವದನನಾಗಿರುತ್ತೇನೆ. ಈ ದಾರಿಯು ಎಲ್ಲಿಗೆ ಹೋಗುತ್ತದೆ ಎಂದು ಯಾರನ್ನೂ ಕೇಳದೇ, ಯಾವುದೋ ಒಂದು ದಾರಿಯನ್ನು ಹಿಡಿದುಕೊಂಡು ಹೋಗುತ್ತೇನೆ. ವಿಶೇಷವಾಗಿ ಯಾವುದೇ ದೇಶ-ದಿಕ್ಕುಗಳಿಗೆ ಹೋಗಲು ಬಯಸದೇ ಹೋಗುತ್ತಿರುತ್ತೇನೆ. ಹೋಗುವಾಗ ಏನನ್ನೂ ಅಪೇಕ್ಷಿಸುವುದಿಲ್ಲ. ಹಿಂದಿರುಗಿ ನೋಡುವುದಿಲ್ಲ. ಸರಳ ಭಾವದಿಂದಿದ್ದು, ಯಾವಾಗಲೂ ಅಂತರ್ಮುಖನಾಗಿರುತ್ತೇನೆ. ಸ್ಥಾವರ-ಜಂಗಮಗಳನ್ನು ತೊರೆದು ಮುಂದೆಹೋಗುತ್ತಿರುತ್ತೇನೆ. ಸ್ವಾಭಾವಿಕವಾಗಿಯೇ ಮುಂದೆ ಏನಾಗುತ್ತದೆಯೋ ಏನು ದೊರೆಯುತ್ತದೆಯೋ ಅದನ್ನೇ ತಿನ್ನುತ್ತೇನೆ. ದ್ವಂದ್ವಗಳನ್ನೂ ವಿರುದ್ಧಗಳನ್ನೂ ಯೋಚಿಸದೇ ಮುಂದುವರೆಯುತ್ತಿರುತ್ತೇನೆ. ಅಲ್ಪವಾಗಿರಲೀ ಅಥವಾ ರುಚಿಯಾಗಿರದೇ ಇರಲಿ ಮೊದಲು ಸಿಕ್ಕಿದುದನ್ನು ತಿನ್ನುತ್ತೇನೆ. ಮೊದಲ ಮನೆಯಲ್ಲಿ ಭಿಕ್ಷೆಯು ಸಿಗದಿದ್ದರೆ ಅನ್ಯ ಏಳು

ಮನೆಗಳಿಗೆ ಹೋಗುತ್ತೇನೆ. ಹೊಗೆಯಾಡದೇ ಇರುವ ಮನೆಗೆ, ಒನಕೆಯನ್ನು ತೆಗೆದಿಟ್ಟಿರುವ ಮನೆಗೆ, ಒಲೆಯ ಬೆಂಕಿಯನ್ನು ಆರಿಸಿದ ಮನೆಗೆ, ಮನೆಯವರೆಲ್ಲರೂ ಊಟಮಾಡಿಯಾಗಿರುವ ಮನೆಗೆ, ಅಡಿಗೆ ಪಾತ್ರೆಗಳನ್ನು ತೊಳೆದು ತೆಗೆದಿಟ್ಟ ಮನೆಗೆ, ಭಿಕ್ಷುಕರು ಬಂದು ಹೋಗುವ ಸಮಯವು ಕಳೆದುಹೋದ ನಂತರ ನಾನು ಭಿಕ್ಷೆಗೆ ಹೋಗುವುದಿಲ್ಲ. ಎರಡು ಅಥವಾ ಮೂರು ಅಥವಾ ಐದು ಮನೆಗಳಿಗೆ ದಿನದಲ್ಲಿ ಒಂದೇ ಸಾರಿ ಭಿಕ್ಷೆಗೆ ಹೋಗುತ್ತೇನೆ. ಸ್ನೇಹಪಾಶಗಳನ್ನು ತೊರೆದು ಈ ಭೂಮಿಯಲ್ಲಿ ಸಂಚರಿಸುತ್ತೇನೆ. ಜೀವಿಸಲು ಇಚ್ಛಿಸುವವನಂತೆ ಅಥವಾ ಸಾಯಲು ಇಚ್ಛಿಸುವವನಂತೆ ವರ್ತಿಸದೇ ಜೀವ-ಮರಣಗಳನ್ನು ಶ್ಲಾಘಿಸುವುದೂ ಇಲ್ಲ, ದ್ವೇಷಿಸುವುದೂ ಇಲ್ಲ. ನನ್ನ ಒಂದು ಬಾಹುವನ್ನು ಖಡ್ಗದಿಂದ ಗಾಯಗೊಳಿಸಿದವ ಮತ್ತು ಇನ್ನೊಂದಕ್ಕೆ ಚಂದನವನ್ನು ಲೇಪಿಸುವವ ಈ ಇಬ್ಬರ ಕುರಿತೂ ಮಂಗಳವಾದದ್ದನ್ನಾಗಲೀ ಅಮಂಗಳವಾದದ್ದನ್ನಾಗಲೀ ಯೋಚಿಸುವುದಿಲ್ಲ. ಜೀವಿಸಿರುವವನಿಗೆ ಶಕ್ಯವಾದ ಅಭ್ಯುದಯಕ್ರಿಯೆಗಳನ್ನೆಲ್ಲಾ

ತ್ಯಜಿಸಿ ಕೇವಲ ಕಣ್ಣು ರೆಪ್ಪೆ ಬಡಿಯುವುದು ಮುಂತಾದ ಕಾರ್ಯಗಳನ್ನೇ ಮಾಡುತ್ತಿರುತ್ತೇನೆ. ಇಂದ್ರಿಯಕ್ರಿಯೆಗಳೆಲ್ಲವನ್ನೂ ತ್ಯಜಿಸಿ ಸಂಕಲ್ಪಶೂನ್ಯನಾಗಿರುತ್ತೇನೆ. ಆತ್ಮಕ್ಕೆ ಅಂಟಿಕೊಂಡಿರುವ ಕಲ್ಮಷಗಳನ್ನು ಸಂಪೂರ್ಣವಾಗಿ ತೆಗೆದುಹಾಕುತ್ತೇನೆ. ನಿತ್ಯವೂ ಇವುಗಳಲ್ಲಿ ಆಸಕ್ತನಾಗಿರುತ್ತೇನೆ. ಸರ್ವಸಂಗಗಳಿಂದ ವಿಮುಕ್ತನಾಗಿ, ಸರ್ವ ಸ್ನೇಹಬಂಧನಗಳಿಂದ ಅತೀತನಾಗಿ ಯಾರ ವಶದಲ್ಲಿಯೂ ಬಾರದೇ ವಾಯುವಿನ ಧರ್ಮದಂತೆ ಎಲ್ಲಕಡೆ ಸಂಚರಿಸುತ್ತೇನೆ. ಈ ರೀತಿ ವೀತರಾಗನಾಗಿ ಸಂಚರಿಸುತ್ತಾ ಶಾಶ್ವತ ತೃಪ್ತಿಯನ್ನು ಪಡೆಯುತ್ತೇನೆ. ಅಜ್ಞಾನದ ತೃಷ್ಣೆಯಿಂದಾಗಿ ನಾನು ಮಹಾ ಪಾಪವನ್ನು ಮಾಡಿದ್ದೇನೆ. ಕೆಲವು ಮಾನವರು ಕುಶಲ-ಅಕುಶಲ ಕರ್ಮಗಳನ್ನು ಮಾಡಿ, ಕಾರ್ಯ-ಕಾರಣ ನಿಮಿತ್ತದಿಂದ ಸ್ವಜನರನ್ನು ಪಾಲಿಸುತ್ತಾರೆ. ಆಯುಷ್ಯವು ಕಳೆಯಲು ಕ್ಷೀಣಶರೀರವನ್ನು ಬಿಟ್ಟು ಆ ಪಾಪವನ್ನು ಸ್ವೀಕರಿಸುತ್ತಾರೆ. ಏಕೆಂದರೆ ಕರ್ಮಫಲವು ಕರ್ಮಮಾಡುವವನಿಗೇ ಸೇರುತ್ತವೆ. ರಥದ ಚಕ್ರದಂತೆ ನಿರಂತರವಾಗಿ ತಿರುಗುತ್ತಿರುವ ಈ ಸಂಸಾರಚಕ್ರದಲ್ಲಿ

ಭೂತಗ್ರಾಮಗಳು ಒಂದುಸೇರುತ್ತವೆ ಮತ್ತು ಭೂತಗ್ರಾಮಗಳಿಂದ ಕಾರ್ಯನಿರತವಾಗುತ್ತವೆ. ಜನ್ಮ-ಮೃತ್ಯು-ಮುಪ್ಪು-ವ್ಯಾಧಿ-ವೇದನೆಗಳಿಂದ ಆಕ್ರಮಿಸಲ್ಪಟ್ಟಿರುವ, ಸಾರವಿಲ್ಲದ ಅಸ್ವಾಸ್ಥ್ಯ ಸಂಸಾರವನ್ನು ತ್ಯಜಿಸಿದವನೇ ಸುಖಿಯು. ದೇವತೆಗಳೂ ದಿವದಿಂದ ಮತ್ತು ಮಹರ್ಷಿಗಳೂ ತಮ್ಮ ಸ್ಥಾನಗಳಿಂದ ಕೆಳಕ್ಕೆ ಬೀಳುತ್ತಾರೆ. ಹೀಗಿರುವಾಗ ಕಾರಣತತ್ತ್ವವನ್ನು ತಿಳಿದಿರುವ ಯಾರು ತಾನೇ ಈ ಸಂಸಾರವನ್ನು ಬಯಸುತ್ತಾನೆ? ವಿವಿಧ ಲಕ್ಷಣಗಳುಳ್ಳ ವಿವಿಧ ಕರ್ಮಗಳನ್ನು ಮಾಡಿದ ರಾಜನನ್ನು ಸ್ವಲ್ಪವೇ ಕಾರಣಕ್ಕಾಗಿ ಅನೇಕ ರಾಜರು ಬಂಧಿಸುತ್ತಾರೆ. ಆದುದರಿಂದ ಈ ಜ್ಞಾನಾಮೃತವು ಬಹುಕಾಲದಿಂದ ನನ್ನಲ್ಲಿ ಮನೆಮಾಡಿಕೊಂಡಿದೆ. ಇದರ ಮೂಲಕವೇ ನಾನು ಅವ್ಯಯವೂ ಶಾಶ್ವತವೂ ಸ್ಥಿರವೂ ಆದ ಸ್ಥಾನವನ್ನು ಬಯಸುತ್ತೇನೆ. ಈ ನಿರ್ಭಯ ಮಾರ್ಗವನ್ನನುಸರಿಸಿ, ಸತತವೂ ಅದರಂತೆಯೇ ನಡೆದುಕೊಂಡು ಇದೇಪ್ರಕಾರವಾಗಿ ಸಂಚರಿಸುತ್ತಾ ದೇಹವನ್ನು ಸಮಾಪನಗೊಳಿಸುತ್ತೇನೆ.”

ಭೀಮಸೇನನು ಹೇಳಿದನು:

“ರಾಜನ್! ಶ್ರೋತ್ರಿಯಂತೆಯೇ ನಿನ್ನ ಬುದ್ಧಿಯೂ ಮಂದವಾಗಿಹೋಗಿದೆ! ತತ್ತ್ವಾರ್ಥಗಳನ್ನು ತಿಳಿಯದೇ ಕೇವಲ ಪಠಣಮಾಡುವವನ ಬುದ್ಧಿಯಂತಾಗಿದೆ ನಿನ್ನ ಬುದ್ಧಿಯೂ ಕೂಡ! ರಾಜಧರ್ಮವನ್ನು ನಿಂದಿಸಿ ಆಲಸ್ಯದ ಜೀವನವನ್ನು ನಡೆಸಲು ಯೋಚಿಸಿರುವ ನಿನಗೆ ಧಾರ್ತರಾಷ್ಟ್ರರ ವಿನಾಶದಿಂದ ಯಾವ ಫಲವುಂಟಾಯಿತು? ಕ್ಷತ್ರಧರ್ಮವನ್ನು ಆಚರಿಸುವವನ ಮಾರ್ಗದಲ್ಲಿ ಬಂಧುಗಳ ಕುರಿತು ಕ್ಷಮೆ, ಅನುಕಂಪ, ಕಾರುಣ್ಯ, ಮತ್ತು ಮೃದುತ್ವಗಳು ಇರುವುದಿಲ್ಲ. ನಿನ್ನ ಬುದ್ಧಿಯು ಈ ರೀತಿಯಿದೆಯೆಂದು ಮೊದಲೇ ನಮಗೆ ತಿಳಿದಿದ್ದರೆ ನಾವು ಶಸ್ತ್ರಗಳನ್ನು ಹಿಡಿಯುತ್ತಲೇ ಇರಲಿಲ್ಲ ಮತ್ತು ಯಾರೊಬ್ಬರನ್ನೂ ವಶಿಸುತ್ತಲೂ ಇರಲಿಲ್ಲ. ಈ ಶರೀರದ ವಿಮೋಚನೆಗಾಗಿ ಭಿಕ್ಷಾವೃತ್ತಿಯನ್ನೇ ಅನುಸರಿಸುತ್ತಿದ್ದೆವು. ಮಹೀಕ್ಷಿತರ ಈ ದಾರುಣ ಯುದ್ಧವೇ ನಡೆಯುತ್ತಿರಲಿಲ್ಲ. ಇವೆಲ್ಲವೂ ಬಲಿಷ್ಠನಾದವನ ಅನ್ನವೆಂದು ತಿಳಿದವರು ಹೇಳುತ್ತಾರೆ. ಸ್ಥಾವರ-ಜಂಗಮಗಳೆಲ್ಲವೂ ಬಲಿಷ್ಠನ ಭೋಜನ! ರಾಜ್ಯವನ್ನು ಸ್ವೀಕರಿಸುವಾಗ ವಿರೋಧಿಸುವವರನ್ನು ಸಂಹರಿಸಬೇಕೆಂದು ಕ್ಷತ್ರಧರ್ಮವನ್ನು

ತಿಳಿದ ಪ್ರಾಜ್ಞರು ಹೇಳುತ್ತಾರೆ. ರಾಜ್ಯವನ್ನು ಪಡೆದುಕೊಳ್ಳಲು ಅಡ್ಡಿಯನ್ನುಂಟುಮಾಡಿದ ವೈರಿಗಳನ್ನು ನಾವು ಸಂಹರಿಸಿದ್ದೇವೆ. ಧರ್ಮಪೂರ್ವಕವಾಗಿ ಅವರನ್ನು ಸಂಹರಿಸಿ ಪಡೆದ ಈ ಭೂಮಿಯನ್ನು ಭೋಗಿಸು! ಬಾವಿಯನ್ನು ತೋಡಿ ನೀರನ್ನು ಪಡೆಯದೇ ಕೇವಲ ಕೆಸರನ್ನು ಮೈಗೆ ಹಚ್ಚಿಕೊಂಡು ಮೇಲೆ ಬಂದವನಂತೆ ನಮ್ಮ ಈ ಕರ್ಮವು ಆಗಬಾರದು! ಮಹಾವೃಕ್ಷವನ್ನೇರಿ ಜೇನನ್ನು ಅಪಹರಿಸಿ ಅದನ್ನು ಸವಿಯುವ ಮೊದಲೇ ನಿಧನಹೊಂದಿದವನಂತೆ ನಮ್ಮ ಈ ಕರ್ಮವು ಆಗಬಾರದು! ಯಾವುದೋ ದೊಡ್ಡ ನಿಧಿಯು ಸಿಗುವ ಆಶಯದಿಂದ ಬಹುದೂರ ಹೋಗಿ ನಿರಾಶನಾಗಿ ಹಿಂದಿರುಗಿದವನಂತೆ ನಮ್ಮ ಈ ಕರ್ಮವು ಆಗದಿರಲಿ! ಶತ್ರುಗಳನ್ನು ಸಂಹರಿಸಿ ನಂತರ ಆತ್ಮಹತ್ಯೆಯನ್ನು ಮಾಡಿಕೊಂಡವನಂತೆ ನಮ್ಮ ಈ ಕರ್ಮವು ಆಗದಿರಲಿ! ಹಸಿವಿನಿಂದ ಬಳಲುತ್ತಿದ್ದವು ಅನ್ನವನ್ನು ಪಡೆದು ತಿನ್ನಲು ಅಶಕ್ಯನಾದವನಂತೆ, ಕಾಮಿಯು ಕಾಮಿನಿಯನ್ನು ಪಡೆದೂ ಅವಳನ್ನು ಭೋಗಿಸಲು ಅಶಕ್ಯನಾದವನಂತೆ ನಮ್ಮ ಈ ಕರ್ಮವು ಆಗದಿರಲಿ! ಹಿರಿಯವನೆಂದು ತಿಳಿದು

ಮಂದಚೇತಸನಾದ ನಿನ್ನನ್ನೇ ಅನುಸರಿಸಿ ಬರುತ್ತಿರುವ ನಾವೇ ನಿಂದನೀಯರು! ಬಾಹುಬಲಿಗಳಾದ, ವಿದ್ಯಾವಂತರಾದ, ಜಿತೇಂದ್ರಿಯರಾದ ನಾವೂ ಕೂಡ ಅಸಮರ್ಥರಂತೆ ಒಬ್ಬ ನಪುಂಸಕನ ಮಾತಿನಂತೆ ನಡೆದುಕೊಳ್ಳುತ್ತಿದ್ದೇವೆ! ಅನಾಥರಕ್ಷಕರಾದ ನಾವು ಅರ್ಥಹೀನರಾಗಿರುವುದನ್ನು ಜನಗಳು ಹೇಗೆತಾನೇ ನೋಡದೇ ಇರುತ್ತಾರೆ? ಆದುದರಿಂದ ನಾನು ಹೇಳುವುದು ಯುಕ್ತವೋ ಅಯುಕ್ತವೋ ಎನ್ನುವುದನ್ನು ಎಲ್ಲರೂ ಯೋಚಿಸಿರಿ. ಸಮರ್ಥರಾದವರು ಸ್ವಾರ್ಥಸಿದ್ಧಿಗಾಗಿ ಪ್ರಯತ್ನಿಸಲೇ ಬೇಕೆಂದು ನನ್ನ ಅಭಿಪ್ರಾಯ! ಆಪತ್ಕಾಲದಲ್ಲಿ ಮಾತ್ರ ಸಂನ್ಯಾಸವನ್ನು ತೆಗೆದುಕೊಳ್ಳಬೇಕೆಂದು ಉಪದೇಶವಿದೆ. ಮುಪ್ಪಿನಿಂದ ಗಲಿತ ಶರೀರವುಳ್ಳವನೂ, ಶತ್ರುಗಳಿಂದ ವಂಚಿತನಾದವನೂ ಸಂನ್ಯಾಸವನ್ನು ತೆಗೆದುಕೊಳ್ಳಬಹುದು. ಆದುದರಿಂದ ಕೃತಪ್ರಜ್ಞರು ಇದನ್ನು ತ್ಯಾಗವೆಂದು ಪರಿಗಣಿಸುವುದಿಲ್ಲ. ಸೂಕ್ಷ್ಮದರ್ಶಿಗಳು ಇದನ್ನು ಧರ್ಮದ ಅತಿಕ್ರಮವೆಂದೇ ತಿಳಿಯುತ್ತಾರೆ. ಅದರಲ್ಲಿಯೇ ಹುಟ್ಟಿ, ಅದರಲ್ಲಿಯೇ ನಿರತನಾಗಿದ್ದುಕೊಂಡಿರುವ, ಮತ್ತು ಅದನ್ನು ಆಶ್ರಯಿಸಿಯೇ ಜೀವಿಸುತ್ತಿರುವ ಯಾರು ತಾನೇ

ಕ್ಷತ್ರಿಯ ಧರ್ಮವನ್ನು ನಿಂದಿಸಬಹುದು? ಅವನಲ್ಲಿ ಶ್ರದ್ಧೆಯಿಲ್ಲವೆಂದಾಯಿತಲ್ಲವೇ? ಶ್ರೀಯಿಂದ ವಿಹೀನರಾದವರು, ನಿರ್ಧನರು ಮತ್ತು ನಾಸ್ತಿಕರಿಂದ ಸುತ್ತುವರೆಯಲ್ಪಟ್ಟವನು ವೇದವಾಕ್ಯವಾದ ವಿಜ್ಞಾನವನ್ನು ಸತ್ಯದ ಅಭಾಸವೆಂದೂ ಸುಳ್ಳೆಂದೂ ಪ್ರಚಾರಮಾಡುತ್ತಾರೆ. ಮುಂಡನಾಗಿ ಧರ್ಮದ ಸೋಗನ್ನು ಹಾಕಿಕೊಂಡು ತನ್ನ ಹೊಟ್ಟೆಯನ್ನು ಮಾತ್ರ ಹೊರೆದುಕೊಳ್ಳುತ್ತಾ ಇರಬಹುದು. ಆದರೆ ಇದರಿಂದ ಕಾಲಕಳೆಯಬಹುದೇ ಹೊರತು ಜೀವನದ ಸಾರ್ಥಕ್ಯವನ್ನು ಹೊಂದಲು ಸಾಧ್ಯವಾಗುವುದಿಲ್ಲ. ಪುತ್ರ-ಪೌತ್ರರನ್ನು ಸಾಕಲಾಗದವನು ಮತ್ತು ದೇವರ್ಷಿ-ಅತಿಥಿ-ಪಿತೃಗಳನ್ನು ತೃಪ್ತಿಪಡಿಸಲಾಗದವನು ಏಕಾಕಿಯಾಗಿ ಅರಣ್ಯದಲ್ಲಿ ಸುಖವಾಗಿ ಜೀವಿಸಬಹುದು. ಅರಣ್ಯದಲ್ಲಿ ಜೀವಿಸುವುದರಿಂದ ಮಾತ್ರಕ್ಕೆ ಸ್ವರ್ಗವು ದೊರೆಯುವುದಿಲ್ಲ. ಹಾಗಿದ್ದರೆ ಅರಣ್ಯದಲ್ಲಿ ವಾಸಿಸುವ ಜಿಂಕೆ-ಹಂದಿ-ಪಕ್ಷಿಗಳು ಅದೇ ಪ್ರಕಾರವಾಗಿ ಪುಣ್ಯವಂತರೆಂದು ಜನರು ಹೇಳುತ್ತಿದ್ದರು. ಒಂದು ವೇಳೆ ಸಂನ್ಯಾಸದಿಂದ ಸಿದ್ಧಿಯು ದೊರಕುತ್ತದೆಯೆಂತಾದರೆ ಪರ್ವತ-ವೃಕ್ಷಗಳು ಕ್ಷಿಪ್ರವಾಗಿ

ಸಿದ್ಧಿಯನ್ನು ಪಡೆದುಕೊಂಡು ಬಿಡುತ್ತಿದ್ದವು! ಇವುಗಳು ನಿತ್ಯ ಸಂನ್ಯಾಸಿಗಳಂತೆಯೇ ತೋರುತ್ತವೆ. ಯಾರಿಗೂ ಉಪದ್ರವವನ್ನು ಕೊಡುವುದಿಲ್ಲ. ಯಾರಿಂದ ಏನನ್ನೂ ತೆಗೆದುಕೊಳ್ಳುವುದಿಲ್ಲ. ಸತತವೂ ಆತ್ಮವ್ರತದಲ್ಲಿಯೇ ಇರುತ್ತವೆ. ನಮ್ಮ ಭಾಗ್ಯಗಳಲ್ಲಿ ಅನ್ಯರ ಸಿದ್ಧಿಗಳು ಪಾಲ್ಗೊಳ್ಳುವುದಿಲ್ಲ. ಆದುದರಿಂದ ಕರ್ಮ-ಕರ್ತವ್ಯಗಳಿಂದಲೇ ಸಿದ್ಧಿಯು ನಮಗೆ ದೊರೆಯುತ್ತದೆ. ಕರ್ಮಗಳನ್ನು ತ್ಯಜಿಸುವುದರಿಂದಲ್ಲ! ಅನ್ಯರ ಭರಣ-ಪೋಷಣ ಮಾಡದೇ ತನ್ನನ್ನೇ ನೋಡಿಕೊಳ್ಳುವುದರಿಂದ ಸಿದ್ಧಿಯು ದೊರೆಯುತ್ತದೆ ಎಂತಾದರೆ ಭೂಮಿಯ ಮೇಲಿರುವ ಎಲ್ಲ ಜಲಚರ ಪ್ರಾಣಿಗಳೂ ಸಿದ್ಧಿಯನ್ನು ಪಡೆಯಬೇಕಾಗಿದ್ದಿತು. ತಮ್ಮ ತಮ್ಮ ಕರ್ಮಗಳಿಂದ ಈ ಅಖಂಡ ವಿಶ್ವವೂ ಬಂಧಿಸಿಕೊಂಡಿರುವುದನ್ನು ನೋಡು. ಆದುದರಿಂದ ಕರ್ಮವೇ ಕರ್ತವ್ಯ. ಕರ್ಮಗಳನ್ನು ಮಾಡದೇ ಇರುವುದರಿಂದ ಸಿದ್ಧಿಯು ಇಲ್ಲ."

ಅರ್ಜುನನು ಹೇಳಿದನು:

"ಭರತರ್ಷಭ! ಈ ವಿಷಯದಲ್ಲಿ ಪುರಾತನ

ಇತಿಹಾಸವಾಗಿರುವ ತಾಪಸರು ಮತ್ತು ಶಕ್ರನ ನಡುವೆ ನಡೆದ ಸಂವಾದವನ್ನು ಉದಾಹರಿಸಿ ಹೇಳುತ್ತಾರೆ.”

ಆಗ ಅರ್ಜುನನು ಯುಧಿಷ್ಠಿರನಿಗೆ ತಾಪಸರು ಮತ್ತು ಇಂದ್ರನ ನಡುವೆ ಸಂವಾದವನ್ನು ವರ್ಣಿಸಿ,

“ನೀನೂ ಕೂಡ ಧೈರ್ಯವನ್ನು ತಾಳಿ ಶತ್ರುಗಳಿಂದ ರಹಿತವಾಗಿರುವ ಈ ಇಡೀ ಭೂಮಿಯನ್ನು ಆಳು!”

ಎಂದನು.

ಅರ್ಜುನನ ಮಾತನ್ನು ಕೇಳಿ ಅರಿಂದಮ ಮಹಾಬಾಹು ವಿಶಾಲವಕ್ಷ ಮಿತಭಾಷೀ ಮಹಾಪ್ರಾಜ್ಞ ನಕುಲನು ಅಣ್ಣನ ಮನಸ್ಸನ್ನು ಬದಲಾಯಿಸಲು ಧರ್ಮಭೃತರೆಲ್ಲರಲ್ಲಿ ಶ್ರೇಷ್ಠನಾದ ರಾಜ ಯುಧಿಷ್ಠಿರನನ್ನು ನೋಡಿ ಹೀಗೆ ಹೇಳಿದನು:

“ಮಹಾರಾಜ! ವಿಶಾಖಯೂಪದಲ್ಲಿ ದೇವತೆಗಳೆಲ್ಲರೂ ಅಗ್ನಿಗಳನ್ನು ಪ್ರತಿಷ್ಠಾಪಿಸಿದ್ದರು. ಇದರಿಂದ ದೇವತೆಗಳೂ ಕರ್ಮಪಥದಲ್ಲಿ ನಿರತರಾಗಿರುತ್ತಾರೆ ಎಂದು ತಿಳಿಯಬಹುದು. ಆಸ್ತಿಕ-ಅನಾಸ್ತಿಕರಿಗೆ ಅನ್ನವನ್ನು ದಯಪಾಲಿಸುವ ಪಿತೃಗಳೂ ಕೂಡ ವಿಧಿದೃಷ್ಟವಾದ ಕರ್ಮಗಳನ್ನೇ ಮಾಡುತ್ತಾರೆ

ನೋಡು! ವೇದವಾದಗಳಿಂದ ಮೋಹಗೊಂಡವರು ಹೆಚ್ಚು ನಾಸ್ತಿಕರೆಂದು ತಿಳಿ. ಎಲ್ಲ ಕರ್ಮಗಳಲ್ಲಿ ವೇದೋಕ್ತವಾದವುಗಳನ್ನು ಬಿಟ್ಟುಮಾಡುವ ವಿಪ್ರನು ದೇವಯಾನದ ಮೂಲಕ ಮೇಲಿನ ಸ್ವರ್ಗವನ್ನು ತಲುಪಲಾರ! ವೇದನಿಶ್ಚಯಗಳನ್ನು ತಿಳಿದಿರುವ ಮತ್ತು ಶೃತಿಸಂಪನ್ನರಾದ ಬ್ರಾಹ್ಮಣರು ಈ ಗೃಹಸ್ಥಾಶ್ರಮವು ಎಲ್ಲ ಆಶ್ರಮಗಳಿಗಿಂತ ಅತಿಶಯವಾದುದು ಎನ್ನುತ್ತಾರೆ. ಅವರು ಹೇಳುವುದನ್ನು ಕೇಳು. ಧರ್ಮದಿಂದ ಗಳಿಸಿದ ವಿತ್ತವನ್ನು ಮುಖ್ಯ ಕ್ರತುಗಳಿಗೆ ಉಪಯೋಗಿಸಿ ಕೃತಾತ್ಮನಾದ ನರನನ್ನೇ ತ್ಯಾಗೀ ಎಂದು ಹೇಳುತ್ತಾರೆ. ಗೃಹಸ್ಥಾಶ್ರಮದಲ್ಲಿರುವ ಸುಖವನ್ನು ತ್ಯಜಿಸಿ ನಂತರದ ವಾನಪ್ರಸ್ಥ-ಸನ್ಯಾಸ ಆಶ್ರಮಗಳಲ್ಲಿ ನಿಷ್ಠೆಯನ್ನು ಹೊಂದಿ ಆತ್ಮತ್ಯಾಗ ಮಾಡುವವನನ್ನು ತಾಮಸತ್ಯಾಗೀ ಎಂದು ಹೇಳುತ್ತಾರೆ. ಮನೆಯಿಲ್ಲದೇ ತನ್ನ ಆಹಾರವನ್ನು ತಾನೇ ತಯಾರಿಸದೇ ಭಿಕ್ಷೆಗಾಗಿ ಎಲ್ಲೆಲ್ಲಿಯೋ ತಿರುಗಾಡುತ್ತಾ ಮರಗಳ ಬುಡವನ್ನೇ ಆಶ್ರಯಿಸಿ ಸದಾ ಯೋಗಯುಕ್ತನಾಗಿ ಸರ್ವಕರ್ಮಗಳನ್ನು ತ್ಯಾಗಮಾಡಿದವನನ್ನು ಭಿಕ್ಷುಕನೆಂದು ಹೇಳುತ್ತಾರೆ. ಕ್ರೋಧ-ಹರ್ಷಗಳನ್ನು ಅನಾದರಿಸಿ, ಅದರಲ್ಲೂ

ವಿಶೇಷವಾಗಿ, ಇನ್ನೊಬ್ಬರನ್ನು ದ್ವೇಷಿಸುವುದನ್ನು ಬಿಟ್ಟು, ವೇದಾಧ್ಯಯನದಲ್ಲಿ ನಿರತನಾಗಿ ಗುರುಪೂಜಕನಾದ ವಿಪ್ರನೇ ತ್ಯಾಗಿ. ಒಮ್ಮೆ ವಿದ್ವಾಂಸರು ಒಂದು ಕಡೆ ಗೃಹಸ್ಥಾಶ್ರಮವನ್ನೂ ಮತ್ತೊಂದು ಕಡೆ ಉಳಿದ – ಬ್ರಹ್ಮಚರ್ಯ, ವಾನಪ್ರಸ್ಥ ಮತ್ತು ಸನ್ಯಾಸ – ಈ ಮೂರು ಆಶ್ರಮಗಳನ್ನು ಇಟ್ಟು ಸರ್ವ ಆಶ್ರಮಗಳನ್ನೂ ತುಲನೆಮಾಡಿದರೆಂದು ಹೇಳುತ್ತಾರೆ. ಸಮೀಕ್ಷಿಸಿದಾಗ ಗೃಹಸ್ಥಾಶ್ರಮವೇ ಹೆಚ್ಚಿನದೆಂದು ತಿಳಿಯುತ್ತದೆ. ಏಕೆಂದರೆ ಈ ಆಶ್ರಮದಿಂದ ಇಹದಲ್ಲಿ ಕಾಮಭೋಗಗಳನ್ನೂ ನಂತರ ಸ್ವರ್ಗವನ್ನೂ ಪಡೆಯಬಹುದು. ಇದೇ ಮಹರ್ಷಿಗಳೂ ಲೋಕವಿದರೂ ಬಳಸುವ ಮಾರ್ಗ. ಈ ಭಾವದಂತೆ ಮಾಡುವವನೇ ತ್ಯಾಗೀ. ಮನೆಗಳನ್ನು ಪರಿತ್ಯಜಿಸಿ ವಿಮೂಢನಾಗಿ ವನಕ್ಕೆ ಹೋಗುವವನಲ್ಲ! ಧರ್ಮದ ಸೋಗಿನಿಂದ ಅರಣ್ಯದಲ್ಲಿ ವಾಸಮಾಡುವವನು ಕಾಮಾಸಕ್ತನಾದರೆ ಮೃತ್ಯುರಾಜನು ಕೂಡಲೇ ಅವನ ಕುತ್ತಿಗೆಯನ್ನು ಮೃತ್ಯುಪಾಶದಿಂದ ಬಂಧಿಸುತ್ತಾನೆ. ಅಭಿಮಾನದಿಂದ ಮಾಡಿದ ಕರ್ಮಗಳು ಎಂದಿಗೂ ಫಲವನ್ನು

ಕೊಡುವುದಿಲ್ಲವೆಂದು ಹೇಳುತ್ತಾರೆ. ತ್ಯಾಗಬುದ್ಧಿಯಿಂದ ಮಾಡಿದುದೆಲ್ಲವೂ ಮಹಾಫಲಗಳನ್ನು ಕೊಡುತ್ತವೆ. ಶಮ, ದಮ, ತಪಸ್ಸು, ದಾನ, ಸತ್ಯ, ಶೌಚ, ಸರಳತೆ, ಯಜ್ಞ, ಧೃತಿ, ಧರ್ಮ – ಇವು ಋಷಿಗಳ ನಿತ್ಯವಿಧಿಯೆಂದು ಹೇಳುತ್ತಾರೆ. ಗೃಹಸ್ಥಾಶ್ರಮದಲ್ಲಿ ಪಿತೃ-ದೇವತೆಗಳು ಮತ್ತು ಅತಿಥಿಗಳ ಪೂಜೆಗಳು ಕೂಡಿಕೊಂಡಿರುವುದರಿಂದ ಅದನ್ನು ಪ್ರಶಂಸಿಸಿದ್ದಾರೆ. ಇದರಲ್ಲಿಯೇ ಧರ್ಮ-ಅರ್ಥ-ಕಾಮಗಳೆಂಬ ಮೂರು ಫಲಗಳು ಪ್ರಾಪ್ತವಾಗುತ್ತವೆ. ಗೃಹಸ್ಥಾಶ್ರಮದಲ್ಲಿಯೇ ಇದ್ದುಕೊಂಡು ವೇದವಿಹಿತ ವಿಪ್ರಕರ್ಮಗಳನ್ನು ಫಲಾಪೇಕ್ಷೆಗಳಿಲ್ಲದೇ ನಿಷ್ಠೆಯಿಂದ ಮಾಡುತ್ತಿರುವ ತ್ಯಾಗಿಗೆ ಪರಲೌಕಿಕ ಉನ್ನತಿಯೂ ಕಡಿದುಹೋಗುವುದಿಲ್ಲ. ವಿವಿಧ ದಕ್ಷಿಣೆಗಳಿಂದ ಯುಕ್ತವಾದ ಯಜ್ಞಗಳಿಂದ ನನ್ನನ್ನು ಆರಾಧಿಸುತ್ತಾರೆ ಎಂದೇ ಶಾಂತಾತ್ಮಾ ಅಕಲ್ಮಷ ಪ್ರಜಾಪತಿಯು ಪ್ರಜೆಗಳನ್ನು ಸೃಷ್ಟಿಸಿದನು. ಯಜ್ಞಕ್ಕಾಗಿಯೇ ಅವನು ಔಷಧಿಲತೆಗಳನ್ನೂ, ವೃಕ್ಷಗಳನ್ನೂ, ಪಶುಗಳನ್ನೂ ಮತ್ತು ಮೇಧ-ಅನ್ನಗಳನ್ನೂ, ಹವಿಸ್ಸುಗಳನ್ನೂ ಸೃಷ್ಟಿಸಿದನು. ಗೃಹಸ್ಥಾಶ್ರಮಿಗೆ ಯಜ್ಞಕರ್ಮಗಳು ಮಾಡಲೇ ಬೇಕಾದ

ಒಂದು ಬಂಧನ. ಇದರಿಂದಾಗಿ ಗೃಹಸ್ಥಾಶ್ರಮವು ದುಷ್ಕರವೂ ದುರ್ಲಭವೂ ಆಗಿರುತ್ತದೆ. ಪಶುಧಾನ್ಯಗಳನ್ನು ಸಂಪಾದಿಸಿದ ಯಾವ ಗೃಹಸ್ಥನು ಯಜ್ಞ ಮಾಡುವುದಿಲ್ಲವೋ ಅವನು ಶಾಶ್ವತ ಪಾಪಿಯಾಗುತ್ತಾನೆ. ಋಷಿಗಳು ಸ್ವಾಧ್ಯಾಯವೆಂಬ ಯಜ್ಞವನ್ನು ಮಾಡುತ್ತಾರೆ. ಇನ್ನು ಕೆಲವರು ಜ್ಞಾನಯಜ್ಞವನ್ನು ಮಾಡುತ್ತಾರೆ. ಇನ್ನೂ ಇತರರು ಮನಸ್ಸಿನಲ್ಲಿಯೇ ಮಹಾಯಜ್ಞಗಳನ್ನು ಮಾಡುತ್ತಿರುತ್ತಾರೆ. ಹೀಗೆ ದಾನ-ಸಮಾಧಾನಗಳ ಮಾರ್ಗವನ್ನು ಹಿಡಿದಿರುವ ಬ್ರಹ್ಮಭೂತ ದ್ವಿಜರನ್ನು ನೋಡಲು ದೇವತೆಗಳೂ ಅಪೇಕ್ಷಿಸುತ್ತಾರೆ. ಅಲ್ಲಲ್ಲಿಂದ ಸಂಗ್ರಹಿಸಿರುವ ವಿಚಿತ್ರ ರತ್ನಗಳನ್ನು ನಾವು ಯಜ್ಞಗಳ ಮೂಲಕವಾಗಿ ಹಂಚಬೇಕಾಗಿದೆ. ಹೀಗಿರುವಾಗ ನೀನು ನಾಸ್ತಿಕನಂತೆ ಮಾತನಾಡುತ್ತಿರುವೆ! ಕುಟುಂಬದಲ್ಲಿದ್ದುಕೊಂಡು ಸರ್ವಸಂಗಪರಿತ್ಯಾಗಿಯಾಗುವುದನ್ನು ನಾನೆಲ್ಲೂ ನೋಡಿಲ್ಲ. ದೇವಪತಿ ಶಕ್ರನಂತೆ ರಾಜಸೂಯ, ಅಶ್ವಮೇಧ, ಸರ್ವಮೇಧ ಅಥವಾ ಬ್ರಾಹ್ಮಣರಿಂದ ಪೂಜಿತವಾದ ಇನ್ನು ಬೇರೆ ಯಾವುದೇ ಕ್ರತುಗಳನ್ನು ಯಾಜಿಸು. ಯಾವ ರಾಜನು

ಪ್ರಮಾದದೋಷದಿಂದ ಪ್ರಜೆಗಳಿಗೆ ಕಳ್ಳ-ಕಾಕರಿಂದ ರಕ್ಷಣೆಯನ್ನು ನೀಡುವುದಿಲ್ಲವೋ ಅಂತಹ ರಾಜನಿಗೆ ಕಲಿ ಎಂದು ಕರೆಯುತ್ತಾರೆ. ಕುದುರೆಗಳು, ಗೋವುಗಳು, ದಾಸಿಯರು, ಅಲಂಕೃತ ಆನೆಗಳು, ಗ್ರಾಮಗಳು, ಜನಪದಗಳು, ಕ್ಷೇತ್ರಗಳು ಮತ್ತು ಗೃಹಗಳನ್ನು ಮಾತ್ಸರ್ಯವಿಲ್ಲದೇ ದ್ವಿಜರಿಗೆ ಕೊಡದೇ ಇದ್ದರೆ ನಾವೂ ಕೂಡ ಕಲಿರಾಜರಾಗುತ್ತೇವೆ. ದಾನಮಾಡದಿರುವವರು ಮತ್ತು ರಕ್ಷಣೆನೀಡದಿರುವವರು ರಾಜಕಿಲ್ಬಿಷಗಳಿಗೆ ಭಾಗಿಗಳಾಗುತ್ತಾರೆ ಮತ್ತು ದುಃಖವನ್ನೇ ಅನುಭವಿಸುತ್ತಾರೆಯೇ ಹೊರತು ಎಂದೂ ಸುಖಿಗಳಾಗುವುದಿಲ್ಲ. ಇಷ್ಟಿಗಳನ್ನು ಮತ್ತು ಮಹಾಯಜ್ಞಗಳನ್ನು ಮಾಡದೇ, ಪಿತೃಗಳನ್ನು ಪೂಜಿಸದೇ, ತೀರ್ಥಗಳಲ್ಲಿ ಮೀಯದೇ ನೀನು ಅರಣ್ಯಕ್ಕೆ ಹೊರಟೆಯೆಂದಾದರೆ ಭಿರುಗಾಳಿಯ ಹೊಡೆತಕ್ಕೆ ಸಿಲುಕಿ ಒಡೆದು ಚದುರಿಹೋಗುವ ಮೋಡದಂತೆ ನಾಶವಾಗುವೆ. ಇಹ-ಪರ ಲೋಕಗಳೆರಡರಿಂದಲೂ ಭ್ರಷ್ಟನಾಗಿ ಮಧ್ಯದಲ್ಲಿಯೇ ಸಿಲುಕಿಗೊಳ್ಳುವೆ! ಬಹಿರಂಗವಾಗಿ ಮತ್ತು

ಅಂತರಂಗವಾಗಿ ಮನಸ್ಸನ್ನು ಯಾವಾಗಲೂ ಸಂಗದಲ್ಲಿ ತೊಡಗಿಸುವಂತಹ ಅಹಂಕಾರ-ಮಮಕಾರಗಳನ್ನು ತೊರೆಯುವುದರಿಂದ ಮಾತ್ರ ತ್ಯಾಗೀ ಎನಿಸಿಕೊಳ್ಳುತ್ತಾನೆಯೇ ಹೊರತು ಕೇವಲ ಗೃಹಸ್ಥಾಶ್ರಮವನ್ನು ತೊರೆಯುವುದರಿಂದಲ್ಲ. ಇಂತಹ ಗೃಹಸ್ಥಾಶ್ರಮದಲ್ಲಿದ್ದುಕೊಂಡು ವೇದಪ್ರಣೀತವಾದ ಮತ್ತು ವಿಪ್ರರು ಗೌರವಿಸುವ ರೀತಿಯಲ್ಲಿ ನಡೆದುಕೊಂಡ ಬ್ರಾಹ್ಮಣನಿಗೆ ಎಂದೂ ಪತನವೆನ್ನುವುದಿರುವುದಿಲ್ಲ. ಯುದ್ಧದಲ್ಲಿ ಶಕ್ರನು ಹೇಗೆ ದೈತ್ಯಬಲಗಳನ್ನೋ ಹಾಗೆ ಸಮೃದ್ಧರಾಗಿದ್ದ ಶತ್ರುಗಳನ್ನು ಬೇಗನೆ ಸಂಹರಿಸಿ ಶೋಕಿಸುತ್ತಿರುವ ನಿನ್ನಂತೆ ಈ ಹಿಂದೆ ರಾಜರಿಗೆ ತಕ್ಕದೆನಿಸಿದ ಸ್ವಧರ್ಮದಲ್ಲಿ ನಿರತನಾಗಿದ್ದ ಯಾವ ರಾಜನು ತಾನೇ ಶೋಕಿಸಿದ್ದನು? ಕ್ಷಾತ್ರಧರ್ಮದ ಪ್ರಕಾರ ಪರಾಕ್ರಮದಿಂದ ಈ ಮಹಿಯನ್ನು ಗೆದ್ದು, ಮಂತ್ರವತ್ತಾಗಿ ಅದನ್ನು ದ್ವಿಜರಿಗೆ ದಾನಮಾಡಿ, ನಾಕಕ್ಕಿಂತಲೂ ಮೇಲಿರುವ ಲೋಕಗಳಿಗೆ ಹೋಗುತ್ತೀಯೆ. ಆದುದರಿಂದ ನೀನು ಶೋಕಿಸುವ ಅವಶ್ಯಕತೆಯಿಲ್ಲ.”

ಸಹದೇವನು ಹೇಳಿದನು:

“ಭಾರತ! ಬಾಹ್ಯದ್ರವ್ಯಗಳನ್ನು ತ್ಯಜಿಸುವುದರಿಂದ ಸಿದ್ಧಿಯಾಗುವುದಿಲ್ಲ. ಶಾರೀರಿಕ ದ್ರವ್ಯಗಳಾದ ಅಹಂಕಾರ-ಮಮಕಾರಗಳನ್ನು ತೊರೆಯುವುದರಿಂದ ಸಿದ್ಧಿಯುಂಟಾಗಬಹುದು ಅಥವಾ ಆಗದೆಯೂ ಇರಬಹುದು. ಬಾಹ್ಯದ್ರವ್ಯಗಳಿಂದ ವಿಹೀನನಾಗಿ ಶಾರೀರಿಕ ದ್ರವ್ಯಗಳಲ್ಲಿ ಆಸಕ್ತಿಯಿರುವವನ ಧರ್ಮವು ಯಾವುದೋ ಮತ್ತು ಅಂಥವನಿಗೆ ಯಾವ ಸುಖವು ದೊರೆಯುವುದೋ ಅದು ನಮ್ಮ ಶತ್ರುಗಳ ಧರ್ಮ-ಸುಖಗಳಾಗಲಿ. ಶಾರೀರಿಕ ದ್ರವ್ಯಗಳನ್ನು ತ್ಯಜಿಸಿ ಪೃಥ್ವಿಯನ್ನು ಆಳುವವನ ಧರ್ಮವು ಯೋವುದೋ ಮತ್ತು ಅಂಥವನಿಗೆ ಯಾವ ಸುಖವು ದೊರೆಯುವುದೋ ಆ ಧರ್ಮ-ಸುಖಗಳು ನಮ್ಮ ಆತ್ಮೀಯರದ್ದಾಗಲಿ. “ಮಮ” ಎನ್ನುವ ಎರಡಕ್ಷರಗಳನ್ನು ಅನುಸಂಧಾನ ಮಾಡುವುದರಿಂದ ಮೃತ್ಯುವುಂಟಾಗುತ್ತದೆ. “ನ ಮಮ” ಎಂಬ ಮೂರಕ್ಷರಗಳನ್ನು ಅನುಸಂಧಾನಮಾಡುವುದರಿಂದ ಶಾಶ್ವತವಾದ ಬ್ರಹ್ಮಲೋಕವು ಪ್ರಾಪ್ತವಾಗುತ್ತದೆ. ಈ ಬ್ರಹ್ಮ-ಮೃತ್ಯುಗಳು

ಭೂತಗಳ ಆತ್ಮದಲ್ಲಿಯೇ ಅದೃಶ್ಯರಾಗಿ ಇದ್ದುಕೊಂಡು ಪರಸ್ಪರರ ವಿರುದ್ಧವಾಗಿ ಹೋರಾಡುತ್ತಿರುತ್ತವೆ ಎನ್ನುವುದರಲ್ಲಿ ಸಂಶಯವಿಲ್ಲ. ಈ ಸತ್ತ್ವವು ಅವಿನಾಶೀ ಎಂದು ನಿಯಮವಿರುವುದರಿಂದ ಜೀವಿಗಳ ಶರೀರವನ್ನು ಕತ್ತರಿಸಿದರೂ ಆ ಸತ್ತ್ವಕ್ಕೆ ಹಿಂಸೆಯಾಗುವುದಿಲ್ಲ ಎಂದಲ್ಲವೇ? ಆದರೆ ಶರೀರದೊಂದಿಗೆ ಸತ್ತ್ವವು ಹುಟ್ಟುತ್ತದೆ ಮತ್ತು ಅದರೊಂದಿಗೆ ವಿನಾಶವೂ ಆಗುತ್ತದೆ ಎಂದು ತಿಳಿದುಕೊಂಡರೆ ನಾವು ಮಾಡುವ ಕ್ರಿಯೆಗಳೆಲ್ಲವೂ ವ್ಯರ್ಥವೇ ಎಂದಾಯಿತಲ್ಲವೇ? ಆದುದರಿಂದ ತಿಳಿದವನು ಏಕಾಂತವನ್ನು ತ್ಯಜಿಸಿ ನಮ್ಮ ಪೂರ್ವಜರು ಮತ್ತು ಅವರ ಪೂರ್ವಜರು ಹಾಗೂ ಸತ್ಪುರುಷರು ಅನುಸರಿಸುವ ಮಾರ್ಗವನ್ನೇ ಅನುಸರಿಸಬೇಕು. ಸ್ಥಾವರ-ಜಂಗಮಗಳೊಡನೆ ಇಡೀ ಪೃಥ್ವಿಯನ್ನು ಪಡೆದರೂ ಯಾವ ನೃಪನು ಅದನ್ನು ಭೋಗಿಸುವುದಿಲ್ಲವೋ ಅಂಥವನ ಜೀವನವು ಸಂಪೂರ್ಣವಾಗಿ ನಿಷ್ಫಲವೇ ಸರಿ. ವನದಲ್ಲಿ ವಾಸವಾಗಿರಲಿ ಅಥವಾ ವನ್ಯಪದಾರ್ಥಗಳಿಂದ ಜೀವನ ನಡೆಸುತ್ತಿರಲಿ – ಯಾರ ಮಮತೆಯು ದ್ರವ್ಯಗಳ ಮೇಲಿರುವುದೋ ಅವನು

ಮೃತ್ಯುವಶನಾದಂತೆಯೇ ಸರಿ. ಜೀವಿಗಳ ಹೊರಗಿನ ಮತ್ತು ಒಳಗಿನ ಸ್ವಭಾವವನ್ನು ನೋಡು. ಅವುಗಳ ಭಾವಗಳನ್ನು ತಿಳಿದವನು ಮಹಾಭಯದಿಂದ ಮುಕ್ತನಾಗುತ್ತಾನೆ.  ನೀನೇ ನನ್ನ ತಂದೆ, ತಾಯಿ, ಅಣ್ಣ ಮತ್ತು ಗುರು. ದುಃಖದಿಂದ ಪ್ರಲಪಿಸುತ್ತಿರುವ ಈ ಆರ್ತನನ್ನು ನೀನು ಕ್ಷಮಿಸಬೇಕು. ಕೇವಲ ಭಕ್ತಿಯಿಂದ ನಾನು ನಿಜವಾಗಿರುವ ಅಥವಾ ಸುಳ್ಳಾಗಿರುವ ಈ ಮಾತುಗಳನ್ನಾಡಿದ್ದೇನೆಂದು ನೀನು ತಿಳಿದುಕೊಳ್ಳಬೇಕು.”

ವಿವಿಧ ವೇದನಿಶ್ಚಯಗಳ ಕುರಿತು ತಮ್ಮಂದಿರು ಹೇಳುತ್ತಿದ್ದರೂ ಕೌಂತೇಯ ಧರ್ಮರಾಜ ಯುಧಿಷ್ಠಿರನು ಸುಮ್ಮನಿರಲು ಸತ್ಕುಲಸಂಪನ್ನೆ ವಿಶಾಲಾಕ್ಷಿ ಸ್ತ್ರೀಯರಲ್ಲಿ ಶ್ರೇಷ್ಠೆ ನಿತ್ಯವೂ ವಿಶೇಷ ಅಭಿಮಾನದಿಂದ ಯುಧಿಷ್ಠಿರನನ್ನು ಸೇವೆಗೈಯುತ್ತಿದ್ದ, ವಿಪುಲಶ್ರೋಣೀ ಧರ್ಮಜ್ಞೆ ಧರ್ಮದರ್ಶಿನೀ ದ್ರೌಪದಿಯು ಆನೆಗಳಿಂದ ಸುತ್ತುವರೆಯಲ್ಪಟ್ಟ ಸಲಗದಂತೆ ಸಹೋದರರ ಮಧ್ಯದಲ್ಲಿ ಕುಳಿತಿದ್ದ ಸಿಂಹಶಾರ್ದೂಲ ರಾಜ ಪತಿಯನ್ನು ನೋಡಿ ಸಾಂತ್ವನ ಪೂರ್ಣವಾದ ಈ ಮಧುರ ಮಾತುಗಳನ್ನಾಡಿದಳು:

“ಪಾರ್ಥ ! ನಿನ್ನ ಈ ಸಹೋದರರು ಬಾಡಿದ

ಮುಖವುಳ್ಳವರಾಗಿದ್ದಾರೆ. ನಿನ್ನನ್ನು ಬೇಡಿಕೊಳ್ಳುತ್ತಿದ್ದರೂ ನೀನು ಅವರನ್ನು ಅಭಿನಂದಿಸುತ್ತಿಲ್ಲ! ಮಹಾರಾಜ! ಮದಿಸಿದ ಮಹಾಗಜಗಳಂತಿರುವ ಇವರನ್ನು ಸಂತೋಷಗೊಳಿಸು. ಸತತವೂ ದುಃಖವನ್ನೇ ಅನುಭವಿಸುತ್ತಿರುವ ಅವರನ್ನು ನಿನ್ನ ಮಾತುಗಳಿಂದ ಸಮಾಧಾನಗೊಳಿಸು. ಹಿಂದೆ ದ್ವೈತವನದಲ್ಲಿ ಸಹೋದರರ ಸಹಿತ ಛಳಿ-ಗಾಳಿ-ಬಿಸಿಲುಗಳಿಂದ ಪೀಡಿತರಾಗಿದ್ದಾರ ನೀನು ಅವರಿಗೆ ಹೇಳಿದ್ದ ಈ ಮಾತುಗಳು ನಿನಗೆ ಹೇಗೆ ಈಗ ನೆನಪಿಲ್ಲ? "ವಿಜಯೇಚ್ಛುಗಳಾದ ನಾವು ಯುದ್ಧದಲ್ಲಿ ದುರ್ಯೋಧನನನ್ನು ವಧಿಸಿ, ರಥಿಗಳನ್ನು ರಥಹೀನರನ್ನಾಗಿಸಿ, ಮಹಾಗಜಗಳನ್ನು ಸಂಹರಿಸಿ, ಕುದುರೆ ಸವಾರರಿಂದ ಕೂಡಿದ ರಥಗಳಿಂದ ಈ ಭೂಮಿಯನ್ನು ಮುಚ್ಚಿ ಸಕಲ ಕಾಮನವಸ್ತುಗಳಿಂದಲೂ ಸಮೃದ್ಧವಾದ ಈ ಮೇದಿನಿಯನ್ನು ಭೋಗಿಸೋಣ. ಸಮೃದ್ಧ ದಾನ-ದಕ್ಷಿಣೆಗಳಿಂದ ಕೂಡಿದ ವಿವಿಧ ಯಜ್ಞಗಳನ್ನು ಯಜಿಸಿ ವನವಾಸದಲ್ಲಿ ಪಡೆದ ದುಃಖವು ಮುಂದೆ ಸುಖದಲ್ಲಿಯೇ ಕೊನೆಗೊಳ್ಳುವಂತೆ ಮಾಡೋಣ!" ಇದೇ ಮುಂತಾಗಿ ಆಗ ಸ್ವಯಂ ನೀನೇ ಮಾತನಾಡಿ ಈಗ ಪುನಃ ನಮ್ಮ ಮನಸ್ಸನ್ನು

ಏಕೆ ನೋಯಿಸುತ್ತಿರುವೆ? ಹೇಡಿಯು ವಸುಧೆಯನ್ನು ಭೋಗಿಸಲಾರ. ಹೇಡಿಯು ಧನವನ್ನು ಸಂಗ್ರಹಿಸಲಾರ. ಕೆಸರಿನಲ್ಲಿ ಮೀನುಗಳು ಇರಲಾರದಂತೆ ಹೇಡಿಯ ಮನೆಯಲ್ಲಿ ಪುತ್ರರೂ ಇರಲಾರರು. ದಂಡಧಾರಿಯಲ್ಲದ ಕ್ಷತ್ರಿಯನು ಶೋಭಿಸುವುದಿಲ್ಲ. ದಂಡಧಾರಿಯಲ್ಲದವನು ಭೂಮಿಯನ್ನು ಭೋಗಿಸುವುದಿಲ್ಲ. ದಂಡಧಾರಿಯಲ್ಲದ ರಾಜನ ಪ್ರಜೆಗಳು ಸುಖವಾಗಿರುವುದಿಲ್ಲ. ಸರ್ವಭೂತಗಳಲ್ಲಿ ಮಿತ್ರತ್ವ, ದಾನ, ಅಧ್ಯಯನ ಮತ್ತು ತಪಸ್ಸು ಇವು ಬ್ರಾಹ್ಮಣನ ಧರ್ಮ. ರಾಜನದ್ದಲ್ಲ. ದುಷ್ಟನಿಗ್ರಹ, ಶಿಷ್ಟ ಪರಿಪಾಲನೆ ಮತ್ತು ಯುದ್ಧದಲ್ಲಿ ಪಲಾಯನ ಮಾಡದಿರುವುದು ಇವು ರಾಜರ ಪರಮ ಧರ್ಮ. ಯಾರಲ್ಲಿ ಕ್ಷಮೆ ಮತ್ತು ಕ್ರೋಧಗಳೆರಡೂ, ದಾನ-ಆದಾನಗಳೆರಡೂ, ಭಯ-ಅಭಯಗಳೆರಡೂ, ನಿಗ್ರಹ-ಅನುಗ್ರಹಗಳೆರಡೂ ಇರುತ್ತವೆಯೋ ಆ ರಾಜನೇ ಧರ್ಮವಿದುವೆಂದು ಹೇಳಬಹುದು. ನೀನು ಈ ರಾಜ್ಯವನ್ನು ವೇದಾಧ್ಯಯನದಿಂದಾಗಲೀ, ದಾನಗಳಿಂದಾಗಲೀ, ಇತರರನ್ನು ಸಾಂತ್ವನಗೊಳಿಸಿದೆಯೆಂದಾಗಲೀ, ಯಜ್ಞ-ಯಾಗಗಳನ್ನು ಮಾಡಿದೆಯೆಂದಾಗಲೀ, ಅಥವಾ ಇತರರನ್ನು

ಬೇಡಿ ಪಡೆದುಕೊಳ್ಳಲಿಲ್ಲ. ಅತ್ಯಂತ ವೀರರಾಗಿದ್ದ, ಆನೆ-ಕುದುರೆ-ರಥಗಳೆಂಬ ಮೂರು ಶ್ರೇಷ್ಠ ಸೇನಾಭಾಗಗಳಿಂದ ಸಂಪನ್ನವಾಗಿದ್ದ, ದ್ರೋಣ-ಕರ್ಣ-ಅಶ್ವತ್ಥಾಮ-ಕೃಪರಿಂದ ರಕ್ಷಿತವಾಗಿದ್ದ ಶತ್ರುಸೇನೆಗಳನ್ನು ಸಂಹರಿಸಿ ಗಳಿಸಿದ ಈ ವಸುಂಧರೆಯನ್ನು ನೀನು ಭೋಗಿಸು! ನಾನಾ ಜನಪದಗಳಿಂದ ಕೂಡಿರುವ ಈ ಜಂಬೂದ್ವೀಪವನ್ನು ನೀನು ದಂಡದಿಂದ ಶತ್ರುಗಳನ್ನು ಮರ್ದಿಸಿ ಪಡೆದುಕೊಂಡಿರುವೆ. ಮಹಾಮೇರುವಿನ ಕೆಳಭಾಗದಲ್ಲಿರುವ ಜಂಬೂದ್ವೀಪದಂತೆಯೇ ಇರುವ ಇನ್ನೊಂದು ದ್ವೀಪ ಕ್ರೌಂಚವನ್ನು ನೀನು ದಂಡದಿಂಡ ಮರ್ದಿಸಿ ಪಡೆದುಕೊಂಡಿರುವೆ. ಮಹಾಮೇರು ಪರ್ವತದ ಪೂರ್ವದಲ್ಲಿರುವ ಮತ್ತು ಕ್ರೌಂಚದ್ವೀಪದಂತಿರುವ ಶಾಕದ್ವೀಪವನ್ನೂ ಕೂಡ ನೀನು ದಂಡದಿಂದ ಶತ್ರುಗಳನ್ನು ಮರ್ದಿಸಿ ಸ್ವಾಧೀನಪಡೆಸಿಕೊಂಡಿರುವೆ. ಮಹಾಮೇರುವಿನ ಉತ್ತರದಲ್ಲಿರುವ ಶಾಕದ್ವೀಪಕ್ಕೆ ಕೂಡಿಕೊಂಡಿರುವ ಭದ್ರಾಶ್ವವನ್ನೂ ನೀನು ದಂಡದಿಂದ ಶತ್ರುಗಳನ್ನು ಮದಿಸಿ ಪಡೆದುಕೊಂಡಿರುವೆ. ಅನೇಕ ದೇಶಗಳಿಂದ ಕೂಡಿರುವ

ದ್ವೀಪ-ದ್ವೀಪಾಂತರಗಳನ್ನೂ, ಸಮುದ್ರದ ಆಚೆ ಇರುವ ಎಲ್ಲ ಪ್ರದೇಶಗಳನ್ನೂ ದಂಡದಿಂದಲೇ ಅಧಿಕಾರಕ್ಕೊಳಪಡಿಸಿಕೊಂಡಿರುವೆ. ಈ ಅಪ್ರತಿಮ ಕರ್ಮಗಳನ್ನು ಮಾಡಿ ದ್ವಿಜರಿಂದ ಗೌರವಿಸಲ್ಪಡುತ್ತಿದ್ದರೂ ನಿನಗದು ಸಂತೋಷವನ್ನು ನೀಡುತ್ತಿಲ್ಲ! ನಿನ್ನೊಡನೆ ಸಹಕರಿಸಿರುವ ಈ ನಿನ್ನ ಮದಿಸಿದ ಆನೆಗಳಂತೆ ಮತ್ತು ಗೂಳಿಗಳಂತಿರುವ ಸಹೋದರರನ್ನು ನೋಡಿ ಆನಂದಿಸು! ಅಮರರಂತಿರುವ, ಶತ್ರುಗಳ ವೇಗವನ್ನು ತಡೆಯಬಲ್ಲ, ಪರಂತಪರು ಒಬ್ಬೊಬ್ಬರೂ ನನ್ನನ್ನು ಸುಖದಿಂದಿಟ್ಟಿರಲು ಸಮರ್ಥರೆಂದು ನನಗನ್ನಿಸುತ್ತದೆ. ಶರೀರದ ಸರ್ವೇಂದ್ರಿಯಗಳೂ ಮನುಷ್ಯನನ್ನು ಸುಖಪಡಿಸಲು ಶ್ರಮಿಸುವಂತೆ ಈ ಎಲ್ಲ ಪುರುಷವ್ಯಾಘ್ರ ನರರ್ಷಭ ಪತಿಗಳೂ ಪ್ರಯತ್ನಿಸುತ್ತಿದ್ದಾರೆ! ಸರ್ವದರ್ಶಿನಿಯಾದ ಸರ್ವಜ್ಞೆ ನನ್ನ ಅತ್ತೆ ಕುಂತಿಯು ನನಗೆ ಈ ಸತ್ಯವನ್ನೇ ಹೇಳುತ್ತಿದ್ದಳು: "ಪಾಂಚಾಲೀ! ತನ್ನ ಪರಾಕ್ರಮದಿಂಡ ಸಹಸ್ರಾರು ರಾಜರನ್ನು ಸಂಹರಿಸಿ ಯುಧಿಷ್ಠಿರನು ನಿನಗೆ ಸುಖವನ್ನು ನೀಡುತ್ತಾನೆ!" ಆದರೆ ನಿನ್ನ ಮೋಹದಿಂದಾಗಿ ಆ

ಮಾತು ವ್ಯರ್ಥವಾಯಿತೆಂದೇ ನನಗನ್ನಿಸುತ್ತಿದೆ. ಅಣ್ಣನು ಮರುಳಾದರೆ ತಮ್ಮಂದಿರೂ ಅವನನ್ನು ಅನುಸರಿಸುತ್ತಾರೆ. ನಿನ್ನ ಮರುಳುತನದಿಂದಾಗಿ ಪಾಂಡವರೆಲ್ಲರೂ ಮರುಳಾಗುತ್ತಾರೆ! ಒಂದುವೇಳೆ ನಿನ್ನ ಸಹೋದರರು ಮರುಳಾಗಿರದಿದ್ದರೆ ಇಷ್ಟರಲ್ಲಿ ಉಳಿದ ನಾಸ್ತಿಕರೊಂದಿಗೆ ನಿನ್ನನ್ನು ಬಂಧಿಸಿ ಭೂಮಿಯನ್ನು ಆಳುತ್ತಿದ್ದರು! ಈ ರೀತಿ ಮೂಢನಂತೆ ನಡೆದುಕೊಳ್ಳುವವನಿಗೆ ಎಂದಿಗೂ ಶ್ರೇಯಸ್ಸು ದೊರೆಯುವುದಿಲ್ಲ. ಹೀಗೆ ಅಪಮಾರ್ಗದಲ್ಲಿ ಹೋಗುವವನಿಗೆ ಧೂಪಗಳಿಂದಲೂ, ಕಣ್ಣಿಗೆ ಅಂಜನಾದಿಗಳನ್ನು ಹಚ್ಚುವುದರಿಂದಲೂ, ಮೂಗಿಗೆ ಚೂರ್ಣವನ್ನು ಹಾಕುವುದರಿಂದಲೂ, ಮತ್ತು ಇತರ ಔಷಧಿಗಳಿಂದಲೂ ಚಿಕಿತ್ಸೆಗಳನ್ನು ನಡೆಸಬೇಕಾಗುತ್ತದೆ! ನಾನು ಲೋಕದ ಸ್ತ್ರೀಯರಿಗಿಂಥಲೂ ಅಧಮಳೆಂದು ಭಾವಿಸುತ್ತೇನೆ. ಶತ್ರುಗಳಿಂದ ಈ ರೀತಿ ಮೋಸಗೊಂಡೆನಾದರೂ ಜೀವಿಸಿರಲು ಇಚ್ಛಿಸುತ್ತೇನೆ! ಇವರು ನಿನ್ನನ್ನು ಸಮಾಧಾನ ಪಡೆಸಲು ಪ್ರಯತ್ನಿಸುತ್ತಿದ್ದಾರೆ. ನೀನಾದರೋ ಇಡೀ ಭೂಮಿಯನ್ನೇ ಪಡೆದರೂ ಸ್ವಯಂ ನಿನಗೇ ಆಪತ್ತನ್ನು ತಂದುಕೊಳ್ಳುತ್ತಿದ್ದೀಯೆ!

ರಾಜಸತ್ತಮರಾದ ಮಾಂಧಾತಾ-ಅಂಬರೀಷರಂತೆ ಎಲ್ಲ ರಾಜರಿಂದಲೂ ಪುರಸ್ಕೃತರಾಗಿ ರಾಜ್ಯಭಾರಮಾಡಿ ನೀನೂ ಕೂಡ ವಿರಾಜಿಸು! ಧರ್ಮದಿಂದ ಪ್ರಜೆಗಳನ್ನು ಪಾಲಿಸುತ್ತಾ ಈ ಪರ್ವತ-ವನ-ದ್ವೀಪಗಳಿಂದ ಕೂಡಿದ ದೇವೀ ಪೃಥ್ವಿಯನ್ನು ಆಳುವುದರ ಕುರಿತು ಉದಾಸೀನನಾಗಬೇಡ. ವಿವಿಧ ಯಜ್ಞಗಳಿಂದ ದೇವತೆಗಳನ್ನು ಆರಾಧಿಸು. ಪುರಗಳನ್ನೂ, ಭೋಗವಸ್ತುಗಳನ್ನೂ, ವಸ್ತ್ರಗಳನ್ನೂ ಬ್ರಾಹ್ಮಣರಿಗೆ ದಾನಮಾಡು!"

ಯಾಜ್ಞಸೇನಿಯ ಮಾತನ್ನು ಕೇಳಿ ಪುನಃ ಅರ್ಜುನನು ಮಹಾಬಾಹು ಜ್ಯೇಷ್ಠ ಭ್ರಾತಾ ಈಶ್ವರ ಯುಧಿಷ್ಠಿರನನ್ನು ಗೌರವಿಸಿ ಈ ಮಾತುಗಳನ್ನಾಡಿದನು:

"ದಂಡವು ಪ್ರಜೆಗಳನ್ನು ಆಳುತ್ತದೆ ಹಾಗೂ ರಕ್ಷಿಸುತ್ತದೆ. ಎಲ್ಲರೂ ಮಲಗಿರುವಾಗ ದಂಡವು ಎಚ್ಚೆತ್ತಿರುತ್ತದೆ. ಆದುದರಿಂದ ತಿಳಿದವರು ದಂಡವೇ ಧರ್ಮವೆಂದೂ ಹೇಳುತ್ತಾರೆ. ದಂಡವು ಧರ್ಮವನ್ನು ರಕ್ಷಿಸುತ್ತದೆ. ದಂಡವು ಅರ್ಥವನ್ನೂ ಹಾಗೆಯೇ ಕಾಮವನ್ನೂ ರಕ್ಷಿಸುತ್ತದೆ. ಆದುದರಿಂದ ದಂಡವು ತ್ರಿವರ್ಗರೂಪವಾಗಿರುವುದೆಂದು

ಹೇಳುತ್ತಾರೆ. ದಂಡದಿಂದ ಧಾನ್ಯದ ರಕ್ಷಣೆಯಾಗುತ್ತದೆ. ದಂಡದಿಂದ ಧನದ ರಕ್ಷಣೆಯೂ ಆಗುತ್ತದೆ. ಆದುದರಿಂದ ನೀನೂ ದಂಡಧಾರಣೆಮಾಡು ಮತ್ತು ಲೋಕದ ಸ್ವಭಾವದ ಕಡೆ ಗಮನಹರಿಸು! ರಾಜದಂಡದ ಭಯದಿಂದ ಕೆಲವು ಪಾಪಿಗಳು ಪಾಪಕರ್ಮಗಳನ್ನೆಸಗುವುದಿಲ್ಲ. ಇನ್ನು ಕೆಲವು ಪಾಪಿಗಳು ಯಮದಂಡದ ಭಯದಿಂದ ಮತ್ತು ಪರಲೋಕದ ಭಯದಿಂದ ಪಾಪಕರ್ಮಗಳನ್ನೆಸಗುವುದಿಲ್ಲ. ಕೆಲವು ಪಾಪಿಗಳು ಪರಸ್ಪರರ ಭಯದಿಂದಾಗಿ ಪಾಪಕರ್ಮಗಳನ್ನೆಸಗುವುದಿಲ್ಲ. ಈ ರೀತಿ ಎಲ್ಲವೂ ದಂಡವನ್ನವಲಂಬಿಸಿವೆ ಎಂದು ಲೋಕದಲ್ಲಿ ಸಿದ್ಧವಾಗಿದೆ. ದಂಡದ ಭಯವೊಂದರಿಂದಲೇ ಪರಸ್ಪರರನ್ನು ನುಂಗಿಹಾಕುತ್ತಿಲ್ಲ! ರಾಜನು ದಂಡದಿಂದ ಪ್ರಜೆಗಳನ್ನು ಪಾಲಿಸದೇ ಇದ್ದರೆ ಪ್ರಜೆಗಳೆಲ್ಲರೂ ಅನಾಯಕತ್ವವೆಂಬ ಅಂಧಕಾರದಲ್ಲಿ ಮುಳುಗಿಹೋಗುತ್ತಿದ್ದರು! ಸ್ವೇಚ್ಛಾಚಾರಿಗಳನ್ನು ದಮನಮಾಡುವುದರಿಂದ, ಮತ್ತು ದುಷ್ಟರನ್ನು ಶಿಕ್ಷಿಸುವುದರಿಂದ ಇದನ್ನು ದಂಡವೆನ್ನುತ್ತಾರೆ. ದಮನ-ದಂಡನೆಗಳನ್ನು ಮಾಡುವುದರಿಂದ ಇದನ್ನು

ತಿಳಿದವರು ದಂಡ ಎನ್ನುತ್ತಾರೆ. ಬ್ರಾಹ್ಮಣರನ್ನು ಮಾತಿನಿಂದ ದಂಡಿಸಬೇಕು. ಕ್ಷತ್ರಿಯರನ್ನು ಅವರ ಊಟಕ್ಕೆ ಸಾಕಾಗುವಷ್ಟೇ ವೇತನವನ್ನು ನೀಡುವುದರಿಂದ ದಂಡಿಸಬೇಕು. ಕಪ್ಪ-ಕಾಣಿಕೆಗಳನ್ನು ತೆಗೆದುಕೊಳ್ಳುವುದರ ಮೂಲಕ ವೈಶ್ಯರನ್ನು ದಂಡಿಸಬೇಕು. ಮತ್ತು ಶೂದ್ರರಿಗೆ ದಂಡನೆಯೇ ಇಲ್ಲ ಎಂದು ಹೇಳುತ್ತಾರೆ. ಲೋಕದಲ್ಲಿ ಮನುಷ್ಯರು ಮೋಹಪರವಶರಾಗದಂತೆ ಮಾಡಲು ಮತ್ತು ಧನದ ಸಂರಕ್ಷಣೆಗಾಗಿ ದಂಡವೆಂದು ಕರೆಯಲ್ಪಡುವ ಮರ್ಯಾದೆಯು ಸ್ಥಾಪಿತವಾಗಿದೆ. ಎಲ್ಲಿ ಶ್ಯಾಮಲವರ್ಣದ ಕೆಂಪುಕಣ್ಣುಗಳುಳ್ಳ ದಂಡವನ್ನು ಸರಿಯಾದ ರೀತಿಯಲ್ಲಿ ಪ್ರಯೋಗಿಸುತ್ತಾರೆಯೋ ಅಲ್ಲಿ ಪ್ರಜೆಗಳು ಮೋಹಪರವಶರಾಗಿರುವುದಿಲ್ಲ ಮತ್ತು ಅಲ್ಲಿ ಅಸಾಧು ಜನರು ಕಂಡುಬರುವುದಿಲ್ಲ. ದಂಡದ ಭಯದಿಂದಲೇ ಮನುಷ್ಯರು ಬ್ರಹ್ಮಚಾರೀ, ಗೃಹಸ್ಥ, ವಾನಪ್ರಸ್ಥ ಮತ್ತು ಭಿಕ್ಷುಕ ಮೊದಲಾದ ಆಶ್ರಮಗಳಲ್ಲಿ ಸರಿಯಾಗಿ ನಡೆದುಕೊಂಡಿರುತ್ತಾರೆ. ಭಯವಿಲ್ಲದವನು ಯಜ್ಞಮಾಡುವುದಿಲ್ಲ. ಭಯವಿಲ್ಲದವನು ದಾನವನ್ನೂ ನೀಡಲು ಇಚ್ಛಿಸುವುದಿಲ್ಲ. ಭಯವಿಲ್ಲದ ಪುರುಷನು ತಾನು

ಮಾಡಿದ ಪ್ರಮಾಣವಚನಗಳಂತೆಯೂ ನಡೆದುಕೊಳ್ಳುವುದಿಲ್ಲ. ಬೆಸ್ತನಂತೆ ಶತ್ರುಗಳ ಮರ್ಮಸ್ಥಾನಗಳನ್ನು ಸೀಳದೇ, ದಾರುಣ ಕರ್ಮಗಳನ್ನೆಸಗದೆ, ಸಂಹರಿಸದೇ ಮಹದೈಶ್ವರ್ಯವನ್ನು ಸಂಪಾದಿಸಲು ಸಾಧ್ಯವಿಲ್ಲ. ಶತ್ರುಗಳನ್ನು ಸಂಹರಿಸದೇ ಕೀರ್ತಿಯಿಲ್ಲ, ಸಂಪತ್ತಿಲ್ಲ ಮತ್ತು ಪ್ರಜೆಗಳೂ ಇರುವುದಿಲ್ಲ. ವೃತ್ರನ ವಧೆಗೈದೇ ಇಂದ್ರನು ಮಹೇಂದ್ರಪದವಿಯನ್ನು ಪಡೆದನು! ಈ ರೀತಿ ಹಂತಕರಾದ ದೇವತೆಗಳನ್ನೇ ಲೋಕಗಳು ಬಹಳವಾಗಿ ಪೂಜಿಸುತ್ತವೆ. ರುದ್ರ ಮತ್ತು ಹಾಗೆಯೇ ಸ್ಕಂದ, ಶಕ್ರ, ವರುಣ ಮತ್ತು ಯಮರೂ ಹಂತಾರರೇ! ಕಾಲ, ವಾಯು, ಮೃತ್ಯು, ವೈಶ್ರವಣ, ರವಿ, ವಸವರು, ಮರುತರು, ಸಾಧ್ಯರು, ಮತ್ತು ವಿಶ್ವೇದೇವರೂ ಕೂಡ ಹಂತಾರರೇ! ಪ್ರತಾಪಗಳಿಂದ ಕೂಡಿರುವ ಈ ದೇವತೆಗಳನ್ನೇ ಜನರು ನಮಸ್ಕರಿಸುತ್ತಾರೆ. ಬ್ರಹ್ಮನನ್ನಲ್ಲ, ಧಾತಾರನನ್ನಲ್ಲ ಮತ್ತು ಪೂಷಾಣನನ್ನಲ್ಲ! ಸರ್ವಭೂತಗಳಲ್ಲೂ ಸಮಭಾವದಿಂದಿರುವ ಜಿತೇಂದ್ರಿಯ ಶಾಂತಿಪರಾಯಣ ದೇವತೆಗಳನ್ನು ಪ್ರಶಾಂತರಾದ ಕೆಲವೇ ಮಾನವರು ಸರ್ವಕರ್ಮಗಳಲ್ಲಿ ಪೂಜಿಸುತ್ತಾರೆ. ಲೋಕದಲ್ಲಿ

ಕೇವಲ ಅಹಿಂಸೆಯಿಂದ ಜೀವಿಸುತ್ತಿರುವವರ್ಯಾರನ್ನೂ ನಾನು ಕಾಣುತ್ತಿಲ್ಲ! ಬಲಶಾಲೀ ಸತ್ತ್ವಗಳು ದುರ್ಬಲರ ಸತ್ತ್ವಗಳಿಂದ ಜೀವಿಸುತ್ತವೆ. ಮುಂಗುಸಿಯು ಇಲಿಗಳನ್ನು, ಬೆಕ್ಕು ಮುಂಗುಸಿಯನ್ನು, ಬೆಕ್ಕನ್ನು ನಾಯಿ ಮತ್ತು ನಾಯಿಯನ್ನು ಚಿರತೆ ಹೀಗೆ ಒಂದು ಇನ್ನೊಂದನ್ನು ತಿನ್ನುತ್ತಿರುತ್ತವೆ! ಇವೆಲ್ಲವುಗಳನ್ನೂ ಮನುಷ್ಯನು ಕೊಂದು ತಿನ್ನುತ್ತಾನೆ. ಹೀಗೆ ನಡೆದುಕೊಂಡುಬಂದಿರುವ ಧರ್ಮವನ್ನಾದರೋ ನೀನು ನೋಡು! ಸ್ಥಾವರ-ಜಂಗಮಗಳೆಲ್ಲವೂ ಪ್ರಾಣಧಾರಣೆಗೆ ಅನ್ನರೂಪವಾಗಿಯೇ ಇವೆ. ಪ್ರಾಣಿಗಳು ಪ್ರಾಣಿಗಳನ್ನವಲಂಬಿಸಿಯೇ ಜೀವಿಸಬೇಕು ಎಂಬ ಈ ವಿಧಾನವು ದೇವವಿಹಿತವಾದುದು. ತಿಳಿದವನು ಈ ವಿಷಯದಲ್ಲಿ ಭ್ರಾಂತನಾಗುವುದಿಲ್ಲ. ನೀನು ಹೇಗೆ ಸೃಷ್ಟಿಸಲ್ಪಟ್ಟಿರುವಿಯೋ ಅದೇರೀತಿ ನೀನು ಇರಬೇಕಾಗುತ್ತದೆ! ಕ್ರೋಧ-ಹರ್ಷಗಳನ್ನು ಹತೋಟಿಯಲ್ಲಿಟ್ಟುಕೊಂಡು ವನವನ್ನು ಸೇರುವ ಮೂಢ ಕ್ಷತ್ರಿಯ ತಾಪಸರು ವಧೆಗೈಯದೇ ಜೀವಂತವಾಗಿರಲಾರರು! ಕುಡಿಯುವ ನೀರಿನಲ್ಲಿ, ಗೆಡ್ಡೆ-ಗೆಣಸುಗಳಲ್ಲಿ ಮತ್ತು ಹಣ್ಣುಗಳಲ್ಲಿ

ಅನೇಕ ಜೀವಿಗಳಿರುತ್ತವೆ. ಇವುಗಳನ್ನು ಕೊಲ್ಲದೇ ಯಾರೂ ಜೀವಂತವಾಗಿರಲಾರರು! ಸೂಕ್ಷ್ಮಯೋನಿಗಳ ಇರುವಿಕೆಯನ್ನು ಕೇವಲ ತರ್ಕದಿಂದ ಪ್ರಮಾಣೀಕರಿಸಬಹುದು. ನಮ್ಮ ಒಂದು ರೆಪ್ಪೆಯ ಕೂದಲೂ ಅವುಗಳ ಮೇಲೆ ಬಿದ್ದರೆ ಅವುಗಳ ಅವಯವಗಳು ಮುರಿದುಹೋಗುತ್ತವೆ! ಕ್ರೋಧ-ಮತ್ಸರಗಳನ್ನು ತೊರೆದು ಮುನಿಗಳು ಗ್ರಾಮದಿಂದ ಹೊರಟು ವನದಲ್ಲಿ ಮೋಹಿತರಾಗಿ ಕುಟುಂಬಧರ್ಮವನ್ನು ಅನುಸರಿಸುತ್ತಿರುವುದನ್ನು ನಾವು ನೋಡುತ್ತೇವೆ. ಭೂಮಿಯನ್ನು ಹೂಳಿ, ಅಲ್ಲಿರುವ ಔಷಧಿ-ಲತೆಗಳನ್ನು ಕಿತ್ತು, ವೃಕ್ಷ-ಪಕ್ಷಿ-ಪ್ರಾಣಿಗಳನ್ನು ಹನನಮಾಡಿ, ಯಜ್ಞಗಳನ್ನು ಮಾಡುವ ಮನುಷ್ಯನು ಸ್ವರ್ಗವನ್ನು ಪಡೆಯುತ್ತಾನೆ. ದಂಡನೀತಿಯನ್ನು ಅನುಸರಿಸಿದ್ದೇ ಆದರೆ ಸರ್ವಭೂತಗಳೂ ಪ್ರಯತ್ನಿಸುವ ಸಿದ್ಧಿಗಳು ದೊರೆಯುತ್ತವೆ ಎನ್ನುವುದರಲ್ಲಿ ನನಗೆ ಸಂಶಯವೇ ಇಲ್ಲ. ಲೋಕದಲ್ಲಿ ದಂಡನೀತಿಯೇ ಇರದಿದ್ದರೆ ಈ ಪ್ರಜೆಗಳು ವಿನಾಶಹೊಂದುತ್ತಿದ್ದರು. ದೊಡ್ಡ ಮೀನುಗಳು ಚಿಕ್ಕಮೀನುಗಳನ್ನು ತಿನ್ನುವಂತೆ ಬಲಶಾಲಿಗಳು ದುರ್ಬಲರನ್ನು ವಿನಾಶಗೊಳಿಸಿಬಿಡುತ್ತಿದ್ದರು. ಸರಿಯಾದ ರೀತಿಯಲ್ಲಿ ಬಳಸಿದ

ದಂಡನೀತಿಯು ಪ್ರಜೆಗಳನ್ನು ರಕ್ಷಿಸುತ್ತದೆಯೆಂಬ ಸತ್ಯವನ್ನು ಬ್ರಹ್ಮನೇ ಹಿಂದೆ ಹೇಳಿದ್ದನು. ಈ ಅಗ್ನಿಗಳನ್ನಾದರೂ ನೋಡು! ಆರಿಹೋಗುತ್ತಿರುವ ಬೆಂಕಿಯನ್ನು ಊದಿದಾಗ ದಂಡಭಯದಿಂದಲೇ ಅದು ಪುನಃ ಹತ್ತಿಕೊಂಡು ಉರಿಯುತ್ತದೆ! ಒಳ್ಳೆಯದು ಯಾವುದು ಮತ್ತು ಕೆಟ್ಟದು ಯಾವುದು ಎನ್ನುವುದನ್ನು ವಿಭಜಿಸುವ ದಂಡನೀತಿಯೇ ಈ ಲೋಕದಲ್ಲಿ ಇರದಿದ್ದರೆ ಪ್ರಜೆಗಳೆಲ್ಲರೂ ಕುರುಡರ ಅಂಧಕಾರವನ್ನು ಅನುಭವಿಸುತ್ತಿದ್ದರು. ಮರ್ಯಾದೆಗಳನ್ನು ಒಡೆದು ವೇದಗಳನ್ನು ನಿಂದಿಸುವ ನಾಸ್ತಿಕರೂ ಕೂಡ ದಂಡದ ಪೀಡೆಗೊಳಪಟ್ಟು ಮರ್ಯಾದೆಗಳನ್ನು ಮೀರದೇ ಸುಖಪಡುವಂತವರಾಗುತ್ತಾರೆ. ದಂಡದಿಂದಲೇ ಎಲ್ಲವನ್ನೂ ಗೆಲ್ಲಬಹುದು. ಸ್ವಭಾವದಿಂದಲೇ ಶುಚಿಯಾಗಿರುವ ಮನುಷ್ಯರು ಈ ಲೋಕದಲ್ಲಿ ದುರ್ಲಭ. ದಂಡದ ಭಯದಿಂದಲೇ ಭೀತರಾಗಿ ಮನುಷ್ಯರು ಧರ್ಮವನ್ನನುಸರಿಸಿ ನಡೆದುಕೊಳ್ಳುತ್ತಾರೆ. ನಾಲ್ಕುವರ್ಣದವರೂ ಆನಂದದಿಂದಿರಲು, ನೀತಿವಂತರಾಗಿ ಬಾಳಲು ಮತ್ತು ಧರ್ಮ-ಅರ್ಥಗಳನ್ನು ರಕ್ಷಿಸುವುದಕ್ಕಾಗಿಯೇ ವಿಧಾತನು

ದಂಡವನ್ನು ವಿಧಿಸಿದ್ದಾನೆ. ದಂಡದ ಭಯವೇ ಇರದಿದ್ದರೆ ಕ್ರೂರಮೃಗಗಳಾಗಲೀ ಪಕ್ಷಿಗಳಾಗಲೀ ಇದೂವರೆಗೆ ಯಜ್ಞ ಪಶುಗಳನ್ನು, ಮನುಷ್ಯರನ್ನು, ಯಜ್ಞಸಲಕರಣೆಗಳನ್ನು ಮತ್ತು ಹವಿಸ್ಸುಗಳನ್ನು ತಿಂದುಹಾಕಿಬಿಡುತ್ತಿದ್ದವು. ದಂಡವೆನ್ನುವುದು ಇಲ್ಲದೇ ಇದ್ದಿದ್ದರೆ ಬ್ರಹ್ಮಚಾರಿಯು ಅಧ್ಯಯನ ಮಾಡುತ್ತಿರಲಿಲ್ಲ, ಕಲ್ಯಾಣೀ ಗೋವು ಹಾಲನ್ನು ನೀಡುತ್ತಿರಲಿಲ್ಲ, ಮತ್ತು ಕನ್ಯೆಯು ವಿವಾಹವಾಗುತ್ತಿರಲಿಲ್ಲ. ದಂಡದಿಂದ ಪ್ರಜಾಪಾಲನೆಯಾಗದೇ ಇರುತ್ತಿದ್ದರೆ ವಿಶ್ವದಲ್ಲಿ ಧರ್ಮಲೋಪವಾಗುತ್ತಿತ್ತು. ಸರ್ವ ಸೇತುವೆಗಳೂ ಮುರಿದುಬೀಳುತ್ತಿದ್ದವು. ನನ್ನದ್ಯಾವುದು ಮತ್ತು ನನ್ನದು ಯಾವುದಲ್ಲ ಎನ್ನುವ ಭಾವನೆಯೇ ಹುಟ್ಟುತ್ತಿರಲಿಲ್ಲ. ದಂಡದಿಂದ ಪ್ರಜಾಪಾಲನೆಯಾಗದೇ ಇರುತ್ತಿದ್ದರೆ ನಿರ್ಭಯದಿಂದ ವಿಧಿವತ್ತಾಗಿ ಮತ್ತು ದಕ್ಷಿಣೆಗಳೊಂದಿಗೆ ನಡೆಯುತ್ತಿದ್ದ ಸಂವತ್ಸರ ಸತ್ರಗಳು ನಿಂತುಹೋಗುತ್ತಿದ್ದವು. ದಂಡದಿಂದ ಪ್ರಜಾಪಾಲನೆಯಾಗದೇ ಇರುತ್ತಿದ್ದರೆ ವಿಧಿಯನ್ನನುಸರಿಸಿ ಯಥೋಕ್ತವಾದ ಆಶ್ರಮ ಧರ್ಮಗಳನ್ನು ನಡೆಸುತ್ತಿರಲಿಲ್ಲ ಮತ್ತು ಯಾರೂ ವಿದ್ಯೆಯನ್ನು

ಪಡೆಯುತ್ತಿರಲಿಲ್ಲ. ದಂಡದಿಂದ ಪ್ರಜಾಪಾಲನೆಯಾಗದೇ ಇರುತ್ತಿದ್ದರೆ ಒಂಟೆ-ಎತ್ತು-ಕುದುರೆ-ಹೇಸರಗತ್ತೆ ಮತ್ತು ಕತ್ತೆಗಳನ್ನು ಕಟ್ಟಿದ್ದರೂ ಅವು ಯಾನಗಳನ್ನು ಎಳೆದುಕೊಂಡು ಹೋಗುತ್ತಿರಲಿಲ್ಲ! ದಂಡದಿಂದ ಪ್ರಜಾಪಾಲನೆಯಾಗದೇ ಇರುತ್ತಿದ್ದರೆ ಸೇವಕರು ಯಜಮಾನನ ಮಾತಿನಂತೆ ನಡೆಯುತ್ತಿರಲಿಲ್ಲ, ಮತ್ತು ಬಾಲಕರು ತಂದೆಯ ಧರ್ಮವನ್ನು ಪಾಲಿಸುತ್ತಿರಲಿಲ್ಲ. ದಂಡದಿಂದ ಮತ್ತು ದಂಡದ ಭಯದಿಂದಾಗಿ ಪ್ರಜೆಗಳೆಲ್ಲರೂ ತಮ್ಮ ತಮ್ಮ ಧರ್ಮಗಳಲ್ಲಿ ನೆಲೆಸಿದ್ದಾರೆ ಎಂದು ತಿಳಿದವರು ತಿಳಿದುಕೊಂಡಿರುತ್ತಾರೆ. ಮನುಷ್ಯರ ಸ್ವರ್ಗವೂ ಈ ಲೋಕವೂ ದಂಡದ ಮೇಲೆಯೇ ಅವಲಂಬಿಸಿದೆ. ಶತ್ರುನಾಶಕ ದಂಡನೀತಿಯು ಎಲ್ಲಿ ಚೆನ್ನಾಗಿ ಬಳಸಲ್ಪಟ್ಟಿದೆಯೋ ಅಲ್ಲಿ ಮೋಸವಾಗಲೀ, ಪಾಪಕರ್ಮಗಳಾಗಲೀ ಅಥವಾ ವಂಚನೆಯಾಗಲೀ ಕಂಡುಬರುವುದಿಲ್ಲ. ದಂಡದಿಂದ ಆಳದೇ ಇದ್ದರೆ ಹವಿಸ್ಸನ್ನು ನೋಡಿದ ನಾಯಿಯು ಅದನ್ನು ನೆಕ್ಕಲು ಹೋಗುತ್ತದೆ. ಕಾಗೆಯು ಪುರೋಡಾಶವನ್ನೇ ಎತ್ತಿಕೊಂಡು ಹೋಗುತ್ತದೆ. ಈ ರಾಜ್ಯವನ್ನು ನಾವು ಧರ್ಮದಿಂದ ಪಡೆದವೋ ಅಥವಾ

ಅಧರ್ಮದಿಂದ ಪಡೆದವೋ ಎನ್ನುವುದರ ಕುರಿತು ಯೋಚಿಸುವ ಕಾಲವಿದಲ್ಲ. ಶೋಕಪಡಬೇಡ! ಭೋಗಗಳನ್ನು ಭೋಗಿಸು ಮತ್ತು ಯಜ್ಞಗಳನ್ನು ಮಾಡು! ಶ್ರೀಮಂತರು ಸುಖದಿಂದಲೇ ಶುಭ್ರವಸ್ತ್ರಗಳನ್ನು ಧರಿಸಿ ಧರ್ಮವನ್ನಾಚರಿಸುತ್ತಾರೆ. ಅವರು ಪ್ರಿಯ ಪತ್ನಿಯರೊಂದಿಗೆ ವಾಸಿಸುತ್ತಾರೆ ಮತ್ತು ಉತ್ತಮ ಆಹಾರವನ್ನು ಸೇವಿಸುತ್ತಾರೆ. ಸರ್ವ ಸಮಾರಂಭಗಳೂ ಧನದ ಮೇಲೆ ಅವಲಂಬಿಸಿವೆ ಎನ್ನುವುದರಲ್ಲಿ ಸಂಶಯವಿಲ್ಲ. ಆದರೆ ಧನವು ದಂಡವನ್ನು ಅವಲಂಬಿಸಿದೆ. ದಂಡಕ್ಕಿರುವ ಗೌರವವನ್ನಾದರೂ ನೋಡು! ಲೋಕಯಾತ್ರೆಯ ನಿರ್ವಹಣೆಗೆ ಅಹಿಂಸೆಯು ಸಾಧುವೆಂದು ಧರ್ಮಪ್ರವಚನವನ್ನು ಮಾಡುತ್ತಾರೆ. ಆದರೆ ಹಿಂಸೆಯು ಕೆಲವು ಸಮಯಗಳಲ್ಲಿ ಶ್ರೇಯಸ್ಸನ್ನು ನೀಡುವ ಧರ್ಮಕಾರ್ಯವಾಗಬಹುದು. ಯಾವುದೇ ಕಾರ್ಯವು ಅತ್ಯಂತ ಗುಣಯುಕ್ತವಾಗಿಯೂ ಅಥವಾ ಅತ್ಯಂತ ನಿರ್ಗುಣವಾಗಿಯೂ ಇರುವುದಿಲ್ಲ. ಸರ್ವಕಾರ್ಯಗಳಲ್ಲಿ ಒಳ್ಳೆಯದು ಯಾವುದು ಮತ್ತು ಯಾವುದು ಒಳ್ಳೆಯದಲ್ಲ ಈ ಎರಡನ್ನೂ ನೋಡಬೇಕಾಗುತ್ತದೆ. ಹೋರಿಯ ಬೀಜವನ್ನು

ಒಡೆದು, ಕೋಡುಗಳನ್ನು ಕತ್ತರಿಸುತ್ತಾರೆ. ಹೀಗೆ ಕಷ್ಟಕ್ಕೊಳಗಾದ ಹೋರಿಯು ಅತಿ ಭಾರವನ್ನು ಹೊರುತ್ತದೆ ಮತ್ತು ಕಟ್ಟಿದರೆ ಬಂಡಿಯನ್ನು ಎಳೆದುಕೊಂಡೂ ಹೋಗುತ್ತದೆ. ಅಧರ್ಮದಿಂದ ಜರ್ಜರಗೊಂಡು ಒಡೆದುಹೋಗುತ್ತಿರುವ ಲೋಕವನ್ನು ನ್ಯಾಯ ಮತ್ತು ಪುರಾತನ ಧರ್ಮವನ್ನು ಆಚರಿಸಿ ಆಳು! ಯಜ್ಞಮಾಡು. ದಾನಗಳನ್ನು ನೀಡು. ಪ್ರಜೆಗಳನ್ನು ರಕ್ಷಿಸಿ ಧರ್ಮವನ್ನು ಪಾಲಿಸು. ಶತ್ರುಗಳನ್ನು ಸಂಹರಿಸುತ್ ಮತ್ತು ಮಿತ್ರರನ್ನು ಪರಿಪಾಲಿಸು! ಶತ್ರುಗಳನ್ನು ಸಂಹರಿಸುವಾಗ ನಿನಗೆ ದೀನತೆಯುಂಟಾಗದಿರಲಿ! ಶತ್ರುವಿನಾಶದಲ್ಲಿ ಸ್ವಲ್ಪವೂ ಪಾಪವಿಲ್ಲ. ಆಯುಧಗಳನ್ನು ಹಿಡಿದು ಎದುರಾದವನನ್ನು ಆಯುಧಗಳಿಂದ ಸಂಹರಿಸುವುದರಿಂದ ಭ್ರೂಣಹತ್ಯೆಯ ದೋಷವು ಬರುವುದಿಲ್ಲ. ಏಕೆಂದರೆ ಅಲ್ಲಿ ಕೋಪವು ಕೋಪವನ್ನು ಎದುರಿಸಿ ಹೋರಾಡುತ್ತದೆ.
ಸರ್ವಜೀವಿಗಳಲ್ಲಿರುವ ಅಂತರಾತ್ಮನು ಅವಧ್ಯ ಎನ್ನುವುದರಲ್ಲಿ ಸಂಶಯವೇ ಇಲ್ಲ. ಅವಧ್ಯವಾದ ಆತ್ಮವನ್ನು ಯಾರುತಾನೇ ಹೇಗೆ ವಧಿಸಬಲ್ಲರು? ಮನುಷ್ಯನು ಹೊಸ ಹೊಸ ಮನೆಗಳಲ್ಲಿ ವಾಸಮಾಡುವಂತೆ ಜೀವನು ಬೇರೆ ಬೇರೆ

ಶರೀರಗಳನ್ನು ಪಡೆಯುತ್ತದೆ. ಹಳೆಯದಾದ ದೇಹಗಳನ್ನು ವಿಸರ್ಜಿಸಿ ಹೊಸ ಶರೀರಗಳನ್ನು ಪಡೆಯುತ್ತದೆ. ಇದನ್ನೇ ತತ್ತ್ವದರ್ಶೀ ಜನರು ಮೃತ್ಯುಮುಖವೆಂದು ಹೇಳುತ್ತಾರೆ."

ಅರ್ಜುನನ ಮಾತನ್ನು ಕೇಳಿ ಅತಿ ಅಸಹನಶೀಲನಾದ ತೇಜಸ್ವೀ ಭೀಮಸೇನನು ಧೈರ್ಯವನ್ನು ತಾಳಿ ಹಿರಿಯಣ್ಣನಿಗೆ ಹೇಳಿದನು:

"ರಾಜನ್! ನೀನು ಧರ್ಮವನ್ನು ತಿಳಿದಿದ್ದೀಯೆ. ಭುವಿಯಲ್ಲಿ ನಿನಗೆ ತಿಳಿಯದೇ ಇರುವುದು ಯಾವುದೂ ಇಲ್ಲ. ನಿನ್ನಿಂದಲೇ ನಾವು ಸದೈವ ಉಪದೇಶಗಳನ್ನು ಪಡೆಯುತ್ತಾ ಬಂದಿದ್ದೇವೆ. "ನಾನು ಮಾತನಾಡುವುದಿಲ್ಲ! ನಾನು ಮಾತನಾಡುವುದಿಲ್ಲ!" ಎಂದು ನನ್ನ ಮನಸ್ಸಿನ ನಿರ್ಧಾರವಾಗಿತ್ತು. ಆದರೆ ಈಗ ಅತಿ ದುಃಖದಿಂದ ಹೇಳುತ್ತಿದ್ದೇನೆ. ಜನಾಧಿಪ! ಅದನ್ನು ಕೇಳು! ನಿನ್ನ ಮೋಹಪರವಶದಿಂದಾಗಿ ನಾವು ಮಾಡಿದುದೆಲ್ಲವೂ ಸಂಶಯಾಸ್ಪದವೆನ್ನಿಸುತ್ತಿದೆ. ನಾವು ವ್ಯಾಕುಲಗೊಂಡಿದ್ದೇವೆ ಮತ್ತು ದುರ್ಬಲರಾಗಿದ್ದೇವೆ ಎಂದನ್ನಿಸುತ್ತಿದೆ. ಸರ್ವಶಾಸ್ತ್ರವಿಶಾರದನಾದ ಲೋಕದ ರಾಜನಾಗಿರುವ ನೀನು ಏಕೆ ಹೀಗೆ ಹೇಡಿಯಂತೆ ದೈನ್ಯದಿಂದ ಮೋಹಪರವಶನಾಗಿರುವೆ? ಲೋಕದಲ್ಲಿ ನಡೆದುಹೋಗಿರುವ

ಮತ್ತು ನಡೆಯುತ್ತಿರುವುದು ನಿನಗೆ ತಿಳಿದೇ ಇದೆ. ದುರ್ಮಾರ್ಗ-ಸನ್ಮಾರ್ಗಗಳೂ ನಿನಗೆ ತಿಳಿದಿವೆ. ಹೀಗಿರುವಾಗ ರಾಜ್ಯದ ಕುರಿತು ನಾವು ಹೇಳುತ್ತಿರುದು ಏಕೆನ್ನುವುದನ್ನು ಹೇಳುತ್ತೇನೆ. ಏಕಾಗ್ರಚಿತ್ತನಾಗಿ ಕೇಳು! ಶಾರೀರಕ ಮತ್ತು ಮಾನಸಿಕ ಎನ್ನುವ ಎರಡು ರೀತಿಯ ವ್ಯಾಧಿಗಳುಂಟಾಗುತ್ತವೆ. ಒಂದನ್ನಾಶ್ರಯಿಸಿ ಇನ್ನೊಂದು ವ್ಯಾಧಿಯೂ ಹುಟ್ಟಿಕೊಳ್ಳಬಹುದು. ಆದರೆ ಒಂದು ಹುಟ್ಟದೇ ಇನ್ನೊಂದು ಹುಟ್ಟಲಾರದು. ಶರೀರದಿಂದ ವ್ಯಾಧಿಯು ಹುಟ್ಟಿ ಅದರಿಂದಲೇ ಮನೋವ್ಯಾಧಿಯು ಹುಟ್ಟಿಕೊಳ್ಳುತ್ತದೆ ಎನ್ನುವುದರಲ್ಲಿ ಸಂಶಯವಿಲ್ಲ. ಮನೋವ್ಯಾಧಿಯಿಂದ ಶಾರೀರಿಕ ವ್ಯಾಧಿಯೂ ಉಂಟಾಗುತ್ತದೆ ಎನ್ನುವುದು ನಿಶ್ಚಯವಾದುದು. ಮುಗಿದುಹೋಗಿರುವ ಶಾರೀರಿಕ ಮತ್ತು ಮಾನಸಿಕ ದುಃಖಗಳನ್ನು ನೆನಪಿಸಿಕೊಂಡು ಶೋಕಿಸುವವನಿಗೆ ದುಃಖದಿಂದ ದುಃಖವು ದೊರಕುವುದೇ ಹೊರತು ಧರ್ಮಾರ್ಥಗಳು ದೊರಕುವುದಿಲ್ಲ. ಶೀತ, ಉಷ್ಣ ಮತ್ತು ವಾಯು ಈ ಮೂರು ಶರೀರದಲ್ಲಿರುವ ಗುಣಗಳು. ಈ ಗುಣಗಳ ಸಮಾನತೆಯನ್ನು ಆರೋಗ್ಯದ ಲಕ್ಷಣವೆಂದು

ಹೇಳುತ್ತಾರೆ. ಅವುಗಳಲ್ಲಿ ಯಾವುದಾದರೂ ಒಂದು ಉದ್ರೇಕಗೊಂಡರೆ ಅದರ ಚಿಕಿತ್ಸೆಕೆಗೆ ಈ ವಿಧಾನವನ್ನು ಹೇಳಿದ್ದಾರೆಃ ಉಷ್ಣದಿಂದ ಶೀತವನ್ನೂ ಶೀತವನ್ನು ಉಷ್ಣದಿಂದಲೂ ಪರಿಹರಿಸಬಹುದು. ಸತ್ವ, ರಜಸ್ಸು ಮತ್ತು ತಮ ಈ ಮೂರು ಮನಸ್ಸಿನ ಗುಣಗಳು. ಹರ್ಷದಿಂದ ಶೋಕವು ಉಪಶಮನಗೊಳ್ಳುತ್ತದೆ ಮತ್ತು ಶೋಕದಿಂದ ಹರ್ಷವು ಕುಂದುತ್ತದೆ. ವರ್ತಮಾನದಲ್ಲಿ ಸುಖದಿಂದಿದ್ದರೆ ಕಳೆದುಹೋದ ದುಃಖವನ್ನು ನೆನಪಿಸಿಕೊಳ್ಳಬೇಕು. ಹಾಗೆಯೇ ವರ್ತಮಾನದಲ್ಲಿ ದುಃಖದಿಂದಿದ್ದರೆ ಹಿಂದೆ ಪಟ್ಟಿರುವ ಸುಖವನ್ನು ನೆನಪಿಸಿಕೊಳ್ಳಬೇಕು. ಆದರೆ ನೀನು ಮಾತ್ರ ಈಗ ದುಃಖಿಯಾಗಿದ್ದು ಹಿಂದಿನ ನಮ್ಮ ದುಃಖಗಳನ್ನು ಸ್ಮರಿಸುತ್ತಿಲ್ಲ ಅಥವಾ ಈಗ ಸುಖಿಯಾಗಿದ್ದು ಹಿಂದಿನ ನಮ್ಮ ಸುಖಗಳನ್ನು ಸ್ಮರಿಸುತ್ತಿಲ್ಲ ಅಥವಾ ಈಗ ದುಃಖಿಯಾಗಿದ್ದು ನಮ್ಮ ಹಿಂದಿನ ಸುಖಗಳನ್ನು ಸ್ಮರಿಸುತ್ತಿಲ್ಲ ಅಥವಾ ಈಗ ಸುಖಿಯಾಗಿದ್ದು ಹಿಂದಿನ ನಮ್ಮ ದುಃಖಗಳನ್ನು ಸ್ಮರಿಸಿಕೊಳ್ಳುತ್ತಿಲ್ಲ. ಕೌರವ್ಯ! ದೈವವು ಎಷ್ಟು ಬಲವತ್ತರವಾಗಿದೆ ಎನ್ನುವುದನ್ನು ಸ್ಮರಿಸಿಕೊಳ್ಳಬೇಕು. ಅಥವಾ ಸ್ವಭಾವತಃ ನೀನು

ಶೋಕಪಡುವವನಾಗಿರುವುದರಿಂದ ಈ ರೀತಿ ಶೋಕಿಸುತ್ತಿರುವೆ! ಪಾಂಡುಪುತ್ರರು ನೋಡುತ್ತಿದ್ದಂತೆಯೇ ರಜಸ್ವಲೆಯಾಗಿ ಏಕವಸ್ತ್ರಳಾಗಿದ್ದ ಕೃಷ್ಣೆಯನ್ನು ಸಭೆಗೆ ಎಳೆತಂದಿರುವುದನ್ನು ನೋಡಿಯೂ ನೀನು ಅದನ್ನು ನೆನಪಿಸಿಕೊಳ್ಳುತ್ತಿಲ್ಲ! ಜಿನವಸ್ತ್ರಗಳನ್ನುಡಿಸಿ ನಗರದಿಂದ ಹೊರಗಟ್ಟಿದುದನ್ನು ಮತ್ತು ಮಹಾ ಅರಣ್ಯದಲ್ಲಿ ನಮ್ಮ ವಾಸವನ್ನು ನೀನು ನೆನಪಿಸಿಕೊಳ್ಳುತ್ತಿಲ್ಲ! ಜಟಾಸುರನಿಂದಾದ ಕಷ್ಟವನ್ನೂ, ಚಿತ್ರಸೇನನೊಡನೆ ಮಾಡಿದ ಯುದ್ಧವನ್ನೂ ಮತ್ತು ಸೈಂಧವನ ಉಪಟಳವನ್ನೂ ನೀನು ಹೇಗೆ ಮರೆತುಬಿಟ್ಟಿದ್ದೀಯೆ? ಅನಂತರ ಅಜ್ಞಾತವಾಸದಲ್ಲಿ ಕೀಚಕನು ದ್ರೌಪದಿಯನ್ನು ಕಾಲಿನಿಂದ ಒದೆದನು. ದ್ರೋಣ-ಭೀಷ್ಮರೊಡನೆ ಹೇಗೆ ಯುದ್ಧವನ್ನು ನಡೆಸಿದೆಯೋ ಹಾಗೆ ನಿನ್ನ ಮನಸ್ಸಿನಲ್ಲಿಯೂ ಈ ಘೋರ ಯುದ್ಧವು ನಡೆಯುತ್ತಿದೆ. ಈಗ ಬಂದೊದಗಿರುವ ಯುದ್ಧದಲ್ಲಿ ನೀನು ನಿನ್ನ ಆತ್ಮದೊಂದಿಗೇ ಯುದ್ಧಮಾಡಬೇಕಾಗುತ್ತದೆ. ಈ ಯುದ್ಧದಲ್ಲಿ ಬಾಣಗಳ ಅಥವಾ ಮಿತ್ರ-ಬಂಧುಗಳ ಕೆಲಸವೇನೂ ಇಲ್ಲ. ನೀನೇನಾದರೂ ಈ ಯುದ್ಧದಲ್ಲಿ ಸೋತು ಪ್ರಾಣಗಳನ್ನು

ತೊರೆಯುತ್ತೀಯೋ ಆಗ ಅನ್ಯ ದೇಹವನ್ನು ಹೊತ್ತು ಪುನಃ ಈ ಶತ್ರುಗಳೊಂದಿಗೆ ಹೋರಾಡಬೇಕಾಗುತ್ತದೆ! ಆದುದರಿಂದ ಇಂದೇ ನೀನು ಈ ಯುದ್ಧವನ್ನು ಮಾಡಬೇಕು. ಇದನ್ನು ಗೆದ್ದು ನೀನು ಕೃತಕೃತ್ಯನಾಗುವೆ! ಇರುವವುಗಳು ಬರುತ್ತಿರುತ್ತವೆ ಮತ್ತು ಹೋಗುತ್ತಿರುತ್ತವೆ ಎಂಬ ನಿಶ್ಚಯವನ್ನು ಮಾಡಿ ಪಿತೃ-ಪಿತಾಮಹರು ನಡೆದುಕೊಂಡ ರೀತಿಯಲ್ಲಿ ಮನಸ್ಸು ಮಾಡಿ ಯಥೋಚಿತವಾದ ರಾಜ್ಯವನ್ನು ಆಳು! ದೈವವು ನಡೆಸಿದಂತೆ ಯುದ್ಧದಲ್ಲಿ ಪಾಪೀ ದುರ್ಯೋಧನನು ಅವನ ಅನುಯಾಯಿಗಳೊಂದಿಗೆ ಹತನಾದನು. ಸೌಭಾಗ್ಯವಶಾತ್ ನೀನು ದ್ರೌಪದಿಯ ಕೇಶಪಾಶದ ಅಧಿಕಾರವನ್ನು ಪುನಃ ಪಡೆದುಕೊಂಡಿರುವೆ! ವಿವಿಧ ದಕ್ಷಿಣಾಯುಕ್ತವಾದ ಅಶ್ವಮೇಧವನ್ನು ಯಾಜಿಸು. ನಾವು ಮತ್ತು ವೀರ್ಯವಾನ್ ವಾಸುದೇವನೂ ನಿನ್ನ ಕಿಂಕರರಾಗಿದ್ದೇವೆ!”

ಯುಧಿಷ್ಠಿರನು ಹೇಳಿದನು:

“ಅಸಂತೋಷ, ಪ್ರಮಾದ, ಮದ, ರಾಗ, ಅಪ್ರಶಾಂತತೆ, ಬಲ, ಮೋಹ, ಅಭಿಮಾನ, ಉದ್ವೇಗ ಈ ಎಲ್ಲ ಪಾಪಗುಣಗಳಿಂದ ನೀನು ಆವಿಷ್ಟನಾಗಿರುವೆ. ಆದುದರಿಂದಲೇ ನೀನು ರಾಜ್ಯದ

ಕುರಿತು ಆಸೆಪಡುತ್ತಿದ್ದೀಯೆ! ಆಸೆಗಳನ್ನು ತೊರೆದು ಸಂಸಾರಬಂಧನದಿಂದ ವಿಮುಕ್ತನಾಗಿ ಪ್ರಶಾಂತನಾಗಿ ಸುಖದಿಂದ ಬಾಳು! ಇಡೀ ಭೂಮಂಡಲವನ್ನೇ ಆಳುವ ಮಹೀಪತಿಗೂ ಇರುವುದು ಒಂದೇ ಹೊಟ್ಟೆ. ಹೀಗಿದ್ದರೂ ನೀನು ಏಕೆ ಚಕ್ರಾಧಿಪತ್ಯವನ್ನು ಪ್ರಶಂಸಿಸುತ್ತಿರುವೆ? ಮನುಷ್ಯನ ಆಸೆಗಳನ್ನು ಒಂದು ದಿನದಲ್ಲಿ ಅಥವಾ ಒಂದು ತಿಂಗಳಿನಲ್ಲಿ ಪೂರೈಸಲು ಸಾಧ್ಯವಿಲ್ಲ. ಅಪೂರ್ಣವಾಗಿಯೇ ಇರುವ ಈ ಇಚ್ಛೆಗಳನ್ನು ಪೂರೈಸಲು ಇಡೀ ಜೀವಮಾನವೇ ಸಾಕಾಗುವುದಿಲ್ಲ. ಪ್ರಜ್ವಲಿಸುತ್ತಿರುವ ಅಗ್ನಿಯಲ್ಲಿ ಸಮಿದ್ಧವನ್ನು ಹಾಕದೇ ಹೇಗೆ ಪ್ರಶಾಂತಗೊಳಿಸಬಹುದೋ ಹಾಗೆ ಅಲ್ಪಾಹಾರದಿಂದ ಹೊಟ್ಟೆಯಲ್ಲಿ ಉರಿಯುವ ಹಸಿವೆಯೆಂಬ ಅಗ್ನಿಯನ್ನು ಶಮನಗೊಳಿಸಬಹುದು. ಹೊಟ್ಟೆಯನ್ನು ಗೆಲ್ಲುವುದು ಭೂಮಿಯನ್ನು ಗೆಲ್ಲುವುದಕ್ಕಿಂತಲೂ ಶ್ರೇಯಸ್ಕರವಾದುದು. ಮನುಷ್ಯಲೋಕಕ್ಕೆ ಸಂಬಂಧಿಸಿದ ಭೋಗೈಶ್ವರ್ಯಗಳನ್ನು ನೀನು ಪ್ರಶಂಸಿಸುತ್ತಿರುವೆ! ಆದರೆ ಭೋಗಿಸದಿರುವವರು ಮತ್ತು ಅಬಲರೂ ಕೂಡ ಉತ್ತಮ ಸ್ಥಾನಗಳಿಗೆ ಹೋಗುತ್ತಾರೆ! ರಾಷ್ಟ್ರದ ಯೋಗ-ಕ್ಷೇಮಗಳೂ,

ಧರ್ಮಾಧರ್ಮಗಳೂ ನಿನ್ನಲ್ಲಿಯೇ ನೆಲಸಿವೆ. ತ್ಯಾಗವನ್ನವಲಂಬಿಸಿ ಈ ಮಹಾಭಾರದ ಹೊರೆಯಿಂದ ಮುಕ್ತಿಹೊಂದು! ಒಂದೇ ಹೊಟ್ಟೆಯುಳ್ಳದ್ದಾದರೂ ಹುಲಿಯು ಬಹಳಷ್ಟು ಎಂಜಲನ್ನು ಚೆಲ್ಲುತ್ತದೆ. ಅನ್ಯ ಮೃಗಗಳು ನಿಧಾನವಾಗಿ ಅದನ್ನೇ ಅನುಸರಿಸಿ ಹೋಗಿ, ಅದು ಚೆಲ್ಲಿರುವ ಆಹಾರವನ್ನು ತಿಂದು ತಮ್ಮ ಜೀವನವನ್ನು ನಡೆಸಿಕೊಳ್ಳುತ್ತವೆ. ವಿಷಯಗಳಿಂದ ತನ್ನ ಮನಸ್ಸನ್ನು ಸೆಳೆದುಕೊಂಡು ಯತಿಯು ಸಂನ್ಯಾಸದಲ್ಲಿರುತ್ತಾನೆ. ಆದರೆ ರಾಜನು ವಿಷಯಗಳಿಂದ ತೃಪ್ತನೇ ಆಗುವುದಿಲ್ಲ. ಇವರೀರ್ವರ ಬುದ್ಧಿಗಳಲ್ಲಿರುವ ಅಂತರವನ್ನಾದರೂ ನೋಡು! ಎಲೆಗಳನ್ನು ತಿನ್ನುವವರು, ಕಲ್ಲಮೇಲಿಟ್ಟು ಕುಟ್ಟಿದ ಧಾನ್ಯವನ್ನು ತಿನ್ನುವವರು, ಹಲ್ಲಿನಿಂದ ಕಚ್ಚಿ ತಿನ್ನುವುದನ್ನು ಮಾತ್ರ ತಿನ್ನುವವರು, ನೀರನ್ನೇ ಕುಡಿದು ಜೀವಿಸಿರುವವರು, ಮತ್ತು ಗಾಳಿಯನ್ನೇ ಸೇವಿಸಿ ಜೀವಿಸಿರುವವರು ಇವರು ನರಕವನ್ನು ಗೆದ್ದವರು. ಅಖಿಲ ಭೂಮಂಡಲವನ್ನೂ ಆಳುವ ನೃಪ ಮತ್ತು ಕಲ್ಲು-ಕಾಂಚನಗಳನ್ನು ಒಂದಾಗಿಯೇ ಕಾಣುವ ಯತಿ ಇವರಿಬ್ಬರಲ್ಲಿ ರಾಜನು ಎಂದೂ ಕೃತಾರ್ಥನೆನಿಸಿಕೊಳ್ಳಲಾರ!

ಸಂಕಲ್ಪಗಳನ್ನು ಆರಂಭಿಸಬೇಡ. ಆಸೆ ಮತ್ತು ಮಮತೆಗಳಿಲ್ಲದವನಾಗು. ಶೋಕವಿಲ್ಲದ ಅವ್ಯಯವಾದ ಪರಲೋಕದ ಸ್ಥಾನವನ್ನು ಹೊಂದು. ಆಸೆಗಳಿಲ್ಲದವರು ಶೋಕಿಸುವುದಿಲ್ಲ. ನೀನೇಕೆ ಆಸೆಗಳಿಗಾಗಿ ಶೋಕಿಸುತ್ತಿರುವೆ? ಆಸೆಗಳೆಲ್ಲವನ್ನೂ ತ್ಯಜಿಸಿದರೆ ಮಿಥ್ಯಾವಾದದಿಂದ ಮುಕ್ತನಾಗುವೆ. ಪಿತೃಯಾನ ಮಾತು ದೇವಯಾನಗಳೆಂಬ ಎರಡು ದಾರಿಗಳಿವೆ ಎಂದು ಕೇಳಿದ್ದೇವೆ. ಯಜ್ಞಗಳನ್ನು ಮಾಡಿದವರು ಪಿತೃಯಾನದಲ್ಲಿಯೂ, ಮೋಕ್ಷವನ್ನು ಪಡೆದವರು ದೇವಯಾನದಲ್ಲಿಯೂ ಹೋಗುತ್ತಾರೆ. ತಪಸ್ಸು, ಬ್ರಹ್ಮಚರ್ಯ ಮತ್ತು ಸ್ವಾಧ್ಯಾಯಗಳಿಂದ ಪವಿತ್ರರಾದವರು ದೇಹಗಳನ್ನು ತೊರೆದು ಮೃತ್ಯುವಿಗೆ ತುತ್ತಾಗದೇ ಹೊಳೆಯುತ್ತಾ ಬ್ರಹ್ಮಲೋಕವನ್ನು ಸೇರುತ್ತಾರೆ. ಲೋಕದಲ್ಲಿ ಆಸೆಯು ಒಂದು ಬಂಧನ. ಫಲಸಂಬಂಧಿತ ಕರ್ಮಗಳೂ ಆಸೆಗಳೇ. ಈ ಎರಡರ ಪಾಶಗಳಿಂದ ವಿಮುಕ್ತನಾದವನು ಶ್ರೇಷ್ಠ ಪರಮಪದವನ್ನು ಪಡೆಯುತ್ತಾನೆ. ಇದರ ಕುರಿತು ದ್ವಂದ್ವಗಳಿಂದ ಮುಕ್ತನಾಗಿ, ಮೋಕ್ಷವನ್ನು ಚೆನ್ನಾಗಿ ತಿಳಿದುಕೊಂಡಿದ್ದ ಜನಕನು ಹೇಳಿದ ಈ ಶ್ಲೋಕಗಳನ್ನು

ಉದಾಹರಿಸುತ್ತಾರೆ. “ನನ್ನಲ್ಲಿರುವ ಸಂಪತ್ತು ಅನಂತವಾದುದು ಎಮ್ದು ಹೇಳುತ್ತಾರೆ. ಆದರೆ ನನ್ನಲ್ಲಿ ಏನೂ ಇಲ್ಲ. ಮಿಥಿಲೆಯೇ ಹತ್ತಿ ಉರಿದುಹೋದರೂ ಯಾವುದೂ ನನ್ನನ್ನು ಸುಡುವುದಿಲ್ಲ! ಪರ್ವತದ ಮೇಲೆ ನಿಂತು ಕೆಳಗಿನ ಜಗತ್ತನ್ನು ನೋಡುವಂತೆ ಪ್ರಜ್ಞೆಯೆಂಬ ಪ್ರಾಸಾದವನ್ನೇರಿ ಶೋಕರಹಿತನಾದ ಜ್ಞಾನಿಯು ಶೋಕಿಸುತ್ತಿರುವ ಮಂದಬುದ್ಧಿಯ ಜನರನ್ನು ನೋಡುತ್ತಿರುತ್ತಾನೆ. ನೋಡಿ ಅದನ್ನು ಅರ್ಥಮಾಡಿಕೊಂಡವನೇ ಕಣ್ಣುಗಳುಳ್ಳವನು ಮತ್ತು ಬುದ್ಧಿವಂತನು. ತಿಳಿಯದೇ ಇರುವುದನ್ನು ಅನುಭವ ಪೂರ್ವಕವಾಗಿ ತಿಳಿಸುವುದೇ ಬುದ್ಧಿ ಎಂದೆನಿಸಿಕೊಳ್ಳುತ್ತದೆ. ಯಾರು ಬ್ರಹ್ಮಭಾವವನ್ನು ಹೊಂದಿರುವ, ವೈದ್ಯರ ಮತ್ತು ಭಾವಿತಾತ್ಮರ ಮಾತುಗಳನ್ನು ತಿಳಿದುಕೊಳ್ಳುತ್ತಾರೋ ಅವರು ಹೆಚ್ಚು ಗೌರವಕ್ಕೆ ಪಾತ್ರರು. ಯಾವಾಗ ಇರುವವುಗಳ ಪ್ರತ್ಯೇಕತೆಗಳು ಒಂದರಲ್ಲಿಯೇ ನೆಲೆಗೊಂಡಿವೆಯೆನ್ನುವುದನ್ನು ಕಾಣುತ್ತಾನೋ ಆಗಲೇ ವಿಸ್ತಾರವಾದ ಬ್ರಹ್ಮದ ಅನುಭವವುಂಟಾಗುತ್ತದೆ. ವಿದ್ವಾಂಸನಲ್ಲದವನು, ಸಣ್ಣಬುದ್ಧಿಯುಳ್ಳವನು, ತಿಳಿಯದವನು, ತಪಸ್ಸು

ಮಾಡದವನು ಆ ಗತಿಯನ್ನು ಹೊಂದಲಾರ. ಎಲ್ಲವೂ ಬುದ್ಧಿಯಲ್ಲಿಯೇ ಪ್ರತಿಷ್ಠಿತವಾಗಿವೆ!”

ರಾಜನ ಮಾತಿನ ಮುಳ್ಳುಗಳಿಂದ ಪೀಡಿತನಾದ ಮತ್ತು ಶೋಕ-ದುಃಖಗಳಿಂದ ಸಂತಪ್ತನಾದ ಅರ್ಜುನನು ಸುಮ್ಮನಾಗಿ ಕುಳಿತಿದ್ದ ರಾಜನಿಗೆ ಪುನಃ ಹೇಳಿದನು:

“ಭಾರತ! ಹಿಂದೆ ವಿದೇಹರಾಜ ಮತ್ತು ಅವನ ಪತ್ನಿ ಇವರ ನಡುವೆ ನಡೆದ ಸಂವಾದವನ್ನು ಜನರು ಉದಾಹರಿಸುತ್ತಾರೆ. ರಾಜ್ಯವನ್ನು ತ್ಯಜಿಸಿ ಭಿಕ್ಷುವಾಗಿರಲು ನಿಶ್ಚಯಿಸಿದ ಜನೇಶ್ವರ ವಿದೇಹರಾಜನಿಗೆ ದುಃಖಿತಳಾದ ರಾಣಿಯು ಹೇಳಿದುದನ್ನು ಕೇಳು.

ಐಶ್ವರ್ಯ, ಮಕ್ಕಳು, ಮಿತ್ರರು, ವಿವಿಧ ರತ್ನಗಳು, ಮತ್ತು ಪಾವನ ಗೃಹಸ್ಥಾಶ್ರಮವನ್ನು ತ್ಯಜಿಸಿ ಜನಕನು ತಲೆಬೋಳಿಸಿಕೊಂಡು ಭಿಕ್ಷುವಾಗಲು ನಿಶ್ಚಯಿಸಿದನು. ಭಿಕ್ಷಾವೃತ್ತಿಯನ್ನು ಅವಲಂಬಿಸಿ ಒಂದು ಮುಷ್ಟಿ ಧಾನ್ಯದ ಹಿಟ್ಟನ್ನೇ ತಿನ್ನುತ್ತಿದ್ದ, ನಿರೀಹನಾಗಿದ್ದ, ಮತ್ಸರವನ್ನು ತೊರೆದಿದ್ದ ಅವನನ್ನು ಅವನ ಪ್ರಿಯ ಭಾರ್ಯೆಯು

ನೋಡಿದಳು. ಆ ಮನಸ್ವಿನೀ ಪತ್ನಿಯು ಕ್ರುದ್ಧಳಾಗಿ ಭಯವನ್ನೇ ತೊರೆದಿದ್ದ ಪತಿಯ ಬಳಿಸಾರಿ ಯುಕ್ತಿಯುಕ್ತವಾದ ಈ ಮಾತುಗಳನ್ನಾಡಿದಳು: "ಧನ-ಧಾನ್ಯ ಸಮೃದ್ಧವಾಗಿರುವ ನಿನ್ನ ಈ ರಾಜ್ಯವನ್ನು ನೀನೇ ತೊರೆದು ಕಾಪಾಲ ವೃತ್ತಿಯನ್ನೇಗೆ ಹಿಡಿದಿರುವೆ? ಮುಷ್ಟಿ ಧಾನ್ಯವನ್ನು ತಿನ್ನುವುದು ವನಚರರಿಗೆ ಸರಿಯಾದುದು! ರಾಜನ್! ನಿನ್ನ ಪ್ರತಿಜ್ಞೆಯೇ ಒಂದಾಗಿದ್ದರೆ ನೀನು ಮಾಡುತ್ತಿರುವುದು ಇನ್ನೊಂದಾಗಿದೆ! ಮಹಾರಾಜ್ಯವನ್ನು ತ್ಯಜಿಸಿ ಸ್ವಲ್ಪದಲ್ಲಿಯೇ ತೃಪ್ತಿಪಡೆಯುವವನಾಗಿಬಿಟ್ಟೆಯಲ್ಲ! ಇಂದು ನೀನು ಅತಿಥಿಗಳನ್ನು, ದೇವರ್ಷಿ-ಪಿತೃಗಳನ್ನು ಸತ್ಕರಿಸಲು ಶಕ್ಯನಾಗಿಲ್ಲ. ನಿನ್ನ ಪರಿಶ್ರಮಗಳೆಲ್ಲವೂ ವ್ಯರ್ಥವಾದಂತೆಯೇ! ದೇವತೆಗಳು, ಅತಿಥಿಗಳು ಮತ್ತು ಪಿತೃಗಳು ಎಲ್ಲರನ್ನೂ ಪರಿತ್ಯಜಿಸಿ ನೀನು ನಿಷ್ಕರ್ಮಿಯಾಗಿದ್ದುಕೊಂಡು ತಿರುಗುವೆ! ಮೂರುವೇದಗಳನ್ನು ತಿಳಿದಿರುವ ಸಹಸ್ರಾರು ವೃದ್ಧ ಬ್ರಾಹ್ಮಣರ ಪೋಷಕನಾಗಿದ್ದುಕೊಂಡು ಈಗ ಲೋಕದ ಅನ್ಯರಿಂದ ಪೋಷಣೆಗೊಳ್ಳಲು ಬಯಸುತ್ತಿರುವೆ! ಬೆಳಗುತ್ತಿರುವ ಸಂಪತ್ತನ್ನು ತ್ಯಜಿಸಿ ನೀನು ನಾಯಿಯಂತೆಯೇ

ತೋರುತ್ತಿರುವೆ! ಇಂದು ನಿನ್ನ ತಾಯಿಯು ಬಂಜೆಯಾದಳು ಮತ್ತು ನಿನ್ನ ಪತ್ನಿಯಾದ ನಾನು ಕೌಸಲ್ಯೆಯು ಪತಿಹೀನಳಾದೆನು! ಧರ್ಮ-ಕಾಮನೆಗಳನ್ನು ಸಾಧಿಸಿಕೊಳ್ಳಲು ಈ ಕ್ಷತ್ರಿಯರು ನಿನ್ನನ್ನೇ ಉಪಾಸನೆಮಾಡುತ್ತಿದ್ದಾರೆ. ಆಕಾಂಕ್ಷೆಗಳನ್ನು ಹೊಂದಿರುವ ಈ ದೀನರು ಫಲಕ್ಕಾಗಿ ನಿನ್ನ ಸೇವೆಯಲ್ಲಿ ತತ್ಪರರಾಗಿದ್ದಾರೆ. ಇವರನ್ನು ವಿಫಲರನ್ನಾಗಿಸಿ ನೀನು ಯಾವ ಲೋಕಗಳಿಗೆ ಹೋಗುತ್ತೀಯೆ? ಪರತಂತ್ರರಾದ ಮನುಷ್ಯರಿಗೆ ಮೋಕ್ಷವು ನಿಶ್ಚಯವಾದುದಲ್ಲ. ಧರ್ಮಪತ್ನಿಯನ್ನು ಪರಿತ್ಯಜಿಸಿ ಜೀವಿಸಲು ಬಯಸುವ ನಿನಗೆ ಈ ಪಾಪಕರ್ಮದಿಂದ ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ಸುಖವು ದೊರಕಲಾರದು. ಹಾರ-ಗಂಧ-ಅಲಂಕಾರ ಮತ್ತು ವಿವಿಧ ವಸ್ತ್ರಗಳನ್ನು ತ್ಯಜಿಸಿ ಕರ್ತವ್ಯ ಹೀನನಾಗಿ ನೀನು ಏಕೆ ಪರಿವ್ರಾಜಕನಾಗಲು ಬಯಸುವೆ? ಸರ್ವಭೂತಗಳಿಗೂ ಸರೋವರದಂತಿದ್ದು ನೀನು ಮಹಾ ಪಾವನನಾಗಿದ್ದೆ. ವಿಶಾಲ ವೃಕ್ಷದಂತೆ ನೀನು ಎಲ್ಲರಿಗೂ ನೆರಳನ್ನಿತ್ತು ಸೇವೆಸಲ್ಲಿಸುತ್ತಿದ್ದೆ. ಎಲ್ಲವನ್ನೂ ತೊರೆದು ಬಿದ್ದಿರುವ ಆನೆಯನ್ನು ಮಾಂಸಾಶಿ ಪ್ರಾಣಿಗಳೂ ಕ್ರಿಮಿಗಳೂ

ಜೀವಸಹಿತ ತಿಂದುಹಾಕಿಬಿಡುತ್ತವೆ. ಇನ್ನು ನಿಷ್ಕರ್ಮಿಯಾಗುವ ನಿನ್ನ ಕುರಿತೇನು ಹೇಳುವುದಿದೆ? ನಿನ್ನ ಈ ಕಮಂಡಲುವನ್ನು ಯಾರಾದರೂ ಅಪಹರಿಸಿಕೊಳ್ಳಬಹುದು. ನಿನ್ನ ಈ ತ್ರಿದಂಡವನ್ನೇ ಅಪಹರಿಸಿಕೊಂಡು ಹೋಗಬಹುದು. ನೀನು ಉಟ್ಟಿರುವ ವಸ್ತ್ರವನ್ನೂ ಕಿತ್ತುಕೊಳ್ಳಬಹುದು. ಆಗ ನಿನ್ನ ಮನೋಸ್ಥಿತಿಯು ಹೇಗಿರುತ್ತದೆ? ಎಲ್ಲವನ್ನೂ ತ್ಯಾಗಮಾಡಿ ಒಂದು ಮುಷ್ಟಿ ಹುರಿಧಾನ್ಯವನ್ನು ಅವಲಂಬಿಸಲು ಹೊರಟ ನಿನಗೆ ಎಲ್ಲವೂ ಸಮವೆಂದು ಹೇಗೆ ತೋರುತ್ತಿದೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ! ಮುಷ್ಟಿ ಹುರಿಧಾನ್ಯವನ್ನು ಕೇಳುವುದರಿಂದ ನಿನ್ನ ಈ ಎಲ್ಲವನ್ನೂ ಸಮವೆಂದು ಕಾಣುವೆ ಎನ್ನುವ ಪ್ರತಿಜ್ಞೆಯು ಭಂಗವಾಗುವುದಿಲ್ಲವೇ? ಆಗ ನಾನು ನಿನಗೆ ಏನಾಗುತ್ತೇನೆ? ಇಂದು ಮೇಲೆ ನಿನಗಿರುವ ಅನುಗ್ರಹಕ್ಕೆ ಏನಾಗುತ್ತದೆ? ನಿನ್ನ ಅನುಗ್ರಹವಿದ್ದರೆ ಭೂಮಿಯನ್ನು ಆಳು! ಅರಮನೆ, ಉತ್ತಮ ಹಾಸಿಗೆ, ವಾಹನ, ವಸ್ತ್ರಾ-ಭರಣಗಳನ್ನು ಭೋಗಿಸು! ಶ್ರೀಯಿಂದ ನಿರಾಶೆಗೊಂಡ, ನಿರ್ಧನ, ಬಂಧು-ಮಿತ್ರರಿಲ್ಲದ ಮತ್ತು ಅಕಿಂಚನರಾದ ಸಂನ್ಯಾಸಿಗಳು ಸುಖಕ್ಕಾಗಿಯೇ ತಮಗೆ ಬೇಕಾದ ಸಲಕರಣೆಗಳನ್ನು

(ಕಮಂಡಲು-ಕೃಷ್ಣಾಜಿನ ಇತ್ಯಾದಿ) ಸಂಗಹಿಸಿಟ್ಟುಕೊಂಡಿರುತ್ತಾರೆ. ಯಾವಾಗಲೂ ವಸ್ತುಗಳನ್ನು ಸಂಗ್ರಹಿಸುವುದರಲ್ಲಿ ನಿರತರಾದವರ ಮತ್ತು ಯಾವಾಗಲೂ ದಾನಮಾಡುವವರ ನಡುವಿನ ಅಂತರವನ್ನು ತಿಳಿದುಕೋ! ಇವರಿಬ್ಬರಲ್ಲಿ ಯಾರು ಶ್ರೇಷ್ಠರೆನಿಸಿಕೊಳ್ಳುತ್ತಾರೆ? ಸಾಧುಗಳಲ್ಲಿ ಮತ್ತು ದಂಭವನ್ನು ತೊರೆದವರಲ್ಲಿ ಯಾವಾಗಲೂ ಬೇಡುವವರಿಗೆ ದಾನಮಾಡಿದ ದಕ್ಷಿಣೆಯು ದಾವಾಗ್ನಿಯಲ್ಲಿ ಹೋಮಮಾಡಿದಂತೆ ವ್ಯರ್ಥವಾಗುತ್ತದೆ. ರಾಜನ್! ತನ್ನಲ್ಲಿ ಹಾಕಿದ ಕಟ್ಟಿಗೆಯನ್ನು ಸಂಪೂರ್ಣವಾಗಿ ಸುಡದೇ ಅಗ್ನಿಯು ಹೇಗೆ ಪ್ರಶಮನಗೊಳ್ಳುವುದಿಲ್ಲವೋ ಹಾಗೆ ಸದಾ ಬೇಡುವ ದ್ವಿಜನು ಬೇಡುತ್ತಿರುವುದು ದೊರೆಯದೇ ಶಾಂತನಾಗುವುದಿಲ್ಲ. ಸತ್ಪುರುಷರು, ವೇದಗಳು ಮತ್ತು ಅನ್ನಗಳನ್ನು ಅವಲಂಬಿಸಿಯೇ ಈ ಲೋಕದಲ್ಲಿ ಪ್ರಕೃತಿಯು ಸ್ಥಿರವಾಗಿ ನೆಲೆಸಿದೆ. ದಾನಮಾಡುವ ದಾನಿಗಳು ಇರದಿದ್ದರೆ ಮೋಕ್ಷಗಳನ್ನು ಬಯಸುವ ಮುನಿಗಳು ಎಲ್ಲಿರುತ್ತಿದ್ದರು? ಈ ಲೋಕದಲ್ಲಿ ಅನ್ನವನ್ನು ದಾನಮಾಡುವುದರಿಂದ ಗೃಹಸ್ಥನೆನಿಸಿಕೊಳ್ಳುತ್ತಾನೆ. ಅದೇ ಅನ್ನವನ್ನು ಬೇಡುವವರು

ಸಂನ್ಯಾಸಿಗಳೆನಿಸಿಕೊಳ್ಳುತ್ತಾರೆ. ಅನ್ನದಿಂದಲೇ ಪ್ರಾಣವು ಬೆಳೆಯುತ್ತದೆ. ಆದುದರಿಂದ ಅನ್ನವನ್ನು ದಾನಮಾಡುವವನು ಪ್ರಾಣವನ್ನು ದಾನಮಾಡುವವನಾಗುತ್ತಾನೆ. ಸಂನ್ಯಾಸಿಗಳು ಗೃಹಸ್ಥಾಶ್ರಮದಿಂದ ನಿರ್ವೃತ್ತರಾದರೂ ಗೃಹಸ್ಥರನ್ನೇ ಆಶ್ರಯಿಸಿರುತ್ತಾರೆ. ಆದುದರಿಂದ ಗೃಹಸ್ಥಾಶ್ರಮವೇ ಸಂನ್ಯಾಸದ ಉಗಮ, ನೆಲೆ ಮತ್ತು ಆಶ್ರಯವಾಗಿದೆ. ತ್ಯಾಗದಿಂದ, ವಿದ್ಯೆಯಿಂದ ಮತ್ತು ಮುಂಡನಮಾಡಿಕೊಂಡಿರುವುದರಿಂದ ಮತ್ತು ಬೇಡುವುದರಿಂದ ಭಿಕ್ಷುವೆನಿಸಿಕೊಳ್ಳುವುದಿಲ್ಲ. ಸರಳನಾಗಿದ್ದು ಆಸಕ್ತಿಯಿಲ್ಲದಿದ್ದರೂ ಆಸಕ್ತನಂತೆ ಲೋಕವ್ಯವಹಾರಗಳನ್ನು ನಡೆಸಿಕೊಂಡು ಹೋಗುತ್ತಾ ನಿಸ್ಸಂಗನಾಗಿ ಬಂಧನಗಳಿಂದ ಮುಕ್ತನಾಗಿ, ಮಿತ್ರ-ಶತ್ರುಗಳಲ್ಲಿ ಸಮಭಾವದಿಂದ ಇರುವವನು ರಾಜನಾಗಿದ್ದರೂ ಮುಕ್ತನಾದಂತೆ. ಮುಂಡನಮಾಡಿಕೊಂಡು ಕಾಷಾಯವಸ್ತ್ರಗಳನ್ನು ಧರಿಸಿ ದಾನಗಳಿಗೆ ಅಲೆದಾಡುವವರು ಅನೇಕವಿಧದ ಪಾಶಗಳಿಂದ ಬದ್ಧರಾಗಿ ವೃಥಾ ಕೂಡಿಸಿಕೊಳ್ಳುವ ಆಸೆಯಿಂದಿರುತ್ತಾರೆ. ಯಾರು ಮೂರು ವೇದಗಳನ್ನೂ, ಅವುಗಳು ಹೇಳಿರುವ ಕರ್ಮಗಳನ್ನೂ,

ಪುತ್ರರನ್ನೂ ಪರಿತ್ಯಜಿಸಿ ತ್ರಿದಂಡವನ್ನು ಹಿಡಿದು ಕಾಷಾಯವಸ್ತ್ರವನ್ನು ಪರಿಗ್ರಹಿಸುತ್ತಾರೋ ಅವರು ಬುದ್ಧಿಹೀನರೇ ಸರಿ! ಹೃದಯದಲ್ಲಿ ಆಸೆಗಳನ್ನಿಟ್ಟುಕೊಂಡು ಕಾಷಾಯವನ್ನು ಧರಿಸುವುದು ಒಂದು ಸೋಗು ಎಂದೇ ನೀನು ತಿಳಿ. ಧರ್ಮದ ಸೋಗನ್ನು ಹಾಕಿಕೊಂಡು ತಿರುಗಾಡುವ ಮುಂಡರಿಗೆ ಸಂನ್ಯಾಸಿಗಳೆನ್ನುವುದು ವ್ಯರ್ಥವೇ ಸರಿ ಎಂದು ನನಗನ್ನಿಸುತ್ತದೆ. ನೀನು ಜಿತೇಂದ್ರಿಯನಾಗಿದ್ದುಕೊಂಡು ಕಾಷಾಯವಸ್ತ್ರಧಾರಿಗಳನ್ನು, ಕೃಷ್ಣಾಜಿನ-ವಲ್ಕಲಗಳನ್ನು ಉಟ್ಟವರನ್ನೂ, ದಿಗಂಬರರಾದ ಅವಧೂತರನ್ನೂ, ಮುಂಡನ ಮಾಡಿಸಿಕೊಂಡವರನ್ನೂ, ಜಟಾಧಾರಿಗಳನ್ನೂ, ಸಾಧುಗಳನ್ನೂ ಪಾಲಿಸುತ್ತಾ ಲೋಕಗಳನ್ನು ಗೆಲ್ಲು! ಗುರುಗಳ ಅಗ್ನಿಕಾರ್ಯ-ದಾನಗಳಿಗೆ, ಮತ್ತು ಪಶು-ದಕ್ಷಿಣೆಗಳಿಂದ ಕೂಡಿದ ಕ್ರತುಗಳಿಗೆ ದ್ರವ್ಯಸಂಗ್ರಹಗಳನ್ನು ಮಾಡುವವರಿಗಿಂತಲೂ ಹೆಚ್ಚು ಧರ್ಮಪರಾಯಣರಾದವರು ಬೇರೆ ಯಾರಿದ್ದಾರೆ?”

ತತ್ತ್ವಜ್ಞ ರಾಜಾ ಜನಕನ ಕುರಿತು ಲೋಕವು ಈ ಗೀತೆಯನ್ನು ಹಾಡುತ್ತದೆ. ಅವನೂ ಕೂಡ ಮೋಹಸಂಪನ್ನನಾಗಿದ್ದನು. ಅವನಂತೆ ನೀನು ಮೋಹವಶನಾಗಬೇಡ! ಹೀಗೆ ನಾವೂ

ಕೂಡ ಧರ್ಮವನ್ನನುಸರಿಸುತ್ತಾ ಸಧಾ ಇತರರಿಗೆ ದಾನಗಳನ್ನು ನೀಡುತ್ತಾ, ದಯಾಗುಣಸಂಪನ್ನರಾಗಿ, ಕಾಮ-ಕ್ರೋಧಗಳನ್ನು ತೊರೆದು, ಉತ್ತಮ ದಾನಗಳನ್ನು ನೀಡುತ್ತಾ ಪ್ರಜೆಗಳನ್ನು ಪಾಲಿಸೋಣ! ಬ್ರಾಹ್ಮಣಪ್ರಿಯರಾಗಿದ್ದು ಸತ್ಯವಾದಿಗಳಾಗಿದ್ದುಕೊಂಡು ಇಷ್ಟವಾದ ಲೋಕಗಳನ್ನು ಪಡೆದುಕೊಳ್ಳೋಣ!"

ಯುಧಿಷ್ಠಿರನು ಹೇಳಿದನು:

"ಅಯ್ಯಾ! ನಾನು ಅಪರ ಮತ್ತು ಪರ ಶಾಸ್ತ್ರಗಳೆರಡನ್ನೂ ತಿಳಿದುಕೊಂಡಿದ್ದೇನೆ. ಕರ್ಮವನ್ನು ಮಾಡು ಮತ್ತು ತ್ಯಜಿಸು ಇವೆರಡೂ ವೇದವಚನಗಳೇ!

ವಿರೋಧಾಭಾಸವಾದಂತಿರುವ ಚಿತ್ರಿತವಾಗಿರುವ ಈ ಶಾಸ್ತ್ರವಾಕ್ಯಗಳನ್ನು ಅವುಗಳ ಕಾರಣ-ನಿಶ್ಚಯಗಳೊಂದಿಗೆ ಯಥಾವಿಧಿಯಾಗಿ ನಾನು ತಿಳಿದುಕೊಂಡಿರುವೆನು.

ನೀನಾದರೋ ಕೇವಲ ಅಸ್ತ್ರಗಳನ್ನು ತಿಳಿದವನು. ವೀರವ್ರತಾನುಷ್ಠಾನದಲ್ಲಿರುವವನು. ಶಾಸ್ತ್ರಾರ್ಥವನ್ನು ತತ್ತ್ವತಃ ತಿಳಿದುಕೊಳ್ಳಲು ನೀನು ಎಂದಿಗೂ ಸಮರ್ಥನಲ್ಲ! ನೀನು ಶಾಸ್ತ್ರಗಳ ಸೂಕ್ಷ್ಮಾರ್ಥಗಳನ್ನು ಕಂಡುಕೊಂಡಿದ್ದರೆ ಮತ್ತು

ಧರ್ಮನಿಶ್ಚಯಗಳಲ್ಲಿ ಕೋವಿದನಾಗಿದ್ದರೆ, ಧರ್ಮವನ್ನು ಕಂಡುಕೊಂಡಿದ್ದರೆ ನೀನೂ ಕೂಡ ನನಗೆ ಈ ಮಾತುಗಳನ್ನಾಡುತ್ತಿರಲಿಲ್ಲ! ಅರ್ಜುನ! ಅಣ್ಣನ ಸುಹೃದಯವನ್ನು ತಾಳಿ ನೀನು ಹೇಳಿದ ನ್ಯಾಯವೂ ಯುಕ್ತವೂ ಆದ ಮಾತಿನಿಂದ ಸಂತೋಷಗೊಂಡಿದ್ದೇನೆ. ಯುದ್ಧಧರ್ಮದ ಸರ್ವ ಕ್ರಿಯೆಗಳಲ್ಲಿ ಮತ್ತು ನೈಪುಣ್ಯತೆಯಲ್ಲಿ ನಿನ್ನ ಸಮನಾಗಿರುವವರು ಮೂರು ಲೋಕಗಳಲ್ಲೀ ಯಾರೂ ಇಲ್ಲವೆಂದು ತಿಳಿಯುತ್ತದೆ. ಆದರೆ ನೀನು ಈಗ ಹೇಳಿರುವ ಧರ್ಮಸೂಕ್ಷ್ಮದ ಮಾತುಗಳು ನನ್ನ ಬುದ್ಧಿಗೆ ತಿಳಿಯಲಿಲ್ಲ ಎಂದು ಶಂಕಿಸಬಾರದು. ನೀನು ಯುದ್ಧಶಾಸ್ತ್ರವನ್ನು ಮಾತ್ರವೇ ತಿಳಿದಿರುವೆ. ನೀನೆಂದೂ ವೃದ್ಧರ ಸೇವೆಯನ್ನು ಮಾಡಿದವನಲ್ಲ. ಆದುದರಿಂದ ಸಂಕ್ಷಿಪ್ತವಾಗಿಯೂ ವಿಸ್ತಾರವಾಗಿಯೂ ಇರುವ ಧರ್ಮ ನಿಶ್ಚಯವು ನಿನಗೆ ತಿಳಿಯಲಾರದು! ತಪಸ್ಸು-ತ್ಯಾಗ ಮತ್ತು ಬ್ರಹ್ಮಜ್ಞಾನ ಇವು ಶ್ರೇಯಸ್ಕರವೆಂದು ತಿಳಿದವರ ನಿಶ್ಚಯ. ಈ ಮೂರರಲ್ಲಿ ಮೊದಲನೆಯದಕ್ಕಿಂತಲೂ ಎರಡನೆಯದು ಶ್ರೇಷ್ಠವು ಮತ್ತು ಎರಡನೆಯದಕ್ಕಿಂತಲೂ ಮೂರನೆಯದು ಶ್ರೇಷ್ಠವು.

ಧನಕ್ಕಿಂತಲೂ ಮಿಗಿಲಾದುದು ಇಲ್ಲವೆಂದು ನಿನ್ನ ಅಭಿಪ್ರಾಯವಾಗಿದೆ. ಆದರೆ, ಅದು ಪ್ರಧಾನವಾದುದಲ್ಲವೆನ್ನುವುದನ್ನು ನಾನು ನಿನಗೆ ಹೇಳುತ್ತಿದ್ದೇನೆ. ತಪಸ್ಸು ಮತ್ತು ಸ್ವಾಧ್ಯಾಯಗಳಲ್ಲಿ ನಿರತರಾದ ಧಾರ್ಮಿಕ ಜನರು ಕಾಣಸಿಗುತ್ತಾರೆ. ತಪಸ್ಸಿನಿಂದ ಯುಕ್ತರಾದ ಋಷಿಗಳಿಗೆ ಸನಾತನ ಲೋಕಗಳು ದೊರೆಯುತ್ತವೆ. ಶತ್ರುಗಳೇ ಇಲ್ಲದ ಅನ್ಯ ಧೀರ ವನವಾಸಿಗಳು ಬಹಳ ಕಾಲ ಧನವಿಲ್ಲದೇ ಸ್ವಾಧ್ಯಾಯದಲ್ಲಿ ನಿರತರಾಗಿದ್ದುಕೊಂಡು ಸ್ವರ್ಗಕ್ಕೆ ಹೋಗುತ್ತಾರೆ.  ಅನೇಕ ಆರ್ಯರು ವಿಷಯನಿಗ್ರಹದಿಂದ ಮೌಢ್ಯದಿಂದ ಉಂಟಾದ ಕತ್ತಲೆಯನ್ನು ತ್ಯಜಿಸಿ ಉತ್ತರ ಮಾರ್ಗವಾಗಿ ಉತ್ತಮ ಲೋಕಗಳಿಗೆ ಹೋಗಿದ್ದಾರೆ. ದಕ್ಷಿಣ ಮಾರ್ಗದಲ್ಲಿ ತೋರುವ ಪ್ರಕಾಶಮಾನ ಲೋಕಗಳು ಸದಾ ಶ್ಮಶಾನ ಯಾತ್ರೆಗಳನ್ನು ಮಾಡುತ್ತಿರುವ ಕ್ರಿಯಾವಂತರಿಗಿರುವವು. ಮೋಕ್ಷಿಣಿಗಳು ಯಾವ ಮಾರ್ಗದಲ್ಲಿ ಹೋದರೆನ್ನುವುದನ್ನು ನಿರ್ದಿಷ್ಠವಾಗಿ ಹೇಳುವುದು ಕಷ್ಟ. ಆದುದರಿಂದ ತ್ಯಾಗವು ಪ್ರಧಾನವಾದುದು. ಆದರೆ ಅದನ್ನು ತಿಳಿದುಕೊಳ್ಳುವುದು ಕಷ್ಟ. ವಿದ್ವಾಂಸರು ಒಂದೆಡೆ ಸೇರಿ

ಶಾಸ್ತ್ರಗಳ ಸಾರಾಸಾರಗಳನ್ನು ಪರಿಶೀಲಿಸಿ ಇವುಗಳಲ್ಲಿ ಯಾವುದು ಬ್ರಹ್ಮಸಾಕ್ಷಾತ್ಕಾರವು ಸಾಧ್ಯ ಎನ್ನುವುದನ್ನು ಅವಲೋಕಿಸಿದ್ದಾರೆ. ಕಡಿದುರುಳಿಸಿದ ಬಾಳೆಯ ದಿಂಡಿನಲ್ಲಿ ಸಾರವನ್ನು ಕಾಣದಂತೆ ವೇದವಾದಗಳನ್ನೂ ದಾಟಿ ಮುಂದೆ ಹೋಗಿ ಶಾಸ್ತ್ರ-ಅರಣ್ಯಕಗಳನ್ನೂ ಪರಿಶೀಲಿಸಿದರೂ ಅವುಗಳಲ್ಲಿ ಅವರು ಸಾರವನ್ನು ಕಾಣಲಿಲ್ಲ. ಕೆಲವರು ಪಂಚಭೌತಿಕವಾದ ಈ ಶರೀರದಲ್ಲಿರುವ ಆತ್ಮನು ಸ್ವಭಾವತಃ ಇಚ್ಛೆ-ದ್ವೇಷಗಳಿಂದ ಕೂಡಿದವನು ಎಂದು ಹೇಳುತ್ತಾರೆ. ಆದರೆ ಈ ಆತ್ಮವು ಕಣ್ಣಿಗೆ ಕಾಣಿಸುವುದಿಲ್ಲ. ಮಾತಿನ ಮೂಲಕ ವರ್ಣಿಸಲಾಗುವುದಿಲ್ಲ. ಅದರ ಎದುರಿರುವ ಕರ್ಮಕಾರಣಗಳು ಜೀವಿಗಳಲ್ಲಿ ಪರಿವರ್ತನೆ ಹೊಂದುತ್ತಿರುತ್ತವೆಯೇ ಹೊರತು ಆತ್ಮವು ಪರಿವರ್ತಿತವಾಗದಕ್ಕುದಲ್ಲ. ಮನಸ್ಸನ್ನು ಕಲ್ಯಾಣಮಾರ್ಗದಲ್ಲಿ ತೊಡಗಿಸಿ, ಮನಸ್ಸಿನ ಬಾಯಾರಿಕೆಯನ್ನು ನಿಗ್ರಹಿಸಿಕೊಂಡು ಕರ್ಮಗಳ ಪರಂಪರೆಯನ್ನು ತ್ಯಜಿಸಿ ನಿರಾಲಂಬನಾಗಿರುವವನೇ ಪರಮ ಸುಖಿಯು. ಅರ್ಜುನ! ಸಾಧುಗಳು ಬಳಸುವ ಈ ಸೂಕ್ಷ್ಮಗಮ್ಯ ಮಾರ್ಗವಿರುವಾಗ

ಅನರ್ಥವಾಗಿರುವ ಅರ್ಥವನ್ನೇಕೆ ನೀನು ಪ್ರಶಂಸಿಸುತ್ತಿರುವೆ? ಭಾರತ! ನಿತ್ಯವೂ ಯಜ್ಞ-ದಾನ ಕರ್ಮಗಳಲ್ಲಿ ನಿರತರಾಗಿದ್ದ ಹಿಂದಿನ ಶಾಸ್ತ್ರವಿದ್ವಾಂಸ ಜನರೂ ಈ ವಿಷಯದಲ್ಲಿ ಇದೇ ಅಭಿಪ್ರಾಯವನ್ನು ತಾಳಿದ್ದರು. ಆದರೆ ಕಾರಣಗಳನ್ನು ತಿಳಿದುಕೊಂಡಿರುವ ಪಂಡಿತರೂ ಕೂಡ ತಮ್ಮ ಹಿಂದಿನ ದೃಢಸಂಸ್ಕಾರದಿಂದ ಪ್ರಭಾವಿತರಾಗಿ ದುರಾವರ್ತ ಮೂಢರಾಗಿ ಇದು ಹಾಗಲ್ಲ ಎಂದು ವಾದಿಸುತ್ತಾರೆ. ಆತ್ಮನ ಅಮೃತತ್ವವನ್ನು ಒಪ್ಪಿಕೊಳ್ಳದೇ ಬಹುವಿದ್ವಾಂಸರೂ ಜನಸಂಸದಿಗಳಲ್ಲಿ ಅನೃತವಾದಿಗಳಾಗಿ ಇಡೀ ಭೂಮಿಯನ್ನು ಸಂಚರಿಸುತ್ತಿರುತ್ತಾರೆ. ಅಂಥವರನ್ನು ನಾವೇ ತಿಳಿಯಲಾರೆವು ಎಂದಾದಮೇಲೆ ಸಾಧಾರಣ ಮನುಷ್ಯರು ತಾನೇ ಹೇಗೆ ತಿಳಿದುಕೊಳ್ಳುತ್ತಾರೆ? ಮಹಾ ಪ್ರಾಜ್ಞರಾದ ಸಾಧು ಶಾಸ್ತ್ರಪಂಡಿತರೂ ಇದ್ದಾರೆ. ಕೌಂತೇಯ! ಬುದ್ಧಿಯಿಂದ ಮಹತ್ತನ್ನು ತಿಳಿದುಕೊಂಡವನು ಮಹಾ ತಪಸ್ಸಿನ ಫಲವನ್ನು ಪಡೆಯುತ್ತಾನೆ. ತತ್ತ್ವವಿದನು ಸದಾ ತ್ಯಾಗದಿಂದ ಸುಖವನ್ನು ಹೊಂದುತ್ತಾನೆ.”

ಈ ಮಧ್ಯದಲ್ಲಿ ಮಹಾತಪಸ್ವಿ ದೇವಸ್ಥಾನನು ಯುಧಿಷ್ಠಿರನಿಗೆ

ನೀತಿಯುಕ್ತವಾದ ಈ ಮಾತುಗಳನ್ನು ಹೇಳಿದನು:

"ಧನಕ್ಕಿಂತಲೂ ಹೆಚ್ಚಿನದಾದುದ್ದು ಇಲ್ಲ ಎಂದು ಫಲ್ಗುನನು ಏನು ಹೇಳಿದನೋ ಅದೇ ವಿಷಯದಲ್ಲಿ ನಾನೂ ಕೂಡ ಹೇಳುತ್ತೇನೆ. ಏಕಾಗ್ರಚಿತ್ತನಾಗಿ ಕೇಳು. ರಾಜನ್! ಧರ್ಮದಿಂದಲೇ ನೀನು ಈ ಸಂಪೂರ್ಣ ವಸುಧೆಯನ್ನು ಗೆದ್ದಿರುವೆ. ಹಾಗೆ ಗೆದ್ದಿರುವ ರಾಜ್ಯವನ್ನು ವೃಥಾ ಪರಿತ್ಯಜಿಸುವುದು ಸರಿಯಲ್ಲ. ಬ್ರಹ್ಮ ಸಾಕ್ಷಾತ್ಕಾರಕ್ಕೆ ಬ್ರಹ್ಮಚರ್ಯ, ಗಾರ್ಹಸ್ಥ್ಯ, ವಾನಪ್ರಸ್ಥ ಮತ್ತು ಸಂನ್ಯಾಸಗಳೆಂದ ನಾಲ್ಕು ಆಶ್ರಮಧರ್ಮಗಳಿಗೆ. ಇವುಗಳಲ್ಲಿ ಶ್ರೇಣಿಯೆಂಬುದಿಲ್ಲ. ಇವೆಲ್ಲವೂ ಕರ್ಮದಲ್ಲಿಯೇ ಪ್ರತಿಷ್ಠಿತವಾಗಿವೆ. ಇವುಗಳನ್ನು ಕ್ರಮೇಣವಾಗಿ ಒಂದಾದ ನಂತರ ಮತ್ತೊಂದನ್ನು ಜಯಿಸುತ್ತಾ ಬಾ! ಆದುದರಿಂದ ಬಹುದಕ್ಷಿಣೆಗಳಿಂದ ಯುಕ್ತವಾದ ಮಹಾಯಜ್ಞಗಳನ್ನು ಯಾಜಿಸು. ಸ್ವಾಧ್ಯಾಯ ಯಜ್ಞದಲ್ಲಿ ನಿರತರಾಗಿರುವವರು ಋಷಿಗಳು. ಜ್ಞಾನಯಜ್ಞದಲ್ಲಿ ನಿರತರಾಗಿರುವವರು ಸಂನ್ಯಾಸಿಗಳು. ಕರ್ಮನಿಷ್ಠರು ಮತ್ತು ತಪೋನಿಷ್ಠರು ಇವರ ಕುರಿತು ತಿಳಿದುಕೊಳ್ಳಬೇಕು. ಈ ವಿಷಯದಲ್ಲಿ ವೈಖಾನಸರು

ಈ ರೀತಿ ಹೇಳಿದ್ದಾರೆ: ಧನವನ್ನು ಕೂಡಿಡಬೇಕೆಂದೇ ಧನವನ್ನು ಬಯಸುವುದಕ್ಕಿಂತ ಅದನ್ನು ಬಯಸದೇ ಇರುವುದೇ ಶ್ರೇಷ್ಠವಾದುದು. ಧನವನ್ನೇ ಆಶ್ರಯಿಸಿರುವವನಲ್ಲಿ ಅನೇಕ ದೋಷಗಳು ಪುನಃ ಪುನಃ ಬೆಳೆಯುತ್ತಿರುತ್ತವೆ. ಧನದ ಕಾರಣದಿಂದ ದ್ರವ್ಯವನ್ನು ಹೇಗೆ ವ್ಯಯಮಾಡಬೇಕೆಂದೂ ಕಷ್ಟಪಡುತ್ತಾರೆ. ಧನವನ್ನು ಹೇಗೆ ವ್ಯಯಮಾಡಬೇಕೆಂದು ತಿಳಿಯದೇ ಭ್ರೂಣಹತ್ಯಾದೋಷಕ್ಕೂ ಗುರಿಯಾಗುತ್ತಾರೆ. ಅನರ್ಹರಿಗೆ ದಾನನೀಡುವವನು ಮತ್ತು ಅರ್ಹನಾದವನಿಗೆ ದಾನನೀಡದಿರುವವನು ಇವೆರಡೂ ಪಾಪಕರ್ಮಗಳೇ. ಅನರ್ಹರ್ಯಾರು ಮತ್ತು ಅರ್ಹರ್ಯಾರು ಎಂದು ಪರಿಜ್ಞಾನವಿಲ್ಲದಿರುವುದರಿಂದ ದಾನಧರ್ಮಗಳೂ ದುಷ್ಕರವೇ ಸರಿ! ಧಾತ್ರನು ಧನವನ್ನು ಯಜ್ಞಕ್ಕಾಗಿಯೇ ಸೃಷ್ಟಿಸಿದ್ದಾನೆ. ಸೃಷ್ಟಿಯ ಮುಖ್ಯ ಉದ್ದೇಶವಾದ ಯಜ್ಞಕ್ಕಾಗಿಯೇ ಮನುಷ್ಯನ ಸೃಷ್ಟಿಯೂ ರಕ್ಷಣೆಯೂ ನಡೆಯುತ್ತಿದೆ. ಆದುದರಿಂದ ಸರ್ವ ಧನವನ್ನೂ ಯಜ್ಞಕ್ಕಾಗಿಯೇ ಉಪಯೋಗಿಸಬೇಕು. ಧನವನ್ನು ಈ ರೀತಿ ಬಳಸಿದ ನಂತರವೇ ಮನುಷ್ಯನು ತನಗೆ ಬೇಕಾದುದನ್ನು

ಪಡೆದುಕೊಳ್ಳುತ್ತಾನೆ. ಇಂದ್ರನು ವಿವಿಧ ಅನ್ನಗಳಿಂದ ಕೂಡಿದ ಯಜ್ಞಗಳನ್ನು ಮಾಡಿಯೇ ಎಲ್ಲ ದೇವತೆಗಳಿಗಿಂತಲೂ ಹೆಚ್ಚಿನ ಓಜಸ್ಸುಳ್ಳವನಾದನು. ಅದರಿಂದಲೇ ಅವನು ಇಂದ್ರತ್ವವನ್ನು ಪಡೆದುಕೊಂಡು ರಾರಾಜಿಸುತ್ತಿದ್ದಾನೆ. ಆದುದರಿಂದ ಯಜ್ಞಕ್ಕಾಗಿಯೇ ಸರ್ವ ಸಂಪತ್ತನ್ನೂ ವಿನಿಯೋಜಿಸಬೇಕು. ಮಹಾತ್ಮ ಮಹಾದೇವನೂ ಕೂಡ ಸರ್ವಮೇಧದಲ್ಲಿ ತನ್ನನ್ನು ತಾನೇ ಯಜ್ಞೇಶ್ವರನಿಗೆ ಸಮರ್ಪಿಸಿಕೊಂಡು ದೇವತೆಗಳಿಗೂ ದೇವನಾದನು. ಇದರಿಂದಲೇ ಆ ಕೃತ್ತಿವಾಸನು ಉತ್ತಮ ಕೀರ್ತಿಯಿಂದ ವಿಶ್ವಗಳನ್ನೂ ಲೋಕಗಳನ್ನೂ ವ್ಯಾಪಿಸಿ ಕಾಂತಿಮಂತನಾಗಿ ವಿರಾಜಿಸುತ್ತಾನೆ. ಅವಿಕ್ಷಿತನ ಮಗ ಪಾರ್ಥಿವ ಮರುತ್ತನು ಯಜ್ಞದಿಂದಲೇ ಮರ್ತ್ಯನಾಗಿದ್ದರೂ ದೇವರಾಜನನ್ನು ಜಯಿಸಿದ್ದನು. ಅವನ ಯಜ್ಞದಲ್ಲಿ ಸ್ವಯಂ ಲಕ್ಷ್ಮಿಯೇ ಸನ್ನಿಹಿತಳಾಗಿದ್ದಳು. ಅವನ ಯಜ್ಞದಲ್ಲಿ ಎಲ್ಲ ಪಾತ್ರೆಗಳೂ ಸ್ವರ್ಣಮಯವಾಗಿದ್ದವು. ಪಾರ್ಥಿವೇಂದ್ರ ಹರಿಶ್ಚಂದ್ರನ ಕುರಿತು ನೀನು ಕೇಳಿರುವೆ! ಅವನು ಮನುಷ್ಯನೇ ಆಗಿದ್ದರೂ ಶಕ್ರನನ್ನೂ ಪರಾಜಯಗೊಳಿಸಿದ್ದನು. ಅನೇಕ ಯಜ್ಞ-ಇಷ್ಟಿಗಳಿಂದ ಶೋಕರಹಿತನಾಗಿ ಪುಣ್ಯಗಳನ್ನು

ಗಳಿಸಿದನು. ಆದುದರಿಂದ ಎಲ್ಲ ಐಶ್ವರ್ಯವನ್ನೂ ಯಜ್ಞಕ್ಕಾಗಿಯೇ ನಿಯೋಗಿಸಬೇಕು.

ಇದಕ್ಕೆ ಸಂಬಂಧಿಸಿದಂತೆ ಪುರಾತನ ಇತಿಹಾಸವೊಂದನ್ನು ಉದಾಹರಿಸುತ್ತಾರೆ. ಆಗ ಇಂದ್ರನು ಕೇಳಿದಾಗ ಬೃಹಸ್ಪತಿಯು ಇದನ್ನು ಹೇಳಿದ್ದನು. ಸಂತೋಷವೇ ಸ್ವರ್ಗಕ್ಕೆ ಸಮಾನವಾದುದು. ಸಂತೋಷವೇ ಪರಮ ಸುಖಕರವಾದುದು. ಸಂತೋಷವು ನೆಲೆಗೊಂಡಿತೆಂದರೆ ಆ ತೃಪ್ತಿಗಿಂತ ಹೆಚ್ಚಿನದು ಬೇರೆ ಯಾವುದೂ ಇಲ್ಲ. ಆಮೆಯು ತನ್ನ ಎಲ್ಲ ಅವಯವಗಳನ್ನೂ ಚಿಪ್ಪಿನೊಳಗೆ ಸಂಕೋಚಿಸಿಕೊಳ್ಳುವಂತೆ ಕಾಮಗಳೆಲ್ಲವನ್ನೂ ಒಳಸೆಳೆದುಕೊಂಡಾಗ ಜ್ಯೋತಿಸ್ವರೂಪನಾದ ಅಂತರಾತ್ಮನು ಅಂತಃಕರಣದಲ್ಲಿ ಕಾಣಿಸಿಕೊಳ್ಳುತ್ತಾನೆ. ಯಾವುದಕ್ಕೂ ಭಯಪಡದಿದ್ದಾಗ, ಯಾವುದೂ ಭಯವನ್ನುಂಟುಮಾಡದಿದ್ದಾಗ, ಮತ್ತು ಕಾಮ-ದ್ವೇಷಗಳನ್ನು ಜಯಿಸಿದಾಗ ಪರಮಾತ್ಮನು ಕಾಣಿಸಿಕೊಳ್ಳುತ್ತಾನೆ. ಯಾವಾಗ ಕಾರ್ಯದಿಂದಾಗಲೀ, ಮನಸ್ಸಿನಿಂದಾಗಲೀ ಅಥವಾ ಮಾತಿನಿಂದಾಗಲೀ ಸರ್ವಭೂತಗಳಿಗೂ

ದ್ರೋಹವನ್ನೆಸಗುವುದಿಲ್ಲವೋ ಮತ್ತು ಇನ್ನೊಬ್ಬರಿಂದ ದ್ರೋಹವಾಗಲೆಂದು ಬಯಸುವುದಿಲ್ಲವೋ ಆಗ ಬ್ರಹ್ಮನ ಅರಿವಾಗುತ್ತದೆ. ಹೀಗೆ ಇರುವವು ತಮ್ಮ ತಮ್ಮ ಧರ್ಮಗಳನ್ನು ಆಗಾಗ ಅನುಸರಿಸಿಕೊಂಡು ಆಗಾಗ ಬ್ರಹ್ಮನನ್ನು ಕಾಣುತ್ತಿರುತ್ತವೆ. ಅದನ್ನು ತಿಳಿದುಕೋ! ಕೆಲವರು ಶಾಂತಿಯನ್ನು ಪ್ರಶಂಸಿಸುತ್ತಾರೆ. ಇನ್ನು ಕೆಲವರು ವ್ಯಾಯಾಮವನ್ನು ಪ್ರಶಂಸಿಸುತ್ತಾರೆ. ಒಂದನ್ನು ಪ್ರಶಂಸಿಸುವವರು ಇನ್ನೊಂದನ್ನು ಪ್ರಶಂಸಿಸುವುದಿಲ್ಲ. ಕೆಲವರು ಮಾತ್ರ ಇವೆರಡನ್ನೂ ಪ್ರಶಂಸಿಸುತ್ತಾರೆ. ಒಬ್ಬನು ಯಜ್ಞವನ್ನು ಪ್ರಶಂಸಿಸಿದರೆ ಇತರ ಜನರು ಸಂನ್ಯಾಸವನ್ನು ಪ್ರಶಂಸಿಸುತ್ತಾರೆ. ಒಬ್ಬರು ದಾನವನ್ನು ಪ್ರಶಂಸಿಸಿದರೆ ಇತರರು ದಾನಸ್ವೀಕರಣೆಯನ್ನೇ ಪ್ರಶಂಸಿಸುತ್ತಾರೆ. ಕೆಲವರಾದರೋ ಎಲ್ಲವನ್ನು ಪರಿತ್ಯಜಿಸಿ ಸುಮ್ಮನಾಗಿ ಧ್ಯಾನದಲ್ಲಿ ಕುಳಿತುಕೊಂಡುಬಿಡುತ್ತಾರೆ. ಕೆಲವರು ಕೊಂದಾಗಲೀ, ತುಂಡರಿಸಿಯಾಗಲೀ, ಕಸಿದುಕೊಂಡಾಗಲೀ ರಾಜ್ಯವನ್ನು ಪಡೆದು ಎಲ್ಲರ ಪರಿಪಾಲನೆಯನ್ನು ಪ್ರಶಂಸಿಸುತ್ತಾರೆ. ಇನ್ನು ಕೆಲವರು ಏಕಾಂತದಲ್ಲಿರುವುದನ್ನು

ಪ್ರಶಂಸಿಸುತ್ತಾರೆ. ಇವೆಲ್ಲವನ್ನೂ ಚೆನ್ನಾಗಿ ಅವಲೋಕಿಸಿ ವಿದ್ವಾಂಸರು ಈ ನಿರ್ಣಯಕ್ಕೆ ಬಂದಿರುತ್ತಾರೆ. ಇರುವ ಯಾವುದರ ಕುರಿತೂ ದ್ರೋಹವನ್ನೆಸಗದಿರುವುದೇ ಧರ್ಮವೆಂದು ಸತ್ಯವಂತರ ಅಭಿಪ್ರಾಯವಾಗಿದೆ. ಯಾರಿಗೂ ದ್ರೋಹಮಾಡದಿರುವುದು, ಸತ್ಯವನ್ನೇ ಹೇಳುವುದು, ಎಲ್ಲವಕ್ಕೂ ಯಥಾಯೋಗ್ಯವಾದ ಭಾಗಗಳನ್ನು ನೀಡುವುದು, ದಯೆ, ಕ್ಷಮೆ, ತನ್ನ ಪತ್ನಿಯರಲ್ಲಿ ಮಕ್ಕಳನ್ನು ಪಡೆಯುವುದು, ಮೃದುಸ್ವಭಾವ, ನಾಚಿಕೆ ಮತ್ತು ಚಾಪಲ್ಯಗಳನ್ನು ತೊರೆದಿರುವುದು ಇವೇ ಧರ್ಮ. ಧನವೇ ಧರ್ಮಕ್ಕೆ ಪ್ರಧಾನವಾದುದು ಎಂದು ಸ್ವಾಯಂಭು ಮನುವೇ ಹೇಳಿದ್ದಾನೆ. ಆದುದರಿಂದ ನೀನು ಅದನ್ನೇ ಪರಿಪಾಲಿಸು. ರಾಜ್ಯಸಿಂಹಾಸನಾರೂಢನಾಗಿ ಯಾವ ರಾಜನು ಇಂದ್ರಿಯಗಳನ್ನು ವಶಪಡಿಸಿಕೊಂಡು, ಪ್ರಿಯ-ಅಪ್ರಿಯಗಳನ್ನು ಸಮಾನವಾಗು ಕಾಣುತ್ತಾ, ಯಜ್ಞಗಳನ್ನು ಯಾಜಿಸಿ ವಿಘಸಗಳನ್ನು ಭುಂಜಿಸುತ್ತಾ, ರಾಜನೀತಿಯ ಅರ್ಥವನ್ನು ತತ್ತ್ವಶಃ ತಿಳಿದುಕೊಂಡು, ದುಷ್ಟರನ್ನು ಶಿಕ್ಷಿಸುವುದರಲ್ಲಿಯೂ ಶಿಷ್ಟರನ್ನು ರಕ್ಷಿಸುವುದರಲ್ಲಿಯೂ ನಿರತನಾಗಿದ್ದುಕೊಂಡು,

ತಾನೂ ಧರ್ಮದಲ್ಲಿ ನಡೆದುಕೊಂಡಿದ್ದು ಪ್ರಜೆಗಳನ್ನೂ ಧರ್ಮವಿದರನ್ನಾಗಿಸಿ ಧರ್ಮದಲ್ಲಿ ನಡೆದುಕೊಳ್ಳುವಂತೆ ಮಾಡಿ, ಮುಪ್ಪಿನಲ್ಲಿ ಸಂಪತ್ತನ್ನು ಪುತ್ರನಿಗಿತ್ತು ವನದಲ್ಲಿ ವಾನಪ್ರಸ್ಥಾಶ್ರಮದಲ್ಲಿ ಇದ್ದು, ಅರಣ್ಯದಲ್ಲಿಯೂ ವಿಧಿವತ್ತಾಗಿ ಶಾಸ್ತ್ರಗಳ ಶ್ರವಣ ಮತ್ತು ಕರ್ಮಗಳನ್ನು ಮಾಡುತ್ತಿರುವುದು – ಈ ರೀತಿ ನಡೆದುಕೊಳ್ಳುವವನನ್ನು ರಾಜಧರ್ಮದಲ್ಲಿರುವವನು ಎಂದು ನಿಶ್ಚಯಿಸಿದ್ದಾರೆ. ಇಂಥವನಿಗೆ ಇಹ-ಪರಗಳೆರಡರಲ್ಲೂ ಶುಭ ಫಲಗಳೇ ದೊರಕುತ್ತವೆ. ಸಂನ್ಯಾಸವು ಬಹಳ ಕಷ್ಟಕರವಾದುದು ಮತ್ತು ಬಹು ವಿಘ್ನಗಳಿಂದ ಕೂಡಿದುದು ಎಂದು ನನ್ನ ಅಭಿಪ್ರಾಯ. ಹೀಗೆ ಧರ್ಮಾನುಸರಣೆಯನ್ನು ಮಾಡುವ, ಸತ್ಯನಿಷ್ಠರಾದ, ದಾನಶೀಲರಾದ, ತಪೋನಿರತರಾದ, ದಯೆಯೇ ಮುಂತಾದ ಸದ್ಗುಣಗಳಿಂದ ಪರಿಪೂರ್ಣರಾದ, ಕಾಮ-ಕ್ರೋಧಗಳನ್ನು ಸಂಪೂರ್ಣವಾಗಿ ವರ್ಜಿಸಿ ಪ್ರಜೆಗಳ ಪಾಲನೆಯಲ್ಲಿಯೇ ನಿರತರಾದ, ಶ್ರೇಷ್ಠ ಧರ್ಮವನ್ನಾಶ್ರಯಿಸಿರುವ ರಾಜರು ಗೋ-ಬ್ರಾಹ್ಮಣರ ಸಲುವಾಗಿಯೇ ಯುದ್ಧಮಾಡುತ್ತಾ ಅವಸಾನಾನಂತರದಲ್ಲಿ ಸದ್ಗತಿಯನ್ನು ಹೊಂದುತ್ತಾರೆ.

ರುದ್ರರೂ, ವಸುಗಳೂ, ಆದಿತ್ಯರೂ, ಸಾಧ್ಯರೂ, ಅನೇಕ ರಾಜರ್ಷಿಗಳೂ ಅಪ್ರಮತ್ತರಾಗಿ ಇದೇ ಧರ್ಮವನ್ನಾಶ್ರಯಿಸಿಸ್ ತಮ್ಮ ತಮ್ಮ ಪುಣ್ಯ ಕರ್ಮಗಳಿಂದ ಸ್ವರ್ಗಲೋಕವನ್ನು ಪಡೆದುಕೊಂಡಿರುವರು."

ಈ ಮಧ್ಯದಲ್ಲಿ ಅರ್ಜುನನು ಖಿನ್ನಮನಸ್ಕನಾಗಿದ ಹಿರಿಯಣ್ಣ ರಾಜನಿಗೆ ಪುನಃ ಈ ಮಾತನ್ನಾಡಿದನು:

"ಧರ್ಮಜ್ಞ! ಕ್ಷತ್ರಧರ್ಮದಿಂದ ಈ ಅನುತ್ತಮ ರಾಜ್ಯವನ್ನು ಪಡೆದೂ, ಶತ್ರುಗಳನ್ನು ಗೆದ್ದೂ ಕೂಡ ನೀನು ಏಕೆ ಹೀಗೆ ತುಂಬಾ ಪರಿತಪಿಸುತ್ತಿರುವೆ? ಕ್ಷತ್ರಿಯ ಧರ್ಮವೇನು ಎನ್ನುವುದನ್ನು ನೆನಪಿಸಿಕೋ! ಅನೇಕ ಯಜ್ಞಗಳನ್ನು ಮಾಡುವುದಕ್ಕಿಂತಲೂ ಕ್ಷತ್ರಿಯರಿಗೆ ಸಂಗ್ರಾಮದಲ್ಲಿ ನಿಧನವೇ ವಿಶಿಷ್ಠವಾದುದು. ಬ್ರಾಹ್ಮಣರಿಗೆ ತಪಸ್ಸು ಮತ್ತು ತ್ಯಾಗ ಇವೇ ಮರಣಾನಂತರ ಪುಣ್ಯಲೋಕಗಳನ್ನು ನೀಡುವ ಧರ್ಮವಿಧಿಯೆಂದು ಹೇಳಿದ್ದಾರೆ. ಕ್ಷತ್ರಿಯರಿಗೆ ಸಂಗ್ರಾಮದಲ್ಲಿ ನಿಧನವು ವಿಹಿತವಾದುದು. ನಿತ್ಯವೂ ಶಸ್ತ್ರಧಾರಣೆಮಾಡಬೇಕಾದ, ಯುದ್ಧದಲ್ಲಿ ಸಮಯವೊದಗಿದಾಗ ಶಸ್ತ್ರಗಳಿಂದ ವಧೆಯನ್ನೂ

ಮಾಡಬೇಕಾದ ಕ್ಷತ್ರಧರ್ಮವನ್ನು ಮಹಾರೌದ್ರವಾದುದು ಎಂದು ಹೇಳುತ್ತಾರೆ. ಬ್ರಾಹ್ಮಣನಿಗೆ ಕೂಡ ಕ್ಷತ್ರಧರ್ಮಾನುಸಾರವಾಗಿ ಜೀವಿಸುವುದು ಪ್ರಶಸ್ತವಾದುದೇ. ಏಕೆಂದರೆ ಲೋಕದಲ್ಲಿ ಬ್ರಾಹ್ಮಣರಿಂದಲೇ ಕ್ಷತ್ರಿಯರು ಜನಿಸಿದ್ದುದು. ಕ್ಷತ್ರಿಯನಿಗೆ ತ್ಯಾಗ, ನಂತರ ಯಾಚನೆ ಮತ್ತು ತಪಸ್ಸುಗಳು ಹಾಗು ಇತರರ ಸ್ವತ್ತಿನಿಂದ ಜೀವನ ನಿರ್ವಹಣೆ ಇವು ವಿಹಿತವಾಗಿಲ್ಲ. ಸರ್ವಾತ್ಮನಾಗಿರುವ ನೀನು ಸರ್ವಧರ್ಮಗಳನ್ನೂ ತಿಳಿದಿರುವೆ. ಲೋಕದಲ್ಲಿ ನೀನು ಶ್ರೇಷ್ಠವಾದವುಗಳನ್ನು ಮತ್ತು ಶ್ರೇಷ್ಠವಲ್ಲದವುಗಳನ್ನು ಚೆನ್ನಾಗಿ ತಿಳಿದುಕೊಂಡಿರುವೆ. ಸಂತಾಪದಿಂದ ಹುಟ್ಟಿರುವ ಶೋಕವನ್ನು ತ್ಯಜಿಸಿ ಮಾಡಬೇಕಾದ ಕರ್ಮಗಳ ಕವಚವನ್ನು ತೊಡು! ಕ್ಷತ್ರಿಯನ ಹೃದಯವು ವಿಶೇಷವಾಗಿ ವಜ್ರದಂತೆ ಕಠಿಣವಾದುದೆಂದು ಹೇಳುತ್ತಾರೆ. ಕ್ಷತ್ರಧರ್ಮದಿಂದ ಶತ್ರುಗಳನ್ನು ಗೆದ್ದು, ಕಂಟಕಗಳಿಲ್ಲದ ರಾಜ್ಯವನ್ನು ಪಡೆದು ವಿಜಿತಾತ್ಮನಾಗಿ ಯಜ್ಞದಾನಪರನಾಗಿರು. ಬ್ರಾಹ್ಮಣ ಪುತ್ರನಾಗಿದ್ದ ಇಂದ್ರನು ತನ್ನ ಕರ್ಮಗಳಿಂದ ಕ್ಷತ್ರಿಯನಾದನು. ಪಾಪವೃತ್ತಿಗಳಲ್ಲಿ ತೊಡಗಿದ್ದ ಎಂಟುನೂರಾಹತ್ತು

ಜ್ಞಾತಿಬಾಂಧವರನ್ನು ಸಂಹರಿಸಿದನು. ಅವನ ಆ ಕರ್ಮವನ್ನು ಗೌರವಿಸುತ್ತಾರೆ ಮತ್ತು ಪ್ರಶಂಸಿಸುತ್ತಾರೆ. ಅದರಿಂದಲೇ ಅವನಿಗೆ ದೇವತೆಗಳ ಇಂದ್ರತ್ವವು ದೊರಕಿತೆಂದು ನಾವು ಕೇಳಿದ್ದೇವೆ. ನೀನೂ ಕೂಡ ಇಂದ್ರನಂತೆ ಬಹುದಕ್ಷಿಣೆಗಳಿಂದ ಯುಕ್ತವಾದ ಯಜ್ಞಗಳನ್ನು ಮಾಡಿ ಬಹುಕಾಲ ನಿಶ್ಚಿಂತನಾಗಿರು. ಹೀಗೆ ಹಿಂದೆಯೂ ನಡೆದುಹೋಗಿದ್ದುದರಿಂದ ನೀನು ಸ್ವಲ್ಪವೂ ಶೋಕಿಸಬೇಕಾಗಿಲ್ಲ. ಕ್ಷತ್ರಧರ್ಮಾನುಸಾರವಾಗಿ ಶಸ್ತ್ರಗಳಿಂದ ಪವಿತ್ರರಾದ ಅವರು ಪರಮ ಗತಿಯನ್ನು ಹೊಂದಿದ್ದಾರೆ. ಈಗ ನಡೆದುಹೋದುದು ಹಾಗೆಯೇ ಆಗಬೇಕಾಗಿತ್ತು. ದೈವದ ನಿಯಮವನ್ನು ಉಲ್ಲಂಘಿಸಿ ನಡೆಯಲು ಯಾರಿಂದಲೂ ಸಾಧ್ಯವಿಲ್ಲ!”

ಕೌಂತೇಯ ಗುಡಾಕೇಶನು ಹೀಗೆ ಹೇಳಲು ಕೌರವ್ಯನು ಏನನ್ನೂ ಮಾತನಾಡಲಿಲ್ಲ. ಆಗ ದ್ವೈಪಾಯನನು ಹೇಳಿದನು:

“ಯುಧಿಷ್ಠಿರ! ಬೀಭತ್ಸುವಿನ ಮಾತು ಸತ್ಯ. ಗೃಹಸ್ಥಾಶ್ರಮವು ಶಾಸ್ತ್ರ-ಸ್ಮೃತಿಗಳಲ್ಲಿ ತೋರಿಸಿಕೊಟ್ಟಿರುವ ಪರಮ ಧರ್ಮವು. ಶಾಸ್ತ್ರಗಳಲ್ಲಿರುವಂತೆ ಯಥಾವಿಧಿಯಾಗಿ ಸ್ವಧರ್ಮದಲ್ಲಿ

ನಡೆದುಕೋ. ಗೃಹಸ್ಥಧರ್ಮವನ್ನು ತ್ಯಜಿಸಿ ಅರಣ್ಯವನ್ನು ಸೇರುವುದು ನಿನಗೆ ವಿಹಿತವಾದುದಲ್ಲ. ದೇವತೆಗಳು, ಪಿತೃಗಳು, ಋಷಿಗಳು ಮತ್ತು ಸೇವಕರು ಗೃಹಸ್ಥರನ್ನೇ ಆಶ್ರಯಿಸಿ ಉಪಜೀವನ ಮಾಡುತ್ತಾರೆ. ಆದುದರಿಂದ ನೀನು ಅವರ ಭರಣ-ಪೋಷಣೆಯನ್ನು ಮಾಡು. ಪಶು-ಪಕ್ಷಿಗಳು ಮತ್ತು ಇತರ ಪ್ರಾಣಿಗಳು ಗೃಹಸ್ಥರನ್ನೇ ಅವಲಂಬಿಸಿವೆ. ಆದುದರಿಂದ ಗೃಹಸ್ಥಾಶ್ರಮವೇ ಹಿರಿದಾದುದು. ನಾಲ್ಕು ಆಶ್ರಮಗಳಲ್ಲಿ ಗೃಹಸ್ಥಾಶ್ರಮದ ಆಚರಣೆಯು ಅತ್ಯಂತ ಕಠಿನವಾದುದು. ದುರ್ಬಲ ಇಂದ್ರಿಯಗಳಿರುವವರಿಗೆ ಕಷ್ಟಕರವಾದ ಗೃಹಸ್ಥಾಶ್ರಮವನ್ನು ವಿಮನಸ್ಕನಾಗಿ ನೀನು ಪಾಲಿಸು! ನಿನ್ನಲ್ಲಿ ಸಂಪೂರ್ಣ ವೇದಜ್ಞಾನವಿದೆ. ಮಹಾ ತಪಸ್ಸನ್ನೂ ತಪಿಸಿದ್ದೀಯೆ. ಪಿತೃ-ಪಿತಾಮಹರ ಈ ರಾಜ್ಯದ ಭಾರವನ್ನು ನೀನು ಹೊರಬಲ್ಲೆ! ತಪಸ್ಸು, ಯಜ್ಞ, ವಿದ್ಯೆ, ಭಿಕ್ಷಾಟನೆ, ಇಂದ್ರಿಯನಿಗ್ರಹ, ಧ್ಯಾನ. ಏಕಾಂತಶೀಲತ್ವ, ತೃಪ್ತಿ ಶಕ್ತಿಯಿದ್ದಷ್ಟು ದಾನ – ಇವು ಬ್ರಾಹ್ಮಣರಿಗೆ ಸಿದ್ಧಿಯನ್ನು ನೀಡುವ ಕ್ರಿಯೆಗಳು. ನಿನಗೆ ತಿಳಿದಿದ್ದರೂ ಕ್ಷತ್ರಿಯರು ಏನು ಮಾಡಬೇಕು ಎನ್ನುವುದನ್ನು ಹೇಳುತ್ತೇನೆ. ಯಜ್ಞ, ವಿದ್ಯಾಭ್ಯಾಸ,

ಶತ್ರುಗಳ ಮೇಲೆ ಆಕ್ರಮಣ ಮಾಡುವುದು, ಸಂಪತ್ತಿನ ಕುರಿತು ಅಸಂತೋಷದಿಂದಿರುವುದು, ದಂಡಧಾರಣ, ಉಗ್ರತೆ, ಪ್ರಜೆಗಳ ಪರಿಪಾಲನೆ, ಸಂಪೂರ್ಣ ವೇದಜ್ಞಾನ, ತಪಸ್ಸು, ಸಧಾಚಾರ, ಅಪಾರ ಐಶ್ವರ್ಯವನ್ನು ಗಳಿಸುವುದು, ಸತ್ಪಾತ್ರರಲ್ಲಿ ದಾನಮಾಡುವುದು – ಇವು ರಾಜರು ಮಾಡುವ ಪುಣ್ಯ ಕರ್ಮಗಳು. ಇವುಗಳನ್ನು ಮಾಡುವ ರಾಜರು ಇಹ-ಪರಗಳೆರಡನ್ನೂ ಸಾಧಿಸುತ್ತಾರೆಂದು ಕೇಳಿದ್ದೇವೆ. ಇವುಗಳಲ್ಲಿ ದಂಡಧಾರಣೆಯೇ ಶ್ರೇಷ್ಠವಾದುದೆಂದು ಹೇಳುತ್ತಾರೆ. ಕ್ಷತ್ರಿಯನಿಗೆ ಬಲವೇ ನಿತ್ಯ. ಬಲದಲ್ಲಿಯೇ ದಂಡವು ಸಮಾಹಿತವಾಗಿರುವುದು. ಈ ಶ್ರೇಷ್ಠ ಕರ್ಮಗಳು ಕ್ಷತ್ರಿಯರಿಗೆ ಸಂಸಿದ್ಧಿಕಾರಕಗಳು. ಇದರ ಕುರಿತು ಬೃಹಸ್ಪತಿಯು ಒಂದು ಗೀತೆಯನ್ನು ಹಾಡಿದ್ದಾನೆ: “ಸರ್ಪವು ಬಿಲದಲ್ಲಿರುವ ಇಲಿಗಳನ್ನು ನುಂಗುವಂತೆ ಭೂಮಿಯು ಶತ್ರುವನ್ನು ವಿರೋಧಿಸದೇ ಇರುವ ರಾಜನನ್ನೂ ದೇಶಪರ್ಯಟನೆಮಾಡದ ಬ್ರಾಹ್ಮಣನನ್ನೂ ನುಂಗಿಹಾಕುತ್ತದೆ!” ರಾಜರ್ಷಿ ಸುದ್ಯುಮ್ನನೂ ಕೂಡ ದಂಡಧಾರಣೆಯಿಂದಾಗಿ ಪ್ರಾಚೇತಸ ದಕ್ಷನಂತೆ ಪರಮ

ಸಿದ್ಧಿಯನ್ನು ಪಡೆದನೆಂದು ಕೇಳಿದ್ದೇವೆ."

ಯುಧಿಷ್ಠಿರನು ಹೇಳಿದನು:

"ಭಗವನ್! ವಸುಧಾಧಿಪ ನೃಪ ಸುದ್ಯುಮ್ನನು ಯಾವ ಕರ್ಮದಿಂದ ಪರಮ ಸಂಸಿದ್ಧಿಯನ್ನು ಪಡೆದನು ಎನ್ನುವುದನ್ನು ಕೇಳಲು ಬಯಸುತ್ತೇನೆ."

ಆಗ ವ್ಯಾಸನು ಯುಧಿಷ್ಠಿರನಿಗೆ ಶಂಖ-ಲಿಖಿತೋಽಪಖ್ಯಾನವನ್ನು ಹೇಳಿ

"ಪಾಂಡವಶ್ರೇಷ್ಠ! ದಂಡಧಾರಣೆಯ ಶ್ರೇಷ್ಠ ಕರ್ಮದಿಂದಾಗಿ ರಾಜಾ ಸುದ್ಯುಮ್ನನು ದಕ್ಷ ಪ್ರಾಚೇತಸನಂತೆ ಪರಮ ಸಿದ್ಧಿಯನ್ನು ಪಡೆದನು. ಪ್ರಜೆಗಳ ಪರಿಪಾಲನೆಯೇ ಕ್ಷತ್ರಿಯರ ಧರ್ಮ. ಆದುದರಿಂದ ಇದರ ಕುರಿತು ಶೋಕಿಸಬೇಡ! ತಮ್ಮನ ಹಿತವಾಕ್ಯವನ್ನು ಕೇಳು. ದಂಡವೇ ಕ್ಷತ್ರಧರ್ಮ. ಮುಂಡನವಲ್ಲ!"

ಅಜಾತಶತ್ರು ಕೌಂತೇಯನಿಗೆ ಮಹರ್ಷಿ ಕೃಷ್ಣದ್ವೈಪಾಯನನು ಪುನಃ ಈ ಅರ್ಥವತ್ತಾದ ಮಾತುಗಳನ್ನಾಡಿದನು:

"ಯುಧಿಷ್ಠಿರ! ಅರಣ್ಯದಲ್ಲಿ ವಾಸಿಸುತ್ತಿರುವಾಗ

ತಪಸ್ವಿಗಳಾಗಿದ್ದ ನಿನ್ನ ಮಹಾರಥ ಸಹೋದರರು ಇಟ್ಟುಕೊಂಡಿದ್ದ ಮನೋರಥಗಳನ್ನು ಈಗ ಪೂರೈಸಿಕೊಳ್ಳಲಿ! ನಹುಷನ ಮಗ ಯಯಾತಿಯಂತೆ ಈ ಭೂಮಿಯ ಮೇಲೆ ಶಾಸನ ಮಾಡು! ಆ ತಪಸ್ವಿಗಳು ಅರಣ್ಯದಲ್ಲಿ ವಾಸಿಸುತ್ತಿರುವಾಗ ದುಃಖಗಳನ್ನು ಅನುಭವಿಸಿದರು. ಆ ದುಃಖದ ಅಂತ್ಯದಲ್ಲಿ ನರವ್ಯಾಘ್ರರು ಈಗಲಾದರೂ ಸುಖವನ್ನು ಅನುಭವಿಸಲಿ. ಧರ್ಮ, ಅರ್ಥ, ಮತ್ತು ಕಾಮಗಳನ್ನು ಸಹೋದರರೊಂದಿಗೆ ಅನುಭವಿಸಿ, ಅದರ ನಂತರ ನೀನು ವಾನಪ್ರಸ್ಥವನ್ನು ಕೈಗೊಳ್ಳಬಹುದು. ಅತಿಥಿಗಳ, ಪಿತೃಗಳ ಮತ್ತು ದೇವತೆಗಳ ಋಣಮುಕ್ತನಾದ ನಂತರ ಹೋಗು! ಆಗ ಸ್ವರ್ಗಕ್ಕೇ ಹೋಗುತ್ತೀಯೆ! ಸರ್ವಮೇಧ-ಅಶ್ವಮೇಧ ಯಜ್ಞಗಳನ್ನು ಯಾಜಿಸು. ಅದರನಂತರ ಪರಮ ಗತಿಯನ್ನು ಪಡೆಯುವಿಯಂತೆ. ಬಹುದಕ್ಷಿಣೆಗಳಿಂದ ಯುಕ್ತವಾದ ಆ ಎಲ್ಲ ಕ್ರತುಗಳಲ್ಲಿ ನಿನ್ನ ಸಹೋದರರರನ್ನೂ ಜೋಡಿಸಿಕೋ! ಇದರಿಂದ ನೀನು ಅಪಾರ ಕೀರ್ತಿಯನ್ನು ಪಡೆಯುತ್ತೀಯೆ. ನಿನ್ನ ಮಾತುಗಳು ನಮಗೆ ಚೆನ್ನಾಗಿ ಅರ್ಥವಾಗುತ್ತಿವೆ. ಏನು ಮಾಡಿದರೆ ನೃಪನು

ಧರ್ಮಚ್ಯುತನಾಗುವುದಿಲ್ಲ ಎನ್ನುವುದನ್ನು ಕೇಳು. ಧನ ಸಂಗ್ರಹಣೆ ಮತ್ತು ದುಷ್ಟ ನಿಗ್ರಹ ಇವೆರಡೂ ಸಮಾನ ಕ್ಷತ್ರಿಯ ಧರ್ಮಗಳೆಂದು ಧರ್ಮಕುಶಲರು ಸಿದ್ಧಪಡಿಸಿದ್ದಾರೆ. ದೇಶಕಾಲಗಳನ್ನು ನೋಡಿಕೊಂಡು ಶಾಸ್ತ್ರಗಳಲ್ಲಿ ತೋರಿಸಿರುವ ಬುದ್ಧಿಯನ್ನು ಬಳಸಿ ದಸ್ಯುಗಳನ್ನು ಕಾಣುವ ನೃಪನಿಗೆ ಪಾಪವು ತಗಲುವುದಿಲ್ಲ. ಪ್ರಜೆಗಳ ಆರನೆಯ ಒಂದು ಭಾಗವನ್ನು ಪಡೆದೂ ಯಾವ ರಾಜನು ರಾಷ್ಟ್ರವನ್ನು ರಕ್ಷಿಸುವುದಿಲ್ಲವೋ ಅವನು ಪ್ರಜೆಗಳು ಮಾಡುವ ಪಾಪಗಳ ನಾಲ್ಕನೆಯ ಒಂದು ಭಾಗವನ್ನೂ ಅನುಭವಿಸುತ್ತಾನೆ. ಹೇಗಿದ್ದರೆ ರಾಜನು ಧರ್ಮಗಳಿಂದ ಚ್ಯುತನಾಗುವುದಿಲ್ಲ, ಧರ್ಮಶಾಸ್ತ್ರಗಳಂತೆ ನಡೆದುಕೊಂಡರೆ ಅಥವಾ ಅವುಗಳಿಗೆ ವಿರೋಧವಾಗಿ ನಡೆದುಕೊಂಡರೆ ಯಾವ ಅಧೋಗತಿಗಿಳಿಯುತ್ತಾನೆ ಎನ್ನುವುದನ್ನು ಕೇಳು. ಕಾಮ-ಕ್ರೋಧಗಳನ್ನು ಅನಾದರಿಸಿ ತಂದೆಯಂತೆ ಎಲ್ಲರನ್ನೂ ಸಮನಾಗಿ ಕಾಣುವವನಿಗೆ ಪಾಪವಿಲ್ಲ. ಪ್ರಜೆಗಳ ಕರ್ಮವನ್ನು ಮಾಡುತ್ತಿರುವಾಗಲೇ ರಾಜನು ದೈವವಶನಾದರೆ ಅದನ್ನು ಪ್ರಮಾದವೆಂದಾಗಲೀ ಧರ್ಮದ ಅತಿಕ್ರಮವೆಂದಾಗಲೀ

ಹೇಳಲಾಗುವುದಿಲ್ಲ. ಮೊದಲೇ ಯೋಚಿಸಿಯೋ ಅಥವಾ ತಕ್ಷಣವ್ರೋ ಶತ್ರುಗಳನ್ನು ನಿಗ್ರಹಿಸಲೇಬೇಕು. ಪಾಪಿಗಳೊಂದಿಗೆ ಸಂಧಿಮಾಡಿಕೊಳ್ಳಬಾರದು. ರಾಷ್ಟ್ರವನ್ನು ಮಾರುಕಟ್ಟೆಯ ವಸ್ತುವನ್ನಾಗಿ ಮಾಡಬಾರದು. ಶೂರರನ್ನೂ, ಆರ್ಯರನ್ನೂ, ವಿದ್ವಾಂಸರನ್ನೂ ಸತ್ಕರಿಸಬೇಕು. ಗೋವುಗಳನ್ನು ಪಡೆದಿರುವವರಿಗೂ ಧನಿಗಳಿಗೂ ವಿಶೇಷವಾದ ರಕ್ಷಣೆಯನ್ನು ನೀಡಬೇಕು. ಧರ್ಮದ ವ್ಯವಹಾರಗಳಲ್ಲಿ ಸಕಲಶಾಸ್ತ್ರಜ್ಞರನ್ನೂ ನಿಯೋಜಿಸಬೇಕು. ಗುಣಯುಕ್ತನಾದರೂ ಒಬ್ಬನಲ್ಲಿಯೇ ರಾಜನು ವಿಶ್ವಾಸವನ್ನಿಡಬಾರದು. ಪ್ರಜೆಗಳನ್ನು ರಕ್ಷಿಸದ, ಉದ್ಧತನಾದ, ದುರಭಿಮಾನೀ, ಮಾನ್ಯರಲ್ಲಿ ಅವಿನೀತನಾಗಿರುವ, ಅನ್ಯರಲ್ಲಿ ದೋಷವನ್ನೇ ಹುಡುಕುವ ರಾಜನು ಪಾಪಯುಕ್ತನನೆಂದು ಹೇಳುತ್ತಾರೆ. ರಾಜನಿಂದ ರಕ್ಷಿಸಲ್ಪಡದ ಪ್ರಜೆಗಳು ದೈವಿಕ ಆಪತ್ತಿನಿಂದಲೂ ಕಳ್ಳ-ಕಾಕರಿಂದಲೂ ವಿನಾಶಹೊಂದುತ್ತಾರೆ. ಅವರ ವಿನಾಶಕ್ಕೆ ಕಾರಣನಾದ ನೃಪನೇ ಮಹಾಪಾಪಕ್ಕೆ ಗುರಿಯಾಗುತ್ತಾನೆ. ಚೆನ್ನಾಗಿ ಸಮಾಲೋಚಿಸಿ, ನೀತಿಯನ್ನನುಸರಿಸಿ, ಸರ್ವಪ್ರಕಾರದಿಂದಲೂ ಮನುಷ್ಯಪ್ರಯತ್ನವನ್ನು ಮಾಡಿದರೆ

ರಾಜನು ಅಧರ್ಮಿಯೆಂದೆನಿಸಿಕೊಳ್ಳುವುದಿಲ್ಲ. ಉತ್ತಮವಾಗಿ ಆರಂಭಿಸಿದ ಕಾರ್ಯಗಳು ದೈವವಶದಿಂದ ಸಿದ್ಧಿಯಾಗದೆಯೂ ಇರಬಹುದು. ಆದರೆ ಪುರುಷಪ್ರಯತ್ನವನ್ನು ಮಾಡಿದ ಪಾರ್ಥಿವನಿಗೆ ಪಾಪವು ತಗಲುವುದಿಲ್ಲ. ಇದಕ್ಕೆ ಸಂಬಂಧಿಸಿದಂತಹ ಹಿಂದಿನ ರಾಜರ್ಷಿ ಹಯಗ್ರೀವನ ಕಥೆಯನ್ನು ನಿನಗೆ ಹೇಳುತ್ತೇನೆ. ಆ ಅಕ್ಲಿಷ್ಟಕರ್ಮಿಯು ಅಸಹಾಯಕನಾಗಿದ್ದೂ ಧೀರನಾಗಿ ಶೂರತನದಿಂದ ಶತ್ರುಗಳನ್ನು ಸಂಹರಿಸಿ ಜಯಿಸಿದುದನ್ನು ಹೇಳುತ್ತೇನೆ. ಮಾನವರ ಯೋಗಪಾಲನೆಯಲ್ಲಿ ಅಗ್ರಗಣ್ಯನಾದ ಅವನು ಶತ್ರುಗಳನ್ನು ನಿಗ್ರಹಿಸುವ ಕರ್ಮವನ್ನೆಸಗಿದನು. ಉತ್ತಮ ಯುದ್ಧದಲ್ಲಿ ಈ ಕರ್ಮವನ್ನೆಸಗಿ ಹಯಗ್ರೀವನು ದೇವಲೋಕದಲ್ಲಿ ಮೋದಿಸುತ್ತಿದ್ದಾನೆ. ಸಮರದಲ್ಲಿ ದಸ್ಯುಗಳ ಶಸ್ತ್ರಗಳಿಂದ ಛಿನ್ನನ್ನಾಗಿ ಈ ಆತತಾಯಿಯು ಅಸುನೀಗಿದ ಈ ಕರ್ಮಶೀಲ ಮಹಾತ್ಮ ಸಿದ್ಧಾತ್ಮ ಹಯಗ್ರೀವನು ದೇವಲೋಕದಲ್ಲಿ ಮೋದಿಸುತ್ತಿದ್ದಾನೆ. ಧನುಸ್ಸೇ ಯೂಪಸ್ತಂಭವಾಗಿದ್ದ, ಮೌರ್ವಿಯೇ ರಜ್ಜುವಾಗಿದ್ದ, ಬಾಣವೇ ಸ್ರುಕ್ಕಾಗಿದ್ದ, ಖಡ್ಗವೇ ಸ್ರುವವಾಗಿದ್ದ, ರಕ್ತವೇ ಆಜ್ಯವಾಗಿದ್ದ,

ಬೇಕಾದಲ್ಲಿ ಹೋಗುತ್ತಿದ್ದ ರಥವೇ ವೇದಿಯಾಗಿದ್ದ, ಯುದ್ಧವೇ ಅಗ್ನಿಯಾಗಿದ್ದ, ನಾಲ್ಕು ಕುದುರೆಗಳು ನಾಲ್ಕು ಹೋತೃಗಳಾಗಿದ್ದ, ಆ ಯಜ್ಞದಲ್ಲಿ ವೇಗಶಾಲೀ ರಾಜಸಿಂಹನು ಶತ್ರುಗಳನ್ನು ಆಹುತಿಯನ್ನಾಗಿತ್ತು ಪಾಪದಿಂದ ಮುಕ್ತನಾಗಿ ರಣದ ಅವಭೃತದಲ್ಲಿ ತನ್ನ ಪ್ರಾಣವನ್ನೇ ಹೋಮಮಾಡಿದ ಹಯಗ್ರೀಯನು ದೇವಲೋಕದಲ್ಲಿ ಮೋದಿಸುತ್ತಿದ್ದಾನೆ. ಯಜ್ಞಶೀಲ ಮಹಾತ್ಮ ಮನನಶೀಲ ಹಯಗ್ರೀವನು ಬುದ್ಧಿಪೂರ್ವಕ ಸುನೀತಿಯಿಂದ ರಾಷ್ಟ್ರವನ್ನು ರಕ್ಷಿಸುತ್ತಾ ಪ್ರಾಣವನ್ನು ತೊರೆದು ತನ್ನ ಕೀರ್ತಿಯು ಸರ್ವ ಲೋಕಗಳಲ್ಲಿ ವ್ಯಾಪಿಸುವಂತೆ ಮಾಡಿ ದೇವಲೋಕದಲ್ಲಿ ಮೋದಿಸುತ್ತಿದ್ದಾನೆ. ಧರ್ಮಶೀಲ ಮಹಾತ್ಮ ರಾಜಾ ಹಯಗ್ರೀವನು ದೈವೀ ಸಿದ್ಧಿಯನ್ನೂ ಮಾನುಷ ದಂಡನೀತಿಯನ್ನೂ ಬಳಸಿ ಯೋಗ-ನ್ಯಾಯಗಳಿಂದ ಭೂಮಿಯನ್ನು ಆಳಿ ಸ್ವರ್ಗಲೋಕದಲ್ಲಿ ಮೋದಿಸುತ್ತಿದ್ದಾನೆ. ವಿಧ್ವಾಂಸನೂ, ತ್ಯಾಗಿಯೂ, ಶದ್ಧಾಳುವೂ, ಕೃತಜ್ಞನೂ ಆಗಿದ್ದ ರಾಜಾ ಹಯಗ್ರೀವನು ಮಾನುಷ ಕರ್ಮವನ್ನು ಮಾಡಿ ದೇಹವನ್ನು ತ್ಯಜಿಸಿ ಮೇಧಾವಿಗಳಿಗೂ, ಸರ್ವಸನ್ಮಾನ್ಯರಿಗೂ, ಜ್ಞಾನಿಗಳಿಗೂ ದೊರಕುವ ಲೋಕವನ್ನು

ಆಕ್ರಮಣಿಸಿದ್ದಾನೆ. ಸರ್ವವೇದಗಳನ್ನೂ ಪಡೆದು ಶಾಸ್ತ್ರಗಳನ್ನು ತಿಳಿದುಕೊಂಡು ಸಂಪೂರ್ಣ ರಾಷ್ಟ್ರವನ್ನು ಪಾಲಿಸುತ್ತ, ಸ್ವಧರ್ಮದಿಂದ ಚಾತುರ್ವರ್ಣಗಳನ್ನು ಸಂಸ್ಥಾಪಿಸಿ ಆ ಮಹಾತ್ಮ ಹಯಗ್ರೀವನು ದೇವಲೋಕದಲ್ಲಿ ಮೋದಿಸುತ್ತಿದ್ದಾನೆ. ಸಂಗ್ರಾಮಗಳನ್ನು ಗೆದ್ದು, ಪ್ರಜೆಗಳನ್ನು ಪಾಲಿಸಿ, ಸೋಮವನ್ನು ಕುಡಿದು, ದ್ವಿಜಾಗ್ರರಿಗೆ ತರ್ಪಣೆಗಳನ್ನಿತ್ತು, ದಂಡನೀತಿಯನ್ನು ಧರಿಸಿ ಪ್ರಜೆಗಳನ್ನು ಪಾಲಿಸಿ, ಯುದ್ಧದಲ್ಲಿ ಅಸುನೀಗಿದ ಹಯಗ್ರೀವನು ದೇವಲೋಕದಲ್ಲಿ ಮೋದಿಸುತ್ತಿದ್ದಾನೆ. ಸಂತರೂ ವಿಧ್ವಾಂಸರೂ ಆದ ಮನುಷ್ಯರು ಯಾರ ನಡತೆಯನ್ನು ಅರ್ಹರೀತಿಯಲ್ಲಿ ಶ್ಲಾಘಿಸುತ್ತಿರುವರೋ ಆ ಮಹಾತ್ಮನು ಸ್ವರ್ಗವನ್ನು ಗೆದ್ದು, ವೀರಲೋಕಗಳನ್ನು ಸೇರಿ, ಸಿದ್ಧಿಯನ್ನು ಪಡೆದು ಪುಣ್ಯಕೀರ್ತಿಯನ್ನೂ ಪಡೆದನು.”

ಧನಂಜಯನು ಕುಪಿತನಾಗಿರಲು, ದ್ವೈಪಾಯನನ ಮಾತನ್ನು ಕೇಳಿ ಕೌಂತೇಯ ಯುಧಿಷ್ಠಿರನು ವ್ಯಾಸನನ್ನು ಉದ್ದೇಶಿಸಿ ಈ ಮಾತುಗಳನ್ನಾಡಿದನು:

“ಭೂಮಿಯ ಈ ರಾಜ್ಯವೂ ನಾನಾವಿಧದ ಭೋಗಗಳೂ

ಇಂದು ನನ್ನ ಮನಸ್ಸಿಗೆ ಸಂತೋಷವನ್ನುಂಟುಮಾಡುತ್ತಿಲ್ಲ. ಶೋಕವೇ ನನ್ನನ್ನು ಹಿಂಡುತ್ತಿದೆ. ಮುನೇ! ವೀರಪತಿಗಳಿಂದಲೂ, ಪುತ್ರರಿಂದಲೂ ವಿಹೀನರಾದ ಸ್ತ್ರೀಯರ ವಿಲಾಪಗಳಿಂದ ನನ್ನ ಮನಸ್ಸಿಗೆ ಶಾಂತಿಯೇ ದೊರೆಯದಂತಾಗಿದೆ.”

ಹೀಗೆ ಹೇಳಲು ಯೋಗಜ್ಞಾನಿಗಳಲ್ಲಿ ಶ್ರೇಷ್ಠ ಧರ್ಮಜ್ಞ ವೇದಪಾರಗ ವ್ಯಾಸನು ಮಹಾಪ್ರಾಜ್ಞ ಯುಧಿಷ್ಠಿರನಿಗೆ ಇಂತೆಂದನು:

“ಕರ್ಮಮಾಡುವುದರಿಂದಾಗಲೀ ಚಿಂತಿಸುತ್ತಿರುವುದರಿಂದಾಗಲೀ ಬೇಕಾಗಿರುವುದು ಸಿಗುವುದಿಲ್ಲ. ಮನುಷ್ಯನಿಗೆ ಬೇಕಾದುದನ್ನು ಕೊಡುವವರು ಯಾರೂ ಇಲ್ಲ. ಪರ್ಯಾಯಯೋಗದಿಂದ ವಿಧಾತ್ರನು ವಿಹಿಸಿದುದನ್ನು ಎಲ್ಲವನ್ನೂ ಮನುಷ್ಯನು ಕಾಲ ಬಂದಾಗ ಪಡೆಯುತ್ತಾನೆ. ಬುದ್ಧಿಯಿಂದಾಗಲೀ, ಶಾಸ್ತ್ರಾಧ್ಯಯನದಿಂದಾಗಲೀ ಮನುಷ್ಯನು ಯೋಗವಿರದ ಕಾಲದಲ್ಲಿ ವಿಶೇಷ ಫಲವನ್ನು ಹೊಂದಲು ಸಾಧ್ಯವಿಲ್ಲ. ಕಾಲವು ಒದಗಿಬಂದಿತೆಂದರೆ ಮೂರ್ಖನೂ ಯಥೇಚ್ಛ ಐಶ್ವರ್ಯವನ್ನು ಪಡೆದುಕೊಳ್ಳುತ್ತಾನೆ. ಏಕೆಂದರೆ

ಕಾರ್ಯಫಲಗಳಲ್ಲಿ ಕಾಲವೇ ವಿಶೇಷಪಾತ್ರವನ್ನು ವಹಿಸುತ್ತದೆ. ಯೋಗವಿಲ್ಲದಿರುವಾಗ ಶಿಲ್ಪವಾಗಲೀ, ಮಂತ್ರಗಳಾಗಲೀ, ಔಷಧಿಗಳಾಗಲೀ ಫಲವನ್ನೀಯುವುದಿಲ್ಲ. ಆದರೆ ಇವೇ ಉತ್ತಮ ಯೋಗವಿರುವಾಗ ಕಾಲದ ಪ್ರೇರಣೆಯಿಂದ ಸಿದ್ಧಿಯುಂಟಾಗುತ್ತವೆ. ಕಾಲಕ್ಕೆ ಸರಿಯಾಗಿಯೇ ಭಿರುಗಾಳಿಯು ಬೀಸುತ್ತದೆ. ಕಾಲಕ್ಕೆ ತಕ್ಕಂತೆಯೇ ಮೋಡಗಳು ಮಳೆಯನ್ನು ಸುರಿಸುತ್ತವೆ. ಕಾಲಕ್ಕೆ ಸರಿಯಾಗಿಯೇ ಪದ್ಮಗಳು ಅರಳುತ್ತವೆ. ಕಾಲಕ್ಕೆ ತಕ್ಕಂತೆಯೇ ಅರಣ್ಯದ ವೃಕ್ಷಗಳು ಚಿಗುರಿ ಹುಲುಸಾಗುತ್ತವೆ. ಕಾಲಾನುಗುಣವಾಗಿ ರಾತ್ರಿಗಳು ಕಪ್ಪಾಗಿಯೂ ಬೆಳದಿಂಗಳಾಗಿಯೂ ಇರುತ್ತವೆ. ಕಾಲಕ್ಕೆ ತಕ್ಕಂತೆಯೇ ಚಂದ್ರನು ಪರಿಪೂರ್ಣಬಿಂಬನಾಗುತ್ತಾನೆ. ಅಕಾಲದಲ್ಲಿ ವೃಕ್ಷಗಳು ಪುಷ್ಪ-ಫಲಗಳನ್ನು ಪಡೆಯುವುದಿಲ್ಲ. ಅಕಾಲದಲ್ಲಿ ನದಿಗಳು ಪೂರ್ಣವೇಗದಲ್ಲಿ ಹರಿಯುವುದಿಲ್ಲ. ಪಕ್ಷಿಗಳಾಗಲೀ, ಸರ್ಪಗಳಾಗಲೀ, ಮೃಗಗಳಾಗಲೀ, ಆನೆಗಳಾಗಲೀ, ಪರ್ವತಗಳಲ್ಲಿ ವಾಸಿಸುವ ಮಹಾಮೃಗಗಳಾಗಲೀ ಅವುಗಳ ಕಾಲವು ಬಾರದೇ ಮದಿಸುವುದಿಲ್ಲ. ಸ್ತ್ರೀಯರು ತಮ್ಮ ಕಾಲವು ಬರದೇ

ಗರ್ಭವನ್ನು ಧರಿಸುವುದಿಲ್ಲ. ಅಕಾಲದಲ್ಲಿ ಛಳಿ, ಸೆಖೆ ಮತ್ತು ಮಳೆಗಳಾಗುವುದಿಲ್ಲ. ಕಾಲ ಬಾರದೇ ಶಿಶುವು ಹುಟ್ಟುವುದಿಲ್ಲ. ಕಾಲ ಬಾರದೇ ಅದು ಮಾತನಾಡುವುದೂ ಇಲ್ಲ. ಕಾಲಬಾರದೇ ಅದು ಯೌವನವನ್ನು ಹೊಂದುವುದಿಲ್ಲ. ಹಾಗೆಯೇ ಕಾಲಬಾರದೇ ಅದು ಸಾಯುವುದೂ ಇಲ್ಲ. ಅಕಾಲದಲ್ಲಿ ಸೂರ್ಯನು ಉದಯಿಸುವುದಿಲ್ಲ ಮತ್ತು ಅಕಾಲದಲ್ಲಿ ಸೂರ್ಯನು ಅಸ್ತಂಗತನೂ ಆಗುವುದಿಲ್ಲ. ಅಕಾಲದಲ್ಲಿ ಚಂದ್ರನಾಗಲೀ ಮಹಾ ಅಲೆಗಳುಳ್ಳ ಸಮುದ್ರವಾಗಲೀ ವರ್ಧಿಸುವುದಿಲ್ಲ ಮತ್ತು ಕ್ಷೀಣಿಸುವುದೂ ಇಲ್ಲ. ಇದಕ್ಕೆ ಸಂಬಂಧಿಸಿದಂತೆ ಪುರಾತನ ಇತಿಹಾಸವಾಗಿರುವ, ದುಃಖಾರ್ತನಾಗಿದ್ದ ರಾಜಾ ಸೇನಜಿತುವು ಹೇಳಿದ ಗೀತವನ್ನು ಉದಾಹರಿಸುತ್ತಾರೆ.

“ದುಸ್ತರವಾಗಿ ತಿರುಗುತ್ತಿರುವ ಕಾಲವು ಸರ್ವಮನುಷ್ಯರ ಮೇಲೂ ಪ್ರಭಾವಬೀರುತ್ತದೆ. ಸರ್ವಮಾನವರೂ ಕಾಲವು ಪರಿಪಕ್ವವಾಗಿ ಮರಣಹೊಂದುತ್ತಾರೆ. ಕೆಲವು ಮನುಷ್ಯರು ಕೆಲವರನ್ನು ಸಂಹರಿಸುತ್ತಾರೆ. ಸಂಹರಿಸಿದ ಅವರನ್ನೂ ಇನ್ನು ಕೆಲವರು ಸಂಹರಿಸುತ್ತಾರೆ. ಆದರೆ ಒಬ್ಬರು ಇನ್ನೊಬ್ಬರನ್ನು

ಕೊಂದರೆನ್ನುವುದು ಒಂದು ಲೌಕಿಕವಾದ ಸಂಜ್ಞೆಯಾಗಿರುತ್ತದೆ. ನಿಜವಾಗಿ ನೋಡಿದರೆ ಯಾರೂ ಕೊಲ್ಲುವುದಿಲ್ಲ ಯಾರೂ ಕೊಲ್ಲಲ್ಪಡುವುದೂ ಇಲ್ಲ. ಕೊಲ್ಲುತ್ತಾರೆ ಎಂದು ಕೆಲವರು ಅಭಿಪ್ರಾಯಪಟ್ಟರೆ ಕೊಲ್ಲಲ್ಪಡಲಿಲ್ಲ ಎಂದು ಇತರರು ತಿಳಿದುಕೊಳ್ಳುತ್ತಾರೆ. ಸ್ವಭಾವತಃ ಪ್ರಾಣಿಗಳ ಹುಟ್ಟು ಮತ್ತು ಮರಣ ಇವೆರಡೂ ವಿಧಿವಿಹಿತವಾಗಿವೆ. ಧನವು ನಷ್ಟವಾಗಲೀ ಅಥವಾ ಪತ್ನಿಯಾಗಲೀ, ಪುತ್ರನಾಗಲೀ ಅಥವಾ ಪಿತನಾಗಲೀ ಮೃತನಾಗಲೀ "ಅಯ್ಯೋ ಕಷ್ಟವೇ!" ಎಂದು ಯೋಚಿಸಿ, ಶೋಕವನ್ನು ಕಡಿಮೆಮಾಡಿಕೊಳ್ಳಬೇಕು. ಆದರೆ ನೀನು ಏಕೆ ಹೀಗೆ ಮೂಢನಾಗಿ ಶೋಕವನ್ನು ಹೆಚ್ಚಿಸಿಕೊಳ್ಳುತ್ತಿರುವೆ? ದುಃಖಪಡುವುದರಿಂದ ದುಃಖವೂ ಮತ್ತು ಭಯಪಡುವುದರಿಂದ ಭಯವೂ ಹೆಚ್ಚಾಗುತ್ತದೆ. ನನಗೆ ನಾನೂ ಮತ್ತು ಈ ಸರ್ವ ಭೂಮಿಯೂ ಹೇಗೆ ನನ್ನದಲ್ಲವೋ ಹಾಗೆ ಅನ್ಯರ ದೇಹಗಳೂ, ರಾಜ್ಯಗಳೂ ಅವರದ್ದಲ್ಲ ಎಂದು ಕಾಣುವವನು ಹೀಗೆ ಮೋಹಪಡುವುದಿಲ್ಲ. ಶೋಕಪಡುವುದಕ್ಕೆ ಸಹಸ್ರಾರು ಕಾರಣಗಳೂ, ಹರ್ಷಿಸುವುದಕ್ಕೆ ನೂರಾರು ಕಾರಣಗಳೂ ಪ್ರತಿದಿನ

ಮೂಢನನ್ನು ಕಾಡುತ್ತಿರುತ್ತವೆ. ಆದರೆ ಪಂಡಿತನನ್ನಲ್ಲ! ಹೀಗೆ ಪ್ರಿಯ-ಅಪ್ರಿಯ ಸಮಯಗಳು ಮತ್ತು ದುಃಖ-ಸುಖಗಳು ಜೀವಿಗೆ ಕಾಲಾನುಗುಣವಾಗಿ ಒಂದರ ನಂತರ ಇನ್ನೊಂದು ತಿರುಗಿ ತಿರುಗಿ ಬರುತ್ತಲೇ ಇರುತ್ತವೆ. ಜೀವಿಗಳಿಗೆ ದುಃಖವೇ ಇರುವುದೇ ಹೊರತು ಸುಖವೆನ್ನುವುದು ಇಲ್ಲ. ಆದುದರಿಂದಲೇ ಅಡಿಗಡಿಗೆ ದುಃಖವೇ ಆಗುತ್ತಿರುತ್ತದೆ. ಆಸೆಗಳಿಂದಲೇ ದುಃಖವು ಹುಟ್ಟುತ್ತದೆ. ದುಃಖದ ವಿನಾಶವೇ ಸುಖ. ಸುಖದ ನಂತರ ದುಃಖ ಮತ್ತು ದುಃಖದ ನಂತರ ಸುಖ. ದುಃಖವು ಯಾವಾಗಲೂ ಇರುವುದಿಲ್ಲ ಮತು ಸುಖವೂ ಯಾವಾಗಲೂ ಇರುವುದಿಲ್ಲ. ಏಕೆಂದರೆ ಸುಖದ ಅಂತ್ಯವೇ ದುಃಖ ಮತ್ತು ದುಃಖದ ಅಂತ್ಯವೇ ಸುಖ. ಆದುದರಿಂದ ಇವೆರಡನ್ನೂ ತ್ಯಜಿಸಿ ಇಂದು ಶಾಶ್ವತ ಸುಖವನ್ನು ಬಯಸು. ಯಾವಕಾರಣದಿಂದ ಶೋಕವಾಗಲೀ, ತಾಪವಾಗಲೀ, ದುಃಖವಾಗಲೀ, ಆಯಾಸವಾಗಲೀ ಉಂಟಾಗುತ್ತದೆಯೋ ಅದರ ಮೂಲವನ್ನೇ, ಅದು ಶರೀರದ ಒಂದು ಅಂಗವಾಗಿದ್ದರೂ, ಕಿತ್ತೊಗೆಯಬೇಕು. ಸುಖವಾಗಲೀ, ದುಃಖವಾಗಲೀ, ಪ್ರಿಯವಾದದ್ದಾಗಲೀ,

ಅಪ್ರಿಯವಾದದ್ದಾಗಲೀ ಅವುಗಳ ಬಂದಹಾಗೆಯೇ, ಸೋಲನ್ನಪ್ಪಿಕೊಳ್ಳದೇ, ಸಂತೋಷದಿಂದ ಅನುಭವಿಸಬೇಕು. ನಿನ್ನ ಪತ್ನಿಯರಿಗೆ ಅಥವಾ ಮಕ್ಕಳಿಗೆ ಸ್ವಲ್ಪವಾದರೂ ಅಪ್ರಿಯವಾದುದನ್ನು ಮಾಡು. ಆಗ ನೀನು ಯಾರು, ಯಾರಿಗೆ ಸೇರಿದವನು, ಯಾರಿಂದ ಇಲ್ಲಿಗೆ ಬಂದಿರುವೆ ಮತ್ತು ಹೇಗೆ ಬಂದಿರುವೆ ಎನ್ನುವುದನ್ನು ತಿಳಿದುಕೊಳ್ಳುತ್ತೀಯೆ. ಅತ್ಯಂತ ಮೂಢರಾದವರು ಮತ್ತು ಅತ್ಯಂತ ಬುದ್ಧಿಶಾಲಿಗಳು ಮಾತ್ರ ಈ ಲೋಕದಲ್ಲಿ ಪರಮ ಸುಖವನ್ನು ಹೊಂದುತ್ತಾರೆ. ಮಧ್ಯವರ್ತಿಗಳು ಕ್ಲೇಶಪಡುತ್ತಲೇ ಇರುತ್ತಾರೆ.”

ಯುಧಿಷ್ಠಿರ! ಭೂತ-ಭವಿಷ್ಯಗಳನ್ನೂ ಲೋಕಗಳ ಧರ್ಮವನ್ನೂ, ಸುಖ-ದುಃಖಗಳನ್ನೂ ತಿಳಿದಿದ್ದ ಮಹಾಪ್ರಾಜ್ಞ ಸೇನಜಿತುವು ಹೀಗೆ ಹೇಳಿದನುಃ ಇತರರ ದುಃಖವನ್ನು ನೋಡಿ ಖುಷಿಪಡುವವನಿಗೆ ಸುಖವೆಂಬುದೇ ಇರುವುದಿಲ್ಲ. ದುಃಖಗಳಿಗೆ ಕೊನೆಯೆಂಬುದೇ ಇಲ್ಲ. ಒಂದರ ಮೇಲೆ ಒಂದು ದುಃಖವು ಬರುತ್ತಲೇ ಇರುತ್ತದೆ. ಸುಖ-ದುಃಖಗಳೂ, ಲಾಭ-ನಷ್ಟಗಳೂ, ಜನನ-ಮರಣಗಳು, ಉತ್ಪತ್ತಿ-ವಿನಾಶಗಳೂ ಒಂದಾದ ಮೇಲೆ ಇನ್ನೊಂದರಂತೆ ಪರ್ಯಾಯವಾಗಿ

ಜೀವಿಗಳಿಗೆ ತಟ್ಟುತ್ತಲೇ ಇರುತ್ತವೆ. ಆದುದರಿಂದ ಧೀರನಾದವನು ಇವುಗಳ ಕುರಿತು ಹರ್ಷಿಸುವುದೂ ಇಲ್ಲ, ಕುಪಿತನಾಗುವುದೂ ಇಲ್ಲ. ಯುದ್ಧವೇ ಯಜ್ಞ ದೀಕ್ಷೆಯೆಂದೂ, ರಾಷ್ಟ್ರವನ್ನು ದಂಡನೀತಿಯಿಂದ ಪಾಲಿಸುವುದನ್ನು ಯೋಗವೆಂದೂ, ಯಜ್ಞಗಳಲ್ಲಿ ಸಂಪತ್ತನ್ನು ದಕ್ಷಿಣೆಯಾಗಿ ಕೊಡುವುದನ್ನು ತ್ಯಾಗವನ್ನೂ ರಾಜರಿಗೆ ಪಾವನವಾದುವೆಂದು ಹೇಳುತ್ತಾರೆ. ಅವುಗಳ ಸಂಪೂರ್ಣ ಜ್ಞಾನವಿರಬೇಕು. ಬುದ್ಧಿಪೂರ್ವಕವಾಗಿ ಸುನೀತಿಯಿಂದ ತನ್ನದೆನ್ನುವುದನ್ನು ತ್ಯಜಿಸಿ ರಾಷ್ಟ್ರವನ್ನು ರಕ್ಷಿಸುತ್ತಾ, ಯಜ್ಞಶೀಲನಾಗಿ ಧರ್ಮವನ್ನು ರಕ್ಷಿಸಲು ಸರ್ವ ಲೋಕಗಳನ್ನೂ ಚರಿಸುವ ಮಹಾತ್ಮನು ದೇಹಾವಸಾನದ ನಂತರ ದೇವಲೋಕದಲ್ಲಿ ಮೋದಿಸುತ್ತಾನೆ. ಸಂಗ್ರಾಮಗಳನ್ನು ಗೆದ್ದು, ರಾಷ್ಟ್ರವನ್ನು ಪಾಲಿಸುತ್ತಾ ಸೋಮವನ್ನು ಕುಡಿಯುತ್ತಾ, ಪ್ರಜೆಗಳನ್ನು ಅಭಿವೃದ್ಧಿಗೊಳಿಸುತ್ತಾ, ದಂಡಯುಕ್ತನಾಗಿ ಪ್ರಜೆಗಳನ್ನು ಪಾಲಿಸುತ್ತಾ ಯುದ್ಧದಲ್ಲಿ ಮಡಿದ ರಾಜನು ದೇವಲೋಕದಲ್ಲಿ ಮೋದಿಸುತ್ತಾನೆ. ಸಂಪೂರ್ಣ ವೇದಗಳನ್ನು ಪಡೆದು, ಶಾಸ್ತ್ರಗಳನ್ನು ಅಧ್ಯಯನ ಮಾಡಿ, ರಾಜ್ಯವನ್ನು ಚೆನ್ನಾಗಿ

ಪಾಲಿಸುತ್ತಾ ಚಾತುರ್ವರ್ಣ್ಯವನ್ನು ಸ್ಥಾಪಿಸಿ, ಸ್ವಧರ್ಮದಲ್ಲಿಯೇ ಪೂತಾತ್ಮನಾಗಿರುವ ರಾಜನು ದೇವಲೋಕದಲ್ಲಿ ಮೋದಿಸುತ್ತಾನೆ. ಸ್ವರ್ಗಸ್ಥನಾದಮೇಲೂ ಯಾರ ನಡತೆಗಳನ್ನು ಮಾನವರು, ಪೌರಜಾನಪದರು ಮತ್ತು ಅಮಾತ್ಯರು ನಮಸ್ಕರಿಸುತ್ತಾರೋ ಆ ರಾಜನೇ ರಾಜಸತ್ತಮನು.”

ಯುಧಿಷ್ಠಿರನು ಹೇಳಿದನು:

“ಬಾಲಕ ಅಭಿಮನ್ಯು, ದ್ರೌಪದಿಯ ಐವರು ಮಕ್ಕಳು, ಧೃಷ್ಟದ್ಯುಮ್ನ, ಮಹೀಪತಿಗಳಾದ ದ್ರುಪದ-ವಿರಾಟರು, ಧರ್ಮಜ್ಞ ಪಾರ್ಥಿವ ವಸುಷೇಣ-ಧೃಷ್ಟಕೇತುಗಳು, ಹಾಗೆಯೇ ನಾನಾದೇಶಗಳಿಂದ ಬಂದಿದ್ದ ಅನ್ಯ ನರೇಂದ್ರರು ಯುದ್ಧದಲ್ಲಿ ಮಡಿದುದರಿಂದ ಜ್ಞಾತಿಘಾತಿಕನಾದ ನನ್ನನ್ನು ಶೋಕವು ಬಿಡುತ್ತಿಲ್ಲ. ರಾಜ್ಯಲೋಭದಿಂದಾಗಿ ನಾನೇ ಈ ಉಗ್ರಕರ್ಮವನ್ನೆಸಗಿದೆನು! ಯಾರ ತೊಡೆಯಮೇಲೆ ಹೊರಳಾಡಿ ಆಡುತ್ತಿದ್ದೆನೋ ಆ ಗಾಂಗೇಯನನ್ನೇ ನಾನು ರಾಜಲೋಭದಿಂದ ಕೆಳಗುರುಳಿಸಿದೆನು! ಮುದಿಸಿಂಹದಂತಿದ್ದ, ಉನ್ನತ ಕಾಯ ನರಶ್ರೇಷ್ಠ ಪಿತಾಮಹ ಭೀಷ್ಮನು ಅರ್ಜುನನ

ವಜ್ರಸದೃಶ ಬಾಣಗಳಿಂದ ಪೀಡಿತನಾಗಿ ಕಂಪಿಸುತ್ತಿರುವಾದ ಶಿಖಂಡಿಯು ಅವನನ್ನು ಎವೆಯಿಕ್ಕದೇ ನೋಡುತ್ತಿದ್ದನು. ಆಗ ಅರ್ಜುನನ ಬಾಣಗಳಿಂದ ಶರೀರಾದ್ಯಂತ ಮುಚ್ಚಲ್ಪಟ್ಟ ನನ್ನ ಆ ನರಸಿಂಹ ಪಿತಾಮಹನನ್ನು ನೋಡಿ ನನ್ನ ಮನಸ್ಸು ಬಹಳವಾಗಿ ವ್ಯಥೆಗೊಂಡಿತ್ತು. ರಥದಲ್ಲಿ ಪೂರ್ವಾಭಿಮುಖವಾಗಿ ಕುಳಿತು ಶರಗಳಿಂದ ಪೀಡಿತನಾಗಿ ಅವನು ಕುಸಿಯುತ್ತಿರಲು ಮತ್ತು ಪರ್ವತದಂತೆ ಕಂಪಿಸುತ್ತಿರಲು ನನಗೆ ಮೂರ್ಛೆಯೇ ಬಂದಂತಾಗಿತ್ತು. ಯಾವ ಕೌರವ್ಯನು ಬಾಣ-ಧನುಷ್ಪಾಣಿಯಾಗಿ ಕುರುಕ್ಷೇತ್ರದ ಮಹಾಯುದ್ಧದಲ್ಲಿ ಭಾರ್ಗವ ಪರುಶುರಾಮನೊಡನೆ ಅನೇಕ ದಿನಗಳು ಹೋರಾಡಿದನೋ ಆ ಮಹಾವೀರ ಉಗ್ರಾಯುಧ ರಾಜಾ ಜಕ್ರವರ್ತಿ ದುರಾಸದ ನದೀಸುತನು ವಾರಾಣಸಿಯಲ್ಲಿ ಕನ್ಯಾರ್ಥಿಗಳಾಗಿ ಕ್ಷತ್ರಿಯ ರಾಜರೆಲ್ಲಾ ಸೇರಿದ್ದಾಗ ಯುದ್ಧದಲ್ಲಿ ಒಂದೇ ರಥದಿಂದ ಶಸ್ತ್ರಪ್ರತಾಪದಿಂದ ಸುಟ್ಟುಹಾಕಿದ್ದನು. ಅವನನ್ನೇ ನಾನು ಯುದ್ಧದಲ್ಲಿ ಕೊಲ್ಲಿಸಿದೆ! ತನಗೇ ಮೃತ್ಯುವಾಗಿದ್ದ ಪಾಂಚಾಲ್ಯ ಶಿಖಂಡಿಯನ್ನು ಸ್ವಯಂ ತಾನೇ ರಕ್ಷಿಸಿಕೊಂಡು ಬಂದಿದ್ದ ಅವನನ್ನು ಅರ್ಜುನನು

ಬಾಣಗಳಿಂದ ಕೆಳಗುರುಳಿಸಿದನು. ಮುನಿಸತ್ತಮ! ರಕ್ತದಿಂದ ತೋಯ್ದುಹೋಗಿ ಭೂಮಿಯ ಮೇಲೆ ಅವನು ಬೀಳುತ್ತಲೇ ಉಗ್ರ ಜ್ವರವು ನನ್ನನ್ನು ಆವರಿಸಿತು. ಬಾಲ್ಯದಲ್ಲಿ ಯಾರಿಂದ ಬೆಳೆಯಿಸಲ್ಪಟ್ಟೆವೋ ಮತ್ತು ಯಾರಿಂದ ಪರಿರಕ್ಷಿತಗೊಂಡೆವೋ ಅವನನ್ನೇ ರಾಜ್ಯಲೋಭದಿಂದ ನಾನು ಅಲ್ಪಕಾಲವೇ ಭೋಗಿಸಬಲ್ಲ ಈ ರಾಜ್ಯಕ್ಕಾಗಿ ಸಂಹರಿಸಿದೆನು. ಆದುದರಿಂದ ನಾನು ಪಾಪಿ, ಗುರುಘಾತಿ ಮತ್ತು ಮೂಢನಾಗಿದ್ದೇನೆ. ಮಹೇಷ್ವಾಸ, ಸರ್ವಪಾರ್ಥಿವರಿಂದ ಪೂಜಿಸಲ್ಪಡುತ್ತಿದ್ದ ಆಚಾರ್ಯನಿಗೆ ರಣರಂಗದಲ್ಲಿ ಅವನ ಮಗನ ಸಂಬಂಧದಲ್ಲಿ ಪಾಪಿಯಾದ ನಾನು ಸುಳ್ಳನ್ನೇ ಹೇಳಿದೆ. ಆ ಸಮಯದಲ್ಲಿ ಗುರುವು ನನ್ನೊಡನೆ “ರಾಜನ್! ನನ್ನ ಮಗನು ಜೀವಿಸಿರುವನೋ ಇಲ್ಲವೋ ಸತ್ಯವನ್ನೇ ನುಡಿ!” ಎಂದು ಹೇಳಿದ ಮಾತನ್ನು ನೆನಪಿಸಿಕೊಂಡು ನನ್ನ ದೇಹವೇ ಸುಡುತ್ತಿದೆ. ಸತ್ಯವನ್ನು ನಿರ್ಣಯಿಸುವ ಸಲುವಾಗಿ ವಿಪ್ರನು ನನ್ನಲ್ಲಿ ಹೀಗೆ ಪ್ರಶ್ನಿಸಿದ್ದನು. ನಾನು ಆನೆಯನ್ನು ನೆಪವಾಗಿ ಮಾಡಿಕೊಂಡು ಸುಳ್ಳನಾಗಿ ನಡೆದುಕೊಂಡೆನು. ರಾಜ್ಯಕ್ಕಾಗಿ ಅತ್ಯಂತ ಲೋಭಿಯಾಗಿದ್ದ ಪಾಪಿ ಗುರುಘಾತಿ ನಾನು

ಸತ್ಯವೆಂಬ ನನ್ನ ಅಂಗಿಯನ್ನು ತೆಗೆದುಹಾಕಿ ಯುದ್ಧದಲ್ಲಿ ಆನೆಯು ಕೆಳಗುರುಳಲು ಅಶ್ವತ್ಥಾಮನು ಹತನಾದನೆಂದು ಗುರುವಿಗೆ ಹೇಳಿದೆನು. ಆ ದಾರುಣ ಕರ್ಮವನ್ನೆಸಗಿದ ನಾನು ಯಾವ ಲೋಕಗಳಿಗೆ ಹೋಗುತ್ತೇನೋ! ಸಮರದಲ್ಲಿ ಹಿಂದೆಸರಿಯದೇ ಇದ್ದ ಉಗ್ರನಾಗಿದ್ದ ಹಿರಿಯಣ್ಣ ಕರ್ಣನನ್ನು ಕೊಲ್ಲಿಸಿದೆನು. ನನಗಿಂತಲೂ ಹೆಚ್ಚು ಪಾಪಕೃತ್ಯಗಳನ್ನು ಮಾಡಿದವರು ಬೇರೆ ಯಾರಾದರೂ ಇದ್ದಾರೆಯೇ? ಗಿರಿಯಲ್ಲಿ ಹುಟ್ಟಿದ ಸಿಂಹದಂತಿದ್ದ ಬಾಲಕ ಅಭಿಮನ್ಯುವನ್ನು ನಾನು ರಾಜ್ಯಲುಬ್ಧನಾಗಿ ದ್ರೋಣನಿಂದ ರಕ್ಷಿತಗೊಂಡಿದ್ದ ವಾಹಿನಿಯನ್ನು ಪ್ರವೇಶಿಸಲು ಬಿಟ್ಟೆನು! ಅಂದಿನಿಂದ ನಾನು ಭ್ರೂಣಹತ್ಯೆಯನ್ನು ಮಾಡಿದ ಪಾಪಿಯಂತೆ ಬೀಭತ್ಸುವನ್ನಾಗಲೀ ಪುಂಡರೀಕಾಕ್ಷ ಕೃಷ್ಣನನ್ನಾಗಲೀ ಕಣ್ಣೆತ್ತಿ ನೋಡಲೂ ಅಸಮರ್ಥನಾಗಿದ್ದೇನೆ. ಐದು ಪರ್ವತಗಳನ್ನು ಕಳೆದುಕೊಂಡ ಪೃಥ್ವಿಯಂತೆ ಐದು ಪುತ್ರರನ್ನು ಕಳೆದುಕೊಂಡ ದ್ರೌಪದಿಯ ದುಃಖವನ್ನು ನೋಡಿ ನಾನೂ ಕೂಡ ಶೋಕಿಸುತ್ತಿದ್ದೇನೆ. ಆದುದರಿಂದ ನಾನು ಅಪರಾಧಿಯೂ ಪೃಥ್ವಿಯನ್ನು ನಾಶಪಡೆಸಿದ ಪಾಪಿಯೂ ಆಗಿದ್ದೇನೆ. ಅದಕ್ಕಾಗಿ

> ನಾನು ಇಲ್ಲಿಯೇ ಕುಳಿತುಕೊಂಡು ಈ ಶರೀರವನ್ನು ಶೋಷಿಸಿಬಿಡುತ್ತೇನೆ. ಗುರುಘಾತಿಯಾದ ನಾನು ಇಂದು ಪ್ರಾಯೋಪವೇಶವನ್ನು ಮಾಡಿದ್ದೇನೆಂದು ತಿಳಿಯಿರಿ. ಇನ್ನೊಂದು ಜನ್ಮದಲ್ಲಿಯಾದರೂ ನಾನು ಕುಲಾಂತಕನಾಗದೇ ಇರಲಿ. ನಾನೂ ಇನ್ನು ಯಾವುದೇ ಕಾರಣಕ್ಕೂ ತಿನ್ನುವುದಿಲ್ಲ ಮತ್ತು ಕುಡಿಯುವುದಿಲ್ಲ. ಇಲ್ಲಿಯೇ ಕುಳಿತು ಪ್ರಿಯ ಪ್ರಾಣಗಳನ್ನು ಬಿಡುತ್ತೇನೆ. ನಿಮಗಿಷ್ಟಬಂದಲ್ಲಿಗೆ ಹೋಗಲು ಅನುಮತಿಯನ್ನು ಕೊಡುತ್ತಿದ್ದೇನೆ. ನೀವೆಲ್ಲರೂ ಪ್ರಸನ್ನರಾಗಿ ಈ ಶರೀರವನ್ನು ತ್ಯಜಿಸಲು ನನಗೆ ಅನುಮತಿಯನ್ನು ನೀಡಿ!”

ಬಂಧುಶೋಕದಿಂದ ವಿಹ್ವಲನಾಗಿ ಹೀಗೆ ಮಾತನಾಡುತ್ತಿದ್ದ ಪಾರ್ಥನಿಗೆ ಹೀಗೆಂದೂ ಮಾಡಬಾರದೆಂದು ಹೇಳುತ್ತಾ ಮುನಿಸತ್ತಮನು ಅವನನ್ನು ತಡೆದನು.

> “ಮಹಾರಾಜ! ಉಕ್ಕಿಬರುತ್ತಿರುವ ಅಲೆಗಳಂತೆ ಈ ರೀತಿ ನೀನು ಶೋಕಿಸಕೂಡದು. ಆದುದೆಲ್ಲವೂ ಒಳ್ಳೆಯದಾಯಿತೆಂದೇ ನಾನು ನಿನಗೆ ಪುನಃ ಹೇಳುತ್ತೇನೆ. ಹುಟ್ಟಿದ ಪ್ರಾಣಿಗಳಿಗೆ ಸೇರುವಿಕೆಯು ಅಗಲಿಕೆಯಿಂದಲೇ ಅಂತ್ಯವಾಗುತ್ತದೆ ಎನ್ನುವುದು ನಿಶ್ಚಯವಾದುದು. ನೀರಿನ

ಮೇಲಿನ ಗುಳ್ಳೆಗಳಂತೆ ಹುಟ್ಟುತ್ತಿರುತ್ತಾರೆ ಮತ್ತು ಸಾಯುತ್ತಿರುತ್ತಾರೆ. ಕೂಡಿಟ್ಟ ಐಶ್ವರ್ಯವು ವಿನಾಶದೊಂದಿಗೆ ಕೊನೆಗೊಳ್ಳುತ್ತವೆ. ಸೇರುವಿಕೆಯು ಅಗಲುವಿಕೆಯಿಂದ ಮತ್ತು ಜನನವು ಮರಣದಿಂದ ಪರ್ಯಾವಸಾನಹೊಂದುತ್ತದೆ. ಆಲಸಿಗೆ ಸುಖವೂ ದುಃಖವಾಗಿ ಪರಿಣಮಿಸುತ್ತದೆ ಮತ್ತು ದಕ್ಷನಾದವನಿಗೆ ದುಃಖವೂ ಸುಖೋದಯಕ್ಕೆ ಕಾರಣವಾಗುತ್ತದೆ. ಐಶ್ವರ್ಯ, ಲಕ್ಷ್ಮಿ, ಲಜ್ಜೆ, ಧೈರ್ಯ ಮತ್ತು ಕೀರ್ತಿಗಳು ದಕ್ಷನಾದವನಲ್ಲಿ ವಾಸಿಸುತ್ತವೆಯೇ ಹೊರತು ಆಲಸಿಯಲ್ಲಲ್ಲ. ಸ್ನೇಹಿತರು ಸುಖವನ್ನೀಡಲು ಸಮರ್ಥರಲ್ಲ. ಶತ್ರುಗಳು ದುಃಖವನ್ನು ನೀಡಲೂ ಸಮರ್ಥರಲ್ಲ. ಪ್ರಜೆಗಳು ಸಂಪತ್ತನ್ನು ನೀಡಲು ಸಮರ್ಥರಲ್ಲಿ ಮತ್ತು ಧನವು ಸುಖವನ್ನು ನೀಡಲು ಸಮರ್ಥವಿಲ್ಲ. ಬ್ರಹ್ಮನು ಯಾವ ಕರ್ಮಕ್ಕೆಂದು ನಿನ್ನನ್ನು ಸೃಷ್ಟಿಸಿರುವನೋ ಅದನ್ನೇ ಮಾಡು. ಅದರಿಂದಲೇ ನಿನಗೆ ಸಿದ್ಧಿಯಾಗುತ್ತದೆ. ಏಕೆಂದರೆ ನೀನು ಮಾಡಬೇಕಾದ ಕರ್ಮಗಳ ಮೇಲೆ ನಿನಗೆ ಅಧಿಕಾರವಿಲ್ಲ!”

ಜ್ಞಾತಿಶೋಕದಿಂದ ತಪಿಸುತ್ತಾ ಪ್ರಾಣಗಳನ್ನೇ ತೊರೆಯಲು ಸಿದ್ಧನಾಗಿದ್ದ ಪಾಂಡುಪುತ್ರರ ಜ್ಯೇಷ್ಠ ಯುಧಿಷ್ಠಿರನ ಶೋಕವನ್ನು ನೀಗಿಸಲು ವ್ಯಾಸನು

ಹೀಗೆ ಹೇಳಿದನು:

> “ಯುಧಿಷ್ಠಿರ! ಇದಕ್ಕೆ ಸಂಬಂಧಿಸಿದಂತೆ ಅಶ್ಮಗೀತವೆನ್ನುವ ಪುರಾತನ ಇತಿಹಾಸವೊಂದನ್ನು ಕೇಳು. ಹಾಗೆಯೇ ನೀನೂ ಕೂಡ ಶೋಕವನ್ನು ತೊರೆ! ಎದ್ದೇಳು! ಹರ್ಷವನ್ನು ತಾಳು! ಕ್ಷಾತ್ರಧರ್ಮದಿಂದ ಮಹಿಯನ್ನು ಗೆದ್ದ ನೀನು ಅದನ್ನು ಭೋಗಿಸು! ವಿಷಾದಿಸಬೇಡ!”

ಕೌಂತೇಯ ಧರ್ಮಪುತ್ರ ಯುಧಿಷ್ಠಿರನು ಸುಮ್ಮನೇ ಕುಳಿತುಕೊಂಡಿರಲು ಗುಡಾಕೇಶ ಪಾಂಡವನು ಹೃಷೀಕೇಶನಿಗೆ ಇಂತೆಂದನು:

> “ಮಾಧವ! ಜ್ಞಾತಿಶೋಕದಿಂದ ಸಂತಪ್ತನಾಗಿರುವ ಧರ್ಮರಾಜ ಪರಂತಪನು ಈ ಶೋಕಸಾಗರದಲ್ಲಿ ಮುಳುಗಿಹೋಗಿದ್ದಾನೆ. ಅವನಿಗೆ ಸಮಾಧಾನ ಹೇಳು! ನಾವೆಲ್ಲರೂ ಪುನಃ ಸಂಶಯಕ್ಕೆ ಸಿಲುಕಿದ್ದೇವೆ. ಈ ಶೋಕವನ್ನು ಹೋಗಲಾಡಿಸಬೇಕು!”

ಮಹಾತ್ಮ ವಿಜಯನು ಹೀಗೆ ಹೇಳಲು ಅಚ್ಯುತ ಗೋವಿಂದನು ತಿರುಗಿ ರಾಜನಿಗೆ ಅಭಿಮುಖನಾಗಿ ಕುಳಿತನು. ಧರ್ಮರಾಜನು ಕೇಶವನ ಮಾತನ್ನು ಯಾವಾಗಲೂ ಉಲ್ಲಂಘಿಸಿದವನೇ ಅಲ್ಲ. ಏಕೆಂದರೆ

ಬಾಲ್ಯದಿಂದಲೂ ಅರ್ಜುನನಿಗಿಂತ ಅಧಿಕನಾಗಿ ಗೋವಿಂದನ ಮೇಲೆಯೇ ಪ್ರೀತಿಯಿದ್ದಿತು. ಆ ಮಹಾಬಾಹು ಶೌರಿಯು ಯುಧಿಷ್ಠಿರನ ಶೈಲಸ್ತಂಭದಂತಿದ್ದ ಚಂದನಭೂಷಿತ ಭುಜಗಳನ್ನು ಹಿಡಿದು ವಿನೋದದಿಂದ ಮಾತನಾಡತೊಡಗಿದನು. ಸುಂದರ ಹಲ್ಲುಗಳಿಂದಲೂ ಸುಂದರ ಕಣ್ಣುಗಳಿಂದಲೂ ಕೂಡಿದ್ದ ಅವನ ಮುಖವು ಸೂರ್ಯೋದಯದ ಸಮಯದಲ್ಲಿ ಸಂಪೂರ್ಣವಾಗಿ ಅರಳಿದ ಕಮಲದಂತೆ ಪ್ರಕಾಶಿಸುತ್ತಿತ್ತು.

> “ಪುರುಷವ್ಯಾಘ್ರ! ಶೋಕಿಸಬೇಡ! ಶೋಕವು ನಿನ್ನ ಶರೀರವನ್ನೇ ಶೋಷಿಸುತ್ತಿದೆ. ರಣರಂಗದಲ್ಲಿ ಹತರಾಗಿರುವವರು ಪುನಃ ನಿನಗೆ ಸುಲಭದಲ್ಲಿ ದೊರಕುವವರಲ್ಲ! ಸ್ವಪ್ನದಲ್ಲಿ ಪಡೆದುಕೊಂಡ ಧನವು ಎಚ್ಚರವಾದೊಡನೆಯೇ ಇಲ್ಲವಾಗಿಬಿಡುವಂತೆ ಮಹಾರಣದಲ್ಲಿ ವಿನಾಶಹೊಂದಿರುವ ಕ್ಷತ್ರಿಯರು ಪುನಃ ದೊರಕಲಾರರು. ರಣಶೋಭಿಗಳಾಗಿದ್ದ ಆ ಎಲ್ಲ ಶೂರರೂ ಯುದ್ಧಕ್ಕೆ ಅಭಿಮುಖರಾಗಿಯೇ ಪ್ರಾಣಬಿಟ್ಟಿರುವರು. ಅವರಲ್ಲಿ ಯಾರೂ ಬೆನ್ನುಹಾಕಿ ಅಥವಾ ಪಲಾಯನಮಾಡಿ ಕೆಳಗುರುಳಲಿಲ್ಲ. ಆ ವೀರರೆಲ್ಲರೂ ಮಹಾಹವದಲ್ಲಿ

ಯುದ್ಧಮಾಡಿ ತಮ್ಮ ಪ್ರಾಣಗಳನ್ನು ತೊರೆದಿದ್ದಾರೆ.
ಶಸ್ತ್ರಗಳಿಂದ ಪವಿತ್ರರಾಗಿ ಸ್ವರ್ಗವನ್ನು ಪಡೆದಿದ್ದಾರೆ. ಅವರ
ಕುರಿತು ಶೋಕಿಸಬಾರದು. ಇದಕ್ಕೆ ಸಂಬಂಧಿಸಿದಂತೆ ಈ
ಪುರಾತನ ಇತಿಹಾಸವೊಂದನ್ನು ಉದಾಹರಿಸುತ್ತಾರೆ.”
ಅನಂತರ ಕೃಷ್ಣನು ಯುಧಿಷ್ಠಿರನಿಗೆ ಷೋಡಶ-
ರಾಜಕೀಯೋಽಪಖ್ಯಾನವನ್ನು ತಿಳಿಸಿದನು. ಆ ಆಖ್ಯಾನದ
ಪಾತ್ರನಾಗಿದ್ದ ನಾರದನೂ ಯುಧಿಷ್ಠಿರನಿಗೆ “ಕೇಶವ ಮತ್ತು
ಮಹಾತಪಸ್ವಿ ವ್ಯಾಸರು ಹೇಳಿದಂತೆ ನೀನೂ ಕೂಡ ನಿನ್ನಲ್ಲಿ
ಉಂಟಾಗಿರುವ ಈ ಶೋಕದಿಂದ ಹೊರಬಾ!
ಪಿತೃಪಿತಾಮಹರ ಈ ರಾಜ್ಯದಲ್ಲಿ ಅಭಿಷಿಕ್ತನಾಗಿ
ರಾಜ್ಯಭಾರನಡೆಸು. ಪುಣ್ಯಕರವಾದ ಮಹಾ ಯಜ್ಞ-
ಇಷ್ಟಿಗಳಿಂದ ನಿನಗಿಷ್ಟವಾದ ಲೋಕಗಳನ್ನು ಪಡೆಯುತ್ತೀಯೆ!”

ಎಂದನು.

ಶೋಕಿಸುತ್ತಾ ಸುಮ್ಮನೇ ಕುಳಿತಿದ್ದ ರಾಜಾ ಯುಧಿಷ್ಠಿರನಿಗೆ
ಧರ್ಮತತ್ತ್ವಜ್ಞ ತಪಸ್ವೀ ಕೃಷ್ಣದ್ವೈಪಾಯನನು ಇಂತೆಂದನು:

“ರಾಜೀವಲೋಚನ! ಪ್ರಜೆಗಳನ್ನು ಪಾಲಿಸುವುದು ರಾಜರ

ಧರ್ಮ. ನಿತ್ಯವೂ ಧರ್ಮವನ್ನು ಅನುಸರಿಸುವವನೇ ಲೋಕದಲ್ಲಿ ಧರ್ಮದ ಪ್ರಮಾಣನಾಗಿರುತ್ತಾನೆ. ಪಿತೃ-ಪಿತಾಮಹರ ದಾರಿಯನ್ನು ಅನುಸರಿಸು. ಬ್ರಾಹ್ಮಣರ ನಿತ್ಯ ಧರ್ಮವೇನೆನ್ನುವುದನ್ನು ವೇದವೇ ನಿಶ್ಚಯಿಸಿದೆ. ಅದರ ಕುರಿತಾದ ಪ್ರಮಾಣಗಳು ಶಾಶ್ವತವಾಗಿ ವೇದದಲ್ಲಿವೆ. ಬ್ರಾಹ್ಮಣದ ಧರ್ಮವೆಲ್ಲವನ್ನೂ ಕ್ಷತ್ರಿಯನು ರಕ್ಷಿಸುತ್ತಾನೆ. ಯಾವ ಮನುಷ್ಯನು ವಿಷಯಾಸಕ್ತನಾಗಿ ಬ್ರಾಹ್ಮಣರ ಧರ್ಮವನ್ನು ಉಲ್ಲಂಘಿಸುತ್ತಾನೆಯೋ ಅಂಥಹ ಲೋಕಯಾತ್ರಾವಿಘಾತಕನನ್ನು ಕ್ಷತ್ರಿಯನು ಎರಡು ಬಾಹುಗಳಿಂದಲೂ ದಮನಮಾಡಬೇಕು. ಮೋಹವಶನಾಗಿ ಯಾರು ಪ್ರಮಾಣವಿರುವ ಧರ್ಮವನ್ನು ಪ್ರಮಾಣವಿಲ್ಲದ್ದು ಎಂದು ಸಾಧಿಸುತ್ತಾನೆಯೋ ಅವನು ಸೇವಕನೇ ಆಗಿರಲಿ, ಮಗನೇ ಆಗಿರಲಿ, ತಪಸ್ವಿಯೇ ಆಗಿರಲಿ, ಅಥವಾ ಬೇರೆ ಯಾರೇ ಆಗಿರಲಿ, ಸರ್ವ ಉಪಾಯಗಳಿಂದ ಆ ಪಾಪಿಯನ್ನು ದಮನಮಾಡಬೇಕು. ಅದಕ್ಕೆ ವಿರುದ್ಧವಾಗಿ ನಡೆದುಕೊಳ್ಳುವ ರಾಜನು ದೋಷವನ್ನು ಹೊಂದುತ್ತಾನೆ. ನಶಿಸಿಹೋಗುತ್ತಿರುವ ಧರ್ಮವನ್ನು ಯಾವ ರಾಜನು ರಕ್ಷಿಸುವುದಿಲ್ಲವೋ ಅವನೂ

ಕೂಡ ಧರ್ಮಹಂತಕನಾಗುತ್ತಾನೆ. ಸ್ವಧರ್ಮದಲ್ಲಿ ನಡೆದುಕೊಳ್ಳುತ್ತಿದ್ದ ನೀನು ಧರ್ಮಹಂತಕರನ್ನು, ಅವರ ಅನುಯಾಯಿಗಳೊಂದಿಗೆ, ಸಂಹರಿಸಿದ್ದೀಯೆ. ಇದಕ್ಕೆ ಏಕೆ ಶೋಕಿಸುತ್ತಿರುವೆ? ರಾಜನು ತನ್ನ ಶತ್ರುಗಳನ್ನು ಸಂಹರಿಸಬೇಕು ಮತ್ತು ಪ್ರಜೆಗಳನ್ನು ಧರ್ಮಪೂರ್ವಕವಾಗಿ ರಕ್ಷಿಸಬೇಕು!"

ಯುಧಿಷ್ಠಿರನು ಹೇಳಿದನು:

"ತಪೋಧನ! ನೀನು ಸಮಗ್ರ ಧರ್ಮಗಳನ್ನೂ ಪ್ರತ್ಯಕ್ಷ್ಯವಾಗಿಯೇ ಕಾಣುತ್ತಿರುವಿರಿ. ನೀವು ಹೇಳುವ ಮಾತಿನಲ್ಲಿ ನನಗೆ ಸ್ವಲ್ಪವೂ ಶಂಕೆಯಿಲ್ಲ. ರಾಜ್ಯದ ಕಾರಣದಿಂದಾಗಿ ನಾನು ಅವಧ್ಯರಾದ ಅನೇಕರನ್ನು ಸಂಹರಿಸಿದ್ದೇನೆ. ಈ ಅಕಾರ್ಯದಿಂದಲೇ ನಾನು ಸುಡುತ್ತಿದ್ದೇನೆ. ತಪಿಸುತ್ತಿದ್ದೇನೆ."

ವ್ಯಾಸನು ಹೇಳಿದನು:

"ಭಾರತ! ಆಗಿಹೋದುದಕ್ಕೆ ಈಶ್ವರನೇ ಕರ್ತನಿರಬಹುದು ಅಥವಾ ಪುರುಷನೇ ಕರ್ತನಿರಬಹುದು. ಅದು ಆಕಸ್ಮಿಕವಾಗಿ ಆದುದಾಗಿರಬಹುದು ಅಥವಾ ಮಾಡಿದ ಕರ್ಮಗಳ ಫಲವೇ

ಆಗಿರಬಹುದು ಎಂದು ಸ್ಮೃತಿಗಳು ಹೇಳುತ್ತವೆ. ಈಶ್ವರನ ನಿಯೋಗದಂತೆಯೇ ಮನುಷ್ಯನು ಒಳ್ಳೆಯ-ಕೆಟ್ಟ ಕರ್ಮಗಳನ್ನು ಮಾಡುತ್ತಾನೆ. ವನದಲ್ಲಿ ಕೊಡಲಿಯಿಂದ ಮರವನ್ನು ಕಡಿಯುವ ಮನುಷ್ಯನಿಗೆ ಪಾಪ ತಗಲುವುದೇ ಹೊರತು ಕೊಡಲಿಗೆ ಎಂದೂ ಪಾಪವು ತಗಲುವುದಿಲ್ಲ. ಅದರಂತೆ ಪುರುಷನು ಮಾಡಿದ ಕರ್ಮಗಳ ಫಲಗಳೆಲ್ಲವೂ ಈಶ್ವರನಿಗೇ ಸಲ್ಲುತ್ತವೆ. ಅಥವಾ ಕೊಡಲಿಯನ್ನು ತಯಾರಿಸಿದ ಪುರುಷನೇ ಅದನ್ನು ಹಿಡಿದವನ ಕರ್ಮಗಳ ಫಲವನ್ನು ಪಡೆಯುತ್ತಾನೆ ಎನ್ನಬಹುದಲ್ಲವೇ? ಆದರೆ ಒಬ್ಬನು ಮಾಡಿದ ಕಾರ್ಯಕ್ಕೆ ಮತ್ತೊಬ್ಬನನ್ನು ಹೊಣೆಗಾರನನ್ನಾಗಿಸುವುದು ಸರಿಯಲ್ಲ. ಆದುದರಿಂದ ಕರ್ಮಗಳ ಫಲಗಳನ್ನು ಈಶ್ವರನಲ್ಲಿಯೇ ಇರಿಸು! ಅಥವಾ ಪುರುಷನೇ ಶುಭಾಶುಭ ಕರ್ಮಗಳ ಕರ್ತನೆಂದುಕೊಂಡರೂ ಈಗ ನೀನು ಮಾಡಿದುದು ಅಶುಭಕರ್ಮವೆಂದು ತಿಳಿದುಕೊಳ್ಳಬೇಕಾಗಿಲ್ಲ. ಎಂದೂ ಯಾರೂ ವಿಧಿನಿಯಮವನ್ನು ಉಲ್ಲಂಘಿಸಿ ಕಾರ್ಯಗಳನ್ನು ಮಾಡುವುದಿಲ್ಲ. ಆದುದರಿಂದ ಕೊಡಲಿಯನ್ನು ತಯಾರಿಸಿದವನಿಗೂ ಕೊಡಲಿಯನ್ನು ಹಿಡಿದು ವೃಕ್ಷವನ್ನು

ಕತ್ತರಿಸಿದ ಪುರುಷನಿಗೂ ಪಾಪವಿಲ್ಲವೆಂದು ತಿಳಿಯಬಹುದು. ಒಂದು ವೇಳೆ ನೀನು ಲೋಕವು ಆಕಸ್ಮಿಕವಾಗಿ ಅಥವಾ ಸ್ವಾಭಾವಿಕವಾಗಿಯೇ ನಡೆಯುತ್ತದೆ ಎಂದು ತಿಳಿದುಕೊಂಡರೆ ಹಿಂದಿನ ಕರ್ಮಗಳಲ್ಲಿಯೂ ಮುಂದೆ ಮಾಡುವ ಕರ್ಮಗಳಲ್ಲಿಯೂ ಅಶುಭವೆನ್ನುವುದು ಏನೂ ಇಲ್ಲ. ಈಗ ಲೋಕದಲ್ಲಿ ಶುಭ-ಪಾಪ ಕರ್ಮಗಳ ನಿರ್ಣಯವಿದೆ. ಇದಕ್ಕಾಗಿಯೇ ಲೋಕದಲ್ಲಿ ರಾಜನ ದಂಡವು ಸದಾ ಸಿದ್ಧವಾಗಿರುತ್ತದೆ. ಹೀಗಿದ್ದರೂ ಲೋಕದಲ್ಲಿ ಶುಭಾಶುಭಕರ್ಮಗಳು ಚಕ್ರದಂತೆ ಸುತ್ತುತ್ತಲೇ ಇರುತ್ತವೆ. ಆ ಕರ್ಮಗಳಿಗೆ ತಕ್ಕಂತೆ ಕರ್ಮಗಳನ್ನು ಮಾಡಿದವರು ಶುಭಾಶುಭ ಫಲಗಳನ್ನು ಪಡೆಯುತ್ತಾರೆಂದು ನನ್ನ ಅಭಿಪ್ರಾಯ. ಶುಭಕರ್ಮಗಳಿಗೆ ಫಲವು ನಿಶ್ಚಯ. ಇದೇ ಸತ್ಯವಾಗಿರುವಾಗ ನೀನು ಮನಸ್ಸಿನ ಶೋಕವನ್ನು ತ್ಯಜಿಸು. ಸ್ವಧರ್ಮದಲ್ಲಿ ನಡೆದುಕೊಳ್ಳುವವನಿಗೂ ಅಪವಾದವೆನ್ನುವುದು ಇದ್ದೇ ಇರುತ್ತದೆ. ಈ ರೀತಿಯ ಆತ್ಮಪರಿತ್ಯಾಗವು ನಿನಗೆ ಶೋಭಿಸುವುದಿಲ್ಲ. ಎಲ್ಲ ಕರ್ಮಗಳಿಗೂ ಪ್ರಾಯಶ್ಚಿತ್ತವೆನ್ನುವುದು ಇದ್ದೇ ಇದೆ.

ಶರೀರವಿದ್ದವನು ಈ ಪ್ರಾಯಶ್ಚಿತ್ತಗಳನ್ನು ಮಾಡಿಕೊಳ್ಳಬಹುದು. ಶರೀರವನ್ನು ತ್ಯಜಿಸುವುದು ಪರಾಭವಹೊಂದಿದಂತೆ! ನೀನು ಜೀವಿತನಾಗಿದ್ದರೆ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬಹುದು. ಪ್ರಾಯಶ್ಚಿತ್ತಗಳನ್ನು ಮಾಡಿಕೊಳ್ಳದೇ ಮರಣಹೊಂದಿದರೆ ನೀನು ಲೋಕಾಂತರಗಳಲ್ಲಿಯ ಪರಿತಪಿಸಬೇಕಾಗುತ್ತದೆ."

ಯುಧಿಷ್ಠಿರನು ಹೇಳಿದನು:

"ಪಿತಾಮಹ! ಪುತ್ರ-ಪೌತ್ರರು, ಸಹೋದರರರು, ತಂದೆಯರು, ಮಾವಂದಿರು, ಗುರುಗಳು, ಸೋದರಮಾವಂದಿರು, ಪಿತಾಮಹರು, ಹಾಗೆಯೇ ಮಹಾತ್ಮ ಕ್ಷತ್ರಿಯ ಸಂಬಂಧಿಗಳು, ಸಮಾನ ವಯಸ್ಕರು, ಬಾಂಧವರು ಮತ್ತು ಭ್ರಾತರರು ಹತರಾದರು! ನಾನಾ ದೇಶಗಳಿಂದ ಬಂದು ಸೇರಿದ್ದ ಅನೇಕ ಮನುಷ್ಯೇಂದ್ರರೂ ಕೂಡ ನನ್ನ ಒಬ್ಬನ ರಾಜ್ಯಲೋಭದಿಂದಾಗಿ ಹತರಾದರು! ಅಂಥಹ ಧರ್ಮನಿತ್ಯ ರಾಜರನ್ನು, ಸೋಮವನ್ನು ಕುಡಿದಿದ್ದ ವೀರರನ್ನು ಸಂಹರಿಸಿದ ನಾನು ಎಂಥಹ ಫಲವನ್ನು ಅನುಭವಿಸಿಯೇನು? ಶ್ರೀಮಂತರಾಗಿದ್ದ ಪಾರ್ಥಿವಸಿಂಹರಿಂದ ಹೀನಗೊಂಡಿರುವ

ಈ ಪೃಥ್ವಿಯ ಕುರಿತು ಪುನಃ ಪುನಃ ಚಿಂತಿಸುತ್ತಾ ಸಂಕಟದಿಂದ ಬೆಂದುಹೋಗಿದ್ದೇನೆ. ಘೋರವಾದ ಕುಲವಧೆಯನ್ನೂ, ನೂರಾರು ಶತ್ರುಗಳು ಮತ್ತು ಕೋಟಿ-ಕೋಟಿ ಅನ್ಯರು ಹತರಾದುದನ್ನು ನೋಡಿ ಪರಿತಪಿಸುತ್ತಿದ್ದೇನೆ. ತಮ್ಮ ಪುತ್ರರು ಮತ್ತು ಪತಿಯಂದಿರಿಂದ ವಿಹೀನರಾದ ಈ ವರಸ್ತ್ರೀಯರ ಅವಸ್ಥೆಯು ಏನಾಗುವುದಕ್ಕುಂಟು? ಅವರು ಘೋರವಾದ ಅಂತಕಕ್ಕೆ ಕಾರಣರಾದ ನಾವು ಪಾಂಡವರು ಮತ್ತು ವೃಷ್ಣಿಗಳನ್ನು ಒಟ್ಟಿಗೇ ಸೇರಿಸಿ ಶಪಿಸುತ್ತಾ ಕೃಶರಾಗಿ ಮತ್ತು ದೀನರಾಗಿ ಭೂಮಿಯ ಮೇಲೆ ಬೀಳುತ್ತಿದ್ದಾರೆ. ತಂದೆಯರು, ಸಹೋದರರು, ಪತಿಗಳು, ಮತ್ತು ಪುತ್ರರನ್ನು ಕಾಣದೇ ಈ ಎಲ್ಲ ಸ್ತ್ರೀಯರೂ ಅವರ ಮೇಲಿನ ವಾತ್ಸಲ್ಯದಿಂದ ತಮ್ಮ ಪ್ರಿಯ ಪ್ರಾಣಗಳನ್ನೇ ತೊರೆದು ಯಮಕ್ಷಯಕ್ಕೆ ಹೋಗುತ್ತಾರೆ ಎನ್ನುವುದರಲ್ಲಿ ಸಂಶಯವಿಲ್ಲ! ಧರ್ಮದ ಸೂಕ್ಷ್ಮತೆಯನ್ನು ನೋಡಿದರೆ ಈ ಸ್ತ್ರೀವಧೆಯ ಪಾಪವನ್ನೂ ನಾವು ಪಡೆಯುತ್ತೇವೆ ಎನ್ನುವುದು ವ್ಯಕ್ತವಾಗುತ್ತಿದೆ. ಸುಹೃದಯರ ಈ ವಧೆಯನ್ನು ಮಾಡಿ ನಾವು ಮುಗಿಯದಂಥಹ ಪಾಪವನ್ನು ಮಾಡಿದ್ದೇವೆ. ಇದಕ್ಕಾಗಿ

ನಾವು ನರಕದಲ್ಲಿ ತಲೆಕೆಳಗಾಗಿ ಬಿದ್ದಿರುತ್ತೇವೆ! ಆದುದರಿಂದ ಉಗ್ರ ತಪಸ್ಸಿನಿಂದ ಈ ಶರೀರಗಳನ್ನು ತೊರೆಯುತ್ತೇವೆ. ಈ ಆಶ್ರಮಗಳ ವಿಶೇಷಗುಣಗಳನ್ನು ತಿಳಿಸು!”

ಯುಧಿಷ್ಠಿರನ ಆ ಮಾತನ್ನು ಕೇಳಿ ಋಷಿ ದ್ವೈಪಾಯನನು ನಿಪುಣ ಬುದ್ಧಿಯಿಂದ ಸಮೀಕ್ಷಿಸಿ ಪಾಂಡವನಿಗೆ ಇಂತೆಂದನು:

“ರಾಜನ್! ವಿಷಾದಿಸಬೇಡ! ಕ್ಷತ್ರಿಯ ಧರ್ಮವನ್ನು ಸ್ಮರಿಸಿಕೋ! ಈ ಕ್ಷತ್ರಿಯರೆಲ್ಲರೂ ಸ್ವಧರ್ಮಾನುಸಾರವಾಗಿಯೇ ಹತರಾಗಿದ್ದಾರೆ. ಪೃಥ್ವಿಯ ಸಮಗ್ರ ರಾಜ್ಯಲಕ್ಷ್ಮಿಯನ್ನೂ ಮಹಾ ಯಶಸ್ಸನ್ನೂ ಆಕಾಂಕ್ಷಿಸುತ್ತಾ ಇವರು ಯಮನು ವಿಧಿಸಿದ ಕಾಲವು ಸನ್ನಿಹಿತವಾಗುತ್ತಲೇ ನಿಧನ ಹೊಂದಿದರು. ನೀನು ಅವರನ್ನು ಸಂಹರಿಸಲಿಲ್ಲ. ಭೀಮನಾಗಲೀ, ಅರ್ಜುನನಾಗಲೀ ಅಥವಾ ನಕುಲ-ಸಹದೇವರಾಗಲೀ ಅವರನ್ನು ಸಂಹರಿಸಿಲ್ಲ. ಪರ್ಯಾಯಧರ್ಮದ ಪ್ರಕಾರ ಕಾಲನು ಆ ದೇಹಿಗಳ ಪ್ರಾಣಗಳನ್ನು ತೆಗೆದುಕೊಂಡಿದ್ದಾನೆ! ಯಾರಿಗೆ ತಾಯಿ-ತಂದೆಯರಿಲ್ಲವೋ, ಯಾರು ಯಾರಿಗೂ ಎಂದೂ ಅನುಗ್ರಹಮಾಡುವುದಿಲ್ಲವೋ ಆ ಪ್ರಜೆಗಳ ಕರ್ಮಸಾಕ್ಷೀ

ಕಾಲನಿಂದ ಅವರೆಲ್ಲರೂ ಹತರಾದರು. ಪ್ರಾಣಿಗಳನ್ನು ಪ್ರಾಣಿಗಳ ಮೂಲಕವೇ ಸಂಹರಿಸುವ ಈಶ್ವರೀಯ ರೂಪವಿರುವ ಕಾಲನಿಗೆ ಇದೊಂದು ಕೇವಲ ನಿಮಿತ್ತವಾಗಿತ್ತು. ಶುಭ-ಪಾಪಕರ್ಮಗಳಿಗೆ ಸಾಕ್ಷಿಯಾಗಿರುವ, ಕರ್ಮಗಳ ಮೂರ್ತಿಮತ್ತಾಗಿರುವ ಆ ಕಾಲನೇ ಕಾಲಾಂತರದಲ್ಲಿ ಪ್ರಾಣಿಗಳಿಗೆ ಸುಖದುಃಖಗಳ ರೂಪದಲ್ಲಿ ಕರ್ಮಫಲಗಳನ್ನು ನೀಡುತ್ತಾನೆ. ಅವರ ಕರ್ಮಗಳ ಕುರಿತು ಕೂಡ ಆಲೋಚಿಸು! ವಿನಾಶಕಾರ್ಯಗಳನ್ನೇ ಮಾಡಿದ ಅವರು ಕಾಲವಶರಾದರು! ನಿನ್ನ ನಿಯಮ-ವ್ರತಶೀಲತೆಗಳನ್ನಾದರೂ ಗಮನಿಸು. ವಿಧಿಯು ನಿನ್ನಂಥವನನ್ನು ಅಧೀನನನ್ನಾಗಿಸಿ ಅವರ ವಿನಾಶದ ಕರ್ಮವನ್ನು ಮಾಡಿಸಿದೆ! ಬಡಗಿಯು ಮಾಡಿದ ಯಂತ್ರವು ಆಡಿಸುವವನ ವಶದಲ್ಲಿದ್ದು ಆಡಿಸಿದಂತೆ ಆಡುತ್ತಿರುತ್ತದೆಯೋ ಅದೇ ರೀತಿ ಬ್ರಹ್ಮನಿರ್ಮಿತ ಈ ಜಗತ್ತು ಕಾಲನ ವಶವಾಗಿ ಕಾಲವು ಆಡಿಸಿದಂತೆಯೇ ಆಡುತ್ತಿರುತ್ತದೆ! ಕಾರಣವೇನೆಂದು ತಿಳಿಯದ ಪುರುಷನ ಹುಟ್ಟು ಮತ್ತು ಸಾವುಗಳು ಕಾಲದ ವಶದಲ್ಲಿವೆ. ಆದುದರಿಂದ ಅವುಗಳಿಗೆ ಶೋಕ-ಹರ್ಷಗಳನ್ನು ತಾಳುವುದಕ್ಕೆ ಅರ್ಥವಿಲ್ಲ. ಆದರೂ ಇವೆಲ್ಲವನ್ನೂ ನೀನೇ

ಮಾಡಿರುವೆಯೆಂದು ನಿನ್ನ ಮನಸ್ಸನ್ನು ಕಲಕುವ ಪೀಡೆಯು ನಿನ್ನನ್ನು ಕಾಡುತ್ತಿದೆ. ಅದಕ್ಕಾಗಿ ಪ್ರಾಯಶ್ಚಿತ್ತವಿದೆ. ಅದನ್ನು ಮಾಡಿಕೋ! ಹಿಂದೆ ದೇವಾಸುರರ ನಡುವೆ ನಡೆದ ಯುದ್ಧದ ಕುರಿತು ಕೇಳು.

ಸಹೋದರರಾದ ಅಸುರರು ಹಿರಿಯರೂ ದೇವತೆಗಳು ಕಿರಿಯರೂ ಆಗಿದ್ದರು. ಸಂಪತ್ತಿನ ಕಾರಣದಿಂದಾಗಿ ಅವರ ನಡುವೆ ಕೂಡ ಮಹಾ ಯುದ್ಧವೇ ನಡೆಯಿತು. ಆ ಯುದ್ಧವು ಮೂವತ್ತೆರಡು ಸಾವಿರ ವರ್ಷಗಳ ಪರ್ಯಂತ ನಡೆಯಿತಂತೆ! ಭೂಮಿಯನ್ನು ರಕ್ತದಲ್ಲಿಯೇ ಮುಳುಗಿಸಿ ದೈತ್ಯರನ್ನು ಸಂಹರಿಸಿ ದೇವತೆಗಳು ಸ್ವರ್ಗವನ್ನು ಪಡೆದರು. ವೇದಪಾರಂಗತರಾಗಿದ್ದ ಶಾಲಾವೃಕರೆಂದು ಮೂರೂ ಲೋಕಗಳಲ್ಲಿ ಪ್ರಸಿದ್ಧರಾಗಿದ್ದ ಎಂಬತ್ತೆಂಟು ಸಾವಿರ ಬ್ರಾಹ್ಮಣರೂ ದರ್ಪಮೋಹಿತರಾಗಿ ದಾನವರ ಸಹಾಯಾರ್ಥವಾಗಿ ಅವರ ಪಕ್ಷವನ್ನು ಸೇರಿದ್ದರು. ಅವರನ್ನು ಕೂಡ ಸಂಹರಿಸಿ ದೇವತೆಗಳು ಭೂಮಿಯನ್ನು ಪಡೆದರು. ಧರ್ಮಮಾರ್ಗವೇ ಸಂಪೂರ್ಣವಾಗಿ ಕಡಿದುಹೋಗಬೇಕೆಂದು ಬಯಸಿ ಯಾರು ಅಧರ್ಮಪ್ರವರ್ತಕರಾಗುತ್ತಾರೋ ಅಂತಹ ದುರಾತ್ಮರನ್ನು

ದೇವತೆಗಳು ಉದ್ಧತರಾದ ದೈತ್ಯರನ್ನು ಹೇಗೋ ಹಾಗೆ ಸಂಹರಿಸುತ್ತಾರೆ. ಕುಲದಲ್ಲಿ ಒಬ್ಬನನ್ನು ಸಂಹರಿಸುವುದರಿಂದ ಉಳಿದ ಶಿಷ್ಟರಿಗೆ ಕ್ಷೇಮವುಂಟಾಗುತ್ತದೆ ಎಂದಾದರೆ ಅವನನ್ನು ಸಂಹರಿಸುವುದೇ ಯುಕ್ತವಾದುದು. ಹಾಗೆಯೇ ಒಂದು ಕುಲವನ್ನು ಸಂಹರಿಸಿ ರಾಷ್ಟ್ರವನ್ನು ವಿಪತ್ತಿನಿಂದ ಪಾರುಮಾಡಬಹುದಾದರೆ ಅಂತಹ ಕುಲವನ್ನೇ ವಿನಾಶಗೊಳಿಸಬೇಕು. ಕೆಲವೊಮ್ಮೆ ಅಧರ್ಮವಾಗಿ ಕಾಣುವ ಕಾರ್ಯವು ಧರ್ಮಕಾರ್ಯವೇ ಆಗಿರುತ್ತದೆ. ಹಾಗೆಯೇ ಧರ್ಮಕಾರ್ಯವಾಗಿ ಕಾಣುವ ಕಾರ್ಯವು ಅಧರ್ಮಕಾರ್ಯವೇ ಆಗಿರಬಹುದು. ಅದನ್ನು ವಿಚಾರಿಸಿ ತಿಳಿದುಕೊಳ್ಳಬೇಕಾಗುತ್ತದೆ. ನೀನು ತಿಳಿದವನು. ಆದುದರಿಂದ ನಿನ್ನನ್ನು ನೀನು ಸ್ಥಿರಗೊಳಿಸಿಕೋ! ಹಿಂದೆ ದೇವತೆಗಳು ಹಿಡಿದ ಮಾರ್ಗವನ್ನೇ ನೀನೂ ಕೂಡ ಅನುಸರಿಸಿವೆ! ಹೀಗಿರುವಾಗ ನೀನು ನರಕಕ್ಕೆ ಹೋಗುವುದಿಲ್ಲ. ನಿನ್ನ ಸಹೋದರರರನ್ನೂ ಸುಹೃದಯರನ್ನೂ ಸಂತಯಿಸು! ಯಾರು ಪಾಪಭಾವದಿಂದ ಕಾರ್ಯವನ್ನು ಪ್ರಾರಂಭಿಸಿ ಅದೇ ಪಾಪಭಾವದಿಂದ ಮುಂದುವರೆದು ಕಾರ್ಯವನ್ನು ಪೂರ್ಣಗೊಳಿಸಿದ

ನಂತರವೂ ನಾಚಿಕೆಪಟ್ಟುಕೊಳ್ಳುವುದಿಲ್ಲವೋ ಅಂಥವನಲ್ಲಿ ಆ ಮಹಾಪಾಪವು ಸಂಪೂರ್ಣವಾಗಿ ಪ್ರತಿಷ್ಠಿತವಾಗಿರುತ್ತದೆ ಎಂದು ಹೇಳುತ್ತಾರೆ. ಅಂಥವನಿಗೆ ಯಾವ ಪ್ರಾಯಶ್ಚಿತ್ತವೂ ಇರುವುದಿಲ್ಲ. ಆ ಪಾಪಕರ್ಮಿಯ ಪಾಪವು ಸ್ವಲ್ಪವೂ ಕಡಿಮೆಯಾಗುವುದಿಲ್ಲ. ನೀನಾದರೋ ಹುಟ್ಟಿನಿಂದಲೇ ಶುದ್ಧಸ್ವಭಾವನಾಗಿರುವೆ! ಇತರರು ಮಾಡಿದ ದೋಷಗಳಿಂದಾಗಿ, ನಿನಗಿಷ್ಟವಿಲ್ಲದಿದ್ದರೂ, ಯುದ್ಧವೆಂಬ ಈ ಕರ್ಮವನ್ನು ನಡೆಸಿ, ಈಗ ಪರಿತಪಿಸುತ್ತಿದ್ದೀಯೆ! ಇದಕ್ಕೆ ಅಶ್ವಮೇಧ ಮಹಾಯಜ್ಞವು ಪ್ರಾಯಶ್ಚಿತ್ತವೆಂದು ಹೇಳಲ್ಪಟ್ಟಿದೆ. ಅದನ್ನು ಮಾಡು. ಅದರಿಂದ ಪಾಪವನ್ನು ಕಳೆದುಕೊಳ್ಳುವೆ! ಮರುತ್ತುಗಳೊಂದಿಗೆ ಶತ್ರುಗಳನ್ನು ಜಯಿಸುತ್ತಾ ಮಘವಾನ್ ಪಾಕಶಾಸನನು, ಗೆದ್ದಾಗಲೆಲ್ಲಾ ಒಂದೊಂದು ಅಶ್ವಮೇಧವನ್ನು – ಹಾಗೆ ನೂರು ಯಾಗಗಳನ್ನು ಮಾಡಿ – ಶತ್ರುಕ್ರತುವೆಂದೆನಿಸಿಕೊಂಡನು. ಪಾಪರಹಿತನಾಗಿ ಸ್ವರ್ಗವನ್ನು ಜಯಿಸಿ ಸುಖೋದಯ ಲೋಕಗಳನ್ನು ಪಡೆದು ಮರುದ್ಗಣಗಳಿಂದ ಆವೃತನಾಗಿ ಶಕ್ರನು ದಿಕ್ಕುಗಳನ್ನು ಬೆಳಗಿಸುತ್ತಾ ಶೋಭಿಸುತ್ತಿದ್ದಾನೆ. ಸ್ವರ್ಗಲೋಕದಲ್ಲಿ

ಮೆರೆಯುತ್ತಿರುವ ಶಚೀಪತಿ ವಿಬುಧೇಶ್ವರನನ್ನು ಅಪ್ಸರೆಯರೂ, ಋಷಿಗಳೂ ಮತ್ತು ದೇವತೆಗಳೂ ಉಪಾಸನೆಗೈಯುತ್ತಾರೆ. ನೀನೂ ಕೂಡ ವಿಕ್ರಮದಿಂದ ಮಹೀಪಾಲರನ್ನು ಸೋಲಿಸಿ ಈ ವಸುಂಧರೆಯನ್ನು ವಶಪಡೆಸಿಕೊಂಡಿರುವೆ! ಸುಹೃದಯರೊಂದಿಗೆ ಕೂಡಿಕೊಂಡು ನಿನ್ನಿಂದ ಹತರಾದವರ ರಾಷ್ಟ್ರ-ಪುರಗಳಿಗೆ ಹೋಗಿ ಅಲ್ಲಿ ಅವರ ಸಹೋದರರರನ್ನೋ, ಪುತ್ರರನ್ನೋ, ಪೌತ್ರರನ್ನೋ, ರಾಜ್ಯಾಭಿಷೇಕ ಮಾಡು. ಬಾಲಕರನ್ನಾಗಲೀ ಗರ್ಭದಲ್ಲಿರುವವರನ್ನಾಗಲೀ ರಾಜನನ್ನಾಗಿಸುವುದಾಗಿ ಸಂತವಿಸಿ ಎಲ್ಲ ಪ್ರಜೆಗಳನ್ನೂ ರಂಜಿಸುತ್ತಾ ಈ ವಸುಂಧರೆಯನ್ನು ಪಾಲಿಸು! ಕುಮಾರರ್ಯಾರೂ ಇಲ್ಲದಿದ್ದ ರಾಜವಂಶದಲ್ಲಿ ಕನ್ಯೆಯರಿದ್ದರೆ ಅವರಿಗೇ ಪಟ್ಟಾಭಿಷೇಕವನ್ನು ಮಾಡಿಸು. ಹೀಗೆ ಸ್ತ್ರೀವರ್ಗದ ಕಾಮನೆಗಳನ್ನು ಪೂರೈಸಿ ಅವರ ಶೋಕವನ್ನೂ ದೂರಮಾಡಿದಂತಾಗುತ್ತದೆ. ಹೀಗೆ ಸರ್ವರಾಷ್ಟ್ರಗಳಿಗೂ ಆಶ್ವಾಸನೆಯನ್ನಿತ್ತು ಹಿಂದೆ ವಿಜಯೀ ಇಂದ್ರನಂತೆ ಅಶ್ವಮೇಧಯಾಗವನ್ನು ಮಾಡು! ತಮ್ಮದೇ ಕರ್ಮಗಳಿಂದ ಮತ್ತು ಕೃತಾಂತನ ಬಲಕ್ಕೆ ಸಿಲುಕಿ ಮೋಹಿತರಾದ ಮಹಾತ್ಮ

ಕ್ಷತ್ರಿಯರ ಕುರಿತು ನೀನು ಶೋಕಿಸಬೇಕಾಗಿಲ್ಲ! ಕ್ಷತ್ರಧರ್ಮದ ಪ್ರಕಾರವಾಗಿ ದೊರಕಿರುವ ಈ ಅಕಲ್ಮಷವಾದ ರಾಜ್ಯವನ್ನು ಪಡೆದು, ಇಹದಲ್ಲಿ ಮತ್ತು ಪರದಲ್ಲಿ ಶ್ರೇಯಸ್ಕರವಾಗಿರುವ ಧರ್ಮದಲ್ಲಿಯೇ ನಡೆದುಕೋ!"

ಆಗ ಯುಧಿಷ್ಠಿರನು ಪ್ರಶ್ನಿಸಿದಂತೆ ವ್ಯಾಸನು ಅವನಿಗೆ ಪ್ರಾಯಶ್ಚಿತ್ತಗಳ ಕುರಿತು ವಿವರಿಸಿ ಹೇಳಿದನು. ಅನಂತರ ಯುಧಿಷ್ಠಿರನು ಹೇಳಿದನು:

"ಭಗವನ್! ರಾಜಧರ್ಮಗಳನ್ನೂ ಚಾತುರ್ವರ್ಣಗಳ ಧರ್ಮಗಳನ್ನೂ ಸಂಪೂರ್ಣವಾಗಿ ವಿಸ್ತಾರವಾಗಿ ಕೇಳ ಬಯಸುತ್ತೇನೆ. ಮಹೀಕ್ಷಿತನಾಗಿ ನಾನು ಆಪತ್ಕಾಲಗಳಲ್ಲಿ ಯಾವ ನೀತಿಗಳನ್ನು ಬಳಸಬೇಕು? ಧರ್ಮದ ಮಾರ್ಗವನ್ನೇ ಅನುಸರಿಸಿ ನಾನು ಹೇಗೆ ಈ ಭೂಮಿಯನ್ನು ಜಯಿಸಬಲ್ಲೆ? ಭಕ್ಷ್ಯ-ಅಭಕ್ಷ್ಯಗಳಿಂದ ಕೂಡಿದ ಪ್ರಾಯಶ್ಚಿತ್ತ ಪ್ರಕರಣವು ನನ್ನಲ್ಲಿ ಕುತೂಹಲವನ್ನುಂಟುಮಾಡಿದೆ. ಅದನ್ನು ಕೇಳಿ ನನಗೆ ಹರ್ಷವೂ ಆಗುತ್ತಿದೆ. ಧರ್ಮಾಚರಣೆ ಮತ್ತು ರಾಜ್ಯಾಡಳಿತ ಇವೆರಡೂ ನಿತ್ಯವೋ ಒಂದಕ್ಕೊಂದು ವಿರೋಧವಾಗಿಯೇ ಇರುತ್ತವೆ. ಇದನ್ನೇ ಸದಾ ಚಿಂತಿಸುತ್ತಿರುವ ನಾನು ಒಮ್ಮೊಮ್ಮೆ ಮೋಹಿತನಾಗುತ್ತೇನೆ."

ಆಗ ಮಹಾತೇಜಸ್ವಿ ವೇದವಿದರಲ್ಲಿ ಶ್ರೇಷ್ಠ ವ್ಯಾಸನು ಸರ್ವಜ್ಞ ಪುರಾತನ ನಾರದನನ್ನು ನೋಡಿ ಯುಧಿಷ್ಠಿರನಿಗೆ ಹೇಳಿದನು:

“ಯುಧಿಷ್ಠಿರ! ಅಖಿಲ ಧರ್ಮಗಳನ್ನೂ ತಿಳಿಯಬಯಸಿದರೆ ನೀನು ವೃದ್ಧ ಕುರುಪಿತಾಮಹ ಭೀಷ್ಮನ ಬಳಿ ಹೋಗು! ಆ ಭಾಗೀರಥೀಪುತ್ರ ಸರ್ವಜ್ಞ ಸರ್ವಧರ್ಮಗಳನ್ನೂ ತಿಳಿದುಕೊಂಡಿರುವ ಭೀಷ್ಮನು ನಿನ್ನ ಮನದಲ್ಲಿ ನೆಲೆಸಿರುವ ಸರ್ವ ಸಂಶಯಗಳನ್ನು ನಿವಾರಿಸುತ್ತಾನೆ. ಯಾರ ಜನನಿಯು ದೇವೀ ದಿವ್ಯ ತ್ರಿಪಥಗಾ ಗಂಗಾನದಿಯೋ, ಯಾರು ಇಂದ್ರನೇ ಮೊದಲಾದ ಸರ್ವ ದೇವತೆಗಳನ್ನು ಸಾಕ್ಷಾತ್ ಕಂಡಿರುವನೋ, ಆ ಕುರುಸತ್ತಮ ಪ್ರಭುವು ಬೃಹಸ್ಪತಿಯೇ ಮೊದಲಾದ ದೇವರ್ಷಿಗಳನ್ನು ಉಪಚಾರಗಳಿಂದ ತೃಪ್ತಿಪಡಿಸಿ ರಾಜನೀತಿಯನ್ನೂ, ದೇವಾಸುರರ ಗುರುವಾದ ದ್ವಿಜ ಶುಕ್ರನಿಂದ ಸರ್ವ ಶಾಸ್ತ್ರಗಳನ್ನೂ ವ್ಯಾಖ್ಯಾನ ಸಹಿತವಾಗಿ ತಿಳಿದುಕೊಂಡಿದ್ದಾನೆ. ಆ ಮಹಾಬುದ್ಧಿಯು ಭಾರ್ಗವ ಚ್ಯವನನಿಂದ ಮತ್ತು ಯತವ್ರತ ವಸಿಷ್ಠನಿಂದ ವೇದಗಳನ್ನೂ ಅವುಗಳ ಅಂಗಗಳೊಂದಿಗೆ ಪಡೆದಿರುತ್ತಾನೆ. ಭೀಷ್ಮನು ಪಿತಾಮಹಬ್ರಹ್ಮನ ಜ್ಯೇಷ್ಠ ಪುತ್ರ ದೀಪ್ತತೇಜಸ್ವಿ

ಅಧ್ಯಾತ್ಮಗತಿಯ ತತ್ತ್ವಗಳನ್ನು ತಿಳಿದುಕೊಂಡಿರುವ ಸನತ್ಕುಮಾರನಿಂದ ಹಿಂದೆ ಶಿಕ್ಷಣವನ್ನು ಪಡೆದಿದ್ದನು. ಅವನು ಮಾರ್ಕಂಡೇಯ ಮುಖೇನ ಯತಿಧರ್ಮವನ್ನು ಸಂಪೂರ್ಣವಾಗಿ ತಿಳಿದುಕೊಂಡಿರುವನು. ಪರಶುರಾಮನಿಂದ ಮತ್ತು ಇಂದ್ರನಿಂದ ಅಸ್ತ್ರಗಳನ್ನು ಪಡೆದುಕೊಂಡಿರುವನು. ಮನುಷ್ಯನಾಗಿ ಹುಟ್ಟಿದ್ದರೂ ಮೃತ್ಯುವು ಅವನ ಇಚ್ಛೆಯಂತೆಯೇ ಬರುತ್ತದೆ. ಮಕ್ಕಳಿಲ್ಲದವನಾಗಿದ್ದರೂ ಅವನಿಗೆ ದಿವಿಯ ಪುಣ್ಯಲೋಕಗಳು ದೊರೆಯುತ್ತವೆ ಎಂದು ಕೇಳಿದ್ದೇವೆ. ಪುಣ್ಯ ಬ್ರಹ್ಮರ್ಷಿಗಳು ನಿತ್ಯವು ಯಾರ ಸಭಾಸದರಾಗಿ ಉಪಸ್ಥಿತರಾಗಿರುತ್ತಿದ್ದರೋ, ತಿಳಿದುಕೊಂಡಿರಬೇಕಾದ ಜ್ಞಾನಗಳಲ್ಲಿ ಯಾರಿಗೆ ಯಾವುದೂ ತಿಳಿಯದೇ ಇಲ್ಲವೋ, ಆ ಧರ್ಮಜ್ಞ ಧರ್ಮದ ಸೂಕ್ಷ್ಮ ಅರ್ಥಗಳನ್ನು ಯಥಾವತ್ತಾಗಿ ತಿಳಿದುಕೊಂಡಿರುವ ಆ ಧರ್ಮವಿದುವು ಪ್ರಾಣಗಳನ್ನು ತೊರೆಯುವ ಮೊದಲು ನೀನು ಅವನ ಬಳಿಗೆ ಹೋಗು.”

ಇದನ್ನು ಕೇಳಿದ ದೀರ್ಘಪ್ರಜ್ಞ ಮಹಾದ್ಯುತಿ ಕೌಂತೇಯನು ಸತ್ಯವತೀ ಸುತ ಮಾತನಾಡುವವರಲ್ಲಿ ಶ್ರೇಷ್ಠ ವ್ಯಾಸನಿಗೆ ಇಂತೆಂದನು:

“ರೋಮಾಂಚನಗೊಳ್ಳುವಂಥಹ ಈ ಮಹಾ ಬಂಧುವಧೆಯನ್ನು ನಡೆಸಿ ನಾನು ಸರ್ವಲೋಕಕ್ಕೇ ಪೃಥ್ವೀನಾಶಕಾರಕವಾದ ಅಪರಾಧವನ್ನೆಸಗಿದ್ದೇನೆ. ಋಜುಮಾರ್ಗದಲ್ಲಿಯೇ ಹೋರಾಡುತ್ತಿದ್ದ ಆ ಭೀಷ್ಮನನ್ನು ವಂಚನೆಯಿಂದ ಘಾತಿಗೊಳಿಸಿ ಈಗ ನಾನು ಯಾವ ಮುಖವನ್ನಿಟ್ಟುಕೊಂಡು ಧರ್ಮದ ವಿಷಯವಾಗಿ ಅವನನ್ನು ಪ್ರಶ್ನಿಸಲು ಹೋಗಲಿ? ಅದನ್ನು ಕೇಳುವ ಯೋಗ್ಯತೆಯಾದರೂ ನನಗೆಲ್ಲಿದೆ?”

ಆಗ ಚಾತುರ್ವರ್ಣದವರ ಹಿತವನ್ನೇ ಬಯಸುವ ಮಹಾಬಾಹು ಮಹಾದ್ಯುತಿ ಯದುಶ್ರೇಷ್ಠ ಕೃಷ್ಣನು ಆ ನೃಪತಿಶ್ರೇಷ್ಠನಿಗೆ ಹೇಳಿದನು:

“ನೃಪೋತ್ತಮ! ನಿರ್ಬಂಧಪೂರ್ವಕವಾಗಿ ಈ ರೀತಿ ಶೋಕಪಡುವುದು ನಿನಗೆ ಸರಿಯಲ್ಲ. ಭಗವಾನ್ ವ್ಯಾಸನು ಹೇಳಿದಂತೆಯೇ ಮಾಡು! ಬೇಸಗೆಯ ಕೊನೆಯಲ್ಲಿ ಜನರು ಮಳೆಗಾಗಿ ಪರ್ಜನ್ಯನನ್ನು ಹೇಗೋ ಹಾಗೆ ಈ ಬ್ರಾಹ್ಮಣರು ಮತ್ತು ಮಹಾತೇಜಸ್ವೀ ಸಹೋದರರು ನಿನ್ನನ್ನೇ ಉಪಾಸಿಸುತ್ತಿದ್ದಾರೆ. ಅಳಿದುಳಿದ ರಾಜರೆಲ್ಲರೂ ಮತ್ತು ನಿನ್ನ ರಾಷ್ಟ್ರ ಕುರುಜಾಂಗಲದ ನಾಲ್ಕೂ ವರ್ಣದವರೂ ಇಲ್ಲಿಗೆ

ಬಂದು ಸೇರಿದ್ದಾರೆ. ಈ ಮಹಾತ್ಮ ಬ್ರಾಹ್ಮಣರ ಸಂತೋಷಕ್ಕಾಗಿ, ಅಮಿತ ತೇಜಸ್ವಿ ಗುರು ವ್ಯಾಸನ ನಿಯೋಗದಂತೆ, ದ್ರೌಪದಿಯೇ ಮೊದಲಾದ ನಮ್ಮ ಸುಹೃದಯರಿಗೆ ಸಂತೋಷವಾಗುವಂತೆ ಮಾಡು. ಲೋಕಕ್ಕೆ ಹಿತವನ್ನುಂಟುಮಾಡು!”

ಕೃಷ್ಣನು ಹೀಗೆ ಹೇಳಲು ರಾಜೀವಲೋಚನ ರಾಜಾ ಮಹಾತಪಸ್ವಿ ಯುಧಿಷ್ಠಿರನು ಸರ್ವಲೋಕಗಳ ಹಿತಕ್ಕಾಗಿ ಕುಳಿತಲ್ಲಿಂದ ಮೇಲೆದ್ದನು. ಹೀಗೆ ಸ್ವಯಂ ಕೃಷ್ಣನಿಂದಲೂ, ದ್ವೈಪಾಯನನಿಂದಲೂ, ದೇವಸ್ಥಾನನಿಂದಲೂ, ಅರ್ಜುನನಿಂದಲೂ ಮತ್ತು ಇತರ ಅನೇಕರಿಂದ ಸಮಾಧಾನಗೊಳಿಸಲ್ಪಟ್ಟ ನರವ್ಯಾಘ್ರ ಯುಧಿಷ್ಠಿರನು ಮಾನಸಿಕ ದುಃಖ-ಸಂತಾಪಗಳನ್ನು ಪರಿತ್ಯಜಿಸಿದನು. ಶ್ರುತಿಗಳ ವಾಕ್ಯವನ್ನು ಕೇಳಿ, ಶ್ರುತಿಗಳ ಕುರಿತು ಕೇಳುವುದರಲ್ಲಿ ವಿಶಾರದನಾದ ಆ ಶ್ರುತನಿಧಿ ಪಾಂಡುನಂದನನು ಮನಸ್ಸನ್ನು ಹಿಡಿತದಲ್ಲಿಟ್ಟುಕೊಂಡು ಶಾಂತಿಯುತನಾದನು.

# ಯುಧಿಷ್ಠಿರನ ಪಟ್ಟಾಭಿಷೇಕ

ಅನಂತರ ನಕ್ಷತ್ರಗಳಿಂದ ಸುತ್ತುವರೆಯಲ್ಪಟ್ಟ ಚಂದ್ರಮನಂತೆ ರಾಜ ಯುಧಿಷ್ಠಿರನು ಧೃತರಾಷ್ಟ್ರನನ್ನು ಮುಂದೆಮಾಡಿಕೊಂಡು ತನ್ನ ಪುರವನ್ನು ಪ್ರವೇಶಿಸಿದನು. ಪುರ ಪ್ರವೇಶಮಾಡುವಾಗ ಧರ್ಮಜ್ಞ ಕುಂತೀಪುತ್ರ ಯುಧಿಷ್ಠಿರನು ದೇವತೆಗಳನ್ನೂ, ಸಹಸ್ರಾರು ಬ್ರಾಹ್ಮಣರನ್ನೂ ಅರ್ಚಿಸಿದನು. ಅನಂತರ ದೇವ ಸೋಮನು ಅಮೃತಮಯ ರಥವನ್ನು ಏರುವಂತೆ ಅವನು ಹೊಸತಾದ, ಶುಭ್ರವಾದ, ಕಂಬಳಿ-ಜಿನಗಳನ್ನು ಹೊದೆಸಿದ್ದ, ಶುಭಲಕ್ಷಣಗಳುಳ್ಳ ಬಿಳಿಯಾದ ಹದಿನಾರು ಎತ್ತುಗಳನ್ನು ಕಟ್ಟಿದ್ದ, ಮಂತ್ರಗಳಿಂದ ಅರ್ಚಿತಗೊಂಡಿದ್ದ, ಪುಣ್ಯ ಮಹರ್ಷಿಗಳಿಂದ ಸ್ತುತಿಸಲ್ಪಡುತ್ತಿದ್ದ ರಥವನ್ನು ಏರಿದನು. ಕೌಂತೇಯ ಭೀಮಪರಾಕ್ರಮಿ ಭೀಮನು ಕಡಿವಾಣಗಳನ್ನು ಹಿಡಿದನು. ಅರ್ಜುನನು ಭಾನುವಂತೆ ಬಿಳುಪಾದ ಚತ್ರವನ್ನು ಹಿಡಿದನು. ಅವನ ನೆತ್ತಿಯ ಮೇಲೆ ಹಿಡಿದಿದ್ದ ಆ ಬಿಳುಪಾದ ಕೊಡೆಯು ಆಕಾಶದಲ್ಲಿ ನಕ್ಷತ್ರಗಳಿಂದ ಸಮಾಕುಲವಾದ ಬಿಳಿಯ ಮೋಡದಂತೆ ಪ್ರಕಾಶಿಸುತ್ತಿತ್ತು. ವೀರರಾದ ಮಾದ್ರೀಪುತ್ರರಿಬ್ಬರೂ ಚಂದ್ರನ ಕಿರಣಗಳ ಪ್ರಭೆಯುಳ್ಳ ಅಲಂಕೃತವಾದ ಚಾಮರ-ಬೀಸಣಿಗೆಗಳನ್ನು ಹಿಡಿದಿದ್ದರು. ಹಾಗೆ ಸಮಲಂಕೃತರಾಗಿ ರಥದಲ್ಲಿದ್ದ ಆ ಐವರು ಸಹೋದರರು ಪಂಚಮಹಾಭೂತಗಳಂತೆಯೇ

ಕಾಣುತ್ತಿದ್ದರು. ಯುಯುತ್ಸುವು ಮಹಾವೇಗದ ಕುದುರೆಗಳನ್ನು ಕಟ್ಟಿದ್ದ ಶುಭ್ರ ರಥದಲ್ಲಿ ಕುಳಿತು ಪಾಂಡವಾಗ್ರಜನನ್ನು ಹಿಂಬಾಲಿಸಿ ಹೋದನು. ಸೈನ್ಯ-ಸುಗ್ರೀವರನ್ನು ಕಟ್ಟಿದ್ದ ಹೇಮಮಯ ರಥದಲ್ಲಿ ಸಾತ್ಯಕಿಯೊಂದಿಗೆ ಕುಳಿತಿದ್ದ ಕೃಷ್ಣನು ಕುರುಗಳನ್ನು ಹಿಂಬಾಲಿಸಿ ಹೋದನು. ಪಾರ್ಥನ ಜ್ಯೇಷ್ಠ ಪಿತ ಧೃತರಾಷ್ಟ್ರನು ಗಾಂಧಾರಿಯ ಸಹಿತ ಮನುಷ್ಯರು ಹೊತ್ತಿದ್ದ ಪಲ್ಲಕ್ಕಿಯಲ್ಲಿ ಕುಳಿತು ಧರ್ಮರಾಜನ ರಥದ ಮುಂಭಾಗದಲ್ಲಿ ಹೋಗುತ್ತಿದ್ದನು. ಕುಂತಿ, ಕೃಷ್ಣೆ ದ್ರೌಪದಿ ಮತ್ತು ಎಲ್ಲ ಕುರುಸ್ತ್ರೀಯರು ವಿದುರನನನ್ನು ಮುಂದಿಟ್ಟುಕೊಂಡು ತಮತಮಗೆ ಯೋಗ್ಯ ವಾದ ಪಲ್ಲಕ್ಕಿಗಳಲ್ಲಿ ಕುಳಿತು ಹೋದರು. ಅವರ ಹಿಂದೆ ಅನೇಕ ಸಮಲಂಕೃತ ರಥಗಳೂ, ಆನೆಗಳೂ, ಪದಾತಿಗಳೂ ಮತ್ತು ಕುದುರೆಗಳೂ ಸಾಗುತ್ತಿದ್ದವು. ಆಗ ವೈತಾಲಿಕರು ಮತ್ತು ಸೂತ-ಮಾಗಧರು ಸುಂದರ ವಾಣಿಯಲ್ಲಿ ಸ್ತುತಿಸುತ್ತಿರುವಾಗ ರಾಜನು ಹಸ್ತಿನಾಪುರ ನಗರಕ್ಕೆ ಪ್ರಯಾಣಿಸಿದನು. ಹೃಷ್ಟ-ಪುಷ್ಟ ಜನರಿಂದಲೂ ಜಯಘೋಷಮಾಡುತ್ತಿದ್ದ ಜನರಿಂದಲೂ ಸಮಾಕುಲವಾಗಿದ್ದ ಆ ಮಹಾಬಾಹುವಿನ ಪ್ರಯಾಣವು ಭುವಿಯಲ್ಲಿಯೇ ಅಪ್ರತಿಮವಾಗಿತ್ತು.

ಪಾರ್ಥನು ಪ್ರಯಾಣಿಸುತ್ತಿರುವಾಗ ನಗರವಾಸಿಗಳು ನಗರವನ್ನೂ ರಾಜಮಾರ್ಗವನ್ನೂ ಯಥಾವತ್ತಾಗಿ ಅಲಂಕರಿಸಿದ್ದರು. ಬಿಳಿಯ



ಹೂಮಾಲೆಗಳಿಂದಲೂ, ಪತಾಕೆಗಳಿಂದಲೂ ಅಲಂಕೃತ ರಾಜಮಾರ್ಗವು ಧೂಪಗಳಿಂದ ಸುಗಂಧಮಯವಾಗಿತ್ತು. ಚೂರ್ಣಗಳಿಂದಲೂ, ಗಂಧಗಳಿಂದಲೂ, ನಾನಾ ಪುಷ್ಪಗಳ ಗುಚ್ಛಗಳಿಂದಲೂ, ಮಾಲೆಗಳಿಂದಲೂ ರಾಜನ ಅರಮನೆಯು ಅಲಂಕರಿಸಲ್ಪಟ್ಟಿತ್ತು. ನಗರದ್ವಾರದಲ್ಲಿ ನೀರಿನಿಂದ ತುಂಬಿದ್ದ ಗಟ್ಟಿಯಾದ ಹೊಸ ಕುಂಭಗಳನ್ನಿಟ್ಟಿದ್ದರು ಮತ್ತು ಸುಮನಸರಾದ ಕನ್ಯೆಯರೂ ಅಲ್ಲಲ್ಲಿ ನಿಂತಿದ್ದರು. ಹಾಗೆ ಸ್ವಲಂಕೃತವಾದ

ನಗರದ್ವಾರವನ್ನು ಶುಭವಾಕ್ಯಗಳಿಂದ ಸ್ತುತಿಸಲ್ಪಡುತ್ತಾ ಸುಹೃದಯರೊಂದಿಗೆ ಪಾಂಡುನಂದನನು ಪ್ರವೇಶಿಸಿದನು.

ಪಾರ್ಥರು ಪ್ರವೇಶಿಸುತ್ತಿದ್ದಂತೆ ಅವರನ್ನು ನೋಡಲು ಸಹಸ್ರಾರು ಪುರವಾಸೀ ಜನರು ಬಂದು ಸೇರಿದರು. ಚಂದ್ರೋದಯದ ಸಮಯದಲ್ಲಿ ಉಕ್ಕಿಬರುವ ಸಮುದ್ರದಂತೆ ಸಿಂಗರಿಸಿದ ರಾಜಮಾರ್ಗವು ಚೌಕದಲ್ಲಿ ಅಸಂಖ್ಯಾತ ಜನಸ್ತೋಮದಿಂದ ಶೋಭಿಸುತ್ತಿತ್ತು. ರಾಜಮಾರ್ಗದಲ್ಲಿದ್ದ ವಿಶಾಲ ರತ್ನಖಚಿತ ಭವನಗಳು ಸ್ತ್ರೀಯರಿಂದ ತುಂಬಿಹೋಗಿ ಅವರ ಭಾರದಿಂದ ಕಂಪಿಸುತ್ತಿವೆಯೋ ಎಂಬಂತೆ ತೋರುತ್ತಿದ್ದವು. ಆ ಸ್ತ್ರೀಯರು ನಾಚಿಕೊಂಡು ಮೆಲ್ಲನೇ ಯುಧಿಷ್ಠಿರನನ್ನು, ಭೀಮಸೇನ-ಅರ್ಜುನರನ್ನು ಮತ್ತು ಇಬ್ಬರು ಮಾದ್ರೀಪುತ್ರ ಪಾಂಡವರನ್ನು ಪ್ರಶಂಸಿಸುತ್ತಿದ್ದರು.

> "ಪಾಂಚಾಲೀ! ಮಹರ್ಷಿಗಳನ್ನು ಸೇವಿಸುತ್ತಿದ್ದ ಗೌತಮಿಯಂತೆ ಈ ಪುರುಷಸತ್ತಮರನ್ನು ಸೇವಿಸುತ್ತಿದ್ದ ನೀನೇ ಧನ್ಯಳು! ನೀನು ಮಾಡಿರುವ ವ್ರತಚರ್ಯೆಗಳೂ ಕರ್ಮಗಳೂ ಅಮೋಘವಾದವುಗಳು!"

ಹೀಗೆ ಸ್ತ್ರೀಯರು ಕೃಷ್ಣೆಯನ್ನು ಪ್ರಶಂಸಿಸುತ್ತಿದ್ದರು. ರಹಸ್ಯವಾಗಿ

ಆಡಿಕೊಳ್ಳುತ್ತಿದ್ದ ಆ ಪ್ರಶಂಸೆಯ ಮಾತುಗಳಿಂದಲೂ ಪ್ರೀತಿಯುಕ್ತ ಮಾತುಗಳಿಂದಲೂ ಆ ಪುರವು ತುಂಬಿಹೋಗಿತ್ತು. ಯಥಾಯುಕ್ತವಾಗಿ ರಾಜಮಾರ್ಗವನ್ನು ದಾಟಿ, ಶೋಭಾಯಮಾನವಾಗಿ ಅಲಂಕೃತಗೊಂಡಿದ್ದ ರಾಜಭವನವನ್ನು ಯುಧಿಷ್ಠಿರನು ಪ್ರವೇಶಿಸಿದನು. ಆಗ ಎಲ್ಲ ಸಾಮಾನ್ಯ ಜನರೂ, ಪೌರಜನರೂ ಅಲ್ಲಲ್ಲಿ ಸೇರಿಕೊಂಡು ಕರ್ಣಾನಂದಕರವಾದ ಮಾತುಗಳನ್ನಾಡುತ್ತಿದ್ದರು:

> "ರಾಜೇಂದ್ರ! ಸೌಭಾಗ್ಯವಶಾತ್ ನೀನು ಶತ್ರುಗಳನ್ನು ಜಯಿಸಿರುವೆ. ಸೌಭಾಗ್ಯವಶಾತ್ ನೀನು ಪುನಃ ಧರ್ಮ-ಬಲಗಳನ್ನುಪಯೋಗಿಸಿ ರಾಜ್ಯವನ್ನು ಪಡೆದಿರುವೆ! ನೀನು ನೂರು ವರ್ಷಗಳ ಪರ್ಯಂತವಾಗಿ ನಮ್ಮ ರಾಜನಾಗಿರು. ಇಂದ್ರನು ದಿವವನ್ನು ಹೇಗೋ ಹಾಗೆ ಧರ್ಮದಿಂದ ಪ್ರಜೆಗಳನ್ನು ಪಾಲಿಸು!"

ರಾಜಭವನದ ದ್ವಾರದಲ್ಲಿ ಈ ರೀತಿ ಮಂಗಲದ್ರವ್ಯಗಳಿಂದ ಪೂಜಿತನಾಗಿ ಅವನು ಎಲ್ಲಕಡೆಗಳಿಂದ ಹೇಳುತ್ತಿದ್ದ ದ್ವಿಜರ ಆಶೀರ್ವಾದಗಳನ್ನು ಸ್ವೀಕರಿಸಿದನು. ದೇವರಾಜನ ಭವನದಂತಿದ್ದ ರಾಜಭವನವನ್ನು ಪ್ರವೇಶಿಸಿ ವಿಜಯ ಘೋಷಗಳಿಂದ ಸಂಯುಕ್ತವಾಗಿದ್ದ ರಥದಿಂದ ಕೆಳಕ್ಕಿಳಿದನು. ಶ್ರೀಯಿಂದ ಬೆಳಗುತ್ತಿದ್ದ



ಅರಮನೆಯ ಒಳಭಾಗವನ್ನು ಪ್ರವೇಶಿಸಿ ಅವನು ಕುಲದೇವತೆಗಳ ಸನ್ನಿಧಿಗೆ ಹೋಗಿ ದೇವತೆಗಳೆಲ್ಲರನ್ನೂ ರತ್ನ-ಗಂಧ-ಮಾಲೆಗಳಿಂದ ಪೂಜಿಸಿದನು. ಶ್ರೀಮಂತನೂ ಮಹಾಯಶಸ್ವಿಯೂ ಆಗಿದ್ದ ಅವನು ಪುನಃ ರಾಜಭವನದಿಂದ ಹೊರಟು ಎದುರಿಗೆ ನೆರೆದಿದ್ದ ಬ್ರಾಹ್ಮಣರನ್ನು ನೋಡಿದನು. ಆಶೀರ್ವದಿಸಲು ಅಲ್ಲಿಗೆ ಬಂದು ಸೇರಿದ್ದ ವಿಪ್ರರಿಂದ ಪರಿವೃತನಾದ ಅವನು ವಿಮಲ ಆಕಾಶದಲ್ಲಿ ತಾರಾಗಣಗಳಿಂದ ಸುತ್ತುವರೆಯಲ್ಪಟ್ಟ ಚಂದ್ರನಂತೆ ಶೋಭಿಸಿದನು. ಆ ದ್ವಿಜರನ್ನು ಕೌಂತೇಯನು ಗುರು ಧೌಮ್ಯ ಮತ್ತು ದೊಡ್ಡಪ್ಪರನ್ನು ಮುಂದಿಟ್ಟುಕೊಂಡು ಪುಷ್ಪಗಳಿಂದಲೂ, ಮೋದಕಗಳಿಂದಲೂ, ರತ್ನ-ಹಿರಣ್ಯಗಳಿಂದಲೂ, ಗೋವುಗಳಿಂದಲೂ ಮತ್ತು ವಿವಿಧ ವಸ್ತುಗಳಿಂದ ಪೂಜಿಸಿದನು. ಆಗ ಆಕಾಶವನ್ನೇ ಸ್ತಬ್ಧಗೊಳಿವಂಥಹ ಪುಣ್ಯಾಹ ಘೋಷವು ಕೇಳಿಬಂದಿತು. ಸುಹೃದಯರಿಗೆ ಕೇಳಿದರೆ ಪುಣ್ಯವನ್ನೂ ಹರ್ಷವನ್ನೂ ತರುವ ಘೋಷಗಳು ಕೇಳಿಬಂದವು. ಅಲ್ಲಿ ಹಂಸಗಳಂತೆ ಘೋಷಿಸುತ್ತಿದ್ದ ವೇದವಿದುಷ ದ್ವಿಜರ ಶ್ರೇಷ್ಠ ಪದಾಕ್ಷರಸಂಪನ್ನ ವಾಣಿಯು ಎಲ್ಲರಿಗೂ ಸ್ಪಷ್ಟವಾಗಿ ಕೇಳಿಬರುತ್ತಿತ್ತು. ಆಗ ಮನೋರಮ ದುಂದುಭಿ ಮತ್ತು ಶಂಖಗಳ ನಿರ್ಘೋಷವೂ ಜಯಕಾರ ಧ್ವನಿಯೂ ಕೇಳಿಬಂದವು.

## ಚರ್ವಾಕಚರಿತ ಕಥನ

ಆಗ ಅಲ್ಲಿ ವಿಪ್ರಜನರು ಪುನಃ ನಿಃಷಬ್ಧರಾಗಿರಲು ಬ್ರಾಹ್ಮಣ ವೇಷಧರಿಸಿದ್ದ ರಾಕ್ಷಸ ಚಾರ್ವಾಕನು ರಾಜನನ್ನು ಉದ್ದೇಶಿಸಿ ಹೇಳಿದನು. ಆ ದುರ್ಯೋಧನನ ಸಖನು ಭಿಕ್ಷುವಿನ ರೂಪವನ್ನು ಧರಿಸಿ ಅಕ್ಷಮಾಲೆಯನ್ನು ಹಿಡಿದು ಶಿಖಾಧಾರಿಯಾಗಿ ತ್ರಿದಂಡವನ್ನು ಹಿಡಿದು ಧೈರ್ಯಶಾಲಿಯಾಗಿ ತನ್ನ ನಿಜರೂಪವನ್ನು ಮರೆಸಿಕೊಂಡಿದ್ದನು. ಆಶೀರ್ವಾದವನ್ನು ನೀಡಲು ಬಂದಿದ್ದ ಆ ಎಲ್ಲ ತಪೋನಿಯಮ ಸಂಸ್ಥಿತ ಸಹಸ್ರಾರು ವಿಪ್ರರ ಮಧ್ಯದಿಂದ ಆ ದುಷ್ಟನು ಮುಂದೆ ಬಂದು ಆ ವಿಪ್ರರ ಅನುಮತಿಯನ್ನು ಕೇಳದೇ ಮಹಾತ್ಮ ಪಾಂಡವರಿಗೆ ಕೇಡನ್ನೇ ಬಯಸುತ್ತಿದ್ದ ಆ ದುಷ್ಟನು ಮಹೀಪತಿಗೆ ಹೇಳತೊಡಗಿದನು.

> “ಈ ಎಲ್ಲ ದ್ವಿಜರೂ ನಿನಗೆ ಇದನ್ನು ಹೇಳುವ ಭಾರವನ್ನು ನನಗೆ ವಹಿಸಿದ್ದಾರೆ. ಜ್ಞಾತಿಬಾಂಧವರನ್ನು ಸಂಹರಿಸಿದ ಕುನೃಪತಿ ನಿನಗೆ ಧಿಕ್ಕಾರ! ಕೌಂತೇಯ! ಕುಲನಾಶವನ್ನು ಮಾಡಿರುವ ನಿನಗೆ ಈ ರಾಜ್ಯದಿಂದ ಏನು ಪ್ರಯೋಜನ? ಗುರುಜನರನ್ನೂ ಸಂಹರಿಸಿದ ನಿನಗೆ ಬದುಕಿರುವುದಕ್ಕಿಂತಲೂ ಮರಣವೇ ಶ್ರೇಯಸ್ಕರವಾದುದು!”

ಆ ಘೋರ ರಾಕ್ಷಸನ ಕಠೋರ ಮಾತನ್ನು ಕೇಳಿ ದ್ವಿಜರು ವ್ಯಥಿತರಾಗಿ ಶೋಕಿಸಿದರು. ಆಗ ಆ ಬ್ರಾಹ್ಮಣರೆಲ್ಲರೂ ರಾಜಾ ಯುಧಿಷ್ಠಿರನೂ ಪರಮ ಉದ್ವಿಗ್ನರೂ ಲಜ್ಜಿತರೂ ಆಗಿ ಏನನ್ನೂ ಮಾತನಾಡದೇ ಸುಮ್ಮನಿದ್ದರು. ಯುಧಿಷ್ಠಿರನು ಹೇಳಿದನು:

> "ನಾನು ನಿಮಗೆ ನಮಸ್ಕರಿಸಿ ಕೇಳಿಕೊಳ್ಳುತ್ತಿದ್ದೇನೆ. ನನ್ನ ಮೇಲೆ ಪ್ರಸನ್ನರಾಗಿರಿ! ಎಲ್ಲೆಡೆಯಿಂದ ವ್ಯಸನಭರಿತನಾಗಿರುವ ನನ್ನನ್ನು ನೀವು ಹೀಗೆ ಧಿಕ್ಕರಿಸುವುದು ಉಚಿತವಲ್ಲ!"

ಆಗ ಆ ಎಲ್ಲ ಬ್ರಾಹ್ಮಣರೂ ಇಂತೆಂದರು: "ಪಾರ್ಥಿವ! ಇವನು ಹೇಳಿದುದು ನಮ್ಮ ಮಾತಲ್ಲ! ಈ ರಾಜ್ಯಶ್ರೀಯು ನಿನ್ನದೇ ಆಗಿರಲಿ!" ವೇದವಿದ್ವಾಂಸರಾದ ಮತ್ತು ತಪಸ್ಸಿನಿಂದ ಪವಿತ್ರರಾಗಿದ್ದ ಆ ಮಹಾತ್ಮ ಬ್ರಾಹ್ಮಣರು ತಮ್ಮ ಜ್ಞಾನದೃಷ್ಟಿಯಿಂದ ಚಾರ್ವಾಕನು ಯಾರೆಂದು ತಿಳಿದುಕೊಂಡರು.

ಬ್ರಾಹ್ಮಣರು ಹೇಳಿದರು:

> "ಇವನು ದುರ್ಯೋಧನನ ಮಿತ್ರ. ಚಾರ್ವಾಕ ಎಂಬ ಹೆಸರಿನ ರಾಕ್ಷಸ. ಪರಿವ್ರಾಜಕನ ರೂಪದಲ್ಲಿ ಇವನು ಅವನ ಹಿತಕ್ಕಾಗಿ ಹೀಗೆ ಮಾಡುತ್ತಿದ್ದಾನೆ. ಧರ್ಮಾತ್ಮನ್! ನಾವು ಹೀಗೆ

ಹೇಳಲಾರೆವು. ಈ ಭಯವು ನಿನ್ನಿಂದ ದೂರವಾಗಲಿ!
ಎದ್ದೇಳು! ಸಹೋದರರೊಂದಿಗೆ ನಿನ್ನ ಕಲ್ಯಾಣವಾಗಲಿ!"

ಅನಂತರ ಆ ಶುಚಿ ಬ್ರಾಹ್ಮಣರೆಲ್ಲರೂ ಕ್ರೋಧಮೂರ್ಛಿತರಾಗಿ ಹುಂಕಾರಗಳಿಂದ ಆ ಪಾಪರಾಕ್ಷಸನನ್ನು ಬೆದರಿಸಿ ಸಂಹರಿಸಿದರು. ಇಂದ್ರನ ವಜ್ರಾಘಾತದಿಂದ ಚಿಗುರುಗಳೂ ಸೇರಿ ಭಸ್ಮೀಭೂತವಾಗುವ ವೃಕ್ಷದಂತೆ ಆ ಬ್ರಹ್ಮವಾದಿಗಳ ತೇಜಸ್ಸಿನಿಂದ ಚರ್ವಾಕನು ಭಸ್ಮೀಭೂತನಾಗಿ ಕೆಳಗೆ ಬಿದ್ದನು. ಬಳಿಕ ರಾಜನಿಂದ ಸತ್ಕೃತರಾದ ವಿಪ್ರರು ರಾಜನನ್ನು ಅಭಿನಂದಿಸಿ ತೆರಳಿದರು. ರಾಜಾ ಪಾಂಡವನೂ ಕೂಡ ತನ್ನ ಸುಹೃಜ್ಜನರೊಂದಿಗೆ ಹರ್ಷಿತನಾದನು.

ವಾಸುದೇವನು ಹೇಳಿದನು:

"ಅಯ್ಯಾ! ಬ್ರಾಹ್ಮಣರು ಈ ಲೋಕದಲ್ಲಿ ನನಗೆ ಸದಾ ಅರ್ಚನೀಯರಾಗಿದ್ದಾರೆ. ಇವರು ಭೂಮಿಯಲ್ಲಿ ಸಂಚರಿಸುವ ದೇವತೆಗಳು! ಇವರು ಕುಪಿತರಾದರೆ ಇವರ ಮಾತುಗಳು ವಿಷವಾಗಿರುತ್ತವೆ. ಹಿಂದೆ ಕೃತಯುಗದಲ್ಲಿ ಚಾರ್ವಾಕನೆಂಬ ರಾಕ್ಷಸನು ಬದರಿಯಲ್ಲಿ ಅನೇಕ ವರ್ಷಗಳು ತಪಸ್ಸನ್ನು ಮಾಡಿದನು. ಬ್ರಹ್ಮನು ಅವನಿಗೆ ವರವನ್ನು ಕೇಳಿಕೊಳ್ಳುವಂತೆ

ಪುನಃ ಪುನಃ ಒತ್ತಾಯಿಸಲು ಅವನು ಸರ್ವಭೂತಗಳಿಂದಲೂ ಅಭಯವನ್ನು ವರವನ್ನಾಗಿ ಕೇಳಿಕೊಂಡನು. ಆಗ ಜಗತ್ಪ್ರಭುವು ದ್ವಿಜರಿಗೆ ಅವಮಾನಮಾಡದೇ ಇದ್ದರೆ ಸರ್ವಭೂತಗಳಿಂದಲೂ ಅಭಯವಾಗಲಿ ಎಂದು ಅವನಿಗೆ ಆ ಉತ್ತಮ ವರವನ್ನು ಇತ್ತನು. ಆ ವರವನ್ನು ಪಡೆದು ಪಾಪಿ ತೀವ್ರಕರ್ಮಿ ಮಹಾಬಲಿ ಅಮಿತವಿಕ್ರಮಿ ರಾಕ್ಷಸನು ದೇವತೆಗಳನ್ನೂ ಪರಿತಪಿಸತೊಡಗಿದನು. ಆ ರಾಕ್ಷಸನ ಬಲದಿಂದ ಪೀಡಿತರಾದ ದೇವತೆಗಳು ಒಟ್ಟಾಗಿ ಅವನ ವಧೆಗಾಗಿ ಬ್ರಹ್ಮನಲ್ಲಿ ಕೇಳಿಕೊಂಡರು. ಅವ್ಯವ ದೇವನು ಆಗ ಅವರಿಗೆ ಹೇಳಿದನು: "ಅದರ ಕುರಿತು ನಾನು ಈಗಲೇ ನಿರ್ಧರಿಸಿದ್ದೇನೆ. ಬೇಗನೇ ಇವನ ಮರಣವಾಗಲಿದೆ! ಇವನು ದುರ್ಯೋಧನನೆಂಬ ರಾಜನ ಸಖನಾಗುವನು. ಅವನ ಸ್ನೇಹಪಾಶದ ಬಂಧನಕ್ಕೊಳಗಾಗಿ ಇವನು ಬ್ರಾಹ್ಮಣರನ್ನು ಅಪಮಾನಿಸುವನು. ಇವನ ವಿರುದ್ಧಾಚರಣೆಯ ವಾಕ್ಶಲ್ಯದಿಂದ ಅಪಮಾನಿತರಾದ ಬ್ರಾಹ್ಮಣರು ಕೋಪದಿಂದ ತಮ್ಮ ವಾಗ್ಬಲಗಳಿಂದ ಇವನನ್ನು ಸುಡುತ್ತಾರೆ. ಆಗ ಈ ಪಾಪಿಯು ನಾಶಹೊಂದುತ್ತಾನೆ!" ಆ ರಾಕ್ಶಸ ಚಾರ್ವಾಕನೇ

ಇಂದು ಹೀಗೆ ಬ್ರಹ್ಮದಂಡದಿಂದ ಹತನಾಗಿ ಬಿದ್ದಿದ್ದಾನೆ. ಇದಕ್ಕಾಗಿ ಶೋಕಿಸಬೇಡ! ಕ್ಷತ್ರಿಯಧರ್ಮದಿಂದ ನಿನ್ನ ಜ್ಞಾತಿಬಾಂಧವ ಮಹಾತ್ಮ ವೀರ ಕ್ಷತ್ರಿಯ ಪುಂಗವರು ಸ್ವರ್ಗಸ್ಥರಾಗಿದ್ದಾರೆ. ನೀನು ಈಗ ಕಲ್ಯಾಣಕರ ಕರ್ತವ್ಯಗಳನ್ನು ಮಾಡು. ಶೋಕದಿಂದ ದುರ್ಬಲನಾಗಬೇಡ! ಶತ್ರುಗಳನ್ನು ಸಂಹರಿಸು! ಪ್ರಜೆಗಳನ್ನು ರಕ್ಷಿಸು! ಮತ್ತು ದ್ವಿಜರನ್ನು ಪಾಲಿಸು!”

## ಯುಧಿಷ್ಠಿರನ ರಾಜ್ಯಾಭಿಷೇಕ

ಆಗ ರಾಜಾ ಕುಂತೀಸುತನು ಕೋಪ-ವ್ಯಸನಗಳನ್ನು ತೊರೆದು ಹೃಷ್ಟನಾಗಿ ಉತ್ತರಾಭಿಮುಖವಾಗಿ ಕಾಂಚನದ ಪರಮಾಸನದಲ್ಲಿ ಕುಳಿತುಕೊಂಡನು. ಅವನಿಗೆ ಅಭಿಮುಖವಾಗಿ ಪ್ರಜ್ವಲಿಸುತ್ತಿದ್ದ ಸುವರ್ಣಸಿಂಹಾಸನಗಳಲ್ಲಿ ಅರಿಂದಮ ಸಾತ್ಯಕಿ-ವಾಸುದೇವರು ಕುಳಿತುಕೊಂಡರು. ರಾಜನನ್ನು ಮಧ್ಯದಲ್ಲಿರಿಸಿಕೊಂಡು ಮಹಾತ್ಮ ಭೀಮಸೇನ-ಅರ್ಜುನರಿಬ್ಬರೂ ಎರಡೂ ಕಡೆಗಳಲ್ಲಿ ಸುಂದರ ಮಣಿಮಯ ಪೀಠಗಳಲ್ಲಿ ಕುಳಿತುಕೊಂಡರು. ಕುಂತಿಯು ಶುಭ್ರವಗಿದ್ದ, ಸುವರ್ಣದಿಂದ ಸಮಲಂಕೃತವಾಗಿದ್ದ ದಂತಸಿಂಹಾಸನದಲ್ಲಿ ನಕುಲ-ಸಹದೇವರೊಡನೆ ಕುಳಿತುಕೊಂಡಳು. ಸುಧರ್ಮ, ವಿದುರ, ಧೌಮ್ಯ

ಮತ್ತು ಕೌರವ ಧೃತರಾಷ್ಟ್ರರು ಯಜ್ಞೇಶ್ವರನಂತೆ ಪ್ರಕಾಶಿಸುತ್ತಿದ್ದ ಸಿಂಹಾಸನಗಳಲ್ಲಿ ಪ್ರತ್ಯೇಕ-ಪ್ರತ್ಯೇಕವಾಗಿ ಕುಳಿತುಕೊಂಡರು. ರಾಜಾ ಧೃತರಾಷ್ಟ್ರನು ಕುಳಿತಿದ್ದಲ್ಲಿಯೇ ಯುಯುತ್ಸು, ಸಂಜಯ ಮತ್ತು ಯಶಸ್ವಿನೀ ಗಾಂಧಾರಿಯರೆಲ್ಲರೂ ಕುಳಿತುಕೊಂಡರು. ಅಲ್ಲಿ ಕುಳಿತಿದ್ದ ಧರ್ಮಾತ್ಮ ಯುಧಿಷ್ಠಿರನು ಸುಮನಸ್ಕನಾಗಿ ಶ್ವೇತಪುಷ್ಪಗಳನ್ನೂ, ಸ್ವಸ್ತಿಕಗಳನ್ನೂ, ಅಕ್ಷತೆಗಳನ್ನೂ, ಭೂಮಿಯನ್ನೂ, ಸುವರ್ಣವನ್ನೂ, ಬೆಳ್ಳಿಯನ್ನೂ, ಮಣಿಗಳನ್ನೂ ಸ್ಪರ್ಶಿಸಿದನು. ಬಳಿಕ ಅಮಾತ್ಯ-ಸೇನಾಪತಿಗಳೇ ಮೊದಲಾದ ಪ್ರಕೃತಿವರ್ಗದವರೆಲ್ಲರೂ  ಪುರೋಹಿತ ಧೌಮ್ಯನನ್ನು ಮುಂದೆಮಾಡಿಕೊಂಡು ಅನೇಕವಿಧದ ಮಂಗಲ ದ್ರವ್ಯಗಳನ್ನು - ಮೃತ್ತಿಕೆ, ಚಿನ್ನ, ವಿವಿಧ ರತ್ನಗಳು, ಅಭಿಷೇಕಕ್ಕಾಗಿ ತಂದ ಚಿನ್ನ, ತಾಮ್ರ ಮತ್ತು ಬೆಳ್ಳಿಯ ಕಲಶಗಳು, ಮತ್ತು ನೀರು ತುಂಬಿದ ಬೆಳ್ಳಿಯ ಪೂರ್ಣಕುಂಭಗಳು, ಪುಷ್ಪಗಳು, ಬತ್ತದರಳು, ದರ್ಭೆ, ಗೋರಸ, ಬನ್ನಿ, ಅರಳಿ ಮತ್ತು ಮುತ್ತುಗದ ಸಮಿತ್ತುಗಳು, ಜೇನುತುಪ್ಪ, ತುಪ್ಪ, ಅತ್ತಿಯ ಮರದಿಂದ ಮಾಡಿದ ಸ್ರುವ, ಸುವರ್ಣ ಭೂಷಿತ ಶಂಖ – ತಂದು ರಾಜನಿಗೆ ದರ್ಶಿಸಿದರು.

ಅನಂತರ ದಾಶಾರ್ಹನ ಅನುಮತಿಯನ್ನು ಪಡೆದು ಪುರೋಹಿತ ಧೌಮ್ಯನು ಪೂರ್ವೋತ್ತರ ದಿಕ್ಕುಗಳ (ಈಶಾನ್ಯ) ಕಡೆಗೆ ಸ್ವಲ್ಪ

ಇಳಿಜಾರಾಗಿದ್ದ ಒಂದು ವೇದಿಯನ್ನು ಸಿದ್ಧಗೊಳಿಸಿದನು. ಆ ವೇದಿಯನ್ನು ಗೋಮಯದಿಂದ ಸಾರಿಸಿ, ಲಕ್ಷಣಯುಕ್ತವಾಗುವಂತೆ ಮಾಡಿ, ದೃಢಪಾದಗಳಿದ್ದ ಯಜ್ಞೇಶ್ವರನ ಜ್ವಾಲೆಗೆ ಸಮಾನ ಕಾಂತಿಯುತ್ಕವಾದ ಸರ್ವತೋಭದ್ರವೆಂಬ ಆಸನದ ಮೇಲೆ ವ್ಯಾಘ್ರಚರ್ಮವನ್ನೂ ಅದರ ಮೇಲೆ ಬಿಳಿಯ ವಸ್ತ್ರವನ್ನೂ ಹೊದ್ದಿಸಿ ಮಹಾತ್ಮ ಯುಧಿಷ್ಠಿರನನ್ನೂ, ದೃಪದಾತ್ಮಜೆ ಕೃಷ್ಣೆಯನ್ನೂ ಕುಳ್ಳಿರಿಸಿದನು. ಅನಂತರ ಧೀಮಂತ ಧೌಮ್ಯನು ಅಗ್ನಿಯನ್ನು ಪ್ರತಿಷ್ಠಾಪಿಸಿ ವಿಧಿಮಂತ್ರ ಪೂರ್ವಕವಾಗಿ ಪಟ್ಟಾಭಿಷೇಕಕ್ಕೆ ಸಂಬಂಧಿಸಿದಂತೆ ಯಜ್ಞೇಶ್ವರನಲ್ಲಿ ಆಜ್ಯಾಹುತಿಗಳನ್ನು ಸಮರ್ಪಿಸಿದನು. ಅನಂತರ ರಾಜರ್ಷಿ ಧೃತರಾಷ್ಟ್ರನೂ ಸರ್ವಪ್ರಜೆಗಳೂ ಕುಂತೀಪುತ್ರ ಯುಧಿಷ್ಠಿರನನ್ನು ಪೃಥ್ವೀಪತಿಯನ್ನಾಗಿ ಅಭಿಷೇಕಿಸಿದರು. ಬಳಿಕ ಪಣವ-ಅನಕ-ದುಂದುಭಿಗಳನ್ನು ಬಾರಿಸಲಾಯಿತು.

ಧರ್ಮರಾಜನಾದರೋ ಅವೆಲ್ಲವನ್ನೂ ಧರ್ಮಪೂರ್ವಕವಾಗಿ ಸ್ವೀಕರಿಸಿದನು. ಭೂರಿದಕ್ಷಿಣ ಯುಧಿಷ್ಠಿರನು ಸ್ವಸ್ತಿವಾಚನ ಮಾಡಿದ ವೇದಾಧ್ಯಯನ ಸಂಪನ್ನರೂ ಶೀಲವರ್ತನ ಸಮನ್ವಿತರೂ ಆದ ಬ್ರಾಹ್ಮಣರನ್ನು ಸಹಸ್ರಾರು ನಿಷ್ಕಗಳನ್ನಿತ್ತು ವಿಧಿವತ್ತಾಗಿ ಪೂಜಿಸಿದನು.

ಪ್ರೀತರಾದ ಬ್ರಾಹ್ಮಣರು ಹಂಸಗಳಂತೆ ಉಚ್ಛಸ್ವರಗಳಲ್ಲಿ ಯುಧಿಷ್ಠಿರನಿಗೆ ಜಯಕಾರಗಳನ್ನೂ ಸ್ವಸ್ತಿಮಂತ್ರಗಳನ್ನೂ ಹೇಳಿದರು.

> "ಯುಧಿಷ್ಠಿರ! ಅದೃಷ್ಟವಶಾತ್ ನೀನು ನಿನ್ನ ವಿಕ್ರಮದಿಂದ ವಿಜಯಿಯಾಗಿರುವೆ. ಅದೃಷ್ಟವಶಾತ್ ಸ್ವಧರ್ಮವನ್ನು ಪಾಲಿಸಿರುವೆ! ಅದೃಷ್ಟದಿಂದಲೇ ನೀನು, ಗಾಂಡೀವಧನ್ವಿ ಪಾಂಡವ, ಭೀಮಸೇನ ಮತ್ತು ಮಾದ್ರೀಪುತ್ರ ಪಾಂಡವರಿಬ್ಬರೂ ಕುಶಲಿಗಳಾಗಿರುವಿರಿ! ಈ ವೀರಕ್ಷಯಕಾರಕ ಯುದ್ಧದಲ್ಲಿ ಹೋರಾಡಿ ಶತ್ರುಗಳಿಂದ ಮುಕ್ತರಾಗಿರುವಿರಿ! ಈಗ ಕ್ಷಿಪ್ರವಾಗಿ ಮುಂದೆ ಮಾಡಬೇಕಾದ ಕಾರ್ಯಗಳನ್ನು ಮಾಡು!" ಅನಂತರ ಪುನಃ ಸತ್ಪುರುಷರಿಂದ ಅರ್ಚಿತನಾದ ಯುಧಿಷ್ಠಿರನು ಸುಹೃದಯರೊಂದಿಗೆ ಆ ಮಹಾ ರಾಜ್ಯವನ್ನು ಪಡೆದುಕೊಂಡನು.

ಪ್ರಜೆಗಳ ದೇಶ-ಕಾಲೋಚಿತವಾದ ಆ ಮಾತುಗಳನ್ನು ಕೇಳಿ ರಾಜಾ ಯುಧಿಷ್ಠಿರನು ಉತ್ತರಪೂರ್ವಕವಾಗಿ ಈ ಮಾತನ್ನಾಡಿದನು:

> "ಇಲ್ಲಿ ಸೇರಿರುವ ಬ್ರಾಹ್ಮಣಪುಂಗವರು ನಮ್ಮಲ್ಲಿರುವ ಗುಣಾವಗುಣಗಳನ್ನು ಗಮನಿಸದೇ ಕೇವಲ ಪ್ರೀತಿಯಿಂದ

ನಮ್ಮನ್ನು ಗುಣವಂತರೆಂದೇ ಪ್ರಶಂಸಿಸಿರುವುದರಿಂದ ಈ ಲೋಕದಲ್ಲಿ ಪಾಂಡುಪುತ್ರರಾದ ನಾವೇ ಧನ್ಯರು! ನಾವು ನಿಮ್ಮೆಲ್ಲರ ಅನುಗ್ರಹಕ್ಕೆ ಪಾತ್ರರಾಗಿದ್ದೇವೆಂದು ನನ್ನ ಅಭಿಪ್ರಾಯವಾಗಿದೆ. ಅಸೂಯಾರಹಿತರಾದ ನೀವು ನಮ್ಮನ್ನು ಗುಣಸಂಪನ್ನರೆಂದು ಹೇಳಿದ್ದೀರಿ. ಮಹಾರಾಜ ಧೃತರಾಷ್ಟ್ರನು ನನ್ನ ಪಿತನೂ ಪರಮ ದೈವವೂ ಆಗಿದ್ದಾನೆ. ನನಗೆ ಪ್ರಿಯವನ್ನುಂಟುಮಾಡಲು ಅಪೇಕ್ಷಿಸುವವರು ಅವನ ಶಾಸನದಂತೆಯೇ ನಡೆದುಕೊಳ್ಳಬೇಕು. ಈ ಮಹಾ ಜ್ಞಾತಿವಧೆಯನ್ನು ಮಾಡಿ ನಾನು ಅವನ ಸಲುವಾಗಿಯೇ ಜೀವಿಸಿರುತ್ತೇನೆ. ಆಲಸನಾಗಿರದೇ ನಿತ್ಯವೂ ಇವನ ಶುಶ್ರೂಷಣೆಯನ್ನು ಮಾಡುವುದೇ ನನ್ನ ಕಾರ್ಯವಾಗಿದೆ. ನಾನು ಸುಹೃದಯರಾದ ನಿಮ್ಮ ಅನುಗ್ರಹಕ್ಕೆ ಪಾತ್ರನಾಗಿರುವುದೇ ಆದರೆ ಧೃತರಾಷ್ಟ್ರನ ವಿಷಯದಲ್ಲಿ ನೀವು ಹಿಂದೆ ಹೇಗೆ ನಡೆದುಕೊಳ್ಳುತ್ತಿದ್ದರೋ ಈಗಲೂ ಹಾಗೆಯೇ ನಡೆದುಕೊಳ್ಳಬೇಕಾಗಿದೆ. ನನಗು, ನಿಮಗೂ ಮತ್ತು ಈ ಜಗತ್ತಿಗೂ ಇವನೇ ಒಡೆಯನು. ಈ ಇಡೀ ಪೃಥ್ವಿ, ಪಾಂಡವರೆಲ್ಲರೂ ಮತ್ತು ನೀವೂ ಇದನ್ನು

ಮನಸ್ಸಿನಲ್ಲಿಟ್ಟುಕೊಂಡು ನಡೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ.”

ಕುರುನಂದನನು ರಾಜರನ್ನು ಮತ್ತು ಪೌರಜನಪದದ ಎಲ್ಲರನ್ನೂ ಇಷ್ಟಬಂದಂತೆ ಹೋಗಬಹುದೆಂದು ಅನುಮತಿಯನ್ನಿತ್ತನು.

ಕೌರವ್ಯನು ಭೀಮಸೇನನನ್ನು ಯುವರಾಜನನ್ನಾಗಿ ನಿಯಮಿಸಿಕೊಂಡನು. ಗುಪ್ತಸಲಹೆಗಳಿಗೆ ಮತ್ತು ನಿರ್ಧಾರಗಳಿಗೆ ಮತ್ತು ಆರುಗುಣಗಳ ವಿಷಯವಾಗಿ ಸಮಾಲೋಚಿಸಲು ಪ್ರೀತಿಪಾತ್ರನಾದ ಬುದ್ಧಿಸಂಪನ್ನನಾದ ವಿದುರನನ್ನು ನಿಯಮಿಸಿಕೊಂಡನು. ಮಾಡಬೇಕಾದ ಮತ್ತು ಮಾಡಬಾರದ ಕಾರ್ಯಗಳ ಕುರಿತು ಪರಿಜ್ಞಾನವನ್ನು ನೀಡಲು ಹಾಗೆಯೇ ಆದಾಯ-ವೆಚ್ಚಗಳ ಕುರಿತು ಸಮಾಲೋಚಿಸಲು ವೃದ್ಧ-ಪ್ರಾಮಾಣಿಕ ಗುಣಗಳಿಂದ ಸಂಪನ್ನನಾದ ಸಂಜಯನನ್ನು ನಿಯೋಜಿಸಿದನು. ಬಲದ ಅಳತೆಗೂ, ಭತ್ಯ-ವೇತನಗ ವಿತರಣೆಗೂ ಮತ್ತು ಕಾರ್ಮಿಕರ ಮೇಲ್ವಿಚಾರಣೆಗೂ ರಾಜನು ನಕುಲನನ್ನು ನಿಯಮಿಸಿಕೊಂಡನು. ಶತ್ರುಗಳ ಆಕ್ರಮಣಕ್ಕೂ ದರ್ಪದಲ್ಲಿರುವವರನ್ನು ಮರ್ದಿಸುವುದಕ್ಕೂ ಮಹಾರಾಜ ಯುಧಿಷ್ಠಿರನು ಫಲ್ಗುನನನ್ನು ನಿಯೋಜಿಸಿದನು. ದ್ವಿಜರ ವೇದಕಾರ್ಯಗಳಿಗೆ ಮತ್ತು ಅನ್ಯ ಕಾರ್ಯಗಳಿಗೆ ಪುರೋಹಿತ

ಧೌಮ್ಯನನ್ನು ಆ ಪರಂತಪನು ನಿಯಮಿಸಿಕೊಂಡನು. ನೃಪತಿಯು ಸಹದೇವನನ್ನು ನಿತ್ಯವೂ ಸಮೀಪದಲ್ಲಿರುವ ಮತ್ತು ತನ್ನನ್ನು ರಕ್ಷಿಸುವ ಕಾರ್ಯವನ್ನು ವಹಿಸಿದನು. ಅನಂತರ ಪ್ರಸನ್ನಚಿತ್ತನಾದ ಮಹೀಪತಿಯು ಯಾರ್ಯಾರು ಯಾವ್ಯಾವ ಕರ್ಮಗಳಲ್ಲಿ ಸಮರ್ಥರೆಂದು ತಿಳಿದು ಅದರಂತೆಯೇ ಕಾರ್ಯಗಳನ್ನು ವಹಿಸಿಕೊಟ್ಟನು.

ಪರವೀರಘ್ನ ಧರ್ಮಾತ್ಮಾ ಧರ್ಮವತ್ಸಲ ಯುಧಿಷ್ಠಿರನು ವಿದುರ-ಸಂಜಯ ಮತ್ತು ಮಹಾಮತಿ ಯುಯುತ್ಸುವಿಗೆ ಈ ರೀತಿ ಹೇಳಿದನು:

> "ಬೆಳಗಾದೊಡನೆಯೇ ಎದ್ದು ಈ ನನ್ನ ತಂದೆ ರಾಜನ ಕಾರ್ಯವೆಲ್ಲವನ್ನೂ ಯಥಾವತ್ತಾಗಿ ಮಾಡಿಕೊಡಬೇಕಾಗಿರುವುದು ನಿಮ್ಮೆಲ್ಲರ ಕರ್ತವ್ಯವಾಗಿರುತ್ತದೆ. ಪೌರ-ಜನಪದರ ಎಲ್ಲ ಕಾರ್ಯಗಳನ್ನೂ ರಾಜನ ಅಪ್ಪಣೆಯಂತೆ ನಿತ್ಯವೂ ಪೂರ್ಣಗೊಳಿಸುವುದೂ ನಿಮ್ಮ ಕರ್ತವ್ಯವಾಗಿರುತ್ತದೆ."

ಅನಂತರ ಉದಾರಮತಿ ರಾಜಾ ಯುಧಿಷ್ಠಿರನು ಯುದ್ಧದಲ್ಲಿ ಹತರಾದ ಜ್ಞಾತಿ-ಬಾಂಧವರಿಗೆ ಪ್ರತ್ಯೇಕ-ಪ್ರತ್ಯೇಕವಾಗಿ ಶ್ರಾದ್ಧಗಳನ್ನು ಮಾಡಿಸಿದನು. ಮಹಾಯಶಸ್ವೀ ರಾಜಾ ಧೃತರಾಷ್ಟ್ರನು ತನ್ನ ಮಕ್ಕಳ

ದೇಹಾವಸಾನದ ನಂತರದ ಕರ್ಮಗಳನ್ನು ಮಾಡಿ ಸರ್ವಕಾಮಗುಣೋಪೇತ ಅನ್ನ, ಗೋವುಗಳು, ಧನ, ವಿಚಿತ್ರ ಬೆಲೆಬಾಳುವ ರತ್ನಗಳನ್ನಿತ್ತು ನೆರವೇರಿಸಿದನು. ಯುಧಿಷ್ಠಿರನು ದ್ರೌಪದಿ ಸಮೇತನಾಗಿ ಮಹಾತ್ಮ ದ್ರೋಣ, ಧೃಷ್ಟದ್ಯುಮ್ನ, ಅಭಿಮನ್ಯು, ರಾಕ್ಷಸ ಹೈಡಿಂಬಿ, ವಿರಾಟನೇ ಮೊದಲಾದ ಸುಹೃದಯ-ಉಪಕಾರಿಗಳ, ದ್ರುಪದ-ದ್ರೌಪದೇಯರಿಗೂ ಒಬ್ಬೊಬ್ಬರನ್ನೂ ಉದ್ದೇಶಿಸಿ ಸಹಸ್ರಾರು ಬ್ರಾಹ್ಮಣರಿಗೆ ಧನ-ವಸ್ತ್ರ-ರತ್ನ-ಗೋವುಗಳನ್ನಿತ್ತು ತರ್ಪಣಗಳನ್ನಿತ್ತನು. ಸುಹೃಜ್ಜನರು ಯಾರೂ ಇಲ್ಲದಿದ್ದ ಇನ್ನೂ ಅನ್ಯ ಪೃಥಿವೀಪಾಲರನ್ನು ಉದ್ದೇಶಿಸಿ ಅವರ ಔರ್ಧ್ವದೈಹಿಕ ಕರ್ಮಗಳನ್ನೂ ಮಾಡಿದನು. ಆ ಪಾಂಡವನು ಸಭೆಗಳನ್ನೂ, ಅರವಟ್ಟಿಗೆಗಳನ್ನೂ, ವಿವಿಧ ತಟಾಕಗಳನ್ನೂ ನಿರ್ಮಿಸಿ ಸರ್ವ ಸುಹೃದಯರ ಶ್ರಾದ್ಧಕರ್ಮಗಳನ್ನು ನೆರವೇರಿಸಿದನು. ಅವರ ಋಣಗಳಿಂದ ಮುಕ್ತನಾಗಿ, ಯಾರ ಆಕ್ಷೇಪ-ನಿಂದೆಗಳಿಗೂ ಒಳಗಾಗದೇ ಧರ್ಮದಿಂದ ಪ್ರಜೆಗಳನ್ನು ಪಾಲಿಸಿ ರಾಜನು ಕೃತಕೃತ್ಯನಾದನು. ಹಿಂದಿನಂತೆ ಧೃತರಾಷ್ಟ್ರ, ಗಾಂಧಾರೀ, ವಿದುರ, ಕೌರವರ ಸರ್ವ ಅಮಾತ್ಯರನ್ನೂ ಸೇವಕರನ್ನೂ ಸಮನಾಗಿ ಪೂಜಿಸಿದನು. ವೀರಪತಿಗಳನ್ನು ಮತ್ತು ಮಕ್ಕಳನ್ನು ಕಳೆದುಕೊಂಡಿದ್ದ ಸ್ತ್ರೀಯರೆಲ್ಲರನ್ನೂ ದಯಾಪರ ಕೌರವ ರಾಜನು ಗೌರವಿಸಿ ಪಾಲಿಸಿದನು.

ರಾಜಾ ಪ್ರಭುವು ದೀನರನ್ನೂ, ಅಂಧ-ಕೃಪಣರನ್ನೂ ಮನೆ-ವಸ್ತ್ರ-ಬೋಜನಗಳಿಂದ ಕೃಪದೋರಿಸಿ ಅನುಗ್ರಹಿಸಿದನು. ಅಖಂಡ ಭೂಮಂಡಲವನ್ನೂ ಜಯಿಸಿ, ವೈರಿಗಳ ಋಣಗಳಿಂದಲೂ ಮುಕ್ತನಾಗಿ, ಶತ್ರುರಹಿತನಾದ ರಾಜಾ ಯುಧಿಷ್ಠಿರನು ಸುಖಿಯಾಗಿ ವಿಹರಿಸತೊಡಗಿದನು.

## ಕೃಷ್ಣನಾಮಶತಸ್ತುತಿ

ರಾಜ್ಯವನ್ನು ಪಡೆದು ಅಭಿಷಿಕ್ತನಾದ ಮಹಾಪ್ರಾಜ್ಞ ಯುಧಿಷ್ಠಿರನು ಶುಚಿಯಾಗಿ ಕೈಮುಗಿದು ದಾಶಾರ್ಹ ಪುಂಡರೀಕಾಕ್ಷನಿಗೆ ಹೇಳಿದನು:

> “ಕೃಷ್ಣ! ಯದುಶಾರ್ದೂಲ! ನಿನ್ನ ಪ್ರಸಾದದಿಂದ, ನೀತಿ-ಬಲಗಳಿಂದ, ಬುದ್ಧಿ-ವಿಕ್ರಮಗಳಿಂದ ನಾನು ಪಿತೃ-ಪಿತಾಮಹರ ಈ ರಾಜ್ಯವನ್ನು ಪುನಃ ಪಡೆದುಕೊಂಡಿದ್ದೇನೆ. ಪುಂಡರೀಕಾಕ್ಷ! ಅರಿಂದಮ! ಪುನಃ ಪುನಃ ನಿನಗೆ ನಮಸ್ಕರಿಸುತ್ತೇನೆ. ನಿನ್ನನ್ನು ಏಕನೆಂದೂ, ಪುರುಷನೆಂದೂ, ಸಾತ್ವತರ ಪತಿಯೆಂದೂ ಪರಮರುಷಿಗಳು ಅನೇಕ ನಾಮಗಳಿಂದ ಬಹುವಿಧಗಳಲ್ಲಿ ಸ್ತುತಿಸುತ್ತಾರೆ! ವಿಶ್ವಕರ್ಮ! ವಿಶ್ವಾತ್ಮನ್! ವಿಶ್ವಸಂಭವ! ವಿಷ್ಣು! ಜಿಷ್ಣು! ಹರಿ! ಕೃಷ್ಣ!

ವೈಕುಂಠ! ಪುರುಷೋತ್ತಮ! ನಿನಗೆ ನಮಸ್ಕಾರ! ಹಿಂದೆ ನೀನು ಏಳು ಬಾರಿ ಅದಿತಿಯ ಗರ್ಭದಲ್ಲಿ ಅವತರಿಸಿದೆ! ನೀನೊಬ್ಬನೇ ಪೃಶ್ನಿಗರ್ಭನೆಂದು ಕರೆಯಿಸಿಕೊಂಡಿರುವೆ! ತ್ರಿಯುಗನೆಂದೂ ನಿನ್ನನ್ನು ಕರೆಯುತ್ತಾರೆ! ನಿನ್ನನ್ನು ಶುಚಿಶ್ರವ, ಹೃಷೀಕೇಶ, ಘೃತಾರ್ಚಿ, ಹಂಸ ಎಂದು ಕರೆಯುತ್ತಾರೆ. ಮುಕ್ಕಣ್ಣ ಶಂಭು ಮತ್ತು ನೀನು ಒಂದೇ ಆಗಿರುವಿರಿ! ನೀನು ವಿಭು ಮತ್ತು ದಾಮೋದರ! ನೀನೇ ವರಾಹ, ಅಗ್ನಿ, ಬೃಹದ್ಭಾನು, ವೃಷಣ, ತಾರ್ಕ್ಷ್ಯಲಕ್ಷಣ, ಅನೀಕಸಾಹ, ಪುರುಷ, ಶಿಪಿವಿಷ್ಟ, ಉರುಕ್ರಮ, ವಾಚಿಷ್ಠ, ಉಗ್ರ, ಸೇನಾನೀ, ಸತ್ಯ, ವಾಜಸನಿ, ಗುಹ, ಅಚ್ಯುತ, ಅರಿಗಳ ವಿನಾಶಕ, ಸಂಕೃತಿ, ವಿಕೃತಿ, ವೃಷ, ಕೃತವರ್ತ್ಮಾ, ಅದ್ರಿ, ವೃಷಗರ್ಭ, ವೃಷಾಕಪಿ, ಸಿಂಧುಕ್ಷಿದೂರ್ಮಿ, ತ್ರಿಕಕು, ತ್ರಿಧಾಮ, ತ್ರಿವೃದಚ್ಯುತ! ನೀನೇ ಸಾಮ್ರಾಟ, ವಿರಾಟ, ಸ್ವರಾಟ, ಮತ್ತು ಸುರರಾಜ! ನೀನೇ ಧರ್ಮದ, ಭವ, ವಿಭು, ಭೂ, ಅಭಿಭು. ಕೃಷ್ಣ, ಕೃಷ್ಣವರ್ತ್ಮಾ! ನಿನ್ನನ್ನು ಸ್ವಿಷ್ಟಕೃತುವೆಂದೂ, ಭಿಷಗಾವರ್ತನೆಂದೂ, ಕಪಿಲ, ವಾಮನ, ಯಜ್ಞ, ಧ್ರುವ, ಪತಂಗ, ಮತ್ತು ಜಯತ್ಸೇನನೆಂದೂ ಕರೆಯುತ್ತಾರೆ. ನಿನ್ನನ್ನು ಶಿಖಂಡೀ, ನಹುಷ, ಬಭ್ರು, ದಿವಸ್ಪೃಕ್,

ಪುನರ್ವಸು, ಸುಬಭ್ರು, ಸುಷೇಣ, ದುಂದುಭಿ, ಗಭಸ್ತಿನೇಮಿ, ಶ್ರೀಪದ್ಮ, ಪುಷ್ಕರ, ಪುಷ್ಪಧಾರೀ, ಋಭು, ವಿಭು, ಸರ್ವಸೂಕ್ಷ್ಮ, ಸಾವಿತ್ರ ಎಂದೂ ಕರೆಯುತ್ತಾರೆ. ನೀನು ಅಂಭೋನಿಧಿಯು. ನೀನು ಬ್ರಹ್ಮ, ಪವಿತ್ರ ಧಾಮ ಮತ್ತು ಧನ್ವ. ಕೇಶವ! ನಿನ್ನನ್ನು ಹಿರಣ್ಯಗರ್ಭನೆಂದೂ, ಸ್ವಧಾ ಮತ್ತು ಸ್ವಾಹಾ ಎಂದೂ ಕರೆಯುತ್ತಾರೆ. ಕೃಷ್ಣ! ಯಾವುದರ ಯೋನಿ ಮತ್ತು ಪ್ರಲಯನೂ ನೀನಾಗಿರುವೆಯೋ ಆ ವಿಶ್ವವನ್ನು ಮೊದಲು ನೀನೇ ಸೃಷ್ಟಿಸುವೆ. ವಿಶ್ವಯೋನೇ! ಈ ವಿಶ್ವವು ನಿನ್ನದೇ ವಶದಲ್ಲಿದ್ದೆ. ಶಾರ್ಙ್ಗ-ಚಕ್ರ-ಖಡ್ಗಪಾಣಿಯೇ! ನಿನಗೆ ನಮಸ್ಕಾರವು!”

ಸಭಾಮಧ್ಯದಲ್ಲಿ ಧರ್ಮರಾಜನು ಹೀಗೆ ಸ್ತುತಿಸಲು ಪ್ರಸನ್ನನಾದ ಯಾದವಾಗ್ರ್ಯ ಪುಷ್ಕರಾಕ್ಷ ಕೃಷ್ಣನು ಜ್ಯೇಷ್ಠ ಪಾಂಡವ ಭಾರತನನ್ನು ಉತ್ತಮ ಮಾತುಗಳಿಂದ ಅಭಿನಂದಿಸಿದನು.

ಅನಂತರ ನೃಪನು ಪ್ರಜೆಗಳೆಲ್ಲರನ್ನೂ ಬೀಳ್ಕೊಟ್ಟನು. ಅವನ ಅಪ್ಪಣೆಪಡೆದು ಅವರು ತಮ್ಮ ತಮ್ಮ ಮನೆಗಳಿಗೆ ಹೋದರು. ರಾಜಾ ಯುಧಿಷ್ಠಿರನು ಭೀಮಪರಾಕ್ರಮಿ ಭೀಮನನ್ನು ಸಂತವಿಸುತ್ತಾ ಅರ್ಜುನ ಮತ್ತು ಯಮಳರಿಗೆ ಹೇಳಿದನು:

> “ಮಹಾರಣದಲ್ಲಿ ಶತ್ರುಗಳ ವಿವಿಧ ಶಸ್ತ್ರಗಳಿಂದ ನಿಮ್ಮ ಶರೀರಗಳು ಗಾಯಗೊಂಡಿವೆ. ಶೋಕ-ಕ್ರೋಧಗಳಿಂದ ತಪಿಸಿ ಬಳಲಿದ್ದೀರಿ. ಪುರುಷೋತ್ತಮರಾದ ನೀವು ನನ್ನಿಂದಾಗಿ ಅರಣ್ಯದಲ್ಲಿ, ಭಾಗ್ಯಹೀನರಂತೆ ವಾಸಿಸಿ ದುಃಖಗಳನ್ನು ಅನುಭವಿಸಿದಿರಿ. ಯಥಾಸುಖವಾಗಿ ಯಥೇಚ್ಛೆಯಿಂದ ಈ ಜಯವನ್ನು ಅನಂದಿಸಿರಿ! ಸಂಪೂರ್ಣ ವಿಶ್ರಾಂತಿಯನ್ನು ಪಡೆದು ಸ್ವಸ್ಥಚಿತ್ತರಾದನಂತರ ನಾಳೆ ಪುನಃ ನಿಮ್ಮೊಡನೆ ಸೇರುತ್ತೇನೆ.”

ಅನಂತರ ಧೃತರಾಷ್ಟ್ರನ ಅನುಮತಿಯನ್ನು ಪಡೆದು ಅವನು ಪ್ರಾಸಾದಗಳಿಂದ ಶೋಭಿಸುತ್ತಿದ್ದ, ಅನೇಕ ರತ್ನಗಳಿಂದ ಕೂಡಿದ್ದ, ದಾಸೀ-ದಾಸರ ಗುಂಪುಗಳಿದ್ದ ದುರ್ಯೋಧನನ ಅರಮನೆಯನ್ನು ಸಹೋದರ ವೃಕೋದರನಿಗಿತ್ತನು. ಮಂದರವನ್ನು ಇಂದ್ರನು ಹೇಗೋ ಹಾಗೆ ಮಹಾಬಾಹು ಭೀಮಸೇನನು ಅದನ್ನು ಸ್ವೀಕರಿಸಿದನು. ದುರ್ಯೋಧನನ ಅರಮನೆಯಂತೆಯೇ ಪ್ರಾಸಾದಗಳ ಸಾಲುಗಳಿಂದ ಕೂಡಿದ್ದ, ಹೇಮತೋರಣಭೂಷಿತವಾದ, ದಾಸೀ-ದಾಸರಿಂದ ಸಂಪೂರ್ಣವಾಗಿದ್ದ, ಧನ-ಧಾನ್ಯಗಳಿಂದ ಸಮೃದ್ಧವಾಗಿದ್ದ ದುಃಶಾಸನನ ಅರಮನೆಯನ್ನು ರಾಜಶಾಸನದಂತೆ ಮಹಾಬಾಹು

ಅರ್ಜುನನು ಪಡೆದುಕೊಂಡನು. ದುಃಶಾಸನನ ಅರಮನೆಗಿಂತಲೂ ಶ್ರೇಷ್ಠವಾಗಿದ್ದ, ಕುಬೇರಭವನದಂತಿದ್ದ, ಮಣಿಹೇಮವಿಭೂಷಿತವಾಗಿದ್ದ ದುರ್ಮರ್ಷಣನ ಅರಮನೆಯನ್ನು ಮಹಾವನದಲ್ಲಿ ಅನೇಕ ಕಷ್ಟಗಳನ್ನನುಭವಿಸಿ, ಬಹುಮಾನಕ್ಕೆ ಯೋಗ್ಯನಾಗಿದ್ದ ನಕುಲನಿಗೆ ಧರ್ಮರಾಜ ಯುಧಿಷ್ಠಿರನು ಪ್ರೀತಿಯಿಂದ ಕೊಟ್ಟನು. ಕಾಂತಿಯುಕ್ತವಾಗಿದ್ದ, ಕನಕಭೂಷಿತ, ಪದ್ಮದಲಯಾತಕ್ಷೀ ಸ್ತ್ರೀಯರ ಶಯನಮಂದಿರಗಳಿಂದ ಸಂಪನ್ನವಾಗಿದ್ದ ದುರ್ಮುಖನ ಅಗ್ರ ಅರಮನೆಯನ್ನು ಯುಧಿಷ್ಠಿರನು ಸತತವೂ ಪ್ರಿಯಕಾರಣಿಯಾಗಿದ್ದ ಸಹದೇವನಿಗೆ ಕೊಟ್ಟನು. ಕೈಲಾಸವನ್ನು ಪಡೆದ ಕುಬೇರನಂತೆ ಆ ಅರಮನೆಯನ್ನು ಪಡೆದ ಸಹದೇವನು ಮುದಿತನಾದನು. ಯುಯುತ್ಸು, ವಿದುರ, ಮಹಾದ್ಯುತಿ ಸಂಜಯ, ಸುಧರ್ಮಾ ಮತ್ತು ಧೌಮ್ಯರು ತಾವು ಹಿಂದೆ ವಾಸಮಾಡುತ್ತಿದ್ದ ಮನೆಗಳಿಗೇ ತೆರಳಿದರು. ಸಾತ್ಯಕಿಯೊಂದಿಗೆ ಪುರುಷವ್ಯಾಘ್ರ ಶೌರಿಯು, ಗಿರಿಗುಹೆಯನ್ನು ಪ್ರವೇಶಿಸುವ ವ್ಯಾಘ್ರದಂತೆ, ಅರ್ಜುನನ ಅರಮನೆಯನ್ನು ಪ್ರವೇಶಿಸಿದನು. ಅಲ್ಲಿ ಭಕ್ಷಾನ್ನ ಪಾನೀಯಗಳಿಂದ ತೃಪ್ತರಾಗಿ, ಸುಖವಾಗಿ ರಾತ್ರಿಯನ್ನು ಕಳೆದು, ಸುಖಿಗಳಾಗಿಯೇ ಎಚ್ಚೆತ್ತು ರಾಜ ಯುಧಿಷ್ಠಿರನ ಬಳಿ ಹೋದರು.

ಮಹಾತೇಜಸ್ವಿ ಧರ್ಮರಾಜ ಯುಧಿಷ್ಠಿರನು ರಾಜ್ಯವನ್ನು ಪಡೆದು ನಾಲ್ಕು ವರ್ಣದವರೂ ತಮ್ಮ ತಮ್ಮ ಧರ್ಮಗಳಲ್ಲಿ ಯಥಾಯೋಗವಾಗಿ ಇರುವಂತೆ ವ್ಯವಸ್ಥೆಮಾಡಿದನು. ಪಾಂಡವನು ಸಾವಿರ ಮಹಾತ್ಮ ಸ್ನಾತಕ ಬ್ರಾಹ್ಮಣರಿಗೆ ಒಬ್ಬೊಬ್ಬರಿಗೂ ಒಂದೊಂದು ಸಾವಿರ ಸುವರ್ಣನಾಣ್ಯಗಳನ್ನು ದಾನಮಾಡಿದನು. ತನ್ನನ್ನೇ ಆಶ್ರಯಿಸಿ ಜೀವಿಸುತ್ತಿದ್ದ ಸೇವಕರನ್ನು, ಆಶ್ರಿತ ಅತಿಥಿಗಳನ್ನೂ, ದೀನ ಯಾಚಕರನ್ನೂ ಅವರಿಗೆ ಬೇಕಾದವುಗಳನ್ನಿತ್ತು ತೃಪ್ತಿಪಡಿಸಿದನು. ಪುರೋಹಿತ ಧೌಮ್ಯನಿಗೆ ಹತ್ತುಸಾವಿರ ಗೋವುಗಳನ್ನೂ, ಧನ, ಸುವರ್ಣ-ಬೆಳ್ಳಿಗಳ ವಸ್ತುಗಳನ್ನೂ, ವಿವಿಧ ವಸ್ತ್ರಗಳನ್ನೂ ದಾನಮಾಡಿದನು. ಕೃಪನಿಗೆ ಗುರುವೃತ್ತಿಯಿಂದ ವಿಶ್ರಾಂತಿಯನ್ನು ದೊರಕಿಸಿದನು. ಆ ಯತವ್ರತ ಧರ್ಮಾತ್ಮನು ವಿದುರನಿಗೂ ಗೌರವಿಸಿದನು. ಆ ದಾನಿಗಳಲ್ಲಿ ಶ್ರೇಷ್ಠನು ಆಶ್ರಿತ ಜನರೆಲ್ಲರನ್ನೂ ಭಕ್ಷ್ಯ-ಅನ್ನ-ಪಾನಗಳಿಂದ, ವಿವಿಧ ವಸ್ತ್ರಗಳಿಂದ, ಶಯನಾಸನಗಳಿಂದ ಸಂತೋಷಗೊಳಿಸಿದನು. ದೊರಕಿರುವುದರಿಂದ ಎಲ್ಲರನ್ನೂ ತೃಪ್ತಿಪಡಿಸಿ ರಾಜನು ಮಹಾಯಶಸ್ವಿ ಧಾರ್ತರಾಷ್ಟ್ರ ಯುಯುತ್ಸುವನ್ನೂ ಗೌರವಿಸಿದನು. ಆ ರಾಜ್ಯವನ್ನು ಧೃತರಾಷ್ಟ್ರನಿಗೂ, ಗಾಂಧಾರಿಗೂ ಮತ್ತು ವಿದುರನಿಗೂ ಸಮರ್ಪಿಸಿ ರಾಜಾ ಯುಧಿಷ್ಠಿರನು

ಸ್ವಸ್ಥಚಿತ್ತನಾದನು.

# ಕೃಷ್ಣನು ಯುಧಿಷ್ಠಿರನನ್ನು ಭೀಷ್ಮನ ಬಳಿ ಕರೆದುಕೊಂಡು ಹೋದುದು

ಹಾಗೆ ನಗರದಲ್ಲಿ ಸರ್ವರನ್ನೂ ಪ್ರಸನ್ನಗೊಳಿಸಿ ಮಹಾತ್ಮ ಯುಧಿಷ್ಠಿರನು ವಾಸುದೇವನ ಬಳಿಸಾರಿ, ಕೈಮುಗಿದು ನಮಸ್ಕರಿಸಿದನು. ಆಗ ಮಣಿಕಾಂಚನಭೂಷಿತ ಮಹಾ ಪರ್ಯಂಕದ ಮೇಲೆ ಮೋಡಗಳಿಂದ ಕೂಡಿದ ಮೇರು ಪರ್ವತದಂತೆ ನೀಲವರ್ಣದ ಕೃಷ್ಣನು ಕುಳಿತಿರುವುದನ್ನು ಅವನು ನೋಡಿದನು. ದಿವ್ಯಾಭರಣಗಳನ್ನು ಧರಿಸಿದ್ದ, ಹೊಂಬಣ್ಣದ ರೇಷ್ಮೆಯ ವಸ್ತ್ರವನ್ನುಟ್ಟಿದ್ದ, ಸುವರ್ಣದಿಂದ ಸಮಲಂಕೃತವಾದ ನೀಲಮಣಿಯಂತಿದ್ದ ಅವನ ದೇಹವು ಜಾಜ್ವಲ್ಯಮಾನವಾಗಿತ್ತು. ಉದಯಿಸುತ್ತಿರುವ ಸೂರ್ಯನು ಉದಯಾಚಲವನ್ನು ಪ್ರಕಾಶಗೊಳಿಸುವಂತೆ ಅವನ ವಕ್ಷಸ್ಥಳದಲ್ಲಿದ್ದ ಕೌಸ್ತುಭಮಣಿಯು ಕೃಷ್ಣನನ್ನು ಪ್ರಕಾಶಗೊಳಿಸುತ್ತಿತ್ತು. ಕಿರೀಟವನ್ನು ಧರಿಸಿದ್ದ ಅವನ ಸರಿಸಾಟಿಯಾದವರು ಮೂರು ಲೋಕಗಳಲ್ಲಿ ಯಾರೂ



ಇರಲಿಲ್ಲ! ಮಾನವ ಶರೀರಿಯಾಗಿದ್ದ ಮಹಾತ್ಮ ವಿಷ್ಣುವಿನ ಬಳಿಸಾರಿ ಯುಧಿಷ್ಠಿರನು ನಸುನಗುತ್ತಾ ಮಧುರಭಾಷೆಯಲ್ಲಿ ಇಂತೆಂದನು:

> “ಅಚ್ಯುತ! ರಾತ್ರಿಯನ್ನು ಸುಖವಾಗಿ ಕಳೆದೆಯೇ? ನಿನ್ನ ಎಲ್ಲ ಜ್ಞಾನೇಂದ್ರಿಯಗಳೂ ಪ್ರಸನ್ನವಾಗಿವೆಯಲ್ಲವೇ? ನಿನ್ನಲ್ಲಿರುವ ದೇವಿ ಬುದ್ಧಿಯನ್ನೇ ಆಶ್ರಯಿಸಿ ನಾವು ರಾಜ್ಯವನ್ನು ಪಡೆದೆವು ಮತ್ತು ಭೂಮಿಯು ನಮ್ಮ ವಶದಲ್ಲಿ ಬಂದಿದೆ. ಭಗವನ್! ನಿನ್ನ ಪ್ರಸಾದದಿಂದ ಜಯವನ್ನೂ ಯಶಸ್ಸನ್ನೂ ಪಡೆದುಕೊಂಡೆವು. ನಾವು ಧರ್ಮದಿಂದಲೂ ಚ್ಯುತರಾಗಲಿಲ್ಲ.”

ಹಾಗೆ ಮಾತನಾಡುತ್ತಿದ್ದ ಧರ್ಮರಾಜ ಯುಧಿಷ್ಠಿರನಿಗೆ ಏನನ್ನೂ ಹೇಳದೇ ಭಗವಾನನು ಯಾವುದೋ ಧ್ಯಾನದಲ್ಲಿ ಮಗ್ನನಾಗಿದ್ದನು. ಯುಧಿಷ್ಠಿರನು ಹೇಳಿದನು:

> “ಅಮಿತವಿಕ್ರಮ! ಪರಮಾಶ್ಚರ್ಯ! ನೀನು ಯಾರಕುರಿತು ಧ್ಯಾನಮಗ್ನನಾಗಿರುವೆ? ಮೂರು ಲೋಕಗಳೂ ಕುಶಲವಾಗಿವೆ ತಾನೆ? ನಾಲ್ಕನೆಯ ಧ್ಯಾನಮಾರ್ಗವನ್ನು ಆಶ್ರಯಿಸಿ ಅಪಕ್ರಾಂತನಾಗಿರುವ ನೀನು ನನ್ನ ಮನಸ್ಸನು

ವಿಸ್ಮಯಗೊಳಿಸಿರುವೆ! ಶರೀರದಲ್ಲಿ ಪಂಚಕರ್ಮಗಳನ್ನು ಮಾಡುವ ವಾಯುವನ್ನು ನೀನು ನಿಗ್ರಹಿಸಿರುವೆ. ನಿನ್ನ ಇಂದ್ರಿಯಗಳೆಲ್ಲವನ್ನೂ ಮನಸ್ಸಿನಲ್ಲಿ ಸ್ಥಾಪಿಸಿಕೊಂಡಿರುವೆ. ಇಂದ್ರಿಯಗಳು ಮತ್ತು ಮನಸ್ಸನ್ನು ಬುದ್ಧಿಯಲ್ಲಿ ಲೀನಗೊಳಿಸಿರುವೆ. ಸರ್ವಗಣಗಳೂ ನಿನ್ನ ಆತ್ಮನಲ್ಲಿ ಲೀನವಾಗಿವೆ. ನಿನ್ನ ರೋಮಗಳು ನಿಮಿರಿನಿಂತಿವೆ. ನಿನ್ನ ಮನಸ್ಸು-ಬುದ್ಧಿಗಳು ಸ್ಥಿರವಾಗಿವೆ. ಕಟ್ಟಿಗೆ, ಗೋಡೆ ಮತ್ತು ಶಿಲೆಗಳಂತೆ ನಿಶ್ಚೇಷ್ಟನಾಗಿರುವೆ! ಗಾಳಿಯಿಲ್ಲದ ಸ್ಥಳದಲ್ಲಿ ದೀಪವೂ ಆತ್ತಿತ್ತ ಅಗಲದೇ ಹೇಗೆ ಒಂದೇ ಸಮನೆ ಉರಿಯುತ್ತಿರುತ್ತದೆಯೋ ಹಾಗೆ ನೀನು ದೃಢನಿಶ್ಚಯನಾಗಿ ಶಿಲಾಮೂರ್ತಿಯಂತೆ ಕುಳಿತಿರುವೆ! ಈ ರಹಸ್ಯವನ್ನು ಕೇಳಲು ನಾನು ಅರ್ಹನಾಗಿದ್ದರೆ ನಮಸ್ಕರಿಸಿ ಕೇಳಿಕೊಳ್ಳುತ್ತಿರುವ ನನ್ನ ಈ ಸಂಶಯವನ್ನು ದೂರಮಾಡು! ನೀನೇ ಕರ್ತ, ನೀನೇ ವಿಕರ್ತ. ನಾಶಹೊಂದುವವನೂ ನೀನೇ. ಅವಿನಾಶಿಯಾಗಿರುವವನೂ ನೀನೇ. ಆದಿ-ಅಂತ್ಯಗಳಿಲ್ಲದವನೂ ನೀನೇ! ಭಕ್ತಿಯಿಂದ ನಿನಗೆ ಶರಣುಬಂದಿರುವ ಮತ್ತು ಶಿರಸಾ ನಮಸ್ಕರಿಸುತ್ತಿರುವ ನನಗೆ

ಈ ಧ್ಯಾನದ ತತ್ತ್ವವನ್ನು ಯಥಾವತ್ತಾಗಿ ಹೇಳು!”

ಆಗ ಭಗವಾನ್ ವಾಸವಾನುಜನು ಮನಸ್ಸು-ಬುದ್ಧಿ-ಇಂದ್ರಿಯಗಳನ್ನು ತಮ್ಮ ತಮ್ಮ ಸ್ಥಾನಗಳಲ್ಲಿ ಇರಿಸಿ ಮಂದಹಾಸಬೀರುತ್ತಾ ಈ ಮಾತನ್ನಾಡಿದನು:

“ಆರಿಹೋಗುತ್ತಿರುವ ಅಗ್ನಿಯಂತಿರುವ, ಶರತಲ್ಪದಲ್ಲಿ ಮಲಗಿರುವ ಪುರುಷವ್ಯಾಘ್ರ ಭೀಷ್ಮನು ನನ್ನನ್ನು ಧ್ಯಾನಿಸುತ್ತಿದ್ದಾನೆ. ಅವನಲ್ಲಿಯೇ ನನ್ನ ಮನಸ್ಸು ಹೋಗಿತ್ತು. ಮಿಂಚಿನಂತೆ ಹೊರಹೊಮ್ಮುತ್ತಿದ್ದ ಯಾರ ಧನುಸ್ಸಿನ ಟೇಂಕಾರವನ್ನು ದೇವರಾಜನೂ ಕೂಡ ಸಹಿಸಲಸಾಧ್ಯವಾಗಿತ್ತೋ ಆ ಭೀಷ್ಮನ ಕಡೆ ನನ್ನ ಮನಸ್ಸು ಹರಿದು ಹೋಗಿತ್ತು. ಹಿಂದೆ ಸಮಸ್ತ ರಾಜಮಂಡಲವನ್ನು ಪರಾಜಯಗೊಳಿಸಿ ಮೂವರು ಕನ್ಯೆಯರನ್ನು ಯಾರು ಕರೆದುಕೊಂಡು ಹೋಗಿದ್ದನೋ ಆ ಬೀಷ್ಮನ ಕಡೆ ನನ್ನ ಮನಸ್ಸು ಹರಿದು ಹೋಗಿತ್ತು. ಇಪ್ಪತ್ತು ಮೂರು ರಾತ್ರಿ ಭಾರ್ಗವನೊಂದಿಗೆ ಯಾರು ಯುದ್ಧಮಾಡಿದನೋ ಮತ್ತು ರಾಮನಿಂದ ಪರಾಜಯಗೊಳ್ಳಲಿಲ್ಲವೋ ಅವನ ಕಡೆ ನನ್ನ ಮನಸ್ಸು ಹರಿದು ಹೋಗಿತ್ತು. ನೃಪ! ಗಂಗೆಯು ಯಾರನ್ನು

ಗರ್ಭವಿಧಾನದಲ್ಲಿ ಧರಿಸಿದ್ದಳೂ ಆ ವಸಿಷ್ಠಶಿಷ್ಯ ಪಾರ್ಥಿವ ಭೀಷ್ಮನ ಕಡೆ ನನ್ನ ಮನಸ್ಸು ಹರಿದು ಹೋಗಿತ್ತು. ಮಹಾತೇಜಸ್ಸುಳ್ಳ ದಿವ್ಯಾಸ್ತ್ರಗಳನ್ನೂ ಅಂಗಗಳ ಸಹಿತ ನಾಲ್ಕು ವೇದಗಳನ್ನೂ ಧಾರಣೆಮಾಡಿಕೊಂಡಿರುವ ಆ ಬುದ್ಧಿಮಾನ್ ಭೀಷ್ಮನ ಕಡೆ ನನ್ನ ಮನಸ್ಸು ಹರಿದು ಹೋಗಿತ್ತು. ಜಾಮದಗ್ನ್ಯ ರಾಮನ ಪ್ರಿಯ ಶಿಷ್ಯ ಮತ್ತು ಸರ್ವ ವಿದ್ಯೆಗಳ ಆಧಾರ ಭೀಷ್ಮನ ಕಡೆ ನನ್ನ ಮನಸ್ಸು ಹರಿದು ಹೋಗಿತ್ತು. ಇಂದ್ರಿಯಸಮೂಹಗಳನ್ನು ಮನಸ್ಸಿನಲ್ಲಿ ಏಕೀಕರಿಸಿ, ಮನಸ್ಸನ್ನು ಬುದ್ಧಿಯಲ್ಲಿ ಲೀನಗೊಳಿಸಿ ನನ್ನಲ್ಲಿ ಶರಣುಬಂದಿರುವ ಬೀಷ್ಮನ ಕಡೆ ನನ್ನ ಮನಸ್ಸು ಹರಿದು ಹೋಗಿತ್ತು. ಭೂತ-ಭವ್ಯ-ಭವಿಷ್ಯತ್ತುಗಳನ್ನು ತಿಳಿದಿರುವ ಆ ಧರ್ಮಭೃತರಲ್ಲಿ ಶ್ರೇಷ್ಠ ಭೀಷ್ಮನ ಕಡೆ ನನ್ನ ಮನಸ್ಸು ಹರಿದು ಹೋಗಿತ್ತು. ಆ ಪುರುಷವ್ಯಾಘ್ರನು ತನ್ನ ಸತ್ಕರ್ಮಗಳ ಫಲವಾಗಿ ಸ್ವರ್ಗಕ್ಕೆ ಹೋಗಿಬಿಟ್ಟರೆ ಈ ಭೂಮಿಯು ಚಂದ್ರನಿಲ್ಲದ ರಾತ್ರಿಯಂತಾಗುತ್ತದೆ. ಆ ಭೀಮಪರಾಕ್ರಮಿ ಭೀಷ್ಮ ಗಾಂಗೇಯನ ಬಳಿಹೋಗಿ, ಅವನ ಪಾದಗಳನ್ನು ಹಿಡಿದು, ನಿನ್ನ ಮನಸ್ಸಿನಲ್ಲಿರುವ ಸಂದೇಹಗಳನ್ನು ಕೇಳು.

ಅವನನ್ನು ಕೇಳಿ ಚತುರ್ವೇದಗಳನ್ನೂ, ಚತುರ್ಹೋತ್ರಗಳನ್ನೂ, ಚತುರಾಶ್ರಮಗಳನ್ನೂ, ಚಾತುರ್ವರ್ಣ್ಯಗಳ ಧರ್ಮಗಳನ್ನೂ ಕೇಳಿ ತಿಳಿದುಕೋ! ಕೌರವರ ದುರಂಧರ ಆ ಭೀಷ್ಮನು ಅಸ್ತಂಗತನಾಗಲು ಸಕಲ ಜ್ಞಾನಗಳೂ ಅವನೊಡನೆ ಅಸ್ತಮಿಸಿಬಿಡುತ್ತವೆ. ಆದುದರಿಂದ ನಿನ್ನನ್ನು ನಾನು ಈ ರೀತಿ ಪ್ರಚೋದಿಸುತ್ತಿದ್ದೇನೆ.”

ವಾಸುದೇವನ ಆ ಅರ್ಥವತ್ತಾದ ಉತ್ತಮ ಮಾತನ್ನು ಕೇಳಿ, ಕಣ್ಣೀರಿನಿಂದ ಗಂಟಲು ಕಟ್ಟಿದ ಧರ್ಮಜ್ಞ ಯುಧಿಷ್ಠಿರನು ಜನಾರ್ದನನಿಗೆ ಹೇಳಿದನು:

“ಮಾಧವ! ಭೀಷ್ಮನ ಪ್ರಭಾವದ ಕುರಿತು ನೀನು ಏನು ಹೇಳಿದೆಯೋ ಅದರಲ್ಲಿ ನನಗೆ ಸ್ವಲ್ಪವೂ ಸಂದೇಹವಿಲ್ಲ. ಮಹಾಭಾಗ್ಯ ಮಹಾತ್ಮ ಭೀಷ್ಮನ ಪ್ರಭಾವದ ಕುರಿತು ಮಹಾತ್ಮ ಬ್ರಾಹ್ಮಣರು ಹೇಳುತ್ತಿದ್ದುದನ್ನು ನಾನು ಕೇಳಿದ್ದೇನೆ. ಲೋಕಗಳ ಕರ್ತೃವಾದ ನೀನೂ ಕೂಡ ಇದನ್ನೇ ಹೇಳುತ್ತಿರುವೆಯಾದರೆ ಅದರ ಕುರಿತು ಪುನಃ ಯೋಚಿಸಬೇಕಾದುದೇ ಇಲ್ಲ! ನಿನ್ನಲ್ಲಿ ನನಗೆ ಅನುಗ್ರಹಿಸುವ ಮನಸ್ಸಿದ್ದರೆ ನಿನ್ನನ್ನು ಮುಂದೆಮಾಡಿಕೊಂಡು ಭೀಷ್ಮನನ್ನು

ನೋಡಬೇಕೆಂದು ಮನಸ್ಸಾಗುತ್ತಿದೆ. ಭಗವಾನ್ ಸೂರ್ಯನು ಉತ್ತರಾಯಣಕ್ಕೆ ತಿರುಗಿದೊಡನೆಯೇ ಅವನು ಲೋಕಗಳಿಗೆ ಹೊರಟುಹೋಗುತ್ತಾನೆ. ಆದುದರಿಂದ ಆ ಕೌರವನು ನಿನ್ನ ದರ್ಶನಕ್ಕೆ ಅರ್ಹನಾಗಿದ್ದಾನೆ. ಇಂದು ಅವನಿಗೆ ಕ್ಷರಾಕ್ಷರ ದೇವ ನಿನ್ನ ದರ್ಶನದ ಲಾಭವಾಗಲಿ. ಏಕೆಂದರೆ ನೀನು ಬ್ರಹ್ಮಮಯನೂ ಜ್ಞಾನನಿಧಿಯೂ ಆಗಿರುವೆ!”

ಧರ್ಮರಾಜನ ಮಾತನ್ನು ಕೇಳಿದ ಮಧುಸೂದನನು ಪಕ್ಕದಲ್ಲಿಯೇ ನಿಂತಿದ್ದ ಸಾತ್ಯಕಿಗೆ ರಥವನ್ನು ಹೂಡಲು ಹೇಳಲು. ಸಾತ್ಯಕಿಯು ಕೇಶವನ ಸಮೀಪದಿಂದ ಹೋಗಿ ದಾರುಕನಿಗೆ ಕೃಷ್ಣನ ರಥವನ್ನು ಸಿದ್ಧಗೊಳಿಸುವಂತೆ ಹೇಳಿದನು. ಸಾತ್ಯಕಿಯ ಮಾತನ್ನು ಕೇಳಿದ ದಾರುಕನು ಕಾಂಚನಗಳಿಂದ ಭೂಷಿತವಾದ, ಮರಕತ-ಸೂರ್ಯಕಾಂತ-ಚಂದ್ರಕಾಂತ ಮಣಿಗಳ ಕಾಂತಿಯಿಂದ ಕೂಡಿದ್ದ, ಸುವರ್ಣದ ಪಟ್ಟಿಗಳನ್ನು ಸುತ್ತಿದ್ದ ಚಕ್ರಗಳಿದ್ದ, ಸೂರ್ಯಕಿರಣಗಳಂತೆ ಹೊಳೆಯುತ್ತಿದ್ದ, ವಿಚಿತ್ರವಾದ ನಾನಾ ಮಣಿರತ್ನಗಳಿಂದ ವಿಭೂಷಿತವಾಗಿದ್ದ, ಉದಯಿಸುತ್ತಿರುವ ಸೂರ್ಯನಂತೆ ಬೆಳಗುತ್ತಿದ್ದ, ವಿಚಿತ್ರ ಗರುಡಧ್ವಜ-ಪತಾಕೆಗಳುಳ್ಳ, ಅಂಗಾಂಗಳಲ್ಲಿ ಸುವರ್ಣಗಳಿಂದ ಅಲಂಕರಿಸಲ್ಪಟ್ಟ ಮನೋವೇಗದ ಸುಗ್ರೀವ-ಸೈನ್ಯಪ್ರಮುಖ ಶ್ರೇಷ್ಠ

ಅಶ್ವಗಳನ್ನು ಕಟ್ಟಿದ್ದ ರಥವನ್ನು ಸಿದ್ಧಪಡಿಸಿ ಬಂದು ಕೈಮುಗಿದು ಅಚ್ಯುತನಿಗೆ ನಿವೇದಿಸಿದನು.

## ಭೀಷ್ಮಸ್ತವರಾಜಃ

ದಿವಾಕರನು ಉತ್ತರಾಯಣಕ್ಕೆ ತಿರುಗಿದೊಡನೆಯೇ ಭೀಷ್ಮನು ಏಕಾಗ್ರಚಿತ್ತನಾಗಿ ತನ್ನ ಮನಸ್ಸನ್ನು ಬುದ್ಧಿಯೊಡನೆ ಮತ್ತು ಬುದ್ಧಿಯನ್ನು ಆತ್ಮನಲ್ಲಿ ಲೀನಗೊಳಿಸಿದನು. ನೂರಾರು ಬಾಣಗಳಿಂದ ಚುಚ್ಚಲ್ಪಟ್ಟ ಭೀಷ್ಮನು ಕಿರಣಗಳನ್ನು ಪಸರಿಸುವ ಸೂರ್ಯನಂತೆಯೂ; ವೇದಗಳನ್ನು ತಿಳಿದಿದ್ದ ವ್ಯಾಸ, ಸುರರ್ಷಿ ನಾರದ, ದೇವಸ್ಥಾನ, ವಾತ್ಸ್ಯ, ಅಶ್ಮಕ, ಸುಮಂತು ಮತ್ತು ಇನ್ನೂ ಅನೇಕ ಮಹಾತ್ಮ ಮಹಾಭಾಗ ಮುನಿಗಣಗಳು, ಶ್ರದ್ಧೆ-ಶಮೋಪೇತರಾದ ಬ್ರಾಹ್ಮಣಸತ್ತಮರಿಂದ ಸುತ್ತುವರೆಯಲ್ಪಟ್ಟು, ಗ್ರಹಗಳಿಂದ ಸುತ್ತುವರೆಯಲ್ಪಟ್ಟ ಚಂದ್ರನಂತೆ ಅಪಾರ ಕಾಂತಿಯಿಂದಲೂ ಪ್ರಕಾಶಿಸುತ್ತಿದ್ದನು. ಶರತಲ್ಪದಲ್ಲಿ ಮಲಗಿದ್ದ ಪುರುಷವ್ಯಾಘ್ರ ಭೀಷ್ಮನಾದರೋ ಕೈಮುಗಿದು ಕರ್ಮ-ಮನಸ್ಸು-ವಾಣಿಗಳ ಮೂಲಕ ಕೃಷ್ಣನನ್ನು ಧ್ಯಾನಿಸತೊಡಗಿದನು. ಅವನು ಪುಷ್ಟನಾದದ ಸ್ವರದಲ್ಲಿ ಮಧುಸೂದನ, ಯೋಗೇಶ್ವರ, ಪದ್ಮನಾಭ, ಜಿಷ್ಣು, ಜಗತ್ಪತಿ ವಿಷ್ಣುವನ್ನು ಸ್ತುತಿಸತೊಡಗಿದನು. ಶುಚಿಯಾಗಿ ಆ



ವಾಗ್ವಿದರಲ್ಲಿ ಶ್ರೇಷ್ಠ ಪರಮಧರ್ಮಾತ್ಮ ಭೀಷ್ಮನು ಪ್ರಭು ವಾಸುದೇವನನ್ನು ಈ ರೀತಿ ಸ್ತುತಿಸಿದನು:

> "ವಿವರವಾದ ಮತ್ತು ಸಂಕ್ಷೇಪವಾದ ಯಾವ ವಾಣಿಯಿಂದ ಕೃಷ್ಣನನ್ನು ಆರಾಧಿಸುವೆನೋ ಅದರಿಂದಲೇ ಆ ಪುರುಷೋತ್ತಮನು ಸುಪ್ರೀತನಾಗಲಿ! ಶುಚಿಯಾಗಿ ತತ್ಪರನಾಗಿ ನನ್ನ ಸರ್ವವನ್ನೂ ಆತ್ಮನಲ್ಲಿ ಯೋಜಿಸಿ ಆ

ಶುಚಿಷದ, ಹಂಸ, ಪರಮೇಷ್ಠಿ, ಪ್ರಜಾಪತಿಯನ್ನು ಶರಣುಹೋಗುತ್ತೇನೆ. ದಾರದಲ್ಲಿ ಪೋಣಿಸಲ್ಪಟ್ಟ ಮಣಿಗಳಂತೆ ವಿಶ್ವ-ಭೂತಗಳು ಯಾರಲ್ಲಿ ನೆಲೆಸಿ ಸೇರಿಕೊಂಡಿವೆಯೋ ಅವನನ್ನು; ಗಟ್ಟಿಯಾದ ದಾರದಿಂದ ಕಟ್ಟಲ್ಪಟ್ಟ ಹೂವಿನ ಮಾಲೆಯಂತೆ ಯಾರಲ್ಲಿ ಈ ವಿಶ್ವವೇ ದೃಢವಾಗಿ ನಿಂತಿರುವುದೋ ಆ ವಿಶ್ವಾಂಗ ವಿಶ್ವಕರ್ಮಿಯನ್ನು; ವಿಶ್ವಪರಾಯಣನೂ, ಸಹಸ್ರಶಿರಸ್ಸುಗಳುಳ್ಳವನ್ನೂ, ಸಹಸ್ರಚರಣಗಳುಳ್ಳವನನ್ನೂ, ಸಹಸ್ರಾಕ್ಷನನ್ನೂ, ಮತ್ತು ನಾರಾಯಣನೆಂದು ಕರೆಯಲ್ಪಡುವ ದೇವನನ್ನೂ; ಸೂಕ್ಷ್ಮಗಳಲ್ಲಿ ಸೂಕ್ಷ್ಮನೂ, ಸ್ಥೂಲಗಳಲ್ಲಿ ಸ್ಥೂಲನೂ, ಭಾರವಾದವುಗಳಿಗಿಂತ ಭಾರವಾದವನೂ, ಶ್ರೇಷ್ಠವಾದವುಗಳಲ್ಲಿ ಶ್ರೇಷ್ಠನೂ ಆಗಿರುವವನನ್ನು; ವಾಕ್, ಅನುವಾಕ್, ನಿಷತ್, ಉಪನಿಷತ್ತು ಮತ್ತು ಸತ್ಯ ಸಾಮಗಳಲ್ಲಿ ಯಾರನ್ನು ಸತ್ಯಕರ್ಮನೆಂದು ವರ್ಣಿಸುತ್ತಾರೋ ಅವನನ್ನು; ನಾಲ್ಕರಿಂದಾದ ಚತುರಾತ್ಮನನ್ನು, ಸತ್ಯದಲ್ಲಿ ನೆಲೆಸಿರುವ ಸಾತ್ವತರ ಒಡೆಯನನ್ನೂ, ದಿವ್ಯವೂ ಗುಹ್ಯವೂ ಆದ ಪರಮ

ನಾಮಗಳಿಂದ ಯಾರನ್ನು ಅರ್ಚಿಸುತ್ತಾರೋ ಆ ದೇವನನ್ನು; ಭೂಮಿಯಲ್ಲಿ ಬ್ರಹ್ಮಜ್ಞಾನವನ್ನ ರಕ್ಷಿಸಲು ಅರಣಿಯ ಮಂಥನದಿಂದ ಪ್ರಜ್ವಲಿಸವ ಅಗ್ನಿಯನ್ನು ಹುಟ್ಟಿಸುವಂತೆ ದೇವಕೀ ದೇವೀ ಮತ್ತು ವಸುದೇವರು ಹುಟ್ಟಿಸದರೋ ಆ ದೇವನನ್ನು; ಅನಂತವಾದ ಮೋಕ್ಷವನ್ನು ಬಯಸಿ, ಕಾಮನೆಗಳನ್ನು ತ್ಯಜಿಸಿ, ಅನನ್ಯಭಾವದಿಂದ ಆತ್ಮನಲ್ಲ ವ್ಯವಸ್ಥಿತನಾಗಿರವ ಯಾರನ್ನು ಕಾಣುತ್ತಾರೋ ಆ ಕಲ್ಮಷರಹಿತ ಗೋವಿಂದನನ್ನು; ಪುರಾಣಗಳಲ್ಲಿ ಪುರುಷನೆಂದು ಕರೆಯಲ್ಪಡುವವನ್ನೂ, ಯುಗಾದಿಗಳಲ್ಲಿ ಬ್ರಹ್ಮನೆಂದು ಕರೆಯಲ್ಪಡುವವನ್ನೂ, ಲಯಕಾಲಗಳಲ್ಲಿ ಸಂಕರ್ಷಣನೆಂದು ಕರೆಯಲ್ಪಡುವವನ್ನೂ ಆದ ಆ ಉಪಾಸ್ಯ ಕೃಷ್ಣನ ಉಪಾಸನೆಮಾಡುತ್ತೇನೆ. ಯಾರು ಇಂದ್ರ-ವಾಯುಗಳನ್ನೂ ಮೀರಿಸಿದ ಕಾರ್ಯಗಳನ್ನು ಮಾಡುವನೋ, ಯಾರ ತೇಜಸ್ಸು ಸೂರ್ಯನ ತೇಜಸ್ಸಿಗಿಂತಲೂ ಅಧಿಕವಾಗಿರುವುದೋ, ಇಂದ್ರಿಯ-ಮನಸ್ಸು-ಬುದ್ಧಿಗಳಿಗೂ ಯಾರು ಅತೀತನಾಗಿರುವನೋ ಆ ಪ್ರಜಾಪತಿಗೆ ಶರಣು

ಹೋಗುತ್ತೇನೆ.

ಯಾರನ್ನು ವಿಶ್ವಕರ್ತಾರನೆಂದೂ, ಜಗತ್ತಿನಲ್ಲಿರುವುಗಳಿಗೆ ಒಡೆಯನೆಂದೂ, ಜಗತ್ತಿನ ಅಧ್ಯಕ್ಷನೆಂದೂ ಕರೆಯುತ್ತಾರೋ ಆ ಅಕ್ಷರ ಪರಮಪದನಿಗೆ ನಮಸ್ಕಾರಗಳು. ಅದಿತಿಯ ಗರ್ಭದಲ್ಲಿ ಉದಿಸಿ ದೈತ್ಯರನ್ನು ನಾಶಪಡಿಸಿದ, ಒಬ್ಬನಾಗಿದ್ದರೂ ಹನ್ನೆರಡಾಗಿ ಜನಿಸಿದ, ಚಿನ್ನದ ಕಾಂತಿಯನ್ನು ಹೊಂದಿರುವ ಸೂರ್ಯಾತ್ಮನಿಗೆ ನಮಸ್ಕರಿಸುತ್ತೇನೆ.

ಶುಕ್ಲಪಕ್ಷಗಳಲ್ಲಿ ದೇವತೆಗಳನ್ನೂ ಕೃಷ್ಣಪಕ್ಷಗಳಲ್ಲಿ ಪಿತೃಗಳನ್ನೂ ಅಮೃತದಿಂದ ತೃಪ್ತಿಪಡಿಸುವ, ದ್ವಿಜಾತಿಯವರ ರಾಜ ಸೋಮಾತ್ಮನಿಗೆ ನಮಸ್ಕರಿಸುತ್ತೇನೆ.

ಮಹಾ ತಪಸ್ಸಿನ ಆಚೆ ಬೆಳಕಿನಿಂದ ಪ್ರಜ್ಜ್ವಲಿಸುತ್ತಿರುವ ಯಾವ ಪುರುಷನನ್ನು ತಿಳಿದು ಮೃತ್ಯುವನ್ನು ಅತಿಕ್ರಮಿಸಬಹುದೋ ಆ ಜ್ಞೇಯಾತ್ಮನಿಗೆ ನಮಸ್ಕರಿಸುತ್ತೇನೆ.

ಮಹಾ ಉಕ್ಥಯಜ್ಞದಲ್ಲಿ ಬೃಹಂತನೆಂದೂ, ಮಹಾಧ್ವರದಲ್ಲಿ ಅಗ್ನಿಯೆಂದೂ ಯಾರನ್ನು ವಿಪ್ರಸಂಘಗಳು ಹಾಡುತ್ತಾರೆಯೋ

ಆ ವೇದಾತ್ಮನಿಗೆ ನಮಸ್ಕರಿಸುತ್ತೇನೆ.

ಋಗ್ಯಜುಃಸಾಮಗಳನ್ನೇ ಆಶ್ರಯಿಸಿ, ಐದು ವಿಧದ ಹವಿಸ್ಸುಗಳನ್ನು ಹೊಂದಿರುವ, ಗಾಯತ್ರಿಯೇ ಮೊದಲಾದ ಐದು ಛಂದಸ್ಸುಗಳೇ ತಂತುಗಳಾಗಿರುವ ಯಜ್ಞವನ್ನು ಯಾರಕುರಿತು ಮಾಡುತ್ತಾರೆಯೋ ಆ ಯಜ್ಞಾತ್ಮನಿಗೆ ನಮಸ್ಕರಿಸುತ್ತೇನೆ.

ಯಜುಸ್ಸೆಂಬ ಹೆಸರನ್ನೂ, ಛಂಧಸ್ಸುಗಳೆಂಬ ಅಂಗಾಂಗಗಳನ್ನೂ, ಋಗ್ಯಜುಸ್ಸಾಮಾತ್ಮಿಕ ಯಜ್ಞವೆಂಬ ಶಿರಸ್ಸನ್ನೂ, ರಥಂತರ ಮತ್ತು ಬೃಹತ್ ಗಳನ್ನು ಪ್ರೀತಿವಾಕ್ಯಗಳನ್ನೂ ಹೊಂದಿರುವ ಸುಪರ್ಣ ಎನ್ನುವ ಸ್ತೋತ್ರಾತ್ಮನಿಗೆ ನಮಸ್ಕರಿಸುತ್ತೇನೆ.

ಪ್ರಜಾಪತಿಗಳ ಸಹಸ್ರವರ್ಷಪರ್ಯಂತದ ಯಜ್ಞದಲ್ಲಿ ಸುವರ್ಣಮಯ ರೆಕ್ಕೆಗಳ ಪಕ್ಷಿಯರೂಪವನ್ನು ಧರಿಸಿ ಪ್ರಕಟವಾದ ಆ ಋಷಿ ಹಂಸಾತ್ಮನಿಗೆ ನಮಸ್ಕರಿಸುತ್ತೇನೆ.

ಶ್ಲೋಕಪಾದಗಳ ಸಮೂಹಗಳೇ ಅವಯವಗಳಾಗಿರುವ,

ಪದಗಳ ಸಂಧಿಗಳೇ ಗಿಣ್ಣುಗಳಾಗಿರುವ, ಸ್ವರಾಕ್ಷರ-ವ್ಯಂಜನಗಳೇ ಅಲಂಕಾರಪ್ರಾಯವಾಗಿರುವ ದಿವ್ಯಾಕ್ಷರ ಎಂಬ ಹೆಸರಿನಿಂದ ಕರೆಯಲ್ಪಡುವ ವಾಗಾತ್ಮನಿಗೆ ನಮಸ್ಕರಿಸುತ್ತೇನೆ.

ಧರ್ಮಾರ್ಥವ್ಯವಹಾರಗಳೆಂಬ ಅಂಗಗಳಿಂದಲೂ, ಅಮೃತಯೋನಿ ಸತ್ಯದಿಂದಲೂ ಸತ್ಪುರುಷರು ಅಮರತ್ವವನ್ನು ಹೊಂದಲು ಸೇತುವೆಯನ್ನು ಕಲ್ಪಿಸಿಕೊಡುವ ಸತ್ಯಾತ್ಮನಿಗೆ ನಮಸ್ಕರಿಸುತ್ತೇನೆ.

ಪ್ರತ್ಯೇಕ ಧರ್ಮಾಚರಣೆಗಳುಳ್ಳವರು ಪ್ರತ್ಯೇಕ ಧರ್ಮಗಳ ಫಲವನ್ನು ಅಪೇಕ್ಷಿಸುವವರು ಯಾರನ್ನು ಪ್ರತ್ಯೇಕ ಧರ್ಮಗಳಿಂದ ಅರ್ಚಿಸುತ್ತಾರೋ ಆ ಧರ್ಮಾತ್ಮನಿಗೆ ನಮಸ್ಕರಿಸುತ್ತೇನೆ.

ವ್ಯಕ್ತವಾದವುಗಳಲ್ಲಿ ಅವ್ಯಕ್ತನಾಗಿರುವ ಅಥವಾ ಬುದ್ಧಿಯಲ್ಲಿರುವ ಯಾವ ಕ್ಷೇತ್ರಜ್ಞನನ್ನು ಮಹರ್ಷಿಗಳು ಹುಡುಕುತ್ತಾರೆಯೋ ಆ ಕ್ಷೇತ್ರಾತ್ಮನಿಗೆ ನಮಸ್ಕರಿಸುತ್ತೇನೆ.

ಹದಿನಾರು ಗುಣಗಳಿಂದ ಆವೃತನಾಗಿರುವ

ಹದಿನೇಳನೆಯದಾಗಿ ಆತ್ಮಾ ಎಂದು ಸಾಂಖ್ಯರು ಕರೆಯುವ ಆ ಆತ್ಮಸ್ಥ ಸಾಂಖ್ಯಾತ್ಮನಿಗೆ ನಮಸ್ಕರಿಸುತ್ತೇನೆ.

ನಿದ್ರೆಯಿಲ್ಲದೇ ಶ್ವಾಸಗಳನ್ನು ನಿಯಂತ್ರಿಸಿ ಇಂದ್ರಿಯಗಳನ್ನು ಸಂಯಮದಲ್ಲಿಟ್ಟುಕೊಂಡು ಸತ್ತ್ವದಲ್ಲಿಯೇ ನೆಲೆಸಿಕೊಂಡು ಮನಸ್ಸನ್ನ ಬುದ್ಧಯಲ್ಲಿ ಲೀನಗೊಳಿಸಿದ ಯೋಗಿಗಳು ಯಾವ ಜ್ಯೋತಿಯನ್ನು ಕಾಣುತ್ತಾರೋ ಆ ಯೋಗಾತ್ಮನಿಗೆ ನಮಸ್ಕರಿಸುತ್ತೇನೆ.

ಪುಣ್ಯ-ಪಾಪಗಳು ಕ್ಷಯಹೊಂದಿದ ನಂತರ ಪುನಃ ಹುಟ್ಟು-ಸಾವುಗಳ ಭಯವಿಲ್ಲದ ಶಾಂತ ಸಂನ್ಯಾಸಿಗಳು ಯಾರನ್ನು ಸೇರುತ್ತಾರೆಯೋ ಆ ಮೋಕ್ಷಾತ್ಮನಿಗೆ ನಮಸ್ಕರಿಸುತ್ತೇನೆ.

ಸಹಸ್ರಯುಗಗಳ ಅಂತ್ಯದಲ್ಲಿ ಧಗಧಗಿಸುವ ಜ್ವಾಲೆಗಳೊಂದಿಗೆ ಪ್ರಳಯಾಗ್ನಿಯ ರೂಪವನ್ನು ಹೊಂದಿ ಎಲ್ಲವನ್ನೂ ಭಕ್ಷಿಸುವ ಘೋರಾತ್ಮನಿಗೆ ನಮಸ್ಕರಿಸುತ್ತೇನೆ.

ಇರುವ ಎಲ್ಲವನ್ನೂ ಭಕ್ಷಿಸಿ ಜಗತ್ತನ್ನು ಜಲಮಯವನ್ನಾಗಿಸಿ ಅದರ ಮೇಲೆ ಬಾಲಕನಾಗಿ ಮಲಗುವ ಆ ಮಾಯಾತ್ಮನಿಗೆ

ನಮಸ್ಕರಿಸುತ್ತೇನೆ.

ನಾಲ್ಕು ಸಮುದ್ರಗಳನ್ನೂ ಒಂದುಗೂಡಿಸಿ ಹಾಸಿಗೆಯನ್ನಾಗಿಸಿಕೊಂಡು ಅದರ ಮೇಲೆ ಮಲಗುವ ಆ ಸಹಸ್ರಶಿರಸ, ಪುರುಷ, ಅಮಿತಾತ್ಮ, ಯೋಗನಿದ್ರಾತ್ಮನಿಗೆ ನಮಸ್ಕರಿಸುತ್ತೇನೆ.

ಹುಟ್ಟೇ ಇಲ್ಲದ ಮತ್ತು ಇಲ್ಲದಿರುವಂತೆ ಆಗದ ಯಾರ ಮೇಲೆ ಈ ವಿಶ್ವವು ಪ್ರತಿಷ್ಠಿತವಾಗಿದೆಯೋ ಆ ಪುಷ್ಕರ ಪುಷ್ಕರಾಕ್ಷ ಪದ್ಮಾತ್ಮನಿಗೆ ನಮಸ್ಕರಿಸುತ್ತೇನೆ.

ಯಾರ ಕೇಶರಾಶಿಗಳಲ್ಲಿ ಮೇಘಗಳಿವೆಯೋ, ಯಾರ ಸರ್ವಾಂಗಸಂಧಿಗಳಲ್ಲಿ ನದಿಗಳಿವೆಯೋ, ಮತ್ತು ಯಾರ ಹೊಟ್ಟೆಯಲ್ಲಿ ನಾಲ್ಕೂ ಸಮುದ್ರಗಳಿವೆಯೋ ಆ ತೋಯಾತ್ಮನಿಗೆ ನಮಸ್ಕರಿಸುತ್ತೇನೆ.

ಯಾರು ಯುಗಯುಗದಲ್ಲಿಯೂ ಯೋಗಮಾಯೆಯಿಂದ ಅವತರಿಸುವನೋ, ಮಾಸ-ಋತು-ಆಯನ-ಸಂವತ್ಸರಗಳು ಉರುಳಿದಂತೆ ಸೃಷ್ಟಿ-ಲಯಗಳನ್ನ ನಡೆಸುತ್ತಾನೋ ಆ

ಕಾಲಾತ್ಮನಿಗೆ ನಮಸ್ಕರಿಸುತ್ತೇನೆ.

ಯಾರಿಗೆ ಬ್ರಾಹ್ಮಣನೇ ಮುಖನಾಗಿರುವನೋ, ಸಮಸ್ತ ಕ್ಷತ್ರಿಯರೂ ಭುಜಗಳಾಗಿವೆಯೋ, ವೈಶ್ಯರು ಹೊಟ್ಟೆ-ತೊಡೆಗಳಾಗಿರುವರೋ ಮತ್ತು ಯಾರ ಪಾದಗಳಲ್ಲಿ ಶೂದ್ರರು ಆಶ್ರಿತರಾಗಿರುವರೋ ಆ ವರ್ಣಾತ್ಮನಿಗೆ ನಮಸ್ಕರಿಸುತ್ತೇನೆ.

ಯಾರಿಗೆ ಅಗ್ನಿಯು ಮುಖನಾಗಿರುವನೋ, ಸ್ವರ್ಗವು ತಲೆಯಾಗಿರುವುದೋ, ಆಕಾಶವು ನಾಭಿಯಾಗಿರುವುದೋ, ಭೂಮಿಯು ಪಾದಗಳಾಗಿರುವುದೋ, ಸೂರ್ಯನೇ ಕಣ್ಣಾಗಿರುವನೋ, ಮತ್ತು ದಿಕ್ಕುಗಳೇ ಕಿವಿಗಳಾಗಿರುವವೋ ಆ ಲೋಕಾತ್ಮನಿಗೆ ನಮಸ್ಕರಿಸುತ್ತೇನೆ.

ವೈಶೇಷಿಕ ಗುಣಗಳಿಂದ ಆಕರ್ಷಿತರಾಗಿ ವಿಷಯಸುಖಗಳಲ್ಲಿಯೇ ಇರುವವರನ್ನು ವಿಷಯಗಳಿಂದ ರಕ್ಷಿಸುವವನೆಂದು ಯಾರನ್ನು ಕರೆಯುತ್ತಾರೋ ಆ ಗೋಪ್ತ್ರಾತ್ಮನಿಗೆ ನಮಸ್ಕರಿಸುತ್ತೇನೆ.

ಅನ್ನ-ಪಾನಗಳೆಂಬ ಇಂಧನರೂಪನಾಗಿ ರಸ-ಪ್ರಾಣಗಳನ್ನು

ವೃದ್ಧಿಪಡಿಸುತ್ತಾ ಯಾರು ಪ್ರಾಣಿಗಳನ್ನು ಧರಿಸಿರುವನೋ ಆ ಪ್ರಾಣಾತ್ಮನಿಗೆ ನಮಸ್ಕರಿಸುತ್ತೇನೆ.

ಯಾರು ಕಾಲಾತೀತನಾಗಿ, ಯಜ್ಞಾತೀತನಾಗಿ, ಪರಕ್ಕಿಂತಲೂ ಅತ್ಯಂತ ಶ್ರೇಷ್ಠನಾಗಿ, ಆದ್ಯಂತರಹಿತನಾಗಿ, ವಿಶ್ವಕ್ಕೇ ಆದಿಭೂತನಾಗಿರುವನೋ ಆ ವಿಶ್ವಾತ್ಮನಿಗೆ ನಮಸ್ಕರಿಸುತ್ತೇನೆ.

ಯಾರು ಸೃಷ್ಟಿಪರಂಪರೆಯ ರಕ್ಷಣಾರ್ಥವಾಗಿ ಎಲ್ಲ ಪ್ರಾಣಿಗಳನ್ನೂ ಸ್ನೇಹಪಾಶಗಳ ಬಂಧನಗಳಿಂದ ವಿಮೋಹಗೊಳಿಸುತ್ತಾನೆಯೋ ಆ ಮೋಹಾತ್ಮನಿಗೆ ನಮಸ್ಕರಿಸುತ್ತೇನೆ.

ಈ ಆತ್ಮಜ್ಞಾನವು ಅನ್ನಮಯ-ಪ್ರಾಣಮಯ-ಮನೋಮಯ-ವಿಜ್ಞಾನಮಯ-ಆನಂದಮಯಗಳೆಂಬ ಐದು ಕೋಶಗಳಲ್ಲಿರುವುದೆನ್ನುವುದನ್ನು ತಿಳಿದು ಜ್ಞಾನಯೋಗದ ಮೂಲಕ ಯೋಗಿಗಳು ಯಾರನ್ನು ಸಾಕ್ಷಾತ್ಕರಿಸಿಕೊಳ್ಳುವರೋ ಆ ಜ್ಞಾನಾತ್ಮನಿಗೆ ನಮಸ್ಕರಿಸುತ್ತೇನೆ.

ಯಾರು ಅಳತೆಗೆ ವಿಷಯವಾಗದೇ ಇರುವ ಶರೀರವನ್ನು

ಹೊಂದಿರುವನೋ, ಯಾರ ಬುದ್ಧಿರೂಪೀ ಕಣ್ಣುಗಳು ಸರ್ವತ್ರ ವ್ಯಾಪಿಸಿರುವವೋ, ಯಾರಲ್ಲಿ ಅನಂತ ವಿಷಯಗಳ ಸಮಾವೇಶವಿರುವುದೋ, ಯಾರ ತುದಿಯನ್ನು ಕಾಣಲು ಸಾಧ್ಯವಿಲ್ಲವೋ ಆ ಚಿಂತ್ಯಾತ್ಮನಿಗೆ ನಮಸ್ಕರಿಸುತ್ತೇನೆ.

ಜಟೆಯನ್ನೂ-ದಂಡವನ್ನೂ ಧರಿಸಿರುವ, ಲಂಬೋದರ ಶರೀರೀ, ಯಾವಾಗಲೂ ಕಮಂಡಲುವನ್ನು ಹಿಡಿದಿರುವ ಬ್ರಹ್ಮಾತ್ಮನಿಗೆ ನಮಸ್ಕರಿಸುತ್ತೇನೆ.

ಶೂಲಿಯೂ, ತ್ರಿದಶೇಶನೂ, ತ್ರ್ಯಂಬಕನೂ, ಮಹಾತ್ಮನೂ, ಭಸ್ಮದಿಗ್ಧನೂ, ಊರ್ಧ್ವಲಿಂಗನೂ ಆದ ರುದ್ರಾತ್ಮನಿಗೆ ನಮಸ್ಕರಿಸುತ್ತೇನೆ.

ಪ್ರಾಣಿಗಳಲ್ಲಿ ಪಂಚಭೂತಾತ್ಮನಾಗಿರುವ, ಪ್ರಾಣಿಗಳ ಹುಟ್ಟು-ಸಾವುಗಳಿಗೆ ಕಾರಣನಾಗಿರುವ, ಯಾರಲ್ಲಿ ಕ್ರೋಧ-ದ್ರೋಹ-ಮೋಹಗಳಿಲ್ಲವೋ ಆ ಶಾಂತಾತ್ಮನಿಗೆ ನಮಸ್ಕರಿಸುತ್ತೇನೆ.

ಯಾರಲ್ಲಿ ಸರ್ವವೂ ಇರುವವೋ, ಯಾರಿಂದ ಈ ಎಲ್ಲವೂ ಸೃಷ್ಟಿಸಲ್ಪಟ್ಟಿರುವವೋ, ಯಾರು ಎಲ್ಲದರಲ್ಲಿಯೂ

ಇರುವನೋ, ಯಾರು ಎಲ್ಲ ಕಡೆಗಳಲ್ಲಿಯೂ ಇರುವನೋ ಆ ಸರ್ವಮಯನಾದ ಸರ್ವಾತ್ಮನಿಗೆ ನಮಸ್ಕರಿಸುತ್ತೇನೆ.

ವಿಶ್ವವನ್ನು ರಚಿಸಿರುವವನೇ! ವಿಶ್ವಾತ್ಮನೇ! ವಿಶ್ವಸಂಭವನೇ! ನಿನಗೆ ನಮಸ್ಕಾರ! ಪಂಚಭೂತಗಳಿಗೂ ಅತೀತನಾದ ನೀನು ಪ್ರಾಣಿಗಳಿಗೆ ಮೋಕ್ಷದಾಯಕನಾಗಿರುವೆ! ಮೂರುಲೋಕಗಳಲ್ಲಿಯೂ ವ್ಯಾಪಿಸಿರುವ ನಿನಗೆ ನಮಸ್ಕಾರ! ಈ ಮೂರು ಲೋಕಗಳ ಆಚೆಯೂ ಇರುವ ನಿನಗೆ ನಮಸ್ಕಾರ! ಎಲ್ಲದಿಕ್ಕುಗಳಲ್ಲಿಯೂ ವ್ಯಾಪಿಸಿರುವ ನಿನಗೆ ನಮಸ್ಕಾರ! ಸರ್ವರ ಪರಾಯಣನಾಗಿರುವ ನಿನಗೆ ನಮಸ್ಕಾರ! ಭಗವನ್ ವಿಷ್ಣೋ! ಲೋಕಗಳ ಉತ್ಪತ್ತಿ-ವಿನಾಶಗಳ ಕರ್ತನೇ! ನಿನಗೆ ನಮಸ್ಕಾರ! ಹೃಷೀಕೇಶ! ನೀನೇ ಸೃಷ್ಟಿಕರ್ತನೂ ಸಂಹಾರಕರ್ತನೂ ಆಗಿರುವ. ಯಾರಿಂದಲೂ ನಿನಗೆ ಪರಾಜಯವಿಲ್ಲ! ಮೂರು ಲೋಕಗಳಲ್ಲಿಯೂ ವ್ಯಾಪ್ತವಾಗಿರುವ ನಿನ್ನ ದಿವ್ಯತೆ ಭಾವಗಳನ್ನು ನಾನು ಕಾಣಲಾರೆನು. ಆದರೆ ತತ್ತ್ವದೃಷ್ಟಿಯಿಂದ ನಿನ್ನ ಸನಾತನ ರೂಪವನ್ನು ಕಾಣುತ್ತಿದ್ದೇನೆ.

ಆಕಾಶವು ನಿನ್ನ ಶಿರಸ್ಸಿನಿಂದ ವ್ಯಾಪ್ತವಾಗಿದೆ. ದೇವೀ ವಸುಂಧರೆಯು ನಿನ್ನ ಪಾದಗಳಿಂದ ವ್ಯಾಪ್ತಳಾಗಿದ್ದಾಳೆ. ಮೂರು ಲೋಕಗಳೂ ನಿನ್ನ ವಿಕ್ರಮದಿಂದ ವ್ಯಾಪ್ತವಾಗಿದೆ. ನೀನು ಸನಾತನ ಪುರುಷ! ಅಗಸೇ ಹೂವಿನ ಕಾಂತಿಯನ್ನು ಹೊಂದಿರುವ, ಪೀತವಾಸಸ, ಅಚ್ಯುತ ಗೋವಿಂದನನ್ನು ಯಾರು ನಮಸ್ಕರಿಸುತ್ತಾರೋ ಅವರಿಗೆ ಭಯವೆನ್ನುವುದೇ ತಿಳಿಯದು. ಸತ್ಯವು ಹೇಗೆ ವಿಷ್ಣುಮಯವಾಗಿರುವುದೋ, ಜಗತ್ತು ಹೇಗೆ ವಿಷ್ಣುಮಯವಾಗಿರುವುದೋ, ಸರ್ವವೂ ಹೇಗೆ ವಿಷ್ಣುಮಯವೇ ಆಗಿರುವುದೋ ಹಾಗೆ ಈ ಸತ್ಯದ ಪ್ರಭಾವದಿಂದ ನನ್ನ ಸಕಲ ಪಾಪಗಳೂ ನಾಶಹೊಂದಲಿ. ಸುರೋತ್ತಮ! ಪುಂಡರೀಕಾಕ್ಷ! ನಿನ್ನನ್ನೇ ಅನನ್ಯಶರಣನಾಗಿ ಶರಣುಹೊಂದಿರುವ ಭಕ್ತನಾದ ಅಭೀಷ್ಟ ಗತಿಯನ್ನು ಇಚ್ಛಿಸುತ್ತಿರುವ ನನಗೆ ಯಾವುದು ಶ್ರೇಯಸ್ಕರವೆನ್ನುವುದನ್ನು ನೀನೇ ಯೋಚಿಸಿ ನಿರ್ಧರಿಸು! ಈ ರೀತಿ ವಿದ್ಯೆ-ತಪಸ್ಸುಗಳಿಗೆ ಜನ್ಮಸ್ಥಾನನಾದ ಅಯೋನಿಜ ಭಗವಂತ ವಿಷ್ಣುವು ನನ್ನಿಂದ ಹೀಗೆ ಸ್ತುತಿಸಲ್ಪಟ್ಟು ದೇವ ಜನಾರ್ದನನು ನನ್ನಮೇಲೆ

ಪ್ರಸನ್ನನಾಗಲಿ!"

ಈ ಮಾತನ್ನು ಹೇಳಿ ಕೃಷ್ಣನಲ್ಲಿಯೇ ಮನಸ್ಸಿಟ್ಟು ಭೀಷ್ಮನು "ನಮಃ ಕೃಷ್ಣಾಯ!" ಎಂದು ಹೇಳಿ ಪ್ರಣಾಮ ಮಾಡಿದನು. ತನ್ನ ಯೋಗಬಲದಿಂದ ಭೀಷ್ಮನ ಭಕ್ತಿಯನ್ನು ತಿಳಿದುಕೊಂಡ ಮಾಧವ ಹರಿಯು ಅವನಿಗೆ ತ್ರಿಕಾಲದೃಷ್ಟಿಯ ದಿವ್ಯ ಜ್ಞಾನವನ್ನು ನೀಡಲು ಹೊರಟನು. ಭೀಷ್ಮನ ಸ್ತೋತ್ರವು ನಿಲ್ಲಲು ಸುತ್ತಲೂ ನೆರೆದಿದ್ದ ಬ್ರಹ್ಮವಾದಿಗಳು ಆನಂದಭಾಷ್ಪದಿಂದ ಕೂಡಿದವರಾಗಿ ಗದ್ಗದಧ್ವನಿಯಲ್ಲಿ ಭೀಷ್ಮನನ್ನು ಪ್ರಶಂಸಿಸಿದರು. ಕೇಶವ ಪುರುಷೋತ್ತಮನನ್ನು ಸ್ತುತಿಸುತ್ತಿದ್ದ ಆ ವಿಪ್ರಾಗ್ರ್ಯರು ಎಲ್ಲರೂ ಮೆಲ್ಲನೆ ಪುನಃ ಪುನಃ ಭೀಷ್ಮನನ್ನು ಪ್ರಶಂಸಿಸಿದರು.

ಭೀಷ್ಮನ ಭಕ್ತಿಯೋಗವನ್ನು ಅರಿತ ಪುರುಷೋತ್ತಮನು ಸಂಹೃಷ್ಟನಾಗಿ ತಕ್ಷಣವೇ ಮೇಲೆದ್ದು ರಥವನ್ನೇರಿ ಕುಳಿತುಕೊಂಡನು. ಕೇಶವ-ಸಾತ್ಯಕಿಯರು ಒಂದು ರಥದಲ್ಲಿ ಮತ್ತು ಇನ್ನೊಂದು ರಥದಲ್ಲಿ ಮಹಾತ್ಮ ಯುಧಿಷ್ಠಿರ-ಧನಂಜಯರು ಹೊರಟರು. ಭೀಮಸೇನ ಮತ್ತು ನಕುಲ-ಸಹದೇವರು ಒಂದೇ ರಥದಲ್ಲಿ ಕುಳಿತಿದ್ದರು. ಕೃಪ, ಯುಯುತ್ಸು, ಮತ್ತು ಸೂತ ಸಂಜಯರು ಇನ್ನೊಂದು ರಥದಲ್ಲಿದ್ದರು. ಆ ಪುರುಷರ್ಷಭರು

ನಗರಾಕಾರದ ರಥಗಳಲ್ಲಿ ಕುಳಿತು ರಥಚಕ್ರಗಳ ಘೋಷದಿಂದ ಭೂಮಿಯನ್ನೇ ನಡುಗಿಸುತ್ತಾ ಪ್ರಯಾಣಮಾಡಿದರು. ಆಗ ಪುರುಷೋತ್ತಮನು ಮಾರ್ಗದಲ್ಲಿ ಅನೇಕ ಬ್ರಾಹ್ಮಣರು ಸುಮನಸ್ಕರಾಗಿ ಸ್ತುತಿಸುತ್ತಿದ್ದುದನ್ನು ಕೇಳಿದನು. ಕೇಶಿಹಂತಕ ಕೃಷ್ಣನು ಆನಂದತುಂದಿಲನಾಗಿ ಕೈಮುಗಿದು ಪ್ರಣಾಮಮಾಡುತ್ತಿದ್ದ ಇತರ ಜನರನ್ನು ಅಭಿನಂದಿಸಿದನು.

ಅನಂತರ ಹೃಷೀಕೇಶ, ರಾಜಾ ಯುಧಿಷ್ಠಿರ, ನಾಲ್ವರು ಪಾಂಡವರು, ಮತ್ತು ಕೃಪನೇ ಮೊದಲಾದವರೆಲ್ಲರೂ ಶೀಘ್ರ ಕುದುರೆಗಳನ್ನು ಕಟ್ಟಿದ, ಪತಾಕೆ-ಧ್ವಜಗಳಿಂದ ಶೋಭಿಸುತ್ತಿರುವ, ನಗರಗಳ ಆಕಾರದ ರಥಗಳಲ್ಲಿ ಕುಳಿತು ಕುರುಕ್ಷೇತ್ರಕ್ಕೆ ಪ್ರಯಾಣಿಸಿದರು. ತಲೆಗೂದಲುಗಳಿಂದಲೂ ಮಜ್ಜೆಗಳಿಂದಲೂ ಮೂಳೆಗಳಿಂದಲೂ ಸಮಾಕುಲವಾಗಿದ್ದ ಮಹತ್ಮ ಕ್ಷತ್ರಿಯರು ಎಲ್ಲಿ ದೇಹಗಳನ್ನು ತೊರೆದಿದ್ದರೋ ಆ ಕುರುಕ್ಷೇತ್ರದಲ್ಲಿ ಅವರು ಇಳಿದರು. ಅಲ್ಲಿ ಆನೆ-ಕುದುರೆಗಳ ದೇಹಗಳೂ ಮೂಳೆಗಳೂ ಪರ್ವತಗಳೋಪಾದಿಯಲ್ಲಿ ಬಿದ್ದಿದ್ದವು. ಅಲ್ಲಿ ಬಿದ್ದಿದ್ದ ಮನುಷ್ಯರ ತಲೆಬುರುಡೆಗಳು ಶಂಖಗಳಂತೆ ತೋರುತ್ತಿದ್ದವು.  ಸಹಸ್ರಾರು ಚಿತೆಗಳು ಉರಿಯುತ್ತಿದ್ದವು. ಕವಚ-ಆಯುಧಗಳು ರಾಶಿ-ರಾಶಿಯಾಗಿ ಬಿದ್ದಿದ್ದವು. ಆಗ ಕುರುಕ್ಷೇತ್ರವು

ಕಾಲನ ಪಾನಭೂಮಿಯಂತೆ ತೋರುತ್ತಿತ್ತು. ಅಲ್ಲಲ್ಲಿ ಬಿದ್ದಿದ್ದ ಮಜ್ಜೆ-ಅಸ್ತಿಗಳು ಕಾಲನು ತಿಂದು ಉಳಿಸಿದ ಉಚ್ಛಿಷ್ಟದಂತೆಯೇ ತೋರುತ್ತಿದ್ದವು. ಭೂತಗಣಗಳು ಸಂಚರಿಸುತ್ತಿದ್ದ ಮತ್ತು ರಾಕ್ಷಸಗಣಗಳಿಂದ ಸಂಸೇವಿಸಲ್ಪಟ್ಟ ಕುರುಕ್ಷೇತ್ರವನ್ನು ನೋಡುತ್ತಾ ಆ ಮಹಾರಥರು ಸಾಗಿದರು. ಹಾಗೆ ಸಾಗುತ್ತಿರುವಾಗ ಸರ್ವಯಾದವರ ನಂದನ, ಮಹಾಬಾಹು ಕೃಷ್ಣನು ಯುಧಿಷ್ಠಿರನಿಗೆ ಜಾಮದಗ್ನಿ ಪರಶುರಾಮನ ವಿಕ್ರಮದ ಕುರಿತು ಹೇಳಿದನು: "ಪಾರ್ಥ! ಇಗೋ ದೂರದಲ್ಲಿ ಕಾಣುತ್ತಿರುವ ಈ ಐದು ಸರೋವರಗಳಲ್ಲಿ ಹಿಂದೆ ರಾಮನು ಕ್ಷತ್ರಿಯರ ರಕ್ತದಿಂದ ತರ್ಪಣಗಳನ್ನಿತ್ತಿದ್ದನು. ಪ್ರಭು ರಾಮನು ಇಪ್ಪತ್ತೊಂದು ಬಾರಿ ಭೂಮಿಯನ್ನು ನಿಃಕ್ಷತ್ರಿಯರನ್ನಾಗಿ ಮಾಡಿ ಇಲ್ಲಿಯೇ ಆ ಕರ್ಮದಿಂದ ವಿರತನಾದನು."

ಯುಧಿಷ್ಠಿರನು ಹೇಳಿದನು:

> "ರಾಮನು ಇಪ್ಪತ್ತೊಂದು ಬಾರಿ ಪೃಥ್ವಿಯನ್ನು ನಿಃಕ್ಷತ್ರಿಯರನ್ನಾಗಿಸಿದನೆಂದು ಹೇಳಿದೆಯಲ್ಲಾ! ಅದರ ಕುರಿತು ಒಂದು ಮಹಾ ಸಂಶಯವು ನನ್ನಲ್ಲಿದೆ. ಯದುಪುಂಗವ! ರಾಮನಿಂದ ಕ್ಷತ್ರಬೀಜವು ಭಸ್ಮವಾದ ನಂತರ ಪುನಃ ಹೇಗೆ ಕ್ಷತ್ರಿಯರ ಉತ್ಪತ್ತಿಯಾಯಿತು? ಮಹಾತ್ಮಾ ಭಗವನ್

ರಾಮನು ಯಾವ ಕಾರಣದಿಂದ ಕ್ಷತ್ರಿಯರನ್ನು ವಿನಾಶಗೊಳಿಸಿದನು? ಪುನಃ ಕ್ಷತ್ರಿಯರ ವೃದ್ಧಿಯು ಹೇಗಾಯಿತು? ಮಹಾಭಾರತ ಯುದ್ಧದಲ್ಲಿ ಹೇಗೆ ಕೋಟಿಗಟ್ಟಲೆ ಕ್ಷತ್ರಿಯರು ಹತರಾದರೋ ಹಾಗೆ ಆಗಲೂ ಕೂಡ ಈ ಭೂಮಿಯು ಕ್ಷತ್ರಿಯರ ಮೃತದೇಹಗಳಿಂದ ತುಂಬಿಹೋಗಿದ್ದಿರಬಹುದು! ನನ್ನ ಈ ಸಂಶಯವನ್ನು ಹೋಗಲಾಡಿಸು! ನೀನೇ ಸರ್ವ ಆಗಮಗಳ ನಿಗಮ. ನಿನ್ನ ಹೊರತಾದ ಶಾಸ್ತ್ರಗಳಾವುವೂ ಇಲ್ಲ!”

ಅನಂತರ ಗದಾಗ್ರಜ ಪ್ರಭು ಕೃಷ್ಣನು ಅಪ್ರತಿಮ ತೇಜಸ್ವೀ ಯುಧಿಷ್ಠಿರನಿಗೆ ಭೂಮಿಯಲ್ಲಿ ಕ್ಷತ್ರಿಯಸಂಕುಲಗಳ ವಿನಾಶವು ಹೇಗಾಯಿತೆನ್ನುವ ಜಾಮದಗ್ನೇಯೋಽಪಖ್ಯಾನವನ್ನು ಸಂಪೂರ್ಣವಾಗಿ ಅರ್ಥವತ್ತಾಗಿ ಹೇಳಿದನು. ಧರ್ಮಭೃತರಲ್ಲಿ ಶ್ರೇಷ್ಠನಾದ ಯುಧಿಷ್ಠಿರನಿಗೆ ಇದನ್ನು ಹೇಳುತ್ತಾ ಯದುಪ್ರವೀರ ಕೃಷ್ಣನು ರಥದಲ್ಲಿ ಕುಳಿತು ಸೂರ್ಯನು ಹೇಗೆ ತನ್ನ ಕಿರಣಗಳಿಂದ ವಿಶ್ವವನ್ನೇ ಬೆಳಗುವನೋ ಹಾಗೆ ಬೇಗ ಬೇಗ ಮುಂದೆಸಾರಿದನು. ಹೀಗೆ ಅಚ್ಯುತ-ಯುಧಿಷ್ಠಿರರು ಪರಸ್ಪರರಲ್ಲಿ ಮಾತನಾಡಿಕೊಳ್ಳುತ್ತಾ ಪ್ರಭು ಗಾಂಗೇಯನು ಶರತಲ್ಪತನಗಾಗಿದ್ದಲ್ಲಿಗೆ ಬಂದರು.

ಅಲ್ಲಿ ಅವರು ಶರಶಯನದಲ್ಲಿ ಮಲಗಿದ್ದ ತನ್ನದೇ ರಶ್ಮಿಗಳ ಜಾಲದಿಂದ ಪ್ರಕಾಶಿಸುತ್ತಿದ್ದ ಸಾಯಂಕಾಲದ ಸೂರ್ಯನ ತೇಜಸ್ಸಿನಿಂದ ಬೆಳಗುತ್ತಿದ್ದ ಭೀಷ್ಮನನ್ನು ನೋಡಿದರು. ಓಘವತೀ ನದಿಯ ತೀರದಲ್ಲಿ, ದೇವತೆಗಳಿಂದ ಶತಕ್ರತುವು ಹೇಗೋ ಹಾಗೆ ಮುನಿಗಳಿಂದ ಉಪಾಸನೆಗೊಳ್ಳುತ್ತಿರುವ ಆ ಪರಮಧರ್ಮಿಷ್ಟನನ್ನು ನೋಡಿದರು. ದೂರದಿಂದಲೇ ಅವನನ್ನು ನೋಡಿದ ಕೃಷ್ಣ, ರಾಜಾ ಧರ್ಮರಾಜ, ನಾಲ್ವರು ಪಾಂಡವರು, ಮತ್ತು ಶಾರದ್ವತರೇ ಮೊದಲಾದವರು, ಅವರವರ ವಾಹನಗಳಿಂದ ಕೆಳಕ್ಕಿಳಿದು, ಚಂಚಲ ಮನಸ್ಸನ್ನು ನಿಯಂತ್ರಿಸಿಕೊಂಡು, ಇಂದ್ರಿಯಗ್ರಾಮಗಳನ್ನು ಏಕೀಕರಿಸಿಕೊಂಡು ಆ ಮಹಾಮುನಿಗಳ ಬಳಿಬಂದರು. ವಾಸನೇ ಮೊದಲಾದ ಋಷಿಗಳನ್ನು ಅಭಿವಾದಿಸಿದ ನಂತರ ಗೋವಿಂದ, ಸಾತ್ಯಕಿ ಮತ್ತು ಕೌರವರು ಗಾಂಗೇಯನ ಬಳಿಸಾರಿದರು. ಗಾಂಗೇಯನ ತಪೋವೃದ್ಧಿಯ ಕುರಿತು ಕೇಳಿ ಪುರುಷರ್ಷಭ ಯದು-ಕೌರವರು ಎಲ್ಲರೂ ಅವನನ್ನು ಸುತ್ತುವರೆದು ಕುಳಿತುಕೊಂಡರು. ಆಗ ಆರಿಹೋಗುತ್ತಿರುವ ಯಜ್ಞೇಶ್ವರನಂತಿದ್ದ ಗಾಂಗೇಯನನ್ನು ನೋಡಿ ಕೇಶವನು ಸ್ವಲ್ಪ ದೀನಮನಸ್ಕನಾಗಿ “ಭೀಷ್ಮ !” ಎಂದು ಹೇಳಿದನು.

“ರಾಜನ್! ನಿನ್ನ ಜ್ಞಾನಗಳೆಲ್ಲವೂ ಹಿಂದಿನಂತೆಯೇ



ಪ್ರಸನ್ನವಾಗಿವೆಯಲ್ಲವೇ? ನಿನ್ನ ಬುದ್ಧಿಗೆ ಯಾವುದೇ ವ್ಯಾಕುಲಗಳೂ ಇಲ್ಲ ತಾನೇ? ಶರಗಳ ಅಭಿಘಾತದಿಂದ ನಿನ್ನ ಶರೀರವು ನೊಂದು ದುಃಖವಾಗುತ್ತಿಲ್ಲ ತಾನೇ? ಏಕೆಂದರೆ ಮಾನಸಿಕ ದುಃಖಕ್ಕಿಂತಲೂ ಶಾರೀರಿಕ ದುಃಖವೇ ಅಧಿಕವಾಗಿರುತ್ತದೆ. ಧರ್ಮಶೀಲನಾದ ನಿನ್ನ ತಂದೆಯ

ವರದಾನದಿಂದ ನೀನು ಇಚ್ಛಾಮರಣಿಯಾಗಿರುವೆ! ಆದರೆ ಅದು ನಿನ್ನ ಶಾಂತಿಗೆ ಕಾರಣವಾಗಲಾರದು! ಮುಳ್ಳು ಅತ್ಯಂತ ಸೂಕ್ಷ್ಮವಾಗಿದ್ದರೂ ಶರೀರವನ್ನು ಸೇರಿಕೊಂಡು ಹೆಚ್ಚು ನೋವನ್ನುಂಟುಮಾಡುತ್ತದೆ. ಹೀಗಿರುವಾಗ ಬಾಣಗಳ ಸಮೂಹಗಳಿಂದಲೇ ಚುಚ್ಚಲ್ಪಟ್ಟಿರುವ ನಿನ್ನ ವಿಷಯದಲ್ಲಿ ಹೇಳತಕ್ಕದ್ದೇನಿದೆ? ಹುಟ್ಟು-ಸಾವುಗಳು ಪ್ರಾಣಿಗಳಿಗೆ ಇರತಕ್ಕವೇ ಎನ್ನುವ ಉಪದೇಶವನ್ನು ನಿನಗೆ ನೀಡಲು ನಾನು ಬಯಸುತ್ತಿಲ್ಲ. ಏಕೆಂದರೆ ನೀನು ದೇವತೆಗಳಿಗೂ ಉಪದೇಶನೀಡಲು ಸಮರ್ಥನಾಗಿರುವೆ! ಜ್ಞಾನವೃದ್ಧನಾದ ನಿನ್ನಲ್ಲಿ ಭೂತ-ಭವಿಷ್ಯ-ವರ್ತಮಾನಗಳೆಲ್ಲವೂ, ಶಾಸ್ತ್ರ-ವೇದ-ಪುರಾಣ-ಇತಿಹಾಸಗಳೆಲ್ಲವೂ ಪ್ರತಿಷ್ಠಿತವಾಗಿವೆ. ಪ್ರಾಣಿಗಳ ಸಂಸಾರ ಮತ್ತು ಧರ್ಮದ ಫಲಾನುಭವಗಳನ್ನು ನೀನು ಅರಿತುಕೊಂಡಿದ್ದೀಯೆ. ನೀನು ಬ್ರಹ್ಮಮಯ ನಿಧಿಯಾಗಿರುವೆ! ನೀನು ಸಮೃದ್ಧ ರಾಜ್ಯದಲ್ಲಿ ನಿನ್ನ ಎಲ್ಲ ಅಂಗಾಂಗಳೂ ಸದೃಢವಾಗಿದ್ದು, ಅರೋಗಿಯಾಗಿದ್ದು, ಸಹಸ್ರಾರು ಸ್ತ್ರೀಯರಿಂದ ಪರಿವೃತನಾಗಿದ್ದರೂ, ಊರ್ಧ್ವರೇತಸ್ಕನಾಗಿ ಬ್ರಹ್ಮಚರ್ಯೆಯನ್ನು ಪಾಲಿಸಿದುದನ್ನು ನಾನು ಕಂಡಿದ್ದೇನೆ. ಈ

ಶರಶಯನದಲ್ಲಿ ಮಲಗಿರುವ ಸತ್ಯಸಂಧ, ಮಹಾವೀರ್ಯ, ಶೂರ. ಧರ್ಮದಲ್ಲಿಯೇ ತತ್ಪರನಾಗಿರುವ ಶಾಂತನವ ಭೀಷ್ಮನೊಬ್ಬನನ್ನು ಬಿಟ್ಟು ಮೃತ್ಯುವನ್ನೂ ತಡೆದು ನಿಲ್ಲಿಸಬಲ್ಲ ಮತ್ತೊಬ್ಬನನ್ನು ಈ ಮೂರುಲೋಕಗಳಲ್ಲಿಯೂ ಎಲ್ಲಿಯಾದರೂ ಹುಟ್ಟಿರುವನೆಂಬುದನ್ನು ನಾನು ಇದೂವರೆಗೂ ಕೇಳಿರುವುದಿಲ್ಲ! ಸತ್ಯ, ತಪಸ್ಸು, ದಾನ, ಯಜ್ಞಾನುಷ್ಠಾನ, ಧನುರ್ವೇದ, ವೇದ, ನಿತ್ಯವೂ ಪ್ರಜೆಗಳ ಪರಿಪಾಲನೆ ಇವುಗಳಲ್ಲಿ ನಿನಗೆ ಸಮನಾದ ದಯಾವಂತ, ಶುಚಿ, ಜಿತೇಂದ್ರಿಯ, ಸರ್ವಭೂತಹಿತರತ, ಮಹಾರಥನ ಕುರಿತು ಇದೂವರೆಗೆ ನಾನು ಕೇಳಿಲ್ಲ! ನೀನು ಒಂದೇ ರಥದಲ್ಲಿ ಗಂಧರ್ವ-ಸುರ-ಅಸುರ-ರಾಕ್ಷಸರೊಂದಿಗೆ ದೇವತೆಗಳನ್ನು ಜಯಿಸಲು ಶಕ್ತನೆನ್ನುವುದರಲ್ಲಿ ಸಂಶಯವೇ ಇಲ್ಲ. ಭೀಷ್ಮ! ವಸುಗಳಲ್ಲಿ ನೀನು ಇಂದ್ರಸಮಾನನು. ವಿಪ್ರರು ನಿತ್ಯವೂ ನಿನ್ನನ್ನು ಅಷ್ಟವಸುಗಳ ಅಂಶದಿಂದ ಹುಟ್ಟಿದ ಒಂಭತ್ತನೆಯವನೆಂದೂ, ಗುಣಗಳಲ್ಲಿ ನಿನ್ನ ಸಮನಾಗಿರುವವರು ಯಾರೂ ಇಲ್ಲವೆಂದೂ ವರ್ಣಿಸುತ್ತಾರೆ. ನೀನು ಯಾರೆಂದು ನಾನು ಚೆನ್ನಾಗಿ ತಿಳಿದುಕೊಂಡಿದ್ದೇನೆ. ನಿನ್ನ

ಶಕ್ತಿ ಮತ್ತು ಮಹಾಬಲಗಳಿಂದ ನೀನು ದೇವತೆಗಳಲ್ಲಿಯೂ ವಿಖ್ಯಾತನಾಗಿರುವೆ! ಈ ಭೂಮಿಯ ಮನುಷ್ಯರಲ್ಲಿ ನಿನ್ನ ಸಮಾನ ಗುಣಗಳುಳ್ಳ ಬೇರೆ ಯಾವ ಪುರುಷನನ್ನೂ ನಾನು ನೋಡಲೂ ಇಲ್ಲ ಮತ್ತು ಕೇಳಲೂ ಇಲ್ಲ. ನೀನು ಸರ್ವಗುಣಗಳಿಂದಲೂ ದೇವತೆಗಳನ್ನೂ ಅತಿಶಯಿಸಿರುವೆ. ನಿನ್ನ ತಪಸ್ಸಿನಿಂದ ನೀನು ಲೋಕಗಳನ್ನೂ ಚರಾಚರಗಳನ್ನೂ ಸೃಷ್ಟಿಸಲು ಶಕ್ತನಾಗಿರುವೆ. ಭೀಷ್ಮ! ಜ್ಞಾತಿಬಾಂಧವರ ಸಂಕ್ಷಯದಿಂದ ತಪಿಸುತ್ತಿರುವ ಈ ಜ್ಯೇಷ್ಠ ಪಾಂಡುಪುತ್ರನ ಶೋಕವನ್ನು ನೀನು ನಿವಾರಿಸು! ನಾಲ್ಕು ಆಶ್ರಮಧರ್ಮಗಳಿಂದ ಕೂಡಿರುವ ಚಾತುರ್ವರ್ಣ್ಯದವರ ಧರ್ಮಗಳೆಲ್ಲವೂ ನಿನಗೆ ಸಂಪೂರ್ಣವಾಗಿ ತಿಳಿದಿವೆ. ನಾಲ್ಕು ವೇದಗಳಲ್ಲಿ ಹೇಳಿರುವ ನಾಲ್ಕು ಹೋತೃಗಳ ಕರ್ತವ್ಯಗಳನ್ನೂ, ಸಾಂಖ್ಯಯೋಗವನ್ನೂ, ನಾಲ್ಕೂ ವರ್ಣಗಳವರಿಗೆ ನಿಯಮಿಸಲ್ಪಟ್ಟಿರುವ ಸನಾತನ ಧರ್ಮಗಳನ್ನೂ, ಆದರೆ ಯಾವುದಕ್ಕೂ ವಿರುದ್ಧವಾಗಿರದ ಹಾಗೆ ನಡೆದುಕೊಳ್ಳುವ ಏಕೈಕ ಧರ್ಮವೇನಿದೆಯೋ ಅದನ್ನೂ ನೀನು ತಿಳಿದಿರುವೆ. ಇತಿಹಾಸ-ಪುರಾಣಗಳು

ಸಂಪೂರ್ಣವಾಗಿ ನಿನಗೆ ತಿಳಿದಿವೆ. ಸಕಲ ಧರ್ಮಶಾಸ್ತ್ರಗಳೂ ನಿನ್ನ ಮನಸ್ಸಿನಲ್ಲಿ ನೆಲೆಸಿಬಿಟ್ಟಿವೆ. ಸಂಶಯಾಸ್ಪದವಾದ ಯಾವುದಾದರೂ ಕೆಲವು ವಿಷಯಗಳು ಲೋಕದಲ್ಲಿದ್ದರೆ ಅವುಗಳನ್ನೂ ನಿವಾರಿಸಲು ಈ ಲೋಕದಲ್ಲಿ ನಿನ್ನನ್ನು ಬಿಟ್ಟು ಬೇರೆ ಯಾರೂ ಇಲ್ಲ. ಈ ಪಾಂಡವೇಯನ ಮನಸ್ಸಿನಲ್ಲಿ ಹುಟ್ಟಿಕೊಂಡಿರುವ ಈ ಶೋಕವನ್ನು ನಿನ್ನ ಬುದ್ಧಿಶಕ್ತಿಯಿಂದ ದೂರಮಾಡು! ಮೋಹಗೊಂಡಿರುವ ಜನರನ್ನು ಶಾಂತಗೊಳಿಸಲು ನಿನ್ನಂಥಹ ಉತ್ತಮ ವಿಶಾಲ ಬುದ್ಧಿಯುಳ್ಳವನಿಗೆ ಮಾತ್ರ ಸಾಧ್ಯ!"

ವಾಸುದೇವನ ಆ ಮಾತನ್ನು ಕೇಳಿದ ಧೀಮಂತ ಭೀಷ್ಮನು ತನ್ನ ಮುಖವನ್ನು ಸ್ವಲ್ಪವೇ ಮೇಲಕ್ಕೆತ್ತಿ ಕೈಜೋಡಿಸಿ ಹೇಳಿದನು:

"ಭಗವನ್! ವಿಷ್ಣುವೇ! ಲೋಕಗಳ ಉದ್ಭವ ಮತ್ತು ನಿಧನ! ನಿನಗೆ ನಮಸ್ಕಾರವು! ಹೃಷೀಕೇಶ! ನೀನೇ ಕರ್ತ, ಸಂಹರ್ತ ಮತ್ತು ಅಪರಾಜಿತ! ವಿಶ್ವಕರ್ಮನೇ! ವಿಶ್ವಾತ್ಮನೇ! ವಿಶ್ವಸಂಭವನೇ! ನಿನಗೆ ನಮಸ್ಕಾರಗಳು! ನೀನು ಪಂಚಭೂತಗಳಿಗೂ ಅತೀತನಾಗಿದ್ದು ಪ್ರಾಣಿಗಳ ಮೋಕ್ಷಸ್ವರೂಪನಾಗಿರುವೆ! ಮೂರು ಲೋಕಗಳಲ್ಲಿಯೂ

ವ್ಯಾಪಕನಾಗಿರುವ ನಿನಗೆ ನಮಸ್ಕರಿಸುತ್ತೇನೆ. ಮೂರು ಗುಣಗಳಿಗೂ ಅತೀತನಾಗಿರುವ ನಿನಗೆ ನಮಸ್ಕರಿಸುತ್ತೇನೆ. ಯೋಗೇಶ್ವರ! ಸರ್ವಕ್ಕೂ ಪರಾಯಣನಾಗಿರುವ ನಿನಗೆ ನಮಸ್ಕರಿಸುತ್ತೇನೆ. ಪುರುಷಸತ್ತಮ! ನೀನು ನನಗೆ ಸಂಬಂಧಿಸಿದಂತೆ ಕೆಲವು ಮಾತುಗಳನ್ನಾಡಿರುವೆ! ಇದರಿಂದಾಗಿ ಮೂರು ಲೋಕಗಳಲ್ಲಿಯೂ ವ್ಯಾಪ್ತನಾಗಿರುವ ನಿನ್ನ ದಿವ್ಯತೆಯನ್ನು ಕಾಣುತ್ತಿದ್ದೇನೆ. ವಾಯುವಿನ ಏಳು ಮಾರ್ಗಗಳನ್ನೂ ತಡೆದಿರುವ ಅಮಿತತೇಜಸ್ವೀ ನಿನ್ನ ಸನಾತನ ರೂಪವನ್ನು ತತ್ತ್ವತಃ ನಾನು ಕಾಣುತ್ತಿದ್ದೇನೆ. ನಿನ್ನ ಶಿರಸ್ಸು ಸ್ವರ್ಗದಿಂದ ವ್ಯಾಪ್ತವಾಗಿದೆ. ಪಾದಗಳು ದೇವೀ ವಸುಂಧರೆಯಿಂದ ವ್ಯಾಪ್ತವಾಗಿವೆ. ನಿನ್ನ ಭುಜಗಳಲ್ಲಿ ದಿಕ್ಕುಗಳೂ, ಕಣ್ಣುಗಳಲ್ಲಿ ರವಿಯೂ ಮತ್ತು ವೀರ್ಯದಲ್ಲಿ ಶಕ್ರನೂ ಪ್ರತಿಷ್ಠಿತಗೊಂಡಿವೆ. ಅಗಸೇ ಹೂವಿನಂತೆ ಶ್ಯಾಮಲವರ್ಣದವನೂ, ಪೀತಾಂಬರವನ್ನು ಧರಿಸಿರುವವನೂ, ಧರ್ಮದಿಂದ ಚ್ಯುತನಾಗದೇ ಇರುವವನೇ ಆದ ನೀನು ನನಗೆ ಮಿಂಚುಗಳಿಂದ ಕೂಡಿರುವ ಕಾಲಮೇಘದಂತೆ ತೋರುತ್ತಿರುವೆ! ಪುಂಡರೀಕಾಕ್ಷ!

ಸುರೋತ್ತಮ! ಸದ್ಗತಿಯನ್ನು ಬಯಸಿ ನಿನ್ನನ್ನೇ ಶರಣುಹೊಂದಿರುವ ಈ ಭಕ್ತನಿಗೆ ಯಾವುದು ಶ್ರೇಯಸ್ಸೆಂದು ನೀನೇ ಹೇಳು!”

ವಾಸುದೇವನು ಹೇಳಿದನು:

“ಪುರುಷರ್ಷಭ! ನಿನಗೆ ನನ್ನಲ್ಲಿ ಪರಮ ಭಕ್ತಿಯಿರುವುದರಿಂದಲೇ ನಾನು ನಿನಗೆ ನನ್ನ ದಿವ್ಯ ರೂಪವನ್ನು ತೋರಿಸಿರುವೆನು! ನನ್ನ ಭಕ್ತನಲ್ಲದವನಿಗೆ, ಭಕ್ತನಾಗಿದ್ದರೂ ಕುಟಿಲಸ್ವಭಾವವಿದ್ದವನಿಗೆ ಮತ್ತು ಮನಃಶಾಂತಿಯಿಲ್ಲದವನಿಗೆ ನನ್ನ ಈ ದಿವ್ಯರೂಪವನ್ನು ತೋರಿಸುವುದಿಲ್ಲ. ನೀನಾದರೋ ನನ್ನ ಭಕ್ತನಾಗಿರುವೆ. ನಿತ್ಯವೂ ಸರಳಸ್ವಭಾವದಿಂದಿರುವೆ. ನಿತ್ಯವೂ ನೀನು ಜಿತೇಂದ್ರಿಯ ಮತ್ತು ಶುಚಿಯಾಗಿದ್ದುಕೊಂಡು ಸತ್ಯ-ದಾನಗಳಲ್ಲಿ ನಿರತನಾಗಿರುವೆ! ನಿನ್ನ ತಪಸ್ಸಿನಿಂದಲೇ ನೀನು ನನ್ನನ್ನು ನೋಡಲು ಅರ್ಹನಾಗಿರುವೆ. ಯಾವಲೋಕಗಳಿಂದ ನೀನು ಪುನಃ ಹಿಂದಿರುಗುವುದಿಲ್ಲವೋ ಅಂಥಹ ಉತ್ತಮ ಲೋಕಕ್ಕೇ ನೀನು ತೆರಳುತ್ತೀಯೆ. ನಿನ್ನ ಜೀವಿತದಲ್ಲಿ ಇನ್ನು ಐವತ್ತಾರು ದಿನಗಳು ಮಾತ್ರವೇ ಉಳಿದಿವೆ. ಅದರ ನಂತರ

ನಿನ್ನ ಶುಭಕರ್ಮಗಳ ಪದವಾಗಿ ಈ ದೇಹವನ್ನು ವಿಸರ್ಜಿಸಿ ಉತ್ತಮ ಲೋಕವನ್ನು ಪಡೆಯುವೆ! ಪ್ರಜ್ವಲಿಸುತ್ತಿರುವ ಅಗ್ನಿಗಳಂತಿರುವ ಈ ದೇವತೆಗಳು ವಸುಗಳೂ ವಿಮಾನಸ್ಥರಾಗಿ, ಯಾರಿಗೂ ಕಾಣದಂತೆ, ಸೂರ್ಯನು ಉತ್ತರಕ್ಕೆ ತೆರಳುವುದನ್ನೇ ಕಾಯುತ್ತಿದ್ದಾರೆ ಮತ್ತು ನಿನ್ನ ಪ್ರತ್ಯಾಗಮನವನ್ನು ಎದುರುನೋಡುತ್ತಿದ್ದಾರೆ! ಭಗವಾನ್ ಸೂರ್ಯನು ಕಾಲವಶದಿಂದ ದಕ್ಷಿಣಾಯನದಿಂದ ಹಿಂದಿರುಗಿದ ಕೂಡಲೇ ಉತ್ತರಾಯಣಕ್ಕೆ ಕಾಲಿಟ್ಟೊಡನೆಯೇ ನೀನು ಲೋಕಗಳಿಗೆ ತೆರಳುತ್ತೀಯೆ ಮತ್ತು ವಿದ್ವಾನರಂತೆ ಆ ಲೋಕಗಳನ್ನು ಪಡಿದು ಮರಳಿ ಬರುವುದಿಲ್ಲ. ಈ ಲೋಕದಿಂದ ನೀನು ಹೊರಟು ಹೋಗಲು ನಿನ್ನಲ್ಲಿರುವ ಅಖಿಲ ಜ್ಞಾನಗಳು ನಷ್ಟವಾಗಿ ಹೋಗುತ್ತವೆ. ಆದುದರಿಂದಲೇ ಇವರೆಲ್ಲರೂ ಧರ್ಮದ ಕುರುತಾದ ಚರ್ಚೆಗಾಗಲೇ ನಿನ್ನ ಬಳಿ ಬಂದು ಸೇರಿದ್ದಾರೆ. ಜ್ಞಾತಿವಧೆಯ ಶೋಕದಿಂದಾಗಿ ಶಾಸ್ತ್ರಜ್ಞಾನವನ್ನು ಸಂಪೂರ್ಣವಾಗಿ ಕಳೆದುಕೊಂಡಿರುವ ಸತ್ಯಸಂಧ ಯುಧಿಷ್ಠಿರನಿಗೆ ಧರ್ಮಾರ್ಥಸಮಾಧಿಯುಕ್ತವಾದ ಅರ್ಥಬದ್ಧವಾದ ಮಾತುಗಳನ್ನಾಡಿ ಅವನ ಶೋಕವನ್ನು

ಹೋಗಲಾಡಿಸು!”

ಅನಂತರ ಕೃಷ್ಣನ ಆ ಧರ್ಮಾರ್ಥಸಂಹಿತವಾದ ಹಿತಕರ ಮಾತನ್ನು ಕೇಳಿ ಶಾಂತನವ ಭೀಷ್ಮನು ಕೈಮುಗಿದು ಉತ್ತರಿಸಿದನು:

“ಲೋಕನಾಥ! ಮಹಾಬಾಹೋ! ಶಿವ! ನಾರಾಯಣ! ಅಚ್ಯುತ! ನಿನ್ನ ಮಾತನ್ನು ಕೇಳಿ ನಾನು ಹರ್ಷದಲ್ಲಿ ಮುಳುಗಿಹೋಗಿದ್ದೇನೆ! ನಿನ್ನ ಸನ್ನಿಧಿಯಲ್ಲಿ ನಾನು ಏನನ್ನು ತಾನೇ ಹೇಳಬಲ್ಲೆ? ಮಾತಿನಿಂದ ತಿಳಿಸಬಹುದಾದ ಎಲ್ಲವೂ ನಿನ್ನ ಮಾತಿನಲ್ಲಿಯೇ ಅಡಗಿವೆ! ದೇವ! ಈ ಲೋಕದಲ್ಲಿ ಯತ್ಕಿಂಚಿತ ಏನಾದರೂ ನಡೆದರೆ ಮತ್ತು ಯಾರಾದರೂ ಕರ್ತವ್ಯಗಳನ್ನು ಮಾಡಿದರೆ ಅದು ನಿನ್ನಿಂದಲೇ ಮಾಡಿಸಲ್ಪಟ್ಟಿರುತ್ತವೆ. ಏಕೆಂದರೆ ನೀನು ಬುದ್ಧಿಮಯನಾಗಿರುವೆ. ನಿನ್ನ ಎದಿರು ಧರ್ಮ-ಕಾಮ-ಅರ್ಥಶಾಸ್ತ್ರಗಳ ಅರ್ಥಗಳನ್ನು ತಿಳಿಸುವವನು ದೇವರಾಜನ ಬಳಿಹೋಗಿ ದೇವಲೋಕದ ವರ್ಣನೆಯನ್ನು ಮಾಡುವವನಂತೆ! ಮಧುಸೂದನ! ಶರಸಮೂಹಗಳ ಘಾತದಿಂದ ನನ್ನ ಮನಸ್ಸು ವ್ಯಥಿತಗೊಂಡಿದೆ. ಅಂಗಾಂಗಗಳು ಶಿಥಿಲಗೊಂಡಿವೆ. ನನ್ನ ಬುದ್ಧಿಯೂ ಕುಸಿಯುತ್ತಿದೆ!

ಗೋವಿಂದ! ವಿಷ-ಅಗ್ನಿಗಳ ಸಮಾನ ಶರಗಳಿಂದ ಪೀಡಿತನಾದ ನನಗೆ ಏನನ್ನು ಮಾತನಾಡಲೂ ತೋಚುತ್ತಿಲ್ಲ! ಬಲವು ಕುಂದುತ್ತಿದೆ. ಪ್ರಾಣಗಳು ಹೊರಟುಹೋಗಲು ತ್ವರೆಮಾಡುತ್ತಿವೆ. ಮರ್ಮಸ್ಥಳಗಳು ಪರಿತಪಿಸುತ್ತಿವೆ. ಚೇತನವು ಭ್ರಾಂತವಾಗಿದೆ! ದಾಶಾರ್ಹಕುಲನಂದನ! ದೌರ್ಬಲ್ಯದಿಂದಾಗಿ ನನ್ನ ಮಾತು ತೊದಲುತ್ತಿದೆ. ಹೇಗೆ ತಾನೇ ನಾನು ಮಾತನಾಡಲಿ? ನನಗೆ ಒಳ್ಳೆಯದಾಗಲು ಅನುಗ್ರಹಿಸು! ಮಹಾಬಾಹೋ! ನನ್ನನ್ನು ಕ್ಷಮಿಸು! ಅಚ್ಯುತ! ನಿನ್ನ ಸನ್ನಿಧಿಯಲ್ಲಿ ಮಾತನಾಡಲು ಬೃಹಸ್ಪತಿಯೂ ಕೂಡ ಹಿಂಜರಿಯುತ್ತಾನೆ. ಇನ್ನು ನನ್ನ ಗತಿಯೇನು? ಮಧುಸೂದನ! ದಿಕ್ಕುಗಳು ತೋಚುತ್ತಿಲ್ಲ. ಆಕಾಶ-ಮೇದಿನಗಳೂ ತೋಚುತ್ತಿಲ್ಲ. ಕೇವಲ ನಿನ್ನ ವೀರ್ಯವನ್ನು ಅವಲಂಬಿಸಿ ಇದ್ದೇನೆ ಅಷ್ಟೇ! ಪ್ರಭೋ! ಆದುದರಿಂದ ಧರ್ಮರಾಜನಿಗೆ ಹಿತವಾದುದನ್ನು ಸ್ವಯಂ ನೀನೇ ಹೇಳು! ನೀನು ಯಾವ ಸರ್ವ ಆಗಮಗಳ ಸ್ಥಾನವಾಗಿರುವೆಯೋ ಅದನ್ನೇ ಹೇಳು! ಲೋಕದಲ್ಲಿ ಶಾಶ್ವತನಾಗಿರುವ, ಲೋಕಗಳನ್ನು ನಿರ್ಮಿಸಿರುವ ನೀನೇ ಇಲ್ಲಿರುವಾಗ ಗುರುವಿನ ಎದಿರು ಶಿಷ್ಯನಂತಿರುವ

ನನ್ನಂಥವನು ಹೇಗೆ ತಾನೇ ಬೋಧಿಸಬಲ್ಲನು?”

ವಾಸುದೇವನು ಹೇಳಿದನು:

“ಕೌರವರ ಧುರಂಧರನೇ! ಮಹಾವೀರ್ಯದಲ್ಲಿ ಮತ್ತು ಮಹಾಸತ್ತ್ವದಲ್ಲಿ ನೆಲೆಸಿರುವ ಸರ್ವಾರ್ಥದರ್ಶಿನಿಯಾದ ನೀನು ಹೇಳಿದುದು ಯೋಗ್ಯವಾಗಿಯೇ ಇದೆ. ಬಾಣಾಘಾತದಿಂದ ಯಾತನೆಯನ್ನು ಅನುಭವಿಸುತ್ತಿರುವೆಯೆಂದು ನನಗೆ ಹೇಳಿದೆಯಲ್ಲವೇ? ಅದರ ಉಪಶಮನಕ್ಕಾಗಿ ಪ್ರಸನ್ನಚಿತ್ತನಾಗಿ ನಾನು ನೀಡುವ ಈ ವರವನ್ನು ಸ್ವೀಕರಿಸು! ನಿನಗೆ ದಣಿವಾಗಲೀ, ಮೂರ್ಛೆಯಾಗಲೀ, ಉರಿಯಾಗಲೀ, ರೋಗ-ರುಜಿನಗಳಾಗಲೀ, ಹಸಿವು ಬಾಯಾರಿಕೆಗಳಾಗಲೀ ಆಗುವುದಿಲ್ಲ! ಸಮಗ್ರ ಜ್ಞಾನಗಳೂ ನಿನ್ನಲ್ಲಿ ಪ್ರಕಾಶಗೊಳ್ಳುತ್ತವೆ. ನಿನ್ನ ಬುದ್ಧಿಯು ಯಾವುದರಲ್ಲಿಯೂ ಆಸಕ್ತಿಯನ್ನು ಇಟ್ಟುಕೊಳ್ಳುವುದಿಲ್ಲ. ನಿನ್ನ ಮನಸ್ಸು ನಿತ್ಯವೂ, ಮೋಡಗಳಿಂದ ಮುಕ್ತನಾದ ಚಂದ್ರನಂತೆ, ರಜಸ್ಸು-ತಮೋ ಗುಣಗಳಿಂದ ರಹಿತವಾಗಿ, ಸತ್ತ್ವದಲ್ಲಿಯೇ ನೆಲೆಸಿರುತ್ತದೆ. ನೀನು ಯಾವ ಧರ್ಮಸಂಯುಕ್ತವಾದ ಅಥವಾ

ಅರ್ಥಯುಕ್ತವಾದ ವಿಷಯಗಳ ಕುರಿತು ಯೋಚಿಸುತ್ತೀಯೋ ಅವುಗಳು ನಿನ್ನ ಬುದ್ಧಿಯ ಮುಂದೆ ಸ್ಫುರಿಸುತ್ತಿರುತ್ತವೆ. ಈ ದಿವ್ಯದೃಷ್ಟಿಯನ್ನು ಪಡೆದು ಅದರಿಂದ ನೀನು ನಾಲ್ಕೂ ವಿಧದ ಪ್ರಾಣಿಗಳ ನೈಜಸ್ವರೂಪಗಳನ್ನು ಕಾಣಲು ಶಕ್ತನಾಗುವೆ. ಜ್ಞಾನದೃಷ್ಟಿಯಿಂದ ಸಂಪನ್ನನಾದ ನಿನಗೆ ಸಂಸಾರಬಂಧನದಲ್ಲಿ ಸಿಕ್ಕಿಹಾಕಿಕೊಂಡಿರುವ ಸಂಪೂರ್ಣ ಜೀವಸಮುದಾಯಗಳೂ ತಿಳಿನೀರಿನಲ್ಲಿರುವ ಮೀನುಗಳಂತೆ ಸ್ವಚ್ಛವಾಗಿ ಕಾಣುತ್ತವೆ!”

ಆಗ ವ್ಯಾಸಸಹಿತರಾದ ಸರ್ವ ಮಹರ್ಷಿಗಳೂ ಋಗ್ಯಜುಃಸಾಮಸಂಯುಕ್ತ ಸ್ತೋತ್ರಗಳಿಂದ ಕೃಷ್ಣನನ್ನು ಅರ್ಚಿಸಿದರು. ವಾರ್ಷ್ಣೇಯ, ಗಾಂಗೇಯ ಮತ್ತು ಪಾಂಡವರು ಇರುವ ಸ್ಥಳದಲ್ಲಿ ನಭಸ್ತಲದಿಂದ ಸರ್ವಋತುಗಳ ದಿವ್ಯ ಪುಷ್ಪವೃಷ್ಟಿಯಾಯಿತು. ದಿವ್ಯವಾದ್ಯಗಳು ಮೊಳಗಿದವು. ಅಪ್ಸರಗಣಗಳು ಹಾಡಿದರು. ಅಲ್ಲಿ ಯಾವುದೇ ರೀತಿಯ ಅನಿಷ್ಟ ದೃಶ್ಯಗಳೂ ಕಾಣಿಸಲಿಲ್ಲ. ಶೀತಲವಾದ, ಮಂಗಳಕರ, ಸುಖಕರ, ಪವಿತ್ರವಾದ ಮತ್ತು ಸುಗಂಧಯುಕ್ತ ಗಾಳಿಯು ಬೀಸತೊಡಗಿತು. ದಿಕ್ಕುಗಳು ಪ್ರಶಾಂತವಾದವು. ಉತ್ತರದಿಕ್ಕಿನಲ್ಲಿ ಶಂತ ಮೃಗಪಕ್ಷಿಗಳು ಧ್ವನಿಗೈಯುತ್ತಿದ್ದವು. ಸ್ವಲ್ಪವೇ ಸಮಯದಲ್ಲಿ

ಪಶ್ಚಿಮದಲ್ಲಿ ಸಹಸ್ರಾಂಶು ಭಗವಾನ್ ದಿವಾಕರನು ಏಕಾಂತದಲ್ಲಿ ವನವನ್ನು ದಹಿಸುತ್ತಿರುವನೋ ಎನ್ನುವಂತೆ ತೋರಿದನು. ಆಗ ಎಲ್ಲ ಮಹರ್ಷಿಗಳೂ ಎದ್ದು ಜನಾರ್ದನ, ಭೀಷ್ಮ ಮತ್ತು ರಾಜಾ ಯುಧಿಷ್ಠಿರನ ಅನುಮತಿಯನ್ನು ಕೇಳಿದರು. ಅನಂತರ ಕೇಶವ, ಪಾಂಡವ, ಸಾತ್ಯಕಿ, ಸಂಜಯ ಮತ್ತು ಶಾರದ್ವತ ಕೃಪರು ಅವರಿಗೆ ಪ್ರಣಾಮಗೈದರು. ಆಗ ಅವರಿಂದ ಅಭಿಪೂಜಿತರಾದ ಆ ಧರ್ಮನಿರತರು "ನಾಳೆ ಸೇರೋಣ!" ಎಂದು ಹೇಳಿ ಇಷ್ಟವಾದಲ್ಲಿಗೆ ತೆರಳಿದರು. ಹಾಗೆಯೇ ಕೇಶವ ಮತ್ತು ಪಾಂಡವರು ಗಾಂಗೇಯನಿಂದ ಬೀಳ್ಕೊಂಡು ಅವನಿಗೆ ಪ್ರದಕ್ಷಿಣೆ ಮಾಡಿ ಶುಭ ರಥಗಳನ್ನು ಏರಿದರು. ಪರ್ವತಗಳಂತಿದ್ದ ಮದಿಸಿದ ಆನೆಗಳಿಂದಲೂ, ಪಕ್ಷಿಗಳಂತೆ ಶೀಘ್ರಗಾಮಿಗಳಾಗಿದ್ದ ಕುದುರೆಗಳಿಂದಲೂ, ಧನುಸ್ಸು ಮೊದಲಾದ ಆಯುಧಗಳನ್ನು ಹಿಡಿದಿದ್ದ ಪದಾತಿಗಳಿಂದಲೂ ಕೂಡಿದ್ದ ಸೇನೆಯು ಕಾಂಚನ-ದಂತಗಳ ನೂಕಿಗಳಿದ್ದ ರಥಗಳ ಮುಂದೆ ಮತ್ತು ಹಿಂದೆ ಬಹಳ ದೂರದವರೆಗೆ – ಮಹಾನದೀ ನರ್ಮದೆಯು ಋಕ್ಷಪರ್ವತದ ಸಮೀಪಕ್ಕೆ ಹೋಗಿ ಪೂರ್ವ-ಪಶ್ಚಿಮದಿಕ್ಕುಗಳಲ್ಲಿ ಹರಿದು ಹೋಗುವಂತೆ – ಸಾಗುತ್ತಿದ್ದಿತು. ಆಗ ಪೂರ್ವ ದಿಕ್ಕಿನಲ್ಲಿ ಭಗವಾನ್ ನಿಶಾಕರ ಚಂದ್ರನು ಉದಯಿಸಿ ಆ ಸೇನೆಯಗಳಿಗೆ ಹರ್ಷವನ್ನಿತ್ತನು.

ದಿವಾಕರನಿಂದ ಬಾಡಿಹೋಗಿದ್ದ ಔಷಧೀ ಲತೆಗಳನ್ನು ಚಂದ್ರನು ಪುನಃ ತನ್ನ ಕಿರಣಗಳಿಂದ ಗುಣಯುಕ್ತವನ್ನಾಗಿ ಮಾಡುತ್ತಿದ್ದನು. ಆಗ ಯದುವೃಷಭ-ಪಾಂಡವರು ಸುರಪುರದಂತೆ ಬೆಳಗುತ್ತಿದ್ದ ಪುರವನ್ನು ಪ್ರವೇಶಿಸಿ, ಬಳಲಿದ ಸಿಂಹಗಳು ಗುಹೆಯನ್ನು ಪ್ರವೇಶಿಸುವಂತೆ, ಯಥೋಚಿತ ಶ್ರೇಷ್ಠ ಭವನಗಳನ್ನು ಪ್ರವೇಶಿಸಿದರು. ಅನಂತರ ಮಧುಸೂದನನು ಭವನವನ್ನು ಪ್ರವೇಶಿಸಿ ಮಲಗಿದನು.

# ಯುಧಿಷ್ಠಿರ-ಭೀಷ್ಮ ಸಂವಾದ

ರಾತ್ರಿಯು ಕಳೆಯಲು ಇನ್ನೂ ಅರ್ಧ ಯಾಮವಿರುವಾಗಲೇ ಅವನು ಎದ್ದನು. ಮಾಧವನು ಧ್ಯಾನಮಾರ್ಗವನ್ನಾಶ್ರಯಿಸಿ ಸರ್ವಜ್ಞಾನಗಳನ್ನೂ ಕಂಡು ಅನಂತರ ಸನಾತನಬ್ರಹ್ಮನನ್ನು ಧ್ಯಾನಿಸಿದನು. ಆಗ ಶ್ರುತಿಪುರಾಣಗಳನ್ನು ತಿಳಿದಿದ್ದ, ವಿದ್ಯಾವಂತರಾದ, ಸುಂದರ ಕಂಠವುಳ್ಳವರು ಆ ವಿಶ್ವಕರ್ಮಿ ಪ್ರಜಾಪತಿ ವಾಸುದೇವನನ್ನು ಸ್ತುತಿಸಿದರು. ಕೈಗಳಿಂದ ತಾಳಹಾಕುತ್ತಾ ಭಜನೆ ಮಾಡುತ್ತಿದ್ದರು. ಮಧುರ ಕಂಠದಲ್ಲಿ ಗಾಯನ ಹಾಡುತ್ತಿದ್ದರು. ಸಹಸ್ರಾರು ಶಂಖ-ಆನಕ-ಮೃದಂತಗಳನ್ನು ಮೊಳಗಿಸಿದರು. ಅತಿಮನೋರಮವಾದ ವೀಣೆ-



ಪವಣ-ವೇಣುಗಳ ಧ್ವನಿಗಳು, ಅವನ ಭವನವೇ ಸಂತೋಷದಿಂದ ನಗುತ್ತಿದೆಯೋ ಎನ್ನುವಂತೆ ಬಹು ವಿಸ್ತೀರ್ಣದವರೆಗೆ ಕೇಳಿಬರುತ್ತಿತ್ತು. ಹಾಗೆಯೇ ರಾಜಾ ಯುಧಿಷ್ಠಿರನಲ್ಲಿಯೂ ಮಂಗಲಕರ ಮಧುರ ವಾಚನ-ಗೀತ-ವಾದ್ಯಗಳ ಮೇಳಗಳು ಕೇಳಿಬಂದವು. ಬಳಿಕ ಮಹಾಬಾಹು ಅಚ್ಯುತ ದಾಶಾರ್ಹನು ಎದ್ದು, ಸ್ನಾನಮಾಡಿ, ಕೈಮುಗಿದು ರಹಸ್ಯವಾಗಿ ಜಪಿಸಿ, ಅಗ್ನಿಯನ್ನು ಪೂಜಿಸಿದನು. ಅನಂತರ ಮಾಧವನು ನಾಲ್ಕುವೇದಗಳ ವಿದ್ವಾಂಸರಾದ ಸಹಸ್ರ ವಿಪ್ರರಿಗೆ ಒಬ್ಬೊಬ್ಬರಿಗೂ ಒಂದೊಂದು ಸಾವಿರ ಗೋವುಗಳನ್ನು ದಾನಮಾಡಿದ, ಸ್ವಸ್ತಿವಾಚನ ಮಾಡಿಸಿಕೊಂಡನು. ಅನಂತರ ಕೃಷ್ಣನು ಮಂಗಲದ್ರವ್ಯಗಳನ್ನು ಸ್ಪರ್ಷಿಸಿ, ಶುಭ್ರ ಕನ್ನಡಿಯಲ್ಲಿ ತನ್ನನ್ನು ನೋಡಿಕೊಂಡು, ಸಾತ್ಯಕಿಗೆ ಹೇಳಿದನು:

> "ಶೈನೇಯ ! ಹೋಗು ! ರಾಜನಿವೇಶನಕ್ಕೆ ಹೋಗಿ ಮಹಾತೇಜಸ್ವಿ ಭೀಷ್ಮನನ್ನು ಕಾಣಲು ಯುಧಿಷ್ಠಿರನು ಸಿದ್ಧನಾಗಿದ್ದನೆಯೋ ಎಂದು ತಿಳಿ !"

ಕೃಷ್ಣನ ಆ ಮಾತಿನಂತೆ ಸಾತ್ಯಕಿಯು ಬೇಗನೇ ರಾಜ ಯುಧಿಷ್ಠಿರನಲ್ಲಿಗೆ ಹೋಗಿ ಹೇಳಿದನು:

“ರಾಜನ್! ಧೀಮತ ವಾಸುದೇವನ ಶ್ರೇಷ್ಠ ರಥವು ಸಿದ್ಧವಾಗಿದೆ. ಜನಾರ್ದನನು ಆಪಗೇಯನ ಸಮೀಪಕ್ಕೆ ಹೋಗುತ್ತಿದ್ದಾನೆ. ಕೃಷ್ಣನು ನಿನ್ನ ಪ್ರತೀಕ್ಷೆಯಲ್ಲಿಯೇ ಇದ್ದಾನೆ. ಇದರ ನಂತರ ಏನನ್ನು ಮಾಡಬೇಕಾಗಿದೆಯೋ ಅದನ್ನು ನೀನು ಮಾಡಬೇಕು!”

ಯುಧಿಷ್ಠಿರನು ಹೇಳಿದನು:

“ಫಲ್ಗುನ! ನನ್ನ ಶ್ರೇಷ್ಠ ರಥವನ್ನು ಸಿದ್ಧಪಡಿಸು! ಸೈನಿಕರು ಯಾರೂ ಹೋಗುವುದಿಲ್ಲ. ನಾವು ಮಾತ್ರ ಅಲ್ಲಿಗೆ ಹೋಗೋಣ! ಧರ್ಮಭೃತರಲ್ಲಿ ಶ್ರೇಷ್ಠನಾದ ಭೀಷ್ಮನಿಗೆ ನಾವು ಪೀಡಿಸಬಾರದು. ಆದುದರಿಂದ ನಮ್ಮ ಹಿಂದೆ ಮತ್ತು ಮುಂದೆ ಸಾಗುವ ಸೇನೆಗಳು ಇಲ್ಲಿಯೇ ನಿಲ್ಲಲಿ! ಇಂದಿನಿಂದ ಗಾಂಗೇಯನು ಪರಮ ಗುಹ್ಯವಾದ ಮಾತುಗಳನ್ನು ಹೇಳುತ್ತಾನೆ. ಆದುದರಿಂದ ಅಲ್ಲಿಗೆ ಸಾಮಾನ್ಯ ಜನರು ಬಂದು ಸೇರುವುದನ್ನು ನಾನು ಇಚ್ಛಿಸುವುದಿಲ್ಲ!”

ಅವನ ಆ ಮಾತನ್ನು ಕೇಳಿ ಕುಂತೀಪುತ್ರ ಧನಂಜಯನು ಶ್ರೇಷ್ಠರಥವು ಸಿದ್ಧವಾಗಿದೆಯೆಂದು ತಿಳಿಸಿದನು. ಅನಂತರ ರಾಜಾ ಯುಧಿಷ್ಠಿರ,

ಯಮಳರೀರ್ವರು ಮತ್ತು ಭೀಮಾರ್ಜುನರು ಐವರು ಪಂಚಭೂತಗಳೋಪಾದಿಯಲ್ಲಿ, ಒಂದಾಗಿ ಕೃಷ್ಣನ ಭವನಕ್ಕೆ ಆಗಮಿಸಿದರು. ಮಹಾತ್ಮ ಪಾಂಡವರು ಬಂದಕೂಡಲೇ ಧೀಮಾನ್ ಕೃಷ್ಣನೂ ಕೂಡ ಶೈನೇಯನೊಡನೆ ರಥವನ್ನೇರಿದನು. ರಥದಲ್ಲಿ ಕುಳಿತು, ರಾತ್ರಿಯು ಸುಖಕರವಾಗಿತ್ತೇ ಎಂದು ಮುಂತಾದ ಸಂವಾದಗಳನ್ನು ಗೈಯುತ್ತಾ, ಗುಡುಗಿನಂತೆ ಮೊಳಗುತ್ತಿದ್ದ ಶ್ರೇಷ್ಠರಥಗಳಲ್ಲಿ ಆ ಮಹಾರಥರು ಪ್ರಯಾಣಿಸಿದರು. ಮೇಘಪುಷ್ಪ, ಬಲಾಹಕ, ಸೈನ್ಯ ಮತ್ತು ಸುಗ್ರೀವರೆಂಬ ವಾಸುದೇವನ ಕುದುರೆಗಳನ್ನು ದಾರುಕನು ನಡೆಸಿದನು. ದಾರುಕನಿಂದ ಪ್ರಚೋದಿತಗೊಂಡ ವಾಸುದೇವನ ಕುದುರೆಗಳು ಗೊರಸುಗಳ ಅಗ್ರಭಾಗದಿಂದ ಭೂಮಿಯನ್ನು ಗೀರುತ್ತಾ ಬಹಳ ಬೇಗ ಧಾವಿಸಿದವು. ಆ ವೇಗವುಳ್ಳ ಮಹಾಬಲಶಾಲೀ ಕುದುರೆಗಳು ಆಕಾಶವನ್ನೇ ನುಂಗಿಹಾಕುವವೋ ಎನ್ನುವಂತೆ ಸಾಗಿ ಸಮಸ್ತ ಧರ್ಮಕ್ಕೂ ಕ್ಷೇತ್ರವಾದ ಕುರುಕ್ಷೇತ್ರಕ್ಕೆ ಬಂದು ತಲುಪಿದವು. ಅನಂತರ ಅವರು ದೇವಗಣಗಳೊಂದಿಗೆ ಇದ್ದ ಬ್ರಹ್ಮನಂತೆ ಬ್ರಹ್ಮರ್ಷಿಗಳೊಂದಿಗೆ ಶರತಲ್ಪದಲ್ಲಿ ಮಲಗಿದ್ದ ಪ್ರಭು ಭೀಷ್ಮನಿದ್ದಲ್ಲಿಗೆ ಬಂದರು. ಆಗ ಗೋವಿಂದ, ಯುಧಿಷ್ಠಿರ, ಭೀಮ, ಗಾಂಡೀವಧನ್ವಿ, ಯಮಳರು ಮತ್ತು ಸಾತ್ಯಕಿಯರು ರಥದಿಂದಿಳಿದು

ಬಲಗೈಗಳನ್ನೆತ್ತಿ ಅಲ್ಲಿದ್ದ ಋಷಿಗಳನ್ನು ಗೌರವಿಸಿದರು. ನಕ್ಷತ್ರಗಳಿಂದ ಪರಿವೃತನಾದ ಚಂದ್ರನಂತೆ ಅವರಿಂದ ಪರಿವೃತನಾದ ರಾಜ ಯುಧಿಷ್ಠಿರನು ವಾಸವನು ಬ್ರಹ್ಮನ ಬಳಿಸಾರುವಂತೆ ಗಾಂಗೇಯನ ಬಳಿಸಾರಿದನು. ಕೆಳಗೆ ಬಿದ್ದಿದ್ದ ಆದಿತ್ಯನಂತೆ ಶರತಲ್ಪದಲ್ಲಿ ಮಲಗಿದ್ದ ಅವನನ್ನು ನೋಡಿ ಮಹಾಬಾಹು ಯುಧಿಷ್ಠಿರನು ಭಯದಿಂದ ಕೂಡಲೇ ಅವನನ್ನು ಎದುರಿಸಲಿಲ್ಲ.

ಶರತಲ್ಪಗತನಾಗಿರುವ ಕೌರವರ ಧುರಂಧರ ಭೀಷ್ಮನ ಬಳಿ ನಾರದಪ್ರಮುಖ ಋಷಿಗಳು ಮತ್ತು ಸಿದ್ಧರು ಆಗಮಿಸಿದರು. ಮಹಾತ್ಮ ಯುಧಿಷ್ಠಿರನೇ ಮೊದಲಾದ ಅಳಿದುಳಿದ ರಾಜರು, ಧೃತರಾಷ್ಟ್ರ, ಕೃಷ್ಣ, ಭೀಮಾರ್ಜುನರು, ಯಮಳರು ಕೆಳಗೆ ಬಿದ್ದ ಸೂರ್ಯನಂತಿದ್ದ ಭಾರತರ ಪಿತಾಮಹ ಗಾಂಗೇಯನ ಬಳಿಸಾರಿ ಶೋಕಿಸಿದರು. ದೇವದರ್ಶನ ನಾರದನು ಮುಹೂರ್ತಕಾಲ ಧ್ಯಾನಿಸಿ ಪಾಂಡವರೆಲ್ಲರನ್ನೂ ಮತ್ತು ಅಳಿದುಳಿದ ಪಾರ್ಥಿವರನ್ನೂ ಉದ್ದೇಶಿಸಿ ಹೇಳಿದನು.

> “ಭಾರತ! ಅಸ್ತಮಿಸುವ ಸೂರ್ಯನಂತಿರುವ ಗಾಂಗೇಯನೊಡನೆ ಸಂಭಾಷಣೆಗೆ ತೊಡಗುವ ಸಮಯವು ಪ್ರಾಪ್ತವಾಗಿದೆ. ಇವನು ಪ್ರಾಣಗಳನ್ನು ತೊರೆಯುವ ಮೊದಲು ಎಲ್ಲವನ್ನೂ ಕೇಳಬೇಕು. ಏಕೆಂದರೆ ಇವನು ಚಾರುರ್ವಣಗಳ

ವಿವಿಧ ಧರ್ಮಗಳನ್ನೂ ಸಂಪೂರ್ಣವಾಗಿ ತಿಳಿದಿರುತ್ತಾನೆ. ಈ ವೃದ್ಧನು ತನುವನ್ನು ತ್ಯಜಿಸಿ ಲೋಕಗಳಿಗೆ ತೆರಳುವ ಮೊದಲೇ ಶೀಘ್ರವಾಗಿ ಮನಸ್ಸಿನಲ್ಲಿರುವ ಸಂಶಯಗಳನ್ನು ಕೇಳಬೇಕು!"

ಭೀಷ್ಮನ ಕುರಿತು ನಾರದನು ಹೀಗೆ ಹೇಳಲು ಅಲ್ಲಿದ್ದ ನರಾಧಿಪರು ಏನನ್ನೂ ಕೇಳಲು ಶಕ್ತರಾಗದೇ ಪರಸ್ಪರರನ್ನು ನೋಡತೊಡಗಿದರು. ಆಗ ಪಾಂಡುಪುತ್ರ ಯುಧಿಷ್ಠಿರನು ಹೃಷೀಕೇಶನಿಗೆ ಹೇಳಿದನು:

"ದೇವಕೀಪುತ್ರ! ನಿನ್ನನ್ನು ಬಿಟ್ಟು ಬೇರೆ ಯಾರೂ ಪಿತಾಮಹನನ್ನು ಪ್ರಶ್ನಿಸಲು ಶಕ್ತರಿಲ್ಲ! ನೀನೇ ಮುಂದೆನಿಂತು ವ್ಯವಹರಿಸು! ಏಕೆಂದರೆ ನೀನೇ ಎಲ್ಲರ ಎಲ್ಲ ಧರ್ಮಗಳನ್ನೂ ತಿಳಿದಿರುವೆ!"

ಪಾಂಡವನು ಹೀಗೆ ಹೇಳಲು ಭಗವಾನ್ ಅಚ್ಯುತ ಕೇಶವನು ದುರಾಧರ್ಷ ಭೀಷ್ಮನ ಬಳಿಸಾರಿ ಮಾತನಾಡಿದನು:

"ರಾಜಸತ್ತಮ! ನೀನು ರಾತ್ರಿಯನ್ನು ಸುಖವಾಗಿ ಕಳೆದೆಯಲ್ಲವೇ? ನಿನ್ನ ಬುದ್ಧಿಯು ಸ್ಥಿರವಾಗಿ, ಸ್ಪಷ್ಟವಾಗಿ ಕಾಣುತ್ತಿದೆ ತಾನೇ? ಸರ್ವ ಜ್ಞಾನಗಳೂ ನಿನಗೆ ಹೊಳೆಯುತ್ತಿವೆ ತಾನೇ? ಹೃದಯದಲ್ಲಿ ದುಃಖವಿಲ್ಲ ತಾನೇ? ಮನಸ್ಸು

ವ್ಯಾಕುಲಗೊಂಡಿಲ್ಲ ತಾನೇ?”

ಭೀಷ್ಮನು ಹೇಳಿದನು:

“ಗೋವಿಂದ! ನಿನ್ನ ಪ್ರಸಾದದಿಂದ ಬಾಯಾರಿಕೆ, ಮೋಹ, ಸುಸ್ತು, ನೋವು, ದುಃಖ ಮತ್ತು ರುಜಿನಗಳು ಸದ್ಯ ಹೊರಟುಹೋಗಿವೆ! ಕೈಯಲ್ಲಿರುವ ಫಲದಂತೆ ಭೂತ-ಭವ್ಯ-ವರ್ತಮಾನಗಳನ್ನು ಸ್ವಚ್ಛವಾಗಿ ಕಾಣುತ್ತಿದ್ದೇನೆ. ನಿನ್ನ ವರದಾನದಿಂದ ವೇದಗಳು ಹೇಳಿರುವ ಧರ್ಮಗಳೂ, ವೇದಾಂತಗಳ ನಿಶ್ಚಯಗಳೂ ಎಲ್ಲವನ್ನೂ ನಾನು ಕಾಣುತ್ತಿದ್ದೇನೆ. ಶಿಷ್ಟರು ಯಾವುದನ್ನು ಧರ್ಮವೆಂದು ಕರೆಯುತ್ತಾರೆಯೋ ಅದೂ ಕೂಡ ನನ್ನ ಹೃದಯದಲ್ಲಿ ಪ್ರತಿಷ್ಠಿತವಾಗಿದೆ. ದೇಶ-ಜಾತಿ-ಕುಲಗಳ ಧರ್ಮಗಳನ್ನೂ ತಿಳಿದಿರುತ್ತೇನೆ. ನಾಲ್ಕು ಆಶ್ರಮಧರ್ಮಗಳೂ ಅವುಗಳ ಅರ್ಥಗಳೂ ನನ್ನ ಹೃದಯದಲ್ಲಿ ನೆಲೆಸಿವೆ. ಸಕಲ ರಾಜಧರ್ಮಗಳನ್ನೂ ತಿಳಿದುಕೊಂಡಿದ್ದೇನೆ. ಯಾವ ಯಾವ ವಿಷಯದ ಕುರಿತು ಹೇಳಬೇಕೋ ಅದನ್ನು ನಾನು ಹೇಳುತ್ತೇನೆ. ನಿನ್ನ ಪ್ರಸಾದದಿಂದ ನನ್ನ ನಿರ್ಮಲ ಮನಸ್ಸನ್ನು ಶುಭ ಬುದ್ಧಿಯು ಪ್ರವೇಶಿಸಿದೆ. ಸದಾ ನಿನ್ನನ್ನೇ ಧ್ಯಾನಿಸುತ್ತಿರುವ

ನಾನು ವೃದ್ಧನಾದರೂ ಯುವಕನಂತಾಗಿಬಿಟ್ಟಿದ್ದೇನೆ. ನಿನ್ನ ಪ್ರಸಾದದಿಂದ ಶ್ರೇಯವಾದುದನ್ನು ಹೇಳಲು ಸಮರ್ಥನಾಗಿದ್ದೇನೆ. ಆದರೆ ಸ್ವಯಂ ನೀನೇ ಪಾಂಡವರಿಗೆ ಶ್ರೇಯವಾದುದನ್ನು ಏಕೆ ಹೇಳುತ್ತಿಲ್ಲ? ನಾನೇ ಅವುಗಳನ್ನು ಹೇಳಬೇಕೆನ್ನುವುದರಲ್ಲಿ ನಿನ್ನ ಉದ್ದೇಶವಾದರೂ ಏನು ಅದನ್ನು ಬೇಗನೇ ಹೇಳು!"

ವಾಸುದೇವನು ಹೇಳಿದನು:

"ಕೌರವ! ಎಲ್ಲರ ಶ್ರೇಯಸ್ಸು ಮತ್ತು ಯಶಸ್ಸುಗಳಿಗೆ ನಾನೇ ಮೂಲನೆಂದು ತಿಳಿ. ಪ್ರಪಂಚದಲ್ಲಿರುವ ಸತ್ ಮತ್ತು ಅಸತ್ ಎಲ್ಲ ಭಾವಗಳೂ ನನ್ನಿಂದಲೇ ಪ್ರಾದುರ್ಭವಿಸಿವೆ. ಚಂದ್ರನು ಶೀತಲಕಿರಣಗಳನ್ನು ಹೊಂದಿದ್ದಾನೆ ಎಂದು ಹೇಳಿದರೆ ಲೋಕದಲ್ಲಿ ಯಾರುತಾನೇ ವಿಸ್ಮಯಗೊಳ್ಳುತ್ತಾರೆ? ಹಾಗೆಯೇ ಯಶಸ್ಸಿನಿಂದ ಪೂರ್ಣನಾಗಿರುವ ನಾನು ಉಪದೇಶನೀಡಿದರೆ ಯಾರುತಾನೇ ವಿಸ್ಮಯಗೊಳ್ಳುತ್ತಾರೆ? ಭೀಷ್ಮ! ಈ ಜಗತ್ತಿನಲ್ಲಿ ನಿನ್ನ ಯಶಸ್ಸನ್ನು ಇನ್ನೂ ಹೆಚ್ಚಿಸಬೇಕೆಂಬುದೇ ನನ್ನ ಆಶಯವಾಗಿದೆ. ಆದುದರಿಂದ ನನ್ನ ವಿಪುಲ ಬುದ್ಧಿಯನ್ನು ನಿನ್ನಲ್ಲಿಯೇ ಒಂದುಗೂಡಿಸಿದ್ದೇನೆ. ಎಲ್ಲಿಯವರೆಗೆ ಈ

ಪೃಥ್ವಿಯು ಸ್ಥಿರವಾಗಿ ನಿಂತಿರುವುದೋ ಅಲ್ಲಿಯವರೆಗೆ ನಿನ್ನ ಅಕ್ಷಯ ಕೀರ್ತಿಯು ಲೋಕಗಳಲ್ಲಿ ವ್ಯಾಪ್ತವಾಗಿರುತ್ತದೆ. ಪಾಂಡವನು ಕೇಳಿದುದಕ್ಕೆ ನೀನು ಏನನ್ನು ಹೇಳುತ್ತೀಯೋ ಅದು ವಸುಧಾತಲದಲ್ಲಿ ವೇದವಾಖ್ಯವಾಗಿ ನಿಲ್ಲುತ್ತದೆ. ನಿನ್ನ ಮಾತುಗಳನ್ನು ಪ್ರಮಾಣಭೂತವನ್ನಾಗಿಟ್ಟುಕೊಂಡು ಯಾರು ತನ್ನ ಜೀವನದಲ್ಲಿ ಅಳವಡಿಸಿಕೊಳ್ಳುತ್ತಾನೆಯೋ ಅವನು ಆ ಸರ್ವಪುಣ್ಯಗಳ ಫಲಗಳನ್ನೂ ಮರಣಾನಂತರದಲ್ಲಿ ಪಡೆದುಕೊಳ್ಳುತ್ತಾನೆ. ಈ ಕಾರಣದಿಂದಲೇ ನಿನ್ನ ಯಶಸ್ಸನ್ನು ಹೇಗೆ ಹೆಚ್ಚಿಸಬೇಕು ಎಂದು ಆಲೋಚಿಸಿ, ನನ್ನ ದಿವ್ಯ ಮತಿಯನ್ನು ನಿನಗೆ ಇತ್ತಿದ್ದೇನೆ. ಎಲ್ಲಿಯವರೆಗೆ ಪುರುಷನ ಯಶಸ್ಸು ಭುವಿಯ ಜನರಲ್ಲಿ ಹರಡಿರುತ್ತದೆಯೋ ಅಲ್ಲಿಯವರೆಗೆ ಅವನ ಸ್ಥಾನವು ಅಕ್ಷಯವಾಗಿರುತ್ತದೆ ಎನ್ನುವುದು ನಿಶ್ಚಿತವಾಗಿದೆ. ಅಳಿದುಳಿದ ರಾಜರು ನಿನ್ನಿಂದ ಧರ್ಮವನ್ನು ತಿಳಿದುಕೊಳ್ಳಬೇಕೆಂಬ ಇಚ್ಛೆಯಿಂದ ನಿನ್ನ ಸುತ್ತಲೂ ಕುಳಿತಿದ್ದಾರೆ. ಅವರೆಲ್ಲರಿಗೂ ಉಪದೇಶಿಸು! ನೀನು ವಯಸ್ಸಿನಲ್ಲಿ ವೃದ್ಧನಾಗಿರುವೆ. ಶಾಸ್ತ್ರಜ್ಞಾನ ಮತ್ತು ಸದಾಚಾರಗಳಿಂದ ಕೂಡಿರುವೆ. ಹಿಂದಿದ್ದ ಮತ್ತು ಮುಂದೆ

ಬೇಕಾಗುವ ರಾಜಧರ್ಮಗಳಲ್ಲಿ ಕುಶಲನಾಗಿರುವೆ. ಜನ್ಮಪ್ರಭೃತಿ ನಿನ್ನಲ್ಲಿ ಯಾವುದೇ ದೋಷವನ್ನೂ ಕಂಡಿಲ್ಲ. ನೀನು ಸರ್ವಧರ್ಮಗಳನ್ನು ತಿಳಿದಿರುವೆ ಎಂದು ಸರ್ವಪಾರ್ಥಿವರೂ ಅರಿತಿದ್ದಾರೆ. ತಂದೆಯು ಮಕ್ಕಳಿಗೆ ಉಪದೇಶಿಸುವಂತೆ ಇವರಿಗೆ ಪರಮ ನೀತಿಯನ್ನು ಉಪದೇಶಿಸು. ಋಷಿಗಳನ್ನೂ ದೇವತೆಗಳನ್ನೂ ನೀನು ನಿತ್ಯವೂ ಉಪಾಸಿಸಿರುವೆ. ಆದುದರಿಂದ ಇವರಿಗೆ ನೀನು ಸಂಪೂರ್ಣವಾಗಿ ಉಪದೇಶಿಸಬೇಕೆಂದು ನನಗನ್ನಿಸುತ್ತದೆ. ಧರ್ಮವನ್ನು ತಿಳಿಯಲು ಇಚ್ಛೆಯುಳ್ಳವರು ವಿದುಷನನ್ನು ಕೇಳಿದರೆ ಆ ಧರ್ಮವನ್ನು ತಿಳಿಸಬೇಕೆಂದು ಮನೀಷಿಣರು ಹೇಳುತ್ತಾರೆ. ಹಾಗೆ ಹೇಳದೇ ಇದ್ದವನಿಗೆ ಕಷ್ಟವೂ ದೋಷವೂ ಆಗುತ್ತದೆ. ಆದುದರಿಂದ ಸನಾತನ ಧರ್ಮದ ಕುರಿತು ಕೇಳುತ್ತಿರುವ ನಿನ್ನ ಪುತ್ರ-ಪೌತ್ರರಿಗೆ  ವಿದ್ವಾನನೂ ಜಿಜ್ಞಾಸೆಮಾಡಬಲ್ಲನೂ ಆದ ನೀನು ಉಪದೇಶಿಸು!”

ಆಗ ಮಹಾತೇಜಸ್ವಿ ಕೌರವನಂದನನು ಹೇಳಿದನು:

“ಗೋವಿಂದ! ಈಗ ನಾನು ಧರ್ಮಗಳ ಪ್ರವಚನವನ್ನು ಮಾಡುತ್ತೇನೆ. ನೀನು ಶಾಶ್ವತನಾದ ಸರ್ವಭೂತಗಳ

ಆತ್ಮನಾಗಿರುವೆ. ನಿನ್ನ ಪ್ರಸಾದದಿಂದ ನನ್ನ ಮನಸ್ಸು ಮಾತುಗಳೂ ದೃಢವಾಗಿವೆ. ರಾಜಾ ಯುಧಿಷ್ಠಿರನು ನನ್ನಲ್ಲಿ ಧರ್ಮಗಳ ಕುರಿತು ಪ್ರಶ್ನಿಸಲಿ. ಅದರಿಂದ ನಾನು ಪ್ರೀತನಾಗುತ್ತೇನೆ. ಧರ್ಮಗಳನ್ನು ಹೇಳುತ್ತೇನೆ. ಯಾರು ಹುಟ್ಟಿದಾಗ ಸರ್ವ ಋಷಿಗಳೂ ಹರ್ಷಿತರಾದರೋ ಆ ಧರ್ಮಾತ್ಮ ಮಹಾತ್ಮ ಪಾಂಡವ ರಾಜರ್ಷಭನು ನನ್ನಲ್ಲಿ ಪ್ರಶ್ನಿಸಲಿ! ಯಾರು ಎಲ್ಲ ಧರ್ಮಚಾರೀ ಕುರುಗಳ ಯಶಸ್ಸನ್ನು ಬೆಳಗಿಸಿದನೋ ಮತ್ತು ಯಾರಿಗೆ ಸಮನಾದವರು ಬೇರೆ ಯಾರೂ ಇಲ್ಲವೋ ಆ ಪಾಂಡವನು ನನ್ನಲ್ಲಿ ಪ್ರಶ್ನಿಸಲಿ! ಯಾರಲ್ಲಿ ನಿತ್ಯವೂ ಧೃತಿ, ದಮ, ಬ್ರಹ್ಮಚರ್ಯ, ಕ್ಷಮೆ, ಧರ್ಮ, ಓಜಸ್ಸು ಮತ್ತು ತೇಜಸ್ಸುಗಳು ನೆಲಸಿವೆಯೋ ಆ ಪಾಂಡವನು ನನ್ನಲ್ಲಿ ಪ್ರಶ್ನಿಸಲಿ! ಯಾರಲ್ಲಿ ಸತ್ಯ, ದಾನ, ತಪಸ್ಸು, ಶೌಚ, ಶಾಂತಿ, ದಕ್ಷತೆ ಅತ್ತು ಅಸಂಭ್ರಮ ಈ ಸರ್ವ ಗುಣಗಳೂ ಇವೆಯೋ ಆ ಪಾಂಡವನು ನನ್ನಲ್ಲಿ ಪ್ರಶ್ನಿಸಲಿ! ಯಾರು ಕಾಮ, ಕ್ರೋಧ, ಭಯ ಮತ್ತು ಅರ್ಥಕ್ಕಾಗಿ ಅಧರ್ಮವನ್ನು ಎಸಗಲಿಲ್ಲವೋ ಆ ಧರ್ಮಾತ್ಮ ಪಾಂಡವನು ನನ್ನಲ್ಲಿ ಪ್ರಶ್ನಿಸಲಿ! ಸಂಬಂಧಿಗಳನ್ನೂ, ಅತಿಥಿಗಳನ್ನೂ,

ಸೇವಕರನ್ನೂ, ಮತ್ತು ಆಶ್ರಿತರನ್ನು ಸತ್ಕರಿಸಿ ಸನ್ಮಾನಿಸುವ ಪಾಂಡವನು ನನ್ನಲ್ಲಿ ಪ್ರಶ್ನಿಸಲಿ! ಸತ್ಯನಿತ್ಯನೂ, ಕ್ಷಮಾನಿತ್ಯನೂ, ಜ್ಞಾನನಿತ್ಯನೂ, ಅತಿಥಿಪ್ರಿಯನೂ, ಸದಾ ಸತ್ಪುರುಷರಿಗೆ ದಾನನೀಡುವವನೂ ಆದ ಪಾಂಡವನು ನನ್ನಲ್ಲಿ ಪ್ರಶ್ನಿಸಲಿ! ನಿತ್ಯವೂ ಅಧ್ಯಯನ-ಯಾಗಗಳಲ್ಲಿ ಮತ್ತು ಸದಾ ಧರ್ಮದಲ್ಲಿ ನಿರತನಾಗಿರುವ, ಶ್ರುತಿಗಳ ರಹಸ್ಯಗಳನ್ನು ತಿಳಿದಿರುವ ಶಾಂತ ಪಾಂಡವನು ನನ್ನಲ್ಲಿ ಪ್ರಶ್ನಿಸಲಿ!”

ವಾಸುದೇವನು ಹೇಳಿದನು:

“ಧರ್ಮಾತ್ಮ ಯುಧಿಷ್ಠಿರನು ಅತ್ಯಂತ ಲಜ್ಜಿತನಾಗಿದ್ದಾನೆ. ಅಭಿಶಾಪದ ಭಯದಿಂದ ಭೀತನಾಗಿ ಅವನು ನಿನ್ನ ಸಮೀಪಕ್ಕೆ ಬರುತ್ತಿಲ್ಲ. ಜನಸಂಹಾರದ ಕದನವನ್ನು ಮಾಡಿದ ಲೋಕನಾಥ ವಿಶಾಂಪತಿಯು ಅಭಿಶಾಪದ ಭಯದಿಂದ ಭೀತನಾಗಿ ನಿನ್ನ ಸಮೀಪಕ್ಕೆ ಬರುತ್ತಿಲ್ಲ. ಅರ್ಘ್ಯಾದಿಗಳನ್ನಿತ್ತು ಸತ್ಕರಿಸಲು ಅರ್ಹರಾದ ಪೂಜ್ಯರನ್ನೂ, ಮಾನ್ಯರನ್ನೂ, ಭಕ್ತರನ್ನೂ, ಗುರುಗಳನ್ನೂ, ಸಂಬಂಧಿ-ಬಾಂಧವರನ್ನೂ ಬಾಣಗಳಿಂದ ಸಂಹರಿಸಿದ ಕಾರಣದಿಂದ ಅವನು ನಿನ್ನ ಸಮೀಪಕ್ಕೆ ಬರುತ್ತಿಲ್ಲ.”

ಭೀಷ್ಮನು ಹೇಳಿದನು:

“ಕೃಷ್ಣ! ಬ್ರಾಹ್ಮಣರಿಗೆ ದಾನ-ಅಧ್ಯಯನ-ತಪಸ್ಸುಗಳು ಹೇಗೆ ಧರ್ಮವೋ ಹಾಗೆ ಸಮರದಲ್ಲಿ ಶಸ್ತ್ರಗಳ ಮೂಲಕ ಸಂಹರಿಸುವುದು ಕ್ಷತ್ರಿಯರ ಧರ್ಮ! ಮಿಥ್ಯರಾಗಿ ನಡೆದುಕೊಳ್ಳುವ ಪಿತೃಗಳನ್ನು, ಪಿತಾಮಹರನ್ನು, ಪುತ್ರರನ್ನು, ಗುರುಗಳನ್ನು ಮತ್ತು ಸಂಬಂಧಿ-ಬಾಂಧವರನ್ನು ಯುದ್ಧದಲ್ಲಿ ಸಂಹರಿಸುವುದು ಅವನಿಗೆ ಧರ್ಮವೇ ಆಗಿದೆ. ಲುಬ್ಧರಾಗಿ ಒಪ್ಪಂದಗಳನ್ನು ತ್ಯಜಿಸುವ ಪಾಪಿ ಗುರುಗಳನ್ನೂ ಕೂಡ ಸಮರದಲ್ಲಿ ಸಂಹರಿಸುವ ಕ್ಷತ್ರಿಯನು ಧರ್ಮವಿದುವೇ ಆಗಿರುತ್ತಾನೆ. ಕ್ಷತ್ರಬಂಧುವು ರಣಕ್ಕೆ ಆಹ್ವಾನಿಸಿದಾಗ ನಿತ್ಯವೂ ಯುದ್ಧಮಾಡಬೇಕು. ಕ್ಷತ್ರಿಯನಿಗೆ ಯುದ್ಧವೇ ಧರ್ಮ, ಸ್ವರ್ಗ ಮತ್ತು ಯಶಸ್ಸನ್ನು ಉಂಟುಮಾಡುವು ಎಂದು ಮನುವೇ ಹೇಳಿದ್ದಾನೆ.”

ಭೀಷ್ಮನು ಹೀಗೆ ಹೇಳಲು ಧರ್ಮರಾಜ ಯುಧಿಷ್ಠಿರನು ವಿನೀತನಾಗಿ ಭೀಷ್ಮನ ಸಮೀಪಕ್ಕೆ ಹೋಗಿ ಅವನ ದೃಷ್ಟಿಗೆ ಅಭಿಮುಖನಾಗಿ ನಿಂತುಕೊಂಡನು. ಅವನು ಭೀಷ್ಮನ ಎರಡು ಪಾದಗಳನ್ನೂ ಹಿಡಿದು ನಮಸ್ಕರಿಸಿದನು. ಭೀಷ್ಮನು ಯುಧಿಷ್ಠಿರನ ನೆತ್ತಿಯನ್ನು ಆಘ್ರಾಣಿಸಿ,

ಆಶ್ವಾಸನೆಯನ್ನಿತ್ತು, ಕುಳಿತುಕೊಳ್ಳಲು ಹೇಳಿದನು. ಆಗ ಸರ್ವಧನ್ವಿಗಳ ಋಷಭ ಗಾಂಗೇಯನು

> "ಮಗೂ! ನಿರ್ಭಯನಾಗಿ ಶ್ರದ್ಧೆಯಿಂದ ನನ್ನನ್ನು ಪ್ರಶ್ನಿಸು! ಭಯಪಡಬೇಡ!" ಎಂದನು.

ಹೃಷೀಕೇಶನಿಗೆ ನಮಸ್ಕರಿಸಿ, ಪಿತಾಮಹನಿಗೂ ಅಭಿವಾದನ ಮಾಡಿ, ಸರ್ವ ಗುರುಗಳ ಅನುಮತಿಯನ್ನೂ ಪಡೆದು ಯುಧಿಷ್ಠಿರನು ಭೀಷ್ಮನನ್ನು ಪ್ರಶ್ನಿಸಿದನು:

> "ಪಾರ್ಥಿವ! ರಾಜನಿಗೆ ರಾಜ್ಯವೇ ಪರಮ ಧರ್ಮವೆಂದು ಧರ್ಮವನ್ನು ತಿಳಿದವರು ಹೇಳುತ್ತಾರೆ. ಆದರೆ ಈ ರಾಜಧರ್ಮವು ಅತ್ಯಂತ ದೊಡ್ಡ ಹೊಣೆಯೆಂದು ನನಗನ್ನಿಸುತ್ತದೆ. ಅದರ ಕುರಿತು ಹೇಳು! ಪಿತಾಮಹ! ವಿಶೇಷವಾಗಿ ರಾಜಧರ್ಮಗಳ ಕುರಿತೇ ಹೇಳು! ಲೋಕದ ಸರ್ವ ಜೀವಿಗಳಿಗೆ ರಾಜಧರ್ಮಗಳೇ ಆಶ್ರಯಸ್ಥಾನವಾಗಿವೆ. ಕೌರವ! ರಾಜಧರ್ಮಗಳಲ್ಲಿ ಧರ್ಮ-ಅರ್ಥ-ಕಾಮಗಳೆಂಬ ತ್ರಿವರ್ಗಗಳೂ ಸೇರಿಕೊಂಡಿವೆ. ಸಕಲ ಮೋಕ್ಷಧರ್ಮವೂ ಇದರಲ್ಲಿಯೇ ಸೇರಿಕೊಂಡಿದೆ. ಕುದುರೆಗಳಿಗೆ ಕಡಿವಾಣಗಳು

ಹೇಗೋ ಮತ್ತು ಆನೆಗೆ ಅಂಕುಶವು ಹೇಗೋ ಹಾಗೆ ರಾಜಧರ್ಮವು ಲೋಕವನ್ನು ಹತೋಟಿಯಲ್ಲಿಟ್ಟುಕೊಳ್ಳಲು ಅವಶ್ಯಕವೆಂದು ಹೇಳುತ್ತಾರೆ. ರಾಜರ್ಷಿಗಳು ನಡೆದುಕೊಂಡು ಬಂದಿರುವ ಈ ಧರ್ಮದ ವಿಷಯದಲ್ಲಿ ವಿಮೋಹಗೊಂಡರೆ ಲೋಕದ ವ್ಯವಸ್ಥೆಯೇ ಅಸ್ತವ್ಯಸ್ತವಾಗುತ್ತದೆ. ಎಲ್ಲವೂ ವ್ಯಾಕುಲಗೊಳ್ಳುತ್ತವೆ. ಸೂರ್ಯನು ಉದಯಿಸುತ್ತಿದ್ದಂತೆಯೇ ಅಮಂಗಳಕರ ಕತ್ತಲೆಯು ನಾಶವಾಗುವಂತೆ ರಾಜಧರ್ಮದಿಂದ ಲೋಕದ ಅಮಂಗಳಕರ ಅಪ್ರಕಾಶವಾದ ಮಾರ್ಗವು ದೂರವಾಗುತ್ತದೆ. ಪಿತಾಮಹ! ಭರತಶ್ರೇಷ್ಠ! ನೀನು ಬುದ್ಧಿವಂತರಲ್ಲಿಯೇ ಶ್ರೇಷ್ಠನಾಗಿರುವೆ! ಆದುದರಿಂದ ಮೊದಲು ನನಗೆ ರಾಜಧರ್ಮಗಳನ್ನು ತತ್ತ್ವಾರ್ಥಗಳೊಂದಿಗೆ ಹೇಳಿ ತಿಳಿಸು! ಪರಂತಪ! ಅನಂತರ ಆಗಮಗಳ ತತ್ತ್ವಗಳೆಲ್ಲವನ್ನೂ ಹೇಳು. ನೀನು ಪರಮ ಬುದ್ಧಿಯುಳ್ಳವನು ಎಂದು ವಾಸುದೇವನ ಅಭಿಪ್ರಾಯವಾಗಿದೆ!”

ಭೀಷ್ಮನು ಹೇಳಿದನು:

“ಮಹತ್ತರ ಧರ್ಮಕ್ಕೆ ನಮಸ್ಕಾರ! ವಿಶ್ವದ ಸೃಷ್ಟಿಗೆ ಕಾರಣನಾದ ಕೃಷ್ಣನಿಗೆ ನಮಸ್ಕಾರ! ಬ್ರಾಹ್ಮಣರಿಗೆ

ನಮಸ್ಕರಿಸಿ ಶಾಶ್ವತ ಧರ್ಮಗಳ ಕುರಿತು ಹೇಳುತ್ತೇನೆ. ಯುಧಿಷ್ಠಿರ! ನನ್ನಿಂದ ರಾಜಧರ್ಮಗಳ ಕುರಿತು ಸಂಪೂರ್ಣವಾಗಿ ಕೇಳು. ನಾನು ಹೇಳುವಾಗ ಕೂಡ ಮಧ್ಯದಲ್ಲಿ ನೀನು ಬೇಕಾದ ಪ್ರಶ್ನೆಗಳನ್ನು ಕೇಳಬಹುದು! ಕುರುಶ್ರೇಷ್ಠ! ಮೊಟ್ಟಮೊದಲನೆಯದಾಗಿ ರಾಜನು ಯಥಾವಿಧಿಯಾಗಿ ದೇವತೆಗಳನ್ನು ಮತ್ತು ದ್ವಿಜರನ್ನು ತೃಪ್ತಿಗೊಳಿಸುವಂತೆ ನಡೆದುಕೊಳ್ಳಬೇಕು."

ಬಳಿಕ ಭೀಷ್ಮನು ಯುಧಿಷ್ಠಿರನಿಗೆ ರಾಜಧರ್ಮವನ್ನು ಸಂಪೂರ್ಣವಾಗಿ ತಿಳಿಸಿದನು. ಹಾಗೆಯೇ ನಂತರದ ಐದು ದಿನಗಳಲ್ಲಿ ಅವನು ಧರ್ಮರಾಜನಿಗೆ ಆಪದ್ಧರ್ಮ, ಮತ್ತು ಮೋಕ್ಷಧರ್ಮಗಳ ಕುರಿತು ಉಪದೇಶಿಸಿದನು.

# ಅನುಶಾಸನ ಪರ್ವ




## ಭೀಷ್ಮ ಸ್ವರ್ಗಾರೋಹಣ

ಯುಧಿಷ್ಠಿರನು ಹೇಳಿದನು:

“ಪಿತಾಮಹ! ಸೂಕ್ಷ್ಮವಾದ ಶಮೆಯ ಕುರಿತು ಬಹುವಿಧಾಕಾರವಾಗಿ ಹೇಳಿದ್ದೀಯೆ. ಆದರೆ ಇದನ್ನು ಮಾಡಿಯೂ ನನ್ನ ಹೃದಯಕ್ಕೆ ಶಾಂತಿಯು ಇಲ್ಲವಾಗಿದೆ. ಅನಘ! ಇದರ ಸಲುವಾಗಿ ನೀನು

ಬಹುವಿಧವಾಗಿ ಶಾಂತಿಯ ಕುರಿತು ಹೇಳಿರುವೆ. ಬಹುವಿಧಗಳಿಂದ ಶಾಂತಿಯನ್ನು ಪಡೆಯಬಹುದಾದರೂ ತಾನೇ ಮಾಡಿದ ಕರ್ಮಗಳಿಂದ ಯಾವ ಶಾಂತಿಯು ದೊರೆಯಬಲ್ಲದು? ವೀರ! ಶರಗಳಿಂದ ಚುಚ್ಚಲ್ಪಟ್ಟು ತೀವ್ರ ಗಾಯಗೊಂಡಿರುವ ನಿನ್ನನ್ನು ನೋಡಿ ನನ್ನ ದುಷ್ಕೃತಗಳ ಕುರಿತೇ ಚಿಂತಿಸುತ್ತಿರುವ ನನಗೆ ಶಾಂತಿಯು ದೊರೆಯದಾಗಿದೆ. ಪುರುಷವ್ಯಾಘ್ರ! ಗರಿಕಾದಿ ಧಾತುಗಳನ್ನು ಸುರಿಸುತ್ತಿರುವ ಪರ್ವತದಂತೆ ರಕ್ತದಿಂದ ತೋಯ್ದುಹೋಗಿರುವ ನಿನ್ನ ಅಂಗಾಂಗಗಳನ್ನು ನೋಡಿ ಮಳೆಯಲ್ಲಿ ಸಿಲುಕಿ ಮುದುಡಿಹೋಗುತ್ತಿರುವ ಕಮಲದಂತೆ ನಾನು ಮುದುಡಿದ್ದೇನೆ. ಪಿತಾಮಹ! ನನ್ನ ಸಲುವಾಗಿ ರಣಾಜಿರದಲ್ಲಿ ಶತ್ರುಗಳಿಂದ ನೀನು ಮತ್ತು ಅನ್ಯ ನೃಪತಿಗಳಿಗೆ ಪುತ್ರ-ಬಾಂಧವರೊಂದಿಗೆ ಈ ಅವಸ್ಥೆಯುಂಟಾಯಿತು ಎಂದರೆ ಇದಕ್ಕಿಂತಲೂ ಕಷ್ಟತರವಾದುದು ಬೇರೆ ಏನಿದೆ? ನೃಪ! ನಾವು ಮತ್ತು ಧಾರ್ತರಾಷ್ಟ್ರರು ಕಾಲ ಮತ್ತು ಕೋಪವಶಾನುಗರಾಗಿ ಈ ನಿಂದಿತ ಕರ್ಮವನ್ನು ಮಾಡಿದುದರಿಂದ ಯಾವ ಗತಿಯನ್ನು ಹೊಂದುತ್ತೇವೆಯೋ! ನಾನೇ ನಿನ್ನ ಸಂಹಾರಕನು ಮತ್ತು ಹಾಗೆಯೇ ಸುಹೃದಯರನ್ನು ವಧಿಸಿದವನು. ಭೂಮಿಯ ಮೇಲೆ ದುಃಖಿತನಾಗಿ ಮಲಗಿರುವ ನಿನ್ನನ್ನು ನೋಡಿ ನನಗೆ ಶಾಂತಿಯೇ ದೊರೆಯುತ್ತಿಲ್ಲ.”

ಭೀಷ್ಮನು ಹೇಳಿದನು:

“ಮಹಾಭಾಗ! ಪರತಂತ್ರನಾಗಿರುವ ನೀನು ಹೇಗೆ ತಾನೇ ನಿನ್ನನ್ನು ಇದಕ್ಕೆ ಕಾರಣನೆಂದು ಕಾಣುತ್ತಿದ್ದೀಯೆ? ಕರ್ಮವೇ ಇದಕ್ಕೆ ಸೂಕ್ಷ್ಮವೂ ಅತೀಂದ್ರಿಯವೂ ಆದ ಕಾರಣವು. ಇದಕ್ಕೆ ಸಂಬಂಧಿಸಿದಂತೆ ಪುರಾತನ ಇತಿಹಾಸವಾದ ಈ ಮೃತ್ಯು-ಗೌತಮಿ-ಕಾಲ-ವ್ಯಾಧ ಮತ್ತು ಪನ್ನಗಗಳ ಸಂವಾದವನ್ನು ಉದಾಹರಿಸುತ್ತಾರೆ.”

ಯುಧಿಷ್ಠಿರನಿಗೆ ಆ ಉತ್ತಮ ಸಂವಾದವನ್ನು ಹೇಳಿ ಭೀಷ್ಮನು ಇಂತೆಂದನು:

“ನೃಪ! ಮನುಜರ್ಷಭ! ಇದನ್ನು ಕೇಳಿ ಶಾಂತಿಯನ್ನು ಹೊಂದು. ಇನ್ನೂ ಚಿಂತಾಪರನಾಗಬೇಡ. ಸ್ವಕರ್ಮದಿಂದ ಎಲ್ಲರೂ ಲೋಕಗಳನ್ನು ಪಡೆಯುತ್ತಾರೆ ಎನ್ನುವುದನ್ನು ತಿಳಿದುಕೋ. ಪಾರ್ಥ! ಇದನ್ನು ನೀನಾಗಲೀ ದುರ್ಯೋಧನನಾಗಲೀ ಮಾಡಲಿಲ್ಲ. ಈ ಪಾರ್ಥಿವರು ಅವರ ಕರ್ಮಗಳಿಗನುಸಾರವಾಗಿ ಕಾಲದಿಂದಲೇ ಹತರಾದರೆಂದು ತಿಳಿ.””

ಈ ಮಾತನ್ನು ಕೇಳಿ ಮಹಾತೇಜಸ್ವಿ ಯುಧಿಷ್ಠಿರನು ವಿಗತಜ್ವರನಾದನು. ಆ ಧರ್ಮವಿದು ಪುನಃ ಪ್ರಶ್ನಿಸಿದನು. ಹೀಗೆ ಭೀಷ್ಮನು ಯುಧಿಷ್ಠಿರನಿಗೆ ದಾನ-ಧರ್ಮಗಳ ಕುರಿತು ವಿವರಿಸಿದನು.

ಭೀಷ್ಮನು ಸುಮ್ಮನಾಗಲು ಅಲ್ಲಿ ಸೇರಿದ್ದ ಎಲ್ಲರೂ ಚಿತ್ರಪಟದಲ್ಲಿ ಅಂಕಿತಗೊಂಡ ಚಿತ್ರಗಳಂತೆ ಸ್ತಬ್ಧರಾದರು. ಆಗ ಒಂದು ಕ್ಷಣ ಯೋಚಿಸಿದ ಸತ್ಯವತೀಸುತ ವ್ಯಾಸನು ಮಲಗಿದ್ದ ನೃಪ ಗಾಂಗೇಯನಿಗೆ ಈ ಮಾತನ್ನಾಡಿದನು.

> "ರಾಜನ್! ಕುರುರಾಜ ಯುಧಿಷ್ಠಿರನು ಈಗ ಶಾಂತ ಮತ್ತು ಸಂದೇಹರಹಿತನಾಗಿ ತನ್ನ ಪ್ರಕೃತಿಯನ್ನು ಪಡೆದುಕೊಂಡಿದ್ದಾನೆ. ನರವ್ಯಾಘ್ರ! ಅವನು ಭ್ರಾತೃಗಳೊಂದಿಗೆ, ಸರ್ವ ಪಾರ್ಥಿವರು ಮತ್ತು ಅನುಯಾಯಿಗಳೊಂದಿಗೆ, ಹಾಗೂ ಧೀಮತ ಕೃಷ್ಣನೊಂದಿಗೆ ನಿನ್ನ ಸೇವೆಯಲ್ಲಿ ಬಂದಿದ್ದಾರೆ. ಇನ್ನು ನೀನು ಅವರಿಗೆ ಹಸ್ತಿನಾಪುರಕ್ಕೆ ಹೊರಡುವ ಅನುಮತಿಯನ್ನು ನೀಡಬೇಕು."

ಭಗವಂತ ವ್ಯಾಸನು ಹೀಗೆ ಹೇಳಲು ಪೃಥಿವೀಪತಿ ನದೀಸುತನು ಅಮಾತ್ಯರೊಡನಿದ್ದ ಯುಧಿಷ್ಠಿರನಿಗೆ ಅನುಮತಿಯನ್ನು ನೀಡಿದನು. ಆಗ ನೃಪ ಶಾಂತನವನು ಮಧುರವಾಗಿ ಅವನಿಗೆ ಹೇಳಿದನು ಕೂಡ:

> "ರಾಜನ್! ಪುರವನ್ನು ಪ್ರವೇಶಿಸು. ನಿನ್ನ ಮಾನಸ ಜ್ವರವು ಕಳೆಯಲಿ. ರಾಜೇಂದ್ರ! ಯಾಯಾತಿಯಂತೆ ನೀನು ಶ್ರದ್ಧೆ ಮತ್ತು ಇಂದ್ರಿಯನಿಗ್ರಹಗಳೊಂದಿಗೆ ಅನೇಕ ಆಪ್ತದಕ್ಷಿಣೆಗಳನ್ನಿತ್ತು ವಿವಿಧ ಯಜ್ಞಗಳನ್ನು ಮಾಡು. ಪಾರ್ಥ! ಕ್ಷತ್ರಧರ್ಮರತನಾಗಿ ಪಿತೃ-ದೇವತೆಗಳನ್ನು ತೃಪ್ತಿಪಡಿಸು. ಶ್ರೇಯಸ್ಸನ್ನು ಹೊಂದುತ್ತೀಯೆ ಮತ್ತು

ಮಾನಸ ಜ್ವರವನ್ನೂ ಕಳೆದುಕೊಳ್ಳುತ್ತೀಯೆ. ಸರ್ವಪ್ರಜೆಗಳನ್ನೂ ರಂಜಿಸು. ಮಂತ್ರಿಗಳೇ ಮೊದಲಾದ ಪ್ರಕೃತಿಗಳನ್ನು ಸಂತವಿಸು. ಯಥಾರ್ಹವಾಗಿ ಸುಹೃದಯರನ್ನು ಫಲ-ಸತ್ಕಾರಗಳಿಂದ ಗೌರವಿಸು. ಅಯ್ಯಾ! ದೇವಸ್ಥಾನಗಳಲ್ಲಿ ಇರುವ ಫಲವಂತ ವೃಕ್ಷವನ್ನು ಪಕ್ಷಿಗಳು ಹೇಗೆ ಆಶ್ರಯಿಸುತ್ತವೆಯೋ ಹಾಗೆ ನಿನ್ನನ್ನು ಅವಲಂಬಿಸಿ ನಿನ್ನ ಮಿತ್ರರು ಮತ್ತು ಸುಹೃದಯರು ಜೀವಿಸುವಂತಾಗಲಿ. ಪಾರ್ಥಿವ! ದಿನಕರನು ದಕ್ಷಿಣಾಯನದಿಂದ ಹಿಂದಿರುಗಿ ಉತ್ತರಾಯಣಕ್ಕೆ ಬರುವ ಸಮಯದಲ್ಲಿ ನೀನು ನನ್ನ ಬಳಿ ಬರಬೇಕು."

ಹಾಗೆಯೇ ಆಗಲೆಂದು ಹೇಳಿ ಪಿತಾಮಹನಿಗೆ ನಮಸ್ಕರಿಸಿ ಕೌಂತೇಯನು ಸಪರಿವಾರನಾಗಿ ನಾಗಸಾಹ್ವಯ ನಗರಿಗೆ ಹೊರಟನು. ಧೃತರಾಷ್ಟ್ರ ಮತ್ತು ಪತಿವ್ರತೆ ಗಾಂಧಾರಿಯರನ್ನು ಮುಂದಿಟ್ಟುಕೊಂಡು ಋಷಿಗಳು, ಸರ್ವ ಭ್ರಾತೃಗಳು ಮತ್ತು ಕೇಶವರೊಡನೆ, ಪೌರಜಾನಪದರು ಮತ್ತು ಮಂತ್ರಿವೃದ್ಧರೊಡನೆ ಕುರುಶ್ರೇಷ್ಠ ಪಾರ್ಥಿವನು ವಾರಣಸಾಹ್ವಯ ಪುರವನ್ನು ಪ್ರವೇಶಿಸಿದನು.

ಅನಂತರ ರಾಜಾ ಕುಂತೀಸುತನು ಪೌರ-ಜಾನಪದ ಜನರನ್ನು ಯಥಾನ್ಯಾಯವಾಗಿ ಪೂಜಿಸಿ ತಮ್ಮ ತಮ್ಮ ಮನೆಗಳಿಗೆ ಹೋಗಲು ಅನುಮತಿಯನ್ನಿತ್ತನು. ಆಗ ಪಾಂಡುಸುತ ನೃಪನು ವೀರರನ್ನು

ಕಳೆದುಕೊಂಡಿದ್ದ ಮತ್ತು ಪತಿಯಂದಿರನ್ನು ಕಳೆದುಕೊಂಡಿದ್ದ ನಾರೀಗಣಗಳಿಗೆ ಅಪಾರ ಐಶ್ವರ್ಯವನ್ನು ದಾನಮಾಡಿ ಸಂತವಿಸಿದನು. ಅಭಿಷಿಕ್ತನಾಗಿ ರಾಜ್ಯವನ್ನು ಪಡೆದ ಮಹಾಪ್ರಾಜ್ಞ ನರಶ್ರೇಷ್ಠ ಧರ್ಮಭೃತರಲ್ಲಿ ಶ್ರೇಷ್ಠ ಯುಧಿಷ್ಠಿರನು ಮಂತ್ರಿಗಳೇ ಮೊದಲಾದ ಸಮಸ್ತ ಪ್ರಕೃತಿಗಣಗಳನ್ನೂ ಅವರವರ ಸ್ಥಾನಗಳಲ್ಲಿ ನಿಯೋಜಿಸಿ ಶಕ್ತಿಯುತ ದ್ವಿಜ ಮುಖ್ಯರಿಂದ ಶ್ರೇಷ್ಠ ಆಶೀರ್ವಾದಗಳನ್ನು ಪಡೆದನು. ಶ್ರೀಮಾನ್ ಪುರುಷರ್ಷಭನು ಆ ಉತ್ತಮ ನಗರದಲ್ಲಿ ಐವತ್ತು ರಾತ್ರಿಗಳನ್ನು ಕಳೆದು ಅನಂತರ ಕೌರವಾಗ್ರ್ಯ ಭೀಷ್ಮನನ್ನು ಸ್ಮರಿಸಿದನು. ಆದಿತ್ಯನು ಹಿಂದಿರುಗಿ ಉತ್ತರಾಯಣದ ಕಡೆ ಹೋಗುತ್ತಿರುವುದನ್ನು ನೋಡಿ ಅವನು ಯಾಜಕರಿಂದ ಪರಿವಾರಿತನಾಗಿ ಗಜಪುರದಿಂದ ಹೊರಟನು. ಇದಕ್ಕೆ ಮೊದಲೇ ಕೌಂತೇಯ ಯುಧಿಷ್ಠಿರನು ಭೀಷ್ಮನ ಸಂಸಾಧನೆಗಾಗಿ ತುಪ್ಪ, ಮಾಲೆ, ಗಂಧ, ಪಟ್ಟವಸ್ತ್ರಗಳು, ಚಂದನ- ಅಗರು -ಕಪ್ಪು ಅಗರು ಮೊದಲಾದವುಗಳು, ಮತ್ತು ಮಹಾಬೆಲೆಬಾಳುವ ವಿವಿದ ರತ್ನಗಳನ್ನೂ ಮಾಲೆಗಳನ್ನೂ ಕಳುಹಿಸಿದ್ದನು. ಆ ಧೀಮಾನ್ ಪುರುಷರ್ಷಭನು ಧೃತರಾಷ್ಟ್ರನನ್ನು ಮುಂದಿರಿಸಿಕೊಂಡು ಯಶಸ್ವಿನೀ ಗಾಂಧಾರೀ, ತಾಯಿ ಪೃಥೆ, ಸಹೋದರರು, ಜನಾರ್ದನನನ್ನು ಅನುಸರಿಸಿದ ಧೀಮಂತ ವಿದುರ, ಕೌರವ್ಯ ಯುಯುತ್ಸು, ಯುಯುಧಾನ, ಮತ್ತು ಮಹಾ ರಾಜಭೋಗ್ಯ ವಸ್ತುಗಳಿಂದ ಕೂಡಿಕೊಂಡು ಸ್ತುತಿಸಲ್ಪಡುತ್ತಾ ಭೀಷ್ಮನ ಮೂರು ಅಗ್ನಿಗಳನ್ನೂ ಅನುಸರಿಸುತ್ತಾ ಭೀಷ್ಮನಿದ್ದೆಡೆಗೆ ಹೊರಟನು. ದೇವಪತಿಯಂತೆ ಪುರದಿಂದ ಹೊರಟು ಅವನು ಕುರುಕ್ಷೇತ್ರದಲ್ಲಿದ್ದ ನೃಪ

ಶಾಂತನವನನ್ನು ತಲುಪಿದನು. ಧೀಮಂತ ಪಾರಶರ್ಯ ವ್ಯಾಸ, ನಾರದ ಮತ್ತು ದೇವಲ-ಅಸಿತರು ಹತ್ತಿರದಲ್ಲಿದ್ದ, ನಾನಾ ದೇಶಗಳಿಂದ ಬಂದು ಹತರಾಗದೇ ಉಳಿದಿದ್ದ ನೃಪರಿಂದ ಎಲ್ಲಕಡೆಗಳಿಂದ ರಕ್ಷಣೆಗೊಳಗಾಗಿದ್ದ, ವೀರಶಯನದಲ್ಲಿ ಮಲಗಿದ್ದ ಭೀಷ್ಮನನ್ನು ನೃಪತಿಯು ಕಂಡನು. ಆಗ ಸಹೋದರರೊಡನೆ ಕೌಂತೇಯ ಧರ್ಮರಾಜನು ರಥದಿಂದ ಇಳಿದು ಅರಿಂದಮ ಪಿತಾಮಹನನನ್ನೂ ದ್ವೈಪಾಯನನೇ ಮೊದಲಾದ ವಿಪ್ರರನ್ನೂ ನಮಸ್ಕರಿಸಿದನು. ಅವರೂ ಕೂಡ ಅವನನ್ನು ಪ್ರತಿನಂದಿಸಿದರು. ಬ್ರಹ್ಮಕಲ್ಪ ಋತ್ವಿಜರು ಮತ್ತು ಸಹೋದರರನ್ನೊಡಗೂಡಿ ಆ ಅಚ್ಯುತನು ಋಷಿಗಳಿಂದ ಸುತ್ತುವರೆಯಲ್ಪಟ್ಟು ಶರತಲ್ಪದಮೇಲಿದ್ದ ಭೀಷ್ಮನನ್ನು ಸಮೀಪಿಸಿದನು. ಆಗ ಧರ್ಮರಾಜ ಯುಧಿಷ್ಠಿರನು ಸಹೋದರರೊಂದಿಗೆ ಮಲಗಿದ್ದ ನದೀಸುತ ಭರತಶ್ರೇಷ್ಠನಿಗೆ ಹೇಳಿದನು:

> “ನೃಪತೇ! ಜಾಹ್ನವೀಸುತ! ಮಹಾಬಾಹೋ! ನಾನು ಯುಧಿಷ್ಠಿರ! ನಿನಗೆ ನಮಸ್ಕರಿಸುತ್ತಿದ್ದೇನೆ. ನಿನಗೆ ಕೇಳಿಸುತ್ತಿದೆ ತಾನೇ? ನಾನು ನಿನಗೆ ಏನು ಮಾಡಬಹುದೆನ್ನುವುದನ್ನು ಹೇಳು! ರಾಜನ್! ವಿಭೋ! ನೀನು ಹೇಳಿದ ಸಮಯಕ್ಕೆ ಸರಿಯಾಗಿ ನಿನ್ನ ಅಗ್ನಿಗಳನ್ನೂ, ಆಚಾರ್ಯ-ಬ್ರಾಹ್ಮಣರನ್ನೂ, ಋತ್ವಿಜರನ್ನೂ ಮತ್ತು ನನ್ನ ಸಹೋದರರನ್ನೂ ಕರೆದುಕೊಂಡು ಬಂದಿದ್ದೇನೆ. ಮಹಾತೇಜಸ್ವಿಯೇ! ನಿನ್ನ ಪುತ್ರ ಜನೇಶ್ವರ ಧೃತರಾಷ್ಟ್ರನು ತನ್ನ

> ಅಮಾತ್ಯರೊಂದಿಗೆ ಮತ್ತು ವೀರ್ಯವಾನ್ ವಾಸುದೇವನೂ ಕೂಡ ಇಲ್ಲಿ ಉಪಸ್ಥಿತರಿದ್ದಾರೆ. ಕುರುಜಾಂಗಲದಲ್ಲಿ ಅಳಿದುಳಿದ ರಾಜರೆಲ್ಲರೂ ಬಂದಿದ್ದಾರೆ. ಕುರುಶಾರ್ದೂಲ! ಕಣ್ಣುಗಳನ್ನು ತೆರೆದು ಇವರನ್ನು ನೋಡು! ಆಗ ನೀನು ಹೇಳಿದ್ದುದೆಲ್ಲವನ್ನೂ ಮಾಡಿದ್ದೇನೆ. ಏನು ಮಾಡಬೇಕೆಂದು ನೀನು ಬಯಸಿದ್ದೆಯೋ ಅವೆಲ್ಲವನ್ನೂ ನಾನು ಸಂಗ್ರಹಿಸಿಕೊಂಡು ಬಂದಿದ್ದೇನೆ."

ಧೀಮಂತ ಕುಂತೀಪುತ್ರನು ಹೀಗೆ ಹೇಳಲು ಗಾಂಗೇಯನು ತನ್ನನ್ನು ಸುತ್ತುವರೆದು ನಿಂತಿದ್ದ ಎಲ್ಲ ಭಾರತರನ್ನೂ ನೋಡಿದನು. ಆಗ ವಾಗ್ಮೀ ಭೀಷ್ಮನು ತನ್ನ ವಿಪುಲ ಭುಜವನ್ನು ಮೇಲೆತ್ತಿ ಗಂಭೀರ ಮೇಘಧ್ವನಿಯಲ್ಲಿ ಕಾಲಕ್ಕೆ ತಕ್ಕುದಾದ ಈ ಮಾತನ್ನಾಡಿದನು:

> "ಕೌಂತೇಯ! ಯುಧಿಷ್ಠಿರ! ಒಳ್ಳೆಯದಾಯಿತು! ಭಗವಾನ್ ಸಹಸ್ರಾಂಶು ದಿವಾಕರನು ದಕ್ಷಿಣಾಯನದಿಂದ ಉತ್ತರಾಯಣಕ್ಕೆ ತಿರುಗಿರುವಾಗ ಅಮಾತ್ಯರೊಂದಿಗೆ ನೀನು ಇಲ್ಲಿಗೆ ಬಂದಿರುವೆ! ನಾನು ಈ ಶಯನವನ್ನು ಪಡೆದು ಇಂದಿಗೆ ನೂರಾಐವತ್ತೆಂಟು ರಾತ್ರಿಗಳು ಕಳೆದುಹೋದವು. ನಿಶಿತಾಗ್ರ ಈ ಶರಗಳ ಮೇಲೆ ಮಲಗಿರುವುದರಿಂದ ಅದು ನೂರು ವರ್ಷಗಳಂತೆ ತೋರುತ್ತಿವೆ. ಯುಧಿಷ್ಠಿರ! ಪುಣ್ಯ ಮಾಘಮಾಸವು ಪ್ರಾರಂಭವಾಗಿದೆ. ಈ ಮಾಸದಲ್ಲಿ ಮೂರು ಭಾಗಗಳು ಉಳಿದಿವೆಯಾದ್ದರಿಂದ ಇದು

ಶುಕ್ಲಪಕ್ಷವೇ ಆಗಿರಬೇಕು.”

ಧರ್ಮಪುತ್ರ ಯುಧಿಷ್ಠಿರನಿಗೆ ಹೀಗೆ ಹೇಳಿ ಗಾಂಗೇಯನು ಧೃತರಾಷ್ಟ್ರನನ್ನು ಕರೆದು ಕಾಲಕ್ಕೆ ತಕ್ಕುದಾದ ಈ ಮಾತನ್ನಾಡಿದನು:

“ರಾಜನ್! ಧರ್ಮಗಳನ್ನು ತಿಳಿದುಕೊಂಡಿದ್ದೀಯೆ. ಅರ್ಥಶಾಸ್ತ್ರದ ಸಂಶಯಗಳನ್ನು ಚೆನ್ನಾಗಿ ನಿರ್ಣಯಿಸಿಕೊಂಡಿರುವೆ. ಅನೇಕ ಶಾಸ್ತ್ರಗಳನ್ನು ತಿಳಿದಿರುವ ಅನೇಕ ವಿಪ್ರರನ್ನು ನೀನು ಸೇವೆಗೈದಿರುವೆ. ಮನುಜೇಶ್ವರ! ವೇದಶಾಸ್ತ್ರಗಳೆಲ್ಲವನ್ನೂ, ಧರ್ಮಗಳನ್ನೂ, ನಾಲ್ಕು ವೇದಗಳನ್ನೂ, ಅವುಗಳ ಅಂಗಗಳೆಲ್ಲವನ್ನೂ ನೀನು ಅರ್ಥಮಾಡಿಕೊಂಡಿರುವೆ. ಕೌರವ್ಯ! ಶೋಕಿಸಬಾರದು! ಹೇಗೆ ಆಗಬೇಕಿತ್ತೋ ಅದು ಹಾಗೆಯೇ ಆಗಿಹೋಯಿತು! ಕೃಷ್ಣದ್ವೈಪಾಯನನಿಂದ ನೀನು ದೇವರಹಸ್ಯವನ್ನೂ ಕೇಳಿದ್ದೀಯೆ. ರಾಜನ್! ಇವರು ಹೇಗೆ ಪಾಂಡುವಿನ ಮಕ್ಕಳೋ ಧರ್ಮತಃ ಅವರು ನಿನ್ನ ಮಕ್ಕಳೂ ಕೂಡ. ಗುರುಶುಶ್ರೂಷಣೆಯಲ್ಲಿಯೇ ನಿರತರಾಗಿರುವ ಅವರನ್ನು ಧರ್ಮದಲ್ಲಿದ್ದುಕೊಂಡು ಪಾಲಿಸು! ನಿನ್ನ ನಿರ್ದೇಶನದಲ್ಲಿಯೇ ನಡೆದುಕೊಳ್ಳುವ ಈ ಧರ್ಮರಾಜನು ಶುದ್ಧಾತ್ಮ. ಇವನು ಕ್ರೂರನಲ್ಲ. ಗುರುವತ್ಸಲನು ಎಂದು ನಾನು ತಿಳಿದುಕೊಂಡಿದ್ದೇನೆ. ನಿನ್ನ ಪುತ್ರರು ದುರಾತ್ಮರೂ, ಕ್ರೋಧ-ಲೋಭ ಪರಾಯಣರೂ, ಅಸೂಯಾಪರರೂ ಆಗಿದ್ದರು. ದುರ್ವೃತ್ತರಾದ

ಅವರ ಕುರಿತು ಶೋಕಿಸಬಾರದು.”

ಮನೀಷಿಣಿ ಧೃತರಾಷ್ಟ್ರನಿಗೆ ಹೀಗೆ ಹೇಳಿ ಕೌರವ ಭೀಷ್ಮನು ಮಹಾಬಾಹು ವಾಸುದೇವನಿಗೆ ಹೇಳಿದನು:

“ಭಗವನ್! ದೇವದೇವೇಶ! ಸುರಾಸುರನಮಸ್ಕೃತ! ತ್ರಿವಿಕ್ರಮ! ಶಂಖಚಕ್ರಗದಾಧರ! ನಿನಗೆ ನಮಸ್ಕಾರ! ವೈಕುಂಠ! ಪುರುಷೋತ್ತಮ! ನನಗೆ ಅನುಜ್ಞೆಯನ್ನು ನೀಡು! ನೀನು ಪಾಂಡವರನ್ನು ರಕ್ಷಿಸಬೇಕು. ನೀನೇ ಇವರ ಪರಾಯಣನು. “ಎಲ್ಲಿ ಕೃಷ್ಣನಿರುವನೋ ಅಲ್ಲಿ ಧರ್ಮ ಮತ್ತು ಎಲ್ಲಿ ಧರ್ಮವಿರುವುದೋ ಅಲ್ಲಿ ಜಯ” ಎಂದು ಹಿಂದೆ ನಾನು ದುರ್ಬುದ್ಧಿ ಮಂದಬುದ್ಧಿ ದುರ್ಯೋಧನನಿಗೆ ಹೇಳಿದ್ದೆ. “ಪುತ್ರ! ವಾಸುದೇವನ ಸಹಾಯದಿಂದ ಪಾಂಡವರೊಡನೆ ಸಂಧಿಮಾಡಿಕೋ. ಇದೇ ಸಂಧಾನಕ್ಕೆ ಪರಮ ಸಮಯ!” ಎಂದು ಪುನಃ ಪುನಃ ಹೇಳಿದ್ದೆ. ಆ ಮೂಢ ಅತಿ ಮಂದಬುದ್ಧಿಯು ನನ್ನ ಮಾತಿನಂತೆ ಮಾಡಲಿಲ್ಲ. ಈಗ ಈ ಪೃಥ್ವಿಯನ್ನು ನಾಶಗೊಳಿಸಿ ತಾನೂ ನಿಧನಹೊಂದಿದನು. ವೀರ! ನೀನು ನರನ ಸಹಿತ ಬದರಿಯಲ್ಲಿ ಬಹುಕಾಲ ವಾಸಿಸುತ್ತಿದ್ದ ಪುರಾಣ ಋಷಿಸತ್ತಮನೆಂದು ತಿಳಿದಿದ್ದೇನೆ. ಆ ಮಹಾತಪಸ್ವಿಗಳಾದ ನರ-ನಾರಾಯಣರು ಮನುಷ್ಯರಾಗಿ ಹುಟ್ಟಿದ್ದಾರೆ ಎಂದು ನನಗೆ ನಾರದ ಮತ್ತು ವ್ಯಾಸರು ಹೇಳಿದ್ದರು.”

ವಾಸುದೇವನು ಹೇಳಿದನು:

> “ಭೀಷ್ಮ ! ನಿನಗೆ ಅನುಮತಿಯನ್ನು ನೀಡುತ್ತಿದ್ದೇನೆ. ಪಾರ್ಥಿವ ! ನೀನು ವಸುಗಳನ್ನು ಸೇರುವೆ. ಮಹಾದ್ಯುತೇ ! ನಿನಗೆ ಯಾವರೀತಿಯೂ ಪಾಪವೂ ಇಲ್ಲ ಎಂದು ನಾನು ಕಂಡಿದ್ದೇನೆ. ರಾಜರ್ಷೇ ! ನೀನು ಮಾರ್ಕಂಡೇಯನಂತೆ ಪಿತೃಭಕ್ತನಾಗಿರುವೆ. ಆದುದರಿಂದಲೇ ಮೃತ್ಯುವು ಸೇವಕನಂತೆ ನಿನ್ನ ವಶದಲ್ಲಿದೆ.””

ಇದನ್ನು ಕೇಳಿದ ಗಾಂಗೇಯನು ಪಾಂಡವರಿಗೆ, ಧೃತರಾಷ್ಟ್ರ ಮುಖ್ಯರಿಗೆ ಮತ್ತು ಅಲ್ಲಿದ್ದ ಎಲ್ಲ ಸುಹೃದಯರಿಗೆ ಹೇಳಿದನು:

> “ನಾನೀಗ ಪ್ರಾಣಪರಿತ್ಯಾಗಮಾಡಲು ಬಯಸಿದ್ದೇನೆ. ನನಗೆ ಅನುಜ್ಞೆಯನ್ನು ನೀಡಬೇಕು. ನೀವು ಸತ್ಯವಂತರಾಗಿರಲು ಪ್ರಯತ್ನಿಸಬೇಕು. ಏಕೆಂದರೆ ಸತ್ಯವೇ ಪರಮ ಬಲ. ಇತರರ ಕುರಿತು ದಯಾವಂತರಾಗಿರಬೇಕು. ಸದೈವ ನಿಯತೇಂದ್ರಿಯರಾಗಿರಬೇಕು. ಬ್ರಹ್ಮಣ್ಯರೂ, ಧರ್ಮಶೀಲರೂ, ತಪೋನೀತರೂ ಆಗಿರಬೇಕು.”

ಹೀಗೆ ಹೇಳಿ ಎಲ್ಲ ಸುಹೃದಯರನ್ನೂ ಆಲಂಗಿಸಿ ಆ ಧೀಮಂತನು ಪುನಃ ಯುಧಿಷ್ಠಿರನಿಗೆ ಈ ಮಾತನ್ನಾಡಿದನು.

> “ನರಾಧಿಪ ! ಬ್ರಾಹ್ಮಣರನ್ನು ಅದರಲ್ಲೂ ವಿಶೇಷವಾಗಿ ಪ್ರಾಜ್ಞ ಆಚಾರ್ಯರನ್ನು ಮತ್ತು ಋತ್ವಿಜರನ್ನು ನೀನು ನಿತ್ಯವೂ

ಪೂಜಿಸಬೇಕು!””

ಕುರುಗಳಿಗೆಲ್ಲರಿಗೂ ಹೀಗೆ ಹೇಳಿ ಕೌರವ್ಯ ಭೀಷ್ಮ ಶಾಂತನವನು ಮುಹೂರ್ತಕಾಲ ಸುಮ್ಮನಾದನು. ಆ ಮಹಾತ್ಮನು ಆತ್ಮನನ್ನು ಯಥಾಕ್ರಮವಾಗಿ ಧಾರಣೆಗಳಲ್ಲಿ ಸ್ಥಾಪಿಸತೊಡಗಿದನು. ಆಗ ಅವನ ಸಂನಿರುದ್ಧ ಪ್ರಾಣಗಳು ಊರ್ಧ್ವಮುಖವಾಗಿ ಹೋಗತೊಡಗಿದವು. ಆ ಮಹಾತ್ಮರ ಮಧ್ಯೆ ಈ ಆಶ್ಚರ್ಯವು ನಡೆಯಿತು. ಶಂತನು ಸುತನು ಶರೀರದ ಯಾವ ಯಾವ ಅಂಗಾಂಗಗಳಲ್ಲಿ ಯೋಗಯುಕ್ತನಾಗುತ್ತಿದ್ದನೋ ಆ ಅಂಗಾಂಗಗಳಿಂದ ಚುಚ್ಚಿದ್ದ ಶರಗಳು ಕೆಳಗೆ ಬೀಳುತ್ತಿದ್ದವು. ಅವರೆಲ್ಲರೂ ನೋಡುತ್ತಿದ್ದಂತೆಯೇ ಕ್ಷಣಮಾತ್ರದಲ್ಲಿ ಅವನು ವಿಶಲ್ಯ (ಬಾಣಗಳು ಚುಚ್ಚದೇ ಇರುವವನು) ನಾದನು. ಅದನ್ನು ನೋಡಿದ, ವಾಸುದೇವನೇ ಮೊದಲಾಗಿ ವ್ಯಾಸಾದಿ ಸರ್ವ ಮುನಿಗಳೂ ಕೂಡಿ ಎಲ್ಲರೂ ವಿಸ್ಮಿತರಾದರು. ಎಲ್ಲ ದ್ವಾರಗಳಲ್ಲಿಯೂ ತಡೆಯಲ್ಪಟ್ಟ ಅವನ ಆತ್ಮವು ನೆತ್ತಿಯ ಬ್ರಹ್ಮರಂಧ್ರವನ್ನು ಭೇದಿಸಿಕೊಂಡು ದಿವಕ್ಕೆ ಹಾರಿಹೋಯಿತು. ಪ್ರಾಣವು ಭೀಷ್ಮನ ನೆತ್ತಿಯಿಂದ ಮಹಾಉಲ್ಕೆಯಂತೆ ಹೊರಟು ಆಕಾಶವನ್ನು ಸೇರಿ ಕ್ಷಣಾಂತರದಲ್ಲಿ ಅಂತರ್ಧಾನವಾಯಿತು. ಹೀಗೆ ನೃಪ ಶಾಂತನವ, ಭರತರ ಕುಲೋದ್ವಹನು ತನ್ನದೇ ಲೋಕಗಳಲ್ಲಿ ಸೇರಿಕೊಂಡನು.

ಅನಂತರ ಮಹಾತ್ಮ ಪಾಂಡವರು, ವಿದುರ ಮತ್ತು ಕೌರವ್ಯ ಯುಯುತ್ಸುವು ಕಟ್ಟಿಗೆಗಳನ್ನು ಮತ್ತು ಅನೇಕ ವಿಧದ ಗಂಧಗಳನ್ನು ತಂದು ಚಿತೆಯನ್ನು

ಸಿದ್ಧಪಡಿಸಿದರು. ಇತರರು ಪ್ರೇಕ್ಷಕರಾಗಿದ್ದರು. ಯುಧಿಷ್ಠಿರ ಮತ್ತು ಮಹಾಮತಿ ವಿದುರರು ರೇಷ್ಮೆಯ ವಸ್ತ್ರಗಳಿಂದಲೂ ಪುಷ್ಪಮಾಲೆಗಳಿಂದಲೂ ಕೌರವ ಗಾಂಗೇಯನನ್ನು ಆಚ್ಛಾದಿಸಿ ಚಿತೆಯ ಮೇಲೇರಿಸಿದರು. ಯುಯುತ್ಸುವು ಅವನ ಮೇಲೆ ಉತ್ತಮ ಚತ್ರವನ್ನು ಹಿಡಿದನು. ಭೀಮಸೇನ-ಅರ್ಜುನರು ಶುಭ್ರ ಚಾಮರಗಳನ್ನು ಬೀಸಿದರು. ಮಾದ್ರೀಪುತ್ರರೀರ್ವರು ಕಿರೀಟವನ್ನು ಅವನ ತಲೆಯ ಕಡೆ ಇಟ್ಟರು. ಸ್ತ್ರೀಯರು ತಾಲಪತ್ರದ ಬೀಸಣಿಗೆಯನ್ನು ಹಿಡಿದು ಕುರುಕುಲೋದ್ಭವ ಕೌರವ ನಾಥ ಭೀಷ್ಮನ ಸುತ್ತಲೂ ಬೀಸತೊಡಗಿದರು. ಅನಂತರ ಆ ಮಹಾತ್ಮನ ಪಿತೃಮೇಧ ಸಂಸ್ಕಾರವು ವಿಧಿವತ್ತಾಗಿ ನಡೆಯಿತು. ಯಾಜಕರು ಅಗ್ನಿಯಲ್ಲಿ ಆಹುತಿಗಳನ್ನಿತ್ತರು. ಸಾಮಗರು ಸಾಮಗಳನ್ನು ಹಾಡಿದರು. ಅನಂತರ ಚಂದನ ಮತ್ತು ಕಪ್ಪು ಚಂದನ ಕಾಷ್ಠಗಳು ಹಾಗು ಕಾಲಾಗರುವೇ ಮೊದಲಾದ ಉತ್ತಮ ಸುಗಂಧದ್ರವ್ಯಗಳಿಂದ ಗಾಂಗೇಯನನ್ನು ಮುಚ್ಚಿ ಅಗ್ನಿಯನ್ನು ಪ್ರಜ್ವಲಿಸಿ, ಧೃತರಾಷ್ಟ್ರ ಮುಖ್ಯ ನೃಪರು ಅಪಸವ್ಯವನ್ನು ಮಾಡಿದರು. ಕುರುಶ್ರೇಷ್ಠ ಗಾಂಗೇಯನಿಗೆ ಈ ರೀತಿ ಸಂಸ್ಕಾರವನ್ನೆಸಗಿ ಕುರೂದ್ವಹ ಕುರುಸತ್ತಮರು ಋಷಿಜುಷ್ಟ ಭಾಗೀರಥೀ ತೀರಕ್ಕೆ ಹೋದರು.

ಅಲ್ಲಿ ಸೇರಿದ್ದ ವ್ಯಾಸ, ನಾರದ, ಅಸಿತ, ಕೃಷ್ಣ, ಭರತ ಸ್ತ್ರೀಯರು ಮತ್ತು ಪೌರ ಜನರು ಅವರನ್ನು ಅನುಸರಿಸಿ ಹೋದರು. ಆ ಕ್ಷತ್ರಿಯ ಶ್ರೇಷ್ಠರೂ ಎಲ್ಲ ಜನರೂ ವಿಧಿವತ್ತಾಗಿ ಮಹಾತ್ಮ ಗಾಂಗೇಯನ ಉದಕ ಕ್ರಿಯಯನ್ನು ನಡೆಸಿದರು. ತನ್ನ ಮಗನ ಉದಕ ಕ್ರಿಯೆಗಳು ಮುಗಿಯಲು ದೇವೀ

ಭಾಗೀರಥಿಯು ಶೋಕಲಾಲಸಳಾಗಿ ರೋದಿಸುತ್ತಾ ನೀರಿನಿಂದ ಮೇಲೆದ್ದಳು. ಪರಿವೇದಿಸುತ್ತಿರುವ ಅವಳು ಕೌರವರಿಗೆ ಹೇಳಿದಳು:

"ಅನಘರೇ! ನಾನು ಈಗ ಹೇಳುವುದನ್ನು ಕೇಳಿ! ಇವನು ರಾಜವೃತ್ತಿಯಿಂದ ಸಂಪನ್ನನಾಗಿದ್ದನು. ಪ್ರಜ್ಞಾವಂತನಾಗಿದ್ದನು. ಉತ್ತಮ ಕುಲದಲ್ಲಿ ಜನಿಸಿದ್ದನು. ದೃಢವ್ರತನಾಗಿ ಕುರುವೃದ್ಧರನ್ನು ಸತ್ಕರಿಸಿದನು. ಪಿತೃಭಕ್ತನಾಗಿದ್ದನು. ಹಿಂದೆ ಜಾಮದಗ್ನಿ ರಾಮನ ದಿವ್ಯಾಸ್ತ್ರಗಳಿಂದಲೂ ಪರಾಜಿತನಾಗಿರದಿದ್ದ ಈ ಮಹಾವೀರ್ಯನು ಇಂದು ಶಿಖಂಡಿಯಿಂದ ಹತನಾದನು. ಪಾರ್ಥಿವರೇ! ನಿಶ್ಚಯವಾಗಿಯೂ ನನ್ನ ಹೃದಯವು ಲೋಹದಿಂದ ಮಾಡಲ್ಪಟ್ಟಿದೆ! ನನ್ನ ಪ್ರಿಯಪುತ್ರನನ್ನು ಕಳೆದುಕೊಂಡೂ ನನ್ನ ಹೃದಯವು ಇಂದು ಒಡೆಯದೇ ಹಾಗೆಯೇ ಇದೆ! ಕಾಶೀಪುರಿಯ ಸ್ವಯಂವರದಲ್ಲಿ ಸೇರಿದ್ದ ಕ್ಷತ್ರಿಯ ರಾಜರನ್ನು ಏಕರಥನಾಗಿ ಸೋಲಿಸಿ ಆ ಕನ್ಯೆಯರನ್ನು ಇವನು ಅಪಹರಿಸಿದ್ದನು. ಭೂಮಿಯ ಮೇಲೆ ಇವನ ಸಮನಾದ ಬಲಶಾಲಿಯು ಯಾರೂ ಇಲ್ಲದಿರುವಾಗ ಇವನು ಶಿಖಂಡಿಯಿಂದ ಹತನಾದನೆಂದು ಕೇಳಿ ನನ್ನ ಮನಸ್ಸು ಸೀಳಿಹೋಗುತ್ತಿಲ್ಲವಲ್ಲ! ಕುರುಕ್ಷೇತ್ರದ ಯುದ್ಧದಲ್ಲಿ ಮಹಾತ್ಮ ಜಾಮದಗ್ನಿಯನ್ನು ಅತಿಯತ್ನದಿಂದ ಪೀಡಿಸಿದ ಅವನು ಶಿಖಂಡಿಯಿಂದ ಹತನಾದನು!"

ಈ ರೀತಿ ಬಹುವಿಧವಾಗಿ ವಿಲಪಿಸುತ್ತಿದ್ದ ಮಹಾನದಿಯನ್ನು ವಿಭು ದಾಮೋದರನು ಆಶ್ವಾಸನೆಯನ್ನಿತ್ತು ಸಮಾಧಾನಗೊಳಿಸಿದನು.

"ಭದ್ರೇ! ಶುಭದರ್ಶನೇ! ಸಮಾಧಾನಗೊಳ್ಳು! ಶೋಕಿಸಬೇಡ! ನಿನ್ನ ಪುತ್ರನು ಪರಮ ಸಿದ್ಧಿಯನ್ನು ಪಡೆದಿದ್ದಾನೆ ಎನ್ನುವುದರಲ್ಲಿ ಸಂಶಯವಿಲ್ಲ. ಶೋಭನೇ! ಶಾಪದೋಷದಿಂದ ಮನುಷ್ಯತ್ವವನ್ನು ಪಡೆದಿದ್ದ ಇವನು ಮಹಾತೇಜಸ್ವಿ ವಸುವು. ಇವನ ಕುರಿತು ಶೋಕಿಸಬಾರದು! ರಣಾಜಿರದಲ್ಲಿ ಕ್ಷತ್ರಧರ್ಮದಂತೆ ಯುದ್ಧಮಾಡುತ್ತಿರುವಾಗ ಇವನು ಧನಂಜಯನಿಂದ ಹತನಾದನು. ಶಿಖಂಡಿಯಿಂದಲ್ಲ. ಮಹಾರಣದಲ್ಲಿ ಆಯುಧಗಳನ್ನು ಮೇಲೆತ್ತಿದ್ದ ಕುರುಶಾರ್ದೂಲ ಭೀಷ್ಮನನ್ನು ಯುದ್ಧದಲ್ಲಿ ಸಂಹರಿಸಲು ಸಾಕ್ಷಾತ್ ಶತಕ್ರತುವೂ ಶಕ್ಯನಿರಲಿಲ್ಲ. ಶುಭಾನನೇ! ನಿನ್ನ ಮಗನು ಸ್ವಚ್ಛಂದದಿಂದ ಸ್ವರ್ಗಕ್ಕೆ ಹೋಗಿದ್ದಾನೆ. ರಣದಲ್ಲಿ ಅವನನ್ನು ಸಂಹರಿಸಲು ಸರ್ವದೇವತೆಗಳೂ ಶಕ್ಯರಿಲ್ಲ!"

# ಅಶ್ವಮೇಧಿಕ ಪರ್ವ




## ಯುಧಿಷ್ಠಿರ ಸಾಂತ್ವನ

ಮಹಾಬಾಹು ಯುಧಿಷ್ಠಿರನು ಭೀಷ್ಮನಿಗೆ ಜಲತರ್ಪಣವನ್ನಿತ್ತು ರಾಜಾ ಧೃತರಾಷ್ಟ್ರನನ್ನು ಮುಂದೆಮಾಡಿಕೊಂಡು ವ್ಯಾಕುಲಚಿತ್ತನಾಗಿ ಗಂಗಾನದಿಯ ತಟವನ್ನೇರಿದನು. ಮೇಲೇರುತ್ತಲೇ ಕಣ್ಣೀರಿನವ್ಯಾಕುಲಕಣ್ಣುಗಳ ಆ ಮಹೀಪಾಲನು ಬೇಟೆಗಾರನಿಂದ

ಹೊಡೆಯಲ್ಪಟ್ಟ ಆನೆಯಂತೆ ಗಂಗಾನದಿಯ ತೀರದಲ್ಲಿಯೇ ಬಿದ್ದುಬಿಟ್ಟನು. ಕುಸಿಯುತ್ತಿದ್ದ ಅವನನ್ನು ಕೃಷ್ಣನ ಹೇಳಿಕೆಯಂತೆ ಭೀಮನು ಹಿಡಿದುಕೊಂಡನು. ಪರಬಲಾರ್ದನ ಕೃಷ್ಣನು "ಹೀಗಾಗಬೇಡ!" ಎಂದು ಯುಧಿಷ್ಠಿರನಿಗೆ ಹೇಳಿದನು. ಆರ್ತನಾಗಿ ಪುನಃ ಪುನಃ ನಿಟ್ಟುಸಿರು ಬಿಡುತ್ತಾ ನೆಲದ ಮೇಲೆ ಬಿದ್ದ ಧರ್ಮಾತ್ಮ ಯುಧಿಷ್ಠಿರನನ್ನು ಪಾಂಡವರು ನೋಡಿದರು. ಸತ್ವವನ್ನು ಕಳೆದುಕೊಂಡು ದೀನಮನಸ್ಕನಾಗಿದ್ದ ಜನೇಶ್ವರನನ್ನು ನೋಡಿ ಇನ್ನೂ ಶೋಕಸಮಾವಿಷ್ಟರಾಗಿ ಪಾಂಡವರು ಅವನ ಬಳಿಯಲ್ಲಿಯೇ ಕುಳಿತುಕೊಂಡರು. ಆಗ ಮಹಾಭುಜ ಮಹಾಪ್ರಾಜ್ಞ ರಾಜಾ ಧೃತರಾಷ್ಟ್ರನು ಮಹಾಶೋಕದಿಂದ ಪೀಡಿತನಾಗಿ ಕುಳಿತಿದ್ದ ಯುಧಿಷ್ಠಿರನಿಗೆ ಹೇಳಿದನು:

> "ಕುರುಶಾರ್ದೂಲ! ಎದ್ದೇಳು! ನಂತರದ ಕಾರ್ಯಗಳನ್ನು ಮಾಡುವವನಾಗು! ಕ್ಷತ್ರಧರ್ಮದಿಂದಲೇ ನೀನು ಈ ಅವನಿಯನ್ನು ಗೆದ್ದಿರುವೆ! ಸಹೋದರರು ಮತ್ತು ಸ್ನೇಹಿತರೊಂದಿಗೆ ಅದನ್ನು ಭೋಗಿಸು! ನಿನ್ನ ಈ ಶೋಕಕ್ಕೆ ಯಾವ ಕಾರಣವನ್ನೂ ನಾನು ಕಾಣುತ್ತಿಲ್ಲ. ಕನಸಿನಲ್ಲಿ ಕಂಡ ಧನದಂತೆ ಪುತ್ರರನ್ನೂ ರಾಜ್ಯವನ್ನೂ ಕಳೆದುಕೊಂಡು ನಾನು

ಮತ್ತು ಗಾಂಧಾರಿ ಶೋಕಿಸಬೇಕಾಗಿದೆ. ನನ್ನ ಹಿತವನ್ನೇ ಬಯಸಿದ್ದ ಮಹಾತ್ಮ ವಿದುರನ ಮಹಾ ಅರ್ಥಗಳಿದ್ದ ಮಾತುಗಳನ್ನು ಕೇಳದೇ ದುರ್ಮತಿಯಾದ ನಾನು ಪರಿತಪಿಸುತ್ತಿದ್ದೇನೆ. ಆ ಧರ್ಮಾತ್ಮಾ ದಿವ್ಯದರ್ಶನನು ನನಗೆ ಹಿಂದೆಯೇ ಈ ರೀತಿ ಹೇಳಿದ್ದನು: “ದುರ್ಯೋಧನನ ಅಪರಾಧದಿಂದ ನಿನ್ನ ಕುಲವು ನಾಶವಾಗುತ್ತದೆ. ರಾಜನ್! ನಿನ್ನ ಮತ್ತು ನಿನ್ನ ಕುಲದ ಒಳಿತನ್ನು ಬಯಸುವೆಯಾದರೆ ಈ ಮೂಢ ದುಷ್ಟಾತ್ಮ ರಾಜಾ ಸುಯೋಧನನನ್ನು ವಧಿಸು. ಕರ್ಣ-ಶಕುನಿಯರು ಅವನನ್ನು ಎಂದೂ ನೋಡದಂತೆಯಾದರೂ ಮಾಡು. ಅಥವಾ ಅವರು ದ್ಯೂತಕ್ಕೆ ಸಿಲುಕಿ ಅಪ್ರಮತ್ತರಾಗುವುದನ್ನಾದರೂ ತಡೆ! ಧರ್ಮಾತ್ಮ ಯುಧಿಷ್ಠಿರನನ್ನು ರಾಜನನ್ನಾಗಿ ಅಭಿಷೇಕಿಸು. ಅವನು ಧರ್ಮವನ್ನು ಅನುಸರಿಸಿ ಈ ಪೃಥ್ವಿಯನ್ನು ಪಾಲಿಸುತ್ತಾನೆ! ಒಂದುವೇಳೆ ನಿನಗೆ ಕುಂತೀಪುತ್ರ ಯುಧಿಷ್ಠಿರನು ರಾಜನಾಗುವುದು ಇಷ್ಟವಿರದೇ ಇದ್ದರೆ ನೀನೇ ಮೇಟಿಯ ಕಂಬದಂತವನಾಗಿ ರಾಜ್ಯವನ್ನು ಸ್ವೀಕರಿಸು! ಸರ್ವಭೂತಗಳಲ್ಲಿಯೂ ಸಮನಾಗಿ ವರ್ತಿಸುವ ನಿನ್ನನ್ನು

ಅನುಸರಿಸಿ ನಿನ್ನ ಎಲ್ಲ ಜ್ಞಾತಿಬಾಂಧವರೂ ವರ್ಧಿಸಲಿ!"
ದೀರ್ಘದರ್ಶಿನಿಯಾದ ವಿದುರನು ಹೀಗೆ ಹೇಳಿದ್ದರೂ
ವೃಥಾಮತಿಯಾದ ನಾನು ಪಾಪಿ ದುರ್ಯೋಧನನನ್ನು
ಅನುಸರಿಸಿದೆ. ಆ ವೀರನ ಮಧುರ ಮಾತುಗಳನ್ನು ಕೇಳದೇ
ಈ ಮಹಾದುಃಖವನ್ನು ಪಡೆದು ಶೋಕಸಾಗರದಲ್ಲಿ ಮುಳುಗಿ
ಹೋಗಿದ್ದೇನೆ. ದುಃಖದಲ್ಲಿರುವ ನಿನ್ನ ಈ ವೃದ್ಧ ತಂದೆ-
ತಾಯಿಯರನ್ನು ನೋಡು. ನಮ್ಮನ್ನು ನೋಡಿ ನೀನು
ಶೋಕಿಸಬಾರದು!"

ಧೀಮಂತ ರಾಜಾ ಧೃತರಾಷ್ಟ್ರನ ಈ ಮಾತುಗಳನ್ನು ಕೇಳಿ
ಸುಮ್ಮನಾಗಿದ್ದ ಮೇಧಾವೀ ಯುಧಿಷ್ಠಿರನಿಗೆ ಕೇಶವನು ಹೇಳಿದನುಃ

"ಜನಾಧಿಪ! ಮನಸಾ ಅತೀವ ಶೋಕವನ್ನು
ಮಾಡುವುದರಿಂದ ನೀನು ಈ ಮೊದಲೇ ತೀರಿಹೋಗಿರುವ
ಪಿತಾಮಹರನ್ನು ಸಂತಾಪಗೊಳಿಸುತ್ತಿದ್ದೀಯೆ. ಅನೇಕ
ಆಪ್ತದಕ್ಷಿಣೆಗಳಿಂದೊಡಗೂಡಿದ ವಿವಿಧ ಯಜ್ಞಗಳನ್ನು ಮಾಡಿ
ಸೋಮರಸದಿಂದ ದೇವತೆಗಳನ್ನೂ ಸ್ವಧಾರಸದಿಂದ
ಪಿತೃಗಳನ್ನೂ ತೃಪ್ತಿಗೊಳಿಸು. ಇವಕ್ಕೆ ಸಿದ್ಧತೆಗಳನ್ನು
ಮಾಡುವುದಿದೆ ಎನ್ನುವುದನ್ನು ತಿಳಿದುಕೋ!

ಮಾಡಬೇಕಾದುದು ಏನು ಎಂದು ನಿನಗೆ ತಿಳಿದಿದೆ ಮತ್ತು ಮಾಡಬೇಕಾದುದನ್ನು ನೀನು ಮಾಡಿದ್ದೀಯೆ ಕೂಡ! ಭಾಗೀರಥೀ ಸುತ ಭೀಷ್ಮ, ಕೃಷ್ಣ ದ್ವೈಪಾಯನ, ನಾರದ ಮತ್ತು ವಿದುರರಿಂದ ರಾಜಧರ್ಮಗಳ ಕುರಿತೂ ನೀನು ಕೇಳಿದ್ದೀಯೆ. ನೀನು ಮೂಡರ ಈ ವೃತ್ತಿಯನ್ನು ಅನುಸರಿಸುವುದು ಸರಿಯಲ್ಲ. ನಿನ್ನ ಪಿತೃ-ಪಿತಾಮಹರ ವೃತ್ತಿಯನ್ನು ಅನುಸರಿಸು! ಕ್ಷತ್ರಿಯನಿಗೆ ಯುದ್ಧದಲ್ಲಿ ಯಶಸ್ಸನ್ನು ಬಯಸುವುದಕ್ಕಿಂತ ಸ್ವರ್ಗವನ್ನು ಪಡೆಯುವ ಬಯಕೆಯೇ ಹೆಚ್ಚಿನದು ಎನ್ನುವುದರಲ್ಲಿ ಸಂಶಯವಿಲ್ಲ. ಈಗ ಸತ್ತ ಶೂರರಲ್ಲಿ ಪರಾಙ್ಮುಖರಾದವರು ಯಾರೂ ಇಲ್ಲ. ನೀನು ಶೋಕವನ್ನು ಬಿಡು! ಅದು ಹಾಗೆಯೇ ಆಗಬೇಕಾಗಿತ್ತು. ಈ ರಣದಲ್ಲಿ ಹತರಾದವನ್ನು ಪುನಃ ನೀನು ನೋಡಲು ಶಕ್ಯನಿಲ್ಲ."

ಧರ್ಮರಾಜ ಯುಧಿಷ್ಠಿರನಿಗೆ ಹೀಗೆ ಹೇಳಿ ಗೋವಿಂದನು ಸುಮ್ಮನಾದನು. ಆಗ ಮಹಾತೇಜಸ್ವಿ ಯುಧಿಷ್ಠಿರನು ಅವನಿಗೆ ಉತ್ತರಿಸಿದನು:

"ಗೋವಿಂದ! ನನ್ನ ಮೇಲೆ ನಿನಗೆ ಪ್ರೀತಿಯಿದೆ ಎನ್ನುವುದನ್ನು ನಾನು ತಿಳಿದಿದ್ದೇನೆ. ಸ್ನೇಹ ಮತ್ತು ಪ್ರೀತಿಗಳಿಂದ ನೀನು ಸದಾ

ನನ್ನ ಮೇಲೆ ಅನುಕಂಪವನ್ನೇ ತೋರಿಸುತ್ತಿರುವೆ. ಚಕ್ರ-ಗದಾಧರ! ಯಾದವನಂದನ! ನೀನೇನಾದರೂ ನನಗೆ ತಪೋವನಕ್ಕೆ ಹೋಗಲು ಅನುಮತಿಯನ್ನಿತ್ತಿದ್ದರೆ ನನಗೆ ಪ್ರೀತಿಯಾದುದೆಲ್ಲವನ್ನೂ ಮಾಡಿದಂತಾಗುತ್ತಿತ್ತು. ಪಿತಾಮಹನನ್ನು ಮತ್ತು ಸಂಗ್ರಾಮದಲ್ಲಿ ಪಲಾಯನಮಾಡದಿದ್ದ ಪುರುಷವ್ಯಾಘ್ರ ಕರ್ಣನನ್ನು ಕೊಂದು ನನಗೆ ಶಾಂತಿಯೇ ಇಲ್ಲವಾಗಿದೆ. ಯಾವ ಕರ್ಮಗಳನ್ನು ಮಾಡುವುದರಿಂದ ನಾನು ಈ ಕ್ರೂರ ಪಾಪದಿಂದ ಬಿಡುಗಡೆಹೊಂದುತ್ತೇನೋ ಮತ್ತು ನನ್ನ ಮನಸ್ಸು ಶುದ್ಧಿಯಾಗುತ್ತದೆಯೋ ಆ ಕರ್ಮಗಳ ಕುರಿತು ನನಗೆ ಹೇಳು!”

## ವ್ಯಾಸವಾಕ್ಯ

ಕೃಷ್ಣನೊಡನೆ ಹೀಗೆ ಮಾತನಾಡುತ್ತಿದ್ದ ಅವನನ್ನು ಸಮಾಧಾನಗೊಳಿಸುತ್ತಾ ಧರ್ಮವಿದು ಸುಮಹಾತೇಜಸ್ವಿ ವ್ಯಾಸನು ಅರ್ಥವತ್ತಾದ ಈ ಶುಭ ಮಾತುಗಳನ್ನಾಡಿದನು:

“ಮಗೂ! ನಿನ್ನ ಬುದ್ಧಿಯು ಇನ್ನೂ ಬೆಳೆದಿಲ್ಲ. ಪುನಃ ಬಾಲಕನಂತೆ ಮೋಹಕ್ಕೊಳಗಾಗುತ್ತಿದ್ದೀಯೆ. ಮಧ್ಯದಲ್ಲಿ

ನಾವೆಲ್ಲರೂ ಏಕೆ ಹೀಗೆ ಪುನಃ ಪುನಃ ಪ್ರಲಾಪಮಾಡುತ್ತಿದ್ದೇವೆ! ಯುದ್ಧದಿಂದಲೇ ಜೀವನ ನಡೆಸುವ ಕ್ಷತ್ರಿಯರ ಧರ್ಮವೆಲ್ಲವೂ ನಿನಗೆ ತಿಳಿದೇ ಇದೆ. ಹಾಗೆ ನಡೆದುಕೊಳ್ಳುವ ನೃಪತಿಯು ಈ ರೀತಿಯ ಶೋಕದಲ್ಲಿ ತನ್ನನ್ನು ತೊಡಗಿಸಿಕೊಳ್ಳುವುದಿಲ್ಲ. ಮೋಕ್ಷಧರ್ಮವನ್ನೂ ಸಂಪೂರ್ಣವಾಗಿ ನೀನು ಇದ್ದಹಾಗೆ ಕೇಳಿದ್ದೀಯೆ. ನಿನಗೆ ಸಂದೇಹಗಳಿದ್ದಾಗಲೆಲ್ಲಾ ನೀನು ಬಯಸಿದಂತೆ ಎಲ್ಲವನ್ನೂ ಹೇಳಿದ್ದೇನೆ. ಆದರೆ ನಿನ್ನ ದುರ್ಬುದ್ಧಿಯಿಂದಾಗಿ ನನ್ನ ಮಾತುಗಳ ಮೇಲೆ ನಿನಗೆ ಶ್ರದ್ಧೆಯೇ ಇಲ್ಲವಾಗಿದೆ. ಅಥವಾ ನಿಜವಾಗಿ ನಿನ್ನ ಸ್ಮರಣಶಕ್ತಿಯೇ ಕಳೆದುಹೋಗಿದೆ. ನೀನು ಹೀಗೆಂದೂ ಆಡಬೇಡ. ಮತ್ತು ಈ ರೀತಿ ಅಜ್ಞಾನವನ್ನು ತೋರಿಸಿಕೊಳ್ಳುವುದು ನಿನಗೆ ಸರಿಯಲ್ಲ. ಪ್ರಾಯಶ್ಚಿತ್ತಗಳೆಲ್ಲವೂ ನಿನಗೆ ತಿಳಿದೇ ಇದೆ. ಯುದ್ಧಧರ್ಮ ಮತ್ತು ದಾನಧರ್ಮಗಳೆಲ್ಲವನ್ನೂ ನೀನು ಕೇಳಿರುವೆ. ಸರ್ವಧರ್ಮಜ್ಞನೂ ಸರ್ವ ಆಗಮ ವಿಶಾರದನೂ ಆಗಿರುವವನು ಹೇಗೆ ತಾನೇ ಹೀಗೆ ಪುನಃ ಪುನಃ ಅಜ್ಞಾನಿಯಂತೆ ಮೋಹಗೊಳ್ಳುತ್ತಾನೆ? ಯುಧಿಷ್ಠಿರ! ನಿನ್ನ

ಪ್ರಶ್ನೆಯು ಸರಿಯಿಲ್ಲವೆಂದು ನನಗನ್ನಿಸುತ್ತದೆ. ಮನುಷ್ಯನು ಯಾವಾಗಲೂ ತನ್ನ ವಶದಲ್ಲಿಯೇ ಇದ್ದುಕೊಂಡು ಕ್ರಿಯಗಳನ್ನು ಮಾಡುವುದಿಲ್ಲ. ಮಾನವನಿಗೆ ಒಳ್ಳೆಯದು-ಕೆಟ್ಟದ್ದು ಎಲ್ಲವೂ ಈಶ್ವರನಿಂದ ನಿಯುಕ್ತವಾಗಿರುತ್ತವೆ. ಮನುಷ್ಯನು ಕೇವಲ ಕರ್ಮವನ್ನು ಮಾಡುತ್ತಿರುತ್ತಾನೆ. ಅದರಲ್ಲಿ ಏಕೆ ಶೋಕಿಸಬೇಕು? ಕೊನೆಗೂ ನೀನು ಪಾಪಕರ್ಮವನ್ನೇ ಮಾಡಿದ್ದೀಯೆಂದು ತಿಳಿದುಕೊಂಡರೆ ಆ ಪಾಪವನ್ನು ಹೇಗೆ ತೊಳೆದುಕೊಳ್ಳಬೇಕು ಎನ್ನುವುದನ್ನು ಕೇಳು. ತಪಸ್ಸು, ಕ್ರತು ಮತ್ತು ದಾನಗಳು ಪಾಪಮಾಡಿದ ಪುರುಷನನ್ನು ನಿತ್ಯವೂ ಪಾರುಮಾಡುತ್ತವೆ. ಯಜ್ಞ, ತಪಸ್ಸು ಮತ್ತು ದಾನಗಳು ದುಷ್ಕೃತಗಳನ್ನು ಮಾಡಿದ ಮನುಷ್ಯರನ್ನು ಪಾವನಗೊಳಿಸುತ್ತವೆ. ಪುಣ್ಯಸಂಪಾದನೆಗಾಗಿ ಅಸುರರೂ ಸುರರೂ ಯಜ್ಞಕಾರ್ಯಗಳನ್ನು ಮಾಡುತ್ತಾರೆ. ಆದುದರಿಂದ ಮಹಾತ್ಮರು ಯಜ್ಞಗಳಲ್ಲಿಯೇ ತೊಡಗಿರುತ್ತಾರೆ. ಯಜ್ಞದಿಂದಲೇ ಮಹಾತ್ಮ ದೇವ ಸುರರು ಅಧಿಕ ಬಲಶಾಲಿಗಳೂ ಕ್ರಿಯಾವಂತರೂ ಆಗಿ ದಾನವರನ್ನು ಸದೆಬಡಿದರು. ನೀನೂ ಕೂಡ ರಾಜಸೂಯ, ಅಶ್ವಮೇಧ,

ಸರ್ವಮೇಧ ಮತ್ತು ನರಮೇಧ ಯಜ್ಞಗಳನ್ನು ಮಾಡು. ದಾಶರಥಿ ರಾಮನಂತೆ ಮತ್ತು ನಿನ್ನ ಪೂರ್ವಪಿತಾಮಹ ದುಃಶಂತ-ಶಕುಂತಲೆಯರ ಮಗ ಪೃಥಿವೀಪತಿ ರಾಜ ಮಹಾವೀರ್ಯ ಭರತನಂತೆ ವಿಧಿವತ್ತಾಗಿ ಮನೋವಾಂಛಿತ ಸಂಪತ್ತು-ದಕ್ಷಿಣೆಗಳೊಂದಿಗೆ ಅಶ್ವಮೇಧವನ್ನು ಯಾಜಿಸು."

ಯುಧಿಷ್ಠಿರನು ಹೇಳಿದನು:

"ಅಶ್ವಮೇಧವು ಇಡೀ ಭೂಮಿಯನ್ನೇ ಪಾವನಗೊಳಿಸುತ್ತದೆ ಎನ್ನುವುದರಲ್ಲಿ ಸಂಶಯವಿಲ್ಲ. ಇದರ ಕುರಿತು ನನ್ನ ಒಂದು ಅಭಿಪ್ರಾಯವಿದೆ. ಅದನ್ನು ನೀನು ಕೇಳಬೇಕು. ದ್ವಿಜೋತ್ತಮ! ಈ ಮಹಾ ಜ್ಞಾತಿವಧೆಯನ್ನು ಮಾಡಿ ನನ್ನಲ್ಲಿ ವಿತ್ತವೇ ಇಲ್ಲವಾಗಿದೆ. ಸ್ವಲ್ಪವೂ ಕೂಡ ದಾನ ಮಾಡಲು ಶಕ್ಯನಿಲ್ಲ. ಯುದ್ಧದ ಹುಣ್ಣುಗಳು ಇನ್ನೂ ಮಾಸದೇ ಕಷ್ಟದಲ್ಲಿರುವ ದೀನ ಬಾಲಕ ರಾಜಕುಮಾರರಿಂದ ಧನವನ್ನು ಯಾಚಿಸಲೂ ನನಗೆ ಮನಸ್ಸಿಲ್ಲ. ನಾನೇ ಈ ಭೂಮಿಯನ್ನು ವಿನಾಶಗೊಳಿಸಿ, ಶೋಕದಲ್ಲಿ ಮುಳುಗಿರುವವರಿಂದ, ಯಜ್ಞಕ್ಕಾಗಿ ಕರವನ್ನು ಹೇಗೆ ಕಸಿದುಕೊಳ್ಳಲಿ? ದುರ್ಯೋಧನನ ಅಪರಾಧದಿಂದಾಗಿ ಭೂಮಿ ಮತ್ತು ವಸುಧಾಧಿಪರು ನಾಶಗೊಂಡರು ಮತ್ತು

> ನಾವೂ ಅಪಕೀರ್ತಿಗೊಳಗಾದೆವು. ವಿತ್ತಕಾರಣದಿಂದ ದುರ್ಯೋಧನನು ಭೂಮಿಯನ್ನು ನಾಶಗೊಳಿಸಿದನು. ದುರ್ಮತಿ ಧಾರ್ತರಾಷ್ಟ್ರನಿಂದಾಗಿ ಈ ಕೋಶವೂ ಬರಿದಾಗಿಹೋಗಿದೆ. ಅಶ್ವಮೇಧದಲ್ಲಿ ಪೃಥ್ವಿಯನ್ನೇ ಮುಖ್ಯ ದಕ್ಷಿಣೆಯನ್ನಾಗಿ ಕೊಡಬೇಕೆಂದು ವಿದ್ವಾಂಸರು ಕಲ್ಪಿಸಿದ ವಿಧಿಯಾಗಿದೆ. ಅದರಂತೆ ಮಾಡದಿದ್ದರೆ ಶಿಷ್ಟರು ಹಾಕಿಕೊಟ್ಟ ವಿಧಿಗೆ ವ್ಯತ್ಯಾಸವಾದಂತಾಗುತ್ತದೆ. ಭೂಮಿಗೆ ಬದಲಾಗಿ ದಕ್ಷಿಣೆಗಳನ್ನು ಕೊಡಲು ಬಯಸುವುದಿಲ್ಲ. ಇದರ ಕುರಿತು ನಾನು ಏನು ಮಾಡಿದರೆ ಒಳ್ಳೆಯದು ಎನ್ನುವ ಸಲಹೆಯನ್ನು ನೀಡಬೇಕು.”

ಪಾರ್ಥನು ಹೀಗೆ ಹೇಳಲು ಕೃಷ್ಣದ್ವೈಪಾಯನನು ಒಂದು ಕ್ಷಣ ಯೋಚಿಸಿ ಧರ್ಮರಾಜನಿಗೆ ಹೀಗೆ ಹೇಳಿದನು:

> “ಪಾರ್ಥ! ಮಹೀಪತಿ ಮರುತ್ತನ ಯಜ್ಞದಲ್ಲಿ ಬ್ರಾಹ್ಮಣರು ಬಿಟ್ಟುಹೋದ ಸಂಪತ್ತು ಹಿಮವತ್ಪರ್ವತದಲ್ಲಿ ಇದೆಯೆಂದು ತಿಳಿದಿದೆ. ಅದನ್ನು ತೆಗೆದುಕೊಂಡು ಬಾ! ಅದು ನಿನಗೆ ಸಾಕಾಗುತ್ತದೆ.”

ಯುಧಿಷ್ಠಿರನು ಹೇಳಿದನು:

> “ಮರುತ್ತನ ಯಜ್ಞದಲ್ಲಿ ಹೇಗೆ ಆ ದ್ರವ್ಯಗಳನ್ನು ಸೇರಿಸಲಾಯಿತು? ಆ ನೃಪನು ಯಾವ ಕಾಲದಲ್ಲಿದ್ದನು?”

ವ್ಯಾಸನು ಹೇಳಿದನು:

> “ಪಾರ್ಥ! ನಿನಗೆ ಕೇಳಬೇಕೆಂದರೆ ಕರಂಧಮನ ಮಗ ಆ ಮಹಾವೀರ್ಯ ನೃಪ ಮಹಾಧನ ರಾಜನಿದ್ದ ಕಾಲದ ಕುರಿತು ಕೇಳು.”

ಯುಧಿಷ್ಠಿರನು ಹೇಳಿದನು:

> “ಅನಘ! ದ್ವೈಪಾಯನ! ಧರ್ಮಜ್ಞ! ಆ ರಾಜರ್ಷಿ ಮರುತ್ತನ ಕಥೆ ಮತ್ತು ಅವನ ಕುರಿತಾದ ಕೀರ್ತನೆಯನ್ನು ಹೇಳು!”

ಆಗ ವ್ಯಾಸನು ಯುಧಿಷ್ಠಿರನಿಗೆ ಮರುತ್ತ-ಸಂವರ್ತರ ಕಥೆಯನ್ನು ಹೇಳಿದನು. ಸತ್ಯವತಿಯ ಸುತನ ಮಾತನ್ನು ಕೇಳಿ ರಾಜ ಪಾಂಡವನು ಹೃಷ್ಟರೂಪನಾಗಿ ಆ ವಿತ್ತದಿಂದ ಯಜ್ಞಮಾಡಲು ಮನಸ್ಸು ಮಾಡಿದನು. ಪುನಃ ಅಮಾತ್ಯರೊಂದಿಗೆ ಸಮಾಲೋಚನೆ ನಡೆಸಿದನು.

## ವಾಸುದೇವವಾಕ್ಯ

ಅದ್ಭುತ ಕರ್ಮಿ ವ್ಯಾಸನು ನೃಪತಿಗೆ ಹೀಗೆ ಹೇಳಲು ಮಹಾತೇಜಸ್ವಿ ವಾಸುದೇವನು ಅವನಿಗೆ ಈ ಮಾತುಗಳನ್ನಾಡಿದನು. ಜ್ಞಾತಿಬಾಂಧವರ ಸಂಹಾರದಿಂದ ದೀನಮನಸ್ಕನಾಗಿದ್ದ, ಮುಳುಗುತ್ತಿರುವ ಸೂರ್ಯನಂತಿದ್ದ ಮತ್ತು ಹೊಗೆಯಿರುವ ಅಗ್ನಿಯಂತಿದ್ದ, ನಿರ್ವಿಣ್ಣ ಮನಸ್ಕನಾದ ಪಾರ್ಥ ನೃಪನನ್ನು ಅರ್ಥಮಾಡಿಕೊಂಡ ವೃಷ್ಣಿಕುಲೋದ್ವಹನು ಧರ್ಮಸುತನನ್ನು ಸಮಾಧಾನಪಡಿಸುತ್ತಾ ಹೇಳಲು ಉಪಕ್ರಮಿಸಿದನು. ವಾಸುದೇವನು ಹೇಳಿದನು:

> “ಕುಟಿಲತೆಯು ಮೃತ್ಯುವಿಗೆ ದಾರಿ ಮತ್ತು ಸರಳತೆಯು ಬ್ರಹ್ಮಪದ. ಈ ವಿಷಯವನ್ನು ತಿಳಿದ ನೀನು ಏಕೆ ಪ್ರಲಪಿಸುತ್ತಿರುವೆ? ಇನ್ನೂ ನೀನು ಮಾಡಬೇಕಾದ ಕರ್ಮಗಳೆಲ್ಲವನ್ನೂ ಮಾಡಿಮುಗಿಸಿಲ್ಲ ಮತ್ತು ನಿನ್ನ ಶತ್ರುಗಳೆಲ್ಲರನ್ನೂ ನೀನು ಜಯಿಸಿಲ್ಲ. ನಿನ್ನ ಶರೀರದಲ್ಲಿಯೇ ಇರುವ ಶತ್ರುವನ್ನು ನೀನು ಹೇಗೆ ಅರಿತುಕೊಳ್ಳುತ್ತಿಲ್ಲ? ಇದಕ್ಕೆ ಸಂಬಂಧಿಸಿದಂತೆ ವೃತ್ರನೊಂದಿಗೆ ನಡೆದ ಯುದ್ಧದ ಕುರಿತು ಯಥಾಧರ್ಮವಾಗಿ ಕೇಳಿದಂತೆ ನಿನಗೆ ಹೇಳುತ್ತೇನೆ. ನರಾಧಿಪ! ಹಿಂದೆ ವೃತ್ರನಿಂದ ಇಡೀ ಪೃಥ್ವಿಯೇ ವ್ಯಾಪ್ತವಾಗಿಬಿಟ್ಟಿತ್ತಲ್ಲವೇ? ಅವನು ಪೃಥ್ವಿಯನ್ನು ವ್ಯಾಪಿಸಿ

ಭೂಮಿಯಿಂದ ಅದರ ಸುಗಂಧವನ್ನೂ ಅಪಹರಿಸಿಬಿಟ್ಟಿದ್ದನು. ಆಗ ಭೂಮಿಯಲ್ಲೆಲ್ಲ ದುರ್ಗಂಧವೇ ಪಸರಿಸಿತು. ಭೂಮಿಯಿಂದ ಗಂಧವನ್ನು ಅಪಹರಿಸಲು ಶತಕ್ರತುವಿಗೆ ಕೋಪವುಂಟಾಯಿತು. ಕ್ರುದ್ಧನಾದ ಅವನು ವೃತ್ರನ ಮೇಲೆ ಘೋರ ವಜ್ರವನ್ನು ಪ್ರಯೋಗಿಸಿದನು. ಅತ್ಯಂತ ತೇಜಸ್ಸಿದ್ದ ವಜ್ರದಿಂದ ಕೊಲ್ಲಲ್ಪಡುತ್ತಿದ್ದ ವೃತ್ರನು ಒಡನೆಯೇ ಭೂಮಿಯನ್ನು ಬಿಟ್ಟು ಜಲಪ್ರದೇಶವನ್ನು ಆವರಿಸಿದನು. ನೀರಿನಲ್ಲಿ ವ್ಯಾಪ್ತನಾದ ವೃತ್ರನು ಅದರಲ್ಲಿರುವ ರಸವನ್ನು ಅಪಹರಿಸಲು ಶತಕ್ರತುವು ಪುನಃ ಕ್ರುದ್ಧನಾಗಿ ಅವನ ಮೇಲೆ ವಜ್ರವನ್ನು ಪ್ರಯೋಗಿಸಿದನು. ಅತ್ಯಂತ ತೇಜೋಯುಕ್ತ ವಜ್ರದಿಂದ ವಧಿಸಲ್ಪಡುತ್ತಿದ್ದ ವೃತ್ರನು ಕೂಡಲೆ ಜ್ಯೋತಿಯನ್ನು ಪ್ರವೇಶಿಸಿ ಆ ಪ್ರದೇಶವನ್ನು ಆವರಿಸಿದನು. ಜ್ಯೋತಿಯನ್ನು ವ್ಯಾಪಿಸಿ ವೃತ್ರನು ಅದರಲ್ಲಿರುವ ರೂಪವನ್ನು ಅಪಹರಿಸಲು ಶತುಕ್ರತುವು ಕ್ರುದ್ಧನಾಗಿ ಪುನಃ ಅವನ ಮೇಲೆ ವಜ್ರವನ್ನು ಪ್ರಯೋಗಿಸಿದನು. ಅತ್ಯಂತ ತೇಜೋಯುಕ್ತ ವಜ್ರದಿಂದ ವಧಿಸಲ್ಪಡುತ್ತಿದ್ದ ವೃತ್ರನು ಕೂಡಲೇ ವಾಯುವನ್ನು ಪ್ರವೇಶಿಸಿ ಅದನ್ನು ವ್ಯಾಪಿಸಿದನು.

ವಾಯುವನ್ನು ವ್ಯಾಪಿಸಿ ವೃತ್ರನು ಅದರಲ್ಲಿರುವ ಸ್ಪರ್ಶಗುಣವನ್ನು ಅಪಹರಿಸಲು ಶತಕ್ರತುವು ಕ್ರುದ್ಧನಾಗಿ ಅವನ ಮೇಲೆ ಪುನಃ ವಜ್ರವನ್ನು ಪ್ರಯೋಗಿಸಿದನು. ಆ ಅಮಿತ ತೇಜಸ್ವೀ ವಜ್ರದಿಂದ ವಧಿಸಲ್ಪಡುತ್ತಿದ್ದ ವೃತ್ರನು ಕೂಡಲೇ ಆಕಾಶಕ್ಕೆ ಹಾರಿ ಆ ಪ್ರದೇಶವನ್ನು ವ್ಯಾಪಿಸಿದನು. ಅಕಾಶವನ್ನು ವ್ಯಾಪಿಸಿ ವೃತ್ರನು ಅದರಲ್ಲಿರುವ ಶಬ್ಧವನ್ನು ಅಪಹರಿಸಲು ಕ್ರುದ್ಧನಾದ ಶತಕ್ರತುವು ಅವನ ಮೇಲೆ ಪುನಃ ವಜ್ರವನ್ನು ಪ್ರಯೋಗಿಸಿದನು. ಆ ಅಮಿತ ತೇಜಸ ವಜ್ರದಿಂದ ವಧಿಸಲ್ಪಡುತಿದ್ದ ವೃತ್ರನು ಕೂಡಲೇ ಶಕ್ರನನ್ನು ಪ್ರವೇಶಿಸಿ ಅವನ ವಿಷಯವನ್ನು ವ್ಯಾಪಿಸಿದನು. ವೃತ್ರಾಸುರನು ಹಿಡಿದ ಅವನಲ್ಲಿ ಮಹಾ ಮೋಹವುಂಟಾಯಿತು. ಆಗ ರಥಂತರ ಮಂತ್ರದಿಂದ ವಸಿಷ್ಠನು ಶಕ್ರನನ್ನು ಪುನಃ ಎಚ್ಚರಗೊಳಿಸಿದನು. ಆಗ ಶರೀರಸ್ಥನಾಗಿದ್ದ ವೃತ್ರನನ್ನು ಶತಕ್ರತುವು ಅದೃಶ್ಯ ವಜ್ರದಿಂದಲೇ ಸಂಹರಿಸಿದನೆಂದು ನಾವು ಕೇಳಿದ್ದೇವೆ. ಈ ಧರ್ಮರಹಸ್ಯವನ್ನು ಇಂದ್ರನೇ ಮಹರ್ಷಿಗಳಿಗೆ ಹೇಳಿದನು. ಋಷಿಗಳು ನನಗೆ ಹೇಳಿದುದನ್ನು ನೀನು ಕೇಳು.

ಶಾರೀರಿಕ ಮತ್ತು ಮಾನಸಿಕ ಎಂದು ಎರಡು ರೀತಿಯ

ವ್ಯಾಧಿಗಳಿವೆ. ಶರೀರ ಮತ್ತು ಮನಸ್ಸು ಇವುಗಳ ಪರಸ್ಪರ ಸಹಯೋಗವಿಲ್ಲದೇ ವ್ಯಾಧಿಯು ಹುಟ್ಟುವುದಿಲ್ಲ. ಶರೀರದಿಂದ ಹುಟ್ಟುವ ವ್ಯಾಧಿಯು ಶಾರೀರಿಕವ್ಯಾಧಿಯೆನ್ನುವುದರಲ್ಲಿ ಸಂಶಯವಿಲ್ಲ. ಮನಸ್ಸಿನಿಂದ ಹುಟ್ಟುವ ವ್ಯಾಧಿಯು ಮಾನಸಿಕ ಎನ್ನುವುದು ನಿಶ್ಚಿತ. ಶೀತ, ಉಷ್ಣ ಮತ್ತು ವಾಯುಗಳು ಶರೀರದ ಗುಣಗಳು. ಆ ಗುಣಗಳ ಸಾಮ್ಯವು ಆರೋಗ್ಯದ ಲಕ್ಷಣಗಳೆಂದು ಹೇಳುತ್ತಾರೆ. ಉಷ್ಣದಿಂದ ಶೀತವನ್ನು ಹೋಗಲಾಡಿಸಬಹುದು ಮತ್ತು ಶೀತದಿಂದ ಉಷ್ಣವನ್ನು ಹೋಗಲಾಡಿಸಬಹುದು. ಸತ್ವ, ರಜ, ಮತ್ತು ತಮಗಳೆಂಬ ಮೂರು ಆತ್ಮದ ಗುಣಗಳೆಂದು ಹೇಳುತ್ತಾರೆ. ಆ ಗುಣಗಳ ಸಾಮ್ಯತೆಯು ಆರೋಗ್ಯದ ಲಕ್ಷಣವೆಂದು ಹೇಳುತ್ತಾರೆ. ಇವುಗಳಲ್ಲಿ ಯಾವುದೊಂದು ಗುಣವೂ ಅಧಿಕವಾಗಿದ್ದರೆ ಅದನ್ನು ಇನ್ನೊಂದು ಗುಣದೊಂದಿಗೆ ಸೇರಿಸಿಕೊಳ್ಳಬೇಕೆಂಬ ವಿಧಾನವನ್ನು ಉಪದೇಶಿಸಿದ್ದಾರೆ. ಹರ್ಷದಿಂದ ಶೋಕವು ದೂರವಾಗುತ್ತದೆ ಮತ್ತು ಶೋಕದಿಂದ ಹರ್ಷವು ದೂರವಾಗುತ್ತದೆ. ಒಂದು ವೇಳೆ ವರ್ತಮಾನದಲ್ಲಿ ದುಃಖವು ಆಗುತ್ತಿದ್ದರೆ ಸುಖದ ವೇಳೆಯನ್ನು ಸ್ಮರಿಸಿಕೊಳ್ಳಬೇಕು. ಒಂದು

ವೇಳೆ ವರ್ತಮಾನದಲ್ಲಿ ಸುಖವು ಆಗುತ್ತಿದ್ದರೆ ದುಃಖದ ವೇಳೆಯನ್ನು ಸ್ಮರಿಸಿಕೊಳ್ಳಬೇಕು. ಆದರೆ ನೀನು ದುಃಖಿಯಾಗಿದ್ದುಕೊಂಡು ದುಃಖದ ನಿವಾರಣೆಗಾಗಿ ಸುಖವನ್ನು ಸ್ಮರಿಸಿಕೊಳ್ಳುತ್ತಿಲ್ಲ. ಸುಖಿಯಾಗಿದ್ದುಕೊಂಡು ಆ ಸುಖವನ್ನು ಸಮನ್ವಯಗೊಳಿಸುವುದಕ್ಕಾಗಿ ನೀನು ದುಃಖವನ್ನೂ ನೆನಪಿಸಿಕೊಳ್ಳುತ್ತಿಲ್ಲ. ದೈವವೇ ಬಲವತ್ತರವೆನ್ನುವುದನ್ನು ಸ್ಮರಿಸಿಕೊಳ್ಳಬೇಕು. ಅಥವಾ ದುಃಖಿಸುತ್ತಿರುವುದೇ ನಿನ್ನ ಸ್ವಭಾವವೂ ಆಗಿರಬಹುದು. ಪಾಂಡವರು ನೋಡುತ್ತಿದ್ದಂತೆಯೇ ಏಕವಸ್ತ್ರದಲ್ಲಿದ್ದ ರಜಸ್ವಲೆ ಕೃಷ್ಣೆಯನ್ನು ಸಭೆಗೆ ಎಳೆದುತಂದ ದೃಶ್ಯವನ್ನು ಈಗ ನೀನು ಸ್ಮರಿಸಿಕೊಳ್ಳುತ್ತಿಲ್ಲ! ಜಿನಗಳನ್ನುಟ್ಟು ನಗರದಿಂದ ಹೊರಬಂದಿದ್ದುದನ್ನು, ಮತ್ತು ಮಹಾರಣ್ಯದಲ್ಲಿ ವಾಸಿಸುದನ್ನು ನೀನು ಈಗ ನೆನಪಿಸಿಕೊಳ್ಳುತ್ತಿಲ್ಲ! ಜಟಾಸುರನಿಂದುಂಟಾದ ಕಷ್ಟವನ್ನು, ಚಿತ್ರಸೇನನೊಡನೆ ನಡೆದ ಯುದ್ಧವನ್ನು, ಮತ್ತು ಸೈಂಧವನಿಂದುಂಟಾದ ಕಷ್ಟವನ್ನು ನೀನು ನೆನಪಿಸಿಕೊಳ್ಳಲು ಬಯಸುತ್ತಿಲ್ಲ! ಪುನಃ ಅಜ್ಞಾತವಾಸದಲ್ಲಿ ಪರಿಚಾರಿಕೆಗಳನ್ನು ಮಾಡಿದುದು, ಯಾಜ್ಞಸೇನಿಯನ್ನು ಕೀಚಕನು ಕಾಲಿನಿಂದ

ಒದೆದುದು ಇದನ್ನು ನೀನು ನೆನಪಿಸಿಕೊಳ್ಳಲು ಬಯಸುತ್ತಿಲ್ಲ. ನೀನು ದ್ರೋಣ-ಭೀಷ್ಮರೊಂದಿಗೆ ಮಾಡಿದ ಯುದ್ಧವನ್ನು ಮಾತ್ರ ನೆನಪಿಸಿಕೊಳ್ಳುತ್ತಿದ್ದೀಯೆ. ನಿನ್ನ ಮನಸ್ಸಿನಲ್ಲಿರುವ ಈ ಯುದ್ಧವನ್ನೇ ನೀನು ಹೋರಾಡಬೇಕು. ಆ ಯುದ್ಧದಿಂದ ಗೆದ್ದು ನೀನು ಮೇಲೆ ಬರಬೇಕು! ಸ್ವಕರ್ಮಗಳಿಂದ ಮನಸ್ಸನ್ನು ಗೆದ್ದು ಪರಮ ಅವ್ಯಕ್ತರೂಪನನ್ನು ಪಡೆಯಬೇಕು. ಅಲ್ಲಿ ಶರಗಳದ್ದಾಗಲೀ, ಸೇವಕರದ್ದಾಗಲೀ ಮತ್ತು ಬಂಧುಗಳದ್ದಾಗಲೀ ಯಾವ ಕಾರ್ಯವೂ ಇಲ್ಲ. ಅಲ್ಲಿರುವ ಯುದ್ಧವನ್ನು ಆತ್ಮನೊಬ್ಬನೇ ಹೋರಾಡಬೇಕು. ಅಂಥಹ ಯುದ್ಧವನ್ನು ಗೆಲ್ಲದೇ ಇದ್ದರೆ ನೀನು ಎಂತಹ ಅವಸ್ಥೆಯನ್ನು ಹೊಂದುವೆ ಎನ್ನುವುದನ್ನು ತಿಳಿದುಕೊಂಡರೂ ನೀನು ಕೃತಕೃತ್ಯನಾಗುವೆ! ಭೂತಗಳ ಆಗು ಹೋಗುಗಳ ಕುರಿತು ಹೀಗೆ ಬುದ್ಧಿಯಲ್ಲಿ ನಿಶ್ಚಯಿಸಿ ನಿನ್ನ ಪಿತೃ-ಪಿತಾಮಹರ ವೃತ್ತಿಯನ್ನನುಸರಿಸಿ ಯಥೋಚಿತವಾಗಿ ರಾಜ್ಯವನ್ನಾಳು!

ಭಾರತ! ಬಾಹ್ಯ ಸಂಪತ್ತನ್ನು ತೊರೆದರೆ ಸಿದ್ಧಿಯು ದೊರಕುವುದಿಲ್ಲ. ಶಾರೀರಿಕ ದ್ರವ್ಯವನ್ನು ತೊರೆದರೆ ಸಿದ್ಧಿಯು ದೊರಕಬಹುದು ಅಥವಾ ದೊರಕದೆಯೂ ಇರಬಹುದು.

ಬಾಹ್ಯಧರ್ಮವನ್ನು ತ್ಯಜಿಸಿ ಶಾರೀರಿಕ ದ್ರವ್ಯಗಳಿಗೆ ಅಂಟಿಕೊಂಡಿರುವವನ ಧರ್ಮ ಮತ್ತು ಸುಖಗಳು ನಿನ್ನ ಶತ್ರುಗಳಲ್ಲಿ ಮಾತ್ರ ಇರಲಿ! ಎರಡು ಅಕ್ಷರಗಳಿಂದ ಮೃತ್ಯುವಾಗುತ್ತದೆ ಮತ್ತು ಮೂರು ಅಕ್ಷರಗಳಿಂದ ಶಾಶ್ವತ ಬ್ರಹ್ಮನಾಗುತ್ತದೆ. "ಮಮ" ಎನ್ನುವ ಎರಡಕ್ಷರಗಳು ಮೃತ್ಯು ಮತ್ತು "ನ ಮಮ" ಎನ್ನುವ ಮೂರು ಅಕ್ಷರಗಳು ಶಾಶ್ವತ. ಬ್ರಹ್ಮ-ಮೃತ್ಯುಗಳೆರಡೂ ಆತ್ಮನಲ್ಲಿಯೇ ನೆಲೆಸಿರುತ್ತವೆ. ನಿಶ್ಚಯವಾಗಿಯೂ ಅವು ಭೂತಗಳಿಗೆ ಅದೃಶ್ಯವಾಗಿದ್ದುಕೊಂಡು ಪರಸ್ಪರರೊಡನೆ ಯುದ್ಧಮಾಡುತ್ತಿರುತ್ತವೆ. ಯಾರು ತಮ್ಮನ್ನು ತಾವೇ ನಿಯಂತ್ರಿಸಿಕೊಂಡು ಅವಿನಾಶತ್ವವನ್ನು ಆತ್ಮನಲ್ಲಿ ಕಂಡಿರುತ್ತಾರೋ ಅವರು ಭೂತಗಳ ಶರೀರಗಳನ್ನು ಭೇದಿಸಿದರೂ ಹಿಂಸೆಮಾಡಿದ ಪಾಪವನ್ನು ಪಡೆಯುವುದಿಲ್ಲ. ಸ್ಥಾವರ-ಜಂಗಮಗಳೊಂದಿಗೆ ಪೃಥ್ವಿಯೆಲ್ಲವನ್ನು ಪಡೆದುಕೊಂಡರೂ ಯಾರಲ್ಲಿ ಮಮತ್ವವೆನ್ನುವುದು ಇಲ್ಲವೋ ಅವನಿಗೆ ಅದರಿಂದ ಏನಾಗುತ್ತದೆ? ಅಥವಾ ವನದಲ್ಲಿದ್ದು ವನ್ಯಜೀವನವನ್ನು ನಡೆಸುವವನಿಗೆ ದ್ರವ್ಯಗಳಲ್ಲಿ

ಮಮತೆಯಿದ್ದರೆ ಅವನು ಮೃತ್ಯುವಿನ ಬಾಯಿಯಲ್ಲಿರುವನೆಂದೇ ಆಗುತ್ತದೆ. ಹೊರಗಿನ ಮತ್ತು ಒಳಗಿನ ಶತ್ರುಗಳ ಸ್ವಭಾವವನ್ನು ನೋಡು. ಇದನ್ನು ಕಂಡುಕೊಂಡವನು ಮಹಾಭಯದಿಂದ ಮುಕ್ತನಾಗುತ್ತಾನೆ. ಕಾಮಾತ್ಮನನ್ನು ಲೋಕವು ಪ್ರಶಂಸಿಸುವುದಿಲ್ಲ. ಆದರೆ ಅಕಾಮನೆಯಿಂದ ಯಾವುದೇ ಪ್ರವೃತ್ತಿಯು ಇರುವುದಿಲ್ಲ. ಇದನ್ನು ತಿಳಿದವನು ದಾನ, ವೇದಾಧ್ಯಯನ, ತಪಸ್ಸು, ಮತ್ತು ವೈದಿಕ ಕಾಮ ಕರ್ಮಗಳು, ವ್ರತ, ಯಜ್ಞ, ನಿಯಮಾನುಷ್ಠಾನಗಳು, ಧ್ಯಾನಯೋಗಗಳು ಇವನ್ನು ಕಾಮನಾಪೂರ್ವಕವಾಗಿ ಅನುಷ್ಠಾನ ಮಾಡುವುದಿಲ್ಲ. ಇವುಗಳಿಂದ ಕಾಮನೆಗಳನ್ನು ಅಪೇಕ್ಷಿಸುವುದು ಧರ್ಮವಲ್ಲ. ಕಾಮನೆಗಳನ್ನು ನಿಯಂತ್ರಿಸಿಕೊಳ್ಳುವುದೇ ಧರ್ಮದ ಮೂಲವಾಗಿರುತ್ತದೆ.

ಈ ವಿಷಯದಲ್ಲಿ ಹಿಂದೆ ತಿಳಿದವರು ಕಾಮಗೀತೆಯನ್ನು ಕೀರ್ತನೆಮಾಡುತ್ತಾರೆ. ಆ ಸಂಕೀರ್ತನೆಯನ್ನು ಸಂಪೂರ್ಣವಾಗಿ ಕೇಳು. “ಉಪಾಯಗಳಿಲ್ಲದೇ ಯಾವ ಜೀವಿಯೂ ನನ್ನನ್ನು ಕೊಲ್ಲಲು ಶಕ್ಯವಿಲ್ಲ. ಹೊಡೆಯುವುದರಲ್ಲಿ

ತನ್ನ ಬಲವಿದೆಯೆಂದು ತಿಳಿದುಕೊಂಡವನು ನನ್ನನ್ನು ಹೊಡೆಯಲು ಪ್ರಯತ್ನಿಸಿದರೆ ಆ ಹೊಡೆತದಲ್ಲಿ ಕೂಡ ನಾನು ಪುನಃ ಹುಟ್ಟಿಕೊಳ್ಳುತ್ತೇನೆ. ವಿವಿಧ ದಕ್ಷಿಣಾಯುಕ್ತ ಯಜ್ಞಗಳಿಂದ ನನ್ನನ್ನು ಸಂಹರಿಸಲು ಪ್ರಯತ್ನಿಸಿದರೆ ಅವನಲ್ಲಿಯೂ ನಾನು ಜಂಗಮಗಳಲ್ಲಿ ಕರ್ಮಾತ್ಮನು ಹುಟ್ಟುವಂತೆ ಪುನಃ ಹುಟ್ಟಿಕೊಳ್ಳುತ್ತೇನೆ. ವೇದ-ವೇದಾಂತ ಸಾಧನೆಗಳಿಂದ ನನ್ನನ್ನು ಸಂಹರಿಸಲು ಪ್ರಯತ್ನಿಸಿದರೆ ಅವರಲ್ಲಿಯೂ ನಾನು ಸ್ಥಾವರಗಳಲ್ಲಿ ಶಾಂತಾತ್ಮನು ಪ್ರಕಟವಾಗುವಂತೆ ಪುನಃ ಹುಟ್ಟಿಕೊಳ್ಳುತ್ತೇನೆ. ಯಾರು ಧೃತಿ ಮತು ಸತ್ಯಪರಾಕ್ರಮಗಳಿಂದ ನನ್ನನ್ನು ಸಂಹರಿಸಲು ಪ್ರಯತ್ನಿಸುತ್ತಾನೋ ಅವನಲ್ಲಿ ಕೂಡ ನಾನು ಭಾವನೆಗಳಾಗಿ ಸೇರಿಕೊಳ್ಳುತ್ತೇನೆ. ಯಾವ ಸಂಶಿತವ್ರತನು ತಪಸ್ಸಿನಿಂದ ನನ್ನನ್ನು ಸಂಹರಿಸಲು ಪ್ರಯತ್ನಿಸುತ್ತಾನೋ ಅವನ ತಪಸ್ಸಿನಲ್ಲಿಯೇ ಪುನಃ ನಾನು ಹುಟ್ಟಿಕೊಳ್ಳುತ್ತೇನೆ. ಯಾವ ಪಂಡಿತನು ಮೋಕ್ಷವನ್ನು ಅವಲಂಬಿಸಿ ನನ್ನನ್ನು ಸಂಹರಿಸಲು ಪ್ರಯತ್ನಿಸುತ್ತಾನೋ ಅವನ ಮೋಕ್ಷದ ಉದ್ದೇಶದಲ್ಲಿಯೇ ನಿಂತು ನಗುತ್ತೇನೆ ಮತ್ತು ನರ್ತಿಸುತ್ತೇನೆ.

ಸರ್ವಜೀವಿಗಳಿಂದಲೂ ಅವಧ್ಯನಾದ ನಾನು ಸನಾತನ.” ಆದುದರಿಂದ ವಿವಿಧದಕ್ಷಿಣಗಳಿಂದ ಕೂಡಿದ ಯಜ್ಞಗಳಿಂದ ಧರ್ಮವನ್ನು ಮಾಡು. ವಿವಿಧ ದಕ್ಷಿಣೆಗಳಿಂದ ಕೂಡಿದ ಅಶ್ವಮೇಧವನ್ನು ಯಾಜಿಸು. ಸಮೃದ್ಧ ಆಪ್ತದಕ್ಷಿಣೆಗಳಿಂದ ಕೂಡಿದ ಅನ್ಯ ವಿವಿಧ ಯಜ್ಞಗಳನ್ನೂ ಮಾಡು. ಹತರಾದ ಬಂಧುಗಳನ್ನು ನೋಡಿ ಪುನಃ ಪುನಃ ವ್ಯಥೆಪಡಬೇಡ. ರಣರಂಗದಲ್ಲಿ ಹತರಾದ ಅವರನ್ನು ಪುನಃ ನೋಡಲು ನಿನಗೆ ಶಕ್ಯವಿಲ್ಲ. ಸಮೃದ್ಧ ಆಪ್ತದಕ್ಷಿಣೆಗಳಿಂದ ಮಹಾಯಜ್ಞಗಳನ್ನು ಮಾಡಿ ಲೋಕದಲ್ಲಿ ಪರಮ ಕೀರ್ತಿಯನ್ನು ಗಳಿಸಿ ಉತ್ತಮ ಗತಿಯನ್ನು ಪಡೆಯುತ್ತೀಯೆ.”

## ಹಸ್ತಿನಾಪುರ ಪ್ರವೇಶ

ಈ ರೀತಿ ಮುನಿಗಳು ಮತ್ತು ತಪೋಧನರ ಬಹುವಿಧದ ಮಾತುಗಳನ್ನು ಕೇಳಿ ಬಂಧುಗಳನ್ನು ಕಳೆದುಕೊಂಡಿದ್ದ ರಾಜರ್ಷಿ ಯುಧಿಷ್ಠಿರನು ಸಮಾಧಾನಗೊಂಡನು. ಸ್ವಯಂ ಭಗವಂತ ಕೃಷ್ಣ, ದ್ವೈಪಾಯನ ಕೃಷ್ಣ, ಋಷಿ ದೇವಸ್ಥಾನ, ನಾರದ, ಭೀಮ, ನಕುಲ, ಕೃಷ್ಣೆ ದ್ರೌಪದಿ, ಸಹದೇವ, ಧೀಮಂತ ವಿಜಯ ಅರ್ಜುನ, ಅನ್ಯ ಪುರುಷವ್ಯಾಘ್ರರು,

ಮತ್ತು ಶಾಸ್ತ್ರದೃಷ್ಟಿಯನ್ನರಿತ ಬ್ರಾಹ್ಮಣರು ಮೊದಲಾದವರಿಂದ ಸಾಂತ್ವನಗೊಳಿಸಲ್ಪಟ್ಟ ಪಾರ್ಥಿವ ಯುಧಿಷ್ಠಿರನು ಮಾನಸಿಕ ಶೋಕ, ದುಃಖ, ಸಂತಾಪಗಳನ್ನು ಕಳೆದುಕೊಂಡನು. ನೃಪ ಯುಧಿಷ್ಠಿರನು ಬಂಧುಗಳ ಪ್ರೇತಕಾರ್ಯಗಳನ್ನು ಮಾಡಿ ಪುನಃ ದೇವತೆಗಳನ್ನೂ ಬ್ರಾಹ್ಮಣರನ್ನೂ ಅರ್ಚಿಸತೊಡಗಿದನು. ಆ ಧರ್ಮಾತ್ಮನು ಸಾಗರವನ್ನೇ ವಸ್ತ್ರವನ್ನಾಗಿ ಉಟ್ಟುಕೊಂಡ ಪೃಥ್ವಿಯನ್ನು ಆಳತೊಡಗಿದನು. ಸ್ವರಾಜ್ಯವನ್ನು ಪಡೆದು ಶಾಂತ ಚೇತಸನಾದ ಕೌರವ್ಯ ನೃಪನು ವ್ಯಾಸ, ನಾರದ ಮತ್ತು ಅನ್ಯರನ್ನು ಕುರಿತು ಹೇಳಿದನು:

> “ವೃದ್ಧರು ಮತ್ತು ಮುನಿಪುಂಗವರಿಂದ ನನಗೆ ಪುನಃ ಪುನಃ ಆಶ್ವಾಸನೆಗಳು ದೊರಕಿವೆ. ಈಗ ನನ್ನಲ್ಲಿ ಸೂಕ್ಷ್ಮವಾದಷ್ಟೂ ದುಃಖವಿಲ್ಲ. ನೀವು ಸೂಚಿಸಿದಂತೆ ಅತಿದೊಡ್ಡ ಸಂಪತ್ತು ಸಿಗುವುದರಲ್ಲಿದೆ. ನಿಮ್ಮೆಲ್ಲರನ್ನೂ ಮುಂದಿರಿಸಿಕೊಂಡು ನಾನು ಯಜ್ಞವನ್ನು ಮಾಡಿ ದೇವತೆಗಳನ್ನು ತೃಪ್ತಿಗೊಳಿಸುತ್ತೇನೆ. ದ್ವಿಜಸತ್ತಮ! ನೀನು ರಕ್ಷಿಸುತ್ತಿರುವ ಹಿಮಾಲಯ ಪರ್ವತದ ಆ ಸ್ಥಳಕ್ಕೆ ಹೋಗೋಣ! ಆ ಪ್ರದೇಶವು ಅನೇಕ ಆಶ್ಚರ್ಯಗಳಿಂದ ಕೂಡಿದೆಯೆಂದು ಕೇಳಿದ್ದೇವೆ. ಪೂಜ್ಯನಾದ ನೀನೂ, ದೇವರ್ಷಿ ನಾರದ ಮತ್ತು ದೇವಸ್ಥಾನರೂ

> ಕಲ್ಯಾಣಕರವಾದ ಅನೇಕ ವಿಚಿತ್ರ ಮಾತುಗಳನ್ನಾಡಿದ್ದೀರಿ. ಸೌಭಾಗ್ಯಶಾಲಿಯಲ್ಲದ ಯಾವ ಪುರುಷನೂ ಕಷ್ಟಸಮಯದಲ್ಲಿ ಇಂತಹ ಸಾಧುಸಮ್ಮತ ಹಿತೈಷಿ ಗುರುಗಳನ್ನು ಪಡೆಯಲಾರನು!”

ರಾಜನು ಹೀಗೆ ಹೇಳಲು ಎಲ್ಲ ಮಹರ್ಷಿಗಳು ರಾಜನಿಂದ ಮತ್ತು ಹಾಗೆಯೇ ಕೃಷ್ಣ-ಫಲ್ಗುನರಿಂದ ಬೀಳ್ಕೊಂಡರು. ಅವರೆಲ್ಲರೂ ನೋಡುತ್ತಿದ್ದಂತೆಯೇ ಅವರು ಅಲ್ಲಿಯೇ ಅದೃಶ್ಯರಾದರು. ಆಗ ರಾಜಾ ಪ್ರಭು ಧರ್ಮಸುತನು ಅಲ್ಲಿಯೇ ಕುಳಿತುಕೊಂಡನು. ಸ್ವಲ್ಪ ಕಾಲದ ನಂತರ ಅವನು ಹಿಂದಿರುಗಿದನು. ನಿಧನ ಹೊಂದಿದ ಭೀಷ್ಮನ ಶೌಚಕರ್ಮಗಳನ್ನು ಮಾಡಿ ಔರ್ಧ್ವದೈಹಿಕ ಕರ್ಮಗಳನ್ನು ಮಾಡಿ ವಿಪ್ರರಿಗೆ ಮಹಾದಾನಗಳನ್ನು ನೀಡಿದನು. ಧೃತರಾಷ್ಟ್ರನೊಂದಿಗೆ ಕುರುನಂದನನು ಭೀಷ್ಮ-ಕರ್ಣರೇ ಮೊದಲಾದ ಕುರುಗಳ ಔರ್ಧ್ವದೈಹಿಕ ಕರ್ಮಗಳನ್ನು ನೆರವೇರಿಸಿದನು. ಅನಂತರ ಪಾಂಡವರ್ಷಭನು ಧೃತರಾಷ್ಟ್ರನನ್ನು ಮುಂದಿರಿಸಿಕೊಂಡು ಹಸ್ತಿನಾಪುರವನ್ನು ಪ್ರವೇಶಿಸಿದನು. ಪ್ರಜ್ಞಾಚಕ್ಷು ತಂದೆ ಈಶ್ವರನನ್ನು ಸಮಾಧಾನಗೊಳಿಸುತ್ತಾ ಧರ್ಮಾತ್ಮ ಯುಧಿಷ್ಠಿರನು ಸಹೋದರರೊಂದಿಗೆ ಭೂಮಿಯನ್ನು ಆಳತೊಡಗಿದನು.

# ಇಂದ್ರಪ್ರಸ್ಥದಲ್ಲಿ ಕೃಷ್ಣಾರ್ಜುನರ ಸಭಾವಿಹಾರ; ಕೃಷ್ಣನು ದ್ವಾರಕೆಗೆ ತೆರಳಿದುದು

ಪಾಂಡವರಿಗೆ ವಿಜಯವಾಗಿ ಅವರು ಪ್ರಶಾಂತರಾಗಲು ವಾಸುದೇವ-ಧನಂಜಯರು ಹರ್ಷಿತರಾದರು. ಮುದಿತರಾಗಿ ಅವನು ತಮ್ಮ ಅನುಯಾಯಿಗಳೊಂದಿಗೆ ದಿವಿಯಲ್ಲಿ ದೇವೇಶ್ವರರಂತೆ ವಿಚಿತ್ರ ವನ-ಪರ್ವತಗಳಲ್ಲಿ ವಿಹರಿಸಿದರು. ಅಶ್ವಿನಿಯರು ನಂದನ ವನದಲ್ಲಿ ಹೇಗೋ ಹಾಗೆ ಅವರಿಬ್ಬರೂ ರಮಣೀಯ ಶೈಲಗಳಲ್ಲಿ ಮತ್ತು ನದಿ-ತೀರ್ಥಗಳಲ್ಲಿ ವಿಹರಿಸುತ್ತಾ ಹರ್ಷಿತರಾದರು. ಮಹಾತ್ಮ ಕೃಷ್ಣ-ಪಾಂಡವರು ಇಂದ್ರಪ್ರಸ್ಥದಲ್ಲಿ ರಮಿಸಿದರು. ಆ ರಮ್ಯ ಸಭೆಯನ್ನು ಪ್ರವೇಶಿಸಿ ವಿಹರಿಸಿದರು. ಅಲ್ಲಿ ಅವರಿಬ್ಬರೂ ವಿಚಿತ್ರ ಯುದ್ಧಕಥೆಗಳನ್ನೂ, ತಮಗಾದ ಪರಿಕ್ಲೇಶಗಳನ್ನೂ ಹೇಳಿಕೊಳ್ಳುತ್ತಾ, ಮಾತುಕಥೆಗಳಲ್ಲಿಯೇ ಕಾಲವನ್ನು ಕಳೆದರು. ಪುರಾಣ ಋಷಿಸತ್ತಮರಾದ ಅವರಿಬ್ಬರು ಮಹಾತ್ಮರೂ ಪ್ರೀತಿಯಿಂದ ಋಷಿಗಳ



ಮತ್ತು ದೇವತೆಗಳ ವಂಶಗಳ ಕಥೆಗಳನ್ನು ಹೇಳಿಕೊಳ್ಳುತ್ತಿದ್ದರು. ನಿಶ್ಚಯಜ್ಞ ಕೇಶವನು ಪಾರ್ಥನಿಗೆ ಮಧುರವಾದ ವಿಚಿತ್ರ ಪದ ನಿಶ್ಚಯಗಳುಳ್ಳ ಕಥೆಗಳನ್ನು ಹೇಳತೊಡಗಿದನು. ಪುತ್ರಶೋಕದಿಂದ ಮತ್ತು ಸಹಸ್ರಾರು ಜ್ಞಾತಿಬಾಂಧವರ ಮರಣದಿಂದ ಸಂತಪ್ತನಾಗಿದ್ದ ಪಾರ್ಥನನ್ನು ಶೌರಿ ಜನಾರ್ದನನು ಕಥೆಗಳ ಮೂಲಕ ಸಮಾಧಾನಪಡಿಸಿದನು. ವಿಧಾನಜ್ಞ ಮಹಾತಪಸ್ವಿ ಸಾತ್ವತನು ಅರ್ಜುನನನ್ನು ವಿಧಿವತ್ತಾಗಿ ಸಮಾಧಾನಗೊಳಿಸಿ ತಾನು ಹೊತ್ತಿದ್ದ ಭಾರವನ್ನು ಕೆಳಗಿಳಿಸಿ ವಿಶ್ರಮಿಸಿದಂತೆ ತೋರಿದನು.

ಸ್ವರಾಜ್ಯವನ್ನು ಪಡೆದು ಪಾರ್ಥನು ಕೃಷ್ಣನೊಂದಿಗೆ ಆ ರಮ್ಯಸಭೆಯಲ್ಲಿ ಮುದಿತನಾಗಿ ವಿಹರಿಸಿದನು. ಸ್ವರ್ಗದ ಪ್ರದೇಶದಂತಿತ್ತ ಆ ಸಭಾಪ್ರದೇಶದಲ್ಲಿ ಅವರಿಬ್ಬರೂ ಸ್ವಜನರಿಂದ ಪರಿವೃತರಾಗಿ ಮೋದದಿಂದ ತಿರುಗಾಡಿದರು. ಆಗ ಆ ರಮ್ಯ ಸಭೆಯನ್ನು ನೋಡುತ್ತಾ ಕೃಷ್ಣನ ಸಹಿತ ನಡೆಯುತ್ತಿದ್ದ ಪಾಂಡವ ಅರ್ಜುನನು ಈ ಮಾತನ್ನಾಡಿದನು:

> “ದೇವಕೀಪುತ್ರ! ಸಂಗ್ರಾಮವು ಪ್ರಾರಂಭವಾಗುವಾಗ ನಾನು ನಿನ್ನ ಮಹಾತ್ಮೆಯನ್ನೂ ಈಶ್ವರನ ರೂಪವನ್ನೂ ತಿಳಿದುಕೊಂಡೆನು. ಅಂದು ಸೌಹಾರ್ದತೆಯಿಂದ ನೀನು

ಏನೆಲ್ಲವನ್ನು ಹೇಳಿದ್ದೆಯೋ ಅವೆಲ್ಲವನ್ನೂ ನಷ್ಟಚೇತನನಾದ ನಾನು ಮರೆತುಹೋಗಿದ್ದೇನೆ. ಸ್ವಲ್ಪಸಮಯದಲ್ಲಿಯೇ ನೀನು ದ್ವಾರಕೆಗೆ ಹೋಗುವವನಿದ್ದೀಯೆ! ಅದಕ್ಕೆ ಮೊದಲು ನಿನ್ನಿಂದ ಅದರ ಅರ್ಥವನ್ನು ಪುನಃ ತಿಳಿದುಕೊಳ್ಳಲು ನನಗೆ ಕುತೂಹಲವಾಗಿದೆ.”

ಹೀಗೆ ಹೇಳಲು ಮಹಾತೇಜಸ್ವಿ, ಮಾತನಾಡುವವರಲ್ಲಿ ಶ್ರೇಷ್ಠ ಕೃಷ್ಣನು ಫಲ್ಗುನನನ್ನು ಬಿಗಿದಪ್ಪಿ ಈ ಮಾತುಗಳನ್ನಾಡಿದನು:

“ಪಾರ್ಥ! ಗುಹ್ಯವೂ ಸನಾತನವೂ ಆದ ಸರ್ವಲೋಕಗಳಲ್ಲಿ ಶಾಶ್ವತ ಧರ್ಮದ ಸ್ವರೂಪ ಜ್ಞಾನವನ್ನು ನಿನಗೆ ನಾನು ಹೇಳಿದ್ದೆನು. ಆದರೆ ನೀನು ಬುದ್ಧಿಯಿಲ್ಲದೇ ಅದನ್ನು ಗ್ರಹಿಸಿಕೊಳ್ಳಲಿಲ್ಲ ಎನ್ನುವುದು ನನಗೆ ಬಹಳ ಅಪ್ರಿಯವಾಗಿದೆ. ನೀನು ತುಂಬಾ ಅಶ್ರದ್ಧೆಯುಳ್ಳವನೂ ಮಂದಬುದ್ಧಿಯುಳ್ಳವನೂ ಆಗಿರುವೆ. ಏಕೆಂದರೆ ಬ್ರಹ್ಮಪದವನ್ನು ಪಡೆಯುವುದಕ್ಕೆ ಅದು ತುಂಬಾ ಪರ್ಯಾಪ್ತವಾಗಿತ್ತು. ಅದನ್ನು ಪುನಃ ಸಂಪೂರ್ಣವಾಗಿ ಹೇಳಲು ನನ್ನಿಂದ ಶಕ್ಯವಿಲ್ಲ. ಆಗ ನಾನು ಯೋಗಯುಕ್ತನಾಗಿದ್ದುದರಿಂದ ಆ ಬ್ರಹ್ಮತತ್ತ್ವವನ್ನು ವಿವರಿಸಿ

ಹೇಳಿದ್ದೆನು. ಆದರೆ ಅದೇ ಅರ್ಥಕೊಡುವ ಪುರಾತನ ಇತಿಹಾಸವನ್ನು ನಿನಗೆ ಹೇಳುತ್ತೇನೆ. ಆ ಬುದ್ಧಿಯಲ್ಲಿದ್ದುಕೊಂಡರೆ ನೀನು ಉತ್ತಮ ಲೋಕಗಳಿಗೆ ಹೋಗುತ್ತೀಯೆ. ಕೇಳು. ಎಲ್ಲವನ್ನೂ ನಿನಗೆ ಹೇಳುತ್ತೇನೆ."

ಆಗ ಕೃಷ್ಣನು ಅರ್ಜುನನಿಗೆ ಅನುಗೀತೆಯನ್ನು ಉಪದೇಶಿಸಿದನು. ಕಥೆಗಳ ಕೊನೆಯಲ್ಲಿ ಗೋವಿಂದನು ಗುಡಾಕೇಶನನ್ನು ಮಧುರಮಾತುಗಳಿಂದ ಸಾಂತ್ವನಗೊಳಿಸುತ್ತಾ ಅರ್ಥಯುಕ್ತವಾದ ಈ ಮಾತುಗಳನ್ನಾಡಿದನು:

"ಸವ್ಯಸಾಚಿ! ನಿನ್ನ ಬಾಹುಬಲವನ್ನು ಆಶ್ರಯಿಸಿ ರಾಜಾ ಧರ್ಮಸುತನು ಈ ಇಡೀ ಭೂಮಿಯನ್ನೇ ಗೆದ್ದಿದ್ದಾಯಿತು! ಭೀಮಸೇನ ಮತ್ತು ಯಮಳರ ಪ್ರಭಾವದಿಂದ ಧರ್ಮರಾಜ ಯುಧಿಷ್ಠಿರನು ದಾಯಾದಿಗಳಿಲ್ಲದ ಈ ಮಹಿಯನ್ನು ಭೋಗಿಸುತ್ತಿದ್ದಾನೆ ಧರ್ಮಜ್ಞ ರಾಜನು ಧರ್ಮದಿಂದಲೇ ಕಂಟಕವಿಲ್ಲದ ರಾಜ್ಯವನ್ನು ಪಡೆದುಕೊಂಡನು. ಧರ್ಮದಿಂದಲೇ ರಾಜಾ ಸುಯೋಧನನು ಯುದ್ಧದಲ್ಲಿ ಮಡಿದನು. ಅಧರ್ಮದಲ್ಲಿಯೇ ರುಚಿಯನ್ನಿಟ್ಟಿದ್ದ, ಸದಾ ಅಪ್ರಿಯವಾದುದನ್ನೇ ಮಾತನಾಡುತ್ತಿದ್ದ, ಆಸೆಬುರುಕ

ದುರಾತ್ಮ ಧಾರ್ತರಾಷ್ಟ್ರರು ಬಾಂಧವರೊಂದಿಗೆ ಕೆಳಗುರುಳಿದ್ದಾರೆ. ನೀನು ರಕ್ಷಿಸುತ್ತಿರುವ ಈ ಪ್ರಶಾಂತ ಅಖಿಲ ಪೃಥ್ವಿಯನ್ನು ಪೃಥ್ವೀಪತಿ ಧರ್ಮಸುತ ರಾಜನು ಭೋಗಿಸುತ್ತಿದ್ದಾನೆ. ನಿನ್ನೊಡನೆ ನಾನು ನಿರ್ಜನ ಅರಣ್ಯದಲ್ಲಿಯೂ ರಮಿಸಬಲ್ಲೆನು. ಇನ್ನು ಜನರಿರುವ ಮತ್ತು ಅತ್ತೆ ಪೃಥಾಳಿರುವ ಇಲ್ಲಿ ಇನ್ನೇನು? ಎಲ್ಲಿ ರಾಜಾ ಧರ್ಮಸುತನಿರುವನೋ, ಎಲ್ಲಿ ಮಹಾಬಲ ಭೀಮನಿರುವನೋ, ಎಲ್ಲಿ ಮಾದ್ರವತೀ ಪುತ್ರರಿರುವರೋ ಅಲ್ಲಿ ನನಗೆ ಪರಮ ಆನಂದವಾಗುತ್ತದೆ. ಸ್ವರ್ಗದಂತಿರುವ ಈ ರಮಣೀಯ ಪುಣ್ಯ ಸಭಾಪ್ರದೇಶದಲ್ಲಿ ನಿನ್ನೊಡನೆ ಇದ್ದೇನೆ. ಶೂರಪುತ್ರ ವಸುದೇವನನ್ನು, ಬಲದೇವನನ್ನು ಮತ್ತು ಹಾಗೆಯೇ ಇತರ ವೃಷ್ಣಿಪುಂಗವರನ್ನು ಕಾಣದೇ ಬಹಳ ಕಾಲವು ಕಳೆದುಹೋಯಿತು. ಆದುದರಿಂದ ದ್ವಾರವತೀ ಪುರಿಯ ಕಡೆ ಹೋಗಲು ಬಯಸುತ್ತೇನೆ. ನಾನು ಮತ್ತು ನೀನು ಇಬ್ಬರೂ ಅಲ್ಲಿಗೆ ಹೋಗಬೇಕೆಂದು ಅನಿಸುತ್ತಿದೆ. ಶೋಕಿಸುತ್ತಿದ್ದ ರಾಜಾ ಯುಧಿಷ್ಠಿರನಿಗೆ ಭೀಷ್ಮನೊಂದಿಗೆ ನಾವೂ ಕೂಡ ಅಲ್ಲಲ್ಲಿ ಬಹುವಿಧವಾಗಿ ಹೇಳಿದೆವು. ಪಾಂಡವ

ಯುಧಿಷ್ಠಿರನಾದರೋ ನಮ್ಮಿಂದ ಉಪದೇಶಗಳನ್ನು ಪಡೆದು ಆಳುತ್ತಿದ್ದಾನೆ. ಆ ಮಹಾತ್ಮನು ನಮ್ಮ ವಚನಗಳೆಲ್ಲವನ್ನೂ ಸಂಪೂರ್ಣವಾಗಿ ಸ್ವೀಕರಿಸಿದ್ದಾನೆ. ಧರ್ಮಜ್ಞ ಕೃತಜ್ಞ ಸತ್ಯವಾದಿನಿ ಧರ್ಮಪುತ್ರನಲ್ಲಿ ಸತತವೂ ಸತ್ಯ-ಧರ್ಮಗಳು ಮತ್ತು ಉನ್ನತ ಬುದ್ಧಿಯು ಸ್ಥಿರವಾಗಿ ನೆಲೆಸಿವೆ. ನೀನು ಬಯಸುವೆಯಾದರೆ ಆ ಮಹಾತ್ಮನಲ್ಲಿಗೆ ಹೋಗಿ ನಮ್ಮ ಪ್ರಯಾಣದ ಕುರಿತು ಜನಾಧಿಪನಿಗೆ ಹೇಳು. ಪ್ರಾಣತ್ಯಾಗಕ್ಕೂ ಸಿದ್ಧನಾಗಿದ್ದ ಅವನಿಗೆ ಅಪ್ರಿಯವಾದುದನ್ನು ಮಾಡಿ ನಾವು ದ್ವಾರವತೀ ಪುರಿಗೆ ಹೇಗೆ ಹೋಗಬಲ್ಲೆವು? ಇವೆಲ್ಲವನ್ನೂ ನಿನ್ನ ಪ್ರೀತಿ-ಹಿತಗಳನ್ನು ಬಯಸಿ ಹೇಳುತ್ತಿದ್ದೇನೆ. ನಿನಗೆ ಸತ್ಯವನ್ನೇ ಹೇಳುತ್ತೇನೆ. ಸುಳ್ಳನೆಂದೂ ಹೇಳುವುದಿಲ್ಲ. ನಾನು ಇಲ್ಲಿ ಇದ್ದು ಆಗಬೇಕಾಗಿದ್ದ ಪ್ರಯೋಜನವು ಆಗಿಹೋಯಿತು. ರಾಜಾ ಧಾರ್ತರಾಷ್ಟ್ರನು ಅವನ ಸೇನೆ ಮತ್ತು ಅನುಯಾಯಿಗಳೊಂದಿಗೆ ಹತನಾದನು. ಪೃಥ್ವಿಯೂ ಕೂಡ ಧೀಮಂತ ಧರ್ಮಪುತ್ರನ ವಶವಾಯಿತು. ಸಮುದ್ರವೇ ವಸ್ತ್ರವಾಗುಳ್ಳ ಶೈಲ-ವನ-ಕಾನನ ಯುಕ್ತಳಾದ ಬಹುವಿಧದ ರತ್ನಗಳ ಖನಿಯಾದ ಭೂಮಿಯು ಕುರುರಾಜನದ್ದಾಗಿದೆ.

ಅನೇಕ ಮಹಾತ್ಮ ಸಿದ್ಧರಿಂದ ಉಪಾಸಿಸಲ್ಪಟ್ಟು ಮತ್ತು ಬಂದಿಗಳಿಂದ ಸತತವೂ ಸ್ತುತಿಸಲ್ಪಡುತ್ತಿರುವ ಧರ್ಮಜ್ಞ ರಾಜನು ಇಡೀ ವಸುಂಧರೆಯನ್ನು ಧರ್ಮದಿಂದ ಪಾಲಿಸಲಿ! ಇಂದು ನೀನು ನನ್ನೊಡನೆ ಕುರುವರ್ಧನ ರಾಜನಲ್ಲಿಗೆ ಹೋಗಿ ದ್ವಾರಕೆಗೆ ಹೋಗುವ ಕುರಿತು ಕೇಳು. ಈ ಶರೀರ ಮತ್ತು ನನ್ನ ಮನೆಯಲ್ಲಿ ಏನೆಲ್ಲ ಸಂಪತ್ತಿದೆಯೋ ಅದು ಸದಾ ಯುಧಿಷ್ಠಿರನಿಗೇ ಮುಡುಪಾಗಿದೆ. ಕುರುಗಳ ಅಧಿಪ ಮಹಾಮತಿ ಯುಧಿಷ್ಠಿರನು ನನಗೆ ಪ್ರಿಯನಾದವನೂ ಮತ್ತು ಮಾನ್ಯನೂ ಆಗಿದ್ದಾನೆ. ನಿನ್ನೊಡನೆ ಇರುವ ಸುಖವಲ್ಲದೇ ಇಲ್ಲಿ ನಾನು ಇನ್ನೂ ಉಳಿದುಕೊಂಡರೆ ಯಾವ ಪ್ರಯೋಜನವನ್ನೂ ನಾನು ಕಾಣುತ್ತಿಲ್ಲ. ಈ ಪೃಥ್ವಿಯೇ ನಿನ್ನ ಗುರುವೂ ಉತ್ತಮ ನಡತೆಯುಳ್ಳವನೂ ಆದ ಯುಧಿಷ್ಠಿರನ ಶಾಸನದಲ್ಲಿದೆ!”

ಆ ಮಹಾತ್ಮ ಜನಾರ್ದನನು ಹೀಗೆ ಹೇಳಲು ಅಮಿತ ವಿಕ್ರಮಿ ಅರ್ಜುನನು

“ಕೃಷ್ಣ! ಗಜಸಾಹ್ವಯ ನಗರಕ್ಕೆ ಇಂದೇ ಹೋಗೋಣ! ಅಲ್ಲಿ ರಾಜಾ ಧರ್ಮಾತ್ಮ ಯುಧಿಷ್ಠಿರನನ್ನು ಸಂಧಿಸಿ, ಆ ದುರ್ಧರ್ಷನ ಅನುಜ್ಞೆಯನ್ನು ಪಡೆದು ನಿನ್ನ ಪುರಿಗೆ ನೀನು

ಪ್ರಯಾಣಿಸಬಹುದು !”

ಎಂದು ಹೇಳಿ ಜನಾರ್ದನನನ್ನು ಪೂಜಿಸಿದನು. ಬಳಿಕ ಕೃಷ್ಣನು ರಥವನ್ನು ಸಿದ್ಧಪಡಿಸುವಂತೆ ದಾರುಕನಿಗೆ ಹೇಳಿದನು. ಸ್ವಲ್ಪ ಹೊತ್ತಿನಲ್ಲಿಯೇ ರಥವು ಸಿದ್ಧವಾಗಿದೆಯೆಂದು ದಾರುಕನು ಬಂದು ಹೇಳಿದನು. ಹಾಗೆಯೇ ಪಾಂಡವ ಅರ್ಜುನನೂ ಕೂಡ

“ರಥವನ್ನು ಸಿದ್ಧಪಡಿಸಿ. ಹಸ್ತಿನಾಪುರ ನಗರಕ್ಕೆ
ಪ್ರಯಾಣಿಸೋಣ !”

ಎಂದು ಆಜ್ಞಾಪಿಸಿದನು. ಹೀಗೆ ಹೇಳಲು ಅವನ ಸೈನಿಕರು ಸಿದ್ಧರಾಗಿ ರಥಗಳು ಸಿದ್ಧವಾಗಿವೆ ಎಂದು ಅಮಿತತೇಜಸ್ವಿ ಪಾರ್ಥನಿಗೆ ಬಂದು ಹೇಳಿದರು. ಆಗ ಕೃಷ್ಣಾರ್ಜುನರು ರಥದಲ್ಲಿ ಕುಳಿತು, ವಿಚಿತ್ರ ಮಾತುಕಥೆಗಳನ್ನಾಡುತ್ತಾ ಸಂತೋಷದಿಂದ ಪ್ರಯಾಣಿಸಿದರು. ರಥದಲ್ಲಿ ಕುಳಿತಿದ್ದ ವಾಸುದೇವನಿಗೆ ಮಹಾತೇಜಸ್ವೀ ಧನಂಜಯನು ಪುನಃ ಈ ಮಾತುಗಳನ್ನಾಡಿದನು:

“ವೃಷ್ಣಿಕುಲೋದ್ವಹ ! ನಿನ್ನ ಅನುಗ್ರಹದಿಂದಲೇ ರಾಜಾ
ಯುಧಿಷ್ಠಿರನಿಗೆ ಜಯವು ದೊರಕಿತು. ಶತ್ರುಗಳನ್ನು ಸಂಹರಿಸಿ
ಕಂಟಕವಿಲ್ಲದ ಈ ರಾಜ್ಯವನ್ನು ಅವನು ಪಡೆದನು.

ಮಧುಸೂದನ! ನಿನ್ನಿಂದ ನಾವು ನಾಥವಂತರಾದೆವು. ನಿನ್ನನ್ನೇ ನೌಕೆಯನ್ನಾಗಿಸಿಕೊಂಡು ನಾವು ಕುರುಸಾಗರವನ್ನು ದಾಟಿದೆವು. ವಿಶ್ವಕರ್ಮನೇ! ವಿಶ್ವಾತ್ಮನೇ! ವಿಶ್ವಸಂಭವನೇ! ನಿನಗೆ ನಮಸ್ಕಾರವು. ನಾನು ನಿನಗೆ ತುಂಬಾ ಬೇಕಾದವನು ಎಂದು ತಿಳಿದುಕೊಂಡೆನು. ಮಧುಸೂದನ! ವಿಭೋ! ನಿನ್ನ ತೇಜಸ್ಸಿನಿಂದಲೇ ನಿತ್ಯವೂ ಎಲ್ಲವೂ ಹುಟ್ಟಿಕೊಳ್ಳುತ್ತವೆ. ಎಲ್ಲವೂ ಲಯವಾಗುತ್ತವೆ. ಕ್ರೀಡಾಮಯವಾದ ಈ ಭೂಮಿಯೇ ನಿನಗೆ ಮನೋರಂಜನೆಯ ಸ್ಥಾನವು. ಆಕಾಶ-ಭೂಮಿಗಳು ನಿನ್ನ ಮಾಯೆಯೇ ಆಗಿವೆ. ಈ ಸ್ಥಾವರ-ಜಂಗಮ ವಿಶ್ವವೆಲ್ಲವೂ ನಿನ್ನಲ್ಲಿಯೇ ನೆಲೆಸಿವೆ. ಸನಾತನನಾದ ನೀನೇ ಸರ್ವ ಭೂತಗಣಗಳನ್ನೂ ಸೃಷ್ಟಿಸಿರುವೆ. ಪೃಥ್ವಿ, ಅಂತರಿಕ್ಷ, ಮತ್ತು ಹಾಗೆಯೇ ಸ್ಥಾವರ-ಜಂಗಮಗಳು ನಿನ್ನಿಂದಲೇ ಆಗಿವೆ. ನಿರ್ಮಲ ಬೆಳದಿಂಗಳೇ ನಿನ್ನ ಮುಗುಳ್ನಗೆ ಮತ್ತು ಋತುಗಳೇ ನಿನ್ನ ಇಂದ್ರಿಯಗಳು. ಸತತವೂ ಚಲಿಸುವ ವಾಯುವೇ ನಿನ್ನ ಪ್ರಾಣ. ಸನಾತನ ಮೃತ್ಯುವೇ ನಿನ್ನ ಕ್ರೋಧ. ಮಹಾಮತೇ! ನಿನ್ನ ಪ್ರಸನ್ನತೆಯಲ್ಲಿ ಪದ್ಮಾ ಶ್ರೀಯು ನೆಲಸಿರುತ್ತಾಳೆ. ಅನಘ! ನಿನ್ನಲ್ಲಿಯೇ ರತಿ, ತುಷ್ಟಿ, ಧೃತಿ, ಮತ್ತು ಕಾಂತಿಗಳು ಹಾಗೂ ಈ

ಚರಾಚರಜಗತ್ತು ನೆಲೆಸಿವೆ. ಯುಗಾಂತದಲ್ಲೆ ನಿನ್ನನ್ನೇ ನಿಧನ ಎಂದೂ ಹೇಳುತ್ತಾರೆ. ಸುದೀರ್ಘ ಕಾಲವಾದರೂ ನನಗೆ ನಿನ್ನ ಗುಣಗಳನ್ನು ವರ್ಣಿಸಲು ಶಕ್ಯವಿಲ್ಲ. ನಲಿನೇಕ್ಷಣ! ನೀನು ಆತ್ಮ ಮತ್ತು ಪರಮಾತ್ಮನು. ನಿನಗೆ ನಮಸ್ಕಾರವೆಂದು ಹೇಳುತ್ತಿದ್ದೇನೆ. ದುರ್ಧರ್ಷ! ನಾರದ, ದೇವಲ, ಕೃಷ್ಣದ್ವೈಪಾಯನ ಮತ್ತು ಹಾಗೆಯೇ ಕುರುಪಿತಾಮಹನಿಂದ ನಿನ್ನ ಮಹಾತ್ಮೆಯನ್ನು ತಿಳಿದುಕೊಂಡಿದ್ದೇನೆ. ಎಲ್ಲವೂ ನಿನ್ನಲ್ಲಿಯೇ ಸೇರಿವೆ. ನೀನೊಬ್ಬನೇ ಸಮಸ್ತ ಜನರಿಗೂ ಈಶ್ವರನು. ಅನಘ! ಜನಾರ್ದನ! ಯಾವ ಅನುಗ್ರಹದೊಂದಿಗೆ ನೀನು ನನಗೆ ಉಪದೇಶಿಸಿದ್ದೀಯೋ ಅವೆಲ್ಲವನ್ನೂ ನಾನು ಚೆನ್ನಾಗಿ ಆಚರಿಸುತ್ತೇನೆ. ನಮಗೆ ಪ್ರಿಯವಾದುದನ್ನು ಮಾಡಲು ಬಯಸಿ ನೀನು ಇದೊಂದು ಅದ್ಭುತವನ್ನೇ ಮಾಡಿಬಿಟ್ಟೆ. ಯುದ್ಧದಲ್ಲಿ ಧೃತರಾಷ್ಟ್ರಜ ಪಾಪಿ ಕೌರವ್ಯನು ಹತನಾದನು. ನಿನ್ನ ತೇಜಸ್ಸಿನಿಂದ ಸುಟ್ಟುಹೋಗಿದ್ದ ಆ ಸೇನೆಯನ್ನು ಯುದ್ಧದಲ್ಲಿ ನಾನು ಜಯಿಸಿದೆ! ನೀನು ಮಾಡಿದ ಕರ್ಮಗಳಿಂದಲೇ ನನಗೆ ಜಯವು ದೊರಕಿತು. ನಿನ್ನ ಬುದ್ಧಿಪರಾಕ್ರಮಗಳಿಂದಲೇ ನಾವು

ಸಂಗ್ರಾಮದಲ್ಲಿ ದುರ್ಯೋಧನನ, ಕರ್ಣನ, ಸೈಂಧವನ ಮತ್ತು ಪಾಪಿ ಭೂರಿಶ್ರವಸನ ವಧೋಪಾಯಗಳನ್ನು ಕಂಡುಕೊಂಡೆವು. ದೇವಕಿನಂದನ! ನಾನೂ ಕೂಡ ನಿನಗೆ ಪ್ರಿಯವಾದುದನ್ನು ಮಾಡಲೋಸುಗ ನೀನು ಏನೆಲ್ಲ ಹೇಳುತ್ತೀಯೋ ಅವೆಲ್ಲವನ್ನೂ ಮಾಡುತ್ತೇನೆ. ಅದರಲ್ಲಿ ವಿಚಾರಮಾಡಬೇಕಾದುದು ಏನೂ ಇಲ್ಲ. ಧರ್ಮಾತ್ಮ! ಅನಘ! ರಾಜಾ ಧರ್ಮಾತ್ಮ ಯುಧಿಷ್ಠಿರನ ಬಳಿಸಾರಿ ದ್ವಾರಕೆಗೆ ನೀನು ಹೋಗಲು ಅನುಮತಿಯನ್ನು ನೀಡಬೇಕೆಂದು ಕೇಳಿಕೊಳ್ಳುತ್ತೇನೆ. ಪ್ರಭೋ! ಮಧುಸೂದನ! ನನಗೂ ಕೂಡ ನೀನು ದ್ವಾರಕೆಗೆ ಹೋಗಿ ಬೇಗನೇ ಮಾವ ವಸುದೇವನನ್ನೂ, ದುರ್ಧರ್ಷ ಬಲದೇವನನ್ನೂ ಮತ್ತು ಹಾಗೆಯೇ ಅನ್ಯ ವೃಷ್ಣಿಪುಂಗವರನ್ನೂ ಕಾಣುವುದು ಸರಿಯೆನಿಸುತ್ತಿದೆ.”

ಹೀಗೆ ಮಾತನಾಡುತ್ತಿರುವಾಗಲೇ ಅವರಿಬ್ಬರೂ ಹಸ್ತಿನಾಪುರವನ್ನು ತಲುಪಿದರು ಮತ್ತು ಸಂಪ್ರಹೃಷ್ಟ ಪ್ರಜಾಸ್ತೋಮದಿಂದ ಕೂಡಿದ್ದ ಆ ನಗರವನ್ನು ಪ್ರವೇಶಿಸಿದರು. ಅವರಿಬ್ಬರೂ ಇಂದ್ರನ ಅರಮನೆಯಂತಿದ್ದ ಧೃತರಾಷ್ಟ್ರನ ಅರಮನೆಗೆ ಹೋಗಿ ಅಲ್ಲಿ ಜನೇಶ್ವರ ಧೃತರಾಷ್ಟ್ರನನ್ನೂ, ಬಹಾಬುದ್ಧಿ ವಿದುರನನ್ನೂ, ರಾಜಾ ಯುಧಿಷ್ಠಿರನನ್ನೂ, ದುರ್ಧರ್ಷ

ಭೀಮಸೇನನನ್ನೂ, ಪಾಂಡವ ಮಾದ್ರೀಪುತ್ರರೀರ್ವರನ್ನೂ, ಧೃತರಾಷ್ಟ್ರನ ಹತ್ತಿರ ಕುಳಿತಿದ್ದ ಅಪರಾಜಿತ ಯುಯುತ್ಸುವನ್ನೂ, ಮಹಾಪ್ರಾಜ್ಞೆ ಗಾಂಧಾರಿಯನ್ನೂ, ಕುಂತಿಯನ್ನೂ, ಭಾಮಿನೀ ಕೃಷ್ಣೆಯನ್ನೂ, ಸುಭದ್ರೆಯನ್ನೂ, ಮತ್ತು ಸರ್ವ ಭರತಸ್ತ್ರೀಯರನ್ನೂ ಕಂಡರು. ಅವರೆಲ್ಲರೂ ಗಾಂಧಾರಿಯನ್ನು ಸುತ್ತುವರೆದಿದ್ದುದನ್ನು ನೋಡಿದರು. ಅನಂತರ ರಾಜಾ ಧೃತರಾಷ್ಟ್ರನ ಬಳಿಹೋಗಿ ಅವರಿಬ್ಬರು ಅರಿಂದಮರೂ ತಮ್ಮ ತಮ್ಮ ನಾಮಧೇಯಗಳನ್ನು ಹೇಳಿಕೊಂಡು ಅವನ ಪಾದಗಳನ್ನು ಹಿಡಿದು ನಮಸ್ಕರಿಸಿದರು. ಆ ಇಬ್ಬರು ಮಹಾತ್ಮರೂ ಗಾಂಧಾರೀ, ಪೃಥೆ, ಧರ್ಮರಾಜ, ಮತ್ತು ಭೀಮಸೇನರ ಪಾದಗಳನ್ನು ಹಿಡಿದು ನಮಸ್ಕರಿಸಿದರು. ಕ್ಷತ್ತ ವಿದುರನನ್ನೂ ನಮಸ್ಕರಿಸಿ, ಕುಶಲ-ಆರೋಗ್ಯದ ಕುರಿತು ಪ್ರಶ್ನಿಸಿ ಅವರು ವೃದ್ಧ ನೃಪತಿಯೊಡನೆ ಸ್ವಲ್ಪ ಸಮಯ ತಂಗಿದರು. ರಾತ್ರಿಯಾಗುತ್ತಲೇ ಮೇಧಾವೀ ಧೃತರಾಷ್ಟ್ರನು ಕುರೂದ್ವಹರನ್ನೂ ಮತ್ತು ಜನಾರ್ದನನನ್ನು ತಮ್ಮ ತಮ್ಮ ಮನೆಗಳಿಗೆ ಬೀಳ್ಕೊಟ್ಟನು. ನೃಪತಿಯಿಂದ ಹಾಗೆ ಆಜ್ಞೆಪಡೆದು ಎಲ್ಲರೂ ತಮ್ಮ ತಮ್ಮ ಅರಮನೆಗಳಿಗೆ ತೆರಳಿದರು. ವೀರ್ಯವಾನ್ ಕೃಷ್ಣನಾದರೋ ಧನಂಜಯನ ಅರಮನೆಗೇ ಹೋದನು. ಧನಂಜಯನ ಸಹಾಯಕನಾಗಿದ್ದ ಮೇಧಾವೀ ಕೃಷ್ಣನು

ಅಲ್ಲಿ ಸರ್ವಕಾಮಗಳ ವ್ಯವಸ್ಥೆಗಳಿಂದ ಯಥಾನ್ಯಾಯವಾಗಿ ಅರ್ಚಿತನಾಗಿ ಮಲಗಿದನು.

ರಾತ್ರಿಕಳೆದು ಬೆಳಗಾಗುತ್ತಲೇ ಪೂರ್ವಾಹ್ಣಿಕ ಕ್ರಿಯೆಗಳನ್ನು ಪೂರೈಸಿ ಅವರಿಬ್ಬರು ಪರಮಾರ್ಚಿತರೂ ಧರ್ಮರಾಜನ ಭವನಕ್ಕೆ ಹೋದರು. ಅಲ್ಲಿ ಮಹಾಮನಸ್ವಿ ಧರ್ಮರಾಜನು ಅಮಾತ್ಯರೊಂದಿಗಿದ್ದನು. ಅಶ್ವಿನೀ ದೇವತೆಗಳಂತಿದ್ದ ಆ ಈರ್ವರು ಮಹಾಬಲರೂ ಭವನವನ್ನು ಪ್ರವೇಶಿಸಿ ದೇವರಾಜನಂತೆ ಆಸೀನನಾಗಿದ್ದ ಧರ್ಮರಾಜನನ್ನು ಕಂಡರು. ರಾಜನನ್ನು ಸಮೀಪಿಸಿದ ಆ ಇಬ್ಬರು ವಾರ್ಷ್ಣೇಯ-ಕುರುಪುಂಗವರೂ ಪ್ರೀತಿಯಿಂದ ಸ್ವಾಗತಿಸಲ್ಪಟ್ಟು, ಅನುಜ್ಞಾತರಾಗಿ ಕುಳಿತುಕೊಂಡರು. ಅನಂತರ ಮೇಧಾವೀ, ಮಾತನಾಡುವವರಲ್ಲಿ ಶ್ರೇಷ್ಠ, ರಾಜಸತ್ತಮ ರಾಜನು ಅವರಿಬ್ಬರನ್ನೂ ನೋಡಿ ಅವರು ಏನೋ ಹೇಳಲಿಕ್ಕೆ ಬಂದಿರುವರೆಂದು ಊಹಿಸಿ ಈ ಮಾತುಗಳನ್ನಾಡಿದನು.

> “ವೀರ ಯದುಕುರೂದ್ವಹರೇ! ನೀವಿಬ್ಬರೂ ಏನನ್ನೋ ಹೇಳಲು ಬಯಸಿರುವಿರೆಂದು ತಿಳಿದಿದ್ದೇನೆ. ಅದನ್ನು ಹೇಳಿರಿ. ಅವೆಲ್ಲವನ್ನೂ ನಾನು ಬೇಗನೇ ಮಾಡುತ್ತೇನೆ. ಅದರಲ್ಲಿ ವಿಚಾರಿಸುವುದು ಬೇಡ!”

ಹೀಗೆ ಹೇಳಲು ವಾಕ್ಯವಿಶಾರದ ಫಲ್ಗುನನು ವಿನೀತನಾಗಿ ಧರ್ಮರಾಜನನ್ನು ಸಮೀಪಿಸಿ ಈ ಮಾತುಗಳನ್ನಾಡಿದನು:

> "ರಾಜನ್! ಈ ಪ್ರತಾಪವಾನ್ ವಾಸುದೇವನು ಇಲ್ಲಿ ಬಹಳ ಸಮಯ ಉಳಿದುಕೊಂಡಿದ್ದಾನೆ. ನಿನ್ನ ಅನುಜ್ಞೆಯನ್ನು ಪಡೆದು ಅವನು ತನ್ನ ತಂದೆಯನ್ನು ನೋಡಲು ಬಯಸುತ್ತಿದ್ದಾನೆ. ನೀನು ಅಭಿಪ್ರಾಯಪಟ್ಟರೆ ಮತ್ತು ಅನುಜ್ಞೆಯನ್ನಿತ್ತರೆ ಈ ವೀರನು ಆನರ್ತನಗರಿಗೆ ಹೋಗುತ್ತಾನೆ. ಅವನಿಗೆ ಅನುಜ್ಞೆಯನ್ನು ನೀಡಬೇಕು!"

ಯುಧಿಷ್ಠಿರನು ಹೇಳಿದನು:

> "ಪುಂಡರೀಕಾಕ್ಷ! ನಿನಗೆ ಮಂಗಳವಾಗಲಿ! ಮಧುಸೂದನ! ಇಂದೇ ನೀನು ಪ್ರಭು ಶೂರಸುತನನ್ನು ಕಾಣಲು ದ್ವಾರವತೀ ಪುರಿಗೆ ಹೋಗು. ಮಹಾಬಾಹೋ! ಕೇಶವ! ನೀನು ಅಲ್ಲಿಗೆ ತೆರಳುವುದು ಸಮುಚಿತವೆಂದು ನನಗೂ ತೋರುತ್ತಿದೆ. ಮಾವ ಮತ್ತು ದೇವೀ ದೇವಕಿಯನ್ನು ನೀನು ನೋಡದೆ ಬಹಳ ಸಮಯವಾಯಿತು. ಮಾಧವ! ಮಹಾಪ್ರಾಜ್ಞ! ಸೋದರ ಮಾವ ವಸುದೇವ ಮತ್ತು ಬಲದೇವರನ್ನು ನೀನು ನನ್ನ

ಪರವಾಗಿ ಯಥಾಯೋಗ್ಯವಾಗಿ ಸತ್ಕರಿಸು. ಮಾಧವ! ನಿತ್ಯವೂ ನೀನು ನನ್ನನ್ನು, ಬಲಿಗಳಲ್ಲಿ ಶ್ರೇಷ್ಠ ಭೀಮನನ್ನು, ಫಲ್ಗುನನನ್ನು ಮತ್ತು ನಕುಲ-ಸಹದೇವರನ್ನು ನೆನಪಿಸಿಕೊಳ್ಳುತ್ತಲೇ ಇರಬೇಕು. ಮಹಾಭುಜ! ಅನಘ! ಆನರ್ತರನ್ನೂ ತಂದೆಯನ್ನೂ ಮತ್ತು ವೃಷ್ಣಿಗಳನ್ನೂ ಕಂಡು ಪುನಃ ನನ್ನ ಅಶ್ವಮೇಧಕ್ಕೆ ನೀನು ಆಗಮಿಸಬೇಕು. ಸಾತ್ವತ! ರತ್ನಗಳನ್ನೂ, ವಿವಿಧ ಐಶ್ವರ್ಯಗಳನ್ನೂ, ನಿನಗೆ ಮನೋಜ್ಞವಾದ ಇತರ ವಸ್ತುಗಳನ್ನೂ ತೆಗೆದುಕೊಂಡು ಹೋಗು! ಮಾಧವ! ವೀರ! ನಿನ್ನ ಪ್ರಸಾದದಿಂದಲೇ ನಾವು ಶತ್ರುಗಳನ್ನು ವಧಿಸಿ ಈ ಸರ್ವ ವಸುಧೆಯನ್ನೂ ಪಡೆದುಕೊಂಡಿದ್ದೇವೆ."

ಕೌರವ್ಯ ಧರ್ಮರಾಜ ಯುಧಿಷ್ಠಿರನು ಹೀಗೆ ಹೇಳಲು ಪುರುಷಶ್ರೇಷ್ಠ ವಾಸುದೇವನು ಇಂತೆಂದನು:

"ಮಹಾಭುಜ! ರತ್ನಗಳು, ಧನ, ಸಮಗ್ರ ಭೂಮಂಡಲ ಇವೆಲ್ಲವೂ ಇಂದು ನಿನ್ನದೇ ಆಗಿವೆ. ಇಷ್ಟೇ ಅಲ್ಲದೇ ನನ್ನ ಅರಮನೆಯಲ್ಲಿರುವ ಎಲ್ಲ ಸಂಪತ್ತೂ ನಿನಗೇ ಸೇರಿದ್ದು. ಅವುಗಳಿಗೆ ನೀನೇ ಒಡೆಯ!"

ಧರ್ಮಸುತನು ಹಾಗೆಯೇ ಆಗಲೆಂದು ಹೇಳಿ ಅವನನ್ನು ಪುರಸ್ಕರಿಸಲು ಗದಾಗ್ರಜ ವೀರ್ಯವಾನ್ ಕೃಷ್ಣನು ತನ್ನ ತಂದೆಯ ತಂಗಿ ಕುಂತಿಯ ಬಳಿ ಹೋಗಿ ಯಥಾವಿಧಿಯಾಗಿ ಅವಳನ್ನು ಪ್ರದಕ್ಷಿಣೆ ನಮಸ್ಕಾರಗಳನ್ನು ಮಾಡಿ ಪೂಜಿಸಿದನು. ಅವಳಿಂದ ಪ್ರತಿನಂದಿಸಲ್ಪಟ್ಟು ಮತ್ತು ಹಾಗೆಯೇ ವಿದುರಾದಿ ಎಲ್ಲರಿಂದ ಬೀಳ್ಕೊಂಡು ಗದಾಗ್ರಜ ಚತುರ್ಭುಜ ಹರಿಯು ದಿವ್ಯರಥದಲ್ಲಿ ಕುಳಿತು ಹಸ್ತಿನಾಪುರದಿಂದ ಹೊರಟನು. ಯುಧಿಷ್ಠಿರನ ಮತ್ತು ಅತ್ತೆ ಕುಂತಿಯ ಅನುಮತಿಯನ್ನು ಪಡೆದು ಮಹಾಭುಜ ಜನಾರ್ದನನು ಭಾಮಿನೀ ಸುಭದ್ರೆಯನ್ನು ರಥದಲ್ಲಿ ಕುಳ್ಳಿರಿಸಿಕೊಂಡು ಪೌರಜನರಿಂದ ಬೀಳ್ಕೊಂಡು ಹೊರಟನು. ಕಪಿಧ್ವಜ ಅರ್ಜುನ, ಸಾತ್ಯಕಿ, ಮಾದ್ರೀಸುತರೀರ್ವರು, ಅಗಾಧ ಬುದ್ಧಿ ವಿದುರ ಮತ್ತು ಗಜರಾಜ ವಿಕ್ರಮಿ ಸ್ವಯಂ ಬೀಮ ಇವರು ಸ್ವಲ್ಪ ದೂರದವರೆಗೆ ಮಾಧವನನ್ನು ಅನುಸರಿಸಿ ಹೋದರು. ವಿದುರ ಮತ್ತು ಇತರ ಎಲ್ಲ ಕುರುರಾಷ್ಟ್ರವರ್ಧನರನ್ನೂ ಹಿಂದಿರುಗಲು ಹೇಳಿ ವೀರ್ಯವಾನ್ ಜನಾರ್ದನನು ಕುದುರೆಗಳನ್ನು ವೇಗವಾಗಿ ಹೋಗಲು ಪ್ರಚೋದಿಸುವಂತೆ ದಾರುಕ ಮತ್ತು ಸಾತ್ಯಕಿಯರಿಗೆ ಹೇಳಿದನು. ಅನಂತರ ಶತ್ರುಗಣಪ್ರಮರ್ದನ ಪ್ರತಾಪವಾನ್ ಜನಾರ್ದನನು ಶಿನಿಪ್ರವೀರನೊಂದಿಗೆ ಅರಿಗಣಗಳನ್ನು ಸಂಹರಿಸಿ ಶತಕ್ರತುವು ಸ್ವರ್ಗಕ್ಕೆ

ಹೇಗೋ ಹಾಗೆ ಆನರ್ತಪುರಿಯನ್ನು ತಲುಪಿದನು.

## ಉತ್ತಂಕ

ಹೀಗೆ ವಾರ್ಷ್ಣೇಯನು ದ್ವಾರಕೆಗೆ ಹೊರಡುವಾಗ ಪರಂತಪ ಭರತರ್ಷಭರು ಅವನನ್ನು ಗಾಢವಾಗಿ ಆಲಂಗಿಸಿ ಬೀಳ್ಕೊಟ್ಟು ಸೇವಕರೊಡನೆ ಹಿಂದಿರುಗಿದರು. ಫಲ್ಗುನನು ವಾರ್ಷ್ಣೇಯನನ್ನು ಪುನಃ ಪುನಃ ತಬ್ಬಿಕೊಂಡನು. ಅವನು ಕಾಣುವವರೆಗೆ ಪುನಃ ಪುನಃ ಅವನ ಕಡೆ ನೋಡುತ್ತಲೇ ಇದ್ದನು. ಗೋವಿಂದನನ್ನೇ ನೋಡುತ್ತಿದ್ದ ಪಾರ್ಥನು ಅವನು ಕಾಣದಂತಾದಾಗ ಕಷ್ಟದಿಂದಲೇ ತನ್ನ ದೃಷ್ಟಿಯನ್ನು ಹಿಂದೆ ತೆಗೆದುಕೊಂಡನು. ಅಪರಾಜಿತ ಕೃಷ್ಣನೂ ಕೂಡ ಹಾಗೆಯೇ ಮಾಡಿದನು. ಆ ಮಹಾತ್ಮನು ಪ್ರಯಾಣಿಸುವಾಗ ಅನೇಕ ಅದ್ಭುತ ನಿಮಿತ್ತಗಳು ಕಂಡುಬಂದವು. ಭಿರುಗಾಳಿಯು ವೇಗದಿಂದ ರಥದ ಮುಂದೆ ಬೀಸಿ ಮಾರ್ಗದಲ್ಲಿ ಕಲ್ಲು, ಧೂಳು ಮತ್ತು ಮುಳ್ಳುಗಳು ಇರದಂತೆ ಮಾಡಿತು. ಇಂದ್ರನೂ ಕೂಡ ಶಾಂಙ್ರಧನ್ವಿಯ ಎದಿರು ಶುಭ್ರವೂ ಸುಗಂಧಯುಕ್ತವೂ ಆದ ಮಳೆಯನ್ನೂ ದಿವ್ಯ ಪುಷ್ಪಗಳನ್ನೂ ಸುರಿಸಿದನು.

ಆ ಮಹಾಬಾಹುವು ಸಮಪ್ರದೇಶಗಳಲ್ಲಿ ಮತ್ತು ಮರುಭೂಮಿಗಳಲ್ಲಿ

ಪ್ರಯಾಣಿಸುತ್ತಿದ್ದಾಗ ಅಲ್ಲಿ ಅಮಿತೌಜಸ ಮುನಿಶ್ರೇಷ್ಠ ಉತ್ತಂಕನನ್ನು ಕಂಡನು. ವಿಶಾಲಾಕ್ಷನು ಆ ತೇಜಸ್ವೀ ಮುನಿಯನ್ನು ಪೂಜಿಸಿದನು. ಅವನಿಂದ ಪ್ರತಿಪೂಜೆಯನ್ನು ಪಡೆದು ಕೃಷ್ಣನು ಅವನ ಯೋಗಕ್ಷೇಮವನ್ನು ವಿಚಾರಿಸಿದನು. ಕುಶಲ ಪ್ರಶ್ನೆಯನ್ನು ಕೇಳಿದ ಮಧುಸೂದನನನ್ನು ಪೂಜಿಸಿ ಬ್ರಾಹ್ಮಣಶ್ರೇಷ್ಠ ಉತ್ತಂಕನು ಮಾಧವನನ್ನು ಪ್ರಶ್ನಿಸಿದನು:

> “ಶೌರೇ! ನೀನು ಕುರು-ಪಾಂಡವರ ಸದನಗಳಿಗೆ ಹೋಗಿ ಎರಡೂ ಪಂಗಡಗಳಲ್ಲಿ ಉತ್ತಮ ಭ್ರಾತೃಭಾವವನ್ನು ಉಂಟುಮಾಡಿಸಿ ಬಂದೆಯಾ? ಅದರ ಕುರಿತು ನೀನು ನನಗೆ ಹೇಳಬೇಕು. ಸತತವೂ ನಿನ್ನ ಸಂಬಂಧಿಗಳೂ ಪ್ರೀತಿಪಾತ್ರರೂ ಆದ ಆ ವೀರರ ನಡುವೆ ಸಂಧಿಯನ್ನು ನಡೆಸಿಕೊಟ್ಟು ಬಂದೆಯಾ? ಐವರು ಪಾಂಡುಸುತರು ಮತ್ತು ಧೃತರಾಷ್ಟ್ರನ ಮಕ್ಕಳು ನಿನ್ನೊಡನೆ ಲೋಕಗಳಲ್ಲಿ ವಿಹರಿಸುತ್ತಿದ್ದಾರೆ ತಾನೇ? ನಾಥನಾದ ನೀನು ಕೌರವರಲ್ಲಿ ಶಾಂತಿಯನ್ನು ಏರ್ಪಡಿಸಿದ ನಂತರ ರಾಜರು ತಮ್ಮ ತಮ್ಮ ರಾಷ್ಟ್ರಗಳಲ್ಲಿ ಸುಖದಿಂದ ಇರುವರು ತಾನೇ? ನೀನು ಹಾಗೆಯೇ ಮಾಡುತ್ತೀಯೆ ಎಂದು ನನಗೆ ಸಂಪೂರ್ಣವಾದ ಭರವಸೆಯಿದ್ದಿತು. ಏಕೆಂದರೆ

ಭಾರತರ ಪ್ರತಿ ನಿನಗಿರುವ ಪ್ರೀತಿಯಿಂದಾಗಿ ಸಂಧಿಯು ಸಫಲವಾಗಲೇ ಬೇಕಿತ್ತು!”

ವಾಸುದೇವನು ಹೇಳಿದನು:

“ಬ್ರಹ್ಮನ್! ಕೌರವರಲ್ಲಿ ಪರಸ್ಪರ ಸೌಭ್ರಾತೃತ್ವವನ್ನುಂಟುಮಾಡಲು ನಾನು ಪ್ರಯತ್ನಿಸಿದೆ. ಆದರೆ ಅಧರ್ಮದಲ್ಲಿಯೇ ಆಸಕ್ತರಾದ ಅವರು ಸಂಧಿಮಾಡಿಕೊಳ್ಳುವಂತೆ ಮಾಡಲು ನನಗೆ ಶಕ್ಯವಾಗಲಿಲ್ಲ. ಅನಂತರ ಅವರೆಲ್ಲರೂ ಮಕ್ಕಳು-ಬಾಂಧವರೊಂದಿಗೆ ನಿಧನಹೊಂದಿದರು. ಬುದ್ಧಿ ಅಥವಾ ಬಲಗಳಿಂದ ದೈವವನ್ನು ಅತಿಕ್ರಮಿಸಲು ಶಕ್ಯವಿಲ್ಲ. ಇವೆಲ್ಲವೂ ನಿನಗೆ ತಿಳಿದಿದ್ದೇ ಆಗಿವೆ! ಮಹಾಮತಿ ಭೀಷ್ಮ ಮತ್ತು ವಿದುರರ ಸಲಹೆಗಳನ್ನು ಅತಿಕ್ರಮಿಸಿ ಅವರು ಪರಸ್ಪರರರೊಡನೆ ಹೋರಾಡಿ ಯಮಕ್ಷಯಕ್ಕೆ ಹೋದರು. ಮಕ್ಕಳನ್ನೂ ಮಿತ್ರರನ್ನು ಕಳೆದುಕೊಂಡ ಐವರು ಪಾಂಡವರು ಮಾತ್ರ ಉಳಿದುಕೊಂಡಿದ್ದಾರೆ. ಧಾರ್ತರಾಷ್ಟ್ರರೆಲ್ಲರೂ ಮಕ್ಕಳು-ಬಾಂಧವರೊಡನೆ ಹತರಾಗಿದ್ದಾರೆ.”

ಕೃಷ್ಣನು ಹೀಗೆ ಹೇಳಲು ಉತ್ತಂಕನು ಅತ್ಯಂತ ಕ್ರೋಧಸಮನ್ವಿತನಾದನು. ರೋಷದಿಂದ ಕಣ್ಣುಗಳನ್ನು ಅರಳಿಸಿಕೊಂಡು ಅವನು ಈ ಮಾತುಗಳನ್ನಾಡಿದನು:

"ಕೃಷ್ಣ! ಶಕ್ತನಾಗಿದ್ದರೂ ಸಂಬಂಧಿಗಳೂ ಪ್ರಿಯರೂ ಆಗಿದ್ದ ಕುರು-ಪಾಂಡವರನ್ನು ನೀನು ರಕ್ಷಿಸಲಿಲ್ಲ. ಆದುದರಿಂದ ನಿನ್ನನ್ನೀಗ ಶಪಿಸುತ್ತೇನೆ. ಇದರಲ್ಲಿ ಸಂಶಯವೇ ಇಲ್ಲ! ಬಲವನ್ನು ಪ್ರಯೋಗಿಸಿಯಾದರೂ ನೀನು ಅವರನ್ನು ತಡೆಯಬಹುದಾಗಿತ್ತು. ವಿನಾಶದಿಂದ ಪಾರುಮಾಡಬಹುದಾಗಿತ್ತು. ಆದರೆ ನೀನು ಹಾಗೆ ಮಾಡಲಿಲ್ಲ. ಇದರಿಂದ ಕುಪಿತನಾಗಿ ನಾನು ನಿನ್ನನ್ನು ಶಪಿಸುತ್ತೇನೆ. ತಡೆಯಲು ಶಕ್ತನಾಗಿದ್ದರೂ ನೀನು ಪರಸ್ಪರರನ್ನು ನಾಶಗೊಳಿಸಿದ ಕುರುಶ್ರೇಷ್ಠರನ್ನು ಮಿಥ್ಯಾಚಾರದಿಂದ ಉಪೇಕ್ಷಿಸಿದೆ!"

ವಾಸುದೇವನು ಹೇಳಿದನು:

"ಭೃಗುನಂದನ! ನೀನು ತಪಸ್ವಿಯಾಗಿರುವೆ! ಕೋಪಗೊಳ್ಳಬೇಡ! ನಾನು ಹೇಳುವುದನ್ನು ಸಮಗ್ರವಾಗಿ ಕೇಳಿ

ನನ್ನ ಪ್ರಾರ್ಥನೆಯನ್ನು ಅಂಗೀಕರಿಸು. ನನ್ನಿಂದ ಆಧ್ಯಾತ್ಮತತ್ತ್ವವನ್ನು ಕೇಳಿದನಂತರ ನೀನು ನನಗೆ ಶಾಪವನ್ನು ಕೊಡಬಹುದು. ಅಲ್ಪ ತಪಸ್ಸಿನಿಂದ ಯಾವ ಪುರುಷನೂ ನನ್ನನ್ನು ತಿರಸ್ಕರಿಸಲಾರನು. ನಿನ್ನ ತಪಸ್ಸು ನಾಶವಾಗುವುದನ್ನು ನಾನು ಬಯಸುವುದಿಲ್ಲ. ಗುರುವನ್ನು ತೃಪ್ತಿಗೊಳಿಸುರುವ ನಿನ್ನ ತಪಸ್ಸು ಮಹಾ ದೀಪ್ತವಾದುದು. ಬಾಲ್ಯದಿಂದಲೇ ನೀನು ಬ್ರಹ್ಮಚರ್ಯವನ್ನು ಪಾಲಿಸುತ್ತಿರುವೆ ಎಂದು ತಿಳಿದಿದ್ದೇನೆ. ಆದುದರಿಂದ ಕಷ್ಟದಿಂದ ಸಂಪಾದಿಸಿದ ನಿನ್ನ ಈ ತಪಸ್ಸನ್ನು ವ್ಯಯಗೊಳಿಸಲು ನಾನು ಇಷ್ಟಪಡುವುದಿಲ್ಲ."

ಉತ್ತಂಕನು ಹೇಳಿದನು:

"ಕೇಶವ! ಅನಿಂದಿತ ಆಧ್ಯಾತ್ಮತತ್ತ್ವವನ್ನು ಹೇಳು. ಅದನ್ನು ಕೇಳಿ ನಿನ್ನ ಶ್ರೇಯಸ್ಸಿಗೆ ಆಶೀರ್ವಾದವನ್ನಾದರೂ ಮಾಡುತ್ತೇನೆ ಅಥವಾ ಶಾಪವನ್ನಾದರೂ ಕೊಡುತ್ತೇನೆ."

ವಾಸುದೇವನು ಹೇಳಿದನು:

"ದ್ವಿಜ! ತಮ, ರಜ ಮತ್ತು ಸತ್ತ್ವಗುಣಗಳು ನನ್ನನ್ನೇ

ಆಶ್ರಯಿಸಿದ ನನ್ನ ಭಾವಗಳು. ಹಾಗೆಯೇ ರುದ್ರರು ಮತ್ತು ವಸುಗಳೂ ನನ್ನಿಂದಲೇ ಆವಿರ್ಭವಿಸಿದರು ಎನ್ನುವುದನ್ನು ತಿಳಿ. ನನ್ನಲ್ಲಿ ಸರ್ವ ಭೂತಗಳೂ ಮತ್ತು ಸರ್ವಭೂತಗಳಲ್ಲಿ ನಾನೂ ನೆಲೆಗೊಂಡಿವೆ ಎನ್ನುವುದನ್ನು ತಿಳಿ. ಅದರಲ್ಲಿ ಸಂಶಯ ಬೇಡ. ಹಾಗೆಯೇ ಸರ್ವ ದೈತ್ಯಗಣಗಳೂ, ಯಕ್ಷ-ರಾಕ್ಷಸ-ಪನ್ನಗ ಗಣಗಳೂ, ಗಂಧರ್ವ-ಅಪ್ಸರೆಯರೂ ನನ್ನಿಂದಲೇ ಹುಟ್ಟಿದವೆಂದು ತಿಳಿ. ಸತ್-ಅಸತ್, ಅವ್ಯಕ್ತ-ವ್ಯಕ್ತ ಮತ್ತು ಅಕ್ಷರ-ಕ್ಷರ ಎಂದು ಯಾವುದನ್ನು ಕರೆಯುವರೋ ಅವೆಲ್ಲವೂ ನನ್ನದೇ ಸ್ವರೂಪಗಳು. ನಾಲ್ಕು ಆಶ್ರಮಗಳ ಧರ್ಮಗಳೂ ದೈವಕರ್ಮಗಳೂ ಎಲ್ಲವೂ ನನ್ನ ಸ್ವರೂಪವೇ ಎನ್ನುವುದನ್ನು ತಿಳಿದುಕೋ. ಅವ್ಯಕ್ತ ಮತ್ತು ವ್ಯಕ್ತಾವ್ಯಕ್ತ, ಇವುಗಳ ಆಚೆಯಿರುವ ವಿಶ್ವವೂ ದೇವದೇವನಾದ ಸನಾತನನಾದ ನನ್ನ ಹೊರತಿಲ್ಲ. ಓಂಕಾರದಿಂದ ಪ್ರಾರಂಭವಾಗುವ ವೇದಗಳೂ ನಾನೆಂದು ತಿಳಿ. ಯಜ್ಞದಲ್ಲಿಯ ಯೂಪ, ಸೋಮ, ಮತ್ತು ಹಾಗೆಯೇ ದೇವತೆಗಳಿಗೆ ತೃಪ್ತಿಯನ್ನುಂಟು ಮಾಡುವ ಹೋತಾರ, ಹವ್ಯ, ಅಧ್ವರ್ಯು, ಕಲ್ಪಕ, ಮತ್ತು ಪರಮಸಂಸ್ಕೃತ ಹವಿಸ್ಸು ಎಲ್ಲವೂ ನನ್ನ ಸ್ವರೂಪಗಳೇ ಆಗಿವೆ

ಎನ್ನುವುದನ್ನು ತಿಳಿದುಕೋ. ಮಹಾಧ್ವರಗಳಲ್ಲಿ ಉದ್ಗಾತರು ಗೀತಘೋಷಗಳಿಂದ ನನ್ನನ್ನೇ ಸ್ತುತಿಸುತ್ತಾರೆ. ಪ್ರಾಯಶ್ಚಿತ್ತ ಕರ್ಮಗಳಲ್ಲಿ ಶಾಂತಿಮಂಗಲವಾಚಕ ದ್ವಿಜಸತ್ತಮರು ಸತತವಾಗಿ ವಿಶ್ವಕರ್ಮನಾದ ನನ್ನನ್ನೇ ಸ್ತುತಿಸುತ್ತಾರೆ. ಸರ್ವಭೂತದಯಾತ್ಮಕನಾದ ಧರ್ಮನು ನನ್ನ ಪ್ರೀತಿಯ ಹಿರಿಯ ಮಾನಸಪುತ್ರನೆಂದು ತಿಳಿ. ನಿವೃತ್ತಧರ್ಮದಲ್ಲಿ ನಡೆದುಕೊಳ್ಳುವ ಮನುಷ್ಯರೊಂದಿಗೆ ನಾನಿರುತ್ತೇನೆ. ಧರ್ಮಸಂರಕ್ಷಣೆಗೋಸ್ಕರ ಮತ್ತು ಧರ್ಮಸಂಸ್ಥಾಪನೆಗೋಸ್ಕರ ನಾನು ಮೂರು ಲೋಕಗಳಲ್ಲಿಯೂ ಬಹುವಿಧದ ಯೋನಿಗಳಲ್ಲಿ ಅವತರಿಸಿ, ಆಯಾ ಯೋನಿಗಳಿಗೆ ಅನುರೂಪವಾದ ರೂಪ-ವೇಷ-ವ್ಯವಹಾರಗಳಿಂದ ಕೂಡಿರುತ್ತೇನೆ. ನಾನು ವಿಷ್ಣು. ನಾನು ಬ್ರಹ್ಮ. ಇಂದ್ರನೂ ನನ್ನಿಂದಲೇ ಹುಟ್ಟಿದ್ದಾನೆ. ಸಕಲ ಭೂತಗ್ರಾಮಗಳ ಉತ್ಪತ್ತಿ-ವಿನಾಶಗಳಿಗೆ ನಾನೇ ಕಾರಣನಾಗಿದ್ದೇನೆ. ಅಧರ್ಮದಲ್ಲಿ ನಡೆದುಕೊಳ್ಳುವ ಎಲ್ಲರನ್ನೂ ನಾನೇ ಶಿಕ್ಷಿಸುತ್ತೇನೆ. ಪ್ರಜೆಗಳ ಹಿತವನ್ನೇ ಬಯಸಿ ಒಂದಾದ ಮೇಲೊಂದು ಬರುತ್ತಿರುವ ಯುಗಗಳಲ್ಲಿ ನಾನು ಆಯಾ ಯೋನಿಗಳನ್ನು ಪ್ರವೇಶಿಸಿ

ಧರ್ಮದ ಸೇತುವೆಗಳನ್ನು ಕಟ್ಟುತ್ತೇನೆ. ನಾನು ದೇವಯೋನಿಯಲ್ಲಿ ಅವತರಿಸಿದಾಗ ಎಲ್ಲದರಲ್ಲಿಯೂ ದೇವತೆಯಂತೆಯೇ ವರ್ತಿಸುತ್ತೇನೆ ಎನ್ನುವುದರಲ್ಲಿ ಸಂಶಯವಿಲ್ಲ. ಗಂಧರ್ವಯೋನಿಯಲ್ಲಿ ಜನಿಸಿದಾಗ ನಾನು ಎಲ್ಲದರಲ್ಲಿಯೂ ಗಂಧರ್ವನಂತೆಯೇ ವರ್ತಿಸುತ್ತೇನೆ ಎನ್ನುವುದರಲ್ಲಿ ಸಂಶಯವಿಲ್ಲ. ನಾಗಯೋನಿಯಲ್ಲಿ ಜನಿಸಿದಾಗ ನಾಗದಂತೆಯೇ ವರ್ತಿಸುತ್ತೇನೆ. ಯಕ್ಷ-ರಾಕ್ಷಸ ಯೋನಿಗಳಲ್ಲಿ ಜನಿಸಿದಾಗಲೂ ನಾನು ಅವರಂತೆಯೇ ವರ್ತಿಸುತ್ತೇನೆ. ಈಗ ಮನುಷ್ಯ ಯೋನಿಯಲ್ಲಿ ಅವತರಿಸಿರುವ ನಾನು ಮನುಷ್ಯನಂತೆಯೇ ನಡೆದುಕೊಂಡು ದೀನನಾಗಿ ಪಾಂಡವರೊಡನೆ ಸಂಧಿಮಾಡಿಕೊಳ್ಳುವಂತೆ ಕೌರವರನ್ನು ಪ್ರಾರ್ಥಿಸಿದೆನು. ಆದರೆ ಮೋಹಗ್ರಸ್ತರಾಗಿದ್ದ ಅವರು ನನ್ನ ಹಿತವಚನಗಳನ್ನು ಸ್ವೀಕರಿಸಲಿಲ್ಲ.
ಮಹಾಭಯವನ್ನುಂಟುಮಾಡಿಯೂ ನಾನು ಕುರುಗಳನ್ನು ಬೆದರಿಸಿದೆನು. ಕ್ರುದ್ಧನಾಗಿಯೂ ಕೂಡ ಪುನಃ ಅವರಿಗೆ ವಿಷಯವೇನೆಂದು ತಿಳಿಸಿದನು. ಆದರೆ ಅಧರ್ಮಸಂಯುಕ್ತರಾದ ಮತ್ತು ಕಾಲಧರ್ಮಕ್ಕೆ ಒಳಗಾದ

ಅವರು ಧರ್ಮಯುದ್ಧದಲ್ಲಿ ಹತರಾಗಿ ಸ್ವರ್ಗವನ್ನು ಸೇರಿದ್ದಾರೆ ಎನ್ನುವುದರಲ್ಲಿ ಸಂಶಯವಿಲ್ಲ. ಪಾಂಡವರು ಲೋಕಗಳಲ್ಲಿ ಖ್ಯಾತಿಯನ್ನು ಹೊಂದಿದರು. ಇದೋ ನೀನು ಕೇಳಿರುವುದಕ್ಕೆ ಎಲ್ಲವನ್ನೂ ನಾನು ನಿನಗೆ ಹೇಳಿದ್ದೇನೆ."

ಉತ್ತಂಕನು ಹೇಳಿದನು:

"ಜನಾರ್ದನ! ನೀನೇ ಈ ಜಗತ್ತಿನ ಕರ್ತಾರನೆಂದು ತಿಳಿದುಕೊಂಡಿದ್ದೇನೆ. ಈ ಆಧ್ಯಾತ್ಮತತ್ತ್ವವು ನಿನ್ನ ಪ್ರಸಾದದಿಂದಲೇ ನನಗೆ ದೊರೆಯಿತು ಎನ್ನುವುದರಲ್ಲಿ ಸಂಶಯವಿಲ್ಲ. ಅಚ್ಯುತ! ನಿನ್ನಮೇಲಿನ ಭಕ್ತಿಯಿಂದ ನನ್ನ ಚಿತ್ತವು ಪ್ರಸನ್ನವಾಗಿದೆ. ನನ್ನ ಕೋಪವೂ ಹೊರಟುಹೋಯಿತೆಂದು ತಿಳಿ. ನಿನ್ನ ಅನುಗ್ರಹಕ್ಕೆ ನಾನು ಸ್ವಲ್ಪವಾದರೂ ಅರ್ಹನಾಗಿದ್ದರೆ ನಿನ್ನ ಈಶ್ವರೀ ರೂಪವನ್ನು ನೋಡಲು ಬಯಸುತ್ತೇನೆ. ಅದನ್ನು ತೋರಿಸು!""

ಆಗ ಧೀಮಾನ್ ಕೃಷ್ಣನು ಪ್ರೀತಾತ್ಮನಾಗಿ ಧನಂಜಯನಿಗೆ ತೋರಿಸಿದ್ದ ಶಾಶ್ವತ ವೈಷ್ಣವೀ ರೂಪವನ್ನು ಉತ್ತಂಕನಿಗೂ ತೋರಿಸಿದನು. ವಿಪ್ರನು ಆ ಮಹಾತ್ಮ ವಿಶ್ವರೂಪ ಮಹಾಭುಜನನ್ನು ನೋಡಿದನು. ಅವನ

ಈಶ್ವರೀಯ ರೂಪವನ್ನು ನೋಡಿ ವಿಸ್ಮಿತನಾದನು. ಉತ್ತಂಕನು ಹೇಳಿದನು:

> “ವಿಶ್ವಕರ್ಮನ್! ಈ ರೂಪವಿರುವ ನಿನಗೆ ನಮಸ್ಕಾರಗಳು. ನಿನ್ನ ಪಾದಗಳು ಭೂಮಿಯನ್ನು ವ್ಯಾಪಿಸಿವೆ ಮತ್ತು ಶಿರಸ್ಸು ನಭವನ್ನು ಆವರಿಸಿದೆ! ಆಕಾಶ-ಪೃಥ್ವಿಗಳ ನಡುವಿನ ಭಾಗವು ನಿನ್ನ ಜಠರಿಂದಲೇ ವ್ಯಾಪ್ತವಾಗಿದೆ. ಅಚ್ಯುತ! ನಿನ್ನ ಎರಡು ಭುಜಗಳಿಂದ ದಿಕ್ಕುಗಳೆಲ್ಲವೂ ವ್ಯಾಪ್ತವಾಗಿವೆ. ಹೀಗೆ ಎಲ್ಲವನ್ನೂ ನೀನೇ ಆವರಿಸಿರುವೆ! ದೇವ! ನಿನ್ನ ಈ ಅಕ್ಷಯ ಅನುತ್ತಮ ರೂಪವನ್ನು ಪುನಃ ಹಿಂದೆ ತೆಗೆದುಕೋ! ಪುನಃ ನಿನ್ನ ಅದೇ ಶಾಶ್ವತ ರೂಪದಿಂದ ನೋಡಲು ಬಯಸುತ್ತೇನೆ.”

ಪ್ರಸನ್ನನಾದ ಗೋವಿಂದನು ಅವನಿಗೆ “ವರವನ್ನು ಕೇಳಿಕೋ!” ಎಂದು ಹೇಳಿದನು. ಆಗ ಉತ್ತಂಕನು ಹೇಳಿದನು:

> “ಮಹಾದ್ಯುತೇ! ಕೃಷ್ಣ! ನಿನ್ನ ಈ ವಿಶ್ವರೂಪವನ್ನೇನು ನಾನು ಕಾಣುತ್ತಿರುವೆನೋ ಅದೇ ಇಂದು ನೀನು ನನಗೆ ನೀಡಿರುವ ವರ!”

ಕೃಷ್ಣನು ಪುನಃ ಅವನಿಗೆ

"ನನ್ನ ಈ ವಿಶ್ವರೂಪ ದರ್ಶನವು ಅಮೋಘವಾದುದು. ಆದುದರಿಂದ ನೀನು ಅವಶ್ಯವಾಗಿ ವರವನ್ನು ಕೇಳಿಕೋ! ಅದರಲ್ಲಿ ವಿಚಾರಿಸಬೇಡ!"

ಎಂದನು. ಉತ್ತಂಕನು ಹೇಳಿದನು:

"ವಿಭೋ! ನಾನು ಅವಶ್ಯವಾದುದನ್ನು ಮಾಡಲೇಬೇಕೆಂದು ನಿನ್ನ ಅಭಿಪ್ರಾಯವಾದರೆ ಇಷ್ಟವಾದಲ್ಲಿ ನೀರು ದೊರಕುವಂತೆ ಬಯಸುತ್ತೇನೆ. ಈ ಮರುಭೂಮಿಯಲ್ಲಿ ನೀರು ದುರ್ಲಭವಾಗಿದೆ."

ಅನಂತರ ಈಶ್ವರ ಕೃಷ್ಣನು ತನ್ನ ತೇಜಸ್ಸನ್ನು ಹಿಂದೆತೆಗೆದುಕೊಂಡು

"ನಿನಗೆ ನೀರು ಬೇಕಾದಾಗಲೆಲ್ಲಾ ನನ್ನನ್ನು ಸ್ಮರಿಸು!"

ಎಂದು ಹೇಳಿ ದ್ವಾರಕೆಗೆ ತೆರಳಿದನು.

## ವಸುದೇವನಿಗೆ ವಾಸುದೇವನಿಂದ ಯುದ್ಧಾಖ್ಯಾನ

ಉತ್ತಂಕನಿಗೆ ವರವನ್ನಿತ್ತು ಸಾತ್ಯಕಿಯೊಡನೆ ಮಹಾಹಯಗಳ ಶೀಘ್ರ ವೇಗದೊಂದಿಗೆ ಗೋವಿಂದನು ದ್ವಾರಕೆಗೆ ಹೋದನು. ವಿವಿಧ ಸರೋವರಗಳನ್ನೂ, ನದಿಗಳನ್ನೂ ಮತ್ತು ವನಗಳನ್ನೂ ದಾಟಿ ಅವನು

ರಮ್ಯ ದ್ವಾರವತೀ ಪುರವನ್ನು ತಲುಪಿದನು. ರೈವತಕ ಗಿರಿಯಲ್ಲಿ ನಡೆಯುತ್ತಿದ್ದ ಮಹಾ ಉತ್ಸವಕ್ಕೆ ಪುಂಡರೀಕಾಕ್ಷನು ಯುಯುಧಾನ ಸಾತ್ಯಕಿಯೊಡನೆ ನೇರವಾಗಿ ಹೋದನು. ಆ ಗಿರಿಯಾದರೋ ನಾನಾ ರೂಪ-ಬಣ್ಣಗಳಿಂದ ಸುವರ್ಣದಿಂದ ಮಾಡಿದ್ದ ಡೇರೆಗಳಿಂದ ಎಲ್ಲೆಲ್ಲೂ ಅಲಂಕೃತವಾಗಿತ್ತು. ಶ್ರೇಷ್ಠವೂ ಸುಮನೋಹರವೂ ಆದ ಸುವರ್ಣ ಹಾರಗಳಿಂದಲೂ, ವಸ್ತ್ರಗಳಿಂದಲೂ ಆ ಮಹಾಶೈಲವು ಅಲಂಕೃತಗೊಂಡಿತ್ತು. ಸುತ್ತಲೂ ಕಲ್ಪವೃಕ್ಷಗಳಿದ್ದವು. ಸುವರ್ಣಮಯ ದೀಪವೃಕ್ಷಗಳಿಂದ ಆ ಪರ್ವತದ ಗುಹೆ-ಚಿಲುಮೆಗಳ ಪ್ರದೇಶಗಳಲ್ಲಿ ಸದಾ ಹಗಲಾಗಿರುವಂತೆಯೇ ಕಾಣುತ್ತಿತ್ತು. ಸುತ್ತಲೂ ಹಾರಾಡುತ್ತಿದ್ದ ಘಂಟೆಗಳಿಂದ ಕೂಡಿದ ಪತಾಕೆಗಳಿಂದಲೂ ಮತ್ತು ಸ್ತ್ರೀ-ಪುರುಷರ ಗುಂಪುಮಾತುಗಳಿಂದಲೂ ಸಂಗೀತಮಯವಾಗಿದ್ದ ಆ ಪರ್ವತವು ಮುನಿಗಣಗಳಿಂದ ಕಂಗೊಳಿಸುವ ಮೇರು ಪರ್ವತದಂತೆ ಪ್ರೇಕ್ಷಣೀಯವಾಗಿತ್ತು. ಆ ಪರ್ವತೇಂದ್ರನ ಮೇಲೆ ಸಂತಸದಿಂದ ಮತ್ತೇರಿದ ಸ್ತ್ರೀ-ಪುರುಷರ ಗಾಯನಗಳು ಆಕಾಶವನ್ನು ತಟ್ಟುತ್ತಿರುವವೋ ಎಂಬಂತೆ ಕೇಳಿಬರುತ್ತಿತ್ತು. ಪ್ರಮತ್ತ, ಮತ್ತ ಮತ್ತು ಸಮ್ಮತ್ತ ಗುಂಪುಗಳ ಕಿಲ-ಕಿಲ ಶಬ್ಧಗಳಿಂದ ಆ ಪರ್ವತವು ಸುಮನೋಹರವಾಗಿತ್ತು. ಅದು ಅಂಗಡಿ-ಮಾರುಕಟ್ಟೆಗಳಿಂದಲೂ,

ರಮ್ಯವಾದ ಭಕ್ಷ-ಭೋಜ್ಯ ವಿಹಾರಗಳಿಂದಲೂ, ವಸ್ತ್ರ-ಮಾಲೆಗಳ ರಾಶಿಗಳಿಂದಲೂ, ವೇಣು-ಮೃದಂಗ ವಾದಿಗಳಿಂದಲೂ ತುಂಬಿಹೋಗಿತ್ತು. ಸುರಾ-ಮೈರೇಯ ಮಿಶ್ರಿತ ಭಕ್ಷ್ಯ-ಭೋಜ್ಯಗಳನ್ನು ದೀನ-ಅಂಧ-ಕೃಪಣರಿಗೆ ನಿರಂತರವಾಗಿ ನೀಡುತ್ತಿದ್ದ ಆ ಮಹಾಗಿರಿಯ ಮಹೋತ್ಸವು ಪರಮಕಲ್ಯಾಣಯುಕ್ತವಾಗಿತ್ತು. ಅಲ್ಲಿ ಪುಣ್ಯಕರ್ಮಿಗಳು ವಾಸಿಸಲು ಪುಣ್ಯ ಶಿಬಿರಗಳಿದ್ದವು. ಆ ರೈವತಕದ ಮಹೋತ್ಸವದಲ್ಲಿ ವೃಷ್ಣಿವೀರರ ವಿಹಾರಕ್ಕಾಗಿ ನಿರ್ಮಿಸಿದ್ದ ಆ ಭವನ-ಸಂಕೀರ್ಣಗಳಿಂದ ಅದು ದೇವಲೋಕದಂತೆಯೇ ಕಂಗೊಳಿಸುತ್ತಿತ್ತು. ಆಗ ಕೃಷ್ಣನ ಸಾನ್ನಿಧ್ಯವನ್ನು ಪಡೆದ ಆ ಶೈಲರಾಜನು ಇಂದ್ರನ ಅರಮನೆಯಂತೆಯೇ ಕಂಗೊಳಿಸಿದನು. ಆಗ ಪೂಜಿಸಲ್ಪಟ್ಟು ಗೋವಿಂದನು ಶುಭ ಭವನವನ್ನು ಪ್ರವೇಶಿಸಿದನು. ಸಾತ್ಯಕಿಯೂ ಕೂಡ ತನ್ನ ಭವನವನ್ನು ಪ್ರವೇಶಿಸಿದನು. ದಾನವರನ್ನು ಸಂಹರಿಸಿದ ಇಂದ್ರನಂತೆ ದುಷ್ಕರ ಕರ್ಮವನ್ನು ಮಾಡಿ ದೀರ್ಘ ಪ್ರವಾಸದ ನಂತರ ಹಿಂದಿರುಗಿದ ಕೃಷ್ಣನು ಹೃಷ್ಟಾತ್ಮನಾಗಿ ತನ್ನ ಭವನವನ್ನು ಪ್ರವೇಶಿಸಿದನು. ದೇವತೆಗಳು ಶತಕ್ರತು ಇಂದ್ರನನ್ನು ಹೇಗೋ ಹಾಗೆ ಭೋಜ-ವೃಷ್ಣಿ-ಅಂಧಕರು ಮುಂದೆಹೋಗಿ ಮಹಾತ್ಮ ವಾರ್ಷ್ಣೇಯನನ್ನು ಸ್ವಾಗತಿಸಿದರು. ಅವರನ್ನೂ ಗೌರವಿಸಿ, ಅವರ ಕುಶಲಗಳನ್ನು ಕೇಳಿ

ಮೇಧಾವೀ ಕೃಷ್ಣನು ಪ್ರೀತನಾಗಿ ತನ್ನ ತಂದೆ-ತಾಯಂದಿರನ್ನು ಅಭಿವಾದಿಸಿದನು. ಅವರಿಬ್ಬರೂ ಅವನನ್ನು ತಬ್ಬಿಕೊಂಡು ಸಂತೈಸಿದರು. ಅವರೊಂದಿಗೆ ಕುಳಿತುಕೊಂಡ ಮಹಾಭುಜ ಕೃಷ್ಣನ ಸುತ್ತಲೂ ಸರ್ವ ವೃಷ್ಣಿಗಳೂ ಕುಳಿತುಕೊಂಡರು. ಕೈಕಾಲುಗಳನ್ನು ತೊಳೆದುಕೊಂಡು ವಿಶ್ರಾಂತಿಪಡೆದ ಕೃಷ್ಣನು ತಂದೆಯ ಪ್ರಶ್ನೆಗೆ ಮಹಾಯುದ್ಧದ ಕುರಿತು ಹೇಳತೊಡಗಿದನು.

ವಸುದೇವನು ಹೇಳಿದನು:

> “ವಾರ್ಷ್ಣೇಯ! ಪರಮ ಅದ್ಭುತವಾದ ಆ ಸಂಗ್ರಾಮದ ಕುರಿತು ಜನರು ಮಾತನಾಡಿಕೊಳ್ಳುವುದನ್ನು ಕೇಳಿದ್ದೇನೆ. ಪುತ್ರ! ಅನುದಿನದ ಯುದ್ಧದ ಕುರಿತು ಹೇಳು! ನೀನಾದರೋ ಅದರ ಪ್ರತ್ಯಕ್ಷದರ್ಶಿಯೂ ಕಾರ್ಯಜ್ಞನೂ ಆಗಿರುವೆ. ಆದುದರಿಂದ ಆ ಸಂಗ್ರಾಮವು ಹೇಗೆ ನಡೆಯಿತೋ ಹಾಗೆ ಹೇಳು! ಮಹಾತ್ಮ ಪಾಂಡವರೊಡನೆ ನಡೆದ ಭೀಷ್ಮ-ಕರ್ಣ-ಕೃಪ-ದ್ರೋಣ-ಶಲ್ಯರೇ ಮೊದಲಾದವರ ಮತ್ತು ನಾನಾದೇಶ ನಿವಾಸಿಗಳ, ನಾನಾವೇಷ-ಆಕೃತಿ-ಬುದ್ಧಿಗಳಿದ್ದ ಅನೇಕ ಅಸ್ತ್ರಕೋವಿದ ಅನ್ಯ ಕ್ಷತ್ರಿಯರ ಆ ಯುದ್ಧವು ಹೇಗೆ ನಡೆಯಿತು?”

ಹೀಗೆ ಕೇಳಲು ಬಳಿಯಲ್ಲಿದ್ದ ತಂದೆ-ತಾಯಿಯರಿಗೆ ಪುಂಡರೀಕಾಕ್ಷನು ಕುರುವೀರರ ಸಂಗ್ರಾಮ-ನಿಧನಗಳ ಕುರಿತು ವರ್ಣಿಸಿದನು.

ವಾಸುದೇವನು ಹೇಳಿದನು:

"ಮಹಾತ್ಮ ಕ್ಷತ್ರಿಯರ ಅತಿ ಅದ್ಭುತ ಕರ್ಮಗಳು ಬಹಳವಾಗಿದ್ದವು. ಅವುಗಳನ್ನು ವರ್ಣಿಸಲು ನೂರು ವರ್ಷಗಳೂ ಸಾಕಾಗುವುದಿಲ್ಲ. ಪೃಥ್ವೀಶರ ಕರ್ಮಗಳಲ್ಲಿ ಪ್ರಧಾನವಾದವುಗಳನ್ನು ಸಂಕ್ಷಿಪ್ತವಾಗಿ ಹೇಳುತ್ತೇನೆ. ಕೇಳು. ದೇವತೆಗಳಿಗೆ ವಾಸವ ಇಂದ್ರನು ಹೇಗೋ ಹಾಗೆ ಕೌರವರ ಹನ್ನೊಂದು ಅಕ್ಷೋಹಿಣೀ ಸೇನೆಗಳಿಗೆ ಕೌರವ್ಯ ಭೀಷ್ಮನು ಸೇನಾಪತಿಯಾಗಿದ್ದನು. ಪಾಂಡುಪುತ್ರರ ಏಳು ಅಕ್ಷೋಹಿಣಿಗೆ ಧೀಮಾನ್ ಶಿಖಂಡಿಯು, ಧೀಮತ ಸವ್ಯಸಾಚಿಯಿಂದ ರಕ್ಷಣೆಯಡಿಯಲ್ಲಿ, ನೇತಾರನಾಗಿದ್ದನು. ಮಹಾತ್ಮ ಕುರು-ಪಾಂಡವರ ನಡುವೆ ಹತ್ತು ದಿನಗಳು ರೋಮಾಂಚಕಾರೀ ಮಹಾ ಯುದ್ಧವು ನಡೆಯಿತು. ಅನಂತರ ಮಹಾರಣದಲ್ಲಿ ಯುದ್ಧಮಾಡುತ್ತಿದ್ದ ಗಾಂಗೇಯನನ್ನು ಗಾಂಡೀವಧನ್ವಿಯೊಡನೆ ಶಿಖಂಡಿಯು ಅನೇಕ ಬಾಣಗಳಿಂದ ಹೊಡೆದನು. ಆಗ ಶರತಲ್ಪಗತನಾದ ಆ ಮುನಿಯು ದಕ್ಷಿಣಾಯನವನ್ನು ಕಳೆದು

ಉತ್ತರಾಯಣವು ಬಂದಾಗ ಕಾಲನ ವಶನಾದನು. ಅನಂತರ ದೈತ್ಯರಿಗೆ ಕಾವ್ಯನು ಹೇಗೋ ಹಾಗೆ ಕೌರವೇಂದ್ರನಿಗೆ ಅಸ್ತ್ರವಿದುಷರಲ್ಲಿ ಶ್ರೇಷ್ಠ ಪ್ರವೀರ ದ್ರೋಣನು ಸೇನಾಪತಿಯಾದನು. ದ್ವಿಜಸತ್ತಮ ಸಮರಶ್ಲಾಘೀ ದ್ರೋಣನು ಕೃಪ-ಕರ್ಣಾದಿಗಳಿಂದ ರಕ್ಷಿತಗೊಂಡಿದ್ದ ಕೌರವರ ಅಳಿದುಳಿದ ಒಂಭತ್ತು ಅಕ್ಷೋಹಿಣೀ ಸೇನೆಯ ನೇತಾರನಾಗಿದ್ದನು. ಮಿತ್ರನಿಂದ ವರುಣನು ಹೇಗೋ ಹಾಗೆ ತೇಜಸ್ವೀ ಭೀಮನಿಂದ ರಕ್ಷಿಸಲ್ಪಟ್ಟ ಮಹಾಸ್ತ್ರವಿದು ಧೃಷ್ಟದ್ಯುಮ್ನನು ಪಾಂಡವರ ನೇತಾರನಾದನು. ಐದು ಅಕ್ಷೋಹಿಣೀ ಸೇನೆಗಳಿಂದ ಪರಿವೃತನಾದ ಆ ಮಹಾಮನಸ್ವೀ ಧೃಷ್ಟದ್ಯುಮ್ನನು ದ್ರೋಣನಿಂದ ತನ್ನ ತಂದೆಗಾದ ಅಪಮಾನವನ್ನು ಸ್ಮರಿಸಿಕೊಳ್ಳುತ್ತಾ ರಣದಲ್ಲಿ ಮಹಾಕರ್ಮಗಳನ್ನೆಸಗಿದನು. ದ್ರೋಣ-ಪಾರ್ಷತರ ಆ ಸಂಗ್ರಾಮದಲ್ಲಿ ನಾನಾ ದಿಕ್ಕುಗಳಿಂದ ಆಗಮಿಸಿದ್ದ ಪ್ರಾಯಶಃ ಎಲ್ಲ ವೀರ ಪೃಥ್ವೀಪಾಲರ ನಿಧನವಾಯಿತು. ಆ ಪರಮದಾರುಣ ಯುದ್ಧವು ಐದು ದಿನಗಳು ನಡೆಯಿತು. ನಂತರ ಪರಿಶ್ರಾಂತನಾದ ದ್ರೋಣನು ಧೃಷ್ಟದ್ಯುಮ್ನನ ವಶನಾದನು. ಅನಂತರ ದುರ್ಯೋಧನನ

ಸೇನೆಯಲ್ಲಿ ಯುದ್ಧದಲ್ಲಿ ಅಳಿದುಳಿದಿದ್ದ ಐದು ಅಕ್ಷೋಹಿಣೀ ಸೇನೆಗೆ ಕರ್ಣನು ಸೇನಾಪತಿಯಾದನು. ಆಗ ಪಾಂಡುಪುತ್ರರ ಮೂರು ಅಕ್ಷೋಹಿಣೀ ಸೇನೆಯನ್ನು ಬೀಭತ್ಸುವು ರಕ್ಷಿಸುತ್ತಿದ್ದನು. ಬಹಳಷ್ಟು ಪ್ರವೀರರು ಹತರಾಗಿದ್ದರೂ ಅದು ಯುದ್ಧಸನ್ನದ್ಧವಾಗಿತ್ತು.  ಅನಂತರ ಎರಡನೆಯ ದಿನದ ದಾರುಣ ಯುದ್ಧದಲ್ಲಿ ಪತಂಗವು ಪಾವಕದ ಕಡೆ ಹಾರಿ ಹೋಗುವಂತೆ ಪಾರ್ಥನನ್ನು ಎದುರಿಸಿ ಸೌತಿಯು ಪಂಚತ್ವವನ್ನು ಹೊಂದಿದನು. ಕರ್ಣನು ಹತನಾಗಲು ನಿರುತ್ಸಾಹಗೊಂಡ ಹತೌಜಸ ಕೌರವ್ಯರ ಮೂರು ಅಕ್ಷೋಹಿಣೀ ಸೇನೆಗೆ ಮದ್ರೇಶನು ನಾಯಕನಾದನು. ಅನೇಕ ವಾಹನಗಳನ್ನು ಕಳೆದುಕೊಂಡು ನಿರುತ್ಸಾಹಗೊಂಡಿದ್ದ ಅಳಿದುಳಿದ ಪಾಂಡವರ ಒಂದು ಅಕ್ಷೋಹಿಣೀ ಸೇನೆಗೆ ಯುಧಿಷ್ಠಿರನು ನಾಯಕನಾದನು. ಅಂದಿನ ಅರ್ಧ ದಿನದಲ್ಲಿಯೇ ಮದ್ರರಾಜನನ್ನು ಸಂಹರಿಸಿ ಕುರುರಾಜ ಯುಧಿಷ್ಠಿರನು ದುಷ್ಕರ ಕರ್ಮವನ್ನೆಸಗಿದನು. ಶಲ್ಯನು ಹತನಾಗಲು ಮಹಾಮನಸ್ವಿ ಅಮಿತವಿಕ್ರಮಿ ಸಹದೇವನು ಆ ಕಲಹಕ್ಕೆ ಮೂಲಕಾರಣನಾಗಿದ್ದ ಶಕುನಿಯನ್ನು ಸಂಹರಿಸಿದನು.

ಶಕುನಿಯು ಹತನಾದ ನಂತರ ಧಾರ್ತರಾಷ್ಟ್ರ ದುರ್ಮನಸ್ವಿ ರಾಜ ದುರ್ಯೋಧನನು ಗದಾಪಾಣಿಯಾಗಿ ಹತರಾಗದೇ ಉಳಿದಿದ್ದ ಸೈನಿಕರನ್ನು ಬಿಟ್ಟು ಹೊರಟುಹೋದನು. ಸಂಕ್ರುದ್ಧನಾದ ಪ್ರತಾಪವಾನ್ ಭೀಮಸೇನನು ಅವನನ್ನೇ ಹಿಂಬಾಲಿಸಿ ಹೋಗಿ ದ್ವೈಪಾಯನ ಸರೋವರದಲ್ಲಿ ನೀರಿನೊಳಗೆ ಕುಳಿತಿದ್ದ ಅವನನ್ನು ನೋಡಿದನು. ಆಗ ಪಂಚ ಪಾಂಡವರು ಹೃಷ್ಟರಾಗಿ ಉಳಿದ ಸೇನೆಗಳಿಂದ ಸರೋವರದಲ್ಲಿದ್ದ ಅವನನ್ನು ಸುತ್ತುವರೆದು ನಿಂತರು. ನೀರಿನೊಳಗಿದ್ದ ದುರ್ಯೋಧನನು ಪಾಂಡವರ ವಾಗ್ಬಾಣಗಳಿಂದ ಅತ್ಯಂತ ಗಾಸಿಯಾಗಿ ಯುದ್ಧಮಾಡಲು ಗದಾಪಾಣಿಯಾಗಿ ನೀರಿನಿಂದ ಮೇಲೆದ್ದನು. ಆಗ ಪೃಥ್ವೀಪಾಲರು ನೋಡುತ್ತಿದ್ದಂತೆಯೇ ನಡೆದ ಮಹಾ ಯುದ್ಧದಲ್ಲಿ ರಾಜಾ ಧಾರ್ತರಾಷ್ಟ್ರನು ಭೀಮಸೇನನ ವಿಕ್ರಮದಿಂದ ಹತನಾದನು. ಅನಂತರ ಪಿತುರ್ವಧೆಯನ್ನು ಸಹಿಸಿಕೊಳ್ಳಲಾರದ ದ್ರೋಣಪುತ್ರನು ರಾತ್ರಿ ಶಿಬಿರದಲ್ಲಿ ಮಲಗಿದ್ದ ಪಾಂಡವ ಸೇನೆಯನ್ನು ಸಂಹರಿಸಿದನು. ನಾನು, ಎರಡನೆಯವನಾಗಿ ಯುಯುಧಾನ ಸಾತ್ಯಕಿ ಮತ್ತು ಐವರು

ಪಾಂಡವರು ಇವರನ್ನು ಬಿಟ್ಟು ಸೇನೆಗಳೆಲ್ಲವೂ ನಾಶವಾದವು, ಪುತ್ರರು ಹತರಾದರು ಮತ್ತು ಮಿತ್ರರೂ ಹತರಾದರು. ಅವರ ಕಡೆಯಲ್ಲಿ ಕೃಪ-ಭೋಜ ಕೃತವರ್ಮರೊಂದಿಗೆ ದ್ರೌಣಿಯು ಯುದ್ಧದಿಂದ ಮುಕ್ತರಾಗಿ ಬದುಕುಳಿದರು. ಕೌರವ್ಯ ಯುಯುತ್ಸುವೂ ಕೂಡ ಪಾಂಡವರ ಆಶ್ರಯವನ್ನು ಪಡೆದುದರಿಂದ ಉಳಿದುಕೊಂಡನು. ಅನುಯಾಯಿಗಳೊಂದಿಗೆ ಕೌರವೇಂದ್ರ ಸುಯೋಧನನು ಹತನಾಗಲು ವಿದುರ-ಸಂಜಯರು ಧರ್ಮರಾಜನನ್ನೇ ಆಶ್ರಯಿಸಿದರು. ಹದಿನೆಂಟು ಅಕ್ಷೋಹಿಣೀ ಸೇನೆಗಳು ಮತ್ತು ಪೃಥ್ವೀಪಾಲರು ಹತರಾಗಿ ಸ್ವರ್ಗವನ್ನು ಸೇರಿದ ಆ ಮಹಾಯುದ್ಧವು ಈ ರೀತಿ ನಡೆಯಿತು.”

ಆ ರೋಮಹರ್ಷಣ ಕಥೆಯನ್ನು ಕೇಳಿದ ವೃಷ್ಣಿಗಳು ದುಃಖ-ಹರ್ಷಗಳಿಂದ ಪೀಡಿತರಾದರು.

ತಂದೆಗೆ ಮಹಾಭಾರತಯುದ್ಧದ ಕಥೆಯನ್ನು ಹೇಳುತ್ತಿರುವಾಗ ಪ್ರತಾಪವಾನ್ ವಾಸುದೇವ ಕೃಷ್ಣನು ವೀರ ಅಭಿಮನ್ಯುವಿನ ವಧೆಯನ್ನು ಬಿಟ್ಟು ಹೇಳಿದ್ದನು. ಅಪ್ರಿಯವಾದುದನ್ನು ವಸುದೇವನಿಗೆ ಹೇಳಬಾರದು ಮತ್ತು ಮೊಮ್ಮಗನ ವಧೆಯ ಕುರಿತು ಕೇಳಿ ವಸುದೇವನು ಮಹಾ

ದುಃಖ-ಶೋಕಗಳಿಂದ ಸಂತಪ್ತನಾಗುತ್ತಾನೆಂದು ಆ ಮಹಾಮನಸ್ವಿ ಮಹಾಮತಿಯು ಹೀಗೆ ಮಾಡಿದ್ದನು. ರಣದಲ್ಲಿ ತನ್ನ ಮಗನ ವಧೆಯಾದುದನ್ನು ಕೃಷ್ಣನು ಬಿಟ್ಟಿರುವುದನ್ನು ನೋಡಿದ ಸುಭದ್ರೆಯು

> "ಕೃಷ್ಣ! ಸೌಭದ್ರನ ವಧೆಯಕುರಿತು ಹೇಳು!"

ಎಂದು ಹೇಳುತ್ತಿದ್ದಂತೆಯೇ ಮೂರ್ಛಿತಳಾಗಿ ನೆಲದ ಮೇಲೆ ಬಿದ್ದಳು. ಅವಳು ಭೂಮಿಯ ಮೇಲೆ ಬಿದ್ದುದನ್ನು ನೋಡಿದ ವಸುದೇವನೂ ಕೂಡ ದುಃಖದಿಂದ ಮೂರ್ಛಿತನಾಗಿ ಭೂಮಿಯ ಮೇಲೆ ಬಿದ್ದನು. ಆಗ ಮೊಮ್ಮಗನ ವಧೆಯ ಕುರಿತು ಕೇಳಿ ದುಃಖಶೋಕಸಮನ್ವಿತನಾದ ವಸುದೇವನು ಕೃಷ್ಣನಿಗೆ ಇಂತೆಂದನು:

> "ಪುಂಡರೀಕಾಕ್ಷ! ನೀನು ಸತ್ಯವಾದಿಯೆಂದು ಭುವಿಯಲ್ಲಿ ವಿಶ್ರುತನಾಗಿರುವೆ ತಾನೇ? ಆದರೂ ಇಂದು ನೀನು ಮೊಮ್ಮಗನ ವಧೆಯಕುರಿತು ನನಗೆ ಹೇಳಲಿಲ್ಲವಲ್ಲ? ನಿನ್ನ ಸೋದರಳಿಯನ ಮರಣದ ಕುರಿತು ನಡೆದಂತೆ ನನಗೆ ಹೇಳು. ನಿನ್ನಂಥಹುದೇ ಕಣ್ಣುಗಳಿದ್ದ ಅವನನ್ನು ಶತ್ರುಗಳು ಹೇಗೆ ರಣದಲ್ಲಿ ಸಂಹರಿಸಿದರು? ಕಾಲಪ್ರಾಪ್ತವಾಗದೇ ಮರಣಹೊಂದುವುದು ನರರಿಗೆ ಬಹಳ ಕಷ್ಟವಾದುದು.

ದುಃಖದಿಂದ ನನ್ನ ಹೃದಯವು ನೂರು ಚೂರುಗಳಾಗಿ ಒಡೆಯುತ್ತಿಲ್ಲವಲ್ಲ! ನನಗೆ ಪ್ರಿಯನಾಗಿದ್ದ ಆ ಚಪಲಾಕ್ಷನು ಸಂಗ್ರಾಮದಲ್ಲಿ ನಿನಗೆ ಏನು ಹೇಳಿದನು? ತಾಯಿ ಸುಭದ್ರೆ ಮತ್ತು ನನ್ನ ಕುರಿತು ಏನಾದರೂ ಹೇಳಿದನೇ? ಯುದ್ಧಕ್ಕೆ ಬೆನ್ನುಹಾಕಿ ಹೋಗುತ್ತಿರುವಾಗ ಶತ್ರುಗಳು ಅವನನ್ನು ಸಂಹರಿಸಲಿಲ್ಲ ತಾನೇ? ಆಗ ಅವನ ಮುಖವು ಭಯದಿಂದ ವಿಕಾರಗೊಳ್ಳಲಿಲ್ಲ ತಾನೇ? ಆ ಮಹಾತೇಜಸ್ವೀ ಪ್ರಭುವು ಹುಡುಗತನದಿಂದ ನನ್ನ ಎದಿರು ತನ್ನ ವಿಜಯಗಳನ್ನು ತಾನೇ ಹೊಗಳಿಕೊಳ್ಳುತ್ತಿದ್ದನು. ಆ ಬಾಲಕನು ದ್ರೋಣ-ಕರ್ಣ-ಕೃಪಾದಿಗಳ ವಂಚನೆಯಿಂದ ಹತನಾಗಿ ಧರಣಿಯ ಮೇಲೆ ಮಲಗಲಿಲ್ಲ ತಾನೇ? ಅದರ ಕುರಿತು ನನಗೆ ಹೇಳು! ನನ್ನ ಆ ಮೊಮ್ಮಗನು ನಿತ್ಯವೂ ರಣದಲ್ಲಿ ದ್ರೋಣ, ಭೀಷ್ಮ, ರಥಿಗಳಲ್ಲಿ ಶ್ರೇಷ್ಠ ಕರ್ಣ ಇವರೊಡನೆ ಸ್ಪರ್ಧಿಸುತ್ತಲೇ ಇದ್ದನು.”

ಹೀಗೆ ಅತ್ಯಂತ ದುಃಖಿತನಾಗಿ ವಿಲಪಿಸುತ್ತಿದ್ದ ತಂದೆಗೆ ಇನ್ನೂ ಹೆಚ್ಚು ದುಃಖದಲ್ಲಿದ್ದ ಗೋವಿಂದನು ಈ ಮಾತುಗಳನ್ನಾಡಿದನು:

“ಸಂಗ್ರಾಮದ ಎದಿರು ಯುದ್ಧಮಾಡುತ್ತಿದ್ದ ಅಭಿಮನ್ಯುವು ಯಾವಾಗಲೂ ತನ್ನ ಮುಖವನ್ನು ಭಯದಿಂದ

ವಿಕಾರಗೊಳಿಸಲಿಲ್ಲ. ದುಸ್ತರ ಸಂಗ್ರಾಮದಿಂದ ಅವನು ಎಂದೂ ಬೆನ್ನುಹಾಕಲಿಲ್ಲ. ಅವನು ಲಕ್ಷಗಟ್ಟಲೆ ಪೃಥ್ವೀಪಾಲರನ್ನು ಸಂಹರಿಸಿ, ದ್ರೋಣ-ಕರ್ಣರಿಂದ ದುಃಖಿತನಾಗಿ ಅಂತ್ಯದಲ್ಲಿ ದುಃಶಾಸನನ ಮಗನಿಂದ ಹತನಾದನು. ಒಬ್ಬನು ಓರ್ವ ಇನ್ನೊಬ್ಬನೊಡನೆಯೇ ಯುದ್ಧಮಾಡುತ್ತಿದ್ದರೆ ಸಂಗ್ರಾಮದಲ್ಲಿ ಅವನನ್ನು ವಜ್ರಿ ಇಂದ್ರನಿಗೂ ಸೋಲಿಸಲು ಸಾಧ್ಯವಾಗುತ್ತಿರಲಿಲ್ಲ. ಸಂಶಪ್ತಕರು ಪಾರ್ಥನನ್ನು ಸಂಗ್ರಾಮಕ್ಕೆ ಆಹ್ವಾನಿಸಿದ್ದಾಗ ಸಂಕ್ರುದ್ಧ ದ್ರೋಣಾದಿಗಳು ಯುದ್ಧದಲ್ಲಿ ಅಭಿಮನ್ಯುವನ್ನು ಸುತ್ತುವರೆದಿದ್ದರು. ಆಗ ರಣದಲ್ಲಿ ಮಹಾಶತ್ರುಕ್ಷಯವನ್ನುಂಟುಮಾಡಿ ನಿನ್ನ ಮಗಳ ಮಗ ವಾರ್ಷ್ಣೇಯನು ದುಃಶಾಸನನ ಮಗನಿಂದ ಹತನಾದನು. ಅವನು ನಿಶ್ಚಯವಾಗಿಯೂ ಸ್ವರ್ಗಕ್ಕೇ ಹೋಗಿರಬೇಕು. ಶೋಕವನ್ನು ತೊರೆ! ಉತ್ತಮ ಪುರುಷರು ಎಂದೂ ವ್ಯಸನ ಹೊಂದಿ ಕುಸಿಯುವುದಿಲ್ಲ! ರಣದಲ್ಲಿ ಮಹೇಂದ್ರನಂತಿದ್ದ ದ್ರೋಣ-ಕರ್ಣಾದಿಗಳು ಯಾರನ್ನು ಎದುರಿಸಿ ಯುದ್ಧಮಾಡಿದರೋ ಅವನು ಹೇಗೆ ತಾನೇ ಸ್ವರ್ಗವನ್ನು

ಪಡೆದಿರಲಿಕ್ಕಿಲ್ಲ? ಶೋಕವನ್ನು ಬಿಡು! ಕೋಪಕ್ಕೆ ವಶನಾಗಬೇಡ! ಆ ಪರಪುರಂಜಯ ಅಭಿಮನ್ಯುವು ಶಸ್ತ್ರಗಳಿಂದ ಪವಿತ್ರರಾದವರು ಹೋಗುವ ಮಾರ್ಗದಲ್ಲಿಯೇ ಹೋಗಿದ್ದಾನೆ. ಆ ವೀರ ಸುಭದ್ರೇಯನು ಹತನಾಗಲು ದುಃಖಾರ್ತಳಾದ ನನ್ನ ತಂಗಿ ಸುಭದ್ರೆಯು ಪೃಥಾ ಕುಂತಿಯ ಬಳಿಸಾರಿ ಕುರರಿಯಂತೆ ರೋದಿಸಿದ್ದಳು. ದ್ರೌಪದಿಯನ್ನೂ ಸಂಧಿಸಿ ದುಃಖಿತಳಾದ ಅವಳು “ಆರ್ಯೇ! ಎಲ್ಲ ಮಕ್ಕಳೂ ಎಲ್ಲಿದ್ದಾರೆ? ಅವರನ್ನು ನೋಡ ಬಯಸುತ್ತೇನೆ!” ಎಂದು ಕೇಳಿದ್ದಳು. ಅವಳ ಮಾತನ್ನು ಕೇಳಿ ಆ ಎಲ್ಲ ಕುರುಸ್ತ್ರೀಯರೂ ಅವಳ ಭುಜಗಳನ್ನು ಹಿಡಿದು ಪರಮ ಆರ್ತರಾಗಿ ಅಳುತ್ತಿದ್ದರು. ಸುಭದ್ರೆಯು ಉತ್ತರೆಯನ್ನು ಕುರಿತು ಹೀಗೆ ಹೇಳಿದ್ದಳು: “ಭದ್ರೇ! ನಿನ್ನ ಪತಿಯು ಎಲ್ಲಿಗೆ ಹೋಗಿರುವನು? ಅವನ ಆಗಮನವನ್ನು ಬೇಗನೇ ನನಗೆ ಬಂದು ಹೇಳಬೇಕು! ವೈರಾಟೀ! ಹಿಂದೆ ನನ್ನ ಧ್ವನಿಯನು ಕೇಳುತ್ತಲೇ ತನ್ನ ಭವನದಿಂದ ಹೊರಬರುತ್ತಿದ್ದ ನಿನ್ನ ಪತಿಯು ಇಂದೇಕೆ ಹೊರಬರುತ್ತಿಲ್ಲ? ಅಭಿಮನ್ಯೋ! ಮಹಾರಥರಾದ ನಿನ್ನ ಸೋದರ ಮಾವಂದಿರು ಕುಶಲರಾಗಿದ್ದಾರೆ. ಅವರು

ಯುದ್ಧಕ್ಕೆಂದು ಆಗಮಿಸಿರುವ ನಿನ್ನ ಕುಶಲವನ್ನು ಕೇಳುತ್ತಿದ್ದಾರೆ. ಅರಿಂದಮ! ಹಿಂದಿನಂತೆ ಇಂದೂ ಕೂಡ ಸಂಗ್ರಾಮದ ಕುರಿತು ವರದಿಮಾಡು. ವಿಲಪಿಸುತ್ತಿರುವ ನನಗೇಕೆ ಇಂದು ನೀನು ಉತ್ತರಿಸುತ್ತಿಲ್ಲ?" ಇದೇ ಮುಂತಾಗಿ ವಿಲಪಿಸುತ್ತಿದ್ದ ವಾರ್ಷ್ಣೇಯಿಯನ್ನು ಕೇಳಿ ದುಃಖಾರ್ತಳಾಗಿದ್ದ ಪೃಥೆಯು ಅವಳಿಗೆ ಮೆಲ್ಲನೇ ಈ ಮಾತುಗಳನ್ನಾಡಿದ್ದಳು: "ಸುಭದ್ರೇ! ರಣದಲ್ಲಿ ವಾಸುದೇವ, ಸಾತ್ಯಕಿ ಮತ್ತು ತಂದೆ ಅರ್ಜುನರಿಂದ ಪಾಲಿತನಾಗಿದ್ದ ಈ ಬಾಲಕನು ಕಾಲಧರ್ಮಾನುಸಾರವಾಗಿ ಹತನಾಗಿದ್ದಾನೆ. ಯದುನಂದಿನಿ! ಮನುಷ್ಯಧರ್ಮವೇ ಈ ರೀತಿಯಿರುವಾಗ ಅದಕ್ಕೆ ನೀನು ಶೋಕಿಸಬೇಡ! ದುರ್ಧರ್ಷನಾಗಿದ್ದ ನಿನ್ನ ಪುತ್ರನು ಪರಮ ಗತಿಯನ್ನೇ ಪಡೆದಿದ್ದಾನೆ. ಮಹಾತ್ಮ ಕ್ಷತ್ರಿಯರ ಮಹಾಕುಲದಲ್ಲಿ ಜನಿಸಿರುವೆ. ಕಮಲದ ದಳದಂಥಹ ಕಣ್ಣುಗಳುಳ್ಳ ನೀನು ಆ ಚಪಲಾಕ್ಷನ ಕುರಿತು ಶೋಕಿಸಬೇಡ! ಶುಭೇ! ಗರ್ಭಿಣಿಯಾಗಿರುವ ಉತ್ತರೆಯನ್ನಾದರೂ ನೋಡಿ ಶೋಕಿಸುವುದನ್ನು ನಿಲ್ಲಿಸು! ಭಾಮಿನೀ! ಅವನ ಮಗನಿಗೇ ಇವಳು ಜನ್ಮನೀಡುವವಳಿದ್ದಾಳೆ!" ಯದುಕುಲೋದ್ವಹ!

ಕುಂತಿಯು ಹೀಗೆ ಸುಭದ್ರೆಯನ್ನು ಸಂತೈಸಿ ಸಹಿಸಲಸಾಧ್ಯ ಶೋಕವನ್ನು ತೊರೆದು ಅವನ ಶ್ರಾದ್ಧಕ್ಕೆ ಸಿದ್ಧತೆಗಳನ್ನು ಮಾಡಿದ್ದಳು. ಅವಳು ಧರ್ಮಜ್ಞ ರಾಜ, ಭೀಮಸೇನ ಮತ್ತು ಯಮೋಪಮರಾದ ಯಮಳರ ಒಪ್ಪಿಗೆಯಂತೆ ಅನೇಕ ದಾನಗಳನ್ನು ನೀಡಿದಳು. ಯದೂದ್ವಹ! ಬ್ರಾಹ್ಮಣರಿಗೆ ಅನೇಕ ಗೋವುಗಳನ್ನು ದಾನವಾಗಿತ್ತು ಸಮಾಧಾನಮಾಡಿಕೊಂಡ ವಾರ್ಷ್ಣೇಯಿ ಕುಂತಿಯು ವೈರಾಟೀ ಉತ್ತರೆಗೆ ಹೇಳಿದಳು: "ವೈರಾಟೀ! ಪತಿಯ ಕುರಿತು ಸಂತಾಪಪಡುವ ಕಾರ್ಯ ನಿನ್ನದಲ್ಲ! ನೀನು ಗರ್ಭದಲ್ಲಿರುವ ಶಿಶುವನ್ನು ರಕ್ಷಿಸಿಕೊಳ್ಳಬೇಕು!" ಹೀಗೆ ಹೇಳಿ ಕುಂತಿಯು ಸುಮ್ಮನಾದಳು. ಆಗ ನಾನು ಅವಳ ಅನುಮತಿಯನ್ನು ಪಡೆದು ಸುಭದ್ರೆಯನ್ನು ಇಲ್ಲಿಗೆ ಕರೆದುಕೊಂಡು ಬಂದೆನು. ಹೀಗೆ ನಿನ್ನ ಮಗಳ ಮಗನು ನಿಧನಹೊಂದಿದನು. ಸಂತಾಪವನ್ನು ತೊರೆ ಮತ್ತು ನಿನ್ನ ಮನಸ್ಸನ್ನು ಶೋಕಕ್ಕೊಳಗಾಗಿಸಬೇಡ!"

ಧರ್ಮಾತ್ಮ ಶೂರಾತ್ಮಜ ವಸುದೇವನು ಮಗ ಕೃಷ್ಣನ ಈ ಮಾತನ್ನು ಕೇಳಿ ಶೋಕವನ್ನು ತೊರೆದು ಅಭಿಮನ್ಯುವಿಗೆ ಅನುತ್ತಮ ಶ್ರಾದ್ಧವನ್ನಿತ್ತನು. ಹಾಗೆಯೇ ವಾಸುದೇವ ಕೃಷ್ಣನೂ ಕೂಡ ತಂಗಿಯ

ಮಗನಾದ ಮತ್ತು ಅವನ ತಂದೆಗೆ ಪ್ರಿಯನಾಗಿದ್ದ ಮಹಾತ್ಮ ಅಭಿಮನ್ಯುವಿನ ಔರ್ಧ್ವದೈಹಿಕ ಕ್ರಿಯೆಗಳನ್ನು ಮಾಡಿದನು. ಆ ಮಹಾಭುಜನು ಅರವತ್ತು ಲಕ್ಷ ಬ್ರಾಹ್ಮಣರಿಗೆ ಸರ್ವಗುಣಾನ್ವಿತ ಭೋಜನವನ್ನು ವಿಧಿವತ್ತಾಗಿ ಭೋಜನಮಾಡಿಸಿದನು. ಆ ಮಹಾಬಾಹುವು ಬ್ರಾಹ್ಮಣರಿಗೆ ವಸ್ತ್ರಗಳನ್ನು ಹೊದ್ದಿಸಿ ಮುಂದೆ ಎಂದೂ ಅವರಿಗೆ ಧನದ ಬಯಕೆಯೇ ಉಂಟಾಗದಂತೆ ಮಾಡಿದನು. ಕೃಷ್ಣನ ಆ ಕಾರ್ಯವು ರೋಮಾಂಚನಕಾರಿಯಾಗಿತ್ತು. ಸುವರ್ಣ, ಗೋವುಗಳು, ಶಯನ-ವಸ್ತ್ರಗಳನ್ನು ನೀಡುತ್ತಿದ್ದಾಗ ವಿಪ್ರರು "ಹೆಚ್ಚಾಗಲಿ!" ಎಂದು ಆಶೀರ್ವದಿಸುತ್ತಿದ್ದರು. ಅನಂತರ ದಾಶಾರ್ಹ ವಾಸುದೇವ, ಬಲದೇವ, ಸಾತ್ಯಕಿ ಮತ್ತು ಸತ್ಯಕರೂ ಕೂಡ ಅಭಿಮನ್ಯುವಿನ ಶ್ರಾದ್ಧವನ್ನು ನೆರವೇರಿಸಿದರು. ಅತೀವ ದುಃಖಸಂತಪ್ತರಾದ ಅವರಿಗೆ ಶಾಂತಿಯೇ ಇಲ್ಲದಾಗಿತ್ತು.

## ಪಾಂಡವರಿಗೆ ಮರುತ್ತನಿಧಿಲಾಭ ಮತ್ತು ಪರೀಕ್ಷಿತ್ಸಂಜೀವನ

ಹಸ್ತಿನಾಪುರ ನಗರದಲ್ಲಿ ಕೂಡ ವೀರ ಪಾಂಡವರು ಅಭಿಮನ್ಯುವು ಇಲ್ಲದೇ ಶಾಂತಿಯನ್ನು ಪಡೆಯಲಿಲ್ಲ. ಪತಿಶೋಕದಿಂದ ಆರ್ತಳಾಗಿದ್ದ ವಿರಾಟನ ಮಗಳು ಉತ್ತರೆಯು ಅನೇಕ ದಿವಸಗಳು ಊಟವನ್ನೇ

ಮಾಡಲಿಲ್ಲ. ಅದೊಂದು ಮಹಾ ಕರುಣಾಜನಕ ವಿಷಯವಾಗಿತ್ತು. ಹಾಗೆಯೇ ಅವಳ ಗರ್ಭದಲ್ಲಿದ್ದ ಭ್ರೂಣವೂ ದಿನ-ದಿನಕ್ಕೆ ಕ್ಷೀಣಿಸತೊಡಗಿತು. ತನ್ನ ದಿವ್ಯದೃಷ್ಟಿಯಿಂದ ಇದನ್ನು ತಿಳಿದ ಧೀಮಂತ ಮಹಾತೇಜಸ್ವೀ ವ್ಯಾಸನು ಆಗಮಿಸಿ ಕುಂತಿ ಮತ್ತು ಪೃಥುಲಲೋಚನೆ ಉತ್ತರೆಗೆ ಶೋಕವನ್ನು ಪರಿತ್ಯಜಿಸುವಂತೆ ಹೇಳಿದನು.

> "ಯಶಸ್ವಿನೀ! ನಿನ್ನಲ್ಲಿ ಮಹಾತೇಜಸ್ವಿಯಾದ ಮಗನು ಹುಟ್ಟುತ್ತಾನೆ. ವಾಸುದೇವನ ಪ್ರಭಾವದಿಂದ ಮತ್ತು ನನ್ನ ಆಶೀರ್ವಾದದಿಂದ ಇವನು ಪಾಂಡವರ ನಂತರ ಮೇದಿನಿಯನ್ನು ಪಾಲಿಸುತ್ತಾನೆ."

ವ್ಯಾಸನು ಧರ್ಮರಾಜನ ಸಮಕ್ಷಮದಲ್ಲಿ ಧನಂಜಯನನ್ನು ನೋಡಿ ಅವನಿಗೆ ಸಂತೋಷವನ್ನುಂಟುಮಾಡುವಂಥಹ ಮಾತುಗಳನ್ನಾಡಿದನು:

> "ಮಹಾಬಾಹೋ! ನಿನಗೆ ಮಹಾಮನಸ್ವಿಯಾದ ಮೊಮ್ಮಗನು ಜನಿಸುತ್ತಾನೆ. ಅವನು ಸಾಗರಪರ್ಯಂತ ಈ ಪೃಥ್ವಿಯನ್ನು ಪಾಲಿಸುತ್ತಾನೆ. ಆದುದರಿಂದ ಶೋಕವನ್ನು ತ್ಯಜಿಸು. ಇದು ಸತ್ಯವಾಗುತ್ತದೆ ಎನ್ನುವುದರ ಕುರಿತು ವಿಚಾರಿಸಬೇಡ. ವೃಷ್ಣಿವೀರ ಕೃಷ್ಣನು ಹಿಂದೆ ಏನೆಲ್ಲ ಹೇಳಿದ್ದನೋ ಅವೆಲ್ಲವೂ

ಹಾಗೆಯೇ ಆಗುತ್ತದೆ. ಅದರಲ್ಲಿ ವಿಚಾರಮಾಡುವಂಥದ್ದೇನೂ ಇಲ್ಲ. ತಾವೇ ಗೆದ್ದ ವಿಬುಧರ ಅಕ್ಷಯ ಲೋಕಗಳಿಗೆ ಅಭಿಮನ್ಯು ಮತ್ತು ಅನ್ಯ ಕುರುಗಳು ಹೋಗಿದ್ದಾರೆ. ಆದುದರಿಂದ ನೀನು ಅವರ ಕುರಿತು ಶೋಕಿಸಬಾರದು.”

ಹೀಗೆ ಪಿತಾಮಹನು ಮಾತನಾಡಲು ಧರ್ಮಾತ್ಮ ಧನಂಜಯನು ಶೋಕವನ್ನು ತೊರೆದು ಹೃಷ್ಟರೂಪನಾದನು. ಉತ್ತರೆಯ ಗರ್ಭವೂ ಕೂಡ ಯಥಾಕಾಲದಲ್ಲಿ ಶುಕ್ಲಪಕ್ಷದ ಚಂದ್ರನಂತೆ ಬೆಳೆಯಿತು. ಆಗ ವ್ಯಾಸನು ನೃಪ ಧರ್ಮಾತ್ಮಜನಿಗೆ ಅಶ್ವಮೇಧದ ಕುರಿತು ಪ್ರೋತ್ಸಾಹಿಸಿ ಅಲ್ಲಿಯೇ ಅಂತರ್ಧಾನನಾದನು. ಮೇಧಾವೀ ಧರ್ಮರಾಜನೂ ಕೂಡ ವ್ಯಾಸನ ಆ ಮಾತುಗಳನ್ನು ಕೇಳಿ ಐಶ್ವರ್ಯವನ್ನು ತರಲು ಹಿಮಾಲಯಕ್ಕೆ ಹೋಗುವ ಕುರಿತು ಮನಸ್ಸುಮಾಡಿದನು. ದ್ವೈಪಾಯನನ ಮಾತನ್ನು ಕೇಳಿ ಧರ್ಮರಾಜ ಯುಧಿಷ್ಠಿರನು ತನ್ನ ಸಹೋದರರರೆಲ್ಲರನ್ನೂ - ಅರ್ಜುನ, ಭೀಮಸೇನ ಮತ್ತು ಮಾದ್ರೀಪುತ್ರ ಯಮಳರನ್ನು – ಕರೆಯಿಸಿ ಕಾಲೋಚಿತವಾದ ಈ ಮಾತುಗಳನ್ನಾಡಿದನು.

“ವೀರರೇ! ಧೀಮಂತ ಮಹಾತ್ಮ ಕೃಷ್ಣನು ಕುರುಗಳ ಹಿತಕಾಮ ಮತ್ತು ಸೌಹಾರ್ದತೆಗಳಿಂದ ಹೇಳಿದ ಈ

ಮಾತುಗಳನ್ನು ನಾವು ಕೇಳಿದೆವು. ಸುಹೃದಯರ ಅಭ್ಯುದಯವನ್ನೇ ಬಯಸುವ ಮಹಾ ತಪೋವೃದ್ಧ ಧರ್ಮಶೀಲ ಗುರು ಅದ್ಭುತಕರ್ಮಿ ವ್ಯಾಸ, ಮಹಾಪ್ರಾಜ್ಞ ಬೀಷ್ಮ ಮತ್ತು ಧೀಮಂತ ಗೋವಿಂದ ಇವರು ನೀಡಿರುವ ಸಲಹೆಗಳನ್ನು ಸ್ಮರಿಸಿ, ಅವುಗಳನ್ನು ಕಾರ್ಯರೂಪದಲ್ಲಿ ತರಲು ಇಚ್ಛಿಸಿದ್ದೇನೆ. ಅವರು ನೀಡಿದ ಸಲಹೆಗಳೆಲ್ಲವೂ ನಮಗೆ ಭವಿಷ್ಯ-ವರ್ತಮಾನಗಳೆರಡರಲ್ಲೂ ಹಿತವನ್ನೇ ಉಂಟುಮಾಡುತ್ತವೆ. ಬ್ರಹ್ಮವಾದಿ ವ್ಯಾಸನು ಹೇಳಿದಂತೆ ಮಾಡುವುದರಲ್ಲಿ ನಮ್ಮ ಕಲ್ಯಾಣವಿದೆ. ಈ ಸಮಯದಲ್ಲಿ ಭೂಮಂಡಲದಲ್ಲಿರುವ ಎಲ್ಲ ರಾಜ್ಯಗಳೂ ಐಶ್ವರ್ಯರಹಿತವಾಗಿವೆ. ಆದುದರಿಂದ ವ್ಯಾಸನು ಮರುತ್ತನ ಬಹು ಧನದ ಕುರಿತಾಗಿ ಹೇಳಿದ್ದನು. ನೀವೆಲ್ಲರೂ ಮರುತ್ತನು ಇಟ್ಟಿರುವ ಐಶ್ವರ್ಯವು ಸಾಕೆಂದು ಮತ್ತು ಅದನ್ನು ತರುವ ಸಾಮರ್ಥ್ಯವಿರುವುದೆಂದು ತಿಳಿದರೆ ಅದನ್ನು ನಾವು ತರೋಣ. ಭೀಮ! ಈ ವಿಷಯದಲ್ಲಿ ನಿನ್ನ ಅಭಿಪ್ರಾಯವೇನು?”

ನೃಪತಿಯು ಹೀಗೆ ಹೇಳಲು ಭೀಮಸೇನನು ಕೈಮುಗಿದು ನೃಪಶ್ರೇಷ್ಠನಿಗೆ ಇಂತೆಂದನು:

“ಮಹಾಬಾಹೋ! ವ್ಯಾಸನು ಹೇಳಿದ ವಿತ್ತವನ್ನು ತರುವುದರ ಕುರಿತಾಗಿ ನೀನು ಹೇಳಿದ ಮಾತುಗಳು ನನಗೆ ರುಚಿಸಿವೆ. ಹುಗಿದಿಟ್ಟಿರುವ ಆ ಧನವನ್ನು ಪಡೆದುಕೊಂಡುದೇ ಆದರೆ ಕಾರ್ಯವು ಆದಂತೆಯೇ ಎಂದು ನನ್ನ ಅಭಿಪ್ರಾಯ. ಮಹಾತ್ಮ ಗಿರೀಶನಿಗೆ ಶಿರಸಾ ನಮಸ್ಕರಿಸಿ ನಾವು ಆ ಧನವನ್ನು ತರೋಣ. ನಿನಗೆ ಮಂಗಳವಾಗಲಿ! ಕಪರ್ದಿನಿಯನ್ನು ಅರ್ಚಿಸು. ಮಾತು-ಮನಸ್ಸು-ಕ್ರಿಯೆಗಳ ಮೂಲಕ ಆ ವಿಭು ದೇವದೇವೇಶನನ್ನೂ ಅವನ ಅನುಚರರನ್ನೂ ಪ್ರಸನ್ನಗೊಳಿಸಿ ನಾವು ಆ ಧನವನ್ನು ನಮ್ಮದಾಗಿಸಿಕೊಳ್ಳೋಣ. ವೃಷಭಧ್ವಜನನ್ನು ಪ್ರಸನ್ನಗೊಳಿಸಿದರೆ ಆ ದ್ರವ್ಯವನ್ನು ರಕ್ಷಿಸುತ್ತಿರುವ ಅವನ ರೌದ್ರದರ್ಶನ ಕಿಂಕರರೂ ನಮ್ಮ ವಶರಾಗುತ್ತಾರೆ.”

ಭೀಮನಾಡಿದ ಆ ಮಾತುಗಳನ್ನು ಕೇಳಿ ರಾಜಾ ಧರ್ಮಾತ್ಮಜನು ಅತೀವ ಹರ್ಷಿತನಾದನು. ಅರ್ಜುನ ಪ್ರಮುಖಾದಿಗಳೂ ಕೂಡ ಸಂತೋಷದಿಂದ ಹಾಗೆಯೇ ಆಗಲೆಂದು ಅನುಮೋದಿಸಿದರು. ಪಾಂಡವರೆಲ್ಲರೂ ಆ ರತ್ನಗಳನ್ನು ತರಲು ನಿಶ್ಚಯಿಸಿ ಶುಭನಕ್ಷತ್ರದ ಶುಭದಿನದಲ್ಲಿ ಸೇನೆಗಳಿಗೆ ಸಜ್ಜಾಗುವಂತೆ ಆಜ್ಞಾಪಿಸಿದರು. ಆಗ

ಪಾಂಡುಸುತರು ಎಲ್ಲವಕ್ಕೂ ಮೊದಲು ಸುರಶ್ರೇಷ್ಠ ಮಹೇಶ್ವರನನ್ನು ಅರ್ಚಿಸಿ ಬ್ರಾಹ್ಮಣರ ಸ್ವಸ್ತಿವಾಚನಗಳೊಂದಿಗೆ ಹೊರಟರು. ಅವರು ಮಹಾತ್ಮ ಮಹೇಶ್ವರನನ್ನು ಮೋದಕ, ಪಾಯಸ, ಮಾಂಸಪೂಪಗಳಿಂದ ತೃಪ್ತಿಪಡಿಸಿ ಅವನ ಆಶೀರ್ವಾದವನ್ನು ಪಡೆದು ಅತ್ಯಂತ ಸಂತೋಷದಿಂದ ಪ್ರಯಾಣಿಸಿದರು. ಅವರು ಹೊರಟಾಗ ಪ್ರಹೃಷ್ಟಮನಸ್ಕರಾದ ದ್ವಿಜಾಗ್ರರೂ ನಾಗರೀಕರೂ ಅವರಿಗೆ ಶುಭ-ಮಂಗಲಗಳನ್ನು ಕೋರಿದರು. ಅಗ್ನಿಸಹಿತ ಬ್ರಾಹ್ಮಣರನ್ನು ಪ್ರದಕ್ಷಿಣೆಮಾಡಿ ಶಿರಬಾಗಿ ನಮಸ್ಕರಿಸಿ ಆ ಪಾಂಡುನಂದನರು ಹೊರಟರು. ಪುತ್ರಶೋಕದಿಂದ ಬಳಲುತ್ತಿದ್ದ ರಾಜಾ ಧೃತರಾಷ್ಟ್ರ, ಅವನ ಪತ್ನಿ ಮತ್ತು ಪೃಥುಲಲೋಚನೆ ಪೃಥೆಯ ಅನುಜ್ಞೆಯನ್ನು ಅವರು ಪಡೆದಿದ್ದರು. ಧೃತರಾಷ್ಟ್ರನ ಮಗ ಕೌರವ್ಯ ಯುಯುತ್ಸುವನ್ನು ರಾಜ್ಯದಲ್ಲಿರಿಸಿ, ಪೌರರೂ, ಮನೀಷಿಗಳೂ ಮತ್ತು ಬ್ರಾಹ್ಮಣರೂ ಗೌರವಿಸುತ್ತಿರಲು ಅವರು ಪ್ರಯಾಣಮಾಡಿದರು.

ಅನಂತರ ಸಂತೋಷದಿಂದ ಅವರು ಹರ್ಷಿತ ನರ-ವಾಹನಗಳೊಂದಿಗೆ ಮಹಾ ರಥಘೋಷಗಳಿಂದ ಭೂಮಿಯನ್ನು ಮೊಳಗಿಸುತ್ತಾ ಪ್ರಯಾಣಿಸಿದರು. ಸೂತ-ಮಾಗಧ-ಬಂದಿಗಳು ಸ್ತುತಿಗಳಿಂದ ಪ್ರಶಂಸಿಸುತ್ತಿರಲು ಪಾಂಡವರು ಆದಿತ್ಯರು ತಮ್ಮ ಕಿರಣಗಳಿಂದ

ಪ್ರಕಾಶಿಸುವಂತೆ ತಮ್ಮ ಸೈನ್ಯಗಳಿಂದ ಆವೃತರಾಗಿ ಪ್ರಕಾಶಿಸುತ್ತಿದ್ದರು. ನೆತ್ತಿಯ ಮೇಲೆ ಬೆಳ್ಗೊಡೆಯನ್ನು ಧರಿಸಿದ್ದ ಯುಧಿಷ್ಠಿರನು ಆಗ ಹುಣ್ಣಿಮೆಯಂದು ಬೆಳದಿಂಗಳಿನಿಂದ ಆವೃತನಾದ ಚಂದ್ರನಂತೆಯೇ ಶೋಭಿಸುತ್ತಿದ್ದನು. ಮಾರ್ಗದಲ್ಲಿ ಆ ಪುರುಷರ್ಷಭ ಪಾಂಡವನು ಪ್ರಹೃಷ್ಟ ಜನರು ನ್ಯಾಯೋಚಿತವಾಗಿ ಮಾಡುತ್ತಿದ್ದ ಜಯಕಾರ-ಆಶೀರ್ವಾದಗಳನ್ನು ಯಥಾವತ್ತಾಗಿ ಸ್ವೀಕರಿಸಿದನು. ರಾಜನನ್ನು ಅನುಸರಿಸಿ ಹೋಗುತ್ತಿದ್ದ ಸೈನಿಕರ ಹಲಾಹಲ ಶಬ್ಧವು ಆಕಾಶವನ್ನು ಸ್ತಬ್ಧಗೊಳಿಸುತ್ತಿತ್ತು. ವನ-ಉಪವನ-ನದಿ-ಸರೋವರಗಳನ್ನು ದಾಟಿ ಮಹಾರಾಜನು ಗಿರಿಯನ್ನು ತಲುಪಿದನು. ಯಾವ ಪ್ರದೇಶದಲ್ಲಿ ಆ ಉತ್ತಮ ದ್ರವ್ಯವಿತ್ತೋ ಅಲ್ಲಿ ಶುಭಕರ ಸಮತಟ್ಟು ಪ್ರದೇಶದಲ್ಲಿ ರಾಜಾ ಪಾಂಡವನು ತಪಸ್ಸು-ವಿದ್ಯೆ-ಇಂದ್ರಿಯನಿಗ್ರಹಗಳಿಂದ ಯುಕ್ತರಾದ ಬ್ರಾಹ್ಮಣರನ್ನೂ ವೇದವೇದಾಂಗಪಾರಗ ಪುರೋಹಿತನನ್ನೂ ಮುಂದೆ ಮಾಡಿಕೊಂಡು ಸೈನಿಕರೊಂದಿಗೆ ಬಿಡಾರಹೂಡಿದನು. ಪುರೋಹಿತ ಸಹಿತ ಬ್ರಾಹ್ಮಣರು ಮೊದಲು ಶಾಂತಿಕರ್ಮಗಳನ್ನು ಮಾಡಿ ಯಥಾನ್ಯಾಯವಾಗಿ ರಾಜಾ ಯುಧಿಷ್ಠಿರನ ಬಿಡಾರವನ್ನು ಸುತ್ತುವರೆದು ಉಳಿದುಕೊಂಡರು. ಯಥಾವಿಧಿಯಾಗಿ ರಾಜನನ್ನೂ ಅಮಾತ್ಯರನ್ನೂ ಮಧ್ಯದಲ್ಲಿರಿಸಿ ದ್ವಿಜರು ಆರು ಮಾರ್ಗಗಳಲ್ಲಿ ಒಂಭತ್ತು ನಿವೇಶನಗಳ

ಗುಂಪುಗಳನ್ನು ರಚಿಸಿದರು. ಮದಿಸಿದ ಆನೆಗಳಿಗೂ ಯಥಾವಿಧಿಯಾಗಿ ನಿವೇಶನಗಳನ್ನು ನಿರ್ಮಿಸಿ ರಾಜೇಂದ್ರನು ಬ್ರಾಹ್ಮಣರಿಗೆ ಇಂತೆಂದನು:

> "ದ್ವಿಜಶ್ರೇಷ್ಠರೇ! ಈ ಕಾರ್ಯವನ್ನು ಯಾವ ಶುಭ ನಕ್ಷತ್ರ-ದಿನದಲ್ಲಿ ಮಾಡಬೇಕೆಂದು ನೀವು ಅಭಿಪ್ರಾಯಪಡುತ್ತೀರೋ ಆಗಲೇ ಮಾಡಬೇಕು. ಇಲ್ಲಿಯೇ ಹೆಚ್ಚು ಸಮಯ ಉಳಿಯುವಂತಾಗಿ ನಮ್ಮ ಕಾಲವು ವ್ಯರ್ಥವಾಗದ ರೀತಿಯಲ್ಲಿ ನಂತರದ ಕರ್ಮಗಳನ್ನು ಮಾಡಬೇಕು."

ರಾಜನ ಆ ಮಾತನ್ನು ಕೇಳಿದ ಪುರೋಹಿತನೊಡಗೂಡಿದ ಬ್ರಾಹ್ಮಣರು ಹೃಷ್ಟರಾಗಿ ಧರ್ಮರಾಜನ ಪ್ರಿಯವನ್ನೇ ಬಯಸಿ ಈ ಮಾತುಗಳನ್ನಾಡಿದರು:

> "ರಾಜನ್! ಇಂದೇ ಪವಿತ್ರ ನಕ್ಷತ್ರ ಮತ್ತು ಪುಣ್ಯ ದಿನವಾಗಿದೆ. ಆದುದರಿಂದ ಇಂದಿನಿಂದಲೇ ನಾವು ಶ್ರೇಷ್ಠತಮ ಕ್ರಿಯೆಗಳನ್ನು ಮಾಡಲು ಪ್ರಯತ್ನಿಸುತ್ತೇವೆ. ಇಂದು ನಾವು ಕೇವಲ ನೀರನ್ನು ಕುಡಿಯುತ್ತೇವೆ. ನೀನೂ ಕೂಡ ಇಂದು ಉಪವಾಸದಿಂದಿರಬೇಕು."

ದ್ವಿಜಸತ್ತಮರ ಆ ಮಾತನ್ನು ಕೇಳಿ ನರೇಂದ್ರರು

ಉಪವಾಸದಲ್ಲಿದ್ದುಕೊಂಡು ದರ್ಭೆಯ ಹಾಸಿನ ಮೇಲೆ ಮಲಗಿ ಆ ರಾತ್ರಿಯನ್ನು ಕಳೆದರು. ಆಗ ಅವರು ಯಜ್ಞದಲ್ಲಿ ಪ್ರಜ್ವಲಿಸುವ ಹವ್ಯವಾಹನರಂತೆಯೇ ಕಾಣುತ್ತಿದ್ದರು. ವಿಪ್ರರ ಸುಮಧುರ ಮಾತುಗಳನ್ನು ಕೇಳುತ್ತಲೇ ಮಹಾತ್ಮರಿಗೆ ಆ ರಾತ್ರಿಯು ಕಳೆದು ಹೋಯಿತು. ನಿರ್ಮಲ ಪ್ರಭಾತವಾಗಲು ದ್ವಿಜರ್ಷಭರು ನರಾಧಿಪ ಧರ್ಮಸುತನಿಗೆ ಈ ಮಾತುಗಳನ್ನಾಡಿದರು:

> "ನೃಪತೇ! ಇಂದು ಮೊದಲು ಮಹಾತ್ಮ ತ್ರ್ಯಂಬಕನಿಗೆ ಬಲಿಯನ್ನು ಸಮರ್ಪಿಸು. ಇದರ ನಂತರ ನಮ್ಮ ಕಾರ್ಯಸಿದ್ಧಿಗಾಗಿ ಪ್ರಯತ್ನಿಸೋಣ."

ಬ್ರಾಹ್ಮಣರ ಆ ಮಾತನ್ನು ಕೇಳಿ ಯುಧಿಷ್ಠಿರನು ಯಥಾನ್ಯಾಯವಾಗಿ ಗಿರೀಶನಿಗೆ ಪೂಜೆ-ಬಲಿಗಳನ್ನು ಅರ್ಪಿಸಿದನು. ಪುರೋಹಿತರು ವಿಧಿಪೂರ್ವಕವಾಗಿ ಸಂಸ್ಕರಿಸಿದ ಅಗ್ನಿಯನ್ನು ತುಪ್ಪದಿಂದ ತೃಪ್ತಿಗೊಳಿಸಿ, ಮಂತ್ರಪೂರ್ವಕವಾಗಿ ಚರುವನ್ನು ಸಿದ್ಧಗೊಳಿಸಿ ತಂದರು. ವೇದಪಾರಂಗತ ದ್ವಿಜರು ಮಂತ್ರಪೂತ ಪುಷ್ಪಗಳನ್ನು ಹಿಡಿದು ಮೋದಕ-ಪಾಯಸ-ಮಾಂಸಗಳಿಂದ, ಉಚ್ಛ್ವಧ್ವನಿಯ ಮಂತ್ರಗಳಿಂದ, ಶಿವನಿಗೆ ಪ್ರಿಯವಾದ ಎಲ್ಲ ವಿಚಿತ್ರ ಪುಷ್ಪ-ಅರಳುಗಳಿಂದ ಬಲಿಯನ್ನು ಸಮರ್ಪಿಸಿದರು. ಅನಂತರ ಶಿವನ

ಕಿಂಕರರಿಗೆ ಉತ್ತಮ ಬಲಿಯನ್ನಿತ್ತರು. ಯಕ್ಷೇಂದ್ರ ಕುಬೇರನಿಗೆ, ಮಣಿಭದ್ರನಿಗೆ ಮತ್ತು ಹಾಗೆಯೇ ಇತರ ಯಕ್ಷ-ಭೂತಾಧಿಪತಿಗಳಿಗೆ ಎಳ್ಳನ್ನದಿಂದಲೂ, ಮಾಂಸದಿಂದಲೂ, ಎಳ್ಳಿನಿಂದ ಕೂಡಿದ ನೀರಿನಿಂದಲೂ ಬಲಿಯನ್ನು ಅರ್ಪಿಸಿದರು. ದೇವದೇವನ ಆ ಸ್ಥಾನವು ಅತೀವವಾಗಿ ಶೋಭಿಸುತ್ತಿತ್ತು. ರುದ್ರನ ಮತ್ತು ಅವನ ಗಣಗಳೆಲ್ಲರ ಪೂಜೆಯನ್ನು ಮಾಡಿ ನೃಪ ಯುಧಿಷ್ಠಿರನು ವ್ಯಾಸನನ್ನು ಮುಂದಿರಿಸಿಕೊಂಡು ರತ್ನನಿಧಿಯ ಕಡೆ ನಡೆದನು. ವಿಚಿತ್ರ ಪುಷ್ಪಗಳಿಂದ, ಅಪೂಪಗಳಿಂದ ಮತ್ತು ಎಳ್ಳನ್ನದಿಂದ ಧನಾಧ್ಯಕ್ಷನನ್ನೂ, ಶಂಖಗಳೇ ಮೊದಲಾದ ನಿಧಿಗಳನ್ನೂ, ಸರ್ವ ನಿಧಿಪಾಲಕರನ್ನೂ ನಮಸ್ಕರಿಸಿ ಪೂಜಿಸಿ, ದ್ವಿಜಾಗ್ರರನ್ನೂ ಅರ್ಚಿಸಿ, ಅವರ ಸ್ವಸ್ತಿವಾಚನ-ಪುಣ್ಯಾಹಘೋಷಗಳೊಂದಿಗೆ, ತೇಜೋನ್ವಿತನಾಗಿ ವೀರ್ಯವಾನ್ ಕುರುಶ್ರೇಷ್ಠ ಯುಧಿಷ್ಠಿರನು ಪ್ರೀತಮನಸ್ಕನಾಗಿ ಆ ನಿಧಿಯನ್ನು ಅಗೆಯತೊಡಗಿದನು. ಆಗ ಧರ್ಮರಾಜ ಯುಧಿಷ್ಠಿರನು ಸಹಸ್ರಾರು ಬಹು ಆಕಾರಗಳ ಮನೋಹರ ದೊಡ್ಡ ಮತ್ತು ಸಣ್ಣ ಪಾತ್ರೆಗಳನ್ನೂ, ತಂಬಿಗೆಗಳನ್ನೂ, ಸುವರ್ಣಮಯ ಕಡಾಯಿ-ಕಲಶ-ಶರಾವೆಗಳನ್ನೂ ಮೇಲೆತ್ತಿದನು,  ರಕ್ಷಣೆಗಾಗಿ ಅವುಗಳನ್ನು ಮಹಾ ಸಂದೂಕಗಳಲ್ಲಿ ಇಟ್ಟರು. ಅಂಥಹ ಕೆಲವು ಸಂದೂಕಗಳನ್ನು ಮರದ ದೊಣ್ಣೆಯ

ಎರಡೂ ತುದಿಗಳಿಗೆ ಕಟ್ಟಿ ಎತ್ತಿ ತೆಗೆಯುತ್ತಿದ್ದರು. ಅವುಗಳನ್ನು ಕೊಂಡೊಯ್ಯಲು ಪಾಂಡುಪುತ್ರನ ಅರವತ್ತು ಲಕ್ಷ ಒಂಟೆಗಳೂ, ಒಂದು ಕೋಟಿ ಎಪ್ಪತ್ತು ಲಕ್ಷ ಕುದುರೆಗಳೂ ಅಲ್ಲಿ ಸಿದ್ಧವಾಗಿದ್ದವು. ಒಂದು ಲಕ್ಷ ಆನೆಗಳೂ, ಒಂದು ಲಕ್ಷ ಬಂಡಿಗಳೂ, ಒಂದು ಲಕ್ಷ ರಥಗಳೂ, ಒಂದು ಲಕ್ಷ ಹೆಣ್ಣಾನೆಗಳೂ, ಮತ್ತು ಲೆಕ್ಕವಿಲ್ಲದಷ್ಟು ಕತ್ತೆಗಳೂ, ಮನುಷ್ಯರೂ ಅಲ್ಲಿದ್ದರು. ಆಗ ಯುಧಿಷ್ಠಿರನಿಗೆ ದೊರಕಿದ ಆ ವಿತ್ತದ ಪ್ರಮಾಣವು ೧೬ ಕೋಟಿ ೮ ಲಕ್ಷ ೨೪ ಸಾವಿರ ಭಾರ ಅಳತೆಯಾಗಿತ್ತು. ಈ ದ್ರವ್ಯಗಳನ್ನು ಪಡೆದುಕೊಂಡು ಪಾಂಡವನು ಪುನಃ ಮಹಾದೇವನನ್ನು ಅರ್ಚಿಸಿ, ಮರಳಿ ನಾಗಾಹ್ವಯ ಪುರದ ಕಡೆ ಪ್ರಯಾಣಿಸಿದನು. ದ್ವೈಪಾಯನನ ಅನುಮತಿಯನ್ನು ಪಡೆದು ಪುರೋಹಿತನನ್ನು ಮುಂದಿರಿಸಿಕೊಂಡು ಆ ಪುರುಷರ್ಷಭನು ಪ್ರತಿ ಗಾವುದ ದೂರದಲ್ಲಿಯೂ ವಿಶ್ರಾಂತಿಗಾಗಿ ಬೀಡು ಬಿಡುತ್ತಿದ್ದನು. ದ್ರವ್ಯಧನದ ಭಾರದಿಂದ ಪೀಡಿತರಾಗಿದ್ದರೂ ಆ ಮಹಾ ಸೇನೆಯು ಕುರೂದ್ವಹರನ್ನು ಹರ್ಷಗೊಳಿಸುತ್ತಾ ಪುರಾಭಿಮುಖವಾಗಿ ಪ್ರಯಾಣಬೆಳೆಸಿತು.

ಅದೇ ಸಮಯದಲ್ಲಿ ವೀರ್ಯವಾನ್ ವಾಸುದೇವನೂ ಕೂಡ ವೃಷ್ಣಿಗಳೊಂದಿಗೆ ವಾರಣಸಾಹ್ವಯ ಪುರಿಗೆ ಆಗಮಿಸಿದನು. ಧರ್ಮಪುತ್ರನು ಯಾವ ಸಮಯದಲ್ಲಿ ಅಶ್ವಮೇಧವು ನಡೆಯುತ್ತದೆ

ಎಂದು ಹೇಳಿದ್ದನೋ ಅದನ್ನು ತಿಳಿದುಕೊಂಡೇ ಪುರುಷರ್ಷಭ ಕೃಷ್ಣನು ತನ್ನ ಪುರಿ ದ್ವಾರಕೆಗೆ ತೆರಳಿದ್ದನು. ಈಗ ಅವನು ರುಕ್ಮಿಣಿಯ ಮಗ ಪ್ರದ್ಯುಮ್ನ, ಯುಯುಧಾನ ಸಾತ್ಯಕಿ, ಚಾರುದೇಷ್ಣ, ಸಾಂಬ, ಗದ, ಕೃತವರ್ಮ, ಸಾರಣ, ವೀರ ನಿಶಠ ಮತ್ತು ಉಲ್ಮುಕರೊಡನೆ ಬಲದೇವನನ್ನು ಮುಂದೆಮಾಡಿಕೊಂಡು ಸುಭದ್ರೆಯ ಸಹಿತ ಆಗಮಿಸಿದನು. ದ್ರೌಪದೀ, ಉತ್ತರಾ, ಹಾಗೂ ಪೃಥಾ ಕುಂತಿಯನ್ನು ನೋಡಲೋಸುಗ ಮತ್ತು ಪತಿಗಳನ್ನು ಕಳೆದುಕೊಂಡ ಕ್ಷತ್ರಿಯ ಸ್ತ್ರೀಯರನ್ನು ಸಮಾಧಾನಗೊಳಿಸಲು ಅವನು ಆಗಮಿಸಿದನು. ಅವರು ಆಗಮಿಸಿದುದನ್ನು ನೋಡುತ್ತಲೇ ಮಹೀಪತಿ ಧೃತರಾಷ್ಟ್ರ ಮತ್ತು ಮಹಾಮನಸ್ವಿ ವಿದುರರು ಅವರನ್ನು ಯಥಾನ್ಯಾಯವಾಗಿ ಸ್ವಾಗತಿಸಿದರು. ವಿದುರ ಮತ್ತು ಯುಯುತ್ಸುವುನಿಂದ ಸತ್ಕೃತನಾದ ಪುರುಷರ್ಷಭ ಮಹಾತೇಜಸ್ವಿ ಕೃಷ್ಣನು ಅಲ್ಲಿಯೇ ಸ್ವಲ್ಪ ಸಮಯ ಉಳಿದುಕೊಂಡಿದ್ದನು. ಆ ವೃಷ್ಣಿವೀರರು ಅಲ್ಲಿ ಉಳಿದುಕೊಂಡಿರುವಾಗಲೇ ಜನಮೇಜಯನ ತಂದೆ ಪರವೀರಹ ಪರಿಕ್ಷಿತನು ಹುಟ್ಟಿದನು. ಬ್ರಹ್ಮಾಸ್ತ್ರದಿಂದ ಪೀಡಿತನಾಗಿದ್ದ ಆ ರಾಜನು ಶವದಂತೆ ನಿಶ್ಚೇಷ್ಟನಾಗಿ ಹುಟ್ಟಿ, ಎಲ್ಲರ ಹರ್ಷ-ಶೋಕಗಳನ್ನು ಹೆಚ್ಚಿಸಿದನು. ಅವನ ಜನನದಿಂದ ಹರ್ಷಗೊಂಡ ಜನರ

ಸಿಂಹನಾದವು ಎಲ್ಲ ದಿಕ್ಕುಗಳಲ್ಲಿಯೂ ವ್ಯಾಪಿಸಿತು. ಮರುಕ್ಷಣದಲ್ಲಿಯೇ ಪುನಃ ಅದು ಶಾಂತವಾಗಿಬಿಟ್ಟಿತು. ಆಗ ಅತಿ ಅವಸರದಿಂದ ಇಂದ್ರಿಯ-ಮನಸ್ಸುಗಳಲ್ಲಿ ವ್ಯಥಿತನಾಗಿದ್ದ ಕೃಷ್ಣನು ಸಾತ್ಯಕಿಯೊಡನೆ ಅಂತಃಪುರವನ್ನು ಪ್ರವೇಶಿಸಿದನು. ಅವಸರದಲ್ಲಿ ಬರುತ್ತಿದ್ದ ಕೃಷ್ಣನನ್ನು ನೋಡಿ ಅವನ ಸೋದರತ್ತೆ ಕುಂತಿಯು ವಾಸುದೇವನಿಗೆ "ಓಡಿ ಹೋಗು!" ಎಂದು ಪುನಃ ಪುನಃ ಕೂಗಿಕೊಳ್ಳುತ್ತಿದ್ದಳು. ಅವಳ ಹಿಂದೆ ದ್ರೌಪದಿ, ಯಶಸ್ವಿನೀ ಸುಭದ್ರೆ ಮತ್ತು ಬಾಂಧವ ಸ್ತ್ರೀಯರು ಕರುಣಾಜನಕವಾಗಿ ರೋದಿಸುತ್ತಿದ್ದರು.

ಆಗ ರಾಜಸುತೆ ಕುಂತಿಯು ಕೃಷ್ಣನ ಬಳಿಸಾರಿ ಕಣ್ಣೀರುಸುರಿಸುತ್ತಾ ಗದ್ಗದ ಧ್ವನಿಯಲ್ಲಿ ಹೇಳಿದಳು:

> "ವಾಸುದೇವ! ನಿನ್ನಿಂದಾಗಿ ದೇವಕಿಯು ಉತ್ತಮ ಪುತ್ರವತಿಯೆನಿಸಿಕೊಂಡಳು! ನೀನೇ ನಮಗೆ ಗತಿ, ಆಧಾರಭೂತ. ಈ ಕುಲದ ರಕ್ಷಣೆಯೂ ನಿನ್ನ ಅಧೀನದಲ್ಲಿದೆ. ನಿನ್ನ ಸೋದರಳಿಯನ ಮಗನಾದ ಇವನು ಅಶ್ವತ್ಥಾಮನಿಂದ ಹತನಾಗಿ ಹುಟ್ಟಿದ್ದಾನೆ. ಇವನನ್ನು ಬದುಕಿಸು! ಅಶ್ವತ್ಥಾಮನು ಐಷೀಕವನ್ನು ಬ್ರಹ್ಮಾಸ್ತ್ರವನ್ನಾಗಿ ಅಭಿಮಂತ್ರಿಸಿ ಪ್ರಯೋಗಿಸಿದಾಗ "ಸತ್ತು ಹುಟ್ಟಿದವನನ್ನು ನಾನು

ಬದುಕಿಸುತ್ತೇನೆ” ಎಂದು ನೀನು ಪ್ರತಿಜ್ಞೆಯನ್ನು ಮಾಡಿದ್ದೆ. ಹಾಗೆಯೇ ಇವನು ಮೃತನಾಗಿಯೇ ಹುಟ್ಟಿದ್ದಾನೆ ನೋಡು! ಉತ್ತರೆ, ಸುಭದ್ರೆ, ದ್ರೌಪದೀ, ನಾನು, ಧರ್ಮಪುತ್ರ, ಭೀಮ, ಫಲ್ಗುನ, ನಕುಲ ಮತ್ತು ಸಹದೇವರನ್ನು ನೋಡು! ನಮ್ಮೆಲ್ಲರನ್ನು ನೀನು ಈ ದುಃಖದಿಂದ ಪಾರುಮಾಡಬೇಕು! ಪಾಂಡವರ ಮತ್ತು ನನ್ನ ಪ್ರಾಣಗಳೂ ಹಾಗೆಯೇ ಪಾಂಡು ಮತ್ತು ನನ್ನ ಮಾವನವರ ಪಿಂಡಗಳೂ ಇವನನ್ನೇ ಅವಲಂಬಿಸಿವೆ. ನಿನಗೆ ಮಂಗಳವಾಗಲಿ! ಇಂದು ನಿನ್ನ ಪ್ರಿಯನಾಗಿದ್ದ, ನಿನ್ನಂತೆಯೇ ಇದ್ದ, ಮತ್ತು ಮೃತನಾಗಿರುವ ಅಭಿಮನ್ಯುವಿನ ಸಂತೋಷವನ್ನು ಹೆಚ್ಚಿಸು! ನಿಸ್ಸಂಶಯವಾಗಿಯೂ ನಿನಗೆ ಪ್ರಿಯನಾದ ಅಭಿಮನ್ಯುವು ಪ್ರೀತಿಯಿಂದ ಹೇಳುತ್ತಿದ್ದ ಮಾತುಗಳನ್ನು ಉತ್ತರೆಯು ನನ್ನೊಡನೆ ಹೇಳಿಕೊಳ್ಳುತ್ತಿದ್ದಳು. ಹಿಂದೆ ಅರ್ಜುನನ ಮಗನು ವೈರಾಟೀ ಉತ್ತರೆಯಲ್ಲಿ ಇದನ್ನೇ ಹೇಳುತ್ತಿದ್ದನಲ್ಲವೇ? “ಭದ್ರೇ! ನಿನ್ನ ಮಗನು ನನ್ನ ಸೋದರಮಾವನ ಮನೆಗೆ ಹೋಗುತ್ತಾನೆ. ವೃಷ್ಣಿ-ಅಂಧಕರ ಕುಲಕ್ಕೆ ಹೋಗಿ ಅವನು ಧನುರ್ವೇದ, ವಿಚಿತ್ರ ಅಸ್ತ್ರಗಳು ಮತ್ತು ಸಮಗ್ರ

ನೀತಿಶಾಸ್ತ್ರವನ್ನು ಪಡೆದುಕೊಳ್ಳುತ್ತಾನೆ!" ಪರವೀರಹ ದುರ್ಧರ್ಷ ಸೌಭದ್ರನು ಪ್ರಣಯದಿಂದ ಹೀಗೆ ಹೇಳುತ್ತಿದ್ದನು ಎನ್ನುವುದರಲ್ಲಿ ಸಂಶಯವೇ ಇಲ್ಲ. ನಾವೆಲ್ಲರೂ ನಿನ್ನ ಪಾದಗಳಿಗೆ ನಮಿಸಿ ಯಾಚಿಸಿಕೊಳ್ಳುತ್ತೇವೆ. ಈ ಕುಲದ ಹಿತಕ್ಕಾಗಿ ಉತ್ತಮ ಕಲ್ಯಾಣವನ್ನು ಮಾಡು!"

ವಾರ್ಷ್ಣೇಯನಿಗೆ ಹೀಗೆ ಹೇಳಿ ವಿಶಾಲನೇತ್ರೆ ಪೃಥಾಳು ದುಃಖಾರ್ತಳಾಗಿ ತನ್ನ ಬಾಹುಗಳನ್ನು ಮೇಲೆತ್ತಿಕೊಂಡು ದೊಪ್ಪನೆ ನೆಲದ ಮೇಲೆ ಬಿದ್ದುಬಿಟ್ಟಳು. ಆಗ ಅನ್ಯ ಸ್ತ್ರೀಯರೂ ನೆಲದ ಮೇಲೆ ಬಿದ್ದರು. ಕಣ್ಣೀರಿಡುತ್ತಿದ್ದ ಎಲ್ಲರೂ

"ಅಯ್ಯೋ! ವಾಸುದೇವನ ಅಳಿಯನ ಮಗನು ಮೃತನಾಗಿ ಹುಟ್ಟಿದನಲ್ಲಾ!"

ಎಂದು ಕೂಗಿಕೊಂಡರು. ಅವರೆಲ್ಲರನ್ನೂ ಕೇಳಿದ ಜನಾರ್ದನನು ಆಗ ನೆಲದ ಮೇಲೆ ಬಿದ್ದಿದ್ದ ಕುಂತಿಯನ್ನು ಹಿಡಿದು ಮೇಲೆಬ್ಬಿಸಿ ಸಂತೈಸತೊಡಗಿದನು.

ಪೃಥೆಯನ್ನು ಮೇಲೆಬ್ಬಿಸಿದ ನಂತರ ಸುಭದ್ರೆಯು ತನ್ನ ಅಣ್ಣನನ್ನು ನೋಡಿ ದುಃಖಾರ್ತಳಾಗಿ ಅಳುತ್ತಲೇ ಈ ಮಾತುಗಳನ್ನಾಡಿದಳು:

“ಪುಂಡರೀಕಾಕ್ಷ! ಕುರುವಂಶೀಯರೆಲ್ಲರೂ ಸಂತಾನವಿಲ್ಲದೇ ಕ್ಷಯಿಸುತ್ತಿರಲಾಗಿ ಧೀಮಂತ ಪಾರ್ಥನ ಆಯುಸ್ಸನ್ನೇ ಕಳೆದುಕೊಂಡಿರುವ ಈ ಮೊಮ್ಮಗನನ್ನು ನೋಡು! ದ್ರೋಣಪುತ್ರನು ಭೀಮಸೇನನ ಮೇಲೆ ಪ್ರಯೋಗಿಸಿದ ಇಷೀಕವು ಉತ್ತರೆ, ಅರ್ಜುನ ಮತ್ತು ನನ್ನ ಮೇಲೆ ಬಿದ್ದಿತ್ತು. ಅದು ಪ್ರಜ್ವಲಿಸುತ್ತಾ ನನ್ನ ಹೃದಯದಲ್ಲಿಯೇ ನೆಲೆಸಿಕೊಂಡಿರುವುದರಿಂದ ನನ್ನ ಮಗನ ಮಗನನ್ನು ನಾನು ಕಾಣದಾಗಿದ್ದೇನೆ! ಅಭಿಮನ್ಯುವಿನ ಮಗನು ಮೃತನಾಗಿ ಹುಟ್ಟಿದನೆಂದು ಕೇಳಿ ಧರ್ಮಾತ್ಮ ಧರ್ಮರಾಜ ಯುಧಿಷ್ಠಿರನು ಏನು ಹೇಳುವನು? ಭೀಮಸೇನ, ಅರ್ಜುನ, ಮತ್ತು ಮಾದ್ರವತಿಯ ಮಕ್ಕಳಿರ್ವರೂ ಏನು ಹೇಳುವರು? ದ್ರೋಣಪುತ್ರನು ಪಾಂಡವರ ಎಲ್ಲವನ್ನೂ ಕೊಳ್ಳೆಹೊಡೆದುಬಿಟ್ಟನು! ಅಭಿಮನ್ಯುವು ತನ್ನ ತಂದೆಯರಿಗೆ ಪ್ರಿಯನಾಗಿದ್ದನೆನ್ನುವುದರಲ್ಲಿ ಸಂಶಯವೇ ಇಲ್ಲ. ದ್ರೋಣಪುತ್ರನ ಅಸ್ತ್ರದಿಂದ ಸೋಲಿಸಲ್ಪಟ್ಟ ಅವರು ಇದನ್ನು ಕೇಳಿ ಏನು ಹೇಳುವರು? ಅಭಿಮನ್ಯುವಿನ ಮಗನು ಮೃತನಾಗಿ ಹುಟ್ಟಿರುವುದಕ್ಕಿಂತಲೂ ಮಿಗಿಲಾದ ದುಃಖವು ಯಾವುದು

ತಾನೇ ಇರುವುದು? ಇಂದು ಶಿರಬಾಗಿ ನಮಸ್ಕರಿಸಿ ನಾನು ನಿನ್ನ ಪ್ರಸಾದವನ್ನು ಬೇಡಿಕೊಳ್ಳುತ್ತಿದ್ದೇನೆ. ಪೃಥೆ-ದ್ರೌಪದಿಯರನ್ನೂ ನೋಡು! ದ್ರೋಣಸುತನು ಪಾಂಡವರ ಗರ್ಭಗಳನ್ನು ನಾಶಗೊಳಿಸಲು ಹೊರಟಾಗ ನೀನು ಕ್ರುದ್ಧನಾಗಿ ದ್ರೌಣಿಗೆ ಹೀಗೆ ಹೇಳಿದ್ದೆಯಲ್ಲವೇ? “ಬ್ರಹ್ಮಬಂಧು ನರಾಧಮನೇ! ನಿನ್ನ ಅಪೇಕ್ಷೆಯು ನೆರವೇರದಂತೆ ಮಾಡುತ್ತೇನೆ. ಕಿರೀಟಿಯ ಮಗನ ಮಗನನ್ನು ನಾನು ಬದುಕಿಸುತ್ತೇನೆ!” ನಿನ್ನ ಆ ವಚನವನ್ನು ಕೇಳಿದಾಗಲೇ ನಿನ್ನ ಬಲವೇನೆನ್ನುವುದನ್ನು ನಾನು ಅರಿತುಕೊಂಡೆ. ಅಭಿಮನ್ಯುವಿನ ಮಗನನ್ನು ಬದುಕಿಸಿ ಕರುಣಿಸು! ಒಂದು ವೇಳೆ ನೀನು ಹೇಳಿದ್ದ ಆ ಶುಭವಚನವನ್ನು ಸಫಲಗೊಳಿಸದೇ ಇದ್ದರೆ ನಾನೂ ಕೂಡ ಮೃತಳಾದೆನೆಂದೇ ಭಾವಿಸು! ಅಭಿಮನ್ಯುವಿನ ಸುತನನ್ನು ನೀನು ಇಂದು ಬದುಕಿಸದೇ ಇದ್ದರೆ ಜೀವಿಸಿರುವ ನಿನ್ನಿಂದ ಇನ್ನು ನನಗೇನಾಗಬೇಕಾಗಿದೆ? ಮೋಡವು ಮಳೆಗರೆದು ಸಸ್ಯವನ್ನು ಪುನರ್ಜೀವನಗೊಳಿಸುವಂತೆ ನಿನ್ನ ಕಣ್ಣುಗಳಂಥಹದೇ ಕಣ್ಣುಗಳಿದ್ದ ಅಭಿಮನ್ಯುವಿನ ಈ ಮಗನನ್ನು ಬದುಕಿಸು! ನೀನು ಧರ್ಮಾತ್ಮ. ಸತ್ಯವಂತ ಮತ್ತು

ಸತ್ಯವಿಕ್ರಮ. ನೀನು ನಿನ್ನ ಮಾತನ್ನು ಸತ್ಯವಾಗಿಸಬೇಕು! ನೀನು ಇಚ್ಛಿಸಿದರೆ ಮೃತಗೊಂಡ ಮೂರು ಲೋಕಗಳನ್ನೂ ಬದುಕಿಸಬಲ್ಲೆ! ಹೀಗಿರುವಾಗ ಸತ್ತು ಹುಟ್ಟಿರುವ ನಿನ್ನ ಈ ಅಳಿಯನ ಮಗನನ್ನು ಬದುಕಿಸಲಾರೆಯಾ? ನಿನ್ನ ಪ್ರಭಾವವೇನೆಂದು ತಿಳಿದುಕೊಂಡಿರುವುದರಿಂದಲೇ ನಾನು ನಿನಗೆ ಹೇಳುತ್ತಿದ್ದೇನೆ. ಪಾಂಡುಪುತ್ರರಿಗೆ ಈ ಪರಮ ಅನುಗ್ರಹವನ್ನು ಕರುಣಿಸು! ತಂಗಿಯೆಂದಾದರೂ ಅಥವಾ ಪುತ್ರನನ್ನು ಕಳೆದುಕೊಂಡಿರುವಳೆಂದಾದರೂ ಅಥವಾ ಮರುಕಗೊಂಡು ಬೇಡುತ್ತಿರುವ ನನ್ನ ಮೇಲಿನ ದಯೆಯಿಂದಲಾದರೂ ಇದನ್ನು ನೀನು ಮಾಡಬೇಕು."

ಇದನ್ನು ಕೇಳಿ ದುಃಖಮೂರ್ಚಿತನಾದ ಕೇಶವನು ಅಲ್ಲಿದ್ದ ಜನರನ್ನು ಹರ್ಷಗೊಳಿಸುವನೋ ಎಂಬಂತೆ ಗಟ್ಟಿಯಾಗಿ "ಹಾಗೆಯೇ ಆಗಲಿ!" ಎಂದು ಹೇಳಿದನು. ಬಿಸಿಲಿನಿಂದ ಬಳಲಿದವನಿಗೆ ನೀರನ್ನು ಕೊಟ್ಟು ಸಂತಸಗೊಳಿಸುವಂತೆ ಆ ವಿಭು ಪುರುಷರ್ಷಭನು ತನ್ನ ಆ ವಾಕ್ಯದಿಂದ ಅಲ್ಲಿದ್ದ ಜನರನ್ನು ಸಂತಸಗೊಳಿಸಿದನು. ತಕ್ಷಣವೇ ಅವನು ಯಥಾವಿಧಿಯಾಗಿ ಬಿಳಿಯ ಹೂಗಳಿಂದ ಪೂಜಿಸಿ ಅಲಂಕರಿಸಿದ್ದ ಪರಿಕ್ಷಿತನ ಜನ್ಮಗೃಹವನ್ನು ಪ್ರವೇಶಿಸಿದನು. ಅಲ್ಲಿ ಎಲ್ಲಕಡೆಗಳಲ್ಲಿ

ಜಲಪೂರ್ಣ ಕುಂಭಗಳಿದ್ದವು. ತುಪ್ಪದಲ್ಲಿ ನೆನೆದ ತುಂಬೇಗಿಡದ ಪಂಜುಗಳು ಬೆಳಗುತ್ತಿದ್ದವು. ಸುತ್ತಲೂ ಬಿಳೀಸಾಸಿವೆಯನ್ನು ಚೆಲ್ಲಿದ್ದರು. ಥಳಥಳಿಸುತ್ತಿರುವ ಶುಭ್ರ ಶಸ್ತ್ರಗಳನ್ನು ಇಟ್ಟಿದ್ದರು. ಸುತ್ತಲೂ ಅಗ್ನಿಗಳು ಪ್ರಜ್ವಲಿಸುತ್ತಿದ್ದವು. ಪರಿಚಾರಕ್ಕೆಂದಿದ್ದ ವೃದ್ಧಸ್ತ್ರೀಯರು ಅಲ್ಲಿ ಸೇರಿದ್ದರು. ಅಲ್ಲಿ ದಕ್ಷರೂ ಕುಶಲರೂ ಆಗಿದ್ದ ಚಿಕಿತ್ಸಕರಿದ್ದರು. ಅಲ್ಲಿ ಸುತ್ತಲೂ ರಾಕ್ಷಸರನ್ನು ನಾಶಗೊಳಿಸುವ ವಿಧಿಯನ್ನು ತಿಳಿದಿದ್ದ ಕುಶಲ ಜನರನ್ನೂ, ಇರಿಸಿದ್ದ ದ್ರವ್ಯಗಳನ್ನೂ ಆ ಅಚ್ಯುತ ತೇಜಸ್ವಿಯು ನೋಡಿದನು. ಯಥಾಯುಕ್ತವಾಗಿದ್ದ ನಿನ್ನ ತಂದೆಯ ಜನ್ಮಗೃಹವನ್ನು ನೋಡಿ ಹರ್ಷಗೊಂಡ ಹೃಷೀಕೇಶನು "ಸಾಧು! ಸಾಧು!" ಎಂದನು. ಪ್ರಹೃಷ್ಟವದನನಾಗಿ ವಾರ್ಷ್ಣೇಯನು ಹಾಗೆ ಹೇಳುತ್ತಿರಲು ದ್ರೌಪದಿಯು ಅವಸರದಲ್ಲಿ ವೈರಾಟಿಯಲ್ಲಿಗೆ ಹೋಗಿ ಅವಳಿಗೆ ಈ ಮಾತುಗಳನ್ನಾಡಿದಳು:

> "ಭದ್ರೇ! ಇದೋ ಇಲ್ಲಿ ನೋಡು! ನಿನ್ನ ಮಾವ ಅಚಿಂತ್ಯಾತ್ಮ ಅಪರಾಜಿತ ಪುರಾಣಋಷಿ ಮಧುಸೂದನನು ಬರುತ್ತಿದ್ದಾನೆ!"

ಅವಳ ಮಾತನ್ನು ಕೇಳಿ ಕೃಷ್ಣನನ್ನು ದೇವನೆಂದೇ ಕಾಣುತ್ತಿದ್ದ ದೇವೀ ಉತ್ತರೆಯಾದರೋ ಅಳುವುದನ್ನು ನಿಲ್ಲಿಸಿ, ಕಣ್ಣೀರನ್ನು ಒರೆಸಿಕೊಳ್ಳುತ್ತಾ

ಸೀರೆಯನ್ನು ಸರಿಪಡಿಸಿಕೊಂಡಳು. ಬರುತ್ತಿದ್ದ ಗೋವಿಂದನನ್ನು ನೋಡಿ ಆ ತಪಸ್ವಿನಿಯು ದುಃಖದಿಂದ ಪೀಡಿತವಾಗಿದ್ದ ಹೃದಯದಿಂದ ದೀನಳಾಗಿ ರೋದಿಸಿದಳು:

> "ಪುಂಡರೀಕಾಕ್ಷ! ಜನಾರ್ದನ! ಅಭಿಮನ್ಯು ಮತ್ತು ನಾವಿಬ್ಬರೂ ಸಂತಾನಹೀನರಾಗಿದ್ದುದನ್ನು ನೋಡು! ನಾವಿಬ್ಬರೂ ಹತರಾದರಂತೆಯೇ! ಶಿರಸಾ ನಿನಗೆ ನಮಸ್ಕರಿಸುತ್ತಿದ್ದೇನೆ. ದ್ರೋಣಪುತ್ರನ ಅಸ್ತ್ರದಿಂದ ಸುಟ್ಟುಹೋಗಿರುವ ನನ್ನ ಈ ಮಗನನ್ನು ಬದುಕಿಸು! ಧರ್ಮರಾಜನಾಗಲೀ, ಭೀಮಸೇನನಾಗಲೀ ಅಥವಾ ನೀನಾಗಲೀ "ಈ ಇಷೀಕವು ಅರಿವಿಲ್ಲದ ತಾಯಿಯನ್ನೇ ಕೊಲ್ಲಲಿ!" ಎಂದು ಹೇಳಿಬಿಟ್ಟಿದ್ದರೆ ನಾನೇ ಮರಣ ಹೊಂದುತ್ತಿದ್ದೆ. ಈ ದುಃಸ್ಥಿತಿಯು ಬರುತ್ತಿರಲಿಲ್ಲ! ಗರ್ಭಸ್ಥನಾಗಿದ್ದ ಈ ಬಾಲಕನನ್ನು ಬ್ರಹ್ಮಾಸ್ತ್ರದಿಂದ ಕೊಂದು ಹಿಂಸೆಯನ್ನೆಸಗಿದ ಆ ದುರ್ಬುದ್ಧಿ ದ್ರೌಣಿಗಾದ ಲಾಭವಾದರೂ ಏನು? ಶತ್ರುನಿಬರ್ಹಣ! ನಿನಗೆ ಶಿರಸಾ ವಂದಿಸಿ ಬೇಡಿಕೊಳ್ಳುತ್ತಿದ್ದೇನೆ. ಕರುಣಿಸು. ಒಂದು ವೇಳೆ ಇವನು ಬದುಕದೇ ಇದ್ದರೆ ನಾನು ಪ್ರಾಣಗಳನ್ನು

ತ್ಯಜಿಸುತ್ತೇನೆ! ಇವನಲ್ಲಿಯೇ ನನ್ನ ಅನೇಕ ಉತ್ತಮ ಮನೋರಥಗಳನ್ನು ಇಟ್ಟುಕೊಂಡಿದ್ದೆನು. ದ್ರೋಣಪುತ್ರನಿಂದ ಇವನು ಹತನಾದ ಮೇಲೆ ನಾನೇಕೆ ಜೀವಿಸಿರಲಿ? ಇವನನ್ನು ನನ್ನ ಕಂಕುಳಿನಲ್ಲೆತ್ತಿಕೊಂಡು ಸಂತೋಷದಿಂದ ನಿನಗೆ ನಮಸ್ಕರಿಸಬೇಕೆಂದು ನನ್ನ ಆಸೆಯಾಗಿತ್ತು. ಆದರೆ ಅದು ಈಗ ಮಣ್ಣುಪಾಲಾಯಿತು! ಚಪಲಾಕ್ಷನ ಮಗನು ಮೃತನಾಗಿದ್ದಾನೆ. ಇದರಿಂದಾಗಿ ನನ್ನ ಹೃದಯದಲ್ಲಿದ್ದ ಸರ್ವಮನೋರಥಗಳೂ ವಿಫಲವಾಗಿ ಹೋದವು!! ಆ ಚಪಲಾಕ್ಷನು ನಿನಗೆ ಪ್ರಿಯನಾಗಿದ್ದ ತಾನೇ? ಅವನ ಪುತ್ರನು ಬ್ರಹ್ಮಾಸ್ತ್ರದಿಂದ ಹತನಾಗಿರುವುದನ್ನು ನೋಡು! ಪಾಂಡವರ ಸಂಪತ್ತನ್ನು ತೊರೆದು ಇಂದು ಯಮಸಾದನಕ್ಕೆ ಹೋದ ಇವನೂ ಕೂಡ ಅವನ ತಂದೆಯಂತೆ ಕೃತಘ್ನನೂ ಕ್ರೂರಿಯೂ ಆಗಿದ್ದಾನೆ. "ವೀರ! ಅಭಿಮನ್ಯು! ನೀನೇದರೂ ರಣಾಂಗಣದಲ್ಲಿ ಹತನಾದರೆ ಬೇಗನೆ ನಾನೂ ಕೂಡ ನಿನ್ನನ್ನು ಹಿಂಬಾಲಿಸಿ ಬರುತ್ತೇನೆ!" ಎಂದು ಪ್ರತಿಜ್ಞೆಮಾಡಿದ್ದೆ. ನನ್ನ ಜೀವನದ ಮೇಲಿನ ಆಸೆಯಿಂದ ನಿರ್ದಯಳಾದ ನಾನು ಆ ರೀತಿ ಮಾಡಲಿಲ್ಲ. ಈಗ ನಾನು ಅಲ್ಲಿಗೆ ಹೋದರೆ ಫಾಲ್ಗುನಿ

ಅಭಿಮನ್ಯುವು ಏನು ಹೇಳಿಯಾನು?”

ಪುತ್ರಪ್ರಿಯಳೂ ಶೋಚನೀಯಳು ಆಗಿದ್ದ ತಪಸ್ವಿನೀ ಉತ್ತರೆಯು ಈ ರೀತಿ ಕರುಣಾಜನಕವಾಗಿ ವಿಲಪಿಸುತ್ತಾ ಹುಚ್ಚುಹಿಡಿದವಳಂತೆ ಭೂಮಿಯ ಮೇಲೆ ಬಿದ್ದುಬಿಟ್ಟಳು. ಬಂಧುಗಳನ್ನೂ ಪುತ್ರನನ್ನೂ ಕಳೆದುಕೊಂಡ ಅವಳು ಬಿದ್ದುದನ್ನು ನೋಡಿ ದುಃಖಾರ್ತರಾದ ಕುಂತೀ ಮತ್ತು ಭರತಸ್ತ್ರೀಯರೆಲ್ಲರೂ ಗಟ್ಟಿಯಾಗಿ ಗೋಳಿಟ್ಟರು. ಒಂದು ಮುಹೂರ್ತಕಾಲ ಪಾಂಡವರ ಆ ನಿವೇಶನವು ಆರ್ತಸ್ವರ ಗೋಳಾಟದ ಧ್ವನಿಯಿಂದ ಪ್ರತಿಧ್ವನಿಗೊಂಡು ಅಪ್ರೇಕ್ಷಣೀಯವಾಗಿತ್ತು. ಪುತ್ರಶೋಕದಿಂದ ಪೀಡಿತಳಾಗಿದ್ದ ವೈರಾಟಿಯು ಮುಹೂರ್ತಕಾಲ ಮೂರ್ಛಿತಳಾಗಿಯೇ ಬಿದ್ದಿದ್ದಳು. ಅನಂತರ ಉತ್ತರೆಯು ಎಚ್ಚೆತ್ತು ತನ್ನ ಪುತ್ರನನ್ನು ತೊಡೆಯಮೇಲಿರಿಸಿಕೊಂಡು ಈ ಮಾತುಗಳನ್ನಾಡಿದಳು:

“ಧರ್ಮಜ್ಞನ ಮಗನಾಗಿರುವ ನೀನು ಈಗ ಅಧರ್ಮವನ್ನು ಮಾಡುತ್ತಿದ್ದೀಯೆ ಎಂದು ತಿಳಿಯದವನಾಗಿರುವೆ! ಆದುದರಿಂದಲೇ ನೀನು ವೃಷ್ಣಿಪ್ರವೀರನಿಗೆ ನಮಸ್ಕರಿಸುತ್ತಿಲ್ಲ! ಪುತ್ರ! ಹೋಗಿ ನಿನ್ನ ತಂದೆಗೆ ನನ್ನ ಈ ಮಾತುಗಳನ್ನು ಹೇಳು: “ವೀರ! ಕಾಲವು ಸನ್ನಿಹಿತವಾಗದೇ ಪ್ರಾಣಿಗಳಿಗೆ ಎಂದೂ ಮರಣವುಂಟಾಗುವುದಿಲ್ಲ! ಪತಿಯಾದ ನಿನ್ನಿಂದ ಮತ್ತು ಈಗ

ಈ ಮಗನಿಂದಲೂ ವಿಹೀನಳಾಗಿ ಮೃತಳಾಗಬೇಕಾಗಿದ್ದ ನಾನು ಇನ್ನೂ ಬದುಕಿಯೇ ಇದ್ದೇನಲ್ಲಾ!" ಅಥವಾ ಧರ್ಮರಾಜನ ಅನುಜ್ಞೆಯನ್ನು ಪಡೆದು ತೀಕ್ಷ್ಣ ವಿಷವನ್ನಾದರೂ ಕುಡಿಯುತ್ತೇನೆ ಅಥವಾ ಅಗ್ನಿಯನ್ನಾದರೂ ಪ್ರವೇಶಿಸುತ್ತೇನೆ. ಮಗೂ! ಅಥವಾ ಮರಣವು ಕಷ್ಟಸಾಧ್ಯವೆನಿಸುತ್ತದೆ. ಪತಿ-ಪುತ್ರರನ್ನು ಕಳೆದುಕೊಂಡು ನನ್ನ ಈ ಹೃದಯವು ಸಾವಿರ ಚೂರುಗಳಾಗಿ ಏಕೆ ಒಡೆಯುತ್ತಿಲ್ಲ? ಪುತ್ರ! ಮೇಲೇಳು! ಶೋಕಸಾಗರದಲ್ಲಿ ಮುಳುಗಿ ದುಃಖಿತಳಾಗಿರುವ ಈ ನಿನ್ನ ದೀನ ಆರ್ತ ಮುತ್ತಜ್ಜಿಯನ್ನು ನೋಡು! ವ್ಯಾಧನು ಹೊಡೆದ ಜಿಂಕೆಯಂತೆ ಅತ್ಯಂತ ದುಃಖಾರ್ತರಾಗಿರುವ ಆರ್ಯೆ ಪಾಂಚಾಲೀ, ತಪಸ್ವಿನೀ ಸಾತ್ವತೀ ಮತ್ತು ನನ್ನನ್ನೂ ನೋಡು! ಎದ್ದೇಳು! ಹಿಂದೆ ನಾನು ಚಪಲೇಕ್ಷಣ ಅಭಿಮನ್ಯುವನ್ನು ನೋಡುತ್ತಿದ್ದಂತೆಯೇ ಇರುವ ಧೀಮಂತ ಲೋಕನಾಥ ಪುಂಡರೀಕಪಲಾಕ್ಷನನ್ನು ನೋಡು!"

ಈ ರೀತಿ ರೋದಿಸುತ್ತಾ ಪುನಃ ಬಿದ್ದ ಉತ್ತರೆಯನ್ನು ನೋಡಿ ಆ ಎಲ್ಲ ಸ್ತ್ರೀಯರೂ ಅವಳನ್ನು ಪುನಃ ಎದ್ದು ಕುಳ್ಳಿರಿಸಿದರು. ಮತ್ಸ್ಯಪತಿಯ ಮಗಳು ಮೇಲೆದ್ದು ಧೈರ್ಯತಂದುಕೊಂಡು ಕುಳಿತಲ್ಲಿಂದಲೇ ಪುನಃ

ಪುಂಡರೀಕಾಕ್ಷನಿಗೆ ಕೈಮುಗಿದಳು. ಅವಳ ಆ ವಿಪುಲ ವಿಲಾಪವನ್ನು ಕೇಳಿ ಪುರುಷರ್ಷಭ ಕೃಷ್ಣನು ಆಚಮನ ಮಾಡಿ ಬ್ರಹ್ಮಾಸ್ತ್ರವನ್ನು ಉಪಶಮನಗೊಳಿಸಿದನು. ವಿಶುದ್ಧಾತ್ಮಾ ದಾಶಾರ್ಹ ಅಚ್ಯುತನು ಮಗುವನ್ನು ಜೀವಿತಗೊಳಿಸಲೋಸುಗ ಜಗತ್ತೆಲ್ಲವೂ ಕೇಳುವಂತೆ ಪ್ರತಿಜ್ಞೆಮಾಡಿ ಇಂತೆಂದನು:

> "ಉತ್ತರೇ! ನಾನು ಸುಳ್ಳುಹೇಳುವವನಲ್ಲ. ಇದು ಸತ್ಯವಾಗಿಯೇ ನಡೆಯುತ್ತದೆ. ಸರ್ವದೇಹಿಗಳೂ ನೋಡುತ್ತಿರುವಂತೆಯೇ ನಾನು ಇವನನ್ನು ಬದುಕಿಸುತ್ತೇನೆ! ಈ ಮೊದಲು ನಾನು ಪರಿಹಾಸಕ್ಕಾಗಿಯೂ ಎಂದೂ ಸುಳ್ಳುಹೇಳಿರದೇ ಇದ್ದರೆ ಮತ್ತು ಯುದ್ಧದಿಂದ ಪರಾಙ್ಮುಖನಾಗದೇ ಇದ್ದಿದ್ದರೆ ಇವನು ಬದುಕಲಿ! ನನಗೆ ಧರ್ಮ ಮತ್ತು ಅದರಲ್ಲೂ ವಿಶೇಷವಾಗಿ ಬ್ರಾಹ್ಮಣರು ಪ್ರಿಯರಾಗಿದ್ದಾರೆ ಎಂದಾದರೆ ಅಭಿಮನ್ಯುವಿನ ಈ ಸತ್ತುಹುಟ್ಟಿರುವ ಮಗನು ಜೀವಿತನಾಗಲಿ! ವಿಜಯ ಅರ್ಜುನನಿಗೆ ಎಂದೂ ವಿರೋಧವಾಗಿ ನಾನು ನಡೆದುಕೊಂಡಿದುದು ನೆನಪಿಲ್ಲ. ಆ ಸತ್ಯದಿಂದ ಈ ಮೃತ ಶಿಶುವು ಜೀವಿತಗೊಳ್ಳಲಿ! ಸತ್ಯ-ಧರ್ಮಗಳು ನಿತ್ಯವೂ ನನ್ನಲ್ಲಿ ಹೇಗೆ ಪ್ರತಿಷ್ಠಿತಗೊಂಡಿವೆಯೋ ಹಾಗೆ ಅಭಿಮನ್ಯುವಿನ ಈ

ಮೃತ ಶಿಶುವು ಜೀವಿತನಾಗಲಿ! ಕಂಸ-ಕೇಶಿಯರು ನನ್ನಿಂದ ಧರ್ಮಪೂರ್ವಕವಾಗಿಯೇ ಹತರಾದರೆನ್ನುವ ಆ ಸತ್ಯದಿಂದ ಈ ಬಾಲಕನು ಪುನಃ ಜೀವಿತನಾಗಲಿ!"

ವಾಸುದೇವನು ಹೀಗೆ ಹೇಳಲು ಆ ಬಾಲಕನು ಮೆಲ್ಲ ಮೆಲ್ಲನೇ ಚೇತನಗೊಂಡು ಅವಯವಗಳನ್ನು ಆಡಿಸತೊಡಗಿದನು. ಕೃಷ್ಣನು ಬ್ರಹ್ಮಾಸ್ತ್ರವನ್ನು ಉಪಶಮನಗೊಳಿಸಿದ ಕೂಡಲೇ ಆ ಪ್ರಸೂತಿಗೃಹವು ನಿನ್ನ ತಂದೆಯ ತೇಜಸ್ಸಿನಿಂದ ಬೆಳಗತೊಡಗಿತು. ಆಗ ರಾಕ್ಷಸರೆಲ್ಲರೂ ಆ ಪ್ರಸೂತಿಗೃಹವನ್ನು ಬಿಟ್ಟು ಹೊರಟುಹೋದರು. ಅಂತರಿಕ್ಷದಲ್ಲಿ ಕೂಡ "ಸಾಧು ಕೇಶವ! ಸಾಧು!" ಎಂಬ ಧ್ವನಿಯಾಯಿತು. ಉರಿಯುತ್ತಿದ್ದ ಆ ಅಸ್ತ್ರವೂ ಕೂಡ ಪಿತಾಮಹ ಬ್ರಹ್ಮನ ಬಳಿ ಹೋಯಿತು. ಆಗ ಪರಿಕ್ಷಿತನು ಪುನಃ ಪ್ರಾಣಗಳನ್ನು ಪಡೆದನು. ಆ ಬಾಲಕನು ಯಥೋತ್ಸಾಹದಲ್ಲಿ ಯಥಾಬಲನಾಗಿ ಕಾಲು-ಕೈಗಳನ್ನು ಅಲ್ಲಾಡಿಸತೊಡಗಿದನು. ಆಗ ಅಲ್ಲಿದ್ದ ಭರತಸ್ತ್ರೀಯರು ಅತ್ಯಂತ ಮುದಿತರಾದರು. ಗೋವಿಂದನ ಆಜ್ಞೆಯಂತೆ ಬ್ರಾಹ್ಮಣರಿಂದ ಸ್ವಸ್ತಿವಾಚನಗಳನ್ನು ಮಾಡಿಸಲಾಯಿತು. ಮುದಿತರಾದ ಎಲ್ಲ ಭರತಸಿಂಹರ ಸ್ತ್ರೀಯರೂ ಪಾರಾಗಲು ದೊರಕಿದ ದೋಣಿಯಂತಿದ್ದ ಜನಾರ್ದನನನ್ನು ಪ್ರಶಂಸಿಸಿದರು. ಕುಂತೀ, ದ್ರುಪದಪುತ್ರೀ, ಸುಭದ್ರಾ

ಮತ್ತು ಉತ್ತರೆ ಹಾಗೆಯೇ ಇತರ ನರನಾಯಕರ ಸ್ತ್ರೀಯರು ಹೃಷ್ಟಮಾನಸರಾದರು. ಬಳಿಕ ಅಲ್ಲಿ ಮಲ್ಲರೂ, ನಟರೂ, ಜ್ಯೋತಿಷಿಗಳೂ, ಸುಖಸಮಾಚಾರಗಳನ್ನು ಹೇಳುವ ದೂತರೂ, ಸೂತ-ಮಾಗಧ ಗಣಗಳು ಕುರುವಂಶದ ಸ್ತುತಿ-ಆಶೀರ್ವಾದಗಳೊಂದಿಗೆ ಜನಾರ್ದನನನ್ನು ಸ್ತೋತ್ರಮಾಡಿದರು. ಯಥಾಕಾಲದಲ್ಲಿ ಉತ್ತರೆಯು ಎದ್ದು ಮಗನನ್ನು ಎತ್ತಿಕೊಂಡು ಯದುನಂದನನಿಗೆ ನಮಸ್ಕರಿಸಿದಳು. ಆಗ ಕೃಷ್ಣನು ಪ್ರೀತಿಯಿಂದ ಅವರಿಬ್ಬರಿಗೂ ಅನೇಕ ವಿಶೇಷ ರತ್ನಗಳನ್ನು ಉಡುಗೊರೆಯನ್ನಾಗಿತ್ತನು. ಹಾಗೆಯೇ ಅನ್ಯ ವೃಷ್ಣಿಶಾರ್ದೂಲರೂ ಉಡುಗೊರೆಗಳನ್ನಿತ್ತರು. ಅನಂತರ ಪ್ರಭು ಸತ್ಯಸಂಧ ಜನಾರ್ದನನು ಮಗುವಿಗೆ ನಾಮಕರಣ ಮಾಡಿದನು. ಆಗ ಅವನು

> “ಪರಿಕ್ಷೀಣಿಸುತ್ತಿರುವ ಕುಲದಲ್ಲಿ ಹುಟ್ಟಿರುವುದರಿಂದ ಈ ಅಭಿಮನ್ಯುವಿನ ಮಗನ ಹೆಸರು ಪರಿಕ್ಷಿತ ಎಂದಾಗುತ್ತದೆ”

ಎಂದನು. ಕಾಲಕ್ಕೆ ತಕ್ಕಂತೆ ಪರಿಕ್ಷಿತನು ವರ್ಧಿಸಿದನು ಮತ್ತು ಸರ್ವಜನರ ಮನಗಳಿಗೆ ಆಹ್ಲಾದವನ್ನುಂಟುಮಾಡುತ್ತಿದ್ದನು.

ಅವನು ಹುಟ್ಟಿ ಒಂದು ತಿಂಗಳ ನಂತರ ಪಾಂಡವರು ಬಹುರತ್ನಗಳನ್ನು

ತೆಗೆದುಕೊಂಡು ಹಿಂದಿರುಗಿದರು. ಅವರು ನಗರದ ಸಮೀಪದಲ್ಲಿದ್ದಾರೆ ಎಂದು ಕೇಳಿ ವೃಷ್ಣಿಪುಂಗವರು ಅವರನ್ನು ಎದಿರುಗೊಳ್ಳಲು ಹೊರಟರು. ಪುರಜನರು ನಾಗಸಾಹ್ವಯವನ್ನು ಪುಷ್ಪರಾಶಿಗಳಿಂದ ಅಲಂಕರಿಸಿದರು. ವಿಚಿತ್ರ ಪತಾಕೆಗಳಿಂದಲೂ. ವಿವಿಧ ಧ್ವಜಗಳಿಂದಲೂ ಪೌರರು ಅರಮನೆಗಳನ್ನು ಅಲಂಕರಿಸಿದರು. ಪಾಂಡುಪುತ್ರರಿಗೆ ಪ್ರಿಯವಾಗಲೆಂದು ವಿದುರನು ದೇವತಾಲಯಗಳಲ್ಲಿ ಬಹುವಿಧದ ಪೂಜೆಗಳು ನಡೆಯುವಂತೆ ಸಂದೇಶವನ್ನಿತ್ತಿದ್ದನು. ರಾಜಮಾರ್ಗಗಳನ್ನು ಪುಷ್ಪಗಳಿಂದ ಅಲಂಕರಿಸಲಾಗಿತ್ತು. ಆ ಪುರವು ಆಗ ಭೋರ್ಗರೆಯುತ್ತಿರುವ ಸಮುದ್ರದಂತೆ ಶೋಭಿಸುತ್ತಿತ್ತು. ನರ್ತಕರ ನೃತ್ಯಗಳಿಂದಲೂ ಮತ್ತು ಗಾಯನಗಳ ಇಂಪಾದ ಸ್ವರಗಳಿಂದಲೂ ಆ ಪುರವು ಕುಬೇರನ ನಗರಿಯಂತೆಯೇ ತೋರುತ್ತಿತ್ತು. ನಗರದ ಅಲ್ಲಲ್ಲಿ ಸಹಸ್ರಾರು ಬಂದಿಗಳು ಅವರ ಪತ್ನಿಯರೊಂದಿಗೆ ನಿಂತು ಶೋಭೆಗೊಳಿಸುತ್ತಿದ್ದರು. ಗಾಳಿಯ ರಭಸದಿಂದ ಎಲ್ಲೆಡೆಯಲ್ಲಿಯೂ ಪತಾಕೆಗಳು ಪಟಪಟನೆ ಹಾರಾಡುತ್ತಿದ್ದವು. ಹಸ್ತಿನಾಪುರವು ಆಗ ದಕ್ಷಿಣ-ಉತ್ತರ ಕುರುದೇಶಗಳಿಗೆ ಆದರ್ಶಪ್ರಾಯವಾಗಿತ್ತು. ರಾಜಪುರುಷರು

“ಇಂದಿನ ರಾತ್ರಿ ಸರ್ವರೂ ರತ್ನಾಭರಣಭೂಷಿತರಾಗಿ

ವಿಹರಿಸಿ!”

ಎಂಬ ಘೋಷಣೆಯನ್ನೂ ಮಾಡಿದರು.

ಪಾಂಡವರು ಸಮೀಪದಲ್ಲಿಯೇ ಬಂದಿದ್ದಾರೆಂದು ಕೇಳಿದ ಶತ್ರುಕರ್ಶನ ವಾಸುದೇವನು ಅಮಾತ್ಯರೊಂದಿಗೆ ಅವರನ್ನು ಕಾಣಲು ಬಂದನು. ಪಾಂಡವರು ವೃಷ್ಣಿಗಳೊಂದಿಗೆ ಯಥಾನ್ಯಾಯವಾಗಿ ಕಲೆತು ಒಟ್ಟಿಗೇ ವಾರಣಸಾಹ್ವಯ ಪುರವನ್ನು ಪ್ರವೇಶಿಸಿದರು. ಆ ಮಹಾ ಸೇನೆಯ ಮತ್ತು ರಥಚಕ್ರಗಳ ಶಬ್ಧಗಳಿಂದ ಭೂಮಿ-ಸ್ವರ್ಗಗಳ ಮಧ್ಯದ ಆಕಾಶವು ತುಂಬಿಹೋಯಿತು. ಆಗ ಪಾಂಡವರು ಪ್ರೀತಮನಸ್ಕರಾಗಿ ಅಮಾತ್ಯರು ಮತ್ತು ಸ್ನೇಹಿತಗಣಗಳೊಂದಿಗೆ ಕೋಶವನ್ನು ಮುಂದೆಮಾಡಿಕೊಂಡು ತಮ್ಮ ಪುರವನ್ನು ಪ್ರವೇಶಿಸಿದರು. ಅವರು ಯಥಾನ್ಯಾಯವಾಗಿ ಜನಾಧಿಪ ಧೃತರಾಷ್ಟ್ರನನ್ನು ಸಂಧಿಸಿ ತಮ್ಮ ತಮ್ಮ ಹೆಸರುಗಳನ್ನು ಹೇಳಿಕೊಳ್ಳುತ್ತಾ ಅವನ ಪಾದಗಳಿಗೆ ವಂದಿಸಿದರು. ಧೃತರಾಷ್ಟ್ರನ ನಂತರ ಆ ಭರತಸತ್ತಮರು ಸುಬಲಾತ್ಮಜೆ ಗಾಂಧಾರೀ, ಕುಂತೀ ಮತ್ತು ವಿದುರರನ್ನು ಪೂಜಿಸಿ ವೈಶ್ಯಾಪುತ್ರ ಯುಯುತ್ಸುವನ್ನು ಸಂಧಿಸಿದರು. ಅವರಿಂತ ಸನ್ಮಾನಿತರಾದ ಆ ವೀರರು ವಿರಾಜಿಸುತ್ತಿದ್ದರು. ಆಗ ಆ ವೀರರು ವಿಚಿತ್ರವೂ ಮಹದದ್ಭುತವೂ ಪರಮಾಶ್ಚರ್ಯವೂ ಆದ ಪರಿಕ್ಷಿತನ

ಜನ್ಮದ ಕುರಿತು ಕೇಳಿದರು. ಧೀಮತ ವಾಸುದೇವನ ಆ ಕೃತ್ಯವನ್ನು ಕೇಳಿ ಅವರು ಪೂಜಾರ್ಹನಾದ ದೇವಕಿನಂದನ ಕೃಷ್ಣನನ್ನು ಪೂಜಿಸಿದರು.

# ಅಶ್ವಮೇಧ ಯಜ್ಞ

## ಯುಧಿಷ್ಠಿರನ ಯಜ್ಞದೀಕ್ಷೆ

ಅದಾದ ಕೆಲವು ದಿನಗಳ ನಂತರ ಸತ್ಯವತೀ ಸುತ ಮಹಾತೇಜಸ್ವೀ ವ್ಯಾಸನು ನಾಗಸಾಹ್ವಯ ನಗರಕ್ಕೆ ಆಗಮಿಸಿದನು. ಆಗ ಎಲ್ಲ ಕುರೂದ್ವಹರೂ ವೃಷ್ಣಿ-ಅಂಧಕವ್ಯಾಘ್ರರೊಂದಿಗೆ ಅವನಿಗೆ ಯಥಾನ್ಯಾಯವಾಗಿ ಸೇವೆಸಲ್ಲಿಸಿದರು. ಅಲ್ಲಿ ನಾನಾ ವಿಧದ ಮಾತುಕಥೆಗಳು ನಡೆಯುತ್ತಿರಲು ಧರ್ಮಸುತ ಯುಧಿಷ್ಠಿರನು ವ್ಯಾಸನಿಗೆ ಇಂತೆಂದನು:

> “ಭಗವನ್! ನಿನ್ನ ಅನುಗ್ರಹದಿಂದ ಈ ರತ್ನವನ್ನು ತಂದಿದ್ದೇವೆ. ಇದನ್ನು ಮಹಾಕ್ರತು ವಾಜಿಮೇಧಕ್ಕೆ ಉಪಯೋಗಿಸಲು ಇಚ್ಛಿಸುತ್ತೇನೆ. ನೀನು ನನಗೆ ಅಪ್ಪಣೆಯನ್ನು ಕೊಡಬೇಕು.

ನಾವೆಲ್ಲರೂ ನಿನ್ನ ಮತ್ತು ಮಹಾತ್ಮ ಕೃಷ್ಣನ ಅಧೀನದಲ್ಲಿದ್ದೇವೆ.”

ವ್ಯಾಸನು ಹೇಳಿದನು:

“ರಾಜನ್! ನಿನಗೆ ಅನುಮತಿಯನ್ನು ಕೊಡುತ್ತಿದ್ದೇನೆ. ಇದರ ನಂತರದ ಕಾರ್ಯಗಳನ್ನು ನೀನು ಮಾಡಬೇಕು. ವಿಧಿವತ್ತಾಗಿ ದಕ್ಷಿಣಾಯುಕ್ತವಾದ ವಾಜಿಮೇಧವನ್ನು ಯಜಿಸು! ಅಶ್ವಮೇಧವೇ ಸರ್ವಪಾಪಗಳನ್ನು ಪಾವನಗೊಳಿಸುತ್ತದೆ. ಆ ಇಷ್ಟಿಯಿಂದ ನೀನು ಪಾಪರಹಿತನಾಗುತ್ತೀಯೆ ಎನ್ನುವುದರಲ್ಲಿ ಸಂಶಯವೇ ಇಲ್ಲ.”

ಆ ಧರ್ಮಾತ್ಮನು ಹೀಗೆ ಹೇಳಲು ಕುರುರಾಜ ಯುಧಿಷ್ಠಿರನು ಅಶ್ವಮೇಧವನ್ನು ಕೈಗೊಳ್ಳಲು ನಿರ್ಧರಿಸಿದನು. ಕೃಷ್ಣದ್ವೈಪಾಯನನ ಅಪ್ಪಣೆಯನ್ನು ಪಡೆದ ವಾಗ್ಮೀ ನೃಪನು ವಾಸುದೇವನನ್ನು ಆಮಂತ್ರಿಸಿ ಇಂತೆಂದನು:

“ಪುರುಷಸತ್ತಮ! ನಿನ್ನಿಂದಾಗಿ ದೇವೀ ದೇವಕಿಯು ಸುಪ್ರಜಾ ಎಂದೆನಿಸಿಕೊಂಡಳು. ಈಗ ನಾನು ಹೇಳುವುದನ್ನು ನೀನು ಮಾಡಿಕೊಡಬೇಕು. ನಿನ್ನ ಪ್ರಭಾವದಿಂದ ಜಯಿಸಿದ

ಸಂಪತ್ತನ್ನು ನಾವು ಭೋಗಿಸುತ್ತಿದ್ದೇವೆ. ನಿನ್ನ ಬುದ್ಧಿ-ಪರಾಕ್ರಮಗಳಿಂದ ನೀನೇ ಈ ಮಹಿಯನ್ನು ಜಯಿಸಿದ್ದೀಯೆ. ನಮಗೆ ಪರಮ ಗುರುವಾಗಿರುವ ನೀನೇ ಈ ಯಾಗಕ್ಕೆ ದೀಕ್ಷಿತನಾಗು. ನೀನೇ ಈ ಇಷ್ಟಿಯನ್ನು ನೆರವೇರಿಸಿದರೆ ನಾವು ವಿಪಾಪಿಗಳಾಗುತ್ತೇವೆ. ನೀನೇ ಯಜ್ಞ. ಅಕ್ಷರ. ಎಲ್ಲವೂ ನೀನೇ. ಧರ್ಮ ಮತ್ತು ಪ್ರಜಾಪತಿಯೂ ನೀನೇ."

ವಾಸುದೇವನು ಹೇಳಿದನು:

"ಮಹಾಬಾಹೋ! ನಿನ್ನಂಥವನು ಹೀಗೆ ಹೇಳುವುದು ಯೋಗ್ಯವಾಗಿಯೇ ಇದೆ. ಆದರೆ ನೀನೇ ಸರ್ವಭೂತಗಳಿಗೆ ಗತಿ ಎಂದು ನನ್ನ ಮತಿಯ ನಿಶ್ಚಯ. ಕುರುವೀರರಲ್ಲಿ ನೀನೇ ಇಂದು ಧರ್ಮದಿಂದ ವಿರಾಜಿಸುತ್ತಿರುವೆ. ರಾಜನ್! ನಾವೆಲ್ಲರೂ ನಿನ್ನ ಅನುಯಾಯಿಗಳು. ನಮಗೆ ನೀನು ರಾಜ ಮಾತ್ರನಲ್ಲದೇ ಗುರುವೂ ಆಗಿರುವೆ! ಭಾರತ! ಅನಘ! ನನ್ನ ಅನುಮತಿಯಂತೆ ನೀನೇ ಈ ಯಜ್ಞವನ್ನು ಮಾಡು. ನೀನು ಯಾವ ಕೆಲಸಗಳನ್ನು ಹೇಳುತ್ತೀಯೋ ಅವೆಲ್ಲವನ್ನೂ ನಾನು ಮಾಡುತ್ತೇನೆ. ಎಲ್ಲವನ್ನೂ ಮಾಡುವೆನೆಂದು ಸತ್ಯಪ್ರತಿಜ್ಞೆಯನ್ನು ಮಾಡುತ್ತೇನೆ. ಭಾರತ! ನೀನು ಯಜ್ಞಮಾಡಿದರೆ ಭೀಮಸೇನ-

ಅರ್ಜುನರೂ ಹಾಗೆಯೇ ಮಾದ್ರವತೀ ಸುತರೂ ಯಜ್ಞವನ್ನು ಮಾಡಿದಂತಾಗಿ ಅದರ ಫಲವನ್ನು ಪಡೆದುಕೊಳ್ಳುತ್ತಾರೆ.”

ಕೃಷ್ಣನು ಹೀಗೆ ಹೇಳಲು ಧರ್ಮಪುತ್ರ ಯುಧಿಷ್ಠಿರನು ಮೇಧಾವೀ ವ್ಯಾಸನನ್ನು ಕರೆಯಿಸಿ ಈ ಮಾತುಗಳನ್ನಾಡಿದನು:

“ಹಯಮೇಧಕ್ಕೆ ತತ್ತ್ವತಃ ಯಾವ ಕಾಲವು ಸರಿಯೆಂದು ನಿಮಗೆ ತಿಳಿದಿದೆಯೋ ಆಗ ನನಗೆ ಯಜ್ಞದೀಕ್ಷೆಯನ್ನು ನೀಡಿರಿ. ಈ ಕ್ರತುವು ನಿಮ್ಮನ್ನೇ ಅವಲಂಬಿಸಿದೆ!”

ವ್ಯಾಸನು ಹೇಳಿದನು:

“ಕೌಂತೇಯ! ಕಾಲವು ಸನ್ನಿಹಿತವಾದೊಡನೆಯೇ ನಾನು ಪೈಲ ಮತ್ತು ಯಾಜ್ಞವಲ್ಕ್ಯನೇ ಮೊದಲಾದವರಿಂದ ಯಜ್ಞವಿಧಾನವನ್ನು ನಡೆಸಿಕೊಡುತ್ತೇನೆ. ಅದರಲ್ಲಿ ಸಂಶಯವಿಲ್ಲದಿರಲಿ! ಬರುವ ಚೈತ್ರ ಶುದ್ಧ ಪೂರ್ಣಿಮೆಯಂದು ನಿನ್ನ ದೀಕ್ಷೆಯು ನಡೆಯುತ್ತದೆ. ಯಜ್ಞಾರ್ಥಕ್ಕಾಗಿ ಸಾಮಗ್ರಿಗಳನ್ನು ಸಂಗ್ರಹಿಸು. ನಿನ್ನ ಯಜ್ಞಸಿದ್ಧಿಗಾಗಿ ಅಶ್ವವಿದ್ಯೆಯನ್ನು ತಿಳಿದ ಸೂತರು ಮತ್ತು ವಿಪ್ರರು ಪವಿತ್ರ ಕುದುರೆಯನ್ನು ಗುರುತಿಸಲಿ.

ಯಥಾಶಾಸ್ತ್ರವಾಗಿ ಅದನ್ನು ಬಿಟ್ಟ ನಂತರ ಅದು ಸಾಗರವನ್ನೇ ವಸ್ತ್ರವಾಗುಳ್ಳ ಪೃಥ್ವಿಯಲ್ಲಿ ನಿನ್ನ ಯಶಸ್ಸು-ಹೆಸರನ್ನು ವರ್ಧಿಸುತ್ತಾ ಸುತ್ತಾಡಲಿ!”

ಹೀಗೆ ಹೇಳಲು ಪೃಥಿವೀಪತಿ ಪಾಂಡವನು ಬ್ರಹ್ಮವಾದಿಯು ಹೇಳಿದಂತೆ ಎಲ್ಲವನ್ನೂ ಮಾಡಿದನು. ಸಕಲ ಸಾಮಗ್ರಿಗಳನ್ನೂ ಸಂಗ್ರಹಿಸಿದನು. ಸಾಮಗ್ರಿಗಳನ್ನು ಒಟ್ಟುಗೂಡಿಸಿಕೊಂಡು ನೃಪ ಧರ್ಮಾತ್ಮಜನು ಅಮೇಯಾತ್ಮಾ ಕೃಷ್ಣದ್ವೈಪಾಯನನಿಗೆ ನಿವೇದಿಸಿದನು. ಆಗ ಮಹಾತೇಜಸ್ವೀ ವ್ಯಾಸನು ನೃಪ ಧರ್ಮಾತ್ಮಜನಿಗೆ ಹೇಳಿದನು:

“ಯಥಾಕಾಲದಲ್ಲಿ ಯಥಾಯೋಗದಲ್ಲಿ ನಿನಗೆ ದೀಕ್ಷೆಯನ್ನು ನೀಡಲು ಸಿದ್ಧರಿದ್ದೇವೆ! ಕೌರವ! ನೀನು ಸುವರ್ಣಮಯ ಸ್ಫ್ಯಶವನ್ನೂ ಕೂರ್ಚವನ್ನೂ ಮಾಡಿಸು. ಬೇರೆ ಯಾವುದರ ಅವಶ್ಯಕತೆಯಿದೆಯೋ ಅವುಗಳೆಲ್ಲವನ್ನು ಸುವರ್ಣದಲ್ಲಿ ಮಾಡಿಸು. ಇಂದು ಯಥಾಕ್ರಮವಾಗಿ ಅಶ್ವವನ್ನು ಭೂಮಿಯ ಮೇಲೆ ಸಂಚರಿಸಲು ಬಿಟ್ಟುಬಿಡು. ಚೆನ್ನಾಗಿ ರಕ್ಷಿಸಲ್ಪಟ್ಟು ಅದು ಯಥಾಶಾಸ್ತ್ರವಾಗಿ ಸಂಚರಿಸಲಿ!”

ಯುಧಿಷ್ಠಿರನು ಹೇಳಿದನು:

“ಬ್ರಹ್ಮನ್! ಈ ಅಶ್ವವನ್ನು ನಾನು ಬಿಟ್ಟಿದ್ದೇನೆ. ಇದು ಮನಬಂದಂತೆ ಇಡೀ ಭೂಮಿಯನ್ನು ಸುತ್ತಾಡುತ್ತದೆ. ಇದರ ಕುರಿತು ನೀವು ನನಗೆ ಸಲಹೆಯನ್ನು ನೀಡಬೇಕು. ಭೂಮಿಯನ್ನು ಸುತ್ತಾಡುತ್ತಾ ಬೇಕಾದಲ್ಲಿ ಹೋಗುವ ಈ ತುರಗವನ್ನು ಯಾರು ರಕ್ಷಿಸಬೇಕು ಎನ್ನುವುದನ್ನು ನೀವು ಹೇಳಬೇಕು!”

ಇದಕ್ಕೆ ಕೃಷ್ಣದ್ವೈಪಾಯನನು ಹೇಳಿದನು:

“ಭೀಮಸೇನನ ತಮ್ಮ, ಸರ್ವಧನುಷ್ಮತರಲ್ಲಿ ಶ್ರೇಷ್ಠ, ಜಿಷ್ಣು ಸಹನಶೀಲ ಧೈರ್ಯವಂತ ಅರ್ಜುನನು ಇದನ್ನು ರಕ್ಷಿಸುತ್ತಾನೆ. ನಿವಾತಕವಚರನ್ನು ಸಂಹರಿಸಿದ ಇವನು ಭೂಮಿಯನ್ನೇ ಗೆಲ್ಲಲು ಶಕ್ತನಾಗಿದ್ದಾನೆ. ಅವನಲ್ಲಿ ದಿವ್ಯಾಸ್ತ್ರಗಳಿವೆ. ದಿವ್ಯ ಕವಚವಿದೆ. ಮತ್ತು ದಿವ್ಯವಾದ ಧನುಸ್ಸೂ-ಭತ್ತಳಿಕೆಗಳೂ ಇವೆ. ಅವನೇ ಈ ಕುದುರೆಯನ್ನು ಅನುಸರಿಸಿ ಹೋಗುತ್ತಾನೆ. ನೃಪಶ್ರೇಷ್ಠ! ಧರ್ಮಾರ್ಥಕುಶಲನೂ ಸರ್ವವಿದ್ಯಾವಿಶಾರದನೂ ಆದ ಅವನೇ ಯಥಾಶಾಸ್ತ್ರವಾಗಿ

ಈ ಕುದುರೆಯನ್ನು ತಿರುಗಾಡಿಸುತ್ತಾನೆ. ರಾಜಪುತ್ರ ಮಹಾಬಾಹು ಶ್ಯಾಮವರ್ಣಿ ರಾಜೀವಲೋಚನ ಅಭಿಮನ್ಯುವಿನ ತಂದೆ ಈ ವೀರನೇ ಇದನ್ನು ಅನುಸರಿಸಿ ಹೋಗುತ್ತಾನೆ. ತೇಜಸ್ವೀ ಕೌಂತೇಯ ಅಮಿತವಿಕ್ರಮಿ ಭೀಮಸೇನ ಮತ್ತು ನಕುಲರು ರಾಷ್ಟ್ರವನ್ನು ರಕ್ಷಿಸಲು ಸಮರ್ಥರಾಗಿದ್ದಾರೆ. ಬುದ್ಧಿಮಾನ್ ಮಹಾಯಶಸ್ವಿ ಸಹದೇವನಾದರೋ ಕುಟುಂಬರಕ್ಷಣೆಯ ಸಲುವಾಗಿ ಸಮಸ್ತ ಕಾರ್ಯಗಳನ್ನೂ ಕೈಗೊಳ್ಳುತ್ತಾನೆ."

ಅವನು ಹೇಳಿದಂತೆ ಎಲ್ಲವನ್ನೂ ಯಥಾನ್ಯಾಯವಾಗಿ ಕುರುಕುಲೋದ್ವಹ ಯುಧಿಷ್ಠಿರನು ಮಾಡಿ ಕುದುರೆಯ ಕುರಿತಾಗಿ ಫಲ್ಗುನನಿಗೆ ಹೀಗೆ ಹೇಳಿದನು:

"ವೀರ ಅರ್ಜುನ! ಇಲ್ಲಿ ಬಾ! ನೀನು ಈ ಕುದುರೆಯನ್ನು ರಕ್ಷಿಸಬೇಕು. ಬೇರೆ ಯಾವ ಮಾನವನೂ ಇದನ್ನು ರಕ್ಷಿಸಲು ಅರ್ಹನಲ್ಲ. ಒಂದು ವೇಳೆ ನರಾಧಿಪರು ನಮ್ಮನ್ನು ವಿರೋಧಿಸಿದರೂ ಅವರೊಡನೆ ಯುದ್ಧವಾಗದ ರೀತಿಯಲ್ಲಿ ನೀನು ಕಾರ್ಯನಿರ್ವಹಿಸಬೇಕು. ಎಲ್ಲರಿಗೂ ನನ್ನ ಈ ಯಜ್ಞದ ಕುರಿತು ತಿಳಿಸಬೇಕು ಮತ್ತು ಯಜ್ಞದ ಸಮಯಕ್ಕೆ ಬರುವಂತೆ

ಎಲ್ಲ ಪಾರ್ಥಿವರನ್ನೂ ಆಹ್ವಾನಿಸಬೇಕು.”

ತಮ್ಮ ಸವ್ಯಸಾಚಿಗೆ ಹೀಗೆ ಹೇಳಿ ಧರ್ಮಾತ್ಮ ಯುಧಿಷ್ಠಿರನು ಭೀಮ-ನಕುಲರನ್ನು ಪುರದ ರಕ್ಷಣೆಗೆ ವಿಧಿಸಿದನು. ಯುಧಿಷ್ಠಿರನು ಮಹೀಪಾಲ ಧೃತರಾಷ್ಟ್ರನ ಅನುಮತಿಯನ್ನು ಪಡೆದು ಸೇನಾಪತಿ ಸಹದೇವನನ್ನು ಕುಟುಂಬರಕ್ಷಣೆಗೆ ನೇಮಿಸಿದನು.

## ಅರ್ಜುನನ ಅಶ್ವಾನುಸರಣೆ

ದೀಕ್ಷಾಕಾಲವು ಬಂದೊದಗಿದಾಗ ಆ ಮಹಾ ಋತ್ವಿಜರು ಪಾರ್ಥಿವನಿಗೆ ವಿಧಿವತ್ತಾಗಿ ಅಶ್ವಮೇಧದ ದೀಕ್ಷೆಯನ್ನು ನೀಡಿದರು. ಪಶುಬಂಧಗಳನ್ನೂ ಮಾಡಿ ದೀಕ್ಷಿತ ಪಾಂಡುನಂದನ ಮಹಾತೇಜಸ್ವಿ ಧರ್ಮರಾಜನು ಋತ್ವಿಗರೊಂದಿಗೆ ಶೋಭಿಸಿದನು. ಅಶ್ವಮೇಧದ ಕುದುರೆಯನ್ನು ಸ್ವಯಂ ಬ್ರಹ್ಮವಾದೀ ಅಮಿತತೇಜಸ್ವೀ ವ್ಯಾಸನೇ ಶಾಸ್ತ್ರವಿಧಿಗಳಂತೆ ಬಿಟ್ಟನು. ಆಗ ದೀಕ್ಷಿತನಾಗಿದ್ದ ರಾಜಾ ಧರ್ಮರಾಜನು ಚಿನ್ನದ ಹಾರಗಳನ್ನು ಧರಿಸಿ, ಸುವರ್ಣಕಂಠನಾಗಿ ಪ್ರಜ್ವಲಿಸುತ್ತಿರುವ ಅಗ್ನಿಯಂತೆಯೇ ಕಾಣುತ್ತಿದ್ದನು. ರೇಷ್ಮೆಯ ವಸ್ತ್ರವನ್ನುಟ್ಟು, ಕೃಷ್ಣಾಜಿನವನ್ನು ಧರಿಸಿ ದಂಡಪಾಣಿಯಾಗಿದ್ದ ದ್ಯುತಿಮಾನ್ ಧರ್ಮಜನು ಆಗ ಅಧ್ವರದಲ್ಲಿದ್ದ ಪ್ರಜಾಪತಿಯಂತೆಯೇ



ಶೋಭಿಸಿದನು. ಅದೇ ವೇಷಧಾರಣೆ ಮಾಡಿದ್ದ ಋತ್ವಿಜರೆಲ್ಲರೂ ಮತ್ತು ಅರ್ಜುನನೂ ಕೂಡ ಪ್ರಜ್ವಲಿಸುತ್ತಿರುವ ಅಗ್ನಿಯಂತೆ ಶೋಭಿಸುತ್ತಿದ್ದರು. ಧರ್ಮರಾಜನ ಶಾಸನದಂತೆ ಶ್ವೇತಾಶ್ವ ಧನಂಜಯನು ಕೃಷ್ಣವರ್ಣದ ಆ ಯಜ್ಞಾಶ್ವವನ್ನು ವಿಧಿವತ್ತಾಗಿ ಅನುಸರಿಸಿ ಹೋದನು. ಗೋಧಾಂಗುಲಿಗಳನ್ನು ಕಟ್ಟಿಕೊಂಡು ಅವನು ಗಾಂಡೀವವನ್ನು ಟೇಂಕರಿಸುತ್ತಾ ಸಂತೋಷದಿಂದ ಆ ಅಶ್ವವನ್ನು ಹಿಂಬಾಲಿಸಿ ಹೋದನು. ಕುಮಾರರಿಂದ ಹಿಡಿದು ಎಲ್ಲರೂ ಪ್ರಯಾಣಕ್ಕೆ ಹೊರಟಿದ್ದ ಆ ಕುರುಶ್ರೇಷ್ಠ ಧನಂಜಯನನ್ನು ನೋಡಲು ಪುರಕ್ಕೆ ಆಗಮಿಸಿದ್ದರು. ಕುರೆಯನ್ನೂ ಮತ್ತು ಕುದುರೆಯನ್ನು ಅನುಸರಿಸಿಹೋಗುತ್ತಿದ್ದವರನ್ನೂ ನೋಡಲು ಬಂದ ಅವರ ಅನ್ಯೋನ್ಯ ನುಗ್ಗಾಟದಿಂದ ಎಲ್ಲರ ಮುಖಗಳಲ್ಲಿಯೂ ಬೆವರು ಸುರಿದು ಸೆಖೆಯುಂಟಾಯಿತು. ಆಗ ಕುಂತೀಪುತ್ರ ಧನಂಜಯನನ್ನು ನೋಡಲು ಬಂದಿದ್ದ ಜನರ ಕೂಗು ಹತ್ತು ದಿಕ್ಕುಗಳನ್ನೂ ತುಂಬಿತು.

> “ಇಗೋ! ದೀಪ್ತಿಮಾನ್ ಮಹಾಬಾಹು ಕೌಂತೇಯನು ಉತ್ತಮ ಧನುಸ್ಸನ್ನು ಸೆಳೆಯುತ್ತಾ ತುರಗವನ್ನು ಹಿಂಬಾಲಿಸಿ ಹೋಗುತ್ತಿದ್ದಾನೆ!”

ಉದಾರಬುದ್ಧಿ ಜಿಷ್ಣುವಿಗೆ



“ಭಾರತ ! ನಿನಗೆ ಮಂಗಳವಾಗಲಿ ! ನಿನ್ನ ಪ್ರಯಾಣವು ಸುಖಕರವಾಗಲಿ ! ಕ್ಷೇಮದಿಂದ ಹಿಂದಿರುಗಿ ಬಾ !”

ಎಂದು ಕೂಗಿ ಹೇಳುತ್ತಿದ್ದುದು ಕೇಳಿಬರುತ್ತಿತ್ತು. ಇನ್ನು ಇತರ ಜನರು

“ಈ ಜನಜಂಗುಳಿಯಲ್ಲಿ ಅರ್ಜುನನಾಗಲೀ ಅವನ ಧನುಸ್ಸಾಗಲೀ ಕಾಣುತ್ತಿಲ್ಲ ! ಭಯಂಕರ ಶಬ್ಧಮಾಡುವ ವಿಶ್ರುತ ಗಾಂಡೀವ ಧನುಸ್ಸೇ ಇದು ! ಅವನಿಗೆ ಮಂಗಳವಾಗಲಿ ! ಅವನ ಪ್ರಯಾಣವು ನಿರ್ಭಯವಾಗಿರಲಿ ! ಕ್ಷೇಮದಿಂದ ಇವನು ಹಿಂದಿರುಗುವುದು ನಿಶ್ಚಯ ! ಆಗ ಅವನನ್ನು ಪುನಃ ನೋಡುತ್ತೇವೆ !”

ಎಂದು ಅಂದುಕೊಂಡರು. ಈ ರೀತಿಯ ಪುರುಷ-ಸ್ತ್ರೀಯರ ಮಧುರ ಮಾತುಗಳನ್ನು ಪುನಃ ಪುನಃ ಅರ್ಜುನನು ಕೇಳಿಸಿಕೊಂಡನು. ಯಜ್ಞಕರ್ಮಗಳಲ್ಲಿ ಕುಶಲನಾದ ಯಾಜ್ಞವಲ್ಕ್ಯನ ವೇದಪಾರಗ ಶಿಷ್ಯನೋರ್ವನು ಶಾಂತಿಗಾಗಿ ಪಾರ್ಥನ ಜೊತೆ ಹೊರಟನು. ಅನೇಕ ವೇದಪಾರಗ ಬ್ರಾಹ್ಮಣರೂ ಕ್ಷತ್ರಿಯರೂ ಮತ್ತು ವೈಶ್ಯರೂ ಆ ಮಹಾತ್ಮನನ್ನು ಹಿಂಬಾಲಿಸಿ ಹೋದರು. ಅಸ್ತ್ರತೇಜಸ್ವೀ ಪಾಂಡವರು ಜಯಿಸಿದ್ದ ದೇಶಗಳಿಗೆ ಹೋಗುತ್ತಾ ಆ ಕುದುರೆಯು ಪೃಥ್ವಿಯಲ್ಲಿ

ಸಂಚರಿಸತೊಡಗಿತು. ಆ ಕುದುರೆಯು ಪ್ರದಕ್ಷಿಣಾಕಾರವಾಗಿ ಭೂಮಿಯನ್ನು ಸಂಚರಿಸಿತು. ಮೊದಲು ಅದು ಉತ್ತರದ ಕಡೆ ಹೋಯಿತು. ಆ ಉತ್ತಮ ಹಯವು ಅನೇಕ ಪಾರ್ಥಿವರ ರಾಷ್ಟ್ರಗಳಲ್ಲಿ ಪದವಿನ್ಯಾಸ ಮಾಡಿ ಮೆಲ್ಲನೆ ಪೂರ್ವಕ್ಕೆ ತಿರುಗಿತು. ಮಹಾರಥ ಶ್ವೇತಾಶ್ವನು ಅದನ್ನು ಹಿಂಬಾಲಿಸಿಯೇ ಹೋಗುತ್ತಿದ್ದನು. ಅಲ್ಲಿ ಬಾಂಧವರನ್ನು ಕಳೆದುಕೊಂಡಿದ್ದ ಸಾವಿರಾರು ಕ್ಷತ್ರಿಯ ರಾಜರು ಯುದ್ಧಮಾಡಿದರು. ಅವರ ಲೆಕ್ಕವೇ ಇಲ್ಲ. ಹಿಂದೆ ಪಾಂಡವರಿಂದ ರಣದಲ್ಲಿ ಪರಾಜಿತಗೊಂಡಿದ್ದ ಖಡ್ಗ-ಧನುರ್ಧರರಾದ ಅನೇಕ ಕಿರಾತರು, ಯವನರು ಮತ್ತು ಬಹುವಿಧದ ಅನ್ಯ ಮ್ಲೇಚ್ಛರು ಯುದ್ಧಮಾಡಿದರು. ಸೈನಿಕ-ವಾಹನಗಳಿಂದ ಹೃಷ್ಟ-ಪುಷ್ಟರಾಗಿದ್ದ ಅನೇಕ ಯುದ್ಧದುರ್ಮದ ಆರ್ಯ ಪೃಥಿವೀಪಾಲರು ಕೂಡ ಪಾಂಡುಪುತ್ರನನ್ನು ಎದುರಿಸಿದರು. ಹೀಗೆ ಅಲ್ಲಲ್ಲಿ ನಾನಾ ದೇಶನಿವಾಸೀ ಮಹೀಪಾಲರು ಮತ್ತು ಅರ್ಜುನರ ನಡುವೆ ಯುದ್ಧಗಳು ನಡೆದವು. ಯಾವ ಯುದ್ಧಗಳು ಎರಡೂ ಪಕ್ಷಗಳಿಗೆ ಕಷ್ಟಕರವಾಗಿದ್ದವೋ ಮತ್ತು ಮಹತ್ವದ್ದಾಗಿದ್ದವೋ ಅವುಗಳ ಕುರಿತಾದ ವರ್ಣನೆಯು ಇಲ್ಲಿದೆ.

## ತ್ರೈವರ್ಗ ವಿಜಯ

ಯುದ್ಧದಲ್ಲಿ ಪುತ್ರರು ಮತ್ತು ಆಪ್ತರನ್ನು ಕಳೆದುಕೊಂಡಿದ್ದ, ಮಹಾರಥರೆಂದು ಖ್ಯಾತರಾಗಿದ್ದ ಮತ್ತು ಕಿರೀಟಿಯ ಬದ್ಧವೈರಿಗಳಾಗಿದ್ದ ತ್ರಿಗರ್ತರೊಡನೆ ಯುದ್ಧವು ನಡೆಯಿತು. ಯಜ್ಞದ ಆ ಉತ್ತಮ ಕುದುರೆಯು ತಮ್ಮ ದೇಶದ ಗಡಿಯನ್ನು ತಲುಪಿದುದನ್ನು ತಿಳಿದುಕೊಂಡ ಆ ವೀರರು ಕವಚಧಾರಿಗಳಾಗಿ ಅದನ್ನು ತಡೆದರು. ಆ ರಥಿಗಳು ತೂಣೀರಗಳನ್ನು ಕಟ್ಟಿಕೊಂಡು ಅಲಂಕೃತ ಕುದುರೆಗಳೊಂದಿಗೆ ಕುದುರೆಯನ್ನು ಸುತ್ತುವರೆದು ಅದನ್ನು ಕಟ್ಟಿಹಾಕಲು ತೊಡಗಿದರು. ಆಗ ಅರಿಂದಮ ಕಿರೀಟಿಯು ರಾಜಾ ಯುಧಿಷ್ಠಿರನು ಬಯಸಿದಂತೆ ಯೋಚಿಸಿ ಸಾಂತ್ವನಪೂರ್ವಕವಾಗಿ ಆ ವೀರರನ್ನು ತಡೆದನು. ಅವನನ್ನು ಅನಾದರಿಸಿ ಅವರೆಲ್ಲರೂ ಶರಗಳಿಂದ ಹೊಡೆಯತೊಡಗಲು, ತಮೋರಜಗುಣಗಳಿಂದ ತುಂಬಿಹೋಗಿದ್ದ ಅವರನ್ನು ಕಿರೀಟಿಯು ತಡೆದನು. ಆಗ ಜಿಷ್ಣುವು ನಸುನಗುತ್ತಾ ಅವರಿಗೆ

> “ಅಧರ್ಮಜ್ಞರೇ! ಹಿಂದಿರುಗಿರಿ! ಜೀವವನ್ನು
> ಉಳಿಸಿಕೊಳ್ಳುವುದೇ ನಿಮಗೆ ಶ್ರೇಯಸ್ಕರವು!”

ಎಂದನು. “ಪಾರ್ಥ! ಬಾಂಧವರನ್ನು ಕಳೆದುಕೊಂಡ ಪಾರ್ಥಿವರನ್ನು ನೀನು ಕೊಲ್ಲಬಾರದು!” ಎಂದು ಧರ್ಮರಾಜನು ಹೇಳಿ ತಡೆದಿದ್ದುದರಿಂದಲೇ ಆ ವೀರನು ಹೀಗೆ ಹೇಳಿದನು. ಧೀಮತ

ಧರ್ಮರಾಜನ ಆ ಮಾತನ್ನು ಕೇಳಿ ಅವನು ಅವರನ್ನು ತಡೆದನು. ಆದರೆ ಅವರು ಹಿಂದಿರುಗಲಿಲ್ಲ. ಆಗ ಧನಂಜಯನು ತಿಗರ್ತ ರಾಜ ಸೂರ್ಯವರ್ಮನನ್ನು ಯುದ್ಧದಲ್ಲಿ ಶರಜಾಲದಿಂದ ಮುಚ್ಚಿ ಜೋರಾಗಿ ನಕ್ಕನು. ಆಗ ಅವರು ರಥಘೋಷ ಮತ್ತು ರಥಚಕ್ರಗಳ ಶಬ್ಧಗಳೊಂದಿಗೆ ಎಲ್ಲ ದಿಕ್ಕುಗಳನ್ನೂ ಮೊಳಗಿಸುತ್ತಾ ಧನಂಜಯನನ್ನು ಆಕ್ರಮಣಿಸಿದರು. ಸೂರ್ಯವರ್ಮನು ಪಾರ್ಥನ ಮೇಲೆ ನೂರಾರು ನತಪರ್ವ ಶರಗಳನ್ನು ಪ್ರಯೋಗಿಸಿ ತನ್ನ ಹಸ್ತಲಾಘವವನ್ನು ಪ್ರದರ್ಶಿಸಿದನು. ಧನಂಜಯನನ್ನು ಕೊಲ್ಲಲು ಬಯಸಿದ ಅವನ ಅನ್ಯ ಮಹೇಷ್ವಾಸ ಅನುಯಾಯಿಗಳೂ ಅವನ ಮೇಲೆ ಶರವರ್ಷಗಳನ್ನೇ ಸುರಿಸಿದರು. ಆಗ ಪಾಂಡವನು ಶಿಂಜಿನಿಯ ಮುಖದಿಂದ ಹೊರಟ ಅನೇಕ ಶರಗಳಿಂದ ಅವುಗಳನ್ನು ತುಂಡರಿಸಲು ಅವು ಭೂಮಿಯ ಮೇಲೆ ಬಿದ್ದವು. ಸೂರ್ಯವರ್ಮನ ತಮ್ಮ ತೇಜಸ್ವೀ ಯುವಕ ಕೇತುವರ್ಮನು ಅಣ್ಣನ ಪರವಾಗಿ ಮಹಾತ್ಮ ಪಾಂಡವನೊಡನೆ ಯುದ್ಧಮಾಡಿದನು. ಯುದ್ಧಕ್ಕೆ ಕೇತುವರ್ಮನು ಇಳಿದುದನ್ನು ನೋಡಿ ಪರವೀರಹ ಬೀಭತ್ಸುವು ನಿಶಿತ ಬಾಣಗಳಿಂದ ಅವನನ್ನು ಸಂಹರಿಸಿದನು. ಕೇತುವರ್ಮನು ಹತನಾಗಲು ಮಹಾರಥ ಧೃತವರ್ಮನು ರಥಗಳಿಂದ ಸುತ್ತುವರೆದು ಶರಗಳಿಂದ ಜಿಷ್ಣುವನ್ನು

ಮುಸುಕಿದನು. ಬಾಲಕ ವೀರ್ಯವಾನ್ ಮಹಾತೇಜಸ್ವೀ ಧೃತವರ್ಮನ ಶೀಘ್ರತೆಯನ್ನು ನೋಡಿ ಗುಡಾಕೇಶನು ಸಂತುಷ್ಟನಾದನು. ಅವನು ಶರಗಳ ಸಂಧಾನ ಮಾಡುತ್ತಿರುವುದಾಗಲೀ ಪ್ರಯೋಗಿಸುತ್ತಿರುವುದಾಗಲೀ ಕಾಣುತ್ತಲೇ ಇರಲಿಲ್ಲ. ಶರಗಳನ್ನು ಸುರಿಸುತ್ತಿರುವುದನ್ನು ಮಾತ್ರ ಪಾಕಶಾಸನಿಯು ನೋಡಿದನು. ಯುದ್ಧದಲ್ಲಿ ಧೃತವರ್ಮನ ಉತ್ಸಾಹವನ್ನು ನೋಡಿ ಅರ್ಜುನನು ಒಂದು ಕ್ಷಣ ರಣದಲ್ಲಿಯೇ ಮನಸಾ ಅವನನ್ನು ಶ್ಲಾಘಿಸಿದನು. ಪನ್ನಗದಂತೆ ಕ್ರುದ್ಧನಾದ ಅವನನ್ನು ಕುರುವೀರನು ನಸುನಗುತ್ತಲೇ ಪ್ರೀತಿಪೂರ್ವಕವಾಗಿ ಅವನ ಪ್ರಾಣವನ್ನು ತೆಗೆಯಲಿಲ್ಲ. ಹಾಗೆ ಅಮಿತತೇಜಸ್ವಿ ಪಾರ್ಥನಿಂದ ರಕ್ಷಿಸಲ್ಪಟ್ಟ ಧೃತವರ್ಮನು ವಿಜಯನ ಮೇಲೆ ತೀಕ್ಷ್ಣ ಶರವನ್ನು ಪ್ರಯೋಗಿಸಿದನು. ಕೂಡಲೇ ಅದು ವಿಜಯನ ಕೈಯಲ್ಲಿ ಜೋರಾಗಿ ಬಂದು ನೆಟ್ಟಿಕೊಂಡಿತು. ಅವನು ದುಃಖದಿಂದ ಗಾಂಡೀವವನ್ನು ಬಿಡಲು ಅದು ಭೂತಲದಲ್ಲಿ ಬಿದ್ದಿತು. ಸವ್ಯಸಾಚಿಯ ಕರದಿಂದ ಜಾರಿ ಬಿದ್ದ ಆ ಧನುಸ್ಸು ಇಂದ್ರನ ಆಯುಧದಂತೆಯೇ ಕಾಣುತ್ತಿತ್ತು. ಆ ದಿವ್ಯ ಮಹಾಧನುಸ್ಸು ಕೆಳಗೆ ಬೀಳಲು ಯುದ್ಧದಲ್ಲಿ ಧೃತವರ್ಮನು ಅಟ್ಟಹಾಸದಿಂದ ನಗತೊಡಗಿದನು. ಆಗ ರೋಷಾನ್ವಿತನಾದ ಜಿಷ್ಣುವು ಕೈಗಳಿಂದ ರಕ್ತವನ್ನು ಒರೆಸಿಕೊಂಡು ಆ

ದಿವ್ಯ ಧನುಸ್ಸನ್ನು ಎತ್ತಿಕೊಂಡು ಶರವರ್ಷವನ್ನು ಸುರಿಸಿದನು. ಅವನ ಆ ಕರ್ಮವನ್ನು ಪ್ರಶಂಸಿಸುತ್ತಿದ್ದ ನಾನಾವಿಧದ ಭೂತಗಳ ಹಲಹಲಾ ಶಬ್ಧವು ಗಗನವನ್ನು ಮುಟ್ಟಿತು. ಕಾಲಾಂತಕ ಯಮನಂತೆ ಕ್ರುದ್ಧನಾಗಿದ್ದ ಜಿಷ್ಣುವನ್ನು ನೋಡಿ ತ್ರೈಗರ್ತಕ ಯೋಧರು ತ್ವರೆಮಾಡಿ ಅವನನ್ನು ಸುತ್ತುವರೆದು ಮುತ್ತಿಗೆ ಹಾಕಿದರು. ಧೃತವರ್ಮನನ್ನು ರಕ್ಷಿಸುವ ಸಲುವಾಗಿ ಅವರು ಗುಡಾಕೇಶನನ್ನು ಸುತ್ತುವರೆದು ಮುತ್ತಿದರು. ಆಗ ಧನಂಜಯನು ಕ್ರೋಧಿತನಾದನು. ಅವನು ಮಹೇಂದ್ರನ ವಜ್ರಗಳಿಗೆ ಸಮಾನ ನಿಶಿತ ಉಕ್ಕಿನ ಶರಗಳಿಂದ ಅವರ ಹದಿನೆಂಟು ಯೋಧರನ್ನು ಸಂಹರಿಸಿದನು. ಅವರ ಸೇನೆಯು ತುಂಡಾಗುತ್ತಿರುವುದನ್ನು ನೋಡಿ ಅದನ್ನು ಧನಂಜಯನು ತ್ವರೆಮಾಡಿ ಸರ್ಪವಿಷದಾಕಾರ ಶರಗಳಿಂದ ಪ್ರಹರಿಸಿದನು. ಆ ತ್ರೈಗರ್ತಕ ಮಹಾರಥರೆಲ್ಲರೂ ಧನಂಜಯನ ಶರಗಳಿಂದ ಪೀಡಿತರಾಗಿ ಭಗ್ನಮನಸ್ಕರಾಗಿ ಎಲ್ಲ ದಿಕ್ಕುಗಳಲ್ಲಿಯೂ ಓಡಿಹೋದರು. ಅವರು ಪುರುಷವ್ಯಾಘ್ರ ಸಂಶಪ್ತಕನಿಷೂದನನಿಗೆ ಹೇಳಿದರು:

> “ನಾವೆಲ್ಲರೂ ನಿನ್ನ ಕಿಂಕರರು. ಎಲ್ಲರೂ ನಿನ್ನ ವಶದಲ್ಲಿ ಬಂದಿದ್ದೇವೆ. ವಿನೀತರಾಗಿ ಸೇವಕರಂತೆ ನಿಂತಿರುವ ನಮಗೆ ಆಜ್ಞಾಪಿಸು! ನಿನಗೆ ಪ್ರಿಯವಾದುದೆಲ್ಲವನ್ನೂ ನಾವು

ಮಾಡುತ್ತೇವೆ!”

ಅವರೆಲ್ಲರ ಮಾತುಗಳನ್ನು ಕೇಳಿ ಅರ್ಜುನನು

“ನೃಪರೇ! ನಮ್ಮ ಶಾಸನವನ್ನು ಸ್ವೀಕರಿಸಿಕೊಂಡು ನಿಮ್ಮ ಪ್ರಾಣಗಳನ್ನು ಉಳಿಸಿಕೊಳ್ಳಿರಿ!”

ಎಂದು ಆಜ್ಞಾಪಿಸಿದನು.

## ವಜ್ರದತ್ತ ಪರಾಜಯ

ಆ ಉತ್ತಮ ಕುದುರೆಯು ಪ್ರಾಗ್ಜ್ಯೋತಿಷಪುರವನ್ನು ತಲುಪಿ ಅಲ್ಲಿ ಸಂಚರಿಸತೊಡಗಿತು. ಆಗ ರಣಕರ್ಕಶ ಭಗದತ್ತನ ಮಗನು ಅದನ್ನು ಕಟ್ಟಿಹಾಕಲು ಹೊರಟನು. ಪಾಂಡುಪುತ್ರನ ಆ ಕುದುರೆಯು ತನ್ನ ರಾಜ್ಯದ ಗಡಿಯಲ್ಲಿ ಬರಲು ಮಹೀಪತಿ ವಜ್ರದತ್ತನು ಯುದ್ಧಮಾಡಿದನು. ನೃಪ ಭಗದತ್ತನ ಮಗನು ನಗರದಿಂದ ಹೊರಟು ಬರುತ್ತಿದ್ದ ಕುದುರೆಯನ್ನು ಬಂಧಿಸಿ ಅದರೊಡನೆ ನಗರಾಭಿಮುಖವಾಗಿ ಹೊರಟನು. ಅದನ್ನು ನೋಡಿ ಮಹಾಬಾಹು ಕುರುವೃಷಭ ಅರ್ಜುನನು ಗಾಂಡೀವವನ್ನು ಟೇಂಕರಿಸಿ ಬೇಗನೇ ಅವನನ್ನು ಆಕ್ರಮಣಿಸಿದನು. ಗಾಂಡೀವದಿಂದ ಹೊರಟ ಬಾಣಗಳಿಂದ

ಮೋಹಿತನಾದ ಆ ವೀರ ನೃಪನು ಕುದುರೆಯನ್ನು ಬಿಟ್ಟು ಪಾರ್ಥನನ್ನು ಆಕ್ರಮಣಿಸಿದನು. ಕವಚಧಾರಿಯಾಗಿದ್ದ ಆ ನೃಪೋತ್ತಮನು ಪುನಃ ತನ್ನ ನಗರವನ್ನು ಪ್ರವೇಶಿಸಿ, ಪ್ರಮುಖ ಆನೆಯನ್ನು ಏರಿ ಯುದ್ಧಾಕಾಂಕ್ಷೆಯಿಂದ ಹೊರಬಂದನು. ಆ ಮಹಾರಥನ ನೆತ್ತಿಯ ಮೇಲೆ ಶ್ವೇತಚ್ಛತ್ರವು ಬೆಳಗುತ್ತಿತ್ತು. ಬಿಳಿಯ ಚಾಮರಗಳನ್ನು ಬೀಸುತ್ತಿದ್ದರು. ಪಾಂಡವರ ಮಹಾರಥ ಪಾರ್ಥನನ್ನು ಸಮೀಪಿಸಿ ಅವನು ಬಾಲ್ಯತನ- ಮೂರ್ಖತೆಗಳಿಂದ ಕೌರವ್ಯನನ್ನು ಯುದ್ಧಕ್ಕೆ ಆಹ್ವಾನಿಸಿದನು. ಸಂಕ್ರುದ್ಧನಾದ ಅವನು ಮದೋದಕವನ್ನು ಸುರಿಸುತ್ತಿದ್ದ ಪರ್ವತೋಪಮ ಮಹಾಗಜವನ್ನು ಶ್ವೇತಹಯ ಅರ್ಜುನನ ಮೇಲೆ ಎರಗುವಂತೆ ಪ್ರಚೋದಿಸಿದನು. ಮೇಘವು ಮಳೆಯನ್ನು ಸುರಿಸುವಂತೆ ಮದೋದಕವನ್ನು ಸುರಿಸುತ್ತಿದ್ದ ಆ ಯುದ್ಧದುರ್ಮದ ಅನೆಯು ಶಾಸ್ತ್ರವತ್ತಾಗಿ ಯುದ್ಧಕ್ಕಾಗಿಯೇ ಸಜ್ಜುಗೊಳಿಸಲ್ಪಟ್ಟಿತ್ತು. ರಾಜನ ಅಂಕುಶದಿಂದ ತಿವಿಯಲ್ಪಟ್ಟು ಪ್ರಚೋದನೆಗೊಂಡ ಆ ಮಹಾಬಲ ಆನೆಯು ಜಿಗಿದು ಆಕಾಶಕ್ಕೇ ಹಾರುತ್ತಿದೆಯೋ ಎನ್ನುವಂತೆ ತೋರುತ್ತಿತ್ತು. ತನ್ನ ಮೇಲೆ ಬೀಳಲು ಬರುತ್ತಿದ್ದ ಅದನ್ನು ನೋಡಿ ಧನಂಜಯನು ಭೂಮಿಯ ಮೇಲೆ ನಿಂತುಕೊಂಡೇ ಆನೆಯನ್ನೇರಿದ್ದ ವಜ್ರದತ್ತನೊಡನೆ ಯುದ್ಧಮಾಡಿದನು.

ಸಂಕ್ರುದ್ಧನಾದ ವಜ್ರದತ್ತನಾದರೋ ಧನಂಜಯನ ಮೇಲೆ ಶಲಭಗಳಂತಿರುವ ಅಗ್ನಿಸಂಕಾಶ ತೋಮರಗಳನ್ನು ವೇಗವಾಗಿ ಪ್ರಯೋಗಿಸಿದನು. ಆಕಾಶದಲ್ಲಿ ಹಾರಿ ಬರುತ್ತಿದ್ದ ಅವುಗಳನ್ನು ಅರ್ಜುನನು ಆಕಾಶಮಾರ್ಗವಾಗಿ ಹಾರುತ್ತಿದ್ದ ಗಾಂಡೀವದಿಂದ ಬಿಟ್ಟ ಶರಗಳಿಂದ ಎರಡು-ಮೂರು ಭಾಗಗಳನ್ನಾಗಿ ತುಂಡರಿಸಿದನು. ತೋಮರಗಳು ತುಂಡಾಗಿದ್ದುದನ್ನು ನೋಡಿ ಭಗದತ್ತನ ಮಗನು ತ್ವರೆಯಿಂದ ಪಾಂಡವನ ಮೇಲೆ ನಿರಂತರವಾಗಿ ಬಾಣಗಳನ್ನು ಸುರಿಸಿದನು. ಆಗ ಸಂಕ್ರುದ್ಧನಾದ ಅರ್ಜುನನು ತ್ವರೆಮಾಡಿ ಚಿನ್ನದ ರೆಕ್ಕೆಗಳುಳ್ಳ ಜಿಹ್ಮಗಗಳನ್ನು ಭಗದತ್ತಾತ್ಮಜನ ಮೇಲೆ ಪ್ರಯೋಗಿಸಿದನು. ಆ ಮಹಾಯುದ್ಧದಲ್ಲಿ ಮಹಾತೇಜಸ್ವೀ ಬಾಣಗಳಿಂದ ಹೊಡೆಯಲ್ಪಟ್ಟ ವಜ್ರದತ್ತನು ಅತ್ಯಂತ ಗಾಯಗೊಂಡು ಭೂಮಿಯ ಮೇಲೆ ಬಿದ್ದನು. ಆದರೆ ಅವನ ಸ್ಮೃತಿಯು ತಪ್ಪಿರಲಿಲ್ಲ. ಪುನಃ ಅವ್ಯಗ್ರನಾದ ಅವನು ರಣದಲ್ಲಿ ಆ ಮಹಾಗಜವನ್ನು ಏರಿ ವಿಜಯ ಅರ್ಜುನನ ಮೇಲೆ ಆ ಆನೆಯು ಆಕ್ರಮಣಿಸುವಂತೆ ಮಾಡಿದನು. ಆಗ ಸಂಕ್ರುದ್ಧ ಜಿಷ್ಣುವು ಪೊರೆಕಳಚಿದ ಸರ್ಪಗಳಂತೆ ಮತ್ತು ಅಗ್ನಿಗಳಂತೆ ಪ್ರಜ್ವಲಿಸುತ್ತಿದ್ದ ಬಾಣಗಳನ್ನು ಆ ಆನೆಯ ಮೇಲೆ ಪ್ರಯೋಗಿಸಿದನು. ಅವುಗಳಿಂದ ಹೊಡೆಯಲ್ಪಟ್ಟ ಆ ಮಹಾಗಜವು ರಕ್ತವನ್ನು ಸುರಿಸತೊಡಗಿ, ಗೈರಿಕಾದಿ

ಧಾತುಗಳಿಂದ ಮಿಶ್ರಿತವಾದ ಕೆಂಪು ನೀರನ್ನು ಸುರಿಸುತ್ತಿದ್ದ ಹಿಮಾಲಯ ಪರ್ವತದಂತೆಯೇ ಕಾಣುತ್ತಿತ್ತು.

ಹೀಗೆ ವೃತ್ರನೊಡನೆ ಶತಕ್ರತುವಿನ ಯುದ್ಧದಂತಿದ್ದ ಅರ್ಜುನ ಮತ್ತು ನರೇಂದ್ರ ವಜ್ರದತ್ತನ ನಡುವಿನ ಯುದ್ಧವು ಮೂರುರಾತ್ರಿಗಳು ನಡೆಯಿತು. ನಾಲ್ಕನೆಯ ದಿವಸ ಮಹಾಬಲ ವಜ್ರದತ್ತನು ಗಟ್ಟಿಯಾಗಿ ಅಟ್ಟಹಾಸದಿಂದ ನಗುತ್ತಾ ಈ ಮಾತನ್ನಾಡಿದನು:

> “ಅರ್ಜುನ! ಅರ್ಜುನ! ನಿಲ್ಲು! ಜೀವಸಹಿತವಾಗಿ ನನ್ನಿಂದ ನೀನು ಬಿಡುಗಡೆ ಹೊಂದುವುದಿಲ್ಲ. ನಿನ್ನನ್ನು ಸಂಹರಿಸಿ ಯಥಾವಿಧಿಯಾಗಿ ನಾನು ನನ್ನ ತಂದೆಗೆ ತರ್ಪಣವನ್ನು ನೀಡುತ್ತೇನೆ! ನಿನ್ನ ವೃದ್ಧ ತಂದೆಯ ಸಖ ನನ್ನ ತಂದೆ ವೃದ್ಧ ಭಗದತ್ತನನ್ನು ನೀನು ಸಂಹರಿಸಿದೆ! ಇಂದು ಇನ್ನೂ ಬಾಲಕನಾಗಿರುವ ನನ್ನೊಡನೆ ಯುದ್ಧಮಾಡು!”

ಹೀಗೆ ಹೇಳಿ ಸಂಕ್ರುದ್ಧನಾದ ನರಾಧಿಪ ವಜ್ರದತ್ತನು ಆನೆಯನ್ನು ಪಾಂಡವನ ಮೇಲೆ ಆಕ್ರಮಣಿಸಿದನು. ಧೀಮತ ವಜ್ರದತ್ತನಿಂದ ಕಳುಹಿಸಲ್ಪಟ್ಟ ಆ ಗಜೇಂದ್ರವು ಆಕಾಶಕ್ಕೆ ಜಿಗಿಯುತ್ತಿರುವುದೋ ಎನ್ನುವಂತೆ ಪಾಂಡವನ ಮೇಲೆ ಎರಗಿತು. ಅದು ತನ್ನ ಸೊಂಡಿಲಿನಿಂದ

ನೀಲಮೋಡಗಳು ಮಳೆಸುರಿಸುವಂತೆ ನೀರಿನ ತುಂತುರುಗಳನ್ನು ಫಲ್ಗುನನ ಮೇಲೆ ಸುರಿಸಿತು. ರಾಜನಿಂದ ಕಳುಹಿಸಲ್ಪಟ್ಟ ಆ ಅನೆಯು ಪುನಃ ಪುನಃ ಮೇಘದಂತೆ ಗರ್ಜಿಸುತ್ತಾ, ಮುಖಾಡಂಬರ ಘೋಷಗಳೊಂದಿಗೆ ಫಲ್ಗುನನನ್ನು ಆಕ್ರಮಣಿಸಿತು. ವಜ್ರದತ್ತನಿಂದ ಪ್ರಚೋದಿತಗೊಂಡ ಆ ಗಜೇಂದ್ರವು ನರ್ತಿಸುತ್ತಿರುವುದೋ ಎನ್ನುವಂತೆ ಓಡಿ ಬಂದು ಮಹಾರಥ ಕೌರವನ ಮೇಲೆ ಎರಗಿತು. ಹಾಗೆ ಮೇಲೆ ಬೀಳಲು ಬರುತ್ತಿದ್ದ ವಜ್ರದತ್ತನ ಆನೆಯನ್ನು ನೋಡಿ ಬಲಶಾಲೀ ಶತ್ರುಹಂತಕ ಅರ್ಜುನನು ಗಾಂಡೀವನ್ನು ಹಿಡಿದುಕೊಂಡು ಸ್ವಲ್ಪವೂ ವಿಚಲಿತನಾಗಲಿಲ್ಲ. ಹಿಂದಿನ ವೈರದಿಂದ ಭೂಪತಿ ವಜ್ರದತ್ತನು ಬಲವನ್ನುಪಯೋಗಿಸಿ ಯಜ್ಞಕ್ಕೆ ವಿಘ್ನವನ್ನುಂಟುಮಾಡುತ್ತಿರುವನೆಂದು ಸ್ಮರಿಸಿಕೊಂಡು ಅರ್ಜುನನು ಅತ್ಯಂತ ಕ್ರೋಧಿತನಾದನು. ಆಗ ಕ್ರುದ್ಧನಾದ ಪಾಂಡವನು ಶರಜಾಲಗಳಿಂದ ತೀರವು ಸಮುದ್ರವನ್ನು ತಡೆಯುವಂತೆ ಆ ಆನೆಯನ್ನು ತಡೆದನು. ಅರ್ಜುನನಿಂದ ತಡೆಯಲ್ಪಟ್ಟ ಆ ಮಹಾಗಜವು ಅಂಗಾಂಗಗಳಲ್ಲಿ ಶರಗಳು ಚುಚ್ಚಿಕೊಂಡು ಮುಳ್ಳುಗಳು ನಿಮಿರಿನಿಂತಿದ್ದ ಮುಳ್ಳುಹಂದಿಯಂತೆ ಅಲ್ಲಿಯೇ ನಿಂತುಕೊಂಡಿತು. ಆನೆಯನ್ನು ತಡೆದು ನಿಲ್ಲಿಸಿದುದನ್ನು ನೋಡಿ ನೃಪ ಭಗದತ್ತಾತ್ಮಜನು

ಕ್ರೋಧಮೂರ್ಚಿತನಾಗಿ ಅರ್ಜುನನ ಮೇಲೆ ನಿಶಿತ ಬಾಣಗಳನ್ನು ಪ್ರಯೋಗಿಸಿದನು. ಅರ್ಜುನನಾದರೋ ಶರಗಳನ್ನು ತುಂಡರಿಸಬಲ್ಲ ಶರಗಳಿಂದ ಅವನ ಬಾಣಗಳನ್ನು ತಡೆದನು. ಅದೊಂದು ಅದ್ಭುತವಾಗಿತ್ತು. ಆಗ ಅತಿಕ್ರುದ್ಧನಾದ ರಾಜಾ ಪ್ರಗ್ಜ್ಯೋತಿಷಾಧಿಪನು ಪರ್ವತೋಪಮವಾಗಿದ್ದ ಆ ಮಹಾಗಜವನ್ನು ಪುನಃ ಅರ್ಜುನನ ಮೇಲೆ ನುಗ್ಗಿಸಿದನು. ಮೇಲೆರಗಿ ಬರುತ್ತಿದ್ದ ಅದನ್ನು ನೋಡಿ ಬಲವಾನ್ ಪಾಕಶಾಸನಿಯು ಆ ಆನೆಯ ಮೇಲೆ ಅಗ್ನಿಸಂಕಾಶ ನಾರಾಚವನ್ನು ಪ್ರಯೋಗಿಸಿದನು. ಮರ್ಮಸ್ಥಾನಕ್ಕೆ ಜೋರಾಗಿ ಹೊಡೆಯಲ್ಪಟ್ಟ ಆ ಆನೆಯು ವಜ್ರದಿಂದ ಹೊಡೆಯಲ್ಪಟ್ಟ ಪರ್ವತದಂತೆ ಒಮ್ಮೆಲೇ ಭೂಮಿಯ ಮೇಲೆ ಬಿದ್ದಿತು. ಧನಂಜಯನ ಶರದಿಂದ ಹತಗೊಂಡು ಬೀಳುತ್ತಿದ್ದ ಆ ಆನೆಯು ವಜ್ರದಿಂದ ಹೊಡೆಯಲ್ಪಟ್ಟ ಮಹಾಶೈಲವು ಭೂಮಿಯ ಮೇಲೆ ಕುಸಿದು ಬೀಳುತ್ತಿದ್ದಂತೆ ಶೋಭಿಸುತ್ತಿತ್ತು. ಆನೆಯೊಂದಿಗೆ ವಜ್ರದತ್ತನೂ ಕೆಳಗೆ ಬೀಳಲು ಪಾಂಡವನು ಭೂಮಿಗತನಾದ ನೃಪನಿಗೆ “ಭಯಪಡಬೇಕಾಗಿಲ್ಲ!” ಎಂದು ಕೂಗಿ ಹೇಳಿದನು.

“ನಾನು ಹೊರಡುವಾಗ ಮಹಾತೇಜಸ್ವಿ ಯುಧಿಷ್ಠಿರನು
“ಧನಂಜಯ! ಯಾವ ಕಾರಣಕ್ಕೂ ನೀನು ರಾಜರನ್ನು

ಕೊಲ್ಲಬಾರದು! ರಣದಲ್ಲಿ ನೀನು ಯೋಧರನ್ನೂ ಕೊಲ್ಲಬಾರದು! ಇಷ್ಟುಮಾಡಿದರೆ ನರವ್ಯಾಘ್ರ! ನೀನು ಎಲ್ಲವನ್ನೂ ಮಾಡಿದಂತೆ!" ಎಂದು ಹೇಳಿದ್ದನು. ಸುಹೃಜ್ಜನರೆಲ್ಲರೊಂದಿಗೆ ಯುಧಿಷ್ಠಿರನ ಅಶ್ವಮೇಧಕ್ಕೆ ನೀವೆಲ್ಲರೂ ಬರಬೇಕೆಂದೂ ಅವನು ಹೇಳಿದ್ದಾನೆ. ಅಣ್ಣನ ಈ ಮಾತನ್ನು ಕೇಳಿದ ನಾನು ನಿನ್ನನ್ನು ಸಂಹರಿಸುವುದಿಲ್ಲ. ಪಾರ್ಥಿವ! ಮೇಲೇಳು! ಭಯಪಡಬೇಡ! ಕ್ಷೇಮವಾಗಿ ಹೋಗು! ಬರುವ ಚೈತ್ರಹುಣ್ಣಿಮೆಯಂದು ಧೀಮತ ಧರ್ಮರಾಜ ಅಶ್ವಮೇಧವು ಆಗಲಿಕ್ಕಿದೆ. ಅದಕ್ಕೆ ಬರಬೇಕು!"

ಹೀಗೆ ಹೇಳಲು ಪಾಂಡವನಿಂದ ಪರಾಜಿತನಾದ ರಾಜಾ ಭಗದತ್ತಾತ್ಮಜನು ಹಾಗೆಯೇ ಆಗಲೆಂದು ಹೇಳಿದನು.

## ಸೈಂಧವ ಪರಾಜಯ

ಬಳಿಕ ಕಿರೀಟಿ ಮತ್ತು ಯುದ್ಧದಲ್ಲಿ ಹತರಾಗದೇ ಉಳಿದಿದ್ದ ಸೈಂಧವರು ಮತ್ತು ಹತರಾಗಿದ್ದ ಸೈಂಧವರ ಮಕ್ಕಳ ನಡುವೆ ಯುದ್ಧವು ನಡೆಯಿತು. ಅರ್ಜುನನು ತಮ್ಮ ರಾಜ್ಯದ ಗಡಿಯಲ್ಲಿ ಬಂದಿದ್ದಾನೆಂದು ತಿಳಿದ ಆ ರಾಜರು ಅಸಹನೆಯಿಂದ ಪಾಂಡವರ್ಷಭನೊಡನೆ ಯುದ್ಧಮಾಡಿದರು.

ರಾಜ್ಯದ ಗಡಿಗೆ ಬಂದಿದ್ದ ಅಶ್ವವನ್ನು ವಿಷೋಪಮರಾದ ಅವರು ಭೀಮನ ತಮ್ಮ ಪಾರ್ಥನಿಗೆ ಹೆದರದೇ ಬಂಧಿಸಿದರು. ಯಜ್ಞಕುದುರೆಯ ಸ್ವಲ್ಪ ದೂರದಲ್ಲಿಯೇ ಪದಾತಿಯಾಗಿ ನಿಂತಿದ್ದ ಧನುಷ್ಪಾಣೀ ಬೀಭತ್ಸುವನ್ನು ಎದುರಿಸಿದರು. ಹಿಂದೆ ಯುದ್ಧದಲ್ಲಿ ಅವನಿಂದ ಸೋತುಹೋಗಿದ್ದ ಆ ಮಹಾವೀರ್ಯ ನರವ್ಯಾಘ್ರ ರಾಜರು ಈಗ ಅವನನ್ನು ಗೆಲ್ಲಲು ಬಯಸಿ ಸುತ್ತುವರೆದರು. ಅವನು ತಮ್ಮ ನಾಮ-ಗೋತ್ರಗಳನ್ನೂ ವಿವಿಧ ಸಾಧನೆಗಳನ್ನೂ ಹೇಳಿಕೊಳ್ಳುತ್ತಾ ಪಾರ್ಥನನ್ನು ಶರವರ್ಷಗಳಿಂದ ಮುಚ್ಚಿದರು. ಆನೆಗಳನ್ನೇ ತಡೆದು ನಿಲ್ಲಿಸಲು ಸಮರ್ಥವಾದ ತೀಕ್ಷ್ಣ ಬಾಣಗಳನ್ನು ಎರಚುತ್ತಾ ರಣದಲ್ಲಿ ಜಯವನ್ನು ಬಯಸಿದ ಅವರು ಕೌಂತೇಯನನ್ನು ಸುತ್ತುವರೆದು ಮುತ್ತಿದರು. ಯುದ್ಧದಲ್ಲಿ ಉಗ್ರಕರ್ಮಗಳನ್ನೆಸಗಿದ್ದ ಆ ವೀರನು ಪದಾತಿಯಾಗಿರುವುದನ್ನು ನೋಡಿ ಆ ಎಲ್ಲ ವೀರರೂ ರಥಸ್ಥರಾಗಿಯೇ ಯುದ್ಧದಲ್ಲಿ ತೊಡಗಿದರು. ನಿವಾತಕವಚರಿಗೆ ಯಮನಾಗಿದ್ದ, ಸಂಶಪ್ತಕರನ್ನು ಸಂಹರಿಸಿದ್ದ, ಸೈಂಧವನನ್ನು ಕೊಂದಿದ್ದ ಆ ವೀರನನ್ನು ಅವರು ಪ್ರಹರಿಸಿದರು. ಆಗ ಅವರು ಸಾವಿರ ರಥಗಳು ಮತ್ತು ಹತ್ತು ಸಾವಿರ ಕುದುರೆಗಳಿಂದ ಗುಂಪಾಗಿ ಸುತ್ತುವರೆದು ಕೌಂತೇಯನೊಡನೆ ಹರ್ಷದಿಂದ ಯುದ್ಧಮಾಡಿದರು. ಸಮರದಲ್ಲಿ ಸವ್ಯಸಾಚಿಯು ಧೀಮತ

ಸಿಂಧುರಾಜ ಜಯದ್ರಥನನ್ನು ವಧಿಸಿದುದನ್ನು ನೆನಪಿಸಿಳ್ಳುತ್ತಾ ಆ ವೀರರು ಯುದ್ಧಮಾಡಿದರು. ಆಗ ಅವರೆಲ್ಲರೂ ಮಳೆಯಂತೆ ಶರವೃಷ್ಟಿಯನ್ನು ಅವನ ಮೇಲೆ ಸುರಿಸಿದರು. ಅವುಗಳಿಂದ ಮುಸುಕಲ್ಪಟ್ಟ ಪಾರ್ಥನು ಮೇಘಗಳ ಮಧ್ಯದಲ್ಲಿದ್ದ ರವಿಯಂತೆ ಶೋಭಿಸಿದನು. ಆ ಶರಗಳಿಂದ ಮುಚ್ಚಿಹೋಗಿದ್ದ ಪಾಂಡವರ್ಷಭನು ಪಿಂಜರದಲ್ಲಿ ಅಲೆದಾಡುತ್ತಿದ್ದ ಪಕ್ಷಿಯಂತೆಯೇ ಕಂಡನು. ಕೌಂತೇಯನು ಶರಪೀಡಿತನಾಗಲು ತ್ರೈಲೋಕ್ಯಗಳಲ್ಲಿ ಎಲ್ಲಕಡೆಯೂ ಹಾಹಾಕಾರವುಂಟಾಯಿತು. ರವಿಯು ಧೂಳುಮುಕ್ಕಿ ಕೆಂಪಾದನು. ಆಗ ರೋಮಾಂಚಕಾರೀ ಚಂಡಮಾರುತವು ಬೀಸತೊಡಗಿತು. ರಾಹುವು ಆದಿತ್ಯ-ಚಂದ್ರರಿಬ್ಬರನ್ನೂ ಒಂದೇ ಕಾಲದಲ್ಲಿ ನುಂಗಿದನು. ಎಲ್ಲಕಡೆಗಳಿಂದಲೂ ಬೀಳುತ್ತಿದ್ದ ಉಲ್ಕೆಗಳು ಸೂರ್ಯನ ಮೇಲೂ ಬಿದ್ದವು. ಮಹಾಗಿರಿ ಕೈಲಾಸವೂ ನಡುಗಿತು. ದುಃಖಶೋಕಸಮನ್ವಿತರಾದ ಸಪ್ತರ್ಷಿಗಳು ಬಿಸಿ ನಿಟ್ಟುಸಿರನ್ನು ಬಿಡತೊಡಗಿದರು. ಹಾಗೆಯೇ ದೇವರ್ಷಿಗಳಿಗೂ ಭಯವುಂಟಾಯಿತು. ಚಂದ್ರಮಂಡಲವನ್ನೇ ಭೇದಿಸಿಕೊಂಡು ಮೊಲವು ಕೆಳಗುರುಳಿತು. ಹಾಗೆ ವಿಪರೀತ ಉತ್ಪಾತಗಳು ಕಾಣಿಸಿಕೊಂಡವು. ಕತ್ತೆಯ ಕೆಂಪುಬಣ್ಣಗಳುಳ್ಳ ಮೇಘಗಳು ಕಾಮನಬಿಲ್ಲು ಮತ್ತು ಮಿಂಚುಗಳಿಂದ ಕೂಡಿ ಗಗನವನ್ನು

ಆವರಿಸಿ ಮಾಂಸ-ರಕ್ತಗಳ ಮಳೆಯನ್ನೇ ಸುರಿಸಿದವು. ಶರವರ್ಷಗಳಿಂದ ಆ ವೀರ ಅರ್ಜುನನು ಮುಸುಕಿರಲು ಲೋಕದಲ್ಲಿ ಈ ಅದ್ಭುತಗಳು ನಡೆದವು. ಸುತ್ತಲೂ ಶರಜಾಲಗಳಿಂದ ಮುಚ್ಚಲ್ಪಟ್ಟ ಅರ್ಜುನನು ಮೋಹಪರವಶನಾಗಲು ಅವನ ಕೈಯಿಂದ ಗಾಂಡೀವವೂ, ಕೈಚೀಲಗಳೂ ಜಾರಿ ಬಿದ್ದವು. ಹೀಗೆ ಮಹಾರಥ ಅರ್ಜುನನು ಮೂರ್ಛಿತನಾಗಿದ್ದರೂ ಸೈಂಧವರು ಮಹತ್ತರವಾದ ಶರಜಾಲಗಳನ್ನು ಅವನ ಮೇಲೆ ಸುರಿಸುತ್ತಲೇ ಇದ್ದರು. ಪಾರ್ಥನು ಮೂರ್ಛಿತನಾಗಿರುವುದನ್ನು ತಿಳಿದ ದಿವೌಕಸರು ಎಲ್ಲರೂ ಭಯಗೊಂಡು ಅದನ್ನು ನಿವಾರಿಸಲು ಅನುವಾದರು. ಆಗ ದೇವರ್ಷಿಗಳು, ಸಪ್ತರ್ಷಿಗಳು ಮತ್ತು ಬ್ರಹ್ಮರ್ಷಿಗಳು ಎಲ್ಲರೂ ಪಾರ್ಥನಿಗೆ ವಿಜಯವಾಗಲೆಂದು ಜಪಿಸತೊಡಗಿದರು. ದೇವತೆಗಳಿಂದಾಗಿ ಪಾರ್ಥನ ತೇಜಸ್ಸು ಉದ್ದೀಪನಗೊಂಡಿತು. ಪರಮಾಸ್ತ್ರಗಳನ್ನು ತಿಳಿದಿದ್ದ ಆ ಧೀಮಂತನು ಸಂಗ್ರಾಮದಲ್ಲಿ ಪರ್ವತದಂತೆ ಸ್ಥಿರವಾಗಿ ನಿಂತುಕೊಂಡನು. ಆಗ ಕೌರವನಂದನನು ದಿವ್ಯ ಧನುಸ್ಸನ್ನು ಸೆಳೆಯಲು ಅದರಿಂದಾಗಿ ಪುನಃ ಪುನಃ ಯಂತ್ರದ ಶಬ್ಧದಂತೆ ಮಹಾ ಶಬ್ಧವು ಕೇಳಿಬಂದಿತು. ಆಗ ಪ್ರಭು ಪಾರ್ಥನು ಸುರೇಶ್ವರನಂತೆ ತನ್ನ ಧನುಸ್ಸಿನಿಂದ ಶತ್ರುಗಳ ಮೇಲೆ ಶರವರ್ಷಗಳನ್ನು

ಸುರಿಸಿದನು. ಪತಂಗಗಳು ಮುತ್ತಿದ ಅಗ್ನಿಗಳಂತೆ ಶರಗಳಿಂದ ಮುಚ್ಚಲ್ಪಟ್ಟ ಆ ಸೈಂಧವ ಯೋಧರು ರಾಜರೊಂದಿಗೆ ಕಾಣಿಸದೇ ಹೋದರು. ಗಾಂಡೀವದ ಶಬ್ಧದಿಂದ ಸೈಂಧವರು ಭಯಾರ್ತರಾಗಿ ನಡುಗಿದರು ಮತ್ತು ಪಲಾಯನಗೈದರು. ಶೋಕಾರ್ತರಾಗಿ ಅತ್ತರು ಮತ್ತು ಮೂರ್ಛಿತರಾದರು ಕೂಡ. ಆ ಬಲಶಾಲೀ ನರಶ್ರೇಷ್ಠನು ಪಂಜಿಯ ಚಕ್ರದಂತೆ ಎಲ್ಲಕಡೆ ತಿರುಗುತ್ತಾ ಅವರೆಲ್ಲರ ಮೇಲೆ ಶರಜಾಲಗಳನ್ನು ಸುರಿಸಿದನು. ವಜ್ರಧಾರಿ ಮಹೇಂದ್ರನಂತೆ ಇಂದ್ರಜಾಲದಂತಿರುವ ಬಾಣಜಾಲವನ್ನು ಅಮಿತ್ರಹ ಅರ್ಜುನನು ಸರ್ವ ದಿಕ್ಕುಗಳಲ್ಲಿಯೂ ಪ್ರಯೋಗಿಸಿದನು. ಮೇಘಜಾಲಗಳಂತಿದ್ದ ಆ ಸೇನೆಯನ್ನು ಸೀಳಿದ ರವಿಪ್ರಭ ಕೌರವಶ್ರೇಷ್ಠನು ಶರದ್ಕಾಲದ ದಿವಾಕರನಂತೆಯೇ ಬೆಳಗಿದನು.

ಯುದ್ಧದಲ್ಲಿ ತೊಡಗಿದ್ದ ಆ ಗಾಂಡೀವಧಾರೀ ಶೂರ ದುರ್ಧರ್ಷ ಅರ್ಜುನನು ಹಿಮವತ್ಪರ್ವತದಂತೆ ಅಚಲನಾಗಿ ಪ್ರಕಾಶಿಸುತ್ತಿದ್ದನು. ಪುನಃ ಸುಸಜ್ಜಿತರಾದ ಸೈಂಧವಯೋಧರು ಕೋಪದಿಂದ ಶರವರ್ಷಗಳನ್ನು ಸುರಿಸತೊಡಗಿದರು. ಪುನಃ ಯುದ್ಧಕ್ಕೆ ಸಿದ್ಧರಾಗಿ ನಿಂತಿರುವ ಅವರನ್ನು ನೋಡಿ ಮಹಾವೀರ್ಯ ಕೌಂತೇಯನು ಗಟ್ಟಿಯಾಗಿ ನಗುತ್ತಾ ಮಧುರ ಧ್ವನಿಯಲ್ಲಿ ಈ ಮಾತುಗಳನ್ನಾಡಿದನು:

"ಪರಮ ಶಕ್ತಿಯಿಂದ ಯುದ್ಧಮಾಡಿರಿ. ನನ್ನನ್ನು ವಧಿಸಲು ಪ್ರಯತ್ನಿಸಿ. ಮಹಾಭಯವು ಉಂಟಾಗಿರುವ ನೀವು ಸರ್ವಕಾರ್ಯಗಳನ್ನೂ ಮುಗಿಸಿ ಬನ್ನಿರಿ! ನಿಮ್ಮ ಎಲ್ಲ ಶರಜಾಲಗಳನ್ನೂ ತುಂಡರಿಸಿ ಯುದ್ಧಮಾಡುತ್ತೇನೆ. ಯುದ್ಧದಲ್ಲಿಯೇ ಮನಸ್ಸನ್ನಿಟ್ಟುಕೊಂಡು ನಿಲ್ಲಿರಿ. ನಿಮ್ಮ ದರ್ಪವನ್ನು ನೀಗಿಸುತ್ತೇನೆ!"

ರೋಷದಿಂದ ಹೀಗೆ ಹೇಳಿದ ಗಾಂಡೀವಧಾರೀ ಕೌರವ್ಯನಿಗೆ ಆಗ ಹಿರಿಯಣ್ಣನ ಮಾತುಗಳು ಸ್ಮರಣೆಗೆ ಬಂದವು.

""ಮಗೂ! ರಣದಲ್ಲಿ ವಿಜಯೇಚ್ಛುಗಳಾದ ಕ್ಷತ್ರಿಯರನ್ನು ಕೊಲ್ಲಬಾರದು. ಅವರನ್ನು ಜಯಿಸಬೇಕು!" ಎಂದು ಮಹಾತ್ಮ ಧರ್ಮರಾಜನು ಹೇಳಿದ್ದನು. "ನೃಪರನ್ನು ಕೊಲ್ಲಬೇಡ! ಎಂದು ರಾಜನು ಹೇಳಿದ್ದನು. ಧರ್ಮರಾಜನ ಆ ಶುಭವಚನವು ಸುಳ್ಳಾಗದಂತೆ ನಾನು ಹೇಗೆ ನಡೆದುಕೊಳ್ಳಲಿ? ರಾಜರನ್ನು ಕೊಲ್ಲಬಾರದೆಂಬ ರಾಜನ ಆಜ್ಞೆಯನ್ನು ಹೇಗೆ ಪೂರೈಸಲಿ?"

ಎಂದು ಆಗ ಪುರುಷರ್ಷಭ ಫಲ್ಗುನನು ಚಿಂತಿಸತೊಡಗಿದನು.

ಅಣ್ಣನಿಗೆ ಪ್ರಿಯವಾದುದನ್ನು ಮಾಡುವುದರಲ್ಲಿಯೇ ನಿರತನಾಗಿದ್ದ ಧರ್ಮಜ್ಞ ಅರ್ಜುನನು ಹೀಗೆ ಆಲೋಚಿಸಿ ಯುದ್ಧದುರ್ಮದ ಸೈಂಧವರಿಗೆ ಈ ಮಾತನ್ನಾಡಿದನು:

> "ಸಂಗ್ರಾಮದಲ್ಲಿ ನಿಂತಿರುವ ನಿಮ್ಮಲ್ಲಿ ಬಾಲಕರನ್ನೂ ಅಥವಾ ಸ್ತ್ರೀಯರನ್ನೂ ನಾನು ಸಂಹರಿಸುವುದಿಲ್ಲ. ಹಾಗೆಯೇ ಸೋತು ನಿನ್ನವರಾಗಿದ್ದೇವೆ ಎನ್ನುವವರನ್ನೂ ನಾನು ಕೊಲ್ಲುವುದಿಲ್ಲ! ನನ್ನ ಈ ಮಾತನ್ನು ಕೇಳಿ ನಿಮಗೆ ಹಿತವೆನಿಸಿದಂತೆ ಮಾಡಿ. ಅನ್ಯಥಾ ನನ್ನಿಂದ ಪೆಟ್ಟುತಿಂದು ಕಷ್ಟವನ್ನು ಅನುಭವಿಸಬೇಕಾಗುತ್ತದೆ!"

ಹೀಗೆ ಹೇಳಿ ಅತಿಕ್ರುದ್ಧನಾದ ಕುರುಪುಂಗವನು ಕ್ರುದ್ಧರಾಗಿ ವಿಜಯವನ್ನೇ ಬಯಸಿದ್ದ ಆ ವೀರರೊಂದಿಗೆ ಯುದ್ಧದಲ್ಲಿ ತೊಡಗಿದನು. ಆಗ ಗಂಡೀವಧನ್ವಿಯ ಮೇಲೆ ಸೈಂಧವರು ನೂರುಸಾವಿರ ನತಪರ್ವ ಶರಗಳನ್ನು ಪ್ರಯೋಗಿಸಿದರು. ತನ್ನ ಮೇಲೆ ಬೀಳುತ್ತಿದ್ದ ಆ ಕ್ರೂರ ಸರ್ಪಗಳ ವಿಷಗಳಂತಿದ್ದ ಬಾಣಗಳನ್ನು ಧನಂಜಯನು ಅವುಗಳು ಬೀಳುವುದರೊಳಗೇ ನಿಶಿತ ಬಾಣಗಳಿಂದ ತುಂಡರಿಸಿದನು. ವೇಗದಿಂದ ಬರುತ್ತಿದ್ದ ಆ ಶಿಲಾಶಿತ ಕಂಕಪತ್ರಗಳನ್ನು ಕತ್ತರಿಸಿ ಅವನು ಸಮರದಲ್ಲಿ ಒಬ್ಬೊಬ್ಬರನ್ನೂ ಹತ್ತು-ಹತ್ತು ಶರಗಳಿಂದ ಹೊಡೆದನು.

ಆಗ ಜಯದ್ರಥನ ಮರಣವನ್ನು ಸ್ಮರಿಸಿಕೊಳ್ಳುತ್ತಾ ಸೈಂಧವ ನೃಪರು ಧನಂಜಯನ ಮೇಲೆ ಪುನಃ ಪ್ರಾಸಗಳನ್ನೂ ಶಕ್ತಿಗಳನ್ನೂ ಪ್ರಯೋಗಿಸಿದರು. ಅವೆಲ್ಲವನ್ನೂ ಮಧ್ಯದಲ್ಲಿಯೇ ತುಂಡರಿಸಿ ಅವರ ಸಂಕಲ್ಪವನ್ನು ನಿಷ್ಫಲಗೊಳಿಸಿದ ಮಹಾಮನಸ್ವಿ ಕಿರೀಟೀ ಪಾಂಡವನು ಸಂತೋಷದಿಂದ ಗರ್ಜಿಸಿದನು. ಹಾಗೆಯೇ ತನ್ನ ಮೇಲೆ ಆಕ್ರಮಣಿಸುತ್ತಿದ್ದ ಜಯೈಶೀ ಯೋಧರ ಶಿರಗಳನ್ನು ಸನ್ನತಪರ್ವ ಭಲ್ಲಗಳಿಂದ ಕೆಳಗುರುಳಿಸಿದನು. ಅವರು ಪಲಾಯನ ಮಾಡುತ್ತಿರುವ ಮತ್ತು ಪುನಃ ಓಡಿ ಹಿಂದಿರುಗಿ ಬರುವ ಶಬ್ಧವು ಉಕ್ಕಿಬರುವ ಸಮುದ್ರದ ಶಬ್ಧದಂತೆಯೇ ಜೋರಾಗಿತ್ತು. ಅಮಿತತೇಜಸ್ವೀ ಪಾರ್ಥನು ಅವರನ್ನು ಸಂಹರಿಸುತ್ತಿದ್ದರೂ, ಅವರು ಪ್ರಾಣವಿದ್ದಷ್ಟೂ ಉತ್ಸಾಹವಿದ್ದಷ್ಟೂ ಅರ್ಜುನನೊಡನೆ ಯುದ್ಧಮಾಡತೊಡಗಿದರು. ಆಗ ಫಲ್ಗುನನು ಸನ್ನತಪರ್ವ ಶರಗಳಿಂದ ಅವರನ್ನು ಮೂರ್ಛೆಗೊಳಿಸಿದನು. ವಾಹನ-ಸೈನಿಕರೂ ಬಹಳವಾಗಿ ಬಳಲಿದ್ದರು. ಅವರೆಲ್ಲರೂ ದಣಿದಿರುವುದನ್ನು ತಿಳಿದ ಧೃತರಾಷ್ಟ್ರನ ಮಗಳು ದುಃಶಲೆಯು ತನ್ನ ಮೊಮ್ಮಗ - ವೀರ ಸುರಥನ ಮಗ - ಬಾಲಕನನ್ನು ರಥದಲ್ಲಿ ಕುಳ್ಳಿರಿಸಿಕೊಂಡು ಸರ್ವಯೋಧರ ಶಾಂತಿಗಾಗಿ ಪಾಂಡವನಿದ್ದಲ್ಲಿಗೆ ಆಗಮಿಸಿದಳು. ಧನಂಜಯನ ಬಳಿಸಾರಿ ಅವಳು

ಆರ್ತಸ್ವರದಲ್ಲಿ ಅಳತೊಡಗಿದಳು. ಪ್ರಭು ಧನಂಜಯನೂ ಕೂಡ ಅವಳನ್ನು ನೋಡಿ ಧನುಸ್ಸನ್ನು ಬಿಸುಟನು. ಧನುಸ್ಸನ್ನು ಬದಿಗಿಟ್ಟು ಪಾರ್ಥನು ವಿಧಿವತ್ತಾಗಿ ತಂಗಿಗೆ "ಏನು ಮಾಡಬೇಕು?" ಎಂದು ಕೇಳಿದನು. ಅವಳು ಅವನಿಗೆ ಈ ಮಾತನ್ನಾಡಿದಳು:

> "ಭರತಶ್ರೇಷ್ಠ! ಇವನು ನಿನ್ನ ತಂಗಿಯ ಮಗನ ಮಗನು. ಈ ಶಿಶುವು ನಿನಗೆ ನಮಸ್ಕರಿಸುತ್ತಿದ್ದಾನೆ ನೋಡು!" ಅವಳು ಹೀಗೆ ಹೇಳಲು ಅರ್ಜುನನು "ಇವನ ತಂದೆಯೆಲ್ಲಿರುವನು?" ಎಂದು ಕೇಳಿದನು. ಅದಕ್ಕೆ ದುಃಶಲೆಯು ಹೀಗೆ ಹೇಳಿದಳು: "ವೀರ! ಇವನ ತಂದೆಯು ಪಿತೃಶೋಕದಿಂದ ಸಂತಪ್ತನಾಗಿ ವಿಷಾದದಿಂದ ಆರ್ತನಾಗಿ ಮೃತ್ಯುವಶನಾದನು. ನಾನು ಹೇಳುವುದನ್ನು ಕೇಳು. ಹಿಂದೆ ನಿನ್ನಿಂದ ಯುದ್ಧದಲ್ಲಿ ತಂದೆಯು ಹತನಾದುದನ್ನು ಅವನು ಕೇಳಿದ್ದನು. ಈಗ ನೀನು ಕುದುರೆಯನ್ನು ಹಿಂಬಾಲಿಸಿ ಯುದ್ಧಕ್ಕೆ ಬಂದಿರುವುದನ್ನು ಕೇಳಿ ತಂದೆಯ ಮೃತ್ಯುವಿನ ದುಃಖದಿಂದ ಆರ್ತನಾಗಿ ಪ್ರಾಣವನ್ನೇ ತೊರೆದುಬಿಟ್ಟನು. ಬೀಭತ್ಸುವು ಇಲ್ಲಿಗೆ ಬಂದಿದ್ದಾನೆ ಎಂದು ನಿನ್ನ ಹೆಸರನ್ನು ಕೇಳುತ್ತಲೇ ವಿಶಾದಾರ್ತನಾಗಿ ನನ್ನ ಮಗನು ಭೂಮಿಯ ಮೇಲೆ ಬಿದ್ದು ಮರಣಹೊಂದಿದನು. ಅವನು

ಕೆಳಗುರುಳಿದುದನ್ನು ನೋಡಿ ಅವನ ಮಗನನ್ನು ಕರೆದುಕೊಂಡು ಶರಣಾರ್ಥಿಯಾಗಿ ನಿನ್ನ ಬಳಿ ಬಂದಿದ್ದೇನೆ.” ಹೀಗೆ ಹೇಳಿ ಧೃತರಾಷ್ಟ್ರಜೆಯು ಆರ್ತಸ್ವರದಲ್ಲಿ ರೋದಿಸಿದಳು. ಮುಖಕೆಳಗೆ ಮಾಡಿಕೊಂಡು ದೀನನಾಗಿ ನಿಂತಿದ್ದ ಪಾರ್ಥನಿಗೆ ಆ ದೀನಳು ಹೇಳಿದಳು: “ಕುರೂದ್ವಹ! ನಿನ್ನ ತಂಗಿಯನ್ನು ನೋಡು. ಮತ್ತು ನಿನ್ನ ತಂಗಿಯ ಮೊಮ್ಮಗನನ್ನು ನೋಡು. ಕುರುರಾಜ ದುರ್ಯೋಧನ ಮತ್ತು ಮೂಢಮತಿ ಜಯದ್ರಥರನ್ನು ಮರೆತು ನನ್ನ ಮೇಲೆ ದಯೆತೋರಿಸಬೇಕು. ಪರವೀರಹ ಪರಿಕ್ಷಿತನು ಅಭಿಮನ್ಯುವಿಗೆ ಹೇಗೆ ಹುಟ್ಟಿದನೋ ಹಾಗೆಯೇ ಈ ಮಹಾಭುಜನು ನನ್ನ ಮಗ ಸುರಥನಿಗೆ ಹುಟ್ಟಿದ ಮೊಮ್ಮಗನು. ಸರ್ವಯೋಧರ ಶಾಂತಿಗಾಗಿ ಇವನನ್ನು ಕರೆದುಕೊಂಡು ನಿನ್ನ ಬಳಿ ಬಂದಿರುವೆನು. ನನ್ನ ಈ ಮಾತನ್ನು ಕೇಳು. ಆ ಮಂದ ಜಯದ್ರಥನ ಮೊಮ್ಮಗನು ಇಗೋ ಇಲ್ಲಿಗೆ ಬಂದಿದ್ದಾನೆ. ಆದುದರಿಂದ ಈ ಬಾಲಕನ ಮೇಲೆ ನೀನು ಕರುಣೆತೋರಿಸಬೇಕು. ನನ್ನೊಡನೆ ಇವನು ನಿನಗೆ ಶಿರಬಾಗಿ ನಮಸ್ಕರಿಸುತ್ತಿದ್ದಾನೆ. ಕರುಣೆಯನ್ನು ಕೇಳುತ್ತಿದ್ದಾನೆ.

ಶಾಂತನಾಗಿ ಹೋಗು! ಬಂಧುಗಳನ್ನು ಕಳೆದುಕೊಂಡಿರುವ ಏನನ್ನೂ ತಿಳಿಯದಿರುವ ಈ ಬಾಲಕನ ಮೇಲೆ ಕರುಣೆತೋರು. ಕೋಪವಶನಾಗಬೇಡ! ಇವನ ಅಜ್ಜನಾದ ಜಯದ್ರಥನ ಅನಾರ್ಯ ಕ್ರೂರತನವನ್ನು ಮತ್ತು ನಿಮಗೆಸಗಿದ ಅಪರಾಧಗಳನ್ನು ಮರೆತು ಇವನ ಮೇಲೆ ಕೃಪೆತೋರಬೇಕು!"

ದುಃಶಲೆಯು ಈ ರೀತಿ ಕರುಣಾಜನಕ ಮಾತುಗಳನ್ನು ಹೇಳುತ್ತಿರಲು ಧನಂಜಯನು ದೇವೀ ಗಾಂಧಾರಿ ಮತ್ತು ಪಾರ್ಥಿವ ಧೃತರಾಷ್ಟ್ರರನ್ನು ಸ್ಮರಿಸಿಕೊಂಡು ದುಃಖಶೋಕಾರ್ತನಾಗಿ ಕ್ಷತ್ರಧರ್ಮವನ್ನೇ ನಿಂದಿಸಿ ಈ ಮಾತನ್ನಾಡಿದನು:

"ನಾನು ಸರ್ವ ಬಾಂಧವರನ್ನೂ ಯಮಕ್ಷಯಕ್ಕೆ ಕಳುಹಿಸುವಂತೆ ಮಾಡಿದ ಆ ಮಾನಿನಿ ರಾಜ್ಯಲೋಭೀ ಕ್ಷುದ್ರ ದುರ್ಯೋಧನನಿಗೆ ಧಿಕ್ಕಾರ!"

ಹೀಗೆ ಹೇಳಿ ಅನೇಕ ಸಾಂತ್ವನಮಾತುಗಳಿಂದ ಜಯ ಅರ್ಜುನನು ಪ್ರಸಾದಿತನಾದನು. ಪ್ರೀತಿಯಿಂದ ಅವಳನ್ನು ಬಿಗಿದಪ್ಪಿ, ಮನೆಗೆ ಕಳುಹಿಸಿಕೊಟ್ಟನು. ಶುಭಾನನೆ ದುಃಶಲೆಯೂ ಕೂಡ ಮಹಾರಣದಿಂದ ಆ ಯೋಧರನ್ನು ಹಿಂದಿರುಗುವಂತೆ ಮಾಡಿ ಪಾರ್ಥನನ್ನು ಪೂಜಿಸಿ ತನ್ನ

ಮನೆಯ ಕಡೆ ನಡೆದಳು. ಅನಂತರ ಸೈಂಧವ ಯೋಧರನ್ನು ಬಿಟ್ಟು ನರರ್ಷಭ ಅರ್ಜುನನು ಕಾಮಚಾರಿಣಿಯಾದ ಆ ಕುದುರೆಯನ್ನು ಪುನಃ ಅನುಸರಿಸುತ್ತಾ ಹೋದನು. ದೇವದೇವ ಪಿನಾಕಧಾರಿಯು ಆಕಾಶದಲ್ಲಿ ತಾರಾಮೃಗವನ್ನು ಹೇಗೆ ಹಿಂಬಾಲಿಸಿ ಹೋಗುತ್ತಿದ್ದನೋ ಹಾಗೆ ವೀರ ಅರ್ಜುನನು ಯಜ್ಞದ ಕುದುರೆಯನ್ನು ವಿಧಿವತ್ತಾಗಿ ಹಿಂಬಾಲಿಸಿ ಹೋಗುತ್ತಿದ್ದನು. ಆ ಕುದುರೆಯು ಪಾರ್ಥನ ಯಶಸ್ಸನ್ನು ವೃದ್ಧಿಸುತ್ತಾ ಯಥೇಷ್ಟವಾಗಿ ಯಥಾಸುಖವಾಗಿ ಮನಸ್ಸು ಬಂದಂತೆ ದೇಶಗಳನ್ನು ಸುತ್ತಾಡಿತು. ಹೀಗೆಯೇ ಸಂಚರಿಸುತ್ತಾ ಕ್ರಮೇಣವಾಗಿ ಆ ಕುದುರೆಯು ಪಾಂಡವನೊಂದಿಗೆ ಮಣಿಪುರದ ಅರಸನ ದೇಶಕ್ಕೆ ಆಗಮಿಸಿತು.

## ಬಭ್ರುವಾಹನ ಯುದ್ಧ

ವೀರ ತಂದೆಯು ಬಂದಿದ್ದಾನೆಂದು ಕೇಳಿ ನೃಪತಿ ಬಭ್ರುವಾಹನನು ವಿನಯದಿಂದ ಆರ್ಯಬ್ರಾಹ್ಮಣರನ್ನು ಮುಂದಿಟ್ಟುಕೊಂಡು ಅರ್ಘ್ಯಗಳೊಂದಿಗೆ ಪಟ್ಟಣದಿಂದ ಹೊರಟನು. ಕ್ಷತ್ರಧರ್ಮವನ್ನು ಸ್ಮರಿಸಿಕೊಂಡ ಮೇಧಾವೀ ಧನಂಜಯನು ಹೀಗೆ ಬಂದಿರುವ ಮಣಿಪೂರೇಶ್ವರನನ್ನು ಅಭಿನಂದಿಸಲಿಲ್ಲ. ಆಗ ಧರ್ಮಾತ್ಮಾ ಫಲ್ಗುನನು ಕೋಪದಿಂದಲೇ ಅವನಿಗೆ ಹೇಳಿದನು:

"ಕ್ಷತ್ರಧರ್ಮದ ಹೊರಕ್ಕಿರುವ ಈ ಪ್ರಕ್ರಿಯೆಯು ನಿನಗೆ ಯುಕ್ತವಾದುದಲ್ಲ! ಪುತ್ರಕ! ಯುಧಿಷ್ಠಿರನ ಯಜ್ಞ ಕುದುರೆಯನ್ನು ಸಂರಕ್ಷಿಸುತ್ತಾ ನಿನ್ನ ರಾಜ್ಯಕ್ಕೆ ನಾನು ಬಂದಿರುವಾಗ ನನ್ನೊಡನೆ ನೀನು ಏಕೆ ಯುದ್ಧಮಾಡುತ್ತಿಲ್ಲ? ಯುದ್ಧಕ್ಕಾಗಿ ಬಂದಿರುವ ನನ್ನನ್ನು ಸಾಮ್ಯದಿಂದ ಸ್ವಾಗತಿಸುತ್ತಿರುವ, ಕ್ಷತ್ರಧರ್ಮವನ್ನು ತಿಳಿಯದಿರುವ ಅತ್ಯಂತ ದುರ್ಬುದ್ಧಿಯಾದ ನಿನಗೆ ಧಿಕ್ಕಾರವು! ಬದುಕಿರುವಾಗ ನೀನು ಯಾವ ಪುರುಷಾರ್ಥವನ್ನೂ ಸಾಧಿಸಿಲ್ಲ. ಈಗ ಯುದ್ಧಮಾಡಲು ಆಗಮಿಸಿರುವ ನನ್ನನ್ನು ಸ್ತ್ರೀಯಂತೆ ಸಾಮ್ಯದಿಂದ ಸ್ವಾಗತಿಸುತ್ತಿರುವೆ! ದುರ್ಮತೇ! ನರಾಧಮ! ಒಂದುವೇಳೆ ನಾನು ಶಸ್ತ್ರಗಳನ್ನು ಬದಿಗಿಟ್ಟು ಇಲ್ಲಿಗೆ ಬಂದಿದ್ದೆನಾದರೆ ನಿನ್ನ ಈ ಪ್ರಕ್ರಿಯೆಯು ಯುಕ್ತವಾಗುತ್ತಿತ್ತೋ ಏನೋ!"

ತನ್ನ ಪತಿಯು ಹೀಗೆ ಹೇಳುತ್ತಿರುವುದನ್ನು ತಿಳಿದ ಪನ್ನಗಾತ್ಮಜೆ ಉಲೂಪಿಯು ಕೋಪವನ್ನು ಸಹಿಸಿಕೊಳ್ಳಲಾರದೇ ಭೂಮಿಯನ್ನೇ ಭೇದಿಸಿಕೊಂಡು ಪಾತಾಳದಿಂದ ಮೇಲೆ ಬಂದಳು. ಅಲ್ಲಿ ಅವಳು ಮುಖಕೆಳಗೆ ಮಾಡಿಕೊಂಡು ಏನುಮಾಡಬೇಕೆಂದು ವಿಮರ್ಶಿಸುತ್ತಿರುವ

ಮಗನನ್ನೂ ಮತ್ತು ಯುದ್ಧಾರ್ಥಿಯಾದ ಪತಿಯು ಅವನನ್ನು ಕಠೋರಮಾತುಗಳಿಂದ ನಿಂದಿಸುತ್ತಿರುವುದನ್ನೂ ನೋಡಿದಳು. ಆಗ ಆ ಕ್ಷತ್ರಧರ್ಮವನ್ನು ತಿಳಿದಿದ್ದ ಸುಂದರಸರ್ವಾಂಗೀ ಉರಗಾತ್ಮಜೆ ಉಲೂಪಿಯು ಬಭ್ರುವಾಹನನಿಗೆ ಇಂತೆಂದಳು:

> "ನೀನು ನನ್ನನ್ನು ನಿನ್ನ ತಾಯಿ ಪನ್ನಗಾತ್ಮಜೆ ಉಲೂಪಿಯೆಂದು ತಿಳಿ! ಮಗೂ! ನನ್ನ ಈ ಮಾತನ್ನು ಕೇಳು. ಇದರಿಂದ ನೀನು ಮಹಾಧರ್ಮವನ್ನೆಸಗಿದಂತಾಗುತ್ತದೆ! ನೀನು ಈ ಕುರುಶ್ರೇಷ್ಠ ಧನಂಜಯನೊಡನೆ ಯುದ್ಧಮಾಡು! ಇದರಿಂದಲೇ ನಿನಗೆ ಸಂತೋಷವಾಗುತ್ತದೆ ಎನ್ನುವುದರಲ್ಲಿ ಸಂಶಯವಿಲ್ಲ."

ಹೀಗೆ ತಾಯಿಯಿಂದ ಉತ್ಸಾಹಗೊಳಿಸಲ್ಪಟ್ಟ ಮಹಾತೇಜಸ್ವೀ ರಾಜಾ ಬಭ್ರುವಾಹನನು ಯುದ್ಧಕ್ಕೆ ಮನಸ್ಸು ಮಾಡಿದನು. ಅವನು ಕಾಂಚನ ಕವಚವನ್ನು ಮತ್ತು ಹೊಳೆಯುತ್ತಿರುವ ಶಿರಸ್ತ್ರಾಣವನ್ನೂ ತೊಟ್ಟು, ನೂರಾರು ಭತ್ತಳಿಕೆಗಳನ್ನು ತುಂಬಿಸಿದ್ದ ಮಹಾರಥವನ್ನೇರಿದನು. ಸರ್ವೋಪಕರಣಗಳಿಂದ ಕೂಡಿದ್ದ, ಮನೋವೇಗದಲ್ಲಿ ಹೋಗಬಲ್ಲ ಕುದುರೆಗಳನ್ನು ಕಟ್ಟಿದ್ದ, ಚಕ್ರವೇ ಮೊದಲಾದ ಇತರ ಸಾಮಾಗ್ರಿಗಳಿಂದ ಕೂಡಿದ್ದ, ಹೊಳೆಯುವ ಸುವರ್ಣಮಯ ಆಭರಣಗಳಿಂದ ಅಲಂಕೃತಗೊಂಡಿದ್ದ, ಪರಮಾರ್ಚಿತವಾದ ಹಿರಣ್ಮಯ

ಸಿಂಹಧ್ವಜವನ್ನು ಮೇಲೇರಿಸಿಕೊಂಡು ರಾಜಾ ಬಭ್ರುವಾಹನನು ಪಾರ್ಥನನ್ನು ಎದುರಿಸಿ ಹೊರಟನು.  ಆಗ ವೀರ ಬಭ್ರುವಾಹನನು ಪಾರ್ಥನ ರಕ್ಷೆಯಲ್ಲಿದ್ದ ಆ ಯಜ್ಞದ ಕುದುರೆಯನ್ನು ಹಯಶಿಕ್ಷಾವಿಶಾರದ ಪುರುಷರಿಂದ ಕಟ್ಟಿಹಾಕಿಸಿದನು. ಅವನು ಕುದುರೆಯನ್ನು ಕಟ್ಟಿಹಾಕಿದುದನ್ನು ನೋಡಿ ಸಂತೋಷಗೊಂಡ ಧನಂಜಯನು ಭೂಮಿಯಮೇಲೆ ನಿಂತುಕೊಂಡೇ ರಥಸ್ಥನಾಗಿರುವ ಮಗನನ್ನು ರಣದಲ್ಲಿ ತಡೆದನು. ಆಗ ರಾಜಾ ಬಭ್ರುವಾಹನನು ವೀರ ಅರ್ಜುನನನ್ನು ಸರ್ಪವಿಷಗಳಿಗೆ ಸಮಾನವಾದ ಸಹಸ್ರಾರು ನಿಶಿತ ಬಾಣಗಳಿಂದ ಪೀಡಿಸಿದನು. ಪರಸ್ಪರರಿಗೆ ಸಂತೋಷವನ್ನು ಕೊಡುತ್ತಿದ್ದ ಆ ತಂದೆ-ಮಗನ ನಡುವೆ ದೇವಾಸುರರ ನಡುವೆ ನಡೆದಂಥಹ ಸರಿಸಾಟಿಯಿಲ್ಲದ ಮಹಾಯುದ್ಧವೇ ನಡೆಯಿತು. ನರವ್ಯಾಘ್ರ ಬಭ್ರುವಾಹನನು ನತಪರ್ವ ಶರದಿಂದ ಕಿರೀಟಿಯ ಜತ್ರುದೇಶಕ್ಕೆ ಹೊಡೆದು ಜೋರಾಗಿ ನಕ್ಕನು. ಸರ್ಪವು ಹುತ್ತವನ್ನು ಹೇಗೋ ಹಾಗೆ ಆ ಬಾಣವು ಪುಂಖದೊಂದಿಗೆ ಕೌಂತೇಯನನ್ನು ಭೇದಿಸಿ ಭೂಮಿಯ ಒಳಹೊಕ್ಕಿತು. ಧೀಮಾನ್ ಅರ್ಜುನನು ಗಾಢವೇದನೆಯಿಂದ ಉತ್ತಮ ಧನುಸ್ಸನ್ನು ಅವಲಂಬಿಸಿ ಹಾಗೆಯೇ ನಿಂತುಕೊಂಡನು. ಆಗ ಅವನು ದಿವ್ಯ ತೇಜಸ್ಸಿನಿಂದ ಕೂಡಿದ್ದ ಯಜ್ಞಪಶುವಿನಂತೆಯೇ ಕಾಣುತ್ತಿದ್ದನು.

ಪುನಃ ಸಂಜ್ಞೆಗಳನ್ನು ಪಡೆದುಕೊಂಡ ಪುರುಷರ್ಷಭ ಶಕ್ರಾತ್ಮಜನು ಮಗನನ್ನು ಪ್ರಶಂಸಿಸುತ್ತಾ ಈ ಮಾತುಗಳನ್ನಾಡಿದನು:

> "ಭಲೇ! ಭಲೇ! ಮಹಾಬಾಹೋ! ಮಗೂ! ಅನುರೂಪವಾದ ನಿನ್ನ ಈ ಕೆಲಸವನ್ನು ನೋಡಿ ನಾನು ಹರ್ಷಿತನಾಗಿದ್ದೇನೆ. ಈ ಬಾಣವನ್ನು ನಿನ್ನ ಮೇಲೆ ಪ್ರಯೋಗಿಸುತ್ತಿದ್ದೇನೆ. ಯುದ್ಧದಲ್ಲಿ ಸ್ಥಿರವಾಗಿರು!"

ಹೀಗೆ ಹೇಳಿ ಆ ಅಮಿತ್ರಹ ಅರ್ಜುನನು ನಾರಾಚಗಳನ್ನು ಅವನ ಮೇಲೆ ಸುರಿಸಿದನು. ಗಾಂಡೀವದಿಂದ ಹೊರಟ ವಜ್ರದ ಮಿಂಚುಗಳಿಗೆ ಸಮಾನ ಪ್ರಭೆಯುಳ್ಳ ಆ ನಾರಾಚಗಳೆಲ್ಲವನ್ನೂ ರಾಜಾ ಬಭ್ರುವಾಹನನು ಮೂರು ಮೂರು ಭಾಗಗಳನ್ನಾಗಿ ತುಂಡರಿಸಿದನು. ಪಾರ್ಥನು ದಿವ್ಯ ಕ್ಷುರಪ್ರ ಶರಗಳಿಂದ ಸುವರ್ಣತಾಲವೃಕ್ಷದಂತಿದ್ದ ಬಭ್ರುವಾಹನನ ಕಾಂಚನ ಧ್ವಜವನ್ನು ಅವನ ರಥದಿಂದ ಅಪಹರಿಸಿದನು. ಪಾಂಡವರ್ಷಭನು ನಗುತ್ತಾ ರಾಜ ಬಭ್ರುವಾಹನನ ಮಹಾವೇಗಪರಾಕ್ರಮಗಳಿದ್ದ ಮಹಾಕಾಯದ ಕುದುರೆಗಳನ್ನು ಕೂಡ ನಿರ್ಜೀವಗೊಳಿಸಿದನು. ಪರಮ ಕುಪಿತನಾದ ರಾಜಾ ಬಭ್ರುವಾಹನನು ರಥದಿಂದ ಕೆಳಗಿಳಿದು ಪದಾತಿಯಾಗಿಯೇ ತಂದೆ ಪಾಂಡವ ಅರ್ಜುನನೊಡನೆ ಕೋಪದಿಂದ ಯುದ್ಧಮಾಡಿದನು. ಪಾಂಡುಗಳ

ವೃಷಭ ವಜ್ರಧರಾತ್ಮಜನು ಮಗನ ವಿಕ್ರಮದಿಂದ ಸಂತುಷ್ಟನಾಗಿ ಮಗನನ್ನು ಹೆಚ್ಚು ಪೀಡಿಸಲಿಲ್ಲ. ಆಕ್ರಮಣ ಮಾಡದಿರುವುದನ್ನು ನೋಡಿ ತಂದೆಯು ವಿಮುಖನಾದನೆಂದೇ ತಿಳಿದು ಬಲಶಾಲೀ ಬಭ್ರುವಾಹನನು ಸರ್ಪದ ವಿಷದಂತಿದ್ದ ಶರಗಳಿಂದ ಪುನಃ ಅವನನ್ನು ಪ್ರಹರಿಸಿದನು. ಆಗ ಬಾಲ್ಯತನದಿಂದ ಬಲವಂತನಾದ ಬಭ್ರುವಾಹನನು ಪುಂಖಗಳಿದ್ದ ನಿಶಿತ ಪತ್ರಿಯಿಂದ ತಂದೆಯ ಹೃದಯಕ್ಕೆ ಹೊಡೆದನು. ಆ ಬಾಣವು ಉರಿಯುತ್ತಿರುವ ಬೆಂಕಿಯಂತೆ ತೇಜಸ್ಸಿನಿಂದ ಬೆಳಗುತ್ತಾ ಪಾಂಡವನ ಮರ್ಮವನ್ನು ಭೇದಿಸಿ ಒಳಹೊಕ್ಕು ಅತ್ಯಂತ ದುಃಖವನ್ನುಂಟುಮಾಡಿತು. ಹಾಗೆ ಮಗನಿಂತ ಅತಿ ಜೋರಾಗಿ ಹೊಡೆಯಲ್ಪಟ್ಟ ಕುರುನಂದನ ಧನಂಜಯನು ಮೂರ್ಛಿತನಾಗಿ ನೆಲಕ್ಕುರುಳಿದನು. ಕೌರವರ ವೀರ ದುರಂಧರನು ಕೆಳಕ್ಕುರುಳಲು ಚಿತ್ರಾಂಗದನ ಮಗನೂ ಕೂಡ ಮೂರ್ಛಿತನಾದನು. ಮೊದಲೇ ಅರ್ಜುನನ ಬಾಣಸಂಘಗಳಿಂದ ಅತಿಯಾಗಿ ಗಾಯಗೊಂಡು ಬಳಲಿದ್ದ ರಾಜಾ ಬಭ್ರುವಾಹನನು ಯುದ್ಧದಲ್ಲಿ ತಂದೆಯು ಹತನಾದುದನ್ನು ನೋಡಿ ಮೂರ್ಛೆಹೋದನು. ಪತಿಯು ಹತನಾದುದನ್ನು ಮತ್ತು ಮಗನು ಭೂಮಿಯ ಮೇಲೆ ಬಿದ್ದುದನ್ನು ನೋಡಿ ಪರಿತಪಿಸಿದ ಚಿತ್ರಾಂಗದೆಯು ರಣಾಂಗಣವನ್ನು

ಪ್ರವೇಶಿಸಿದಳು. ಶೋಕಸಂತಪ್ತಹೃದಯಿಯಾಗಿ ರೋದಿಸುತ್ತಿದ್ದ ಆ ಶುಭೆ ಮಣಿಪೂರಪತಿಯ ಮಾತೆಯು ತನ್ನ ಪತಿಯು ಹತನಾಗಿರುವುದನ್ನು ನೋಡಿದಳು.

ಆಗ ಬಹುವಿಧವಾಗಿ ವಿಲಪಿಸಿ ಆ ಕಮಲೇಕ್ಷಣೆ ಭೀರು ಸಹಿಸಲಸಾಧ್ಯ ದುಃಖದಿಂದ ಮೂರ್ಛಿತಳಾಗಿ ನೆಲದ ಮೇಲೆ ಬಿದ್ದಳು. ಸುಂದರ ರೂಪಿಣೀ ಆ ದೇವಿಯು ಸಂಜ್ಞೆಗಳನ್ನು ಪಡೆದು ಪನ್ನಗಸುತೆ ಉಲೂಪಿಯನ್ನು ನೋಡಿ ಈ ಮಾತುಗಳನ್ನಾಡಿದಳು:

> "ಉಲೂಪಿ! ನೀನೇ ನಡೆಸಿದಂತೆ ನನ್ನ ಬಾಲಕ ಮಗನಿಂದ ರಣದಲ್ಲಿ ಹತನಾಗಿ ಮಲಗಿರುವ ಸಮಿತಿಂಜಯ ಪತಿಯನ್ನು ನೋಡು! ನೀನು ಧರ್ಮಜ್ಞಳೂ ಪತಿವ್ರತೆಯೂ ಅಲ್ಲವೇ? ಆದರೂ ನಿನ್ನ ಪತಿಯು ರಣದಲ್ಲಿ ಹತನಾಗಿ ಬೀಳುವಹಾಗೆ ಏಕೆ ಮಾಡಿದೆ? ಒಂದು ವೇಳೆ ಧನಂಜಯನದ್ದೇ ಸರ್ವ ಅಪರಾಧಗಳೇ ಆಗಿದ್ದರೂ ಇಂದು ಅವನನ್ನು ಕ್ಷಮಿಸಿಬಿಡು. ಧನಂಜಯನನ್ನು ಬದುಕಿಸು. ಬೇಡುತ್ತಿದ್ದೇನೆ. ನೀನು ಧರ್ಮಜ್ಞೆಯೆಂದು ಮೂರುಲೋಕಗಳಲ್ಲಿಯೂ ಖ್ಯಾತಳಾಗಿಲ್ಲವೇ? ಆದರೂ ಮಗನಿಂದ ಪತಿಯನ್ನು ಕೊಲ್ಲಿಸಿಯೂ ಶೋಕಿಸುತ್ತಿಲ್ಲವಲ್ಲ! ಹತನಾಗಿರುವ ಮಗನಿಗಾಗಿ

ನಾನು ಶೋಕಿಸುತ್ತಿಲ್ಲ. ಪತಿಗೆ ಇಂತಹ ಆತಿಥ್ಯವನ್ನು ನೀಡಿದೆನಲ್ಲಾ ಎಂದು ಶೋಕಿಸುತ್ತಿದ್ದೇನೆ!”

ಪನ್ನಗಾತ್ಮಜೆ ದೇವೀ ಉಲೂಪಿಗೆ ಹೀಗೆ ಹೇಳಿ ಆ ಯಶಸ್ವಿನೀ ಚಿತ್ರಾಂಗದೆಯು ಪತಿಯ ಬಳಿಸಾರಿ ಈ ಮಾತುಗಳನ್ನಾಡಿದಳು:

“ಕುರುಮುಖ್ಯನಿಗೆ ಪ್ರಿಯವಾದುದನ್ನು ಮಾಡುವವನೇ! ನನ್ನ ಪ್ರಿಯನೇ! ಎದ್ದೇಳು! ಈ ಕುದುರೆಯನ್ನು ನಾನೇ ನಿನಗೆ ಬಿಟ್ಟುಕೊಟ್ಟಿದ್ದೇನೆ! ಧರ್ಮರಾಜನ ಈ ಯಜ್ಞಕುದುರೆಯನ್ನು ನೀನು ಹಿಂಬಾಲಿಸಿ ಹೋಗಬೇಕಲ್ಲವೇ? ಆದರೂ ನೀನು ಮಹೀತಲದಲ್ಲಿ ಏಕೆ ಮಲಗಿರುವೆ? ಕುರುಗಳ ಪ್ರಾಣಗಳು ನಿನ್ನನ್ನೇ ಅವಲಂಬಿಸಿವೆ! ಅನ್ಯರಿಗೆ ಪ್ರಾಣದಾನವನ್ನು ನೀಡುವ ನೀನೇ ಏಕೆ ಹೀಗೆ ಪ್ರಾಣಗಳನ್ನು ತ್ಯಜಿಸಿರುವೆ? ಉಲೂಪಿ! ರಣದಲ್ಲಿ ಹತನಾಗಿರುವ ಪತಿಯನ್ನು ಚೆನ್ನಾಗಿ ನೋಡು! ಮಗನನ್ನು ಪ್ರೋತ್ಸಾಹಿಸಿ ಇವನನ್ನು ಕೊಲ್ಲಿಸಿದ ನೀನು ಶೋಕಿಸುತ್ತಿಲ್ಲವಲ್ಲ! ಪ್ರೇತಗತಿಯನ್ನು ಸೇರಿದ ನನ್ನ ಈ ಬಾಲಕನು ಬೇಕಾದರೆ ಭೂಮಿಯ ಮೇಲೆಯೇ ಮಲಗಿರಲಿ! ಆದರೆ ನಿದ್ರೆಯನ್ನು ಜಯಿಸಿದ ಲೋಹಿತಾಕ್ಷ ವಿಜಯನು ಮಾತ್ರ ಜೀವಿಸಿದರೆ ಚೆನ್ನಾಗಿರುತ್ತಿತ್ತು! ಪುರುಷರಿಗೆ ಅನೇಕ

ಭಾರ್ಯೆಯರಿದ್ದರೆ ಅಪರಾಧವೇನೂ ಅಲ್ಲ. ಆದರೆ ನಾರಿಯರಿಗೆ ಇದು ತರವಲ್ಲ. ನಿನಗೆ ಈ ರೀತಿಯ ಬುದ್ಧಿಯುಂಟಾಗಬಾರದಾಗಿತ್ತು! ಪತಿ-ಪತ್ನಿಯರ ನಡುವಿನ ಈ ಶಾಶ್ವತವೂ ಅವ್ಯಯವೂ ಆದ ಸಖ್ಯವನ್ನು ಧಾತನೇ ಮಾಡಿರುವನು. ನಿನಗೂ ಅರ್ಜುನನೊಡನೆ ಇದೇ ರೀತಿಯ ಸಂಬಂಧವಿದೆ ಎನ್ನುವ ಸತ್ಯವು ನಿನಗೆ ಅರಿವಾಗಲಿ! ಪುತ್ರನಿಂದ ಕೊಲ್ಲಿಸಿದ ನನ್ನ ಈ ಪತಿಯನ್ನು ಇಂದು ಜೀವಂತವಾಗಿ ತೋರಿಸದೇ ಇದ್ದರೆ ಇಂದೇ ನಾನು ನನ್ನ ಜೀವವನ್ನು ತ್ಯಜಿಸುತ್ತೇನೆ! ಪತಿ-ಪುತ್ರರಿಂದ ವಿಹೀನಳಾಗಿ ದುಃಖಾನ್ವಿತಳಾದ ನಾನು ಇಲ್ಲಿಯೇ ಪ್ರಾಯೋಪವೇಶ ಮಾಡುವುದನ್ನು ನಿಸ್ಸಂಶಯವಾಗಿ ನೀನು ಕಾಣುವೆ!”

ಹೀಗೆ ಸವತಿಯಾದ ಪನ್ನಗಸುತೆಗೆ ಹೇಳಿ ಚಿತ್ರವಾಹನನ ಮಗಳು ಚಿತ್ರಾಂಗದೆಯು ಪ್ರಾಯೋಪವೇಶಮಾಡಿ ಸುಮ್ಮನೇ ಕುಳಿತುಕೊಂಡಳು.

ಹಾಗೆ ಪತಿಯ ಪಾದಗಳೆರಡನ್ನೂ ಹಿಡಿದು ವಿಲಪಿಸುತ್ತ ಕುಳಿತಿದ್ದ ದೇವೀ ಚಿತ್ರಾಂಗದೆಯು ಮಗನು ಉಸಿರಾಡುತ್ತಿರುವುದನ್ನು ಗಮನಿಸಿದಳು. ಅನಂತರ ಸಂಜ್ಞೆಗಳನ್ನು ಪುನಃ ಪಡೆದ ರಾಜಾ ಬಭ್ರುವಾಹನನು ರಣಭೂಮಿಯಲ್ಲಿ ತನ್ನ ತಾಯಿಯನ್ನು ನೋಡಿ ಈ

ಮಾತುಗಳನ್ನಾಡಿದನು:

"ಅಯ್ಯೋ! ಸುಖವನ್ನೇ ತಿಳಿದಿರುವ ನನ್ನ ಈ ತಾಯಿಯು ಮೃತನಾದ ವೀರ ಪತಿಯೊಡನೆ ಭೂಮಿಯ ಮೇಲೆ ಬಿದ್ದು ಮಲಗಿದ್ದಾಳಲ್ಲಾ! ಇದಕ್ಕಿಂತಲೂ ಹೆಚ್ಚಿನ ದುಃಖವು ಯಾವುದಿದೆ? ರಣದಲ್ಲಿ ಅರಿಗಳನ್ನು ಸಂಹರಿಸುವ, ಸರ್ವಶಸ್ತ್ರಭೃತರಲ್ಲಿಯೂ ಶ್ರೇಷ್ಠನಾಗಿದ್ದವನು ನನ್ನಿಂದ ಯುದ್ಧದಲ್ಲಿ ಹತನಾಗಿ ದುರ್ಮರಣ ಹೊಂದಿರುವುದನ್ನು ಇವಳು ನೋಡುತ್ತಿರುವಳಲ್ಲ! ಈ ವಿಶಾಲವಕ್ಷಸ್ಥಳವಿರುವ ಮಹಾಬಾಹು ಪತಿಯು ಹತನಾಗಿರುವುದನ್ನು ನೋಡಿಯೂ ಈ ದೇವಿಯ ಹೃದಯವು ಒಡೆದುಹೋಗುತ್ತಿಲ್ಲ ಎಂದರೆ ಇವಳ ಹೃದಯವು ದೃಢವಾಗಿಯೇ ಇರಬೇಕು! ದುರ್ಮರಣದಂಥಹ ಈ ಸಂಕಟವು ಸಂಭವಿಸಿದಾಗಲೂ ನನ್ನ ಅಥವಾ ನನ್ನ ತಾಯಿಯ ಪ್ರಾಣವು ಹೊರಟುಹೋಗುತ್ತಿಲ್ಲವಲ್ಲ! ಅಯ್ಯೋ! ನನಗೆ ಧಿಕ್ಕಾರ! ಈ ಕುರುವೀರನ ಕಾಂಚನ ಕವಚವು ಭೂಮಿಯ ಮೇಲೆ ಕೆಡವಲ್ಪಟ್ಟು ಮಗನಾದ ನನ್ನಿಂದ ಹತನಾಗಿರುವ ಇವನನ್ನು ನೋಡಿರಿ! ಭೋ! ಭೋ! ಬ್ರಾಹ್ಮಣರೇ! ನನ್ನ ವೀರ

ತಂದೆಯು ಮಗನಾದ ನನ್ನಿಂದ ಕೆಳಗುರುಳಿಸಲ್ಪಟ್ಟು ವೀರಶಯನದಲ್ಲಿ ಮಲಗಿರುವುದನ್ನು ನೋಡಿರಿ! ಕುರುಮುಖ್ಯನ ಕುದುರೆಯನ್ನು ಹಿಂಬಾಲಿಸಿ ಬಂದಿರುವ ಬ್ರಾಹ್ಮಣರು ಇಂದು ನನ್ನಿಂದ ರಣದಲ್ಲಿ ಹತನಾಗಿರುವ ಇವನಿಗೆ ಯಾವ ಶಾಂತಿಕರ್ಮಗಳನ್ನು ಮಾಡುವರು? ವಿಪ್ರರೇ! ರಣರಂಗದಲ್ಲಿ ತಂದೆಯನ್ನು ಕೊಂದ ಈ ಕ್ರೂರಿ ಪಾಪಿಗೆ ಪ್ರಾಯಶ್ಚಿತ್ತವೇನನ್ನಾದರೂ ವಿಧಿಸಿರಿ! ಇಂದು ತಂದೆಯನ್ನು ಕೊಂದ ನಾನು ಹನ್ನೆರಡು ವರ್ಷಗಳು ಕಷ್ಟದಲ್ಲಿ ಇರಬೇಕು. ಕ್ರೂರನಾಗಿರುವ ನಾನು ಇವನದೇ ಚರ್ಮವನ್ನು ಹೊದೆದುಕೊಂಡು ಇವನದೇ ಶಿರವನ್ನು ಕಪಾಲವನ್ನಾಗಿ ಹಿಡಿದು ಸಂಚರಿಸಬೇಕು. ತಂದೆಯನ್ನೇ ಕೊಂದ ನನಗೆ ಇದಕ್ಕಿಂತ ಬೇರೆ ಯಾವ ಪ್ರಾಯಶ್ಚಿತ್ತವೂ ಇಲ್ಲ! ನಾಗೋತ್ತಮನ ಮಗಳೇ! ನೋಡು! ನಿನ್ನ ಪತಿಯನ್ನು ನಾನು ಸಂಹರಿಸಿದ್ದೇನೆ! ಸಮರದಲ್ಲಿ ಅರ್ಜುನನನ್ನು ಸಂಹರಿಸಿ ಇಂದು ನಾನು ನಿನಗೆ ಪ್ರಿಯವಾದುದನ್ನು ಮಾಡಿದ್ದೇನೆ! ಆದರೆ ನಾನು ನನ್ನ ಜೀವವನ್ನೇ ಧರಿಸಿರಲು ಶಕ್ಯನಾಗಿಲ್ಲ! ಇಂದು ನನ್ನ ತಂದೆಯು ಯಾವ ಮಾರ್ಗದಲ್ಲಿ

ಹೋಗಿರುವನೋ ಅದೇ ಮಾರ್ಗದಲ್ಲಿ ಹೋಗುತ್ತೇನೆ! ಗಾಂಡೀವಧನ್ವಿಯೊಡನೆ ನಾನೂ ಮೃತನಾದ ನಂತರ ನೀನು ಸಂತೋಷದಿಂದಿರು! ಇವನಿಲ್ಲದೇ ನಾನು ಬದುಕಿರಲಾರೆ ಎನ್ನುವುದು ಸತ್ಯ!”

ಹೀಗೆ ಹೇಳಿ ದುಃಖಶೋಕಸಮಾಹತನಾದ ರಾಜ ಬಭ್ರುವಾಹನನು ಆಚಮನ ಮಾಡಿ ದುಃಖದಿಂದ ಈ ಮಾತನ್ನಾಡಿದನುಃ

“ಸ್ಥಾವರ-ಚರ ಸರ್ವಭೂತಗಳೂ ಕೇಳಿರಿ! ಭುಜಗೋತ್ತಮೇ! ಮಾತಾ! ನೀನೂ ಕೂಡ ನಾನು ಹೇಳಲಿರುವ ಈ ಸತ್ಯವನ್ನು ಕೇಳು! ಒಂದು ವೇಳೆ ನನ್ನ ತಂದೆ ಈ ಭರತರ್ಷಭ ಜಯನು ಮೇಲೇಳದಿದ್ದರೆ ಇದೇ ರಣಪ್ರದೇಶದಲ್ಲಿ ನಾನು ನನ್ನ ಶರೀರವನ್ನು ಶೋಷಿಸಿಬಿಡುತ್ತೇನೆ! ತಂದೆಯನ್ನು ಕೊಂದಿರುವ ನನಗೆ ಯಾವುದೇ ರೀತಿಯ ಪ್ರಾಯಶ್ಚಿತ್ತವೂ ಇಲ್ಲ! ಗುರುವನ್ನು ವಧಿಸಿದ ಪಾಪಮಾಡಿದ ನಾನು ನಿಶ್ಚಯವಾಗಿಯೂ ನರಕವನ್ನೇ ಪಡೆಯುತ್ತೇನೆ! ನೂರು ಗೋವುಗಳನ್ನು ದಾನಮಾಡುವುದರಿಂದ ವೀರ ಕ್ಷತ್ರಿಯನನ್ನು ಕೊಂದ ಪಾಪದಿಂದ ಮುಕ್ತನಾಗಬಹುದು. ಆದರೆ ತಂದೆಯನ್ನೇ ಕೊಂದ ಈ ಪಾಪವನ್ನು ಮಾಡಿರುವ ನನಗೆ ಬಿಡುಗಡೆಯೇ

ಇಲ್ಲವಾಗಿದೆ! ಪಾಂಡುವಿನ ಮಗನಾದ ಈ ಧನಂಜಯನು ಅದ್ವಿತೀಯನು. ಮಹಾತೇಜಸ್ವಿಯು. ಧರ್ಮಾತ್ಮನಾದ ಈ ತಂದೆಯನ್ನು ಕೊಂದ ನನಗೆ ಎಲ್ಲಿಯ ಪ್ರಾಯಶ್ಚಿತ್ತವು?"

ಹೀಗೆ ಹೇಳಿ ನೃಪತಿ ಧನಂಜಯನ ಮಗ ನೃಪ ಮಹಾಮತಿ ಬಭ್ರುವಾಹನನು ಆಚಮನ ಮಾಡಿ ಆಮರಣಾಂತ ಉಪವಾಸವ್ರತವನ್ನು ಕೈಗೊಂಡು ಮೌನವಾಗಿ ಕುಳಿತನು. ಪಿತೃಶೋಕದಿಂದ ಮುಳುಗಿಹೋಗಿದ್ದ ಮಣಿಪೂರೇಶ್ವರ ನೃಪತಿಯು ಆಗ ತಾಯಿಯೊಡನೆ ಪ್ರಾಯೋಪವೇಶ ಮಾಡಿದನು. ಆಗ ಉಲೂಪಿಯು ಸಂಜೀವನ ಮಣಿಯನ್ನು ಸ್ಮರಿಸಿಕೊಂಡಳು. ಪನ್ನಗಗಳ ಪರಾಯಣವಾದ ಆ ಮಣಿಯು ಕೂಡಲೇ ಅಲ್ಲಿಗೆ ಬಂದಿತು. ಆ ಮಣಿಯನ್ನು ಹಿಡಿದುಕೊಂಡು ನಾಗರಾಜಪತಿಯ ಆ ಮಗಳು ಸೈನಿಕರ ಮನಸ್ಸಿಗೆ ಆಹ್ಲಾದಕರವಾದ ಈ ಮಾತನ್ನಾಡಿದಳು:

"ಮಗೂ! ಎದ್ದೇಳು! ಶೋಕಿಸಬೇಡ! ಜಿಷ್ಣುವು ನಿನ್ನಿಂದ ಹತನಾಗಲಿಲ್ಲ. ಇವನು ಇಂದ್ರಸಹಿತನಾದ ದೇವತೆಗಳಿಗೂ ಮನುಷ್ಯರಿಗೂ ಅಜೇಯನು. ಯಶಸ್ವಿನೀ ನಿನ್ನ ಈ ತಂದೆ ಪುರುಷೇಂದ್ರನಿಗೆ ಪ್ರಿಯವಾದುದನ್ನು ಮಾಡಲೋಸುಗ ನಾನೇ ಈ ಮೋಹಿನೀ ಎಂಬ ಹೆಸರಿನ ಮಾಯೆಯನ್ನು

ಪ್ರದರ್ಶಿಸಿದೆನು. ಈ ಪರವೀರಹ ಕೌರವನು ತನ್ನ ಮಗನ ಬಲವೆಷ್ಟಿರಬಹುದೆಂಬ ಜಿಜ್ಞಾಸೆಯಿಂದಲೇ ನಿನ್ನೊಡನೆ ಸಂಗ್ರಾಮದಲ್ಲಿ ಯುದ್ಧಮಾಡಲು ಬಯಸಿದ್ದನು. ಆದುದರಿಂದಲೇ ನಾನು ನಿನ್ನನ್ನು ಯುದ್ಧಕ್ಕಾಗಿ ಪ್ರಚೋದಿಸಿದೆ! ನೀನು ನಿನ್ನನ್ನು ಪಾಪಿಯೆಂದು ಸ್ವಲ್ಪವೂ ಶಂಕಿಸಬೇಕಾಗಿಲ್ಲ! ಈ ಪುರುಷನು ಮಹಾತೇಜಸ್ವೀ ಋಷಿಯು. ಶಾಶ್ವತನು ಮತ್ತು ಅವ್ಯಯನು. ಸಂಗ್ರಾಮದಲ್ಲಿ ಇವನನ್ನು ಶಕ್ರನಿಗೂ ಜಯಿಸಲು ಸಾಧ್ಯವಿಲ್ಲ! ನಿತ್ಯವೂ ಮೃತಗೊಂಡ ಪನ್ನಗೇಂದ್ರರನ್ನು ಬದುಕಿಸುವ ಈ ದಿವ್ಯ ಮಣಿಯನ್ನು ಇಗೋ ತರಿಸಿದ್ದೇನೆ. ಇದನ್ನು ನೀನು ನಿನ್ನ ತಂದೆಯ ಎದೆಯ ಮೇಲೆ ಇಡು. ಆಗ ನೀನು ಪುನಃ ಪಾಂಡವ ಅರ್ಜುನನನ್ನು ಜೀವಂತನಾಗಿ ಕಾಣುವೆ!”

ಹೀಗೆ ಹೇಳಲು ಪಾಪವನ್ನೆಸಗಿದ್ದ ಅಮಿತತೇಜಸ್ವೀ ಬಭ್ರುವಾಹನನು ಸ್ನೇಹಪೂರ್ವಕವಾಗಿ ಆ ಮಣಿಯನ್ನು ತಂದೆ ಪಾರ್ಥನ ಎದೆಯಮೇಲೆ ಇಟ್ಟನು. ಆ ಮಣಿಯನ್ನು ಇಟ್ಟೊಡನೆಯೇ ಪ್ರಭು ಜಿಷ್ಣುವು ಪುನಃ ಜೀವಿತನಾದನು. ಮಲಗಿದ್ದವನು ಎದ್ದೇಳುವಂತೆ ತನ್ನ ಕೆಂಪು ಕಣ್ಣುಗಳನ್ನು ಒರೆಸಿಕೊಳ್ಳುತ್ತಾ ಅವನು ಎದ್ದು ಕುಳಿತನು. ಸಂಜ್ಞೆಗಳನ್ನು



ಪಡೆದು ಸ್ವಸ್ಥನಾಗಿ ಮೇಲೆದ್ದ ಆ ಮಹಾತ್ಮ ಮನಸ್ವೀ ತಂದೆಯನ್ನು ನೋಡಿ ಬಭ್ರುವಾಹನನು ವಂದಿಸಿದನು. ಆ ಪುರುಷವ್ಯಾಘ್ರ ಶ್ರೀಮಂತನು ಪುನಃ ಮೇಲೇಳಲು ಸಂತೋಷಗೊಂಡ ಪಾಕಶಾಸನ ಇಂದ್ರನು ಅವನ ಮೇಲೆ ಪುಣ್ಯ ದಿವ್ಯವೃಷ್ಟಿಯನ್ನು ಸುರಿಸಿದನು. ಯಾರೂ ಬಾರಿಸದೇ ಇದ್ದರೂ ಮೇಘದ ಧ್ವನಿಯಲ್ಲಿ ದುಂದುಭಿಗಳು ಮೊಳಗಿದವು. ಆಕಾಶದಲ್ಲಿ “ಸಾಧು! ಸಾಧು!” ಎಂಬ ಮಹಾ ಧ್ವನಿಯು ಕೇಳಿಬಂದಿತು. ಮಹಾಬಾಹು ಧನಂಜಯನು ಸಮಾಧಾನಹೊಂದಿ ಮೇಲೆದ್ದು ಬಭ್ರುವಾಹನನನ್ನು ಆಲಂಗಿಸಿ ನೆತ್ತಿಯನ್ನು ಆಘ್ರಾಣಿಸಿದನು. ಅನತಿ ದೂರದಲ್ಲಿಯೇ ಉಲೂಪಿಯೊಡನೆ ಶೋಕಕರ್ಶಿತಳಾಗಿ ನಿಂತಿದ್ದ ಅವನ ತಾಯಿ ಚಿತ್ರಾಂಗದೆಯನ್ನೂ ನೋಡಿ, ಧನಂಜಯನು ಬಭ್ರುವಾಹನನಿಗೆ ಕೇಳಿದನು:

> “ಅಮಿತ್ರಘ್ನ! ಈ ರಣಾಂಗಣವು ಶೋಕ-ವಿಸ್ಮಯ-ಹರ್ಷಗಳಿಂದ ಕೂಡಿದಂತೆ ಕಾಣುತ್ತಿದೆ. ಇದಕ್ಕೆ ಕಾರಣವೇನಾದರೂ ನಿನಗೆ ತಿಳಿದಿದ್ದರೆ ಹೇಳು! ನಿನ್ನ ಜನನಿಯು ಏಕೆ ಈ ರಣಭೂಮಿಗೆ ಬಂದಿದ್ದಾಳೆ? ನಾಗೇಂದ್ರನ ಮಗಳು ಉಲೂಪಿಯೂ ಕೂಡ ಇಲ್ಲಿಗೆ ಏಕೆ ಬಂದಿದ್ದಾಳೆ? ನನ್ನ ಹೇಳಿಕೆಯಂತೆಯೇ ನಮ್ಮಿಬ್ಬರೊಡನೆ ಯುದ್ಧವು

ನಡೆಯಿತು ಎನ್ನುವುದು ನನಗೆ ತಿಳಿದಿದೆ. ಆದರೆ ಈ ಸ್ತ್ರೀಯರು ಇಲ್ಲಿಗೆ ಬರಲು ಕಾರಣವೇನೆಂದು ತಿಳಿಯಲು ಬಯಸುತ್ತೇನೆ."

ಹೀಗೆ ಕೇಳಲು ಮಣಿಪೂರಪತಿಯು ಅರ್ಜುನನಿಗೆ ಶಿರಸಾ ನಮಸ್ಕರಿಸಿ ಪ್ರಸನ್ನಗೊಳಿಸಿ ಇದನ್ನು ಉಲೂಪಿಯಲ್ಲಿ ಕೇಳಿ ತಿಳಿದುಕೊಳ್ಳಬೇಕೆಂದು ಪ್ರಾರ್ಥಿಸಿಕೊಂಡನು. ಅರ್ಜುನನು ಹೇಳಿದನು:

"ಕೌರವ್ಯಕುಲನಂದಿನಿ! ನೀನು ಮತ್ತು ಮಣಿಪೂರಪತಿಯ ತಾಯಿ ಚಿತ್ರಾಂಗದೆಯು ರಣಾಂಗಣಕ್ಕೆ ಏಕೆ ಬಂದಿರಿ? ಈ ರಾಜಾ ಬಭ್ರುವಾಹನನಿಗೆ ಕುಶಲವನ್ನೇ ಬಯಸುತ್ತಿರುವೆಯಲ್ಲವೇ? ನನಗೂ ಕೂಡ ಶುಭವನ್ನೇ ಬಯಸುತ್ತೀಯಲ್ಲವೇ? ನಾನಾಗಲೀ ಬಭ್ರುವಾಹನನಾಗಲೀ ಅಜ್ಞಾನದಿಂದ ನಿನಗೆ ಅಪ್ರಿಯವಾದುದನ್ನು ಏನನ್ನೂ ಮಾಡಿಲ್ಲ ತಾನೇ? ನಿನ್ನ ಸವತಿ ಚಿತ್ರವಾಹನನ ಮಗಳು ರಾಜಪುತ್ರೀ ವರಾರೋಹೇ ಚಿತ್ರಾಂಗದೆಯು ನಿನ್ನ ಕುರಿತು ಯಾವುದೇ ರೀತಿಯ ಅಪರಾಧವನ್ನೂ ಎಸಗಿಲ್ಲ ತಾನೇ?"

ಉರಗಪತಿಯ ಮಗಳು ನಗುತ್ತಾ ಅವನಿಗೆ ಉತ್ತರಿಸಿದಳು:

"ನೀನಾಗಲೀ, ನೃಪ ಬಭ್ರುವಾಹನನಾಗಲೀ ಮತ್ತು ನನ್ನ

ಸೇವಕಿಯಂತೆ ನಿಂತಿರುವ ಅವನ ತಾಯಿ ಚಿತ್ರಾಂಗದೆಯಾಗಲೀ ನನ್ನ ಕುರಿತು ಅಪರಾಧವನ್ನೆಸಗಿಲ್ಲ! ನಾನು ಇಲ್ಲಿಗೆ ಬಂದು ಮಾಡಿದುದೆಲ್ಲವನ್ನೂ ಕೇಳಬೇಕು. ಆದರೆ ನೀನು ಕೋಪಗೊಳ್ಳಬಾರದು. ಶಿರಸಾ ನಮಸ್ಕರಿಸಿ ಬೇಡಿಕೊಳ್ಳುತ್ತೇನೆ. ಕೌರವ್ಯ! ನಿನ್ನ ಪ್ರೀತಿಗೋಸ್ಕರವಾಗಿಯೇ ನಾನು ಇವೆಲ್ಲವನ್ನೂ ಮಾಡಿದೆನು. ಎಲ್ಲವನ್ನೂ ಕೇಳು! ಮಹಾಭಾರತ ಯುದ್ಧದಲ್ಲಿ ನೀನು ನೃಪ ಶಾಂತನವನನ್ನು ಅಧರ್ಮದಿಂದ ಸಂಹರಿಸಿದೆ. ಅದಕ್ಕೆ ಪ್ರಾಯಶ್ಚಿತ್ತವಾಗಿ ನಾನು ಇದನ್ನು ಮಾಡಬೇಕಾಯಿತು. ನಿನ್ನೊಡನೆ ನೇರವಾಗಿ ಯುದ್ಧಮಾಡುತ್ತಿರುವಾಗ ಭೀಷ್ಮನು ಕೆಳಗುರುಳಲಿಲ್ಲ. ಅವನೊಡನೆ ಯುದ್ಧಮಾಡುತ್ತಿದ್ದ ಶಿಖಂಡಿಯನ್ನು ಆಶ್ರಯಿಸಿ ನೀನು ಅವನನ್ನು ಕೆಳಗುರುಳಿಸಿದೆ! ಅದಕ್ಕೆ ಶಾಂತಿಯನ್ನು ಮಾಡಿಕೊಳ್ಳದೇ ನೀನು ಜೀವವನ್ನು ತ್ಯಜಿಸಿದ್ದೇ ಆದರೆ ನಿನ್ನ ಪಾಪಕರ್ಮದಿಂದ ನೀನು ನಿಶ್ಚಯವಾಗಿಯೂ ನರಕದಲ್ಲಿ ಬೀಳುತ್ತಿದ್ದೆ! ವಸುಗಳು ಮತ್ತು ಗಂಗೆಯೂ ಕೂಡ ಪುತ್ರನಿಂದ ಪರಾಜಯ ಹೊಂದುವ ಪ್ರಾಯಶ್ಚಿತ್ತವನ್ನೇ ನಿನಗೆ ವಿಧಿಸಿದ್ದರು. ಹಿಂದೆ ನೃಪ ಶಾಂತನವನು ಹತನಾದ ನಂತರ ಗಂಗಾತೀರಕ್ಕೆ

ಬಂದಿದ್ದಾಗ ವಸುಗಳು ಹೇಳುತ್ತಿದ್ದ ಈ ಮಾತನ್ನು ನಾನು ಕೇಳಿಸಿಕೊಂಡಿದ್ದೆನು. ದೇವ ವಸುಗಳು ಮಹಾನದಿಯಲ್ಲಿ ಮಿಂದು ಭಾಗೀರಥಿಯ ಸಮ್ಮತಿಯಂತೆ ಈ ಘೋರ ಮಾತುಗಳನ್ನಾಡಿದ್ದರು: “ಭಾಮಿನಿ! ಸಂಗ್ರಾಮದಲ್ಲಿ ಶಾಂತನವ ಭೀಷ್ಮನು ಅನ್ಯನೊಡನೆ ಯುದ್ಧದಲ್ಲಿ ತೊಡಗಿದ್ದಾಗ ಸವ್ಯಸಾಚಿಯು ಅವನನ್ನು ಹೊಡೆದುರುಳಿಸಿದನು. ಅವನ ಈ ಅಪರಾಧಕ್ಕಾಗಿ ಇಂದು ನಾವು ಅರ್ಜುನನಿಗೆ ಶಾಪವನ್ನು ಕೊಡುತ್ತೇವೆ!” ಅದಕ್ಕೆ ಅವಳು “ಹಾಗೆಯೇ ಆಗಲಿ!” ಎಂದಳು. ಅತ್ಯಂತ ದುಃಖಿತಳಾದ ನಾನು ನಡೆದುದನ್ನು ತಂದೆಗೆ ತಿಳಿಸಿದೆನು. ಅದನ್ನು ಕೇಳಿ ಅವನೂ ಕೂಡ ಅತ್ಯಂತ ದುಃಖಿತನಾದನು. ನನ್ನ ತಂದೆಯು ನಿನಗೋಸ್ಕರವಾಗಿ ವಸುಗಳಲ್ಲಿ ಹೋಗಿ ಬೇಡಿಕೊಂಡನು. ಪುನಃ ಪುನಃ ಬೇಡಿಕೊಂಡನಂತರ ಅವರು ಅವನಿಗೆ ಹೀಗೆ ಹೇಳಿದರು: “ಮಹಾಭಾಗ! ಇವನು ರಣಮಧ್ಯದಲ್ಲಿರುವಾಗ ಯುವಕ ಮಣಿಪೂರೇಶ್ವನು ಇವನನ್ನು ಪುನಃ ಶರಗಳಿಂದ ಹೊಡೆದು ಭೂಮಿಗುರುಳಿಸುತ್ತಾನೆ! ಇದಾದನಂತರ ಅವನು ಶಾಪದಿಂದ ಮುಕ್ತನಾಗುತ್ತಾನೆ. ನೀನು

ಈಗ ಹೋಗು!" ಎಂದು ವಸುಗಳು ಅವನಿಗೆ ಹೇಳಿದರು. ಅದನ್ನು ಅವನು ನನಗೆ ಹೇಳಿದನು. ಅದನ್ನು ಕೇಳಿ ನಾನು ನಿನ್ನನ್ನು ಆ ಶಾಪದಿಂದ ವಿಮೋಚನಗೊಳಿಸಿದ್ದೇನೆ. ದೇವರಾಜನೂ ಕೂಡ ನಿನ್ನನ್ನು ಸಮರದಲ್ಲಿ ಪರಾಜಯಗೊಳಿಸಲಾರನು. ಪುತ್ರನು ಆತ್ಮನಿಗೆ ಸಮಾನ ಎಂದು ಸ್ಮೃತಿಗಳು ಹೇಳುತ್ತವೆ. ಆದುದರಿಂದ ಬಭ್ರುವಾಹನನಿಂದ ನೀನು ಪರಾಜಿತನಾಗಿರುವುದರಲ್ಲಿ ನಿನ್ನ ದೋಷವು ಸ್ವಲ್ಪವೂ ಇಲ್ಲವೆಂದು ನನ್ನ ಅಭಿಪ್ರಾಯ. ನೀನು ಹೇಗೆ ಇದನ್ನು ತಿಳಿದುಕೊಳ್ಳುತ್ತೀಯೋ?"

ಇದನ್ನು ಕೇಳಿ ಪ್ರಸನ್ನಾತ್ಮನಾದ ವಿಜಯ ಅರ್ಜುನನು ಹೀಗೆ ಹೇಳಿದನು:

"ದೇವಿ! ನೀನು ನಡೆಸಿದುದೆಲ್ಲವೂ ನನಗೆ ಸುಪ್ರಿಯವಾಗಿಯೇ ಇವೆ!" ಹೀಗೆ ಹೇಳಿ ಜಯ ಅರ್ಜುನನು ಕೌರವ್ಯಸೊಸೆ ಚಿತ್ರಾಂಗದೆಗೆ ಕೇಳಿಸುವಂತೆ ಮಗ ಮಣಿಪೂರೇಶ್ವರನಿಗೆ ಇಂತೆಂದನು: "ಬರುವ ಚೈತ್ರದಲ್ಲಿ ಯುಧಿಷ್ಠಿರನ ಅಶ್ವಮೇಧವು ನಡೆಯಲಿದೆ. ನೃಪ! ಅದಕ್ಕೆ ತಾಯಂದಿರಿಬ್ಬರು ಮತ್ತು ಅಮಾತ್ಯರೊಂದಿಗೆ ಬರಬೇಕು." ಪಾರ್ಥನು ಹೀಗೆ

ಹೇಳಲು ಧೀಮಾನ್ ರಾಜಾ ಬಭ್ರುವಾಹನನು
ಕಂಬನಿದುಂಬಿದ ಕಣ್ಣುಗಳುಳ್ಳವನಾಗಿ ತಂದೆಗೆ ಹೇಳಿದನು:
"ಧರ್ಮಜ್ಞ! ನಿನ್ನ ಶಾಸನದಂತೆ ನಾನು ಬರುತ್ತೇನೆ.
ಅಶ್ವಮೇಧ ಮಹಾಯಜ್ಞದಲ್ಲಿ ನಾನು ದ್ವಿಜಾತಿಯವರಿಗೆ
ಸೇವಕನಾಗಿರುತ್ತೇನೆ. ನನ್ನ ಮೇಲೆ ಅನುಗ್ರಹ ತೋರಿಸುವ
ಸಲುವಾಗಿ ಪತ್ನಿಯರಿಬ್ಬರೊಂದಿಗೆ ನಿನ್ನದೇ ಆದ ಈ
ಪುರವನ್ನು ಪ್ರವೇಶಿಸು. ಅದರ ಕುರಿತು ವಿಚಾರಿಸಬೇಡ!
ನಿನ್ನದೇ ಮನೆಯಲ್ಲಿ ಒಂದು ರಾತ್ರಿಯನ್ನು ಸುಖವಾಗಿ ಕಳೆದು
ನಾಳೆ ಪುನಃ ಅಶ್ವವನ್ನು ಹಿಂಬಾಲಿಸಿ ಹೋಗಬಹುದು."

ಪುತ್ರನು ಹೀಗೆ ಹೇಳಲು ವಾನರಕೇತನ ಕೌಂತೇಯನು ಮುಗುಳ್ನಗುತ್ತಾ ಚಿತ್ರಾಂಗದ ಸುತ ಮಗನಿಗೆ ಹೇಳಿದನು:

"ಮಹಾಬಾಹೋ! ದೀಕ್ಷಾಬದ್ಧನಾಗಿ ನಾನು
ತಿರುಗಾಡುತ್ತಿರುವೆನೆನ್ನುವುದು ನಿನಗೆ ತಿಳಿದೇ ಇದೆ. ಆದು
ಮುಗಿಯುವವರೆಗೆ ನಾನು ನಿನ್ನ ಪುರವನ್ನು ಪ್ರವೇಶಿಸಲಾರೆ.
ಯಜ್ಞದ ಈ ಕುದುರೆಯು ಮನಬಂದಂತೆ ಹೋಗುತ್ತಿರುತ್ತಿದೆ.
ಆದುದರಿಂದ ನನಗೆ ನಿರ್ದಿಷ್ಟ ಸ್ಥಾನವೆನ್ನುವುದೂ ಇಲ್ಲ.
ಹೊರಡುತ್ತೇನೆ. ನಿನಗೆ ಮಂಗಳವಾಗಲಿ!"



ಅಲ್ಲಿಯೇ ವಿಧಿವತ್ತಾಗಿ ಪೂಜಿತನಾದ ಪಾಕಶಾಸನಿ ಭರತಸತ್ತಮನು ಪತ್ನಿಯಿಬ್ಬರಿಂದಲೂ ಬೀಳ್ಕೊಂಡು ಹೊರಟನು.

## ಮಾಗಧಪರಾಜಯ

ಆ ಕುದುರೆಯಾದರೋ ಸಮುದ್ರಪರ್ಯಂತವಾಗಿ ಇಡೀ ಭೂಮಿಯನ್ನು ಸಂಚರಿಸಿ, ಹಿಂದಿರುಗಿ ಹಸ್ತಿನಾಪುರಕ್ಕೆ ಅಭಿಮುಖವಾಗಿ ಹೊರಟಿತು. ಕಿರೀಟ ಧಾರೀ ತೇಜಸ್ವೀ ಅರ್ಜುನನೂ ಕೂಡ ಅದನ್ನು ಹಿಂಬಾಲಿಸಿಯೇ ಹೋಗುತ್ತಿದ್ದನು. ಆಗ ಅದು ದೈವೇಚ್ಛೆಯಂತೆ ರಾಜಗೃಹ ಪುರವನ್ನು ತಲುಪಿತು. ಕ್ಷತ್ರಧರ್ಮನಿರತನಾಗಿದ್ದ ವೀರ ಜರಾಸಂಧನ ಮೊಮ್ಮಗನು ಅದನ್ನು ಕಟ್ಟಿ ಯುದ್ಧಕ್ಕೆ ಆಹ್ವಾನಿಸಿದನು. ಅನಂತರ ರಥವನ್ನೇರಿ, ಧನುಸ್ಸು-ಶರಗಳನ್ನೂ ಭತ್ತಳಿಕೆಯನ್ನೂ ಹಿಡಿದು ಮೇಘಸಂಧಿಯು ಪುರದಿಂದ ಹೊರಟು ಪದಾತಿಯಾಗಿದ್ದ ಧನಂಜಯನನ್ನು ಆಕ್ರಮಣಿಸಿದನು. ಮಹಾತೇಜಸ್ವೀ ಮೇಘಸಂಧಿಯು ಧನಂಜಯನ ಬಳಿಸಾರಿ ಕೌಶಲವಿಲ್ಲದ ಬಾಲಭಾವದ ಈ ಮಾತನ್ನಾಡಿದನು:

> “ಭಾರತ! ಇಲ್ಲಿಯ ವರೆಗೆ ಈ ಕುದುರೆಯನ್ನು ಸ್ತ್ರೀಯರ ಮಧ್ಯದಲ್ಲಿ ನಡೆಸಿಕೊಂಡು ಬಂದಿರುವಂತಿದೆ! ಈ

ಕುದುರೆಯನ್ನು ನಾನು ಅಪಹರಿಸುತ್ತೇನೆ. ಪ್ರಯತ್ನಪಟ್ಟು ಅದನ್ನು ಬಿಡಿಸಿಕೋ! ನನ್ನ ಪಿತೃಗಳು ಯುದ್ಧದಲ್ಲಿ ನಿನಗೆ ಅನುನಯವಾಗಿ ನಡೆದುಕೊಂಡಿದ್ದಿರಬಹುದು. ನಿನ್ನ ಆತಿಥ್ಯವನ್ನು ನಾನು ಸರಿಯಾಗಿ ಮಾಡುತ್ತೇನೆ. ನನ್ನ ಮೇಲೆ ಪ್ರಹರಿಸು ಅಥವಾ ನಾನು ನಿನ್ನ ಮೇಲೆ ಪ್ರಹರಿಸುತ್ತೇನೆ." ಇದಕ್ಕೆ ಪ್ರತಿಯಾಗಿ ಪಾಂಡವ ಅರ್ಜುನನು ನಗುತ್ತಿರುವನೋ ಎನ್ನುವಂತೆ ಇಂತೆಂದನು: "ನನ್ನ ಹಿರಿಯಣ್ಣ ನೃಪತಿಯು ಈ ಕುದುರೆಯ ಸಂಚಾರಕ್ಕೆ ವಿಘ್ನವನ್ನುಂಟುಮಾಡುವವರನ್ನು ತಡೆ ಎಂಬ ವ್ರತವನ್ನು ವಹಿಸಿರುವನು. ಇದು ನಿನಗೆ ನಿಶ್ಚಯವಾಗಿಯೂ ತಿಳಿದೇ ಇದೆ. ಯಥಾಶಕ್ತಿಯಾಗಿ ನೀನು ನನ್ನನ್ನು ಪ್ರಹರಿಸು. ನನಗೆ ಕೋಪವಾಗುವುದಿಲ್ಲ!" ಹೀಗೆ ಹೇಳಲು ಮಗಧೇಶ್ವರನು ಮೊದಲು ಪಾಂಡವನ ಮೇಲೆ ಸಹಸ್ರಾಕ್ಷನು ಮಳೆಗರೆಯುವಂತೆ ಸಹಸ್ರ ಶರಗಳ ಮಳೆಯನ್ನು ಸುರಿಸಿದನು. ಆಗ ಗಾಂಡೀವಧಾರೀ ಶೂರ ಅರ್ಜುನನು ಗಾಂಡೀವದಿಂದ ಬಿಟ್ಟ ಶರಗಳಿಂದ ಸುಲಭವಾಗಿ ಆ ಶರಗಳನ್ನು ನಿರಸನಗೊಳಿಸಿದನು. ಅವನ ಬಾಣಸಂಕೀರ್ಣಗಳನ್ನು ನಿರಸನಗೊಳಿಸಿ ವಾನರಕೇತನನು

ಪನ್ನಗಗಳಂತೆ ಪ್ರಜ್ವಲಿಸುವ ಮುಖಗಳುಳ್ಳ ಶರಗಳನ್ನು ಅವನ ಶರೀರ ಮತ್ತು ಸಾರಥಿಗಳನ್ನು ಬಿಟ್ಟು - ಧ್ವಜ, ಪತಾಕದಂಡ, ರಥಯಂತ್ರ, ಅನ್ಯ ರಥಾಂಗಗಳು ಮತ್ತು ಕುದುರೆಗಳ ಮೇಲೆ ಪ್ರಯೋಗಿಸಿದನು. ಪಾರ್ಥ ಫಲ್ಗುನನು ಅವನ ಶರೀರವನ್ನು ಹಾಗೆ ರಕ್ಷಿಸಲು, ತನ್ನ ವೀರ್ಯವೇ ಇದಕ್ಕೆ ಕಾರಣವೆಂದು ತಿಳಿದ ಮಾಗಧನು ಅವನನ್ನು ಶರಗಳಿಂದ ಪ್ರಹರಿಸಿದನು. ಮಾಗಧನಿಂದ ಪ್ರಹರಿಸಲ್ಪಟ್ಟ ಗಾಂಡೀವಧಾರಿ ಶೂರ ಅರ್ಜುನನು ಆಗ ವಸಂತದಲ್ಲಿ ಹೂಬಿಟ್ಟ ದೊಡ್ಡ ಪಲಾಶವೃಕ್ಷದಂತೆ ಶೋಭಿಸಿದನು. ವಧಿಸದೇ ಇದ್ದ ಪಾಂಡವರ್ಷಭನನ್ನು ಮಾಗಧನು ಪ್ರಹರಿಸುತ್ತಿದ್ದುದರಿಂದಲೇ ಅವನು ಲೋಕವೀರ ಕೌರವ್ಯನ ಎದಿರು ಅಷ್ಟು ಹೊತ್ತು ಯುದ್ಧಮಾಡಲು ಸಾಧ್ಯವಾಯಿತು. ಸಂಕ್ರುದ್ಧನಾದ ಸವ್ಯಸಾಚಿಯಾದರೋ ಧನುಸ್ಸನ್ನು ಬಲವಾಗಿ ಸೆಳೆದು ಕುದುರೆಗಳನ್ನು ಸಂಹರಿಸಿದನು ಮತ್ತು ಸಾರಥಿಯ ಶಿರವನ್ನು ಅಪಹರಿಸಿದನು. ಕ್ಷುರದಿಂದ ಅವನ ಚಿತ್ರಿತವಾಗಿದ್ದ ಮಹಾ ಧನುಸ್ಸನ್ನೂ ತುಂಡರಿಸಿದನು. ಅವನ ಹಸ್ತಾವಾಪವನ್ನೂ, ಪತಾಕೆ-ಧ್ವಜಗಳನ್ನೂ ಕೆಳಗುರುಳಿಸಿದನು. ಕುದುರೆಗಳನ್ನು,

ಧನುಸ್ಸನ್ನೂ ಮತ್ತು ಸಾರಥಿಯನ್ನೂ ಕಳೆದುಕೊಂಡು ವ್ಯಥಿತನಾದ ರಾಜಾ ಮೇಘಸಂಧಿಯು ಗದೆಯನ್ನು ತೆಗೆದುಕೊಂಡು ಅದನ್ನು ವೇಗವಾಗಿ ಕೌಂತೇಯನ ಮೇಲೆ ಪ್ರಹರಿಸಿದನು. ಬೀಳುವುದರೊಳಗೇ ಆ ಹೇಮಪರಿಷ್ಕೃತ ಗದೆಯನ್ನು ಅರ್ಜುನನು ಗೃಧ್ರರೆಕ್ಕೆಗಳುಳ್ಳ ಅನೇಕ ಶರಗಳಿಂದ ಅನೇಕ ಚೂರುಗಳನ್ನಾಗಿ ತುಂಡರಿಸಿದನು. ಮಣಿಬಂಧನವು ಒಡೆದು ಆ ಗದೆಯು ಸಹಸ್ರ ಚುರುಗಳಾಗಿ ಮುಷ್ಟಿಯಿಂದ ಹೆಣ್ಣುಸರ್ಪವು ನುಸುಳುವಂತೆ ನುಸುಳಿ ಕೆಳಗೆ ಬಿದ್ದಿತು. ವಿರಥನೂ, ಧನುಸ್ಸು-ಗದೆಗಳಿಂದ ವರ್ಜಿತನೂ ಆಗಿದ್ದ ಅವನನ್ನು ಸಮರಾಗ್ರಣಿ ಧೀಮಾನ್ ಅರ್ಜುನನು ಇನ್ನೂ ಪ್ರಹರಿಸಲು ಇಚ್ಛಿಸಲಿಲ್ಲ. ಹೀಗೆ ಕ್ಷತ್ರಧರ್ಮದಲ್ಲಿ ನಿರತನಾಗಿದ್ದ ಮತ್ತು ವಿಮನಸ್ಕನಾಗಿದ್ದ ಅವನಿಗೆ ಕಪಿಕೇತನ ಅರ್ಜುನನು ಸಾಂತ್ವಪೂರ್ವಕ ಈ ಮಾತುಗಳನ್ನಾಡಿದನು: "ಮಗೂ ಪಾರ್ಥಿವ! ನೀನು ಕ್ಷತ್ರಧರ್ಮವನ್ನು ಸಾಕಷ್ಟು ಪ್ರದರ್ಶಿಸಿರುವೆ! ಬಾಲಕನಾದ ನೀನು ಸಮರದಲ್ಲಿ ಅನೇಕ ಕರ್ಮಗಳನ್ನೆಸಗಿರುವೆ! ಹಿಂದಿರುಗು! ನೃಪರನ್ನು ಸಂಹರಿಸಬಾರದೆಂದು ಯುಧಿಷ್ಠಿರನ ಸಂದೇಶವಾಗಿದೆ.

ಆದುದರಿಂದ ರಣದಲ್ಲಿ ನೀನು ಅಪರಾಧವನ್ನೆಸಗಿದ್ದರೂ ಜೀವದಿಂದ ಉಳಿದುಕೊಂಡಿರುವೆ!”

ಆಗ ಮಾಗಧನು ತಾನು ಅರ್ಜುನನಿಂದ ನಿರಾಕೃತನಾದನೆಂದು ತಿಳಿದು ಅವನ ಮಾತನ್ನು ಸತ್ಯವೆಂದು ಸ್ವೀಕರಿಸಿ, ಅವನನ್ನು ಅಂಜಲೀಬದ್ಧನಾಗಿ ಪೂಜಿಸಿದನು. ಅರ್ಜುನನು ಅವನನ್ನು ಸಮಾಧಾನಗೊಳಿಸಿ ಪುನಃ ಇದನ್ನು ಹೇಳಿದನು:

“ಬರುವ ಚೈತ್ರದಲ್ಲಿ ನೃಪನ ಅಶ್ವಮೇಧಕ್ಕೆ ನೀನು ಬರಬೇಕು!”

ಇದಕ್ಕೆ ಹಾಗೆಯೇ ಆಗಲಿ ಎಂದು ಹೇಳಿ ಸಹದೇವನ ಮಗ ಮೇಘಸಂಧಿಯು ಆ ಕುದುರೆಯನ್ನು ಮತ್ತು ಯೋಧಶ್ರೇಷ್ಠ ಫಲ್ಗುನನನ್ನು ವಿಧಿವತ್ತಾಗಿ ಪೂಜಿಸಿದನು. ಅನಂತರ ಆ ಕುದುರೆಯು ಯಥೇಚ್ಛವಾಗಿ ಪುನಃ ಸಂಚರಿಸತೊಡಗಿತು. ಸಮುದ್ರತೀರದಲ್ಲಿಯೇ ಮುಂದೆ ಹೋಗಿ ವಂಗ-ಪುಂಡ್ರ-ಕೇರಳಗಳಿಗೆ ಸಂಚರಿಸಿತು. ಅಲ್ಲಲ್ಲಿ ಅನೇಕ ಮ್ಲೇಚ್ಛ ಸೇನೆಗಳನ್ನು ಧನಂಜಯನು ತನ್ನ ಗಾಂಡೀವ ಧನುಸ್ಸಿನಿಂದ ಗೆದ್ದನು.

## ಏಕಲವ್ಯಸುತ ಪರಾಜಯ

ಶ್ವೇತವಾಹನ ಪಾಂಡವನು ಮಾಗಧನಿಂದ ಪೂಜಿಸಲ್ಪಟ್ಟು ದಕ್ಷಿಣದಿಶೆಯನ್ನು ಹಿಡಿದು ಕುದುರೆಯನ್ನು ಹಿಂಬಾಲಿಸಿ ಹೋದನು. ಅನಂತರ ಆ ಬಲಶಾಲೀ ಕಾಮಚರ ಕುದುರೆಯು ಪುನಃ ಹಿಂದಿರುಗಿ ಚೇದಿಯರ ರಮ್ಯ ಪುರಿ ಶುಕ್ತಿಪುರವನ್ನು ತಲುಪಿತು. ಅಲ್ಲಿ ಶಿಶುಪಾಲನ ಮಗ ಮಹಾಬಲ ಶರಭನು ಯುದ್ಧಮಾಡದೇ ಅವನನ್ನು ಗೌರವಿಸಿ ಪೂಜಿಸಿದನು. ಅಲ್ಲಿ ಪೂಜಿಸಲ್ಪಟ್ಟು ಆ ಉತ್ತಮ ಕುದುರೆಯು ಕಾಶೀ, ಆಂಧ್ರ, ಕೋಸಲ, ಕಿರಾತ ಮತ್ತು ತಂಗಣ ರಾಷ್ಟ್ರಗಳಲ್ಲಿ ಸಂಚರಿಸಿತು. ಅಲ್ಲಿ ಯಥಾನ್ಯಾಯವಾಗಿ ಸತ್ಕಾರಗಳನ್ನು ಸ್ವೀಕರಿಸಿ ಪಾಂಡವ ಕೌಂತೇಯನು ಪುನಃ ಹಿಂದಿರುಗಿ ದಶಾರ್ಣದೇಶಕ್ಕೆ ಬಂದನು. ಅಲ್ಲಿ ಚಿತ್ರಾಂಗದ ಎಂಬ ಹೆಸರಿನ ಬಲವಾನ್ ವಸುಧಾಧಿಪನೊಡನೆ ವಿಜಯ ಅರ್ಜುನನ ಅತಿಭೈರವ ಯುದ್ಧವು ನಡೆಯಿತು. ಅವನನ್ನು ಕೂಡ ಪರಾಜಯಗೊಳಿಸಿ ಪುರುಷರ್ಷಭ ಕಿರೀಟಿಯು ನಿಷಾದರಾಜ ಏಕಲವ್ಯನ ರಾಜ್ಯಕ್ಕೆ ಬಂದನು. ಏಕಲವ್ಯನ ಮಗನು ಅವನನ್ನು ಆಗ ಯುದ್ಧದ ಮೂಲಕವೇ ಸ್ವಾಗತಿಸಿದನು. ನಿಷಾದನೊಂದಿಗೆ ಅರ್ಜುನನು ರೋಮಾಂಚಕಾರೀ ಸಂಗ್ರಾಮವನ್ನು ನಡೆಸಿದನು. ಆಗ ಸಮರದಲ್ಲಿ ಸೋಲನ್ನೇ ಹೊಂದದಿದ್ದ ವೀರ ಕೌಂತೇಯನು ಯಜ್ಞಕ್ಕೆ ವಿಘ್ನವನ್ನುಂಟುಮಾಡಲು ತೊಡಗಿದ್ದ ಅವನನ್ನೂ ಕೂಡ ಸಮರದಲ್ಲಿ

ಗೆದ್ದನು. ನೈಷಾದಿಯನ್ನು ಗೆದ್ದು ಅವನಿಂದ ಪೂಜಿಸಲ್ಪಟ್ಟು ಪಾಕಶಾಸನಿಯು ಪುನಃ ದಕ್ಷಿಣಸಮುದ್ರದ ತೀರಪ್ರದೇಶಕ್ಕೆ ಹೋದನು. ಅಲ್ಲಿಯೂ ಕೂಡ ದ್ರವಿಡ, ಅಂಧ್ರ, ರೌದ್ರ, ಮಾಹಿಷಕರು ಮತ್ತು ಕೋಲ್ಲಗಿರಿಯವರೊಂದಿಗೆ ಕಿರೀಟಿಯ ಯುದ್ಧವು ನಡೆಯಿತು. ಕುದುರೆಯ ವಶದಲ್ಲಿಯೇ ಇದ್ದ ಅವನು ಸೌರಾಷ್ಟ್ರದೇಶಕ್ಕೆ ಹೋದನು. ಅಲ್ಲಿಂದ ಗೋಕರ್ಣ ಮತ್ತು ಪ್ರಭಾಸ ಕ್ಷೇತ್ರಗಳಿಗೂ ಹೋದನು. ಅನಂತರ ಕುರುರಾಜನ ಯಜ್ಞದ ಆ ಶ್ರೀಮಂತ ಕುದುರೆಯು ವೃಷ್ಣಿವೀರರಿಂದ ರಕ್ಷಿತವಾದ ರಮ್ಯ ದ್ವಾರವತಿಯನ್ನು ತಲುಪಿತು. ಯಾದವ ಕುಮಾರರು ಆ ಶ್ರೇಷ್ಠ ಕುದುರೆಯನ್ನು ಕಟ್ಟಿಹಾಕಲು ಮುಂದೆಬಂದಾಗ ಉಗ್ರಸೇನನು ಅವರನ್ನು ತಡೆದನು. ಆಗ ವೃಷ್ಣಿ-ಅಂಧಕರ ರಾಜನು, ಕಿರೀಟಿಯ ಸೋದರ ಮಾವ ವಸುದೇವನೊಂದಿಗೆ ಪುರದಿಂದ ಹೊರಬಂದನು. ಅವರಿಬ್ಬರೂ ಒಂದಾಗಿ ಕುರುಶ್ರೇಷ್ಠ ಭರತಶ್ರೇಷ್ಠನನ್ನು ವಿಧಿವತ್ತಾಗಿ ಪರಮ ಪ್ರೀತಿಪೂರ್ವಕವಾಗಿ ಸತ್ಕರಿಸಿದರು. ಅನಂತರ ಅವರಿಬ್ಬರಿಂದ ಅನುಮತಿಯನ್ನು ಪಡೆದು ಅರ್ಜುನನು ಕುದುರೆಯು ಎಲ್ಲಿಗೆ ಹೋಗುತ್ತಿತ್ತೋ ಅಲ್ಲಿಗೆ ಹೋದನು. ಬಳಿಕ ಆ ಕುದುರೆಯು ಸಮುದ್ರದ ಪಶ್ಚಿಮ ತೀರದ ದೇಶದಲ್ಲಿ ಸಂಚರಿಸಿ, ಕ್ರಮೇಣವಾಗಿ ಪಂಚನದ ಪ್ರದೇಶಕ್ಕೆ ಬಂದಿತು.

ಗಾಂಧಾರದೇಶವನ್ನು ಪ್ರವೇಶಿಸಿ ಅಲ್ಲಿಯೂ ಕೂಡ ಕೌಂತೇಯನಿಂದ ಹಿಂಬಾಲಿಸಲ್ಪಟ್ಟ ಆ ಕುದುರೆಯು ಯಥೇಚ್ಛವಾಗಿ ಸಂಚರಿಸಿತು. ಅಲ್ಲಿ ಹಿಂದಿನ ವೈರವನ್ನೇ ಸಾಧಿಸುತ್ತಿದ್ದ ಶಕುನಿಯ ಮಗ ಗಾಂಧಾರರಾಜನೊಡನೆ ಮಹಾತ್ಮ ಅರ್ಜುನನ ಯುದ್ಧವು ನಡೆಯಿತು.

## ಗಾಂಧಾರಪರಾಜಯ

ಶಕುನಿಯ ಮಗ, ಗಾಂಧಾರರ ವೀರ ಮಹಾರಥನು ಪತಾಕ-ಧ್ವಜ-ಮಾಲೆಗಳಿಂದ ಅಲಂಕೃತಗೊಂಡ ಆನೆ-ಕುದುರೆ-ರಥಗಳಿಂದ ಪರಿಪೂರ್ಣವಾದ ಮಹಾ ಸೇನೆಯೊಂದಿಗೆ ಗುಡಾಕೇಶ ಅರ್ಜುನನೊಡನೆ ಯುದ್ಧಕ್ಕೆ ಹೊರಟನು. ನೃಪತಿ ಶಕುನಿಯ ವಧೆಯನ್ನು ಸಹಿಸಿಕೊಳ್ಳಲಾರದೇ ಆ ಯೋಧರು ಧನುಸ್ಸುಗಳನ್ನು ಹಿಡಿದುಕೊಂಡು ಒಂದಾಗಿ ಪಾರ್ಥನನ್ನು ಆಕ್ರಮಣಿಸಿದರು. ಧರ್ಮಾತ್ಮ ಅಪರಾಜಿತ ಬೀಭತ್ಸುವು ಅವರಿಗೆ ಯುಧಿಷ್ಠಿರನ ಸಂದೇಶವನ್ನು ತಿಳಿಸಿದನು. ಆದರೆ ಅದನ್ನು ಅವರು ಸ್ವೀಕರಿಸಲಿಲ್ಲ. ಪಾರ್ಥನು ಸಾಂತ್ವಪೂರ್ವಕವಾಗಿ ಅವರನ್ನು ತಡೆದರೂ ಕುಪಿತರಾದ ಅವರು ಕುದುರೆಯನ್ನು ಸುತ್ತುವರೆದರು. ಆಗ ಪಾಂಡವನು ಅತ್ಯಂತ ಕ್ರೋಧಿತನಾದನು. ಪಾಂಡವ ಅರ್ಜುನನು ಹೆಚ್ಚಿನ ಪ್ರಯತ್ನಪಡದೇ

ಗಾಂಡೀವದಿಂದ ಪ್ರಯೋಗಿಸಲ್ಪಟ್ಟ ಉರಿಯುತ್ತಿರುವ ಕ್ಷುರಗಳಿಂದ ಅವರ ಶಿರಗಳನ್ನು ಕತ್ತರಿಸಿದನು. ಪಾರ್ಥನಿಂದ ವಧಿಸಲ್ಪಡುತ್ತಿದ್ದ ಅವರು ಶರಗಳಿಂದ ಅತ್ಯಂತ ಗಾಯಗೊಂಡು ಗಾಬರಿಯಿಂದ ಕುದುರೆಯನ್ನು ಅಲ್ಲಿಯೇ ಬಿಟ್ಟು ಪಲಾಯನಗೈದರು. ಗಾಂಧಾರರು ಪ್ರಹರಿಸುತ್ತಿದ್ದರೂ ಪಾಂಡವರ್ಷಭ ತೇಜಸ್ವೀ ಅರ್ಜುನನು ಅವರನ್ನು ಕರೆ ಕರೆದು ಶಿರಗಳನ್ನು ಕೆರಗುರುಳಿಸಿದನು. ಹೀಗೆ ಎಲ್ಲ ಕಡೆಗಳಲ್ಲಿ ಗಾಂಧಾರರು ವಧಿಸಲ್ಪಡುತ್ತಿರಲು ಶುಕುನಿಯ ಮಗ ರಾಜನು ಪಾಂಡವನನ್ನು ಆಕ್ರಮಣಿಸಿದನು. ಕ್ಷತ್ರಧರ್ಮದಲ್ಲಿ ನಿರತನಾಗಿದ್ದು ಯುದ್ಧಮಾಡುತ್ತಿದ್ದ ರಾಜನಿಗೆ ಪಾರ್ಥನು ಹೇಳಿದನು:

> “ರಾಜಶಾಸನದಂತೆ ನಾನು ರಾಜರನ್ನು ವಧಿಸುವುದಿಲ್ಲ! ವೀರ! ನಿನ್ನ ಯುದ್ಧವನ್ನು ನಿಲ್ಲಿಸು! ಇಂದು ನೀನು ಪರಾಜಯಗೊಳ್ಳುವೆ!”

ಅಜ್ಞಾನದಿಂದ ಮೋಹಿತನಾಗಿದ್ದ ಶಕುನಿಯ ಮಗನು ಈ ಮಾತನ್ನು ಅನಾದರಿಸಿ, ಕರ್ಮಗಳಲ್ಲಿ ಶಕ್ರನ ಸಮನಾದ ಅರ್ಜುನನನ್ನು ಸಾಯಕಗಳಿಂದ ಮುಸುಕಿದನು. ಗಾಭರಿಗೊಳ್ಳದೇ ಪಾರ್ಥನು ಅರ್ಧಚಂದ್ರದ ಪತ್ರಿಯಿಂದ ಜಯದ್ರಥನ ಶಿರವನ್ನು ಹೇಗೋ ಹಾಗೆ ಅವನ ಶಿರಸ್ತ್ರಾಣವನ್ನು ಅಪಹರಿಸಿದನು. ಅದನ್ನು ನೋಡಿ

ಗಾಂಧಾರರರು ಎಲ್ಲರೂ ವಿಸ್ಮಯಗೊಂಡರು. ಉದ್ದೇಶಪೂರ್ವಕವಾಗಿಯೇ ಅವನು ರಾಜನನ್ನು ಕೊಲ್ಲಲಿಲ್ಲವೆಂದು ಅರ್ಥಮಾಡಿಕೊಂಡರು. ಗಾಂಧಾರರಾಜನ ಪುತ್ರನಾದರೋ ಅವಕಾಶವನ್ನು ಹುಡುಕುತ್ತಿದ್ದನು. ಸಿಂಹವನ್ನು ಕಂಡು ಬೆದರಿದ ಕ್ಷುದ್ರ ಮೃಗಗಳಂತೆ ಅನೇಕರು ಪಲಾಯನಗೈಯುತ್ತಿದ್ದರು. ಕೂಡಲೇ ಪಾರ್ಥನು ಸನ್ನತಪರ್ವ ಭಲ್ಲಗಳಿಂದ ಓಡಿಹೋಗುತ್ತಿದ್ದವರ ಶಿರಸ್ಸುಗಳನ್ನು ಕತ್ತರಿಸತೊಡಗಿದನು. ಪಾರ್ಥನು ಗಾಂಡೀವದಿಂದ ಪ್ರಯೋಗಿಸಿದ ಶರಗಳಿಂದ ಭುಜಗಳು ತುಂಡಾಗಿದ್ದುದೂ ಅವರಿಗೆ ಸ್ವಲ್ಪ ಸಮಯ ತಿಳಿಯುತ್ತಲೇ ಇರಲಿಲ್ಲ. ಭ್ರಾಂತಿಗೊಂಡ ಪದಾತಿಗಳು, ಆನೆಗಳು ಮತ್ತು ಕುದುರೆಗಳ ಆ ಬಲವು ಪಲಾಯನಮಾಡುತ್ತಿತ್ತು ಮತ್ತು ಹತವಾಗದೇ ಉಳಿದವರು ಪುನಃ ಪುನಃ ಸಂಘಟಿತರಾಗಿ ಹಿಂದಿರುಗಿ ಆಕ್ರಮಣಿಸುತ್ತಿದ್ದರು. ಆದರೆ ಮಹಾಶರಗಳಿಂದ ಶತ್ರುಗಳು ಕೆಳಗುರುಳುತ್ತಿದ್ದುದರಿಂದ ಆ ಅಗ್ರ್ಯಕರ್ಮಿ ವೀರ ಅರ್ಜುನನ ಮುಂದೆ ಅವರ್ಯಾರೂ ಹೆಚ್ಚುಹೊತ್ತು ಕಾಣಿಸಿಕೊಳ್ಳಲಿಲ್ಲ. ಆಗ ಗಾಂಧಾರರಾಜನ ಜನನಿಯು ಭೀತಳಾಗಿ ಮಂತ್ರಿಗಳನ್ನೂ ವೃದ್ಧರನ್ನೂ ಮುಂದಿಟ್ಟುಕೊಂಡು, ಉತ್ತಮ ಅರ್ಘ್ಯವನ್ನು ತೆಗೆದುಕೊಂಡು ನಗರಿಂದ ಹೊರಬಂದಳು. ಅವ್ಯಗ್ರಳಾಗಿದ್ದ ಅವಳು ಯುದ್ಧದುರ್ಮದ ಮಗನನ್ನು

ತಡೆದಳು ಮತ್ತು ಅಕ್ಲಿಷ್ಟಕಾರಿ ಜಿಷ್ಣುವನ್ನು ಪ್ರಸನ್ನಗೊಳಿಸಿದಳು. ಅವಳನ್ನು ಗೌರವಿಸಿ ಕೌಂತೇಯನು ಪ್ರಸನ್ನನಾದನು ಮತ್ತು ಶಕುನಿಯ ಮಗನನ್ನು ಸಂತೈಸುತ್ತಾ ಈ ಮಾತನ್ನಾಡಿದನು:

> “ಮಹಾಬಾಹೋ! ನನ್ನೊಡನೆ ಯುದ್ಧಮಾಡಬೇಕೆಂಬ ನಿನ್ನ ಈ ಬುದ್ಧಿಯು ನನಗೆ ಹಿಡಿಸಲಿಲ್ಲ. ಏಕೆಂದರೆ ನೀನು ನನ್ನ ಸೋದರನೇ ಆಗಿರುವೆ! ಮಾತೆ ಗಾಂಧಾರಿಯನ್ನು ಸ್ಮರಿಸಿಕೊಂಡು ಮತ್ತು ಧೃತರಾಷ್ಟ್ರನ ಸಲುವಾಗಿ ನಿನ್ನ ಅನುಯಾಯಿಗಳನ್ನು ಸಂಹರಿಸಿದರೂ ನಿನ್ನನ್ನು ಜೀವದಿಂದ ಉಳಿಸಿದ್ದೇನೆ. ಇನ್ನು ಮುಂದೆ ಹೀಗೆ ನಡೆದುಕೊಳ್ಳಬೇಡ! ವೈರವು ಇಲ್ಲಿಗೇ ಉಪಶಮನಗೊಳ್ಳಲಿ! ಬರುವ ಚೈತ್ರದಲ್ಲಾಗುವ ನೃಪನ ಅಶ್ವಮೇಧಕ್ಕೆ ಬರಬೇಕು.”

## ಯಜ್ಞಾಯತನನಿರ್ಮಾಣ

ಹೀಗೆ ಹೇಳಿ ಪಾರ್ಥನು ಕಾಮಚಾರೀ ಕುದುರೆಯನ್ನು ಅನುಸರಿಸಿ ಹೊರಟನು. ಆಗ ಆ ಕುದುರೆಯು ಹಸ್ತಿನಾಪುರಕ್ಕೆ ಹಿಂದಿರುಗಿತು. ಚಾರರ ಮೂಲಕ ಕುದುರೆಯು ಹಿಂದಿರುಗಿದುದನ್ನೂ ಅರ್ಜುನನು ಕುಶಲಿಯಾಗಿರುವನೂ ಎನ್ನುವುದನ್ನು ತಿಳಿದ ಯುಧಿಷ್ಠಿರನು

ಹರ್ಷಿತನಾದನು. ಗಾಂಧಾರದೇಶದಲ್ಲಿ ಮತ್ತು ಹಾಗೆಯೇ ಅನ್ಯ ದೇಶಗಳಲ್ಲಿ ವಿಜಯನ ಆ ಕರ್ಮವನ್ನು ಕೇಳಿ ನೃಪನು ಸುಪ್ರೀತನಾದನು. ಆಗ ಅದು ಪುಷ್ಯ ನಕ್ಷತ್ರದಿಂದ ಕೂಡಿದ ಮಾಘ ಶುಕ್ಲ ದ್ವಾದಶಿಯಾಗಿತ್ತು. ಆಗ ಕೌರವ ಧರ್ಮರಾಜ ಯುಧಿಷ್ಠಿರನು ಮಹಾತೇಜಸ್ವಿಗಳೂ ಮಹಾಮನಸ್ವಿಗಳೂ ಆದ ಎಲ್ಲ ಸಹೋದರರರನ್ನೂ – ಭೀಮ, ನಕುಲ, ಸಹದೇವರನ್ನು – ಕರೆಯಿಸಿದನು. ಆ ಸಮಯದಲ್ಲಿ ಧರ್ಮಭೃತರಲ್ಲಿ ಶ್ರೇಷ್ಠನೂ ಮಾತನಾಡುವವರಲ್ಲಿ ಶ್ರೇಷ್ಠನೂ ಆದ ಯುಧಿಷ್ಠಿರನು ಭೀಮಪರಾಕ್ರಮಿ ಭೀಮನನ್ನು ಉದ್ದೇಶಿಸಿ ಈ ಮಾತನ್ನಾಡಿದನು:

> "ಭೀಮಸೇನ! ಇಗೋ ನಿನ್ನ ತಮ್ಮನು ಕುದುರೆಯೊಂದಿಗೆ ಬರುತ್ತಿದ್ದಾನೆ. ಇದನ್ನು ಧನಂಜಯನನ್ನು ಅನುಸರಿಸಿ ಹೋಗಿದ್ದ ಪುರುಷರು ಮೊದಲಾಗಿ ಬಂದು ಹೇಳಿದ್ದಾರೆ. ಕುದುರೆಯೂ ಕೂಡ ಕಾಲಕ್ಕೆ ಸರಿಯಾಗಿ ಹಿಂದಿರುಗಿ ಬಂದಿದೆ. ಇದು ಮಾಘದ ಹುಣ್ಣಿಮೆ. ಒಂದು ತಿಂಗಳು ಮಾತ್ರ ಉಳಿದಿದೆ. ಆದುದರಿಂದ ವೇದಪಾರಗ ವಿದ್ವಾಂಸ ಬ್ರಾಹ್ಮಣರನ್ನು ಕರೆಯಿಸಬೇಕು. ಅಶ್ವಮೇಧ ಯಜ್ಞಕ್ಕೆ ಪ್ರಶಸ್ತ ಸ್ಥಳವನ್ನು ನೋಡಬೇಕು."

ಸವ್ಯಸಾಚಿಯು ಬರುತ್ತಿದ್ದಾನೆಂದು ನರಪತಿಯಿಂದ ಕೇಳಿದ ಭೀಮನು ಹೃಷ್ಟನಾಗಿ ನೃಪತಿಶಾಸನದಂತೆ ಮಾಡಬೇಕಾದ ಕಾರ್ಯಗಳಲ್ಲಿ ತೊಡಗಿದನು. ಆಗ ಭೀಮಸೇನನು ಪ್ರಾಜ್ಞ ಸ್ಥಪತಿಗಳು ಮತ್ತು ಯಜ್ಞಕರ್ಮಗಳಲ್ಲಿ ಕುಶಲರಾಗಿದ್ದ ಬ್ರಾಹ್ಮಣರನ್ನು ಮುಂದುಮಾಡಿಕೊಂಡು ಹೊರಟನು. ಕೌರವ್ಯನು ಶಾಲವೃಕ್ಷ ಸಮೂಹಗಳಿಂದ ಕೂಡಿದ್ದ ಭೂಪ್ರದೇಶವನ್ನು ಯಥಾವಿಧಿಯಾಗಿ ಯಜ್ಞವಾಟಿಕೆಗೆ ಅಳತೆಮಾಡಿಸಿದನು. ರಾಜಮಾರ್ಗಗಳಿಂದಲೂ ಸೌಧಗಳಿಂದಲೂ ಕೂಡಿದ ಮಣಿಹೇಮವಿಭೂಷಿತವಾದ ಯಜ್ಞಶಾಲೆಯನ್ನು ಕಟ್ಟಿಸಿದನು. ಸ್ತಂಭಗಳಲ್ಲಿ ಚಿನ್ನದ ಚಿತ್ರಗಳಿದ್ದವು. ದೊಡ್ಡ ತೋರಣಗಳಿದ್ದವು. ಯಜ್ಞಾಯತನ ಪ್ರದೇಶದಲ್ಲಿ ಶುದ್ಧ ಕಾಂಚನವನ್ನೇ ಬಳಸಲಾಗಿತ್ತು. ಆ ಧರ್ಮಾತ್ಮನು ಅಲ್ಲಲ್ಲಿ ಯಥಾವಿಧಿಯಾಗಿ ನಾನಾದೇಶನಿವಾಸೀ ರಾಜರಿಗಾಗಿ ಅಂತಃಪುರಗಳನ್ನು ಕಟ್ಟಿಸಿದನು. ನಾನಾ ದೇಶಗಳಿಂದ ಬಂದು ಸೇರಿದ ಬ್ರಾಹ್ಮಣರಿಗಾಗಿ ಅನೇಕ ವಿವಿಧ ಭವನಗಳನ್ನು ಭೀಮನು ಕಟ್ಟಿಸಿದನು. ಹಾಗೆಯೇ ನೃಪತಿಯ ಶಾಸನದಂತೆ ಭೀಮಸೇನನು ಅಕ್ಲಿಷ್ಟಕರ್ಮಿ ರಾಜರಿಗೆ ದೂತರನ್ನು ಕಳುಹಿಸಿದನು. ಕುರುಪತಿಗೆ ಪ್ರಿಯವಾಗಲೆಂದು ನೃಪಸತ್ತಮರು ಅನೇಕ ರತ್ನಗಳನ್ನೂ, ಸ್ತ್ರೀಯರನ್ನೂ, ಅಶ್ವ-

ಆಯುಧಗಳನ್ನು ತೆಗೆದುಕೊಂಡು ಆಗಮಿಸಿದರು. ಅವರು ವಾಸಿಸುತ್ತಿದ್ದ ಆ ಸಹಸ್ರಾರು ಶಿಬಿರಗಳಿಂದ ಬಂದ ಸಮುದ್ರದ ಭೋರ್ಗರೆತದಂತಿದ್ದ ಶಬ್ಧವು ಆಕಾಶವನ್ನೇ ಮುಟ್ಟುತ್ತಿತ್ತು. ಆಗಮಿಸಿದ್ದ ಅವರಿಗೆ ರಾಜೀವಲೋಚನ ರಾಜನು ಅತಿಮಾನುಷ ಅನ್ನ-ಪಾನಾದಿಗಳ ಮತ್ತು ಶಯನಗಳ ವ್ಯವಸ್ಥೆಯನ್ನು ಮಾಡಿಸಿದ್ದನು.  ಪುರುಷವ್ಯಾಘ್ರ ಧರ್ಮರಾಜನು ವಾಹನಗಳಿಗಾಗಿ ಧಾನ್ಯ, ಕಬ್ಬು ಮತ್ತು ಹಸುವಿನ ಹಾಲಿನಿಂದ ಸಮೃದ್ಧವಾದ ವಿವಿಧ ಭವನಗಳನ್ನು ಬಿಟ್ಟುಕೊಡುವಂತೆ ಆದೇಶವಿತ್ತಿದ್ದನು. ಧೀಮಂತ ಧರ್ಮರಾಜನ ಆ ಮಹಾಯಜ್ಞಕ್ಕೆ ಅನೇಕ ಬ್ರಹ್ಮವಾದೀ ಮುನಿಗಣಗಳು ಬಂದು ಸೇರಿದವು. ಶಿಷ್ಯರೊಂದಿಗೆ ಬಂದು ಸೇರಿದ್ದ ಆ ದ್ವಿಜಾತಿಪ್ರವರರನ್ನು ಕೌರವನು ಸ್ವಾಗತಿಸಿ ಸತ್ಕರಿಸಿದನು. ಮಹಾತೇಜಸ್ವಿ ಯುಧಿಷ್ಠಿರನು ದಂಭವನ್ನು ತ್ಯಜಿಸಿ ಅವರೆಲ್ಲರನ್ನೂ ಅವರವರ ವಾಸಸ್ಥಳಗಳಿಗೆ ತಲುಪುವವರೆಗೂ ಹಿಂಬಾಲಿಸಿ ಹೋಗುತ್ತಿದ್ದನು. ಯಜ್ಞವಿಧಿಯೆಲ್ಲವನ್ನೂ ನಿರ್ಮಿಸಿದ ಸ್ಥಪತಿಗಳು ಮತ್ತು ಅನ್ಯ ಶಿಲ್ಪಿಗಳು ಧರ್ಮರಾಜನಿಗೆ ಬಂದು ನಿವೇದಿಸಿದರು. ಅದನ್ನು ಕೇಳಿ ರಾಜಾ ಅಚ್ಯುತ ಧರ್ಮರಾಜನು ಸಹೋದರರೊಂದಿಗೆ ಎಲ್ಲವೂ ಕುಂದುಗಳಿಲ್ಲದೇ ನೆರವೇರಿತೆಂದು ಹೃಷ್ಟರೂಪನಾದನು.

## ಯಜ್ಞಸಮೃದ್ಧಿ

ಆ ಯಜ್ಞವು ನಡೆಯುತ್ತಿರಲಾಗಿ ವಾಗ್ಮಿ ತಾರ್ಕಿಕರು ಪರಸ್ಪರರನ್ನು ಗೆಲ್ಲಲೋಸಗ ಅನೇಕ ತರ್ಕಯುಕ್ತ ವಾದಗಳನ್ನು ಮಂಡಿಸುತ್ತಿದ್ದರು. ದೇವೇಂದ್ರನ ಯಜ್ಞಶಾಲೆಯಂತೆಯೇ ಭೀಮನು ವಿಧಿವತ್ತಾಗಿ ನಿರ್ಮಿಸಿದ್ದ ಆ ಯಜ್ಞಶಾಲೆಯನ್ನು ನೃಪತಿಯರು ನೋಡಿದರು. ಅಲ್ಲಿ ಸುವರ್ಣಖಚಿತ ತೋರಣಗಳನ್ನೂ, ಅನೇಕ ರತ್ನವಿಭೂಷಿತ ಶಯ್ಯಾಸನ ವಿಹಾರಗಳನ್ನೂ ಅವರು ನೋಡಿದರು. ಅಲ್ಲಿ ಚಿನ್ನವಲ್ಲದ ಯಾವ ಘಟಗಳೂ, ಪಾತ್ರೆಗಳೂ, ಕಡಾಯಿಗಳೂ, ಕಲಶಗಳೂ ಮತ್ತು ಶರಾವೆಗಳೂ ಇಲ್ಲದಿದ್ದುದನ್ನು ಪಾರ್ಥಿವರು ನೋಡಿದರು. ಶಾಸ್ತ್ರವಿಧಿಯನ್ನನುಸರಿಸಿ ದಾರುವೃಕ್ಷಗಳಿಂದ ನಿರ್ಮಿಸಿದ್ದ ಯೂಪಗಳೂ ಹೇಮಭೂಷಿತವಾಗಿದ್ದವು. ಅತ್ಯಂತ ವರ್ಚಸ್ಸಿನಿಂದ ಬೆಳಗುತ್ತಿದ್ದ ಅವುಗಳನ್ನು ಯಥಾಕಾಲದಲ್ಲಿ ವಿಧಿವತ್ತಾಗಿ ನಿರ್ಮಿಸಲಾಗಿತ್ತು. ಭೂಮಿಯ ಮೇಲೆ ಮತ್ತು ಜಲದಲ್ಲಿ ವಾಸಿಸುವ ಏನೆಲ್ಲ ಪಶುಗಳಿವೆಯೋ ಅವೆಲ್ಲವನ್ನೂ ಅಲ್ಲಿಗೆ ತಂದಿರುವುದನ್ನು ನೃಪರು ವೀಕ್ಷಿಸಿದರು. ಹಸುಗಳು, ಎಮ್ಮೆಗಳು, ವೃದ್ಧಸ್ತ್ರೀಯರು, ಜಲಚರಪ್ರಾಣಿಗಳು, ಮಾಂಸಾಹಾರಿ ಮೃಗಗಳು, ಪಕ್ಷಿಗಳು, ಜರಾಯುಜ-ಅಂಡಜ-ಸ್ವೇದಜ-ಉದ್ಭಿಜಗಳೆಂಬ ನಾಲ್ಕೂ ಪ್ರಕಾರದ

ಪ್ರಾಣಿಗಳು, ಪರ್ವತಪ್ರದೇಶಗಳಲ್ಲಿ ಮತ್ತು ಉಪವನಗಳಲ್ಲಿ ವಾಸಿಸುವ ಪ್ರಾಣಿಗಳನ್ನೂ ಅವರು ನೋಡಿದರು. ಹೀಗೆ ಸರ್ವ ಪಶು-ಗೋ-ಧನ-ಧಾನ್ಯಗಳಿಂದ ಸಮೃದ್ಧವಾಗಿದ್ದ ಆ ಯಜ್ಞವಾಟಿಕೆಯನ್ನು ನೋಡಿ ನೃಪರು ಪರಮ ವಿಸ್ಮಿತರಾದರು. ಬ್ರಾಹ್ಮಣರಿಗೆ ಮತ್ತು ವೈಶ್ಯರಿಗೆ ಅಲ್ಲಿ ಬಹುಮೃಷ್ಟಾನ್ನ ಭೋಜನದ ವ್ಯವಸ್ಥೆಯಿತ್ತು. ಒಂದು ಲಕ್ಷ ವಿಪ್ರರ ಭೋಜನವು ಪೂರ್ಣಗೊಳ್ಳಲು ಮೇಘನಿರ್ಘೋಷದಂತೆ ದುಂದುಭಿಯ ಮೊಳಗುತ್ತಿತ್ತು. ದಿವಸ ದಿವಸದಲ್ಲಿಯೂ ಆ ದುಂದುಭಿಯ ಶಬ್ಧವು ಮತ್ತೆ ಮತ್ತೆ ಕೇಳಿಬರುತ್ತಿತ್ತು. ಹೀಗೆ ಧೀಮತ ಧರ್ಮರಾಜನ ಯಜ್ಞವು ಮುಂದುವರೆಯಿತು. ಪರ್ವತೋಪಮವಾದ ಅನ್ನದ ಅನೇಕ ರಾಶಿಗಳನ್ನೂ, ಮೊಸರಿನ ಕಾಲುವೆಗಳನ್ನೂ, ತುಪ್ಪದ ಕೊಳಗಳನ್ನೂ ರಾಜರು ನೋಡಿದರು. ರಾಜನ ಆ ಮಹಾಕ್ರತುವಿನಲ್ಲಿ ನಾನಾ ದೇಶಗಳಿಂದ ರಾಜರು ಬಂದಿದ್ದರಿಂದ ಜಂಬೂದ್ವೀಪವೆಲ್ಲವೂ ಒಂದೇ ಕಡೆ ಬಂದು ಸೇರಿದೆಯೋ ಎನ್ನುವಂತೆ ತೋರುತ್ತಿತ್ತು. ಅಲ್ಲಿ ಸಹಸ್ರಾರು ಜಾತಿಗಳ ಪುರುಷರು ಅನೇಕ ಧನಗಳನ್ನು ತೆಗೆದುಕೊಂಡು ಎಲ್ಲೆಲ್ಲಿಂದಲೋ ಬಂದಿದ್ದರು. ಸುವರ್ಣದ ಹಾರಗಳನ್ನೂ ಮಣಿಕುಂಡಲಗಳನ್ನೂ ಧರಿಸಿದ್ದ ರಾಜರು ನೂರಾರು ಸಹಸ್ರಾರು ದ್ವಿಜಾಗ್ರರಿಗೆ ಬಡಿಸುತ್ತಿದ್ದರು. ಅವರ ಅನುಯಾಯಿಗಳು ಕೂಡ

ಬ್ರಾಹ್ಮಣರಿಗೆ ರಾಜಭೋಗ್ಯವಾದ ವಿಧವಿಧದ ಅನ್ನ-ಪಾನಗಳನ್ನು ಬಡಿಸುತ್ತಿದ್ದರು.

## ಅರ್ಜುನಪ್ರತ್ಯಾಗಮನ

ವೇದವಿದ ರಾಜರೂ ಪೃಥ್ವೀಶ್ವರರೂ ಆಗಮಿಸಿರುವುದನ್ನು ನೋಡಿ ರಾಜಾ ಯುಧಿಷ್ಠಿರನು ಭೀಮಸೇನನಿಗೆ ಹೇಳಿದನು:

> “ಇಲ್ಲಿಗೆ ಆಗಮಿಸಿರುವ ನರವ್ಯಾಘ್ರ ಜಗದೀಶ್ವರರೆಲ್ಲರೂ ಪೂಜಿಸಲ್ಪಡಲಿ! ಈ ನರೇಶ್ವರರು ಪೂಜಾರ್ಹರು.”

ಮಹಾತೇಜಸ್ವಿ ಭೀಮಸೇನನು ನಕುಲ-ಸಹದೇವರೊಂದಿಗೆ ಯಶಸ್ವಿ ನರೇಂದ್ರನು ಹೇಳಿದಂತೆಯೇ ಮಾಡಿದನು. ಆಗ ಸರ್ವಪ್ರಾಣಧಾರಿಗಳಲ್ಲಿ ಶ್ರೇಷ್ಠನಾದ ಗೋವಿಂದನು ಧರ್ಮಜ ಬಲದೇವನನ್ನು ಮುಂದೆಮಾಡಿಕೊಂಡು ಯುಯುಧಾನ ಸಾತ್ಯಕಿ, ಪ್ರದ್ಯುಮ್ನ, ಗದ, ನಿಶಠ, ಸಾಂಬ ಮತ್ತು ಕೃತವರ್ಮರೊಂದಿಗೆ ಅಲ್ಲಿಗೆ ಆಗಮಿಸಿದನು. ಮಹಾಭುಜ ಭೀಮನು ಅವರಿಗೆ ಕೂಡ ಪರಮ ಪೂಜೆಯನ್ನು ಮಾಡಿದನು. ಆ ನರರ್ಷಭರು ರತ್ನಖಚಿತ ಅರಮನೆಗಳನ್ನು ಪ್ರವೇಶಿಸಿದರು. ಯುಧಿಷ್ಠಿರನ ಸಮೀಪದಲ್ಲಿ ಮಾತನಾಡುತ್ತಿದ್ದ ಮಧುಸೂದನನು ಕೊನೆಯಲ್ಲಿ

ಬಹುಸಂಗ್ರಾಮಗಳಿಂದ ಕೃಶನಾಗಿರುವ ಅರ್ಜುನನ ಕುರಿತು ಮಾತನಾಡಿದನು. ಆಗ ಧರ್ಮರಾಜ ಕೌಂತೇಯನು ಅರಿಂದಮ ಸಹೋದರ ಜಿಷ್ಣುವಿನ ಕುರಿತು ಪುನಃ ಪುನಃ ಕೇಳಲು ಜಗತ್ಪತಿ ಕೃಷ್ಣನು ಅವನಿಗೆ ಹೇಳಿದನು:

> “ನೃಪ! ನನಗೆ ಆಪ್ತನಾದ ಮತ್ತು ದ್ವಾರಕೆಯಲ್ಲಿಯೇ ವಾಸಿಸುತ್ತಿದ್ದ ಪುರುಷನೋರ್ವನು ನನಗೆ ಪಾಂಡವಶ್ರೇಷ್ಠ ಅರ್ಜುನನು ಅನೇಕ ಸಂಗ್ರಾಮಗಳಲ್ಲಿ ಹೋರಾಡಿ ಕೃಶನಾಗಿರುವನೆಂದು ನನಗೆ ಹೇಳಿದನು. ಆ ಮಹಾಬಾಹುವು ಸಮೀಪದಲ್ಲಿಯೇ ಇರುವನೆಂದೂ ಅವನು ನನಗೆ ಹೇಳಿದನು. ಅಶ್ವಮೇಧದ ಸಿದ್ಧಿಗಾಗಿ ಮಾಡಬೇಕಾದ ಕಾರ್ಯಗಳನ್ನು ಮಾಡು!”

ಇದಕ್ಕೆ ಪ್ರತಿಯಾಗಿ ಧರ್ಮರಾಜ ಯುಧಿಷ್ಠಿರನು ಇಂತೆಂದನು:

> “ಮಾಧವ! ಸೌಭಾಗ್ಯವಶಾತ್ ಜಿಷ್ಣುವು ಕುಶಲನಾಗಿಯೇ ಹಿಂದಿರುಗುತ್ತಿದ್ದಾನೆ! ಪಾಂಡವರ ಬಲಾಗ್ರಣಿಯು ಏನಾದರೂ ಸಂದೇಶವನ್ನು ಕಳುಹಿಸಿದ್ದರೆ ಅದನ್ನು ನಿನ್ನಿಂದ ಕೇಳ ಬಯಸುತ್ತೇನೆ!”

ಹೀಗೆ ಹೇಳಲು ವೃಷ್ಣಿ-ಅಂಧಕರ ಪತಿ ವಾಗ್ಮಿಯು ಧರ್ಮಾತ್ಮ ಯುಧಿಷ್ಠಿರನಿಗೆ ಉತ್ತರಿಸಿದನು:

"ಮಹಾರಾಜ! ಆ ಪುರುಷನು ನನಗೆ "ಕೃಷ್ಣ! ಸಕಾಲದಲ್ಲಿ ಅರ್ಜುನನ ಈ ಮಾತನ್ನೂ ಯುಧಿಷ್ಠಿರನಿಗೆ ತಿಳಿಸಬೇಕು" ಎಂದು ಹೇಳಿದನು. "ಎಲ್ಲ ಕಡೆಗಳಿಂದ ರಾಜರು ಕೌರವರ ಕಡೆ ಬರುತ್ತಿದ್ದಾರೆ. ಅವರಲ್ಲಿ ಒಬ್ಬೊಬ್ಬರನ್ನೂ ಯಥೋಚಿತಾವಾಗಿ ಸತ್ಕರಿಸುವುದು ನಮ್ಮ ಕರ್ತವ್ಯವಾಗಿದೆ!" ಇದರ ನಂತರ "ರಾಜಸೂಯ ಯಾಗದ ಅರ್ಘ್ಯಪ್ರದಾನದ ಸಮಯದಲ್ಲಿ ನಡೆದ ದುರ್ಘಟನೆಯು ಪುನಃ ಉಂಟಾಗಬಾರದು" ಎಂಬ ವಿಜ್ಞಾಪನೆಯನ್ನೂ ಅವನು ನನ್ನಲ್ಲಿ ಮಾಡಿದ್ದಾನೆ. "ಆ ರಾಜನು ಇದನ್ನೇ ಮಾಡಬೇಕಾಗಿದೆ. ಅದಕ್ಕೆ ನಿನ್ನ ಬೆಂಬಲವೂ ಬೇಕು. ರಾಜರ ಪರಸ್ಪರ ದ್ವೇಷದಿಂದ ಪುನಃ ಪ್ರಜೆಗಳು ವಿನಾಶಹೊಂದಬಾರದು!" ಇದಕ್ಕೂ ಹೊರತಾಗಿ ಆ ಪುರುಷನು ಧನಂಜಯನ ಅನ್ಯ ಸಂದೇಶವನ್ನೂ ಹೇಳಿದನು. ಅದನ್ನು ಹೇಳುತ್ತೇನೆ. ಕೇಳು. "ನಮ್ಮ ಯಜ್ಞಕ್ಕೆ ಮಣಿಪೂರದ ನೃಪತಿ ನನ್ನ ಪ್ರೀತಿಯ ಮಗ ಮಹಾತೇಜಸ್ವಿ ಬಭ್ರುವಾಹನನು

ಬರುತ್ತಾನೆ. ಅವನು ನನ್ನ ಭಕ್ತನೂ ನನ್ನಲ್ಲಿ ನಿತ್ಯವೂ ಅನುರಕ್ತನಾಗಿರುವುದರಿಂದ ನನಗೋಸ್ಕರವಾಗಿ ನೀನು ಅವನನ್ನು ವಿಧಿವತ್ತಾಗಿ ಗೌರವಿಸಬೇಕು!””

ಈ ಮಾತನ್ನು ಕೇಳಿ ಧರ್ಮರಾಜ ಯುಧಿಷ್ಠಿರನು ಆ ವಾಕ್ಯವನ್ನು ಅಭಿನಂದಿಸುತ್ತಾ ಹೀಗೆ ಹೇಳಿದನು:

“ಕೃಷ್ಣ! ನೀನು ಹೇಳಿದ ಅಮೃತರಸದಂತಿರುವ ಅರ್ಜುನನ ಸಂದೇಶವನ್ನು ಕೇಳಿ ನನ್ನ ಮನಸ್ಸು ಆಹ್ಲಾದಗೊಂಡಿದೆ. ಅಲ್ಲಲ್ಲಿ ವಿಜಯ ಮತ್ತು ನರಾಧಿಪರೊಡನೆ ಅನೇಕ ಯುದ್ಧಗಳಾದವೆಂದು ಕೇಳಿದ್ದೇನೆ. ನನ್ನ ಕಾರಣದಿಂದಾಗಿ ಆ ಧೀಮಾನ್ ವಿಜಯ ಪಾರ್ಥನು ಸದಾ ಸುಖದಿಂದ ವಂಚಿತನಾಗಿದ್ದಾನೆ ಎಂದು ನನ್ನ ಮನಸ್ಸು ಅತೀವವಾಗಿ ನೋಯುತ್ತಿದೆ. ಏಕಾಂತದಲ್ಲಿ ಸದಾ ನಾನು ಕುಂತೀಸುತ ಅರ್ಜುನನ ಕುರಿತೇ ಚಿಂತಿಸುತ್ತಿರುತ್ತೇನೆ. ಸರ್ವಲಕ್ಷಣ ಸಂಪನ್ನನಾಗಿರುವ ಅವನ ಶರೀರದಲ್ಲಿ ಯಾವ ಅನಿಷ್ಟ ಲಕ್ಷಣವಿದೆಯೆಂದು ಅವನು ಈ ರೀತಿಯ ದುಃಖವನ್ನು ಅನುಭವಿಸುತ್ತಿದ್ದಾನೆ? ಆ ಕುಂತೀನಂದನನು ಸತತವೂ ದುಃಖಭಾಗಿಯಾಗಿದ್ದಾನೆ. ಅವನ ಶರೀರದಲ್ಲಿ

ನಿಂದ್ಯಲಕ್ಷಣಗಳನ್ನೇನೂ ನಾನು ಕಂಡಿಲ್ಲ. ಇದರ ಕುರಿತು ನಾನು ಕೇಳಬಹುದಾಗಿದ್ದರೆ ಅದನ್ನು ನೀನು ಹೇಳಬೇಕು!"

ಇದನ್ನು ಕೇಳಿ ಬಹಳ ಹೊತ್ತು ಧ್ಯಾನಮಗ್ನನಾಗಿ ಭೋಜರಾಜರ ವರ್ಧಕ ಹೃಷೀಕೇಶ ವಿಷ್ಣುವು ರಾಜನಿಗೆ ಇಂತೆಂದನು:

"ನೃಪತೇ! ಆ ಪುರುಷಸಿಂಹನ ಮೊಳಕಾಲುಗಳ ಹಿಂಭಾಗಗಳು ಇರಬೇಕಾದುದಕ್ಕಿಂತಲೂ ಸ್ವಲ್ಪ ದಪ್ಪನಾಗಿರುವುದರ ಹೊರತು ಅವನಲ್ಲಿ ಬೇರೆ ಯಾವ ಅನಿಷ್ಟಗಳೂ ಕಾಣಿಸುವುದಿಲ್ಲ. ಅದರಿಂದಾಗಿ ಆ ಪುರುಷವ್ಯಾಘ್ರನು ಸದಾ ಪ್ರಯಾಣಮಾಡುತ್ತಲೇ ಇರಬೇಕಾಗುತ್ತದೆ. ಜಯನ ದುಃಖಕ್ಕೆ ಬೇರೆ ಯಾವ ಕಾರಣವನ್ನೂ ನಾನು ಕಾಣುತ್ತಿಲ್ಲ."

ಧೀಮತ ಕೃಷ್ಣನ ಈ ಸತ್ಯದ ಮಾತನ್ನು ಕೇಳಿ ಕುರುಶ್ರೇಷ್ಠ ಯುಧಿಷ್ಠಿರನು "ಪ್ರಭೋ! ನೀನು ಹೇಳಿದುದೇ ಸರಿ!" ಎಂದು ವೃಷ್ಣಿಶಾರ್ದೂಲನಿಗೆ ಹೇಳಿದನು. ಆಗ ದ್ರೌಪದೀ ಕೃಷ್ಣೆಯು ಅಸೂಯೆಯಿಂದ ಕೃಷ್ಣನನ್ನು ಕಡೆಗಣ್ಣುಗಳಿಂದ ನೋಡಿದಳು. ಕೇಶಿಹಂತಕ ಕೃಷ್ಣನು ಅವಳ ಆ ವರ್ತನೆಯನ್ನು ಪ್ರಣಯಪೂರ್ವಕವಾಗಿಯೇ ಸ್ವೀಕರಿಸಿದನು. ಸಖಿ

ಹೃಷೀಕೇಶನು ಸಾಕ್ಷಾತ್ ತನ್ನ ಸಖ ಧನಂಜಯನಂತೆಯೇ ತೋರುತ್ತಿದ್ದನು. ಅಲ್ಲಿದ್ದ ಭೀಮಾದಿ ಕುರುಗಳೂ ಮತ್ತು ಯಾದವರೂ ವಿಚಿತ್ರಾರ್ಥವುಳ್ಳ ಧನಂಜಯನ ಕುರಿತಾದ ಮಾತುಗಳನ್ನು ಕೇಳಿ ಆನಂದಿಸಿದರು. ಅರ್ಜುನನ ಕುರಿತಾಗಿ ಅವರು ಹೀಗೆ ಮಾತನಾಡಿಕೊಳ್ಳುತ್ತಿರುವಾಗಲೇ ಮಹಾತ್ಮ ವಿಜಯನ ಸಂದೇಶವನ್ನು ತೆಗೆದುಕೊಂಡು ಪುರುಷನೋರ್ವನು ಅಲ್ಲಿಗೆ ಆಗಮಿಸಿದನು. ಆ ಬುದ್ಧಿವಂತನು ಆಗಮಿಸಿ, ಕುರುಶ್ರೇಷ್ಠನನ್ನು ನಮಸ್ಕರಿಸಿ, ನರವ್ಯಾಘ್ರ ಅರ್ಜುನನು ಬರುತ್ತಿರುವುದನ್ನು ತಿಳಿಸಿದನು. ಅದನ್ನು ಕೇಳಿದ ನೃಪತಿಯು ಹರ್ಷದ ಕಣ್ಣೀರಿನಿಂದ ಕಣ್ಣುಗಳು ತುಂಬಿರಲು, ಪ್ರಿಯವಿಷಯವನ್ನು ತಂದಿರುವುದಕ್ಕಾಗಿ ಅವನಿಗೆ ಬಹಳ ಧನವನ್ನಿತ್ತನು. ಅನಂತರ ಎರಡನೆಯ ದಿವಸ ಪಾಂಡವರ ಧುರಂಧರ ಪುರುಷವ್ಯಾಘ್ರ ಅರ್ಜುನನು ಬರುವ ಮಹಾ ಶಬ್ಧವುಂಟಾಯಿತು. ಉಚ್ಛೈಃಶ್ರವದಂತಿದ್ದ ಆ ಕುದುರೆಯು ಹತ್ತಿರಕ್ಕೆ ಬರುತ್ತಿರುವಾಗ ಮೇಲೆದ್ದ ಧೂಳು ಆಕಾಶದಲ್ಲಿ ಅದ್ಭುತವಾಗಿ ಕಾಣುತ್ತಿತ್ತು. ಅಲ್ಲಿ

> “ಅದೃಷ್ಟವಶಾತ್ ಅರ್ಜುನ ಪಾರ್ಥನು ಕುಶಲಿಯಾಗಿದ್ದಾನೆ!
> ರಾಜಾ ಯುಧಿಷ್ಠಿರನು ಧನ್ಯ!”

ಎಂಬ ಜನರ ಹರ್ಷಯುಕ್ತ ಮಾತುಗಳು ಕೇಳಿಬರುತ್ತಿದ್ದವು.

> “ಅರ್ಜುನನಲ್ಲದೇ ಬೇರೆ ಯಾರುತಾನೇ ಪಾರ್ಥಿವರನ್ನು ಸೋಲಿಸಿ ಈ ಶ್ರೇಷ್ಠ ಕುದುರೆಯನ್ನು ಇಡೀ ಭೂಮಿಯಲ್ಲಿ ಸುತ್ತಾಡಿಸಿಕೊಂಡು ಬರುತ್ತಾರೆ? ಆಗಿ ಹೋಗಿದ್ದ ಸಗರಾದಿ ಮಹಾತ್ಮ ರಾಜರೂ ಇಂತಹ ಕರ್ಮಗಳನ್ನು ಮಾಡಿದ್ದರೆಂದು ನಾವು ಕೇಳಿರಲಿಲ್ಲ! ಈ ಕುರುಕುಲಶ್ರೇಷ್ಠನು ಮಾಡಿದ ದುಷ್ಕರ ಕರ್ಮಗಳನ್ನು ಭವಿಷ್ಯದಲ್ಲಿಯೂ ಬೇರೆ ಯಾವ ಪೃಥಿವೀಪತಿಯೂ ಮಾಡುವುದಿಲ್ಲ!”

ಹೀಗೆ ಮಾತನಾಡಿಕೊಳ್ಳುತ್ತಿದ್ದ ಆ ಜನರ ಕೇಳಲು ಸುಖಕರವಾದ ಮಾತುಗಳನ್ನು ಕೇಳುತ್ತಾ ಧರ್ಮಾತ್ಮ ಫಲ್ಗುನನು ಯಜ್ಞವಾಟಿಕೆಯನ್ನು ಪ್ರವೇಶಿಸಿದನು. ಆಗ ಅಮಾತ್ಯರು ಮತ್ತು ಯದುನಂದನ ಕೃಷ್ಣನೊಡನೆ ರಾಜಾ ಯುಧಿಷ್ಠಿರನು ಧೃತರಾಷ್ಟ್ರನನ್ನು ಮುಂದಿರಿಸಿಕೊಂಡು ಅರ್ಜುನನನ್ನು ಎದಿರುಗೊಂಡನು. ಅರ್ಜುನನು ತಂದೆಯ ಮತ್ತು ಧೀಮತ ಧರ್ಮರಾಜನ ಪಾದಗಳಿಗೆರಗಿ, ಭೀಮಾದಿಗಳನ್ನು ಪೂಜಿಸಿ ಕೇಶವನನ್ನು ಬಿಗಿದಪ್ಪಿಕೊಂಡನು. ಅವರಿಂದ ಸತ್ಕರಿಸಲ್ಪಟ್ಟು ಮತ್ತು ಅವರನ್ನೂ ಯಥಾವಿಧಿಯಾಗಿ ಅರ್ಚಿಸಿ, ಧರ್ಮಾತ್ಮ ಅರ್ಜುನನು ತೀರವನ್ನು ತಲುಪಿದ ಈಸುಗಾರನಂತೆ ವಿಶ್ರಮಿಸಿದನು. ಇದೇ ಸಮಯದಲ್ಲಿ ಧೀಮಂತ ರಾಜಾ ಬಭ್ರುವಾಹನನು

ಮಾತೆಯರಿಬ್ಬರೊಡನೆ ಕುರುಗಳಲ್ಲಿಗೆ ಆಗಮಿಸಿದನು. ಅವನು ಕುರುಗಳೆಲ್ಲರನ್ನೂ ಭೇಟಿಮಾಡಿ, ಸರ್ವರಿಂದ ಅಭಿನಂದಿಸಲ್ಪಟ್ಟು, ಅಜ್ಜಿ ಕುಂತಿಯ ಉತ್ತಮ ಭವನವನ್ನು ಪ್ರವೇಶಿಸಿದನು.

ಅವನು ಪಾಂಡವನ ಅರಮನೆಯನ್ನು ಪ್ರವೇಶಿಸಿ ಯಥಾನ್ಯಾಯವಾಗಿ ವಿನೀತನಾಗಿ ಮಧುರಮಾತುಗಳಿಂದ ಪಿತಾಮಹಿಯನ್ನು ನಮಸ್ಕರಿಸಿದನು. ಹಾಗೆಯೇ ದೇವೀ ಚಿತ್ರಾಂಗದೆ ಮತ್ತು ಕೌರವ್ಯಸುತೆ ಉಲೂಪಿಯರು ಒಟ್ಟಾಗಿ ಕುಂತಿ, ಕೃಷ್ಣೆ, ಸುಭದ್ರೆ ಮತ್ತು ಅನ್ಯ ಕುರುಸ್ತ್ರೀಯರನ್ನು ಯಥಾನ್ಯಾಯವಾಗಿ ವಿನಯದಿಂದ ನಮಸ್ಕರಿಸಿದರು. ಕುಂತಿಯು ಅವರಿಬ್ಬರಿಗೆ ವಿವಿಧರತ್ನಗಳನ್ನಿತ್ತಳು. ದ್ರೌಪದೀ ಮತ್ತು ಸುಭದ್ರೆಯರೂ ಉಡುಗೊರೆಗಳನ್ನಿತ್ತರು. ಆ ಇಬ್ಬರು ದೇವಿಯರೂ ಅಮೂಲ್ಯ ಶಯನಾಸನಯುಕ್ತ ಭವನಗಳಲ್ಲಿ ಪಾರ್ಥನಿಗೆ ಪ್ರಿಯವನ್ನುಂಟುಮಾಡುವ ಸ್ವಯಂ ಕುಂತಿಯಿಂದ ಸತ್ಕರಿಸಲ್ಪಟ್ಟು ಉಳಿದುಕೊಂಡರು. ಸತ್ಕರಿಸಲ್ಪಟ್ಟ ಮಹಾವೀರ್ಯ ರಾಜಾ ಬಭ್ರುವಾಹನನು ಯಥಾವಿಧಿಯಾಗಿ ಮಹೀಪಾಲ ಧೃತರಾಷ್ಟ್ರನ ಸೇವೆಗೈದನು. ಮಹಾತೇಜಸ್ವಿ ಬಭ್ರುವಾಹನನು ರಾಜ ಯುಧಿಷ್ಠಿರನನ್ನೂ ಭೀಮಾದಿ ಪಾಂಡವರನ್ನೂ ಸಂಧಿಸಿ ವಿನಯದಿಂದ ಅಭಿವಂದಿಸಿದನು. ಆ ಮಹಾರಥರು ಪ್ರೇಮದಿಂದ ಅವನನ್ನು

ಆಲಂಗಿಸಿ ಯಥಾವಿಧಿಯಾಗಿ ಗೌರವಿಸಿ, ಪ್ರೀತಿಯಿಂದ ಅವನಿಗೆ ಬಹು ಧನವನ್ನು ನೀಡಿದರು. ಹಾಗೆಯೇ ಆ ಮಹೀಪಾಲನು ಚಕ್ರಗದಾಧಾರಿ ಕೃಷ್ಣ ಗೋವಿಂದನನ್ನು ಪ್ರದ್ಯುಮ್ನನಂತೆಯೇ ವಿನಯದಿಂದ ಸೇವೆಗೈದನು. ಆ ರಾಜನಿಗೆ ಕೃಷ್ಣನು ಬೆಲೆಬಾಳುವ ಚಿನ್ನದಿಂದ ಅಲಂಕೃತ ರಥವನ್ನೂ ಉತ್ತಮ ದಿವ್ಯಾಶ್ವಗಳನ್ನೂ ಕೊಟ್ಟು ಸತ್ಕರಿಸಿದನು. ಧರ್ಮರಾಜ, ಭೀಮ, ಯಮಳರು ಮತ್ತು ಫಲ್ಗುನರು ಅವನಿಗೆ ಪ್ರತ್ಯೇಕ ಪ್ರತ್ಯೇಕವಾಗಿ ಉಡುಗೊರೆಗಳನ್ನಿತ್ತು ಸತ್ಕರಿಸಿದರು.

## ಯೂಪೋಚ್ಛ್ರಯ

ಅನಂತರ ಮೂರನೆಯ ದಿವಸ ಸತ್ಯವತೀ ಸುತ ವಾಗ್ಮೀ ಮುನಿ ವ್ಯಾಸನು ಯುಧಿಷ್ಠಿರನನ್ನು ಸಂಧಿಸಿ ಈ ಮಾತುಗಳನ್ನಾಡಿದನು:

> “ಕೌಂತೇಯ! ಇಂದಿನಿಂದ ನೀನು ದೀಕ್ಷಾಬದ್ಧನಾಗಿ ಯಜ್ಞವನ್ನು ಆರಂಭಿಸು. ಯಜ್ಞದ ಮುಹೂರ್ತವು ಸನ್ನಿಹಿತವಾಗಿದೆಯೆಂದು ಯಾಜಕರು ಪ್ರೇರೇಪಿಸುತ್ತಿದ್ದಾರೆ. ಈ ಕ್ರತುವಿನ ಹೆಸರೇ “ಅಹೀನ” ಅಂದರೆ ಲೋಪವಿಲ್ಲದ್ದು ಎಂದಿದೆ. ಇದರಲ್ಲಿ ಚಿನ್ನವನ್ನು ಬಹುವಾಗಿ ಬಳಸುವುದರಿಂದ ಇದು ಬಹುಸುವರ್ಣಕ ಎಂದೂ ಖ್ಯಾತಿಯಾಗಿದೆ. ಇದಕ್ಕೆ

ಪ್ರಧಾನ ಕಾರಣರಾಗಿರುವ ಬ್ರಾಹ್ಮಣರಿಗೆ ಮೂರು ಪಟ್ಟು ಅಧಿಕವಾದ ದಕ್ಷಿಣೆಯನ್ನು ಕೊಟ್ಟು ಮೂರು ಯಜ್ಞಗಳನ್ನು ಮಾಡಿದಂಥವನಾಗು! ಬಹುದಕ್ಷಿಣಾಯುಕ್ತವಾದ ಮೂರು ಅಶ್ವಮೇಧಗಳನ್ನು ಮಾಡಿದವನಾಗಿ ನೀನು ಜ್ಞಾತಿವಧೆಯ ಪಾಪವನ್ನು ಕಳೆದುಕೊಳ್ಳುತ್ತೀಯೆ! ಪರಮ ಪವಿತ್ರವೂ ಪಾವನಗಳಲ್ಲಿ ಪಾವನವೂ ಆಗಿರುವ ಈ ಅಶ್ವಮೇಧದ ಅವಭೃತವನ್ನು ನೀನು ಪಡೆಯುವವನಾಗು!"

ತೇಜಸ್ವೀ ಅಮಿತತೇಜಸ್ವೀ ವ್ಯಾಸನು ಹೀಗೆ ಹೇಳಲು ಆ ಧರ್ಮಾತ್ಮಾ ನರಾಧಿಪ ಯುಧಿಷ್ಠಿರನು ಅಶ್ವಮೇಧದ ದೀಕ್ಷೆಯನ್ನು ಗ್ರಹಣಮಾಡಿ, ಮಹಾಕ್ರತು ಅಶ್ವಮೇಧ ಯಾಗವನ್ನು ನಡೆಸಿದನು. ಅಲ್ಲಿ ಚೆನ್ನಾಗಿ ಪಳಗಿದ್ದ ವೇದವಿದ ಶಾಸ್ತ್ರಜ್ಞ ಯಾಜಕರು ವಿಧಿವತ್ತಾಗಿ ಕರ್ಮಗಳನ್ನು ಕ್ರಮವಾಗಿ ನಡೆಸಿದರು. ಆ ದ್ವಿಜರ್ಷಭರು ಕ್ರಮಯುಕ್ತವಾಗಿ ಎಲ್ಲ ಕರ್ಮಗಳನ್ನೂ ನಡೆಸಿದರು. ಅಲ್ಲಿ ಯಾವುದನ್ನೂ ಬಿಡದೇ ಯಾವುದರಲ್ಲಿಯೂ ತಪ್ಪದೇ ಮಾಡಿಸಿದರು. ಧರ್ಮಜ್ಞ ದ್ವಿಜ ದ್ವಿಜಸತ್ತಮರು ಯಥಾವಿಧಿಯಾಗಿ ಪ್ರವರ್ಗ್ಯವನ್ನು ಮಾಡಿ ವಿಧಿವತ್ತಾಗಿ ಅಭಿಷವವನ್ನೂ ನಡೆಸಿದರು. ಅನಂತರ ಸೋಮಪಾನಮಾಡುವುದರಲ್ಲಿ ಶ್ರೇಷ್ಠರಾದ ಅವರು ಸೋಮವನ್ನು ತಯಾರಿಸಿ ಅದರ ಮೂಲಕ

ಶಾಸ್ತ್ರಗಳನ್ನನುಸರಿಸಿ ಓಂದಾದರೊಂದಂತೆ ಸವನಗಳನ್ನು ಮಾಡಿದರು. ಅಲ್ಲಿ ಯಾವ ಮಾನವನೂ ಕೃಪಣನಾಗಲೀ, ದರಿದ್ರನಾಗಲೀ, ಹಸಿದವನಾಗಲೀ, ದುಃಖಿತನಾಗಲೀ, ಅಸಂಸ್ಕೃತನಾಗಲೀ ಇರಲಿಲ್ಲ. ರಾಜಶಾಸನದಂತೆ ಮಹಾತೇಜಸ್ವೀ ಭೀಮಸೇನನು ನಿತ್ಯವೂ ಸತತವಾಗಿ ಭೋಜನಾರ್ಥಿಗಳಿಗೆ ಭೋಜನದ ವ್ಯವಸ್ಥೆಯನ್ನು ಮಾಡುತ್ತಿದ್ದನು. ಸರ್ವಕರ್ಮಗಳಲ್ಲಿ ಕುಶಲರಾದ ಮತ್ತು ಶಾಸ್ತ್ರಾರ್ಥಗಳನ್ನು ಕಂಡುಕೊಂಡಿದ್ದ ಯಾಜಕರು ಅನುದಿನವೂ ಎಲ್ಲಕರ್ಮಗಳನ್ನೂ ಸರಿಯಾಗಿಯೇ ಮಾಡಿಸುತ್ತಿದ್ದರು. ಧೀಮತ ಯುಧಿಷ್ಠಿರನ ಸದಸ್ಯರಲ್ಲಿ ಷಡಂಗಸಹಿತ ವೇದವನ್ನು ತಿಳಿಯದ, ವ್ರತಾನುಷ್ಠಾನಗಳನ್ನು ಮಾಡಿರದ, ಉಪಾಧ್ಯಾಯನಲ್ಲದ ಮತ್ತು ವಾದಗಳಿಗೆ ಸಕ್ಷಮನಲ್ಲದ ದ್ವಿಜರು ಯಾರೂ ಇರಲಿಲ್ಲ. ಕುರುಪತಿಯ ಕ್ರತುವಿನಲ್ಲಿ ಯೂಪೋಚ್ಛ್ರಯವು ಸನ್ನಿಹಿತವಾದಾಗ ಯಾಜಕರು ಆರು ಬಿಲ್ವ, ಆರು ಖಾದಿರ (ಕಗ್ಗಲಿ), ಆರು ಬಿಲ್ವಸಮಿತ (ಪಲಾಶ), ಎರಡು ದೇವದಾರು, ಮತ್ತು  ಒಂದು ಶ್ಲೇಷ್ಮಾತಕ ವೃಕ್ಷಗಳ (ಇಪ್ಪತ್ತೊಂದು) ಯೂಪಗಳನ್ನು ಸ್ಥಾಪಿಸಿದರು.  ಧರ್ಮರಾಜನ ಶಾಸನದಂತೆ ಆ ಯೂಪಗಳ ಶೋಭೆಗಾಗಿ ಭೀಮನು ಅವುಗಳನ್ನು ಕಾಂಚನದಿಂದಲೇ ಮಾಡಿಸಿದ್ದನು. ಬಣ್ಣದ ವಸ್ತ್ರಗಳಿಂದ ಶೋಭಿತವಾಗಿದ್ದ ಆ

ಯೂಪಸ್ಥಂಭಗಳು ನಭದಲ್ಲಿ ಸಪ್ತರ್ಷಿ ಸಹಿತರಾದ ದೇವತೆಗಳಂತೆಯೇ ವಿರಾಜಿಸುತ್ತಿದ್ದವು. ಚಯನಕ್ಕೆ ಚಿನ್ನದ ಇಟ್ಟಿಗೆಗಳನ್ನೇ ಮಾಡಿಸಲಾಗಿತ್ತು. ಅಲ್ಲಿಯ ಚಯನವು ಪ್ರಜಾಪತಿ ದಕ್ಷನ ಚಯನದಂತೆಯೇ ಶೋಭಿಸಿತು. ಅಲ್ಲಿದ್ದ ನಾಲ್ಕು ಚಿತಿಗಳಲ್ಲಿ ಪ್ರತಿಯೊಂದರ ಉದ್ದಗಲಗಳು ಹದಿನೆಂಟು ಗೇಣುಗಳಾಗಿದ್ದು, ಸುವರ್ಣಮಯ ರೆಕ್ಕೆಗಳುಳ್ಳ ಗರುಡನ ಆಕಾರದಲ್ಲಿ ತ್ರಿಕೋಣಗಳಾಗಿದ್ದವು. ಮನೀಷಿಗಳು ಶಾಸ್ತ್ರಪ್ರಕಾರವಾಗಿ ಆಯಾ ದೇವತೆಗಳನ್ನು ಉದ್ದೇಶಿಸಿ ಪಕ್ಷಿ-ಪಶುಗಳನ್ನು ನಿಯೋಜಿಸಿದ್ದರು. ಆ ಅಗ್ನಿಚಯ ಕರ್ಮದಲ್ಲಿ ಶಾಸ್ತ್ರದಲ್ಲಿ ಹೇಳಿರುವಂತೆ ಋಷಭಗಳನ್ನೂ, ಜಲಚರ ಪ್ರಾಣಿಗಳನ್ನು ಎಲ್ಲವನ್ನೂ ಒಟ್ಟಾಗಿ ಸೇರಿಸಿದ್ದರು. ರಾಜ ಮಾಹಾತ್ಮ ಕೌಂತೇಯನ ಯೂಪಗಳಲ್ಲಿ ಮೂರುನೂರು ಪಶುಗಳನ್ನು ಬಂಧಿಸಿದ್ದರು. ಅವುಗಳಲ್ಲಿ ಕುದುರೆಯು ಪ್ರಧಾನವಾಗಿದ್ದಿತು. ಸಾಕ್ಷಾತ್ ದೇವರ್ಷಿಗಳಿಂದ ಕೂಡಿದ್ದ ಆ ಯಜ್ಞವು ಶೋಭಿಸುತ್ತಿತ್ತು. ಗಂಧರ್ವಗಣಸಂಕೀರ್ಣಗಳಿಂದ ಮತ್ತು ಅಪ್ಸರೆಯರ ಗಣಗಳಿಂದ ಕೂಡಿ ಶೋಭಿಸುತ್ತಿತ್ತು. ಕಿಂಪುರುಷರ ಗೀತೆಗಳಿಂದಲೂ ಕಿನ್ನರರಿಂದಲೂ ಶೋಭಿತವಾಗಿತ್ತು. ಸಿದ್ಧರ ಮತ್ತು ವಿಪ್ರರ ನಿವಾಸಗಳು ಎಲ್ಲೆಡೆಯಲ್ಲಿಯೂ ಸಮಾವೃತವಾಗಿದ್ದವು. ಆ ಯಾಗಸಭೆಯಲ್ಲಿ ಸರ್ವಶಾಸ್ತ್ರಪ್ರಣೇತಾರರಾದ ಯಜ್ಞಕರ್ಮಗಳಲ್ಲಿ ಕುಶಲರಾದ

ವ್ಯಾಸಶಿಷ್ಯ ದ್ವಿಜೋತ್ತಮರು ನಿತ್ಯವೂ ಸದಸ್ಯರಾಗಿದ್ದರು. ಅಲ್ಲಿ ನಾರದ, ಮಹಾದ್ಯುತಿ ತುಂಬುರು, ವಿಶ್ವಾವಸು ಮತ್ತು ಚಿತ್ರಸೇನರು ಹಾಗೂ ಅನ್ಯ ಗೀತಕೋವಿದರು ಇದ್ದರು. ಯಜ್ಞಕರ್ಮಗಳ ಮಧ್ಯೆ ಬಿಡುವಿನಲ್ಲಿ ಗೀತಕುಶಲರಾದ ಮತ್ತು ನೃತ್ಯವಿಶಾರದರಾದ ಗಂಧರ್ವರು ಆ ವಿಪ್ರರನ್ನು ರಮಿಸುತ್ತಿದ್ದರು.

## ಯಜ್ಞಸಮಾಪ್ತಿ

ದ್ವಿಜಾತಿಯ ದ್ವಿಜಸತ್ತಮರು ಅನ್ಯ ಪಶುಗಳನ್ನು ವಿಧಿವತ್ತಾಗಿ ಹೋಮಮಾಡಿದ ನಂತರ ಆ ತುರಗವನ್ನು ಆಲಂಭನ ಮಾಡಿದರು. ಅನಂತರ ಯಾಜಕರ್ಷಭರು ವಿಧಿವತ್ತಾಗಿ ತುರಗವನ್ನು ಸಂಜ್ಞಾಪಿಸಿ ಅದರ ಬಳಿ ಮೂರು ಕಲೆಗಳಿಂದ ಯುಕ್ತಳಾದ ಮನಸ್ವಿನೀ ದ್ರುಪದಾತ್ಮಜೆಯನ್ನು ಕುಳ್ಳಿರಿಸಿದರು. ಶಾಸ್ತ್ರೋಕ್ತವಾಗಿ ಕುದುರೆಯ ವಪೆಯನ್ನು ತೆಗೆದು ಅವ್ಯಗ್ರ ದ್ವಿಜರ್ಷಭರು ಶಾಸ್ತ್ರಾನುಸಾರವಾಗಿ ಬೇಯಿಸಿದರು. ಅನಂತರ ಸಮಸ್ತ ಪಾಪಗಳನ್ನೂ ಕಳೆಯುವ ಆ ವಪೆಯ ಹೊಗೆಯ ವಾಸನೆಯನ್ನು ಅನುಜರೊಂದಿಗೆ ಧರ್ಮರಾಜನು ಆಘ್ರಾಣಿಸಿದನು. ಕುದುರೆಯ ಉಳಿದ ಅಂಗಗಳನ್ನು ಎಲ್ಲವನ್ನೂ ಹದಿನಾರು ಧೀರ ಋತ್ವಿಜರು ಅಗ್ನಿಯಲ್ಲಿ ಹೋಮಮಾಡಿದರು.

ಶಕ್ರತೇಜಸ್ಸಿನಿಂದ ಕೂಡಿದ್ದ ರಾಜನ ಆ ಯಜ್ಞವನ್ನು ಸಂಸ್ಥಾಪಿಸಿ ಶಿಷ್ಯರೊಂದಿಗೆ ಭಗವಾನ್ ವ್ಯಾಸನು ನೃಪನಿಗೆ ಅಭ್ಯುದಯಪೂರ್ವಕ ಆಶೀರ್ವಾದಗಳನ್ನು ನೀಡಿದನು. ಆಗ ಯುಧಿಷ್ಠಿರನು ಯಥಾವಿಧಿಯಾಗಿ ಸದಸ್ಯರಿಗೆ ಸಹಸ್ರ ಕೋಟಿ ಸುವರ್ಣನಾಣ್ಯಗಳನ್ನು ಮತ್ತು ವ್ಯಾಸನಿಗೆ ಇಡೀ ವಸುಂಧರೆಯನ್ನು ದಾನಮಾಡಿದನು. ಧರೆಯನ್ನು ಸ್ವೀಕರಿಸಿ ಸತ್ಯವತೀಸುತ ವ್ಯಾಸನು ಭರತಶ್ರೇಷ್ಠ ಧರ್ಮಾತ್ಮ ಯುಧಿಷ್ಠಿರನಿಗೆ ಇಂತೆಂದನು: "ರಾಜಸತ್ತಮ! ನಿನ್ನ ಈ ಪೃಥ್ವಿಯನ್ನು ನಿನ್ನಲ್ಲಿಯೇ ಇಡುತ್ತೇನೆ. ಇದರ ಬೆಲೆಯನ್ನು ನೀನು ನನಗೆ ಕೊಡು. ಬ್ರಾಹ್ಮಣರು ಧನಾರ್ಥಿಗಳಲ್ಲವೇ?" ಮಹಾತ್ಮ ರಾಜರ ಮಧ್ಯದಲ್ಲಿ ಸಹೋದರರೊಂದಿಗಿದ್ದ ಧೀಮಾನ್ ಮಹಾಮನಸ್ವಿ ಯುಧಿಷ್ಠಿರನು ಆ ವಿಪ್ರರಿಗೆ ಉತ್ತರಿಸಿದನು: "ಅಶ್ವಮೇಧ ಮಹಾಯಜ್ಞದಲ್ಲಿ ಪೃಥ್ವಿಯನ್ನೇ ದಕ್ಷಿಣೆಯನ್ನಾಗಿ ಕೊಡಬೇಕೆಂಬ ವಿಧಿಯಿದೆ. ಅರ್ಜುನನು ಗೆದ್ದ ಇದನ್ನು ನಾನು ಋತ್ವಿಜರಿಗೆ ನೀಡುತ್ತಿದ್ದೇನೆ. ನಾನಿನ್ನು ವನವನ್ನು ಪ್ರವೇಶಿಸುತ್ತೇನೆ. ಈ ಮಹಿಯನ್ನು ನೀವು ವಿಭಜಿಸಿಕೊಳ್ಳಿರಿ. ಚಾತುರ್ಹೋತ್ರದ ಪ್ರಮಾಣದಂತೆ ಪೃಥ್ವಿಯನ್ನು ನಾಲ್ಕು ಭಾಗಗಳನ್ನಾಗಿ ಮಾಡಿಕೊಳ್ಳಿ. ಬ್ರಾಹ್ಮಣರಾದ ನಿಮ್ಮ ಸ್ವತ್ತನ್ನು ತೆಗೆದುಕೊಳ್ಳಲು ನಾನು ಇಷ್ಟಪಡುವುದಿಲ್ಲ. ನನ್ನ ಸಹೋದರರ

ಮತವೂ ನಿತ್ಯವೂ ಇದೇ ಆಗಿದೆ."

ಅವನು ಹೀಗೆ ಹೇಳಲು ಸಹೋದರರು ಮತ್ತು ದ್ರೌಪದಿಯೂ "ಇದು ಹೀಗೆಯೇ ಸರಿ" ಎಂದು ಹೇಳಿದರು. ಅದು ರೋಮಾಂಚಕಾರಿಯಾಗಿತ್ತು! ಆಗ ಅಂತರಿಕ್ಷದಲ್ಲಿ "ಸಾಧು! ಸಾಧು!" ಎಂಬ ಮಾತೂ ಕೇಳಿಬಂದಿತು. ಹಾಗೆಯೇ ದ್ವಿಜಸಂಘಗಳ ಪ್ರಶಂಸೆಯ ಧ್ವನಿಗಳೂ ಕೇಳಿಬಂದವು. ಅದನ್ನು ಗೌರವಿಸಿ ವಿಪ್ರರ ಮಧ್ಯದಲ್ಲಿ ಮುನಿ ದ್ವೈಪಾಯನನು ಪುನಃ ಯುಧಿಷ್ಠಿರನಿಗೆ ಹೀಗೆ ಹೇಳಿದನು:

> "ನನಗೆ ನೀನು ಭೂಮಿಯನ್ನು ಕೊಟ್ಟಿರುವೆ. ಅದನ್ನೇ ನಾನು ನಿನಗೆ ವಹಿಸಿಕೊಡುತ್ತಿದ್ದೇನೆ. ದ್ವಿಜಾತಿಯರಿಗೆ ಭೂಮಿಯ ಪ್ರತ್ಯಾಮ್ನಾಯವಾಗಿ ಸುವರ್ಣವನ್ನು ನೀಡು. ಭೂಮಿಯು ನಿನ್ನ ಅಧಿಕಾರದಲ್ಲಿಯೇ ಇರಲಿ!"

ಆಗ ವಾಸುದೇವನು ಧರ್ಮರಾಜ ಯುಧಿಷ್ಠಿರನಿಗೆ

> "ಭಗವಾನ್ ವ್ಯಾಸನು ಹೇಳಿದಂತೆಯೇ ಮಾಡಬೇಕು!"

ಎಂದು ಹೇಳಿದನು. ಕೃಷ್ಣನು ಹೀಗೆ ಹೇಳಲು ಕುರುಶ್ರೇಷ್ಠ ಯುಧಿಷ್ಠಿರನು ಪ್ರೀತಾತ್ಮನಾಗಿ ಸಹೋದರರೊಂದಿಗೆ ಮೂರು ಕ್ರತುಗಳಿಗೆ ಆಗುವಷ್ಟು ಕೋಟಿ ಕೋಟಿಗಟ್ಟಲೆ ದಕ್ಷಿಣೆಗಳನ್ನು ನೀಡಿದನು.

> “ಮರುತ್ತನನ್ನೇ ಅನುಸರಿಸಿ ನರಾಧಿಪ ಕುರುಸಿಂಹನು
> ಮಾಡಿದುದನ್ನು ಈ ಲೋಕದಲ್ಲಿ ಬೇರೆ ಯಾರೂ
> ಮಾಡುವುದಿಲ್ಲ!”

ಆ ದ್ರವ್ಯವನ್ನು ಸ್ವೀಕರಿಸಿದ ಪ್ರಭು ಕೃಷ್ಣದ್ವೈಪಾಯನನು ಅದನ್ನು ಋತ್ವಿಜರಿಗೆ ನೀಡಿದರು. ಆ ವಿದ್ವಾನರು ಅದನ್ನು ನಾಲ್ಕು ಭಾಗಗಳನ್ನಾಗಿ ವಿಭಾಗಿಸಿಕೊಂಡರು. ಪೃಥ್ವಿಯ ಬೆಲೆಯನ್ನು ಹಿರಣ್ಯರೂಪದಲ್ಲಿ ನೀಡಿ ಸಹೋದರರೊಂದಿಗೆ ಯುಧಿಷ್ಠಿರನು ಪಾಪಗಳನ್ನು ತೊಳೆದುಕೊಂಡು ಸ್ವರ್ಗವನ್ನೇ ಜಯಿಸಿ ಆನಂದಿಸಿದನು. ಋತ್ವಿಜರು ಆ ಸುವರ್ಣರಾಶಿಯನ್ನು ಪಡೆದು ಉತ್ಸಾಹವಿದ್ದಂತೆ ಯಥಾಬಲವಾಗಿ ದ್ವಿಜಾತಿಯರಲ್ಲಿ ಹಂಚಿಕೊಂಡರು. ಯಜ್ಞವಾಟಿಯಲ್ಲಿ ಇದ್ದ ಏನೆಲ್ಲ ಹಿರಣ್ಯ, ಭೂಷಣ, ತೋರಣ, ಯೂಪ, ಘಟ, ಪಾತ್ರೆ ಮತ್ತು ಎಲ್ಲವನ್ನೂ ಯಥೇಷ್ಟವಾಗಿ ದ್ವಿಜರು, ಯುಧಿಷ್ಠಿರನ ಅಪ್ಪಣೆಯಂತೆ, ತಮ್ಮಲ್ಲಿ ವಿಭಜಿಸಿಕೊಂಡರು. ಅನಂತರ ಹಾಗೆಯೇ ಅಲ್ಲಿದ್ದ ಕ್ಷತ್ರಿಯರು, ವೈಶ್ಯರು, ಶೂದ್ರರು ಮತ್ತು ಅನ್ಯ ಮ್ಲೇಚ್ಛಜಾತಿಯವರು ಬ್ರಾಹ್ಮಣರಿಗೆ ಧನವನ್ನಿತ್ತರು. ಆ ಸಮಯದಲ್ಲಿ ಆಗಾಗ ಮಹಾ ಸುವರ್ಣವನ್ನು ದಾನಮಾಡಲಾಯಿತು. ಮಹಾತ್ಮ ಧರ್ಮರಾಜನ ಆ ಐಶ್ವರ್ಯದಿಂದ ತೃಪ್ತರಾದ ಬ್ರಾಹ್ಮಣರೆಲ್ಲರೂ

ಮುದಿತರಾಗಿ ತಮ್ಮ ತಮ್ಮ ಮನೆಗಳಿಗೆ ತೆರಳಿದರು. ಮಹಾದ್ಯುತಿ ಭಗವಾನ್ ವ್ಯಾಸನು ತನ್ನ ಭಾಗಕ್ಕೆ ಬಂದಿದ್ದ ಮಹಾ ಹಿರಣ್ಯರಾಶಿಯನ್ನು ಆದರದಿಂದ ಕುಂತಿಗೆ ನೀಡಿದನು. ಮಾವನಿಂದ ಪ್ರೀತಿಪೂರ್ವಕವಾಗಿ ಪಡೆದ ಆ ಮಹಾಧನವನ್ನು ಪೃಥೆಯು ಪ್ರೀತಿಮನಸ್ಸಿನಿಂದ ಜನರಿಗೆ ಪುಣ್ಯವಾಗುವ ಕಾರ್ಯಗಳನ್ನು ಮಾಡಿದಳು. ಅವಭೃತಸ್ನಾನಗೈದು ಪಾಪಗಳನ್ನು ಕಳೆದುಕೊಂಡು ಸಹೋದರರೊಂದಿಗೆ ರಾಜಾ ಯುಧಿಷ್ಠಿರನು ದೇವತೆಗಳಿಂದ ಸೇವಿಸಲ್ಪಟ್ಟ ಮಹೇಂದ್ರನಂತೆ ಶೋಭಿಸಿದನು. ಬಂದು ಸೇರಿದ್ದ ಮಹೀಪಾಲರಿಂದ ಸುತ್ತುವರೆಯಲ್ಪಟ್ಟ ಪಾಂಡವರೂ ಕೂಡ ಗ್ರಹಗಳಿಂದ ಸುತ್ತುವರೆಯಲ್ಪಟ್ಟ ತಾರಾಗಣಗಳಂತೆ ಶೋಭಿಸಿದರು. ಆಗ ಯುಧಿಷ್ಠಿರನು ರಾಜರಿಗೆ ಕೂಡ ವಿವಿಧ ರತ್ನಗಳನ್ನೂ, ಆನೆ-ಕುದುರೆಗಳ ಅಲಂಕಾರಗಳನ್ನೂ, ಸ್ತ್ರೀಯರನ್ನೂ, ಕಾಂಚನ-ವಸ್ತ್ರಗಳನ್ನೂ ನೀಡಿದನು. ಕೊನೆಯಿಲ್ಲದ ಆ ಧನರಾಶಿಯನ್ನು ದಾನವನ್ನಾಗಿತ್ತ ರಾಜಾ ಪಾರ್ಥನು ಪಾರ್ಥಿವಮಂಡಲದಲ್ಲಿ ವೈಶ್ರವಣ ಕುಬೇರನಂತೆ ಶೋಭಿಸಿದನು. ಹಾಗೆಯೇ ವೀರ ರಾಜ ಬಭ್ರುವಾಹನನನ್ನು ಕರೆಯಿಸಿ ಅವನಿಗೆ ವಿಪುಲ ವಿತ್ತವನ್ನಿತ್ತನು. ಆಗ ಅವನು ತನ್ನ ಮನೆಗೆ ತೆರಳಿದನು. ದುಃಶಲೆಯ ಮೊಮ್ಮಗ ಆ ಬಾಲಕನನ್ನು ಅವನ ತಂದೆಯ ಸ್ವರಾಜ್ಯಕ್ಕೇ

ರಾಜನನ್ನಾಗಿ ಅಭಿಷೇಕಿಸಿದನು. ಸಂಯಮಿ ಕುರುರಾಜ ಯುಧಿಷ್ಠಿರನು ಆ ಎಲ್ಲ ರಾಜರನ್ನೂ ಪ್ರತ್ಯೇಕವಾಗಿ ಪೂಜಿಸಿ ಕಳುಹಿಸಿಕೊಟ್ಟನು. ಹೀಗೆ ಬಹಳ ಅನ್ನ-ಧನ-ರತ್ನಗಳ ರಾಶಿಗಳಿದ್ದ ಮತ್ತು ಸುರೆ-ಮೈರೇಯಗಳ ಸಾಗರಗಳಿದ್ದ ಆ ಯಜ್ಞವು ನಡೆಯಿತು. ಅಲ್ಲಿ ತುಪ್ಪವೇ ಕೆಸರಾದ ಸರೋವರಗಳೂ, ಅನೇಕ ಪರ್ವತಗಳಂತಿದ್ದ ಅನ್ನಗಳ ರಾಶಿಗಳೂ, ಕೆಸರಿಲ್ಲದ ರಸಗಳ ಕಾಲುವೆಗಳೂ ಇದ್ದವು. ಅಲ್ಲಿ ಭಕ್ಷ್ಯ-ಭೋಜ್ಯಗಳನ್ನು ಮಾಡುವವರ, ಊಟಮಾಡಿ ಎಂದು ಹೇಳುವವರ, ಮತ್ತು ಪಶುಗಳನ್ನು ವಧಿಸುತ್ತಿದ್ದವರ ಕೊನೆಯೇ ಕಾಣುತ್ತಿರಲಿಲ್ಲ. ಮತ್ತೋನ್ಮತ್ತರಾಗಿ ಆನಂದಿಸುತ್ತಿದ್ದ, ಹಾಡುತ್ತಿದ್ದ ಯುವತೀ ಜನರಿಂದ, ಮೃದಂಗ-ಶಂಖ ಶಬ್ಧಗಳಿಂದ ಅದು ಮನೋರಮವಾಗಿತ್ತು. "ಕೊಡಿ! ಭೋಜನ ಮಾಡಿ!" ಎಂಬ ಕೂಗುಗಳು ಹಗಲು-ರಾತ್ರಿಗಳೂ ಅಲ್ಲಿ ಕೇಳಿಬರುತ್ತಿದ್ದವು. ಆ ಮಹೋತ್ಸವಕ್ಕೆ ಬಂದಿದ್ದ ನಾನಾ ದೇಶನಿವಾಸಿ ಜನರು ಅತ್ಯಂತ ಹರ್ಷಿತರಾಗಿ ಅದರ ಕುರಿತೇ ಮಾತನಾಡಿಕೊಳ್ಳುತ್ತಿದ್ದರು. ಧನ ಮತ್ತು ಬಯಸಿದ ರತ್ನಧನಗಳ ಧಾರೆಗಳನ್ನೇ ಮಳೆಯಾಗಿ ಸುರಿಸಿದ ಆ ಭರತಶ್ರೇಷ್ಠನು ಪಾಪಗಳನ್ನು ಕಳೆದುಕೊಂಡು ಕೃತಾರ್ಥನಾಗಿ ಪುರವನ್ನು ಪ್ರವೇಶಿಸಿದನು.

ಆ ಮಹಾಯಜ್ಞ ಅಶ್ವಮೇಧವು ಮುಗಿಯಲು ಒಂದು ಉತ್ತಮ

ಮಹದಾಶ್ಚರ್ಯವು ನಡೆಯಿತು. ದ್ವಿಜಾಗ್ರರು, ಜ್ಞಾತಿ-ಸಂಬಂಧಿ-ಬಂಧುಗಳು ಮತ್ತು ಧೀನ-ಅಂಧ-ಕೃಪಣರು ತೃಪ್ತಿಗೊಳ್ಳಲು, ಮಹಾದಾನಗಳನ್ನು ಸರ್ವದಿಕ್ಕುಗಳಲ್ಲಿಯೂ ಘೋಷಿಸಲು, ಧರ್ಮರಾಜನ ನೆತ್ತಿಯ ಮೇಲೆ ಪುಷ್ಪವೃಷ್ಟಿಯು ಬಿದ್ದಿತು. ಆಗ ಒಂದು ಪಾರ್ಶ್ವವು ಸುವರ್ಣಮಯವಾಗಿದ್ದ ಮುಂಗಸಿಯೊಂದು ಬಿಲದಿಂದ ಹೊರಬಂದು ಸಿಡಿಲಿನಂತೆ ಗರ್ಜಿಸಿತು. ಹಾಗೆ ಜೋರಾಗಿ ಕೂಗಿ ಮೃಗ-ಪಕ್ಷಿಗಳನ್ನು ಭಯಪಡಿಸಿದ ಆ ಮಹಾ ಬಿಲಶಾಯಿಯು ಮಾನವ ಧ್ವನಿಯಲ್ಲಿ ಹೀಗೆ ಹೇಳಿತು:

“ನರಾಧಿಪರೇ! ಈ ಯಜ್ಞದಲ್ಲಿ ಮಾಡಿದ ದಾನವು ಕುರುಕ್ಷೇತ್ರದಲ್ಲಿ ವಾಸಿಸುವ ಉಂಚವೃತ್ತಿಯವನು ಮಾಡಿದ ಒಂದು ಸೇರು ಹಿಟ್ಟಿನ ದಾನಕ್ಕೂ ಸಮಾನವಲ್ಲ!” ಮುಂಗುಸಿಯ ಆ ಮಾತನ್ನು ಕೇಳಿ ಬ್ರಾಹ್ಮಣರ್ಷಭರೆಲ್ಲರೂ ಪರಮ ವಿಸ್ಮಿತರಾದರು. ಆಗ ಆ ದ್ವಿಜರೆಲ್ಲರೂ ಒಂದಾಗಿ ಮುಂಗುಸಿಯನ್ನು ಕೇಳಿದರು: “ಸಾಧುಗಳು ಬಂದು ಸೇರಿರುವ ಈ ಯಜ್ಞಕ್ಕೆ ನೀನು ಎಲ್ಲಿಂದ ಆಗಮಿಸಿರುವೆ? ನಿನ್ನ ಪರಮ ಬಲವು ಯಾವುದು? ನಿನ್ನ ಪರಿಜ್ಞಾನವು ಏನು? ಯಾರನ್ನಾಶ್ರಯಿಸಿ ಜೀವಿಸುತ್ತಿರುವೆ? ಈ ಯಜ್ಞವನ್ನು ಹೀಗೆ



ನಿಂದಿಸುತ್ತಿರುವ ನಿನ್ನನ್ನು ನಾವು ಯಾರೆಂದು ತಿಳಿದುಕೊಳ್ಳಬೇಕು? ನಾನಾವಿಧದ ಯಜ್ಞಸಾಮಾಗ್ರಿಗಳನ್ನು ಸಂಗ್ರಹಿಸಿ ಶಾಸ್ತ್ರವಿಧಿಗೆ ಯಾವ ಲೋಪವೂ ಬರದಂತೆ ಆಗಮಗಳಲ್ಲಿ ಹೇಳಿರುವಂತೆ ಯಥಾನ್ಯಾಯವಾಗಿ ಹೇಗೆ ಮಾಡಬೇಕೋ ಹಾಗೆ ಯಾಜಕರು ಇಲ್ಲಿ ಕರ್ತವ್ಯಗಳನ್ನು ನಿರ್ವಹಿಸಿದ್ದಾರೆ. ಶಾಸ್ತ್ರಗಳಲ್ಲಿ ತೋರಿಸಿಕೊಟ್ಟಿರುವಂತೆ ಪೂಜಾರ್ಹರನ್ನು ಇಲ್ಲಿ ವಿಧಿವತ್ತಾಗಿ ಪೂಜಿಸಲಾಗಿದೆ. ಮಂತ್ರಪೂತ ಆಹುತಿಗಳಿಂದ ಅಗ್ನಿಯು ತೃಪ್ತನಾಗಿದ್ದಾನೆ. ಮಾತ್ಸರ್ಯವೇನೂ ಇಲ್ಲದೇ ದಾನಗಳನ್ನು ನೀಡಲಾಗಿದೆ. ಇಲ್ಲ ಬಹುವಿಧದ ದಾನಗಳಿಂದ ದ್ವಿಜರ್ಷಭರು ತುಷ್ಟರಾಗಿದ್ದಾರೆ. ಧರ್ಮಯುದ್ಧದಿಂದ ಕ್ಷತ್ರಿಯರೂ, ಶ್ರಾದ್ಧಗಳಿಂದ ಪಿತಾಮಹರೂ ತೃಪ್ತರಾಗಿದ್ದಾರೆ. ಪಾಲನೆಯಿಂದ ವೈಶ್ಯರು ತುಷ್ಟರಾಗಿದ್ದಾರೆ. ಶ್ರೇಷ್ಠ ಸ್ತ್ರೀಯರು ಕಾಮಗಳಿಂದ ತೃಪ್ತರಾಗಿದ್ದಾರೆ. ದಯೆಯಿಂದ ಶೂದ್ರರೂ, ದಾನಕೊಟ್ಟು ಉಳಿದುದರಿಂದ ಇತರ ಜನರೂ ತೃಪ್ತರಾಗಿದ್ದಾರೆ. ನಮ್ಮ ನೃಪನ ಶೌಚದಿಂದಾಗಿ ಜ್ಞಾತಿ-ಸಂಬಂಧಿಗಳು ತೃಪ್ತರಾಗಿದ್ದಾರೆ. ದೇವತೆಗಳು ಪುಣ್ಯ ಹವಿಸ್ಸುಗಳಿಂದಲೂ

ಶರಣಾಗತರು ರಕ್ಷಣೆಯಿಂದಲೂ ತುಷ್ಟರಾಗಿದ್ದಾರೆ. ಇಲ್ಲಿ ಹೀಗಿರುವಾಗ ನೀನು ಏನನ್ನು ಕೇಳಿ ಅಥವಾ ಏನನ್ನು ನೋಡಿ ಹೀಗೆ ಹೇಳುತ್ತಿರುವೆ? ಬ್ರಾಹ್ಮಣರ ಅಪೇಕ್ಷೆಯಂತೆ ದ್ವಿಜಾತಿಯವರು ಕೇಳುವ ಈ ಪ್ರಶ್ನೆಗೆ ಉತ್ತರಿಸು. ನೀನು ಪ್ರಾಜ್ಞನಾಗಿರುವೆ. ದಿವ್ಯರೂಪವನ್ನು ಹೊಂದಿರುವೆ. ಬ್ರಾಹ್ಮಣರೊಂದಿಗೆ ಸೇರಿರುವೆ. ನಿನ್ನ ವಾಕ್ಯದಲ್ಲಿ ಶ್ರದ್ಧೆಯಿದೆ. ತತ್ತ್ವವೇನೆಂದು ನೀನು ಹೇಳಬೇಕು."

ದ್ವಿಜರು ಹೀಗೆ ಕೇಳಲು ಆ ಮುಂಗಸಿಯು ನಕ್ಕು ಹೇಳಿತು:

"ದ್ವಿಜರೇ! ನನ್ನ ಮಾತು ಸುಳ್ಳಲ್ಲ ಅಥವಾ ನಾನು ಇದನ್ನು ದರ್ಪದಿಂದಲೂ ಹೇಳಿಲ್ಲ! "ನರಾಧಿಪರೇ! ಈ ಯಜ್ಞವು ಕುರುಕ್ಷೇತ್ರದಲ್ಲಿ ವಾಸಿಸಿದ್ದ ಉಂಚವೃತ್ತಿಯವನು ನೀಡಿದ ಒಂದು ಸೇರು ಹಿಟ್ಟಿನ ದಾನಕ್ಕೂ ಸಮನಲ್ಲ!" ಎಂಬ ನನ್ನ ಮಾತನ್ನು ನೀವುಗಳು ಕೂಡ ಕೇಳಿಕೊಂಡಿದ್ದೀರಿ. ಆದರೂ ನಿಮಗೆ ನಾನು ಈ ಮಾತುಗಳನ್ನು ಹೇಳುವುದು ಅವಶ್ಯಕವಾಗಿದೆ. ಅವ್ಯಗ್ರಮನಸ್ಕರಾಗಿ ನಾನು ಹೇಳುವುದನ್ನು ಕೇಳುವಂಥವರಾಗಿರಿ! ಕುರುಕ್ಷೇತ್ರದಲ್ಲಿ ವಾಸಿಸುತ್ತಿದ್ದ ಉಂಚವೃತ್ತಿಯನ್ನನುಸರಿಸುತ್ತಿರುವನ ಉತ್ತಮವೂ

ಅದ್ಭುತವೂ ಆದ ಆ ನಡತೆಯನ್ನು ನಾನು ಪ್ರತ್ಯಕ್ಷವಾಗಿ ಕಂಡಿದ್ದೇನೆ. ನನ್ನ ಈ ಅರ್ಧ ಶರೀರವನ್ನು ಸುವರ್ಣಮಯವನ್ನಾಗಿ ಮಾಡಿಸಿ ಆ ದ್ವಿಜನು ತನ್ನ ಪತ್ನಿ, ಮಗ ಮತ್ತು ಸೊಸೆಯರೊಂದಿಗೆ ಸ್ವರ್ಗವನ್ನು ಪಡೆದನು. ದ್ವಿಜರೇ! ಅಲ್ಪವಾದರೂ ಬ್ರಾಹ್ಮಣನು ನ್ಯಾಯವಾಗಿ ಪಡೆದುದನ್ನು ದಾನಮಾಡಿದುದರ ಮಹಾ ಫಲವೇನೆನ್ನುವುದನ್ನು ಹೇಳುತ್ತೇನೆ. ಕೇಳಿ.” ಆಗ ಮುಂಗುಸಿಯು ಉಂಚವೃತ್ತಿಯಲ್ಲಿ ಜೀವಿಸುತ್ತಿದ್ದ ಕಾಪೋತ ಬ್ರಾಹ್ಮಣನ ಕುರಿತು ಹೇಳಿತು. “ಅವನ ಮನೆಯಲ್ಲಿದ್ದ ಹಿಟ್ಟಿನ ವಾಸನೆಯಿಂದಲೂ, ಚೆಲ್ಲಿದ್ದ ನೀರಿನಲ್ಲಿ ನೆನೆದುದರಿಂದಲೂ, ದಿವ್ಯಪುಷ್ಪಗಳ ಮೇಲೆ ಓಡಾಡಿದುದರಿಂದಲೂ, ಆ ಸಾಧುವು ದಾನಮಾಡಿದ ಹಿಟ್ಟಿನ ಕಣಗಳ ಸಂಪರ್ಕದಿಂದಲೂ, ಮತ್ತು ಆ ವಿಪ್ರನ ತಪಸ್ಸಿನಿಂದಲೂ ನನ್ನ ತಲೆಯು ಕಾಂಚನದ್ದಾಯಿತು. ವಿಪ್ರರೇ! ಆ ಸತ್ಯಸಂಧನ ಸೂಕ್ಷ್ಮ ದಾನದಿಂದಲೇ ನನ್ನ ಶರೀರಾರ್ಧವು ಸುವರ್ಣಮಯವಾಯಿತು. ಆ ಧೀಮಂತನ ವಿಪುಲ ತಪಸ್ಸನ್ನು ನೋಡಿ! ಇದೇರೀತಿ ನನ್ನ ಅನ್ಯ ಪಾರ್ಶ್ವವೂ ಕೂಡ ಹೇಗೆ

ಆಗಬಹುದೆಂದು ಸಂತೋಷದಿಂದ ನಾನು ತಪೋವನಗಳು ಮತ್ತು ಯಜ್ಞಗಳಿಗೆ ಪುನಃ ಪುನಃ ಹೋಗುತ್ತಿದ್ದೇನೆ. ಧೀಮತ ಕುರುರಾಜನ ಈ ಯಜ್ಞದ ಕುರಿತು ಕೇಳಿ ಪರಮ ಆಸೆಯಿಂದ ಇಲ್ಲಿಗೆ ಬಂದರೂ ನನ್ನ ಶರೀರವು ಕಾಂಚನದ್ದಾಗಲಿಲ್ಲ. ಆದುದರಿಂದಲೇ ಹಿಟ್ಟಿನುಂಡೆಯ ಆ ದಾನಕ್ಕೆ ಈ ಯಜ್ಞವು ಸರ್ವಥಾ ಸಮನಲ್ಲ ಎನ್ನುವ ಆ ವಾಕ್ಯವನ್ನು ಗಟ್ಟಿಯಾಗಿ ನಗುತ್ತಾ ನಾನು ಹೇಳಿದೆ. ಹಿಟ್ಟಿನುಂಡೆಯ ಕಣಗಳಿಂದಲೇ ನನ್ನ ಶಿರವು ಕಾಂಚನದ್ದಾಯಿತು. ಈ ಮಹಾಯಜ್ಞವು ಅದಕ್ಕೆ ಸಮನಾದುದಲ್ಲ ಎನ್ನುವುದು ನನ್ನ ಮತ."

ಯಜ್ಞದಲ್ಲಿದ್ದ ದ್ವಿಜಶ್ರೇಷ್ಠರಿಗೆ ಹೀಗೆ ಹೇಳಿ ಮುಂಗುಸಿಯು ಮಾಯವಾಯಿತು. ವಿಪ್ರರು ತಮ್ಮ ತಮ್ಮ ಮನೆಗಳಿಗೆ ತೆರಳಿದರು. ಮನುಷ್ಯನಂತೆ ಮಾತನಾಡಿದ ಆ ಮುಂಗುಸಿಯು ಕ್ರೋಧನೆನ್ನುವ ಬ್ರಾಹ್ಮಣನಾಗಿದ್ದನು. ಅವನು ಜಮದಗ್ನಿಯ ಪಿತೃಗಳ ಶಾಪದಿಂದ ಮುಂಗುಸಿಯಾದನು. ಶಾಪದ ಅಂತ್ಯವಾಗಲೆಂದು ಅವನು ಅವರ ಕೃಪೆಯನ್ನು ಕೇಳಿದನು.

"ಧರ್ಮನನ್ನು ನೀನು ನಿಂದಿಸಿದಾಗ ನಿನಗೆ ಶಾಪದ ವಿಮೋಚನೆಯಾಗುತ್ತದೆ"

ಎಂದು ಅವರು ಅವನಿಗೆ ಹೇಳಿದರು. ಅವರು ಹೀಗೆ ಹೇಳಲು ಕ್ರೋಧನು ಜುಗುಪ್ಸೆತಾಳಿ ಯಜ್ಞಪ್ರದೇಶಗಳನ್ನೂ ಧರ್ಮಾರಣ್ಯಗಳನ್ನೂ ಸುತ್ತಾಡಿಕೊಂಡು ಯುಧಿಷ್ಠಿರನ ಯಜ್ಞಕ್ಕೆ ಬಂದು ತಲುಪಿದನು. ಸೇರು ಹಿಟ್ಟಿನ ದಾನದ ಮಹಿಮೆಯನ್ನು ಹೇಳಿ ಧರ್ಮಪುತ್ರನ ಯಜ್ಞವನ್ನು ನಿಂದಿಸಿ, ಶಾಪದಿಂದ ಬಿಡುಗಡೆ ಹೊಂದಿ ಕ್ರೋಧ ಧರ್ಮನು ಯುಧಿಷ್ಠಿರನಲ್ಲಿಯೇ ಸೇರಿಹೋದನು.

# ಆಶ್ರಮವಾಸಿಕ ಪರ್ವ




## ಧೃತರಾಷ್ಟ್ರ ವನಪ್ರಸ್ಥಾನ

### ಧೃತರಾಷ್ಟ್ರ ಶುಶ್ರೂಷಾ

ಶತ್ರುಗಳನ್ನು ಸಂಹರಿಸಿ ರಾಜ್ಯವನ್ನು ಪಡೆದುಕೊಂಡ ಮಹಾತ್ಮ ಪಾಂಡವರು ಧೃತರಾಷ್ಟ್ರನನ್ನೇ ಮುಂದೆಮಾಡಿಕೊಂಡು ರಾಜ್ಯಭಾರ

ಮಾಡುತ್ತಿದ್ದರು. ವಿದುರ, ಸಂಜಯ ಮತ್ತು ವೈಶ್ಯಾಪುತ್ರ ಯುಯುತ್ಸುವೂ ಕೂಡ ಧೃತರಾಷ್ಟ್ರನ ಸೇವೆಗೈಯುತ್ತಿದ್ದರು. ಪಾಂಡವರು ಸರ್ವಕಾರ್ಯಗಳಲ್ಲಿಯೂ ಆ ನೃಪನ ಸಲಹೆಯನ್ನು ಕೇಳುತ್ತಿದ್ದರು ಮತ್ತು ಅವನ ಅನುಜ್ಞೆಯಂತೆಯೇ ಎಲ್ಲವನ್ನೂ ಮಾಡುತ್ತಿದ್ದರು. ಹೀಗೆ ಅವರು ಹದಿನೈದು ವರ್ಷಗಳನ್ನು ಕಳೆದರು. ಧರ್ಮರಾಜನ ಅಭಿಪ್ರಾಯದಂತೆ ನಿತ್ಯವೂ ಆ ವೀರರು ಹೋಗಿ ನೃಪನಿಗೆ ಪಾದಾಭಿವಂದನೆಯನ್ನು ಮಾಡಿ ಅವನ ಸೇವೆಗೈಯುತ್ತಿದ್ದರು. ಧೃತರಾಷ್ಟ್ರನೂ ಕೂಡ ಅವರನ್ನು ಹಿಡಿದೆತ್ತಿ ನೆತ್ತಿಯನ್ನು ಆಘ್ರಾಣಿಸುತ್ತಿದ್ದನು. ಹೀಗೆ ಅವರು ಅವನ ಎಲ್ಲ ಕಾರ್ಯಗಳನ್ನೂ ಮಾಡುತ್ತಿದ್ದರು. ಕುಂತಿಭೋಜನ ಮಗಳೂ ಕೂಡ ಗಾಂಧಾರಿಯ ಸೇವೆಯಲ್ಲಿ ನಿರತಳಾಗಿದ್ದಳು. ದ್ರೌಪದೀ, ಸುಭದ್ರಾ ಮತ್ತು ಅನ್ಯ ಪಾಂಡವಸ್ತ್ರೀಯರೂ ಕೂಡ ತಮ್ಮ ಇಬ್ಬರೂ ಅತ್ತೆಯಂದಿರನ್ನೂ ಸಮಾನ ಭಾವದಿಂದ ಕಾಣುತ್ತಾ ಯಥಾವಿಧಿಯಾಗಿ ಅವರ ಸೇವೆ ಗೈಯುತ್ತಿದ್ದರು. ಮಹಾರಾಜ ಯುಧಿಷ್ಠಿರನು ಧೃತರಾಷ್ಟ್ರನಿಗೆ ರಾಜಾರ್ಹವಾದ ಮಹಾಬೆಲೆಯ ಶಯನ-ವಸ್ತ್ರಾಭರಣಗಳನ್ನೂ, ಅನೇಕ ಭಕ್ಷ್ಯ-ಭೋಜ್ಯಗಳನ್ನೂ ನೀಡುತ್ತಿದ್ದನು. ಹಾಗೆಯೇ ಕುಂತಿಯೂ ಗುರುಭಾವದಿಂದ ಗಾಂಧಾರಿಯ ಸೇವೆಗೈಯುತ್ತಿದ್ದಳು. ಪುತ್ರರನ್ನು

ಕಳೆದುಕೊಂಡ ವೃದ್ಧ ಜನಾಧಿಪನನ್ನು ವಿದುರ, ಸಂಜಯ ಮತ್ತು ಯುಯುತ್ಸುವು ಸೇವೆಗೈಯುತ್ತಿದ್ದರು. ದ್ರೋಣನ ಓರ್ವನೇ ಬಾವನಾದ, ಮಹಾನ್ ಬ್ರಾಹ್ಮಣ-ಪುತ್ರ ಮಹೇಷ್ವಾಸ ಕೃಪನೂ ಕೂಡ ಅವನೊಡನೆ ಸಮಭಾವದಿಂದಿರುತ್ತಿದ್ದನು. ಭಾಗವಾನ್ ವ್ಯಾಸನೂ ಕೂಡ ನಿತ್ಯವೂ ನೃಪನ ಬಳಿಯೇ ವಾಸವಾಗಿದ್ದುಕೊಂಡು ದೇವರ್ಷಿ-ನೃಪ-ರಾಕ್ಷಸರ ಪುರಾಣ ಕಥೆಗಳನ್ನು ಹೇಳುತ್ತಿದ್ದನು. ವಿದುರನು ಧೃತರಾಷ್ಟ್ರನ ಆಜ್ಞೆಯನ್ನನುಸರಿಸಿ ಧರ್ಮಯುಕ್ತವಾದ ವ್ಯಾವಹಾರಿಕ ಕಾರ್ಯಗಳನ್ನು ಮಾಡಿಸುತ್ತಿದ್ದನು. ವಿದುರನ ಉತ್ತಮ ಗುಣ-ನೀತಿಗಳಿಂದಾಗಿ ಸಾಮಂತರೂ ಕೂಡ ಧೃತರಾಷ್ಟ್ರನಿಗೆ ಪ್ರಿಯವಾದ ಕಾರ್ಯಗಳನ್ನು ಸ್ವಲ್ಪವೇ ವೆಚ್ಚದಲ್ಲಿ ಮಾಡಿಮುಗಿಸುತ್ತಿದ್ದರು. ಧೃತರಾಷ್ಟ್ರನು ಬಂಧನದಲ್ಲಿದ್ದವರನ್ನು ಬಿಡುಗಡೆ ಮಾಡಿಸುತ್ತಿದ್ದನು ಮತ್ತು ಮರಣದಂಡನೆಗೆ ಗುರಿಯಾದವರಿಗೆ ಪ್ರಾಣದಾನಮಾಡುತ್ತಿದ್ದನು. ಆದರೂ ರಾಜಾ ಧರ್ಮಸುತನು ಯಾವಾಗಲೂ ಏನನ್ನೂ ಹೇಳುತ್ತಿರಲಿಲ್ಲ. ಕುರುರಾಜ ಯುಧಿಷ್ಠಿರನು ಧೃತರಾಷ್ಟ್ರನ ವಿಹಾರಕ್ಕಾಗಿ ಅವನು ಅಪೇಕ್ಷಿಸಿದ ಸರ್ವ ಕಾಮನಾವಸ್ತುಗಳನ್ನೂ ಒದಗಿಸಿಕೊಡುತ್ತಿದ್ದನು. ಹಿಂದಿನಂತೆ ಆರಾಲಿಕರು, ಸೂಪಕಾರರು ಮತ್ತು ರಾಗಖಾಂಡವಿಕರು ರಾಜ

ಧೃತರಾಷ್ಟ್ರನ ಜೊತೆಯಲ್ಲಿಯೇ ಇರುತ್ತಿದ್ದರು. ಪಾಂಡವರು ಯಥಾನ್ಯಾಯವಾಗಿ ಧೃತರಾಷ್ಟ್ರನಿಗೆ ಬಹುಮೂಲ್ಯ ವಸ್ತ್ರಗಳನ್ನೂ, ವಿವಿಧ ಮಾಲೆಗಳನ್ನೂ ತಂದುಕೊಡುತ್ತಿದ್ದರು. ಹಿಂದಿನಂತೆಯೇ ಪಾಂಡವರು ಧೃತರಾಷ್ಟ್ರನಿಗೆ ಮೈರೇಯಗಳನ್ನೂ, ಮಧು-ಮಾಂಸಗಳನ್ನೂ, ಲಘು ಪಾನಕಗಳನ್ನೂ, ವಿಚಿತ್ರ ಭಕ್ಷ್ಯಗಳನ್ನೂ ಒದಗಿಸುತ್ತಿದ್ದರು. ಹಿಂದಿನಂತೆಯೇ ಸುತ್ತಲಿನ ಪೃಥಿವೀಪಾಲರು ಎಲ್ಲರೂ ಬಂದು ಕೌರವೇಂದ್ರ ಧೃತರಾಷ್ಟ್ರನಿಗೆ ಗೌರವವನ್ನು ಸಲ್ಲಿಸುತ್ತಿದ್ದರು. ಕುಂತೀ, ದ್ರೌಪದೀ, ಸಾತ್ವತೀ ಸುಭದ್ರಾ, ನಾಗಕನ್ಯೆ ಉಲೂಪಿ, ದೇವೀ ಚಿತ್ರಾಂಗದಾ, ಧೃಷ್ಟಕೇತುವಿನ ತಂಗಿ, ಜರಾಸಂಧ ಪುತ್ರಿ ಇವರು ಎಲ್ಲರೂ ಸುಬಲನ ಪುತ್ರಿ ಗಾಂಧಾರಿಗೆ ಸೇವಕಿಯರಂತೆಯೇ ಸೇವೆಸಲ್ಲಿಸುತ್ತಿದ್ದರು.

> “ಪುತ್ರರಿಂದ ವಿಹೀನನಾಗಿರುವ ಇವನಿಗೆ ಸ್ವಲ್ಪವೂ ದುಃಖವನ್ನು ತರಬಾರದು !”

ಎಂದು ರಾಜಾ ಯುಧಿಷ್ಠಿರನು ನಿತ್ಯವೂ ತನ್ನ ಸಹೋದರರಿಗೆ ಆಜ್ಞೆಮಾಡುತ್ತಿದ್ದನು. ಅರ್ಥವತ್ತಾದ ಧರ್ಮರಾಜನ ಈ ಮಾತನ್ನು, ಭೀಮನೊಬ್ಬನನ್ನು ಬಿಟ್ಟು, ಎಲ್ಲರೂ ಪಾಲಿಸುತ್ತಿದ್ದರು. ಧೃತರಾಷ್ಟ್ರನ ದುರ್ಬುದ್ಧಿಯಿಂದ ನಡೆದ ದ್ಯೂತವು ಆ ವೀರ ಭೀಮಸೇನನ

ಹೃದಯದಿಂದ ಅಳಿದುಹೋಗಿರಲೇ ಇಲ್ಲ.

ಹೀಗೆ ಪಾಂಡವರಿಂದ ಸಂಪೂಜಿತನಾದ ರಾಜಾ ಅಂಬಿಕಾಸುತನು ಮೊದಲಿನಂತೆಯೇ ಋಷಿಗಳ ಮಧ್ಯದಲ್ಲಿ ಕಾಲಕಳೆಯುತ್ತಿದ್ದನು. ಆ ಕುರೂದ್ವಹನು ಬ್ರಾಹ್ಮಣರಿಗೆ ಅಗ್ರಹಾರಗಳನ್ನು ದಾನವನ್ನಾಗಿತ್ತನು. ಅದರಲ್ಲಿಯೂ ಕುಂತೀಸುತ ರಾಜನು ಎಲ್ಲವನ್ನೂ ಅನುಮೋದಿಸುತ್ತಿದ್ದನು. ಅಹಿಂಸಾಪರನಾದ ರಾಜಾ ಯುಧಿಷ್ಠಿರನು ಪ್ರೀತಿಯಿಂದ ಸದಾ ತನ್ನ ಸಹೋದರರು ಮತ್ತು ಅಮಾತ್ಯರಿಗೆ ಹೀಗೆ ಹೇಳುತ್ತಿದ್ದನು:

> "ಈ ನರಾಧಿಪನು ನನಗೆ ಮತ್ತು ನಿಮಗೆ ಮಾನನೀಯನಾಗಿದ್ದಾನೆ. ಧೃತರಾಷ್ಟ್ರನ ನಿರ್ದೇಶನದಂತೆ ಯಾರಿರುತ್ತಾರೋ ಅವರೇ ನನಗೆ ಮಿತ್ರರು. ಅವನಿಗೆ ವಿಪರೀತನಾಗಿರುವವನು ನನಗೆ ಶತ್ರುವೂ ಹೌದು ಮತ್ತು ಅಂಥಹವನು ಶಿಕ್ಷಾರ್ಹನೂ ಆಗುವನು. ಮಕ್ಕಳ ಶ್ರಾದ್ಧಕರ್ಮಗಳನ್ನು ಮಾಡಲು ಅವನು ಬಯಸಿದಾಗಲೆಲ್ಲಾ ರಾಜನು ಏನನ್ನು ಇಚ್ಛಿಸುವನೋ ಅವೆಲ್ಲವನ್ನೂ ಒದಗಿಸಿಕೊಡಬೇಕು!"

ಆಗ ರಾಜಾ ಧೃತರಾಷ್ಟ್ರನು ಬ್ರಾಹ್ಮಣರಿಗೆ ಮಹಾರ್ಹವಾದ ಬಹಳಷ್ಟು ವಿತ್ತವನ್ನು ದಾನವನ್ನಾಗಿತ್ತನು. ಧರ್ಮರಾಜ, ಭೀಮ, ಸವ್ಯಸಾಚೀ ಮತ್ತು ಯಮಳರು ಅವೆಲ್ಲ ಸಮಯಗಳಲ್ಲಿ ಧೃತರಾಷ್ಟ್ರನಿಗೆ ಸಂತೋಷವನ್ನುಂಟುಮಾಡಲು ಅವನನ್ನು ಅನುಸರಿಸುತ್ತಿದ್ದರು.

> "ನಾವೇ ತಂದುಕೊಟ್ಟ ಪುತ್ರಶೋಕದಿಂದ ಪೀಡಿತನಾದ ಈ ವೃದ್ಧ ರಾಜನು ಇನ್ನೂ ನಾಶವಾಗದೇ ಹೇಗಿದ್ದಾನೆ? ಅವನ ಪುತ್ರರು ಜೀವಿಸಿರುವಾಗ ಈ ಕುರುಮುಖ್ಯನು ಯಾವ ಸುಖವನ್ನು ಅನುಭವಿಸುತ್ತಿದ್ದನೋ ಅದೇ ಸುಖೋಪಭೋಗಗಳನ್ನು ಈಗಲೂ ಪಡೆದುಕೊಂಡಿರಲಿ!"

ಎಂದು ಅವರು ಯೋಚಿಸುತ್ತಿದ್ದರು. ಹಾಗೆ ಶೀಲವಂತರಾದ ಪಂಚ ಪಾಂಡವ ಸಹೋದರರರೆಲ್ಲರೂ ಧೃತರಾಷ್ಟ್ರನ ಶಾಸನದಲ್ಲಿಯೇ ನಡೆದುಕೊಂಡಿದ್ದರು. ಧೃತರಾಷ್ಟ್ರನೂ ಕೂಡ ವಿನೀತರಾಗಿ ವಿನಯದಿಂದಿರುತ್ತಿದ್ದ ಅವರನ್ನು, ನಿತ್ಯವೂ ಶಿಷ್ಯರಂತೆ ನಡೆದುಕೊಳ್ಳುತ್ತಿರುವವರನ್ನು ಗುರುವು ಹೇಗೋ ಹಾಗೆ, ಕಾಣುತ್ತಿದ್ದನು. ಗಾಂಧಾರಿಯೂ ಕೂಡ ಪುತ್ರರ ವಿವಿಧ ಶ್ರಾದ್ಧ ಕರ್ಮಗಳಲ್ಲಿ ವಿಪ್ರರು ಬಯಸಿದ ದಾನಗಳನ್ನಿತ್ತು ಪುತ್ರಋಣದಿಂದ ಮುಕ್ತಳಾದಳು. ಈ ರೀತಿಯಲ್ಲಿ ಧರ್ಮಭೃತರಲ್ಲಿ ಶ್ರೇಷ್ಠ ಧರ್ಮರಾಜ ಯುಧಿಷ್ಠಿರನು

ಸಹೋದರರೊಂದಿಗೆ ಆ ನೃಪನನ್ನು ಪೂಜಿಸಿಕೊಂಡಿದ್ದನು.

ಆ ವೃದ್ಧ ರಾಜಾ ಧೃತರಾಷ್ಟ್ರನು ಪಾಂಡುನಂದನ ಯುಧಿಷ್ಠಿರನಲ್ಲಿ ಅಪ್ರಿಯವಾದ ಏನೊಂದನ್ನೂ ಕಾಣಲಿಲ್ಲ. ಮಹಾತ್ಮ ಪಾಂಡವರೊಂದಿಗೆ ಆ ರೀತಿಯ ಸದ್ವೃತ್ತಿಯು ನಡೆಯುತ್ತಿರಲು ಅಂಬಿಕಾಸುತ ಧೃತರಾಷ್ಟ್ರನು ಸಂತೋಷದಿಂದಿದ್ದನು. ಸೌಬಲೇಯೀ ಗಾಂಧಾರಿಯೂ ಕೂಡ ಪುತ್ರಶೋಕವನ್ನು ತೊರೆದು ಪಾಂಡವರನ್ನು ತನ್ನ ಮಕ್ಕಳಂತೆಯೇ ಸದೈವ ಪ್ರೀತಿಸುತ್ತಿದ್ದಳು. ಕೌರವ ಕುರೂದ್ವಹ ಯುಧಿಷ್ಠಿರನೂ ಕೂಡ ವೈಚಿತ್ರವೀರ್ಯ ನೃಪತಿ ಧೃತರಾಷ್ಟ್ರನಿಗೆ ಅಪ್ರಿಯ ಕರ್ಮಗಳನ್ನು ಮಾಡುತ್ತಿರಲಿಲ್ಲ. ನಿತ್ಯವೂ ಅವನಿಗೆ ಸರಿಯಾಗಿಯೇ ನಡೆದುಕೊಂಡಿದ್ದನು. ಧೃತರಾಷ್ಟ್ರ ಮತ್ತು ಗಾಂಧಾರಿಯರು ಚಿಕ್ಕ ಅಥವಾ ದೊಡ್ಡ ಯಾವ ಕಾರ್ಯವನ್ನೇ ಹೇಳಲಿ ಅವುಗಳನ್ನು ಮಹಾರಾಜ ಯುಧಿಷ್ಠಿರನು, ಅವರ ಮಾತನ್ನು ಗೌರವಿಸಿ, ಮಾಡಿಕೊಡುತ್ತಿದ್ದನು. ಅವನ ಆ ನಡತೆಯಿಂದ ಧೃತರಾಷ್ಟ್ರನು ಪ್ರೀತನಾಗಿದ್ದನು. ಆದರೂ ಮಂದಚೇತಸನಾಗಿದ್ದ ತನ್ನ ಮಗನನ್ನು ನೆನಪಿಸಿಕೊಂಡು ಪಶ್ಚಾತ್ತಾಪಪಡುತ್ತಿದ್ದನು. ಸದಾ ಬೆಳಿಗ್ಗೆ ಎದ್ದು ಶುಚಿಯಾಗಿ ಜಪಾದಿಗಳನ್ನು ಮುಗಿಸಿ ನೃಪನು ಪಾಂಡುಪುತ್ರರಿಗೆ ಸಮರದಲ್ಲಿ ಅಪರಾಜಯವನ್ನು ಆಶೀರ್ವದಿಸುತ್ತಿದ್ದನು.

ಬ್ರಾಹ್ಮಣರಿಂದ ಸ್ವಸ್ತಿವಾಚನಮಾಡಿಸಿ, ಅಗ್ನಿಯಲ್ಲಿ ಹೋಮಮಾಡಿ ನರಾಧಿಪನು ಪಾಂಡುಪುತ್ರರ ದೀರ್ಘಾಯುಸ್ಸನ್ನು ಪ್ರಾರ್ಥಿಸುತ್ತಿದ್ದನು. ಆಗ ಪಾಂಡುಪುತ್ರರಿಂದ ಯಾವ ಪ್ರೀತಿಯನ್ನು ನೃಪ ಮಹೀಪತಿಯು ಪಡೆದನೋ ಆ ಪ್ರೀತಿಯನ್ನು ತನ್ನ ಪುತ್ರರಿಂದಲೂ ಹಿಂದೆ ಪಡೆದಿರಲಿಲ್ಲ. ಆಗ ಯುಧಿಷ್ಠಿರನು ಬ್ರಾಹ್ಮಣರ, ವೃದ್ಧರ, ಕ್ಷತ್ರಿಯರ, ವೈಶ್ಯರ ಮತ್ತು ಶೂದ್ರಸಂಘಗಳ ಪ್ರೀತಿಪಾತ್ರನಾಗಿದ್ದನು. ಹಿಂದೆ ಧೃತರಾಷ್ಟ್ರನ ಮಕ್ಕಳು ಏನೆಲ್ಲ ಪಾಪಗಳನ್ನೆಸಗಿದ್ದರೋ ಅವೆಲ್ಲವನ್ನೂ ಹೃದಯಕ್ಕೆ ಹಚ್ಚಿಕೊಳ್ಳದೇ ನೃಪ ಧೃತರಾಷ್ಟ್ರನ ಸೇವೆಗೈಯುತ್ತಿದ್ದನು. ಅಂಬಿಕಾಸುತನ ವಿಷಯದಲ್ಲಿ ಯಾರೇ ಏನೇ ಅಪ್ರಿಯವಾದುದನ್ನು ಎಸಗಿದರೂ ಅವನು ಕೌಂತೇಯನ ದ್ವೇಷಕ್ಕೆ ಪಾತ್ರನಾಗುತ್ತಿದ್ದನು. ಯುಧಿಷ್ಠಿರನ ಭಯದಿಂದಾಗಿ ಯಾರೂ ರಾಜ ಧೃತರಾಷ್ಟ್ರನ ಅಥವಾ ದುರ್ಯೋಧನನ ದುಷ್ಕೃತಗಳ ಕುರಿತು ಮಾತನಾಡುತ್ತಿರಲಿಲ್ಲ. ನರೇಂದ್ರ ಅಜಾತಶತ್ರುವಿನ ಧೃತಿ, ಶೌಚಗಳಿಂದ ಗಾಂಧಾರೀ ಮತ್ತು ವಿದುರರು ತುಷ್ಟರಾಗಿದ್ದರು. ಆದರೆ ಭೀಮನ ಕುರಿತು ಅವರಿಗೆ ತೃಪ್ತಿಯಿರಲಿಲ್ಲ. ಭೀಮನೂ ಕೂಡ ಧರ್ಮಜ ನೃಪನನ್ನು ನಿಷ್ಠೆಯಿಂದ ಅನುಸರಿಸುತ್ತಿದ್ದನು. ಆದರೆ ಧೃತರಾಷ್ಟ್ರನನ್ನು ಕಂಡಾಗಲೆಲ್ಲಾ ಕೆಟ್ಟ ಭಾವವನ್ನು ತಾಳುತ್ತಿದ್ದನು. ಆ ಭೀಮನು ಧರ್ಮಪುತ್ರ ರಾಜನನ್ನು

ಅನುಸರಿಸಿಕೊಂಡಿದ್ದರೂ, ಹೃದಯದಲ್ಲಿ ಬೇರೆಯೇ ಭಾವವನ್ನಿಟ್ಟುಕೊಂಡಿದ್ದನು.

## ಭೀಮಾಪನಯ

ದುರ್ಯೋಧನನ ತಂದೆ ನೃಪತಿಯ ಮೇಲೆ ಇದ್ದ ಯುಧಿಷ್ಠಿರನ ಪ್ರೀತಿಯಲ್ಲಿ ಪುರುಷರು ಯಾವ ಒಡಕನ್ನೂ ಕಾಣಲಿಲ್ಲ. ಯಾವಾಗಲೆಲ್ಲ ರಾಜಾ ಕೌರವನು ತನ್ನ ಪುತ್ರನ ಬಾಲಿಶಬುದ್ಧಿಯನ್ನು ಸ್ಮರಿಸಿಕೊಳ್ಳುತ್ತಿದ್ದನೋ ಆವಾಗಲೆಲ್ಲ ತನ್ನ ಹೃದಯದಲ್ಲಿ ಭೀಮನ ಕುರಿತು ಅನಿಷ್ಟವನ್ನೇ ಚಿಂತಿಸುತ್ತಿದ್ದನು. ಹಾಗೆಯೇ ಭೀಮಸೇನನಿಗೂ ಕೂಡ ಜನಾಧಿಪ ಧೃತರಾಷ್ಟ್ರನ ಕುರಿತು ಸಹನೆಯಿರಲಿಲ್ಲ. ಸದಾ ಅವನಿಗೆ ಅಪ್ರಿಯವಾದುದನ್ನೇ ಮಾಡುತ್ತಿದ್ದನು. ವೃಕೋದರನು ಯಾರಿಗೂ ಕಾಣದಂತೆ ಧೃತರಾಷ್ಟ್ರನಿಗೆ ಅಪ್ರಿಯವಾದುದನ್ನೇ ಮಾಡುತ್ತಿದ್ದನು. ಸದಾ ಕೃತಕ ಪುರುಷರಿಂದ ಧೃತರಾಷ್ಟ್ರನ ಆಜ್ಞೆಗಳನ್ನು ಭಗ್ನಗೊಳಿಸುತ್ತಿದ್ದನು. ಒಮ್ಮೆ ಕಠೋರ ಭೀಮನು ತನ್ನ ಸಹೃದಯರ ಮಧ್ಯದಲ್ಲಿ ಧೃತರಾಷ್ಟ್ರ-ಗಾಂಧಾರಿಯರಿಗೆ ಕೇಳುವಂತೆ ತನ್ನ ಭುಜಗಳನ್ನು ತಟ್ಟಿಕೊಂಡನು. ಶತ್ರು ದುರ್ಯೋಧನ, ಕರ್ಣ ಮತ್ತು ದುಃಶಾಸನರನ್ನು ಸ್ಮರಿಸಿಕೊಂಡು ಕೋಪಿಷ್ಟನಾದ ಭೀಮನು ಈ

ಕಠೋರ ಮಾತುಗಳನ್ನಾಡಿದನು: “ಪರಿಘದಂತಿರುವ ನನ್ನ ಈ ಬಾಹುಗಳಿಂದ ನಾನಾ ಶಸ್ತ್ರಗಳೊಡನೆ ಹೋರಾಡುತ್ತಿದ್ದ ಈ ಅಂಧ ನೃಪತಿಯ ಮಕ್ಕಳೆಲ್ಲರನ್ನೂ ಯಮನ ಲೋಕಕ್ಕೆ ಕಳುಹಿಸಿಬಿಟ್ಟೆನು! ಪರಿಘದಂತೆ ದುರಾಸದವಾಗಿರುವ ಈ ನನ್ನ ಎರಡು ಭುಜಗಳ ಮಧ್ಯೆ ಯಾರೆಲ್ಲ ಸಿಲುಕಿದರೋ ಆ ಎಲ್ಲ ಧಾರ್ತರಾಷ್ಟ್ರರೂ ನಾಶಹೊಂದಿದರು! ಸುತ-ಬಾಂಧವರೊಂದಿಗೆ ದುರ್ಯೋಧನನನ್ನು ನಾಶಗೊಳಿಸಿದ ಈ ನನ್ನ ಎರಡು ಭುಜಗಳು ಚಂದನಲೇಪನದ ಗೌರವಕ್ಕೆ ಅರ್ಹವಾಗಿವೆ!”

ವೃಕೋದರನ ಈ ಮತ್ತು ಅನ್ಯ ಮುಳ್ಳಿನಂತಹ ವಿವಿಧ ಮಾತುಗಳನ್ನು ಕೇಳಿ ಜನಾಧಿಪನಿಗೆ ಅತ್ಯಂತ ಖೇದವುಂಟಾಯಿತು. ಕಾಲದ ವೈಪರೀತ್ಯಗಳನ್ನು ತಿಳಿದಿದ್ದ ಸರ್ವಧರ್ಮಜ್ಞೆ ಬುದ್ಧಿಮತೀ ದೇವೀ ಗಾಂಧಾರಿಯೂ ಕೂಡ ಮನಸ್ಸಿಗೆ ಯಾತನೆಯನ್ನುಂಟುಮಾಡುವ ಆ ಮಾತುಗಳನ್ನು ಕೇಳಿದಳು. ಹಾಗೆ ಹದಿನೈದು ವರ್ಷಗಳು ಕಳೆದುಹೋದವು. ರಾಜಾ ನರಾಧಿಪ ಧೃತರಾಷ್ಟ್ರನು ಭೀಮನ ವಾಗ್ಬಾಣಗಳಿಂದ ಅತ್ಯಂತ ಪೀಡಿತನಾಗಿದ್ದನು. ರಾಜಾ ಯುಧಿಷ್ಠಿರನಿಗಾಗಲೀ, ಅರ್ಜುನನಿಗಾಗಲೀ, ಕುಂತಿಗಾಗಲೀ, ಅಥವಾ ಯಶಸ್ವಿನೀ ದ್ರೌಪದಿಗಾಗಲೀ ಈ ವಿಷಯದ ಅರಿವೇ ಇರಲಿಲ್ಲ.

ಮಾದ್ರೀಪುತ್ರರಿಬ್ಬರೂ ಕೂಡ ಭೀಮನ ಮನಸ್ಸನ್ನು ತಿಳಿಯದೇ ರಾಜ ಧೃತರಾಷ್ಟ್ರನ ಮನಸ್ಸಿಗೆ ಅನುಕೂಲರಾಗಿಯೇ ಇದ್ದರು. ಅವನ ಮನಸ್ಸು ಖೇದಗೊಳ್ಳದಂತೆ ರಕ್ಷಿಸುತ್ತಾ ಅವನಿಗೆ ಅಪ್ರಿಯವಾದ ಏನನ್ನೂ ಮಾಡುತ್ತಿರಲಿಲ್ಲ.

## ಧೃತರಾಷ್ಟ್ರನ ವನಗಮನ ಸಂಕಲ್ಪ

ಆಗ ಧೃತರಾಷ್ಟ್ರನು ತನ್ನ ಮಿತ್ರರನ್ನು ಕರೆಯಿಸಿ ಕಂಬನಿದುಂಬಿದ ಕಣ್ಣುಗಳಿಂದ ಕೂಡಿ ಗದ್ಗದ ಧ್ವನಿಯಲ್ಲಿ ಅವರೊಡನೆ ಹೀಗೆ ಹೇಳಿದನು:

> “ಕುರುಗಳ ವಿನಾಶವು ಹೇಗಾಯಿತೆಂದು ನಿಮಗೆಲ್ಲ ತಿಳಿದೇ ಇದೆ. ನನ್ನ ಅಪರಾಧದಿಂದಲೇ ಎಲ್ಲವೂ ನಡೆಯಿತು ಎನ್ನುವುದನ್ನು ಕೌರವರೆಲ್ಲರೂ ಬಲ್ಲರು! ನಾನೇ ದುಷ್ಟಮತಿಯಾದ ಮೂಢ ಬಾಂಧವರ ಭಯವನ್ನು ವರ್ಧಿಸುತ್ತಿದ್ದ ದುರ್ಯೋಧನನನ್ನು ಕೌರವರ ಅಧಿಪತಿಯನ್ನಾಗಿ ಅಭಿಷೇಕಿಸಿದೆನು! “ಈ ಪಾಪಿ ದುರ್ಮತಿಯನ್ನು ಅಮಾತ್ಯರೊಡನೆ ವಧಿಸು!” ಎಂಬ ವಾಸುದೇವನ ಅರ್ಥವತ್ತಾದ ಮಾತನ್ನು ನಾನೇ ಕೇಳಲಿಲ್ಲ! ಪುತ್ರಸ್ನೇಹದಿಂದಾಗಿ ನಾನು ಹಿತವನ್ನಾಡಿದ ವಿದುರ, ಭೀಷ್ಮ,

ದ್ರೋಣ, ಕೃಪ, ಮತ್ತು ಪದೇ ಪದೇ ಹೇಳುತ್ತಿದ್ದ ಮಹಾತ್ಮ ವ್ಯಾಸ, ಸಂಜಯ ಮತ್ತು ಗಾಂಧಾರಿಯರನ್ನು ಕೇಳಲಿಲ್ಲ. ಅದಕ್ಕಾಗಿ ಇಂದು ನಾನು ಪರಿತಪಿಸುತ್ತಿದ್ದೇನೆ! ಗುಣವಂತರೂ ಮಹಾತ್ಮರೂ ಆಗಿರುವ ಪಾಂಡುಪುತ್ರರಿಗೆ ನಾನು ಪಿತೃ-ಪಿತಾಮಹರಿಂದ ಉಜ್ವಲಿಸುತ್ತಿದ್ದ ಈ ಭೂಮಿ-ಸಂಪತ್ತನ್ನು ಕೊಡಲಿಲ್ಲ! ಸರ್ವರಾಜರ ವಿನಾಶವನ್ನು ಕಂಡಿದ್ದ ಜನಾರ್ದನನು ಇದೇ ಪರಮ ಶ್ರೇಯಸ್ಕರವೆಂದು ಭಾವಿಸಿದ್ದನು. ಹೀಗೆ ಆಗ ನಾನು ಮಾಡಿದ ಸಾವಿರಾರು ಅಪರಾಧಗಳು ಮುಳ್ಳುಗಳಂತೆ ಸದಾ ನನ್ನ ಹೃದಯವನ್ನು ಚುಚ್ಚುತ್ತಿವೆ. ವಿಶೇಷವಾಗಿ ನಾನು ಈ ಹದಿನೈದು ವರ್ಷಗಳು ಸುಡುತ್ತಿದ್ದೇನೆ. ದುರ್ಮತಿಯ ಈ ಪಾಪಗಳ ಶುದ್ಧಿಗಾಗಿ ಕೆಲವು ನಿಯಮಗಳನ್ನು ಪಾಲಿಸುತ್ತಿದ್ದೇನೆ. ನಾಲ್ಕನೆಯ ಹೊತ್ತು (ಎರಡು ದಿವಸಗಳಿಗೊಮ್ಮೆ), ಒಮ್ಮೆಮ್ಮೆ ಎಂಟನೆಯ ಹೊತ್ತು (ನಾಲ್ಕು ದಿವಸಗಳಿಗೊಮ್ಮೆ) ಹಸಿವಿನ ಸಂಕಟದಿಂದ ತಪ್ಪಿಸಿಕೊಳ್ಳಲು ಅಲ್ಪಾಹಾರವನ್ನು ತೆಗೆದುಕೊಳ್ಳುತ್ತಿದ್ದೇನೆ. ಇದನ್ನು ಗಾಂಧರಿಯೋರ್ವಳೇ ಬಲ್ಲಳು. ನಾನು ಪ್ರತಿನಿತ್ಯವೂ ಆಹಾರವನ್ನು ತೆಗೆದುಕೊಳ್ಳುತ್ತಿರುವೆನೆಂದೇ ಎಲ್ಲ ಪರಿಜನರೂ

ತಿಳಿದುಕೊಂಡಿದ್ದಾರೆ. ಪಾಂಡವನು ತುಂಬಾ ಪರಿತಪಿಸುತ್ತಾನೆಂದು ಯುಧಿಷ್ಠಿರನ ಭಯದಿಂದ ಯಾರಿಗೂ ಇದು ತಿಳಿಯದಂತೆ ಗೌಪ್ಯವಾಗಿ ಇರಿಸಿಕೊಂಡಿದ್ದೇನೆ. ದರ್ಭೆ ಮತ್ತು ಮೃಗಚರ್ಮವನ್ನು ಹೊದೆದುಕೊಂಡು ನಾನು ಮತ್ತು ಯಶಸ್ವಿನೀ ಗಾಂಧಾರೀ ಜಪಮಾಡುತ್ತಿರುತ್ತೇವೆ. ನೆಲದ ಮೇಲೆಯೇ ಮಲಗುತ್ತೇವೆ. ಸಂಗ್ರಾಮದಲ್ಲಿ ಹಿಮ್ಮೆಟ್ಟದ ನೂರು ಶೂರ ಮಕ್ಕಳೂ ಹತರಾದರು. ಅವರು ಕ್ಷತ್ರಧರ್ಮವನ್ನು ತಿಳಿದಿದ್ದರೆಂದು ನಾನು ಅದಕ್ಕಾಗಿ ಪರಿತಪಿಸುತ್ತಿಲ್ಲ.”

ಹೀಗೆ ಹೇಳಿ ಕೌರವ ಧೃತರಾಷ್ಟ್ರನು ಧರ್ಮರಾಜನಿಗೆ ಹೇಳಿದನುಃ

“ಪುತ್ರ! ನಿನಗೆ ಮಂಗಳವಾಗಲಿ! ನಾನೀಗ ಹೇಳುವ ಮಾತುಗಳನ್ನು ಕೇಳು! ನಿನ್ನಿಂದ ಪರಿಪಾಲಿತನಾಗಿರುವ ನಾನು ಅತ್ಯಂತ ಸುಖದಿಂದಲೇ ಇದ್ದೇನೆ. ಮಹಾದಾನಗಳನ್ನು ನೀಡಿದ್ದೇನೆ. ಪುನಃ ಪುನಃ ಶ್ರಾದ್ಧಗಳನ್ನು ಮಾಡಿದ್ದೇನೆ. ಬಲವಿದ್ದಷ್ಟು ಕಷ್ಟದ ಪುಣ್ಯ ಕರ್ಮಗಳನ್ನು ಮಾಡಿದ ಮತ್ತು ಪುತ್ರರನ್ನು ಕಳೆದುಕೊಂಡ ಈ ಗಾಂಧಾರಿಯು ಧೈರ್ಯದಿಂದ ನನ್ನನ್ನು ನೋಡಿಕೊಳ್ಳುತ್ತಿದ್ದಾಳೆ! ದ್ರೌಪದಿಗೆ ಅಪಕಾರವನ್ನೆಸಗಿದ ಮತ್ತು ನಿನ್ನ ಐಶ್ವರ್ಯವನ್ನು

ಅಪಹರಿಸಿದ ಕ್ರೂರಿಗಳು ಧರ್ಮದಿಂದ ಯುದ್ಧಮಾಡಿ ಹತರಾಗಿದ್ದಾರೆ. ಅವರ ಪಾಪಕ್ಕೆ ಮಾಡಬೇಕಾದ ಪರಿಹಾರಗಳನ್ನೇನೂ ನಾನು ಕಾಣುತ್ತಿಲ್ಲ. ಎಲ್ಲರೂ ಶಸ್ತ್ರಗಳನ್ನು ಹಿಡಿದೇ ನಿನ್ನನ್ನು ಎದುರಿಸಿ ಹತರಾಗಿ ಉತ್ತಮ ಲೋಕಗಳನ್ನು ಗಳಿಸಿಕೊಂಡಿದ್ದಾರೆ. ಈಗ ನನಗಾಗಿ ಮತ್ತು ಗಾಂಧಾರಿಗಾಗಿ ಹಿತವಾದ ಮುಖ್ಯ ಪರಿಹಾರಗಳನ್ನು ಮಾಡಿಕೊಳ್ಳಬೇಕಾಗಿದೆ. ಅದಕ್ಕೆ ನಿನ್ನ ಅನುಮತಿ ಬೇಕು! ನೀನು ಧರ್ಮಭೃತರಲ್ಲಿ ಶ್ರೇಷ್ಠ. ಸತತವೂ ಧರ್ಮವನ್ನು ಪಾಲಿಸಿಕೊಂಡಿರುವವನು. ಪ್ರಾಣವಿರುವವರಲ್ಲಿ ಹಿರಿಯವನು. ಆದುದರಿಂದ ನಿನ್ನಲ್ಲಿ ಹೇಳುತ್ತಿದ್ದೇನೆ. ನಿನ್ನ ಅನುಜ್ಞೆಯನ್ನು ಪಡೆದು ಗಾಂಧಾರಿಯ ಸಹಿತ ನಾನು ಚೀರ-ವಲ್ಕಲಗಳನ್ನು ಧರಿಸಿ ವನದಲ್ಲಿ ವಾಸಿಸುತ್ತೇನೆ. ವನದಲ್ಲಿ ಸಂಚರಿಸುತ್ತಾ ಸದಾ ನಿನಗೆ ಆಶೀರ್ವದಿಸುತ್ತಿರುತ್ತೇನೆ. ನಮ್ಮ ಕುಲದಲ್ಲಿ ಎಲ್ಲರಿಗೂ ಐಶ್ವರ್ಯವನ್ನು ಪುತ್ರರಿಗೊಪ್ಪಿಸಿ ವನವಾಸಮಾಡುವುದು ಉಚಿತವೇ ಆಗಿದೆ. ಅಲ್ಲಿ ನಾನು ಪತ್ನಿಯೊಡನೆ ವಾಯುಭಕ್ಷನಾಗಿಯೋ ನಿರಾಹಾರಿಯಾಗಿಯೋ ಇದ್ದುಕೊಂಡು ಪರಮ ತಪಸ್ಸನ್ನು ನಡೆಸುತ್ತೇನೆ. ರಾಜನಾಗಿರುವುದರಿಂದ

ನೀನೂ ಕೂಡ ಆ ತಪಸ್ಸಿನ ಫಲಭಾಗಿಯಾಗುವೆ. ಏಕೆಂದರೆ, ದೇಶದಲ್ಲಿ ಕಲ್ಯಾಣಕರವಾದ ಮತ್ತು ಕೆಟ್ಟದಾದ ಎಲ್ಲ ಕರ್ಮಗಳಿಗೆ ರಾಜನು ಫಲಭಾಗಿಯಾಗುತ್ತಾನೆ!”

ಯುಧಿಷ್ಠಿರನು ಹೇಳಿದನು:

“ನೃಪ! ನೀನು ಹೀಗೆ ದುಃಖದಿಂದಿರುವಾಗ ನನಗೆ ಈ ರಾಜ್ಯದಲ್ಲಿ ಯಾವ ಸಂತೋಷವೂ ಇಲ್ಲ. ಅತ್ಯಂತ ದುರ್ಬುದ್ಧಿಯಾದ, ರಾಜ್ಯಾಸಕ್ತಿಯಿಂದ ಪ್ರಮತ್ತನಾಗಿರುವ ನನಗೆ ಧಿಕ್ಕಾರವಿರಲಿ! ನೀನು ದುಃಖಾರ್ತನಾಗಿರುವುದಾಗಲೀ, ಉಪವಾಸದಿಂದ ಕೃಶನಾಗಿರುವುದಾಗಲೀ, ಅಲ್ಪಾಹಾರವನ್ನು ಸೇವಿಸಿ ನೆಲದ ಮೇಲೆ ಮಲಗಿಕೊಳ್ಳುತ್ತಿರುವುದಾಗಲೀ ಸಹೋದರರೊಂದಿಗೆ ನನಗೆ ತಿಳಿದೇ ಇರಲಿಲ್ಲ! ಗೂಢಬುದ್ಧಿಯ ನಿನ್ನಿಂದ ಮೂಢನಾದ ನಾನು ವಂಚಿತನಾಗಿದ್ದೇನೆ. ಮೊದಲು ನನ್ನಲ್ಲಿ ವಿಶ್ವಾಸವನ್ನು ಹುಟ್ಟಿಸಿ ಇಂದು ನನಗೆ ಈ ದುಃಖವನ್ನು ನೀಡಿದ್ದೀಯೆ! ನೀನೇ ಈ ರೀತಿಯ ದುಃಖವನ್ನು ಅನುಭವಿಸುತ್ತಿರುವಾಗ ನನಗೆ ಈ ರಾಜ್ಯಭೋಗದಿಂದ ಅಥವಾ ಯಜ್ಞಗಳಿಂದ ಯಾವ ಸುಖವಿದೆ?

ದುಃಖಿತನಾಗಿರುವ ನಿನ್ನ ಈ ಮಾತಿನಿಂದ ನನ್ನ ರಾಜ್ಯವೇ ಪೀಡಿತವಾಗಿದೆಯೆಂದು ಭಾವಿಸುತ್ತೇನೆ. ನೀನೇ ನನ್ನ ಪಿತ. ನೀನೇ ನಮ್ಮ ಮಾತೆ ಮತ್ತು ಪರಮ ಗುರು. ನಿನ್ನನ್ನು ಅಗಲಿದ ನಾವು ಎಲ್ಲಿ ತಾನೇ ನಿಲ್ಲೋಣ? ನಿನ್ನ ಔರಸ ಪುತ್ರ ಯುಯುತ್ಸುವಾಗಲೀ ಅಥವಾ ನೀನು ಅಭಿಪ್ರಾಯಪಟ್ಟ ಬೇರೆ ಯಾರಾದರೂ ರಾಜನಾಗಲಿ! ನಾನು ವನಕ್ಕೆ ಹೋಗುತ್ತೇನೆ. ಈ ರಾಜ್ಯವನ್ನು ನೀನೇ ಆಳು. ಅಯಶಸ್ಸಿನಿಂದ ಸುಟ್ಟುಹೋಗಿರುವ ನನ್ನನ್ನು ಇನ್ನೂ ಸುಡುವುದು ಸರಿಯಲ್ಲ! ನಾನು ರಾಜನಲ್ಲ! ನೀನೇ ರಾಜ! ನಾನು ನಿನ್ನ ಆಜ್ಞಾಧಾರಕನಾಗಿದ್ದೇನೆ. ಧರ್ಮಜ್ಞನೂ ಗುರುವೂ ಆದ ನಿನ್ನನ್ನು ಕಾಡಿಗೆ ಹೋಗಲು ನಾನು ಹೇಗೆ ತಾನೇ ಅನುಮತಿನೀಡಲಿ? ದುರ್ಯೋಧನನ ಕೃತ್ಯಗಳಿಂದಾಗಿ ನಮ್ಮ ಹೃದಯದಲ್ಲಿ ಸ್ವಲ್ಪವೂ ಕೋಪವಿಲ್ಲ. ಅದು ಆಗಾಬೇಕಾದ್ದಿತು ಎಂದು ತಿಳಿದುಕೊಂಡಿದ್ದೇವೆ. ಆಗ ನಾವೂ ಕೂಡ ಮೋಹಿತರಾಗಿದ್ದೆವು. ದುರ್ಯೋಧನಾದಿಗಳು ಹೇಗೋ ಹಾಗೆ ನಾವೂ ಕೂಡ ನಿನ್ನ ಪುತ್ರರೇ ಆಗಿದ್ದೇವೆ. ಗಾಂಧಾರೀ ಮತ್ತು ಕುಂತಿಯರಲ್ಲಿ ಯಾವ ವ್ಯತ್ಯಾಸವೂ ಇಲ್ಲವೆಂದು

ನನಗನ್ನಿಸುತ್ತಿದೆ. ಒಂದು ವೇಳೆ ನೀನು ನನ್ನನ್ನು ಪರಿತ್ಯಜಿಸಿ ಹೋದರೆ ನಾನೂ ಕೂಡ ನಿನ್ನ ಹಿಂದೆಯೇ ಬರುವೆನು. ನನ್ನನ್ನು ಮುಟ್ಟಿಕೊಂಡು ಈ ಸತ್ಯವನ್ನಾಡುತ್ತಿದ್ದೇನೆ! ನಿನ್ನನ್ನು ಅಗಲಿದ ನನಗೆ ಸಾಗರವನ್ನೇ ಮೇಖಲೆಯನ್ನಾಗಿ ಹೊಂದಿರುವ ಸಂಪತ್ತಿನಿಂದ ಕೂಡಿರುವ ಈ ಭೂಮಿಯೂ ನನಗೆ ಪ್ರೀತಿಯನ್ನುಂಟುಮಾಡಲಾರದು! ಶಿರಸಾ ನಿನಗೆ ವಂದಿಸಿ ಹೇಳುತ್ತಿದ್ದೇನೆ. ಈ ಎಲ್ಲವೂ ನಿನ್ನದೇ. ನಾವೆಲ್ಲರೂ ನಿನ್ನ ಅಧೀನರಾಗಿದ್ದೇವೆ. ನಿನ್ನ ಮಾನಸಿಕ ಜ್ವರವು ದೂರವಾಗಲಿ! ನೀನು ಪಡೆಯಬೇಕಾಗಿರುವುದನ್ನು ಪಡೆದಿರುವೆಯೆಂದು ನಾನು ಭಾವಿಸುತ್ತೇನೆ. ಅದೃಷ್ಟದಿಂದ ಪುನಃ ನಿನ್ನ ಶುಶ್ರೂಷೆಯನ್ನು ಮಾಡುವ ಅವಕಾಶವು ಸಿಕ್ಕಿದರೆ ನಿನ್ನ ಈ ಮಾನಸಿಕ ಜ್ವರವನ್ನು ಹೋಗಲಾಡಿಸುತ್ತೇನೆ!"

ಧೃತರಾಷ್ಟ್ರನು ಹೇಳಿದನು:

"ಕುರುನಂದನ! ಮಗೂ! ನನ್ನ ಮನಸ್ಸು ತಪಸ್ಸಿನಲ್ಲಿಯೇ ಮಗ್ನವಾಗಿದೆ. ನಾವು ಅರಣ್ಯಕ್ಕೆ ಹೋಗುವುದು ಈ ಕುಲದ ಸಂಪ್ರದಾಯವೂ ಮತ್ತು ಉಚಿತವೂ ಆಗಿದೆ. ಬಹಳ ಕಾಲದಿಂದ ಇಲ್ಲಿಯೇ ವಾಸವಾಗಿದ್ದೇವೆ. ಬಹಳ ಕಾಲದಿಂದ

ನೀನು ನಮ್ಮ ಶುಶ್ರೂಷೆಯನ್ನೂ ಮಾಡಿದ್ದೀಯೆ. ವೃದ್ಧನಾದ ನನಗೆ ನೀನು ಅಪ್ಪಣೆಯನ್ನು ನೀಡಬೇಕು!"

ಕೈಮುಗಿದು ನಡುಗುತ್ತಿದ್ದ ಧರ್ಮರಾಜನಿಗೆ ಹೀಗೆ ಹೇಳಿ ಅಂಬಿಕಾಸುತ ರಾಜನು ಸಂಜಯ ಮತ್ತು ಕೃಪನಿಗೆ ಈ ಮಾತನ್ನಾಡಿದನು:

"ನೀವಾದರೂ ಈ ಪೃಥಿವೀಪತಿಯನ್ನು ಸಮಾಧಾನಗೊಳಿಸಿರೆಂದು ಇಚ್ಛಿಸುತ್ತೇನೆ. ನನ್ನ ವೃದ್ಧಾಪ್ಯದ ಕಾರಣದಿಂದಲೂ ಮಾತನಾಡಿದ ಆಯಾಸದಿಂದಲೂ ನನ್ನ ಮನಸ್ಸು ದುರ್ಬಲವಾಗುತ್ತಿದೆ. ಬಾಯಿಯು ಒಣಗಿಹೋಗುತ್ತಿದೆ."

ಹೀಗೆ ಹೇಳಿ ವೃದ್ಧ ರಾಜಾ ಕುರೂದ್ವಹನು ಒಮ್ಮೆಲೇ ಪ್ರಾಣಬಿಟ್ಟವನಂತೆ ಗಾಂಧಾರಿಯನ್ನೊರಗಿ ಕುಳಿತುಕೊಂಡನು. ಹಾಗೆ ನಿಶ್ಚೇಷ್ಠನಾಗಿ ಕುಳಿತುಕೊಂಡ ಕುರುಪಾರ್ಥಿವನನ್ನು ನೋಡಿ ಕೌಂತೇಯನಿಗೆ ಅತೀವ ಸಂಕಟವುಂಟಾಯಿತು.

ಯುಧಿಷ್ಠಿರನು ಹೇಳಿದನು:

"ಒಂದು ಲಕ್ಷ ಆನೆಗಳ ಬಲವಿರುವ ಈ ರಾಜನು ನಾರಿಯೋರ್ವಳನ್ನು ಆಶ್ರಯಿಸಿ ಮರಣಹೊಂದಿದವನಂತೆ

ಕುಳಿತುಕೊಂಡಿದ್ದಾನಲ್ಲ! ಹಿಂದೆ ಭೀಮಸೇನನ ಉಕ್ಕಿನ ಪ್ರತಿಮೆಯನ್ನು ತನ್ನ ಬಲದಿಂದ ಚೂರು ಚೂರುಮಾಡಿದ್ದ ಇವನೇ ಇಂದು ಬಲಾರ್ಥಿಯಾಗಿ ಸ್ತ್ರೀಯನ್ನು ಆಶ್ರಯಿಸಿದ್ದಾನಲ್ಲಾ! ಇಂತಹ ಅವಸ್ಥೆಗೆ ಯೋಗ್ಯನಲ್ಲದ ಪೃಥಿವೀಪಾಲನು ಈ ರೀತಿ ಮಲಗಿರುವಂತೆ ಮಾಡಿರುವ ಅಧರ್ಮಜ್ಞನಾದ ನನಗೆ ಧಿಕ್ಕಾರ! ನನ್ನ ಬುದ್ಧಿಗೆ ಧಿಕ್ಕಾರ! ನನ್ನ ಶಾಸ್ತ್ರಜ್ಞಾನಕ್ಕೆ ಧಿಕ್ಕಾರ! ಗುರುವಾದ ಈ ರಾಜನೂ ಮತ್ತು ಯಶಸ್ವಿನೀ ಗಾಂಧಾರಿಯೂ ಆಹಾರವನ್ನು ಸೇವಿಸದೇ ಇದ್ದರೆ ನಾನೂ ಕೂಡ ಅವರಂತೆಯೇ ಉಪವಾಸದಿಂದಿರುತ್ತೇನೆ!"

ಆಗ ಧರ್ಮವಿದು ಪಾಂಡವ ರಾಜನು ತಣ್ಣೀರಿನಿಂದ ತನ್ನ ಕೈಯನ್ನು ಒದ್ದೆಮಾಡಿಕೊಂಡು ಮೆಲ್ಲನೇ ಧೃತರಾಷ್ಟ್ರನ ಎದೆಯನ್ನೂ ಮುಖವನ್ನೂ ಸವರಿದನು. ರತ್ನೌಷಧಿಗಳಿಂದ ಸಂಪನ್ನನ್ನಾಗಿದ್ದ ರಾಜಾ ಯುಧಿಷ್ಠಿರನು ಪವಿತ್ರ ಸುಗಂಧಯುಕ್ತ ಕೈಯಿಂದ ಮುಟ್ಟಿದೊಡನೆಯೇ ರಾಜ ಧೃತರಾಷ್ಟ್ರನು ಎಚ್ಚರಗೊಂಡನು.

ಧೃತರಾಷ್ಟ್ರನು ಹೇಳಿದನು:

> “ಪಾಂಡವ! ನಿನ್ನ ಕೈಗಳಿಂದ ಪುನಃ ನನ್ನನ್ನು ಮುಟ್ಟಿ ಸವರು! ಆಲಂಗಿಸು! ನಿನ್ನ ಸಂಸ್ಪರ್ಶದಿಂದ ನಾನು ಪುನಃ ಜೀವಂತನಾಗಿದ್ದೇನೆ! ನಿನ್ನ ನೆತ್ತಿಯನ್ನು ಆಘ್ರಾಣಿಸಲು ಬಯಸುತ್ತೇನೆ. ಕೈಗಳಿಂದ ನಿನ್ನನ್ನು ಮುಟ್ಟಲು ಬಯಸುತ್ತೇನೆ. ಅದರಿಂದ ನನ್ನ ಪ್ರಾಣವನ್ನೇ ಉಳಿಸಿಕೊಳ್ಳುತ್ತೇನೆ! ನಾನು ಆಹಾರವನ್ನು ಸೇವಿಸಿ ಇಂದಿಗೆ ನಾಲ್ಕು ದಿನಗಳಾದವು. ಇದರಿಂದಾಗಿ ಅಲುಗಾಡಲೂ ನನಗೆ ಸಾಧ್ಯವಾಗುತ್ತಿಲ್ಲ! ನಿನ್ನ ಅಪ್ಪಣೆಯನ್ನು ಕೇಳಲೋಸುಗ ಇಷ್ಟೆಲ್ಲ ಮಾತನಾಡಿ ಆಯಾಸಗೊಂಡಿದ್ದೇನೆ. ಮಗೂ! ಮನಸ್ಸಿನ ದುಃಖದಿಂದ ಎಚ್ಚರತಪ್ಪಿದವನಂತಾದೆನು! ಅಮೃತಸ್ಪರ್ಶದಂತಿರುವ ನಿನ್ನ ಈ ಸ್ಪರ್ಶದಿಂದ ನಾನು ನೂತನ ಚೇತನವನ್ನು ಪಡೆದುಕೊಂಡೆನೆಂದು ಭಾವಿಸುತ್ತೇನೆ!”

ತನ್ನ ದೊಡ್ಡಪ್ಪನು ಹೀಗೆ ಹೇಳಲು ಕೌಂತೇಯನು ಸೌಹಾರ್ದತೆಯಿಂದ ಮೆಲ್ಲನೇ ಅವನ ಸರ್ವಾಂಗಗಳನ್ನೂ ಮುಟ್ಟಿ ಸವರಿದನು. ಆಗ ಮಹೀಪತಿ ಧೃತರಾಷ್ಟ್ರನು ಪುನಃ ಪ್ರಾಣಗಳನ್ನೇ ಪಡೆದುಕೊಂಡು, ತನ್ನ ಬಾಹುಗಳೆರಡರಿಂದ ಪಾಂಡವನನ್ನು ಬಿಗಿದಪ್ಪಿ ನೆತ್ತಿಯನ್ನು ಆಘ್ರಾಣಿಸಿದನು. ವಿದುರಾದಿಗಳೆಲ್ಲರೂ ಅತ್ಯಂತ ದುಃಖಿತರಾಗಿ

ರೋದಿಸಿದರು. ಅತಿದುಃಖದಿಂದ ಪಾಂಡವರೂ ಕೂಡ ರಾಜನಿಗೆ ಏನನ್ನೂ ಹೇಳಲಿಲ್ಲ. ಧರ್ಮಜ್ಞೆ ಗಾಂಧಾರಿಯು ಮನಸ್ಸಿನಲ್ಲಿ ಮಹಾ ದುಃಖವನ್ನೇ ಅನುಭವಿಸುತ್ತಿದ್ದರೂ ದುಃಖಿತರಾತ ಅನ್ಯರಿಗೆ "ಹೀಗೆ ಅಳಬೇಡಿರಿ!" ಎಂದಳು. ಅಂತಃಪುರದ ಇತರ ಸ್ತ್ರೀಯರೆಲ್ಲರೂ ಅತ್ಯಂತ ದುಃಖಿತರಾಗಿ ಕುಂತಿಯೊಡನೆ ಕಣ್ಣೀರಿಡುತ್ತಾ ಗಾಂಧಾರೀ-ಧೃತರಾಷ್ಟ್ರರನ್ನು ಸುತ್ತುವರೆದು ನಿಂತಿದ್ದರು. ಆಗ ಪುನಃ ಧೃತರಾಷ್ಟ್ರನು ಯುಧಿಷ್ಠಿರನಿಗೆ ಹೇಳಿದನು:

> "ರಾಜನ್! ನನಗೆ ತಪಸ್ಸನ್ನು ಮಾಡಲು ಅನುಮತಿಯನ್ನು ಕೊಡು! ಮಗೂ! ಪುನಃ ಪುನಃ ಹೇಳಿದುದನ್ನೇ ಹೇಳಿ ನನ್ನ ಮನಸ್ಸು ದುರ್ಬಲವಾಗುತ್ತಿದೆ. ಆದುದರಿಂದ ನನ್ನನ್ನು ಇನ್ನೂ ಹೆಚ್ಚು ದುಃಖಕ್ಕೀಡುಮಾಡುವುದು ಸರಿಯಲ್ಲ!"

ಕೌರವೇಂದ್ರನು ಪಾಂಡವನಿಗೆ ಹಾಗೆ ಹೇಳುತ್ತಿರುವಾಗ ಅಲ್ಲಿದ್ದ ಯೋಧರಲ್ಲೆಲ್ಲಾ ಮಹಾ ಆರ್ತನಾದವುಂಟಾಯಿತು. ಯಥೋಚಿತವಲ್ಲದೇ ಉಪವಾಸದಿಂದ ಬಳಲಿ ಚರ್ಮ-ಅಸ್ಥಿಮಾತ್ರ ಉಳಿದುಕೊಂಡು ಕೃಶನೂ ವಿವರ್ಣನೂ ಆಗಿರುವ ರಾಜ ಧೃತರಾಷ್ಟ್ರನನ್ನು ನೋಡಿ ಮಹಾಭುಜ ಧರ್ಮಪುತ್ರನು ತಂದೆಯನ್ನು ಆಲಂಗಿಸಿ, ಶೋಕದಿಂದ ಕಣ್ಣೀರನ್ನು ಸುರಿಸುತ್ತಾ ಪುನಃ ಈ

ಮಾತನ್ನಾಡಿದನು:

“ರಾಜನ್! ನಿನಗೆ ಪ್ರಿಯವನ್ನುಂಟುಮಾಡಲು ಎಷ್ಟು ಬಯಸುತ್ತೇನೆಯೋ ಅಷ್ಟು ಈ ಜೀವಿತವನ್ನಾಗಲೀ ಪೃಥ್ವಿಯನ್ನಾಗಲೀ ಬಯಸುವುದಿಲ್ಲ! ನಾನು ನಿನ್ನ ಅನುಗ್ರಹಕ್ಕೆ ಯೋಗ್ಯನಾಗಿದ್ದರೆ ಮತ್ತು ನಿನ್ನ ಪ್ರೀತಿಗೆ ಪಾತ್ರನಾಗಿದ್ದರೆ ನೀನು ಅಹಾರಸೇವನೆಯನ್ನು ಮಾಡಬೇಕೆಂದು ನಾನು ನಿನಗೆ ಒತ್ತಾಯಿಸುತ್ತೇನೆ.”

ಹೀಗೆ ಹೇಳಲು ಪಾರ್ಥಿವನು ಮಹಾತೇಜಸ್ವಿ ಧರ್ಮಪುತ್ರನಿಗೆ

“ಪುತ್ರ! ನೀನು ಬಯಸಿದರೆ ನಿನ್ನ ಅನುಜ್ಞೆಯಂತೆ ಊಟಮಾಡುತ್ತೇನೆ!”

ಎಂದು ಹೇಳಿದನು. ರಾಜೇಂದ್ರ ಧೃತರಾಷ್ಟ್ರನು ಯುಧಿಷ್ಠಿರನಿಗೆ ಹೀಗೆ ಹೇಳುತ್ತಿರಲು ಸತ್ಯವತೀ ಪುತ್ರ ಋಷಿ ವ್ಯಾಸನು ಅಲ್ಲಿಗೆ ಆಗಮಿಸಿ ಈ ಮಾತನ್ನಾಡಿದನು:

“ಯುಧಿಷ್ಠಿರ! ಕುರುನಂದನ ಮಹಾತ್ಮ ಧೃತರಾಷ್ಟ್ರನು ನಿನಗೆ ಏನು ಹೇಳಿದನೋ ಅದನ್ನು ವಿಚಾರಿಸದೇ ಮಾಡು! ಪುತ್ರರನ್ನು ಕಳೆದುಕೊಂಡ ಮತ್ತು ವಿಶೇಷವಾಗಿ

ವೃದ್ಧನಾಗಿರುವ ಈ ನೃಪತಿಯು ಇನ್ನೂ ಬಹಳ ಕಾಲ ಈ ಕಷ್ಟವನ್ನು ಸಹಿಸಿಕೊಳ್ಳಲಾರ ಎಂದು ನನಗನ್ನಿಸುತ್ತದೆ. ಕಾರುಣ್ಯವನ್ನು ತಿಳಿದಿರುವ ಮಹಾಬಾಗೆ ಪ್ರಾಜ್ಞೆ ಗಾಂಧಾರಿಯೂ ಕೂಡ ಪುತ್ರಶೋಕವನ್ನು ಅತ್ಯಂತ ಧೈರ್ಯದಿಂದ ಸಹಿಸಿಕೊಂಡಿದ್ದಾಳೆ. ನಾನೂ ಕೂಡ ನಿನಗೆ ಇದನ್ನೇ ಹೇಳುತ್ತಿದ್ದೇನೆ. ನನ್ನ ಮಾತಿನಂತೆ ಮಾಡು. ರಾಜನು ವೃಥಾ ಇಲ್ಲಿ ಸಾಯದಂತೆ ಅವನಿಗೆ ಅನುಜ್ಞೆಯನ್ನು ನೀಡು! ಹಿಂದಿನ ರಾಜರ್ಷಿಗಳ ಗತಿಯಂತೆ ಈ ನೃಪನೂ ಕೂಡ ಹೋಗಲಿ! ಎಲ್ಲ ರಾಜರ್ಷಿಗಳಿಗೂ ಅಂತ್ಯದಲ್ಲಿ ವನವೇ ಆಶ್ರಯವು!"

ಅದ್ಭುತಕರ್ಮಿ ವ್ಯಾಸನು ಹೀಗೆ ಹೇಳಲು ರಾಜಾ ಮಹಾತೇಜಸ್ವಿ ಧರ್ಮರಾಜ ಯುಧಿಷ್ಠಿರನು ಅದಕ್ಕೆ ಪ್ರತಿಯಾಗಿ ಇಂತೆಂದನು:

"ನೀನೇ ನಮಗೆ ಮಾನ್ಯನು. ನೀನೇ ನಮ್ಮ ಗುರು. ನೀನೇ ಈ ರಾಜ್ಯದ ಮತ್ತು ಕುಲದ ಪರಾಯಣನು. ನಾನಾದರೋ ರಾಜನ ಮಗ. ಅವನು ನನ್ನ ಗುರು. ಧರ್ಮದ ಪ್ರಕಾರ ಪುತ್ರನು ತಂದೆಯ ನಿರ್ದೇಶನದಂತೆ ನಡೆಯಬೇಕಾಗುತ್ತದೆ."

ಹೀಗೆ ಹೇಳಿದ ಯುಧಿಷ್ಠಿರನಿಗೆ ಮಹಾತೇಜಸ್ವೀ ವ್ಯಾಸನು ಪುನಃ ಹೇಳಿದನು:

“ಮಹಾಬಾಹೋ! ನೀನು ಹೇಳಿದುದು ಸರಿಯಾದುದೇ. ಆದರೆ ಈ ರಾಜನು ವೃದ್ಧಾಪ್ಯವನ್ನು ಹೊಂದಿದ್ದಾನೆ. ಅಂತಿಮಾವಸ್ಥೆಯಲ್ಲಿದ್ದಾನೆ. ಇವನು ನನ್ನಿಂದ ಮತ್ತು ನಿನ್ನಿಂದ ಅನುಮತಿಯನ್ನು ಪಡೆದು ಅವನ ಇಷ್ಟದಂತೆಯೇ ಮಾಡಲಿ. ಅವನಿಗೆ ವಿಘ್ನವನ್ನುಂಟುಮಾಡಬೇಡ! ಸಮರದಲ್ಲಿ ಅಥವಾ ವಿಧಿಪೂರ್ವಕವಾಗಿ ವನದಲ್ಲಿ ಮೃತ್ಯುವನ್ನು ಹೊಂದುವುದೇ ರಾಜರ್ಷಿಗಳ ಪರಮ ಧರ್ಮ. ನಿನ್ನ ತಂದೆ ಪಾಂಡುವೂ ಕೂಡ ಈ ರಾಜನನ್ನು ಗುರುವಂತೆ ಶಿಷ್ಯಭಾವದಿಂದ ಸೇವೆಗೈಯುತ್ತಿದ್ದನು. ಅನ್ನದ ರಾಶಿಗಳಿಂದ ಶೋಭಿತವಾದ ದಕ್ಷಿಣಾಯುಕ್ತ ಕ್ರತುಗಳನ್ನು ಮಾಡಿ, ಇಷ್ಟವಾದ ಮಹಾಭೋಗಗಳನ್ನು ಭೋಗಿಸಿ ಪುತ್ರರನ್ನು ಪಾಲಿಸಿದನು. ನೀನು ವನವಾಸಕ್ಕೆ ತೆರಳಿದ್ದಾಗ ಹದಿಮೂರು ವರ್ಷಗಳು ಇವನು ತನ್ನ ಮಗನಲ್ಲಿದ್ದ ವಿಪುಲ ರಾಜ್ಯವನ್ನು ಭೋಗಿಸಿದನು ಮತ್ತು ವಿವಿಧ ಸಂಪತ್ತುಗಳನ್ನು ದಾನವನ್ನಾಗಿತ್ತನು. ನಿನ್ನ ಗುರುಶುಶ್ರೂಷೆಯಿಂದ ಮತ್ತು ತನ್ನ ಸೇವಕರಿಂದ ಇವನು

> ಮತ್ತು ಯಶಸ್ವಿನೀ ಗಾಂಧಾರಿಯರು ಅರಾಧಿತರಾಗಿದ್ದಾರೆ. ಇದು ಇವನ ತಪಸ್ಸಿಗೆ ಸರಿಯಾದ ಕಾಲವಾಗಿದೆ. ನಿನ್ನ ತಂದೆಗೆ ಅನುಮತಿಯನ್ನು ನೀಡು. ಇವನಿಗೆ ನಿನ್ನಮೇಲೆ ಸ್ವಲ್ಪವೂ ಕೋಪವಿಲ್ಲ."

ಹೀಗೆ ಹೇಳಿ ಪಾರ್ಥಿವ ಯುಧಿಷ್ಠಿರನನ್ನು ಒಪ್ಪಿಸಿದನು. ಕೌಂತೇಯನು ಹಾಗೆಯೇ ಆಗಲೆಂದು ಹೇಳಲು ವ್ಯಾಸನು ವನಕ್ಕೆ ಹೊರಟುಹೋದನು. ಭಗವಾನ್ ವ್ಯಾಸನು ಹೊರಟುಹೋದ ನಂತರ ರಾಜ ಪಾಂಡುಸುತನು ವೃದ್ಧನಾದ ತನ್ನ ತಂದೆಗೆ ತಲೆಬಾಗಿಸಿ ಮೆಲ್ಲ ಮೆಲ್ಲನೆ ಇಂತೆಂದನು:

> "ಭಗವಾನ್ ವ್ಯಾಸನು ಏನು ಹೇಳಿದನೋ, ನಿನ್ನ ಅಭಿಪ್ರಾಯವೂ ಏನಿದೆಯೋ, ಕೃಪ ಮತ್ತು ವಿದುರರು, ಯುಯುತ್ಸು-ಸಂಜಯರು ಏನು ಹೇಳುತ್ತಾರೋ ಅದರಂತೆಯೇ ನಾನು ನಡೆದುಕೊಳ್ಳುತ್ತೇನೆ. ಏಕೆಂದರೆ ಇವರೆಲ್ಲರೂ ನನಗೆ ಮಾನ್ಯರು ಮತ್ತು ಈ ಕುಲದ ಹಿತೈಷಿಗಳೂ ಆಗಿದ್ದಾರೆ. ನೃಪತೇ! ಶಿರಸಾ ನಮಸ್ಕರಿಸಿ ನಿನ್ನಲ್ಲಿ ಇದೊಂದನ್ನು ಬೇಡಿಕೊಳ್ಳುತ್ತಿದ್ದೇನೆ. ನೀನು ಮೊದಲು ಊಟಮಾಡು. ಅನಂತರ ಆಶ್ರಮದ ಕಡೆ ಹೋಗುವಿಯಂತೆ!"

ಅನಂತರ ರಾಜ ಯುಧಿಷ್ಠಿರನಿಂದ ಅನುಜ್ಞೆ ಪಡೆದ ಪ್ರತಾಪವಾನ್ ರಾಜಾ ಧೃತರಾಷ್ಟ್ರನು ಸ್ವಭವನಕ್ಕೆ ತೆರಳಿದನು. ಗಾಂಧಾರಿಯೂ ಅವನನ್ನು ಹಿಂಬಾಲಿಸಿದಳು. ಬಹಳವಾಗಿ ಶಕ್ತಿಗುಂದಿದ್ದ ಧೀಮಾನ್ ಮಹೀಪಾಲನು ಮುದಿ ಸಲಗದಂತೆ ಕಷ್ಟಪಟ್ಟು ಹೆಜ್ಜೆಯಿಡುತ್ತಿದ್ದನು. ವಿದ್ವಾನ್ ವಿದುರ, ಸೂತ ಸಂಜಯ, ಮತ್ತು ಹಾಗೆಯೇ ಪರಮೇಷ್ವಾಸ ಕೃಪ ಶಾರದ್ವತರು ಅವನನ್ನು ಹಿಂಬಾಲಿಸಿ ಹೋದರು. ಮನೆಯನ್ನು ಸೇರಿ ರಾಜನು ಪೂರ್ವಾಹ್ಣಿಕ ಕ್ರಿಯೆಗಳನ್ನು ಪೂರೈಸಿ ದ್ವಿಜಶ್ರೇಷ್ಠರನ್ನು ತೃಪ್ತಿಗೊಳಿಸಿ, ಭೋಜನ ಮಾಡಿದನು. ಮನಸ್ವಿನೀ ಧರ್ಮಜ್ಞೆ ಗಾಂಧಾರಿಯೂ ಕೂಡ ಕುಂತಿಯೊಡನೆ ಸೊಸೆಯಂದಿರಿಂದ ಉಪಚರಿಸಿ ಪೂಜಿಸಲ್ಪಟ್ಟು ಭೋಜನ ಮಾಡಿದಳು. ಧೃತರಾಷ್ಟ್ರನು ಊಟಮಾಡಿದ ನಂತರ ವಿದುರಾದಿಗಳು ಮತ್ತು ಪಾಂಡವರೂ ಕೂಡ ಊಟಮಾಡಿ ಕುರುಶ್ರೇಷ್ಠ ನೃಪನ ಬಳಿಯಲ್ಲಿ ಕುಳಿತುಕೊಂಡರು.

## ಧೃತರಾಷ್ಟ್ರನು ಯುಧಿಷ್ಠಿರನಿಗೆ ರಾಜಧರ್ಮವನ್ನು ಉಪದೇಶಿಸಿದುದು

ಆಗ ಮಹಾರಾಜ ಅಂಬಿಕಾಸುತನು ಸಮೀಪದಲ್ಲಿಯೇ ಕುಳಿತಿದ್ದ ಕುಂತೀಪುತ್ರ ಯುಧಿಷ್ಠಿರನ ಬೆನ್ನನ್ನು ಕೈಯಿಂದ ಸವರುತ್ತಾ ಹೇಳಿದನು:

“ಕುರುನಂದನ! ಅಷ್ಟಾಂಗಯುಕ್ತವಾದ ಮತ್ತು ಧರ್ಮಪುರಸ್ಕೃತವಾದ ರಾಜ್ಯದಲ್ಲಿ ನೀನೂ ಯಾವಾಗಲೂ ಜಾಗರೂಕನಾಗಿರಬೇಕು. ನೀನು ರಾಜ್ಯಧರ್ಮವನ್ನು ತಿಳಿದಿರುವೆ. ಆದರೂ ರಾಜ್ಯವನ್ನು ಹೇಗೆ ರಕ್ಷಿಸಲು ಶಕ್ಯ ಎನ್ನುವುದನ್ನು ಕೇಳು. ವಿದ್ಯೆಯಿಂದ ವೃದ್ಧರಾದವರನ್ನು ನೀನು ಸದಾ ಉಪಾಸಿಸುತ್ತಿರಬೇಕು. ಅವರು ಹೇಳುವುದನ್ನು ಕೇಳಬೇಕು ಮತ್ತು ವಿಚಾರಮಾಡದೇ ಅವರು ಹೇಳಿದಂತೆ ಮಾಡಬೇಕು. ಪ್ರಾತಃಕಾಲದಲ್ಲಿ ಎದ್ದು, ಯಥಾವಿಧಿಯಾಗಿ ಅವರನ್ನು ಪೂಜಿಸಿ, ರಾಜಕಾರ್ಯದ ಸಮಯದಲ್ಲಿ ನಿನ್ನ ಕಾರ್ಯಗಳ ಕುರಿತು ಅವರನ್ನು ಪ್ರಶ್ನಿಸಬೇಕು. ನಿನ್ನಿಂದ ಸಮ್ಮಾನಿತರಾದ ಆ ರಾಜ್ಯಹಿತಾರ್ಥಿಗಳು ನಿನಗೆ ಹಿತವಾದವುಗಳನ್ನೇ ಹೇಳುತ್ತಾರೆ. ಸಾರಥಿಯು ಕುದುರೆಗಳನ್ನು ಹತೋಟಿಯಲ್ಲಿಟ್ಟುಕೊಳ್ಳುವಂತೆ ಇಂದ್ರಿಯಗಳೆಲ್ಲವನ್ನೂ ಹತೋಟಿಯಲ್ಲಿಕೊಂಡು ರಕ್ಷಿಸು. ರಕ್ಷಿಸಲ್ಪಟ್ಟ ಸಂಪತ್ತಿನಂತೆ ಭವಿಷ್ಯದಲ್ಲಿ ಇಂದ್ರಿಯಗಳೂ ನಿನ್ನ ಹಿತಕ್ಕಾಗಿಯೇ ಬರುತ್ತವೆ. ಎಲ್ಲ ಮುಖ್ಯ ಕರ್ಮಗಳಲ್ಲಿ ವಂಚನೆಯಿಲ್ಲದೇ ಕೆಲಸಮಾಡುವ, ಪಿತೃ-ಪಿತಾಮಹರ ಕಾಲದಿಂದ ವಂಶಪಾರಂಪರ್ಯವಾಗಿ

ಕೆಲಸಮಾಡಿಕೊಂಡು ಬಂದಿರುವ, ಶುದ್ಧಾಂತಃಕರಣರಾದ, ಜಿತೇಂದ್ರಿಯರಾದ ಮುಖ್ಯರನ್ನು ತೊಡಗಿಸಿಕೋ! ಬಹುವಿಧವಾಗಿ ಪರೀಕ್ಷಿಸಲ್ಪಟ್ಟ ಚಾರರಿಂದ ಸತತವೂ ನಿನ್ನ ಮತ್ತು ಪರರ ರಾಷ್ಟ್ರಗಳಲ್ಲಿ ನಡೆಯುವ ವಿದ್ಯಮಾನಗಳನ್ನು ತಿಳಿದುಕೊಳ್ಳುತ್ತಾ ಇರು. ಆದರೆ ನಿನ್ನ ವಿಷಯಗಳು ಮಾತ್ರ ಶತ್ರುಗಳಿಗೆ ತಿಳಿಯಬಾರದು. ನಿನ್ನ ನಗರವು ಸುರಕ್ಷಿತವಾಗಿರಬೇಕು. ಪ್ರಾಕಾರಗಳೂ ಮುಖ್ಯದ್ವಾರಗಳೂ ಸುದೃಢವಾಗಿರಬೇಕು. ಆರು ವಿಧದ ದುರ್ಗಗಳು ಎಲ್ಲ ದಿಕ್ಕುಗಳಲ್ಲಿಯೂ ಇರಬೇಕು. ನಗರದ ದ್ವಾರಗಳು ಸಾಕಷ್ಟು ವಿಶಾಲವಾಗಿಯೂ ದೊಡ್ಡದಾಗಿಯೂ ಇರಬೇಕು. ಅವುಗಳನ್ನು ಎಲ್ಲಕಡೆಗಳಲ್ಲಿ ಸರಿಯಾಗಿ ಅಳೆದು ಕಟ್ಟಿರಬೇಕು ಮತ್ತು ಅವುಗಳ ರಕ್ಷಣೆಗಳಿಗೆ ಯಂತ್ರಗಳನ್ನಿರಿಸಿರಬೇಕು. ಭೋಜನಾದಿಗಳ, ವಿಹಾರ-ಆಹಾರಗಳ, ಮಾಲೆಗಳನ್ನು ಧರಿಸುವ ಮತ್ತು ಮಲಗುವ ಸಮಯಗಳಲ್ಲಿ ಸತತವೂ ಕುಲಶೀಲಗಳುಳ್ಳ, ಅರ್ಥಜ್ಞರಾದ, ತಿಳಿದುಕೊಂಡಿರುವ ಪುರುಷರನ್ನು ನಿನ್ನ ರಕ್ಷಣೆಗೆ ಇರಿಸಿಕೊಂಡಿರಬೇಕು. ಕುಲೀನರ, ಶೀಲವಂತರ, ವಿಧ್ವಾಂಸರ, ವಿಶ್ವಾಸಪಾತ್ರರ ಮತ್ತು ವೃದ್ಧರ

ಮೇಲ್ವಿಚಾರಣೆಯಲ್ಲಿ ಅಂತಃಪುರದ ಸ್ತ್ರೀಯರನ್ನು ಎಚ್ಚರದಿಂದ ರಕ್ಷಿಸಬೇಕು. ವಿದ್ಯಾವಿಶಾರದರೂ, ವಿನೀತರೂ, ಕುಲೀನರೂ, ಧರ್ಮಾರ್ಥಕುಶಲರೂ, ಸತ್ಯವಂತರೂ ಆದ ದ್ವಿಜರನ್ನು ಮಂತ್ರಿಗಳನ್ನಾಗಿ ಮಾಡಿಕೊಳ್ಳಬೇಕು. ಅವರೊಂದಿಗೆ ಮಂತ್ರಾಲೋಚನೆಯನ್ನು ಮಾಡಬೇಕು. ಆದರೆ ಅನೇಕರೊಂದಿಗೆ ಮತ್ತು ಬಹಳ ಹೊತ್ತಿನವರೆಗೆ ಮಂತ್ರಾಲೋಚನೆ ಮಾಡಕೂಡದು. ಎಲ್ಲ ಕಡೆ ಅವಾರಣವಿರುವ ಮಂತ್ರಗೃಹದಲ್ಲಿಯಾಗಲೀ ಅಥವಾ ಬಯಲಿನಲ್ಲಿಯಾಗಲೀ ಮಂತ್ರಾಲೋಚನೆಮಾಡಬೇಕು. ಹುಲ್ಲು-ಮುಳ್ಳುಗಳಿಲ್ಲದ ಅರಣ್ಯದಲ್ಲಿ ಕೂಡ ಮಂತ್ರಾಲೋಚನೆ ಮಾಡಬಹುದು. ಆದರ ಅಲ್ಲಿ ರಾತ್ರಿ ವೇಳೆ ಮಂತ್ರಾಲೋಚನೆಮಾಡಬಾರದು. ಮನುಷ್ಯರೊಂದಿಗೆ ಕಪಿಗಳನ್ನಾಗಲೀ, ಪಕ್ಷಿಗಳನ್ನಾಗಲೀ, ಮೂರ್ಖರನ್ನಾಗಲೀ, ಮತ್ತು ಹೆಳವರನ್ನಾಗಲೀ ಮಂತ್ರಾಲೋಚನಾ ಸ್ಥಳಕ್ಕೆ ಕರೆತರಬಾರದು. ಒಂದುವೇಳೆ ರಾಜನ ಗುಪ್ತವಿಷಯಗಳು ಇತರರಿಗೆ ತಿಳಿದಂತಾದರೆ ಉಂಟಾಗುವ ದೋಷಗಳನ್ನು ಸರಿಪಡಿಸಲು ಸಾಧ್ಯವೇ ಇಲ್ಲವೆಂದು ನನಗನ್ನಿಸುತ್ತದೆ.

ಆದುದರಿಂದ ಮಂತ್ರಭೇದದಿಂದ ಆಗುವ ಅನರ್ಥಗಳನ್ನೂ ಮಂತ್ರಗೋಪನದಿಂದ ಆಗುವ ಲಾಭಗಳನ್ನೂ ಪುನಃ ಪುನಃ ವಿಚಾರಿಸುತ್ತಿರಬೇಕು. ಪೌರ ಮತ್ತು ಗ್ರಾಮೀಣ ಜನರ ಒಳ್ಳೆಯ ಮತ್ತು ಕೆಟ್ಟ ಭಾವನೆಗಳ್ಯಾವುವು ಎಂದು ತಿಳಿದು ಕಾರ್ಯಗಳನ್ನು ಕೈಗೊಳ್ಳಬೇಕು.

ವ್ಯವಹಾರಗಳನ್ನು ಯಾವಾಗಲೂ ಆಪ್ತರೂ, ಸಂತುಷ್ಟರೂ ಆದ ಹಿತೈಷಿಗಳಿಗೆ ವಹಿಸಿಕೊಡಬೇಕು ಮತ್ತು ಚಾರರ ಮೂಲಕ ಅವರ ವ್ಯವಹಾರಗಳನ್ನು ಪರಿಶೀಲಿಸುತ್ತಿರಬೇಕು. ನೀನು ನಿಯೋಜಿಸಿದ ಪುರುಷರು ಯಥಾನ್ಯಾಯವಾಗಿ ಅಪರಾಧದ ಪರಿಣಾಮವನ್ನು ಚೆನ್ನಾಗಿ ಪರಿಶೀಲಿಸಿ ದಂಡಾರ್ಹರಿಗೆ ಶಿಕ್ಷೆಯನ್ನು ವಿಧಿಸುವವರಾಗಿರಬೇಕು. ಯಾವ ಅಧಿಕಾರಿಗಳು ಲಂಚವನ್ನು ತೆಗೆದುಕೊಳ್ಳುವುದರಲ್ಲಿ ಅಭಿರುಚಿಯುಳ್ಳವರೋ, ಪರಸ್ತ್ರೀಯರೊಡನೆ ಸಂಪರ್ಕವನ್ನಿಟ್ಟುಕೊಂಡಿರುವರೋ, ಉಗ್ರಶಿಕ್ಷೆಯನ್ನು ಕೊಡುವ ಸ್ವಭಾವವುಳ್ಳವರೋ, ಸುಳ್ಳುತೀರ್ಪನ್ನು ಕೊಡುವರೋ, ಸಾಹಸಕಾರ್ಯಗಳಲ್ಲಿ ಅಭಿರುಚಿಯುಳ್ಳವರೋ, ಸಭಾಮಂದಿರಗಳನ್ನೂ

ವಿಹಾರಸ್ಥಾನಗಳನ್ನೂ ನಾಶಗೊಳಿಸುವರೋ, ವರ್ಣಾಶ್ರಮ ಧರ್ಮಗಳನ್ನು ದೂಷಿಸುವರೋ ಅಂಥವರನ್ನು ದೇಶ-ಕಾಲಗಳನ್ನನುಸರಿಸಿ ಸುವರ್ಣದಂಡದ ಅಥವಾ ಪ್ರಾಣದಂಡದ ಮೂಲಕ ಶಿಕ್ಷಿಸಬೇಕು. ಬೆಳಿಗ್ಗೆಯೇ ಮೊದಲು ಆದಾಯ-ವೆಚ್ಚಗಳ ಅಧಿಕಾರಿಗಳನ್ನು ನೋಡಬೇಕು. ಅದರ ನಂತರವೇ ಅಲಂಕಾರ ಮತ್ತು ಭೋಜನಗಳ ಕುರಿತು ಗಮನಕೊಡಬೇಕು. ಅನಂತರ ಯೋಧರನ್ನು ಕಾಣಬೇಕು. ಅವರನ್ನು ನೀನು ಸದಾ ಹರ್ಷಗೊಳಿಸುತ್ತಲೇ ಇರಬೇಕು. ದೂತರನ್ನು ಮತ್ತು ಚಾರರನ್ನು ಸದಾ ಸಾಯಂಕಾಲದ ಸಮಯದಲ್ಲಿ ಕಾಣಬೇಕು. ರಾತ್ರಿಯ ಕಡೆಯ ಭಾಗದಲ್ಲಿ ಅಥವಾ ಬೆಳಗಿನ ಜಾವದಲ್ಲಿ ಮರುದಿನದ ಕಾರ್ಯಕ್ರಮಗಳನ್ನು ನಿಶ್ಚಯಿಸಬೇಕು. ಮಧ್ಯರಾತ್ರಿಯಲ್ಲಿ ಅಥವಾ ಮಧ್ಯಾಹ್ನದಲ್ಲಿ ವಿಹರಿಸಬೇಕು. ಕಾರ್ಯಮಾಡಲು ಎಲ್ಲ ಸಮಯಗಳೂ ಉಪಯುಕ್ತವಾಗಿಯೇ ಇರುತ್ತವೆ. ಆದುದರಿಂದ ಆಯಾಯಾ ಕಾಲಗಳಲ್ಲಿ ಅಲಂಕೃತನಾಗಿ ಕಾರ್ಯಗೈಯಲು ಸಿದ್ಧನಾಗಿರಬೇಕು. ಚಕ್ರದೋಪಾದಿಯಲ್ಲಿ ಕಾರ್ಯಗಳು ಒಂದಾದ ಮೇಲೆ ಒಂದರಂತೆ ನಿರಂತರವಾಗಿ

ನಡೆಯುತ್ತಲೇ ಇರಬೇಕು. ಸದಾ ನ್ಯಾಯಸಮ್ಮತವಾಗಿ ಕೋಶವನ್ನು ತುಂಬಿಸುವ ಪ್ರಯತ್ನಮಾಡುತ್ತಿರಬೇಕು. ಆದರೆ ದ್ವಿವಿಧಾ ಭಾವವನ್ನೂ ವಿಪರೀತ ಭಾವವನ್ನೂ ಪರಿತ್ಯಜಿಸಬೇಕು. ರಾಜರ ನಡುವೆ ಪರಸ್ಪರ ಭೇದವನ್ನುಂಟುಮಾಡುವವರು ಯಾರೆನ್ನುವುದನ್ನು ಗೂಢಚಾರರಿಂದ ತಿಳಿದು ಅಂಥವರನ್ನು ಆಪ್ತಪುರುಷರ ಮೂಲಕ ದೂರದಿಂದಲೇ ನಿಗ್ರಹಿಸಬೇಕು. ಸೇವಕರ ಕೆಲಸಗಳನ್ನು ಮೊದಲು ನೋಡಿ ನಂತರ ಅವರನ್ನು ನೀನು ಆರಿಸಿಕೊಳ್ಳಬೇಕು. ಒಮ್ಮೆ ಅವರನ್ನು ಸೇವಕರನ್ನಾಗಿ ನಿಯಮಿಸಿಕೊಂಡ ನಂತರ ಅವರು ಯೋಗ್ಯರಾಗಿರಲಿ ಅಯೋಗ್ಯರಾಗಿರಲಿ ಅವರಿಂದ ಕಾರ್ಯಗಳನ್ನು ಮಾಡಿಸಿಕೊಳ್ಳಬೇಕು. ನಿನ್ನ ಸೇನಾಪತಿಯು ದೃಢವ್ರತನಾಗಿರಬೇಕು, ಶೂರನಾಗಿರಬೇಕು, ಕ್ಲೇಶಗಳನ್ನು ಸಹಿಸಿಕೊಳ್ಳುವವನಾಗಿರಬೇಕು ಮತ್ತು ನಿನಗೆ ಪ್ರಿಯನಾದವನೂ ಆಗಿರಬೇಕು. ಗ್ರಾಮೀಣ, ನಗರದ ಮತ್ತು ಸಭೆಗಳಿಗೆ ಸಂಬಂಧಿಸಿದ ನಿನ್ನ ಕರ್ಮಗಳೆಲ್ಲವನ್ನೂ ವ್ಯವಹಾರಿಗಳಿಂದ ಮಾಡಿಸಬೇಕು. ನಿತ್ಯವೂ ನೀನು

ನಿನ್ನಲ್ಲಿರುವ ದೋಷಗಳನ್ನು ಮತ್ತು ಶತ್ರುಗಳಲ್ಲಿರುವ ದೋಷಗಳನ್ನು ನಿನ್ನವರಿಂದ ಮತ್ತು ಶತ್ರುಗಳಿಂದ ತಿಳಿದುಕೊಳ್ಳುತ್ತಾ ಇರಬೇಕು. ನಿನ್ನ ದೇಶದ ತಮ್ಮ ತಮ್ಮ ಕರ್ಮಗಳಲ್ಲಿ ಕುಶಲರಾಗಿರುವ, ನಿನಗೆ ಹಿತರಾಗಿರುವ ಪುರುಷರನ್ನು ಅವರಿಗೆ ಅನುರೂಪ ಜೀವಿಕೆಗಳನ್ನು ಕಲ್ಪಿಸಿಕೊಟ್ಟು ಅನುಗ್ರಹಿಸಬೇಕು. ಗುಣಾರ್ಥಿ ವಿದುಷರಿಗೆ ಗುಣಯುಕ್ತ ಕಾರ್ಯಗಳನ್ನು ವಹಿಸಿಕೊಡಬೇಕು. ಅವರು ಯಾವಾಗಲೂ ಮೇರು ಮಹಾಗಿರಿಯಂತೆ ನಿಶ್ಚಲರಾಗಿರುತ್ತಾರೆ.

ನಿನ್ನ ವಿಷಯದಲ್ಲಿ ಮತ್ತು ನಿನ್ನ ಶತ್ರುಗಳ ವಿಷಯದಲ್ಲಿ ಉದಾಸೀನಗುಣವುಳ್ಳ ಮತ್ತು ಮಧ್ಯಸ್ಥರಾಗಿರುವ ರಾಜಮಂಡಲಗಳನ್ನು ಗುರುತಿಸಿಕೊಂಡಿರಬೇಕು. ಶತ್ರುಗಳಿಂದ ಉಂಟಾಗುವ ನಾಲ್ಕು ಮತ್ತು ಆತತಾಯಿಗಳಿಂದ ಉಂಟಾಗುವ ಸರ್ವ ಅಪಾಯಗಳನ್ನೂ ತಿಳಿದುಕೊಂಡಿರಬೇಕು. ನಿನ್ನ ಮಿತ್ರನು ಯಾರು ಮತ್ತು ಶತ್ರುವಿನ ಮಿತ್ರರ್ಯಾರು ಎಂದು ತಿಳಿದುಕೊಂಡಿರಬೇಕು. ಅಮಾತ್ಯರು, ಜನಪದಗಳು, ದುರ್ಗ-ಕಣಿವೆಗಳು ಮತ್ತು

ಸೇನೆಗಳ ಮೇಲೆ ಶತ್ರುಗಳ ದೃಷ್ಟಿಯು ಯಥೇಚ್ಛವಾಗಿರುತ್ತದೆ. ಈ ಹನ್ನೆರಡು ಮತ್ತು ಮಂತ್ರಿಪ್ರಧಾನರಾದ ಅರವತ್ತು ಗುಣಗಳು ಸೇರಿ ರಾಜನ ವಿವಿಧ ಆತ್ಮಕಗಳು. ಇವುಗಳನ್ನೇ ನೀತಿಕೋವಿದ ಆಚಾರ್ಯರು ಮಂಡಲವೆಂದು ಕರೆಯುತ್ತಾರೆ. ಯುಧಿಷ್ಠಿರ! ಅದಕ್ಕೆ ಸಂಬಂಧಿಸಿದ ಆರು ಗುಣಗಳ ಕುರಿತು ಕೇಳು. ತನ್ನ ಮತ್ತು ತನ್ನ ಶತ್ರು ಈ ಇಬ್ಬರ ವೃದ್ಧಿ-ಕ್ಷಯಗಳನ್ನೂ ಸ್ಥಾನವನ್ನೂ ಅರಿತುಕೊಂಡಿರಬೇಕು. ಅದು ಷಾಡ್ಗುಣ್ಯಚಾರಣೆ. ಯಾವಾಗ ಸ್ವಪಕ್ಷವು ಬಲವಾಗಿಯೂ ಶತ್ರುಪಕ್ಷವು ದುರ್ಬಲವಾಗಿಯೂ ಇರುವುದೋ ಆಗ ಶತ್ರುವಿನೊಡನೆ ಯುದ್ಧಮಾಡಿ ಕ್ಷಿತಿಪತಿಯೆನಿಸಿಕೊಳ್ಳಬೇಕು. ಯಾವಾಗ ಸ್ವಪಕ್ಷವು ಅಬಲವಾಗಿದೆಯೋ ಆಗ ಸಂಧಿಯನ್ನು ಆಶ್ರಯಿಸಬೇಕು. ದ್ರವ್ಯಗಳನ್ನು ಕೂಡಿಸಿಕೊಳ್ಳುವುದು ಒಂದು ಮಹಾ ಕರ್ತವ್ಯ! ಯಾವಾಗ ಸಮರ್ಥನೋ ಆಗಲೇ ಸಮಯವ್ಯರ್ಥಮಾಡದೇ ಆಕ್ರಮಣ ಮಾಡಬೇಕು. ಆಗ ಎಲ್ಲರೂ ವಿಧೇಯರಾಗಿರುವಂತೆ ನೋಡಿಕೊಳ್ಳಬೇಕು. ಸೇನಾನಾಯಕರ ಸ್ಥಾನಗಳನ್ನು ವಿಭಾಗಿಸಬಾರದು. ಭಾರತ! ಒಂದುವೇಳೆ ಸೋತುಬಿಟ್ಟರೆ ಅಲ್ಪಫಲಗಳನ್ನು ಕೊಡುವ

ಭೂಮಿಯನ್ನೂ, ಬೆರಕೆಯ ಚಿನ್ನವನ್ನೂ, ಮತ್ತು ಬಡವ ಮಿತ್ರನನ್ನೂ ಕೊಟ್ಟು ಸಂಧಿಮಾಡಿಕೊಳ್ಳಬೇಕು. ಸೋಲದೇ ತಾನಾಗಿಯೇ ಸಂಧಿಯನ್ನು ಮಾಡಿಕೊಳ್ಳಬಾರದು. ಒಂದುವೇಳೆ ಶತ್ರುವಿಗೇ ವಿಪರೀತವಾಗಿ ಸಂಧಿಯನ್ನು ಬಯಸಿದರೆ ರಾಜಪುತ್ರನನ್ನೇ ಒತ್ತೆಇಡುವಂತೆ ಕೇಳಬೇಕು. ಒಂದುವೇಳೆ ಒಪ್ಪಿಕೊಳ್ಳದೇ ಇದ್ದರೆ ಉಪಾಯಮಂತ್ರಗಳನ್ನು ತಿಳಿದವನು ಅವನನ್ನು ಸೆರೆಹಿಡಿಯಲು ಪ್ರಯತ್ನಿಸಬೇಕು. ಆ ರಾಜನ ಪ್ರಕೃತಿಗಳು ದುರ್ಬಲವಾಗಿವೆಯೇ ಎನ್ನುವುದನ್ನು ತಿಳಿದುಕೊಳ್ಳಬೇಕು. ಅನಂತರ ಕ್ರಮೇಣವಾಗಿ ಅಥವಾ ಒಂದೇಸಮನೆ ಎಲ್ಲ ಕಾರ್ಯಗಳನ್ನೂ ಪ್ರಾರಂಭಿಸಬೇಕು. ಪೀಡನ, ಸ್ತಂಭನ, ಕೋಶಭಂಗ ಮೊದಲಾದ ಪ್ರಯತ್ನಗಳನ್ನು ಮಾಡಿ ಶತ್ರುಗಳ ನಾಶವನ್ನೂ ತನ್ನ ರಾಷ್ಟ್ರದ ರಕ್ಷಣೆಯನ್ನೂ ಸ್ವಯಂ ಮಾಡಿಕೊಳ್ಳಬೇಕು. ಆದರೆ ತನ್ನ ವೃದ್ಧಿಯನ್ನು ಬಯಸುವ ರಾಜನು ಶರಣಾಗತನಾಗಿ ಬಂದ ಸಾಮಂತರಾಜನನ್ನು ಯಾವುದೇ ಕಾರಣದಿಂದಲೂ ಹಿಂಸಿಸಬಾರದು. ವಿಶ್ವವನ್ನು ಜಯಿಸಲು ಬಯಸಿದ ರಾಜನು ಹಿಂಸಿಸಬಾರದು. ಮಂತ್ರಿಗಳೊಡನೆ ಸಮಾಲೋಚಿಸಿ

ಶತ್ರುಗಣಗಳಲ್ಲಿ ಒಡಕನ್ನು ಉಂಟುಮಾಡಲು ಉಪಾಯಮಾಡಬೇಕು. ಸತ್ಪುರುಷರನ್ನು ಸಂಗ್ರಹಿಸಿಕೊಳ್ಳುತ್ತಲೇ ಇರಬೇಕು. ಪಾಪಿಷ್ಟರನ್ನು ನಿಗ್ರಹಿಸುತ್ತಲೇ ಇರಬೇಕು. ಬಲಿಷ್ಟರಾಜನು ದುರ್ಬಲರನ್ನು ಎಂದೂ ಬೆನ್ನಟ್ಟಿ ಹೋಗಬಾರದು. ಬಲಿಷ್ಟರಾಜನು ದುರ್ಬಲನನ್ನು ಆಕ್ರಮಿಸಿದರೆ ದುರ್ಬಲನು ವಿನಮ್ರಭಾವವನ್ನು ತೋರಿಸಬೇಕು. ಸಾಮ-ದಾನ ಮೊದಲಾದ ಉಪಾಯಗಳಿಂದ ಅವನನ್ನು ಕ್ರಮೇಣವಾಗಿ ಹಿಂದಿರುವಂತೆ ಮಾಡಬೇಕು. ಸಾಧ್ಯವಾಗದಿದ್ದರೆ ಮಂತ್ರಿಗಳು, ಕೋಶ, ಪೌರರು, ದಂಡ ಮತ್ತು ಅನ್ಯ ಪ್ರಿಯಕಾರಿಣಿಗಳು ಇವರೊಡನೆ ಸೇರಿಕೊಂಡು ಶತ್ರುವಿನೊಡನೆ ಯುದ್ಧಮಾಡಬೇಕು. ಬಲಿಷ್ಟನಾದವನೊಡನೆ ಯುದ್ಧಮಾಡುವಾಗ ಪರಾಜಯವು ಸಂಭವಿಸಿದರೆ ಯುದ್ಧಮಾಡುತ್ತಾ ಶರೀರತ್ಯಾಗಮಾಡುವುದರಿಂದ ಮುಕ್ತಿಯಾದರೂ ಲಭಿಸುತ್ತದೆ.

ಯುಧಿಷ್ಠಿರ! ಸಂಧಿ ಮತ್ತು ಯುದ್ಧಗಳ ವಿಷಯಗಳಲ್ಲಿ ಎರಡು ಕಾರಣಗಳನ್ನೂ, ಮೂರು ವಿಧದ ಉಪಾಯಗಳನ್ನೂ, ಅನೇಕ

ಪ್ರಕಾರಗಳನ್ನೂ ತಿಳಿದುಕೊಂಡಿರಬೇಕು. ನಿನ್ನದೇ ಬಲಾಬಲಗಳನ್ನು ತಿಳಿದುಕೊಂಡು ಶತ್ರುವು ನಿನಗಿಂತಲೂ ಬಲಿಷ್ಟನಾಗಿದ್ದರೆ ಗೌರವಿಸಬೇಕು. ತುಷ್ಟಪುಷ್ಟ ಸೇನೆಯುಳ್ಳವನು ಬಲಶಾಲಿ ಎನ್ನುವುದನ್ನು ನೆನಪಿನಲ್ಲಿಟ್ಟುಕೊಂಡಿರಬೇಕು. ಸಂಧಿಯ ಕಾಲದಲ್ಲಿ ವಿಪರೀತ ನಿಯಮಗಳನ್ನು ವಿಧಿಸುತ್ತಾರೆ. ಅನಿವಾರ್ಯವಾಗಿ ಬಲಿಷ್ಟನೊಡನೆ ಯುದ್ಧಮಾಡಬೇಕಾಗಿ ಬಂದಾಗ ಪಲಾಯನಮಾಡುವುದೇ ಸೂಕ್ತವಾಗುತ್ತದೆ. ಆಗ ಶತ್ರುಗಳಿಗೆ ವ್ಯಸನಗಳನ್ನುಂಟುಮಾಡಬೇಕು ಮತ್ತು ಅವರಲ್ಲಿ ಬಿರುಕನ್ನುಂಟುಮಾಡಬೇಕು. ಕರ್ಶನ, ಭೀಷಣ ಮತ್ತು ಬಹುವಿನಾಶೀ ಯುದ್ಧ – ಇವುಗಳನ್ನೂ ಬಳಸಬೇಕು. ಶಾಸ್ತ್ರವಿಶಾರದ ನೃಪತಿಯು ಯುದ್ಧಕ್ಕೆ ಹೊರಡುವ ಮೊದಲು ತನ್ನ ಮತ್ತು ಶತ್ರುವಿನ ಮೂರು ಶಕ್ತಿಗಳ ಕುರಿತು ಯೋಚಿಸಬೇಕು. ಉತ್ಸಾಹಶಕ್ತಿ, ಪ್ರಭುಶಕ್ತಿ ಮತ್ತು ಮಂತ್ರಶಕ್ತಿ ಇವುಗಳಿಂದ ಸಂಪನ್ನನಾದ ರಾಜನು ಶತ್ರುವಿನ ಮೇಲೆ ಆಕ್ರಮಣಿಸಬಹುದು. ಈ ಮೂರೂ ಶಕ್ತಿಗಳು ಇಲ್ಲದಿದ್ದರೆ ಆಕ್ರಮಿಸಲು ಹೋಗಬಾರದು. ವಿಜಯವನ್ನು ಅಪೇಕ್ಷಿಸುವ

ರಾಜನು ಸೈನ್ಯಬಲ, ಧನಬಲ, ಮಿತ್ರಬಲ, ಅರಣ್ಯದ ಬಲ, ಸೇವಕರ ಬಲ ಮತ್ತು ಶಿಲ್ಪಿಗಳ ಬಲ ಇವುಗಳನ್ನು ಸಂಗ್ರಹಿಸಬೇಕು. ಇವುಗಳಲ್ಲಿ ಮಿತ್ರಬಲ ಮತ್ತು ಧನಬಲಗಳು ವಿಶಿಷ್ಟವಾದವುಗಳು. ಶಿಲ್ಪಿಬಲ ಮತ್ತು ವೇತನವನ್ನು ಕೊಟ್ಟು ಇಟ್ಟುಕೊಂಡಿರುವ ಸೇನೆಗಳು ಸಮಾನ ಎಂದು ನನ್ನ ಅಭಿಪ್ರಾಯ. ಚಾರಬಲ ಮತ್ತು ಭೃತ್ಯಬಲಗಳು ಪರಸ್ಪರ ಸಮನಾಗಿಯೇ ಇರುತ್ತವೆ. ಅನೇಕ ವರ್ಷಗಳಿಗೊಮ್ಮೆ ಯುದ್ಧಕಾಲವು ಸನ್ನಿಹಿತವಾಗುವುದರಿಂದ ರಾಜನು ಈ ಎಲ್ಲ ವಿಷಯಗಳನ್ನೂ ತಿಳಿದುಕೊಂಡಿರಬೇಕು. ಬಹುರೂಪೀ ಆಪತ್ತುಗಳನ್ನು ತಿಳಿದುಕೊಂಡಿರಬೇಕು. ಅವುಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಹೇಳುವೆನು ಕೇಳು. ಆಪತ್ತಿನ ವಿಕಲ್ಪಗಳು ಬಹಳ. ನೃಪನು ಸಾಮ-ದಾನಾದಿ ಉಪಾಯಗಳಿಂದ ಅವುಗಳನ್ನು ಸದಾ ಉಪಶಮನಗೊಳಿಸುತ್ತಿರಬೇಕು. ದೇಶ-ಕಾಲಗಳ ಅನುಕೂಲತೆಗಳನ್ನು ವಿವೇಚಿಸಿ ಆರು ರಾಜಬಲಗಳಿಂದ ಕೂಡಿರುವ, ಆತ್ಮಗುಣಗಳ ಬಲದಿಂದಲೂ ಇರುವ ರಾಜನು ವಿಜಯಯಾತ್ರೆಯನ್ನು ಕೈಗೊಳ್ಳಬಹುದು. ಹೃಷ್ಟ-ಪುಷ್ಟ ಸೇನೆಯನ್ನು ಪಡೆದಿರುವ ರಾಜನು

ದುರ್ಬಲನಾಗಿರದಿದ್ದರೆ ಯುದ್ಧಕ್ಕೆ ಯೋಗ್ಯವಲ್ಲದ ಋತುವಿನಲ್ಲಿಯೂ ಶತ್ರುವಿನೊಡನೆ ಯುದ್ಧಮಾಡಬಲ್ಲನು. ರಾಜನಾದವನು ಶತ್ರುವಿನ ವಿನಾಶಕ್ಕಾಗಿ ಬತ್ತಳಿಕೆಗಳೇ ಬಂಡೆಗಳಂತಿರುವ, ಕುದುರೆ-ರಥಗಳೇ ಪ್ರವಾಹರೂಪದಲ್ಲಿರುವ, ಧ್ವಜಗಳೆಂಬ ವೃಕ್ಷಗಳಿಂದ ಕೂಡಿದ ತೀರಪ್ರದೇಶವಾದ, ಪದಾತಿ-ಗಜಸೇನೆಗಳೇ ಕೆಸರಿನ ರೂಪದಲ್ಲಿರುವ ನದಿಯನ್ನು ಹರಿಯ ಬಿಡಬೇಕು. ಆಗ ಯುಕ್ತಿಯನ್ನುಪಯೋಗಿಸಿ ಸೇನೆಯನ್ನು ಶಕಟ, ಪದ್ಮ ಅಥವಾ ವಜ್ರ ವ್ಯೂಹಗಳಲ್ಲಿ ರಚಿಸಬೇಕು. ಶುಕ್ರನ ವೇದ ಶಾಸ್ತ್ರದಲ್ಲಿ ಇದರ ಕುರಿತು ಹೇಳಲ್ಪಟ್ಟಿದೆ. ಗುಪ್ತಚಾರರ ಮೂಲಕ ಶತ್ರುಸೈನ್ಯದ ಬಲಾಬಲಗಳನ್ನು ತಿಳಿದುಕೊಂಡು, ತನ್ನ ಸೈನ್ಯದ ಬಲವನ್ನೂ ಪರೀಕ್ಷಿಸಿಕೊಂಡು, ತನ್ನ ಭೂಮಿಯಲ್ಲಾಗಲೀ ಶತ್ರುವಿನ ಭೂಮಿಯಲ್ಲಾಗಲೀ ಯುದ್ಧವನ್ನು ಆರಂಭಿಸಬೇಕು. ರಾಜನು ಪಾರಿತೋಷಕಗಳ ಮೂಲಕ ಸೈನಿಕರನ್ನು ಸಂತುಷ್ಟಿಗೊಳಿಸಬೇಕು. ಸೈನ್ಯಕ್ಕೆ ಬಲಿಷ್ಠರಾದವರನ್ನು ಸೇರಿಸಿಕೊಳ್ಳಬೇಕು. ತನ್ನ ಬಲಾಬಲಗಳನ್ನು ಚೆನ್ನಾಗಿ ತಿಳಿದುಕೊಂಡ ನಂತರ

ಶತ್ರುವಿನೊಡನೆ ಸಾಮ-ದಾನಾದಿ ಉಪಾಯಗಳಿಂದ ಸಂಧಿಯನ್ನಾದರೂ ಮಾಡಿಕೊಳ್ಳಬಹುದು ಅಥವಾ ಯುದ್ಧವನ್ನಾದರೂ ಮಾಡಬಹುದು. ಸರ್ವಥಾ ಈ ಶರೀರವನ್ನು ರಕ್ಷಿಸಿಕೊಳ್ಳಬೇಕು. ಈ ಶರೀರದ ಮೂಲಕವೇ ಇಹಲೋಕ ಪರಲೋಕಗಳೆರಡರಲ್ಲಿಯೂ ತನಗೆ ಶ್ರೇಯಸ್ಸನ್ನು ಸಾಧಿಸಿಕೊಳ್ಳುವುದು ರಾಜನ ಕರ್ತವ್ಯವಾಗಿರುತ್ತದೆ. ಈ ಶುಭ ಮಾತುಗಳಂತೆ ಈ ಲೋಕದಲ್ಲಿ ಯಾರು ಪ್ರಜೆಗಳನ್ನು ಧರ್ಮದಿಂದ ಪಾಲಿಸುತ್ತಾರೋ ಅವರು ಮರಣಾನಂತರ ಸ್ವರ್ಗವನ್ನು ಪಡೆಯುತ್ತಾರೆ. ಇಹ-ಪರಗಳಲ್ಲಿಯೂ ಸುಖವನ್ನು ಹೊಂದಲು ನೀನು ಹೀಗೆ ನಿತ್ಯವೂ ಪ್ರಜಾಹಿತದಲ್ಲಿಯೇ ವರ್ತಿಸಬೇಕು. ಭೀಷ್ಮ, ಕೃಷ್ಣ ಮತ್ತು ವಿದುರರು ನಿನಗೆ ಈ ಮೊದಲೇ ಹೇಳಿದ್ದಾರೆ. ನಿನ್ನ ಮೇಲಿನ ಪ್ರೀತಿಯಿಂದ ನಾನೂ ಕೆಲವು ವಿಷಯಗಳನ್ನು ಹೇಳುವುದು ಅವಶ್ಯವೆಂದು ಭಾವಿಸಿ ಹೇಳಿದ್ದೇನೆ. ಇವೆಲ್ಲವನ್ನೂ ಯಥಾನ್ಯಾಯವಾಗಿ ಮಾಡು. ಇದರಿಂದ ನೀನು ಪ್ರಜೆಗಳಿಗೂ ಪ್ರಿಯನಾಗುವೆ ಮತ್ತು ಸ್ವರ್ಗದ ಸುಖವನ್ನೂ ಪಡೆಯುವೆ. ಸಾವಿರ ಅಶ್ವಮೇಧವನ್ನು ಮಾಡುವ ರಾಜನಿಗೆ ಲಭಿಸುವ ಫಲವೂ ಧರ್ಮದಿಂದ

ಪ್ರಜೆಗಳನ್ನು ರಕ್ಷಿಸುವವನಿಗೆ ಲಭಿಸುವ ಫಲವೂ ಒಂದೇ ಆಗಿರುತ್ತದೆ.”

ಯುಧಿಷ್ಠಿರನು ಹೇಳಿದನು:

“ಪೃಥಿವೀಪತೇ! ನೀನು ಹೇಳಿದಂತೆಯೇ ಮಾಡುತ್ತೇನೆ. ಪಾರ್ಥಿವರ್ಷಭ! ನಿನ್ನಿಂದ ಇನ್ನೂ ಹೆಚ್ಚಿನ ಉಪದೇಶವನ್ನು ನಾನು ಬಯಸುತ್ತೇನೆ. ಭೀಷ್ಮನು ಸ್ವರ್ಗಕ್ಕೆ ಮತ್ತು ಮಧುಸೂದನನು ದ್ವಾರಕೆಗೆ ತೆರಳಿದ ನಂತರ ಹಾಗೂ ವಿದುರ-ಸಂಜಯರು ನಿನ್ನ ಬಳಿಯಲ್ಲಿಯೇ ಇರುವಾಗ ನೀನಲ್ಲದೆ ಬೇರೆ ಯಾರು ನನಗೆ ಉಪದೇಶಗಳ ಮಾತನಾಡುವವರಿದ್ದಾರೆ? ನನಗೆ ಹಿತಕರನಾಗಿದ್ದುಕೊಂಡು ಇಂದು ನನಗೆ ನೀನು ಏನೆಲ್ಲ ಉಪದೇಶಿಸಿರುವೆಯೋ ಅವನ್ನು ನಾನು ಪರಿಪಾಲಿಸುತ್ತೇನೆ. ಸಮಾಧಾನಗೊಳ್ಳು!”

ಧೀಮಂತ ರಾಜನು ರಾಜರ್ಷಿಗೆ ಹೀಗೆ ಹೇಳಲು ಕೌಂತೇಯನಿಗೆ ಹೊರಡಲು ಸೂಚಿಸಿ ಧೃತರಾಷ್ಟ್ರನು ಹೀಗೆಂದನು:

“ಪುತ್ರ! ನೀನಿನ್ನು ಹೊರಡು! ನಾನೂ ಕೂಡ ಬಹಳ ಬಳಲಿದ್ದೇನೆ!”

ಹೀಗೆ ಹೇಳಿ ರಾಜನು ಗಾಂಧಾರಿಯ ಭವನವನ್ನು ಪ್ರವೇಶಿಸಿದನು.

## ಧೃತರಾಷ್ಟ್ರನು ತನ್ನ ಪುರಜನರನ್ನು ಬೀಳ್ಕೊಂಡಿದುದು

ಅವನು ಆಸನದಲ್ಲಿ ಕುಳಿತುಕೊಂಡ ನಂತರ ದೇವೀ ಧರ್ಮಚಾರಿಣೀ ಕಾಲಜ್ಞೆ ಗಾಂಧಾರಿಯು ಪ್ರಜಾಪತಿಯ ಸಮನಾಗಿದ್ದ ತನ್ನ ಪತಿಗೆ ಹೇಳಿದಳು:

> "ಸ್ವಯಂ ಮಹರ್ಷಿ ವ್ಯಾಸನಿಂದಲೂ ನಿನಗೆ ಅನುಜ್ಞೆಯಾಗಿದೆ. ಯುಧಿಷ್ಠಿರನೂ ಅನುಮತಿಯನ್ನಿತ್ತಿದ್ದಾನೆ. ಯಾವಾಗ ಅರಣ್ಯಕ್ಕೆ ಹೊರಡುವೆ?"

ಧೃತರಾಷ್ಟ್ರನು ಹೇಳಿದನು:

> "ಗಾಂಧಾರೀ! ಮಹಾತ್ಮ ಸ್ವಯಂ ಪಿತನಿಂದ ನಾನು ಅನುಜ್ಞಾತನಾಗಿದ್ದೇನೆ. ಯುಧಿಷ್ಠಿರನ ಅನುಮತಿಯೂ ದೊರಕಿದೆ. ಬೇಗನೇ ಅರಣಕ್ಕೆ ಹೊರಡುತ್ತೇನೆ. ಎಲ್ಲ ಪ್ರಜೆಗಳನ್ನೂ ನನ್ನ ಹತ್ತಿರ ಮನೆಗೆ ಕರೆಯಿಸಿಕೊಂಡು ಜೂಜುಕೋರರಾಗಿದ್ದ ನನ್ನ ಮಕ್ಕಳೆಲ್ಲರ ಪರಲೋಕಪ್ರಾಪ್ತಿಗಾಗಿ ಧನವನ್ನು ದಾನಮಾಡಲು

ಬಯಸುತ್ತೇನೆ.”

ಹೀಗೆ ಹೇಳಿ ಪಾರ್ಥಿವನು ಧರ್ಮರಾಜನಿಗೆ ಹೇಳಿ ಕಳುಹಿಸಿದನು. ಅವನ ವಚನದಂತೆ ಮಹೀಪತಿ ಯುಧಿಷ್ಠಿರನು ಎಲ್ಲರನ್ನೂ ಕರೆಯಿಸಿದನು. ಅನಂತರ ಮಹಾತೇಜಸ್ವೀ ಮಹೀಪತಿ ನೃಪತಿ ಧೃತರಾಷ್ಟ್ರನು ಅಂತಃಪುರದಿಂದ ಹೊರಬಂದು ಅಲ್ಲಿ ಬಂದು ಸೇರಿದ್ದ ಎಲ್ಲ ಪೌರ-ಗ್ರಾಮೀಣ ಜನರನ್ನೂ, ಎಲ್ಲ ಸುಹೃಜ್ಜನರನ್ನೂ, ಎಲ್ಲ ಪ್ರಜೆಗಳನ್ನೂ, ನಾನಾ ದೇಶಗಳಿಂದ ಬಂದು ಸೇರಿದ್ದ ಬ್ರಾಹ್ಮಣ-ಮಹೀಪಾಲರನ್ನೂ ನೋಡಿ ಹೇಳಿದನು:

“ಇಲ್ಲಿ ಬಂದು ಸೇರಿರುವ ಕುರುಜಾಂಗಲದ ಬ್ರಾಹ್ಮಣರೇ, ಕ್ಷತ್ರಿಯರೇ, ವೈಶ್ಯರೇ ಮತ್ತು ಶೂದ್ರರೇ! ಏಕಾಗ್ರಚಿತ್ತದಿಂದ ಕೇಳಿರಿ! ನೀವು ಮತ್ತು ಕುರುಗಳು ಬಹುಕಾಲದಿಂದ ಜೊತೆಯಲ್ಲಿಯೇ ಇರುವಿರಿ. ಪರಸ್ಪರರ ಸುಹೃದಯರೂ ಪರಸ್ಪರರ ಹಿತಾಸಕ್ತಿಯುಳ್ಳವರೂ ಆಗಿರುವಿರಿ. ಈ ಸಮಯದಲ್ಲಿ ನಾನು ನಿಮಗೆ ಏನನ್ನೋ ಹೇಳಬೇಕೆಂದು ಕರೆಯಿಸಿದ್ದೇನೆ. ಆದುದರಿಂದ ವಿಚಾರಮಾಡದೇ ನಾನು ಹೇಳುವಂತೆ ಮಾಡಬೇಕು! ಗಾಂಧಾರಿಯೊಡನೆ ಅರಣ್ಯಕ್ಕೆ ಹೋಗಬೇಕೆಂದು ನಾನು ನಿಶ್ಚಯಿಸಿದ್ದೇನೆ. ವ್ಯಾಸ ಮತ್ತು ರಾಜ

ಕುಂತೀಸುತನ ಅನುಮತಿಯಾಗಿದೆ. ನೀವೂ ಕೂಡ ನನಗೆ ಅನುಮತಿಯನ್ನು ನೀಡಬೇಕು. ಈ ವಿಷಯದಲ್ಲಿ ನೀವು ಅನ್ಯಥಾ ವಿಚಾರಿಸಬಾರದು! ನಮ್ಮ ಮತ್ತು ನಿಮ್ಮ ನಡುವೆ ಶಾಶ್ವತ ಪ್ರೀತಿಯಿದೆ. ಅನ್ಯ ದೇಶಗಳ ಜನರಿಗೂ ಅವರ ರಾಜರಿಗೂ ಹೀಗಿಲ್ಲವೆಂದು ನನ್ನ ಅಭಿಪ್ರಾಯ. ಪುತ್ರರಿಂದ ವಿಹೀನನಾಗಿ ಮಾಡಲ್ಪಟ್ಟ ನಾನು ವೃದ್ಧಾಪ್ಯದಿಂದ ಬಳಲಿದ್ದೇನೆ. ಗಾಂಧಾರಿಯ ಸಹಿತ ಉಪವಾಸಗಳನ್ನು ಮಾಡಿ ಕೃಶನೂ ಆಗಿದ್ದೇನೆ. ರಾಜ್ಯವು ಯುಧಿಷ್ಠಿರನಿಗೆ ಸೇರಿದಾಗಲೂ ನಾನು ಮಹಾ ಸುಖವನ್ನು ಅನುಭವಿಸಿದ್ದೇನೆ. ದುರ್ಯೋಧನನು ಐಶ್ವರ್ಯಸಂಪನ್ನನಾಗಿದ್ದಾಗ ನಾನು ಸುಖವಾಗಿದ್ದುದಕ್ಕಿಂತಲೂ ಈಗ ಹೆಚ್ಚು ಸುಖಿಯಾಗಿದ್ದೇನೆಂದು ನನಗನ್ನಿಸುತ್ತದೆ. ಅಂಧನೂ, ವೃದ್ಧನೂ, ಪುತ್ರರನ್ನು ಕಳೆದುಕೊಂಡವನೂ ಆದ ನನ್ನಂಥವನಿಗೆ ವನದ ಹೊರತಾಗಿ ಬೇರೆ ಏನು ಗತಿ? ಮಹಾಭಾಗರೇ! ನನಗೆ ಅನುಮತಿಯನ್ನು ನೀಡಬೇಕು!”

ಅವನ ಆ ಮಾತನ್ನು ಕೇಳಿ ಕುರುಜಾಂಗಲದ ಅವರೆಲ್ಲರೂ ಕಣ್ಣೀರುಸುರಿಸುತ್ತಾ ಗಳಗಳನೆ ಅಳತೊಡಗಿದರು. ಏನೊಂದನ್ನೂ

ಹೇಳದೇ ಶೋಕಪರಾಯಣರಾಗಿ ದುಃಖಿಸುತ್ತಿದ್ದ ಅವರಿಗೆ ಮಹಾತೇಜಸ್ವಿ ಧೃತರಾಷ್ಟ್ರನು ಪುನಃ ಇಂತೆಂದನು:

"ಶಂತನುವು ಈ ಭೂಮಿಯನ್ನು ಯಥಾವತ್ತಾಗಿ ಆಳಿಕೊಂಡಿದ್ದನು. ಹಾಗೆಯೇ ವಿಚಿತ್ರವೀರ್ಯ ಮತ್ತು ಭೀಷ್ಮರು ಪರಿಪಾಲಿಸಿದರು. ನನ್ನ ತಂದೆಯು ತತ್ತ್ವಜ್ಞನಾಗಿಯೇ ರಾಜ್ಯವಾಳಿದನೆನ್ನುವುದರಲ್ಲಿ ಸಂಶಯವಿಲ್ಲ. ಅನಂತರ ನನಗೆ ಅತ್ಯಂತ ಪ್ರಿಯನಾಗಿದ್ದ ಸಹೋದರ ಪಾಂಡುವು ಕೂಡ ಯಥಾವತ್ತಾಗಿ ರಾಜ್ಯವನ್ನು ಪಾಲಿಸಿದನು. ಇದು ನಿಮಗೆ ತಿಳಿದೇ ಇದೆ. ಅನಂತರ ನಾನೂ ಕೂಡ ನಿಮ್ಮ ಸೇವೆಯನ್ನು ಚೆನ್ನಾಗಿಯೇ ಮಾಡಿದ್ದೇನೆ. ನಾನೇನಾದರೂ ಸರಿಯಾಗಿ ನಡೆದುಕೊಳ್ಳದೇ ಇದ್ದಿದ್ದರೆ ಆಲಸ್ಯರಹಿತರಾದ ನೀವು ನನ್ನನ್ನು ಕ್ಷಮಿಸಬೇಕು. ಕಂಟಕರಹಿತವಾದ ಈ ರಾಜ್ಯವನ್ನು ದುರ್ಯೋಧನನು ಆಳುತ್ತಿದ್ದಾಗಲೂ, ಅವನು ಮಂದನೂ ದುರ್ಬುದ್ಧಿಯೂ ಆಗಿದ್ದರೂ ನಿಮ್ಮ ಕುರಿತು ಯಾವ ಅಪರಾಧವನ್ನೂ ಎಸಗಿರಲಿಲ್ಲ. ಅವನ ಅಪರಾಧದಿಂದ, ದುರ್ಬುದ್ಧಿ-ಅಭಿಮಾನಗಳಿಂದ ಮತ್ತು ನನ್ನದೇ ಕೃತ್ಯದಿಂದ ಅಸಂಖ್ಯಾತ ರಾಜರ ಸಂಹಾರವಾಯಿತು! ಆಗ ನಾನು

ಒಳ್ಳೆಯದನ್ನೇ ಮಾಡಿರಬಹುದು ಅಥವಾ ಕೆಟ್ಟದ್ದನ್ನೇ ಮಾಡಿರಬಹುದು. ಅವುಗಳನ್ನು ಹೃದಯಕ್ಕೆ ತೆಗೆದುಕೊಳ್ಳದೇ ನನಗೆ ಅನುಜ್ಞೆಯನ್ನು ನೀಡಬೇಕು. ಇವನು ವೃದ್ಧನಾಗಿದ್ದಾನೆ. ಇವನು ಪುತ್ರರನ್ನು ಕಳೆದುಕೊಂಡವನಾಗಿದ್ದಾನೆ. ಇವನು ದುಃಖಿತನಾಗಿದ್ದಾನೆ. ಹಿಂದಿನ ರಾಜರ ಮಗನಾಗಿ ಜನಾಧಿಪನಾಗಿದ್ದಾನೆ ಎಂದು ತಿಳಿದುಕೊಂಡು ನನಗೆ ಅನುಮತಿಯನ್ನು ನೀಡಿ! ಕೃಪಣೆಯೂ, ವೃದ್ಧೆಯೂ ಆಗಿರುವ, ನನ್ನಂತೆಯೇ ಪುತ್ರರನ್ನು ಕಳೆದುಕೊಂಡು ಪುತ್ರಶೋಕಾರ್ತಳಾಗಿರುವ ಈ ತಪಸ್ವಿನೀ ಗಾಂಧಾರಿಯೂ ಕೂಡ ಬೇಡಿಕೊಳ್ಳುತ್ತಿದ್ದಾಳೆ. ಈ ವೃದ್ಧರೀರ್ವರೂ ಪುತ್ರರನ್ನು ಕಳೆದುಕೊಂಡು ದುಃಖಿತರಾಗಿರುವರೆಂದು ತಿಳಿದು ನಮಗೆ ಅನುಮತಿಯನ್ನು ನೀಡಿ. ನಿಮಗೆ ಮಂಗಳವಾಗಲಿ. ನಾವು ನಿಮಗೆ ಶರಣಾಗತರಾಗಿದ್ದೇವೆ. ಈಗ ಈ ಕೌರವ ಕುಂತೀಪುತ್ರ ಯುಧಿಷ್ಠಿರನು ನಿಮಗೆಲ್ಲರಿಗೆ ರಾಜನಾಗಿದ್ದಾನೆ. ಒಳ್ಳೆಯ ಸಮಯದಲ್ಲಿಯಾಗಲೀ ಕಷ್ಟದ ಸಮಯದಲ್ಲಾಗಲೀ ನೀವು ಅವನ ಕುರಿತು ಕೃಪೆಯಿಂದಿರಬೇಕು.  ವಿಪುಲ ತೇಜಸ್ಸಿನ ಲೋಕಪಾಲರಂತಿರುವ ಧರ್ಮಾರ್ಥದರ್ಶಿಗಳಾದ

ಅವನ ನಾಲ್ವರು ಸಹೋದರರೂ ಮಂತ್ರಿಗಳಾಗಿರುವ ಇವನು ಎಂದೂ ವಿಷಮ ಸ್ಥಿತಿಯನ್ನು ಹೊಂದುವುದಿಲ್ಲ. ಸರ್ವಪ್ರಾಣಿಗಳಿಗೂ ಜಗತ್ಪತಿಯಾಗಿರುವ ಪೂಜ್ಯ ಬ್ರಹ್ಮನಂತೆ ಮಹಾತೇಜಸ್ವಿಯಾಗಿರುವ ಯುಧಿಷ್ಠಿರನು ನಿಮ್ಮೆಲ್ಲರನ್ನೂ ಪಾಲಿಸುತ್ತಾನೆ. ನಾನು ಇದನ್ನು ಅವಶ್ಯವಾಗಿ ಹೇಳಬೇಕೆಂದು ಹೇಳುತ್ತಿದ್ದೇನೆ. ನಾನು ಯುಧಿಷ್ಠಿರನನ್ನು ನ್ಯಾಸರೂಪದಲ್ಲಿ ನಿಮ್ಮೊಡನೆ ವಹಿಸಿಕೊಡುತ್ತಿದ್ದೇನೆ. ಹಾಗೆಯೇ ನಿಮ್ಮೆಲ್ಲರನ್ನೂ ನ್ಯಾಸರೂಪದಲ್ಲಿ ಆ ವೀರನ ಬಳಿ ಇಡುತ್ತಿದ್ದೇನೆ. ನಿಮಗೆ ನನ್ನ ಮಕ್ಕಳಿಂದಾಗಲೀ ಅಥವಾ ನನ್ನಿಂದಾಗಲೀ ಯಾವುದೇ ಅಪರಾಧವು ನಡೆದಿದ್ದರೂ ಅದನ್ನು ಕ್ಷಮಿಸಿ ಅನುಮತಿಯನ್ನು ನೀಡಬೇಕು. ಹಿಂದೆ ಎಂದೂ ನೀವು ನನ್ನ ಮೇಲೆ ಕೋಪಗೊಂಡಿರಲಿಲ್ಲ. ನೀವೆಲ್ಲರೂ ಅತ್ಯಂತಗುರುಭಕ್ತಿಯುಳ್ಳವರಾಗಿರುವಿರಿ. ನಿಮಗೆ ಕೈಜೋಡಿಸಿ ನಮಸ್ಕರಿಸುತ್ತಿದ್ದೇನೆ. ಅಸ್ಥಿರಬುದ್ಧಿಯ ಲುಬ್ಧರೂ ಕಾಮಚಾರಿಗಳೂ ಆಗಿದ್ದ ನನ್ನ ಮಕ್ಕಳ ಕುರಿತಾಗಿ ಗಾಂಧಾರಿಯ ಸಹಿತ ನಾನು ನಿಮ್ಮೆಲ್ಲರ ಕ್ಷಮೆಯನ್ನು ಯಾಚಿಸುತ್ತಿದ್ದೇನೆ.”

ರಾಜನು ಹೀಗೆ ಹೇಳುತ್ತಿರಲು ಪೌರ-ಗ್ರಾಮೀಣಜನರು ಕಂಬನಿದುಂಬಿದ ಕಣ್ಣುಗಳುಳ್ಳವರಾಗಿ ಏನನ್ನೂ ಹೇಳಲಾರದೇ ಒಬ್ಬರನ್ನೊಬ್ಬರು ನೋಡುತ್ತಿದ್ದರು. ವೃದ್ಧ ರಾಜನು ಹೀಗೆ ಹೇಳಲು ಪೌರ-ಗ್ರಾಮೀಣ ಜನರು ಮೂರ್ಛೆಗೊಂಡವರಂತೆ ಸ್ತಬ್ಧರಾದರು. ಕಣ್ಣೀರಿನಿಂದ ಗಂಟಲು ತುಂಬಿ ಸ್ತಬ್ಧರಾಗಿದ್ದ ಅವರನ್ನು ಕುರಿತು ಮಹೀಪಾಲ ಮಹೀಪತಿ ಧೃತರಾಷ್ಟ್ರನೇ ಪುನಃ ಹೇಳಿದನು:

> “ಸಜ್ಜನರೇ! ವೃದ್ಧನೂ, ಪುತ್ರರನ್ನು ಕಳೆದುಕೊಂಡಿರುವವನೂ, ಧರ್ಮಪತ್ನಿಯೊಡನೆ ಬಹುವಿಧವಾಗಿ ರೋದಿಸುತ್ತಿರುವವನೂ, ಕೃಪಣನೂ ಆದ ನಾನು ವನವಾಸಕ್ಕೆ ನನ್ನ ತಂದೆ ಸ್ವಯಂ ಕೃಷ್ಣದ್ವೈಪಾಯನನಿಂದ ಮತ್ತು ಧರ್ಮಜ್ಞ ನೃಪನಿಂದ ಅನುಮತಿಯನ್ನು ಪಡೆದಿದ್ದೇನೆ. ಪುನಃ ಪುನಃ ನಿಮ್ಮೆದುರು ಶಿರಸಾ ಬಾಗುತ್ತಿದ್ದೇನೆ. ಗಾಂಧಾರಿಯ ಸಹಿತ ನನಗೆ ಅನುಮತಿಯನ್ನು ನೀಡಬೇಕು!”

ಕುರುರಾಜನ ಈ ಕರುಣಾಜನಕ ಮಾತುಗಳನ್ನು ಕೇಳಿ ಕುರುಜಾಂಗಲದ ಸರ್ವರೂ ಒಟ್ಟಿಗೇ ರೋದಿಸಿದರು. ಉತ್ತರೀಯಗಳಿಂದ ಮತ್ತು ಕೈಗಳಿಂದ ಮುಖಗಳನ್ನು ಮುಚ್ಚಿಕೊಳ್ಳುತ್ತಾ ಶೋಕಸಂತಪ್ತರಾದ

ಅವರು ತಾಯಿ-ತಂದೆಯರಂತೆ ಒಂದು ಕ್ಷಣ ರೋದಿಸಿದರು. ಧೃತರಾಷ್ಟ್ರನ ವನಪ್ರವಾಸದ ದುಃಖವನ್ನು ತುಂಬಿಕೊಂಡಿದ್ದ ಅವರು ಹೃದಯಶೂನ್ಯರಾಗಿ ಮೂರ್ಛಿತರಾಗಿರುವರೋ ಎಂಬಂತೆ ಕಾಣುತ್ತಿದ್ದರು. ಅನಂತರ ಕುರುರಾಜನ ವಿಯೋಗದಿಂದುಂಟಾಗುವ ದುಃಖವನ್ನು ದೂರಮಾಡಿಕೊಂಡು ಮೆಲ್ಲನೇ ಅನ್ಯೋನ್ಯರಲ್ಲಿ ತಮ್ಮ ತಮ್ಮ ಅಭಿಪ್ರಾಯಗಳನ್ನು ಹೇಳಿಕೊಳ್ಳತೊಡಗಿದರು. ಆಗ ಅವರೆಲ್ಲರೂ ಒಂದು ನಿರ್ಧಾರಕ್ಕೆ ಬಂದು ಅದನ್ನು ಓರ್ವ ಬ್ರಾಹ್ಮಣನ ಮೂಲಕ ನರಾಧಿಪನಿಗೆ ತಿಳಿಸಿದರು. ಆಗ ಸದಾಚಾರನೂ, ಅರ್ಥವಿಶಾರದನೂ, ಋಗ್ವೇದಪಾರಂಗತನೂ, ಮಾನನೀಯನೂ ಆದ ಸಾಂಬ ಎಂಬ ಹೆಸರಿನ ವೃದ್ಧನು ಹೇಳಲು ಉಪಕ್ರಮಿಸಿದನು. ಮಹಾರಾಜನನ್ನು ವಿನಯದಿಂದ ಗೌರವಿಸುತ್ತಾ ಸದಸ್ಯರನ್ನು ಸಂತೋಷಗೊಳಿಸುತ್ತಾ ಆ ಮೇಧಾವೀ ವಾಗ್ಮಿ ವಿಪ್ರನು ರಾಜನಿಗೆ ಹೇಳಿದನು:

"ರಾಜನ್! ಈ ಜನರೆಲ್ಲರೂ ತಮ್ಮ ತಮ್ಮ ಅಭಿಪ್ರಾಯಗಳನ್ನು ನನಗೆ ತಿಳಿಸಿರುವರು. ಅದನ್ನು ನಾನು ನಿನಗೆ ಹೇಳುತ್ತಿದ್ದೇನೆ. ಕೇಳು! ನೀನು ಹೇಳಿದುದೆಲ್ಲವೂ ಸರಿಯಾಗಿಯೇ ಇದೆ. ಪರಸ್ಪರರಲ್ಲಿ ಸೌಹಾರ್ದತೆಯಿದೆ ಎನ್ನುವುದರಲ್ಲಿ ಸ್ವಲ್ಪವೂ ಸುಳ್ಳಿಲ್ಲ! ಈ ರಾಜರ ವಂಶದಲ್ಲಿ ಎಂದೂ ಪ್ರಜೆಗಳಿಗೆ

ಅಪ್ರಿಯನಾದ ಪ್ರಜಾಪಾಲಕ ರಾಜನು ಇರಲಿಲ್ಲ! ನೀವುಗಳು ನಮ್ಮನ್ನು ತಂದೆಯಂತೆ ಮತ್ತು ಸಹೋದರರಂತೆ ಪಾಲಿಸುತ್ತಿದ್ದೀರಿ. ದುರ್ಯೋಧನನು ಕೂಡ ಏನೊಂದೂ ಅಯುಕ್ತ ಕಾರ್ಯವನ್ನು ಮಾಡಿಲ್ಲ. ಧರ್ಮಜ್ಞ ಮುನಿ ಸತ್ಯವತೀಸುತನು ಹೇಗೆ ಹೇಳುತ್ತಾನೋ ಹಾಗೆಯೇ ಮಾಡು! ಅವನೇ ನಮಗೆ ಪರಮ ಗುರುವು! ನಿನ್ನಿಂದ ತ್ಯಕ್ತರಾದ ನಾವು ಬಹುಕಾಲದವರೆಗೆ ದುಃಖಶೋಕಪರಾಯಣರಾಗಿ ನಿನ್ನ ನೂರಾರು ಗುಣಗಳನ್ನು ಸ್ಮರಿಸಿಕೊಳ್ಳುತ್ತಿರುತ್ತೇವೆ. ರಾಜಾ ಶಾಂತನುವು ಹೇಗೆ ನಮ್ಮನ್ನು ರಕ್ಷಿಸಿದನೋ, ಭೀಷ್ಮನ ವೀರ್ಯದಿಂದ ರಕ್ಷಿತನಾದ ಚಿತ್ರಾಂಗದನು ನಮ್ಮನ್ನು ಹೇಗೆ ರಕ್ಷಿಸಿದನೋ ಮತ್ತು ನಿನ್ನ ಮೇಲ್ವಿಚಾರಣೆಯಲ್ಲಿ ಪಾಂಡುವು ನಮ್ಮನ್ನು ಹೇಗೆ ಸಂರಕ್ಷಿಸಿದನೋ ಹಾಗೆ ರಾಜಾ ದುರ್ಯೋಧನನೂ ಕೂಡ ನಮ್ಮನ್ನು ಚೆನ್ನಾಗಿ ಪರಿಪಾಲಿಸುತ್ತಿದ್ದನು. ನಿನ್ನ ಮಗನು ನಮ್ಮ ವಿಷಯದಲ್ಲಿ ಸ್ವಲ್ಪವೂ ಅನ್ಯಾಯವನ್ನು ಮಾಡಲಿಲ್ಲ. ನಾವೂ ಕೂಡ ತಂದೆಯಂತೆ ಆ ನರಾಧಿಪನಲ್ಲಿ ವಿಶ್ವಾಸವನ್ನಿಟ್ಟಿದ್ದೆವು. ಅವನ ರಾಜ್ಯಭಾರದಲ್ಲಿ ನಾವೆಲ್ಲರೂ ಸುಖವಾಗಿಯೇ ಇದ್ದೆವು.

ಇವೆಲ್ಲವೂ ನಿನಗೆ ತಿಳಿದೇ ಇದೆ. ಹಾಗೆಯೇ ಧೀಮಂತ ಧೃತಿಮತ ಕುಂತೀಪುತ್ರನ ಆಳ್ವಿಕೆಯಲ್ಲಿ ಸಾವಿರ ವರ್ಷಗಳ ಕಾಲ ಸುಖವಾಗಿರಬೇಕೆಂದು ಬಯಸಿದ್ದೇವೆ. ಈ ಧರ್ಮಾತ್ಮಾ ಭೂರಿದಕ್ಷಿಣ ಯುಧಿಷ್ಠಿರನು ನಿನ್ನ ಪುರಾಣ ವಂಶಧಾರಿಗಳಾದ ರಾಜರ್ಷಿ ಕುರು, ಸಂವರಣ ಮತ್ತು ಧೀಮಂತ ಭರತ ಮೊದಲಾದವರ ಆಚಾರಗಳನ್ನು ಅನುಸರಿಸುತ್ತಿದ್ದಾನೆ. ಅವನಲ್ಲಿ ನಾವು ಹೇಳಬಹುದಾದ ಸೂಕ್ಷ್ಮ ದೋಷವೂ ಇಲ್ಲ. ನೀನು ಆಳುತ್ತಿರುವಾಗ ಕೂಡ ನಾವು ನಿತ್ಯವೂ ಸುಖವಾಗಿಯೇ ಇದ್ದೆವು. ನಿನ್ನ ಪುತ್ರನಲ್ಲಿ ಕೂಡ ಸೂಕ್ಷ್ಮವಾದ ಅನ್ಯಾಯವೇನನ್ನೂ ನಾವು ತಿಳಿದಿಲ್ಲ.  ಜ್ಞಾತಿವಧೆಯ ವಿಷಯದಲ್ಲಿ ದುರ್ಯೋಧನನ ಕುರಿತು ನೀನು ಏನು ಹೇಳಿದೆಯೋ ಅದಕ್ಕೂ ಸಮಾಧಾನಕರವಾದ ಕೆಲವು ಮಾತುಗಳನ್ನು ಹೇಳುತ್ತೇನೆ.

ಕುರುಗಳ ಕ್ಷಯವು ದುರ್ಯೋಧನ ಕೃತ್ಯವಲ್ಲ. ನೀನೂ ಕೂಡ ಮಾಡಿದುದಲ್ಲ. ಕರ್ಣ-ಸೌಬಲರ್ಯಾರೂ ಮಾಡಿದುದಲ್ಲ. ಅದು ದೈವಕೃತವಾಗಿತ್ತು. ಯಾರಿಂದಲೂ ತಡೆಯಲು ಸಾಧ್ಯವಾಗಿರಲಿಲ್ಲ. ದೈವವನ್ನು ಪುರುಷಪ್ರಯತ್ನದಿಂದ

ತಡೆಯಲು ಶಕ್ಯವಿಲ್ಲ. ಹದಿನೆಂಟು ಅಕ್ಷೋಹಿಣೀ ಸೇನೆಗಳು ಒಂದುಗೂಡಿದ್ದವು. ಹದಿನೆಂಟೇ ದಿನಗಳಲ್ಲಿ ಅವು ಹತ್ತು ಯೋಧಪುಂಗವರಿಂದ - ಭೀಷ್ಮ, ದ್ರೋಣ, ಕೃಪ, ಮಹಾತ್ಮ ಕರ್ಣ, ವೀರ ಯುಯುಧಾನ, ಧೃಷ್ಟದ್ಯುಮ್ನ ಮತ್ತು ನಾಲ್ವರು ಪಾಂಡುಪುತ್ರರು – ಭೀಮಾರ್ಜುನರು ಮತ್ತು ಯಮಳರೀರ್ವರು - ನಾಶಗೊಂಡವು. ಈ ಜನಕ್ಷಯವು ದೈವಬಲದಿಂದಲೇ ನಡೆಯಿತು. ಲೋಕದಲ್ಲಿ ವಿಶೇಷವಾಗಿ ಕ್ಷತ್ರಿಯನು ಸಂಗ್ರಾಮದಲ್ಲಿ ಕ್ಷತ್ರಬಂಧುವಿನ ಶಸ್ತ್ರದಿಂದ ನಿಧನಹೊಂದುವುದು ಅವಶ್ಯ ಕರ್ತವ್ಯವೂ ಆಗಿದೆ. ವಿದ್ಯೆ ಮತ್ತು ಬಾಹುಬಲಗಳಿಂದ ಕೂಡಿದ್ದ ಈ ಪುರುಷವ್ಯಾಘ್ರರು ಕುದುರೆ-ರಥ-ಆನೆಗಳ ಸಹಿತ ಭೂಮಿಯನ್ನೇ ನಾಶಪಡಿಸಿದರು. ಇದಕ್ಕೆ ನಿನ್ನ ಮಹಾಮನಸ್ವಿ ಮಗ ರಾಜನಾಗಲೀ, ನೀನಾಗಲೀ, ನಿನ್ನ ಅನುಯಾಯಿಗಳಾಗಲೀ, ಕರ್ಣ-ಸೌಬಲರಾಗಲೀ ಕಾರಣರಲ್ಲ. ಸಹಸ್ರಾರು ರಾಜರ ಈ ನಾಶವೆಲ್ಲವೂ ದೈವಕೃತವಾದುದೇ. ಈ ವಿಷಯದಲ್ಲಿ ಯಾರಾದರೂ ಬೇರೆ ಏನನ್ನು ತಾನೇ ಹೇಳಬಹುದು? ನೀನು ನಮ್ಮ ಗುರುವಾಗಿರುವೆ. ಇಡೀ ಜಗತ್ತಿಗೆ ಪ್ರಭುವಾಗಿರುವೆ.

ಧರ್ಮಾತ್ಮನಾದ ನಿನ್ನ ಮಗನ ಕುರಿತು ಈ ಮಾತುಗಳನ್ನು ಹೇಳುತ್ತೇವೆ: ದ್ವಿಜಾಗ್ರರ ಆಶೀರ್ವಾದ ಬಲದಿಂದ ನರಾಧಿಪ ದುರ್ಯೋಧನನು ತನ್ನ ಸಹಾಯಕರೊಂದಿಗೆ ವೀರಲೋಕಗಳನ್ನು ಪಡೆದು ತ್ರಿದಿವದಲ್ಲಿ ಸುಖಿಯಾಗಿ ಮೋದಿಸಲಿ! ನೀನೂ ಕೂಡ ಪುಣ್ಯ ಮತ್ತು ಧರ್ಮದ ಪರಮ ಸ್ಥಿತಿಯನ್ನು ಪಡೆಯುತ್ತೀಯೆ. ವೇದಗಳನ್ನು ಸಂಪೂರ್ಣವಾಗಿ ತಿಳಿದುಕೊಂಡು ಸಕಲ ಪುಣ್ಯಗಳನ್ನೂ ಪಡೆಯುವೆ. ಪುರುಷರ್ಷಭ ಪಾಂಡವರು ಸ್ವರ್ಗವನ್ನೇ ಆಳಲು ಸಮರ್ಥರಾಗಿರುವಾಗ ನಮ್ಮ ಪಾಲನೆಯ ವಿಷಯವಾಗಿ ಇವರಿಗೆ ಹೇಳುವುದೇನಿದೆ? ಶೀಲಭೂಷಣ ಪಾಂಡವರನ್ನು ಪ್ರಜೆಗಳು ಸುಖ-ಕಷ್ಟಗಳೆರಡರಲ್ಲೂ ಅನುಸರಿಸಿಕೊಂಡು ಹೋಗುತ್ತಾರೆ. ಪಾಂಡವನು ಹಿಂದಿನ ರಾಜರು ಬ್ರಾಹ್ಮಣರಿಗೆ ಕೊಟ್ಟಿರುವ ಅಗ್ರಹಾರಗಳನ್ನೂ, ಪರಿಹಾರಗಳನ್ನೂ ಪಾಲಿಸಿಕೊಂಡೇ ಬಂದಿದ್ದಾನೆ. ಮಹಾಮನಸ್ವೀ ಕುಂತೀಪುತ್ರನು ವೈಶ್ರವಣನಂತೆ ಸದಾ ದೀರ್ಘದರ್ಶಿಯೂ ಕೃತಪ್ರಜ್ಞನೂ, ಮೃದುಸ್ವಭಾವದವನೂ ಆಗಿದ್ದಾನೆ. ಅವನ ಸಚಿವರೂ ಕೂಡ ಯೋಗ್ಯರಾಗಿದ್ದಾರೆ. ಇವನು ಶತ್ರುಗಳ

ಕುರಿತೂ ದಯಾವಂತನಾಗಿದ್ದಾನೆ. ಶುಚಿಯಾಗಿದ್ದಾನೆ. ಎಲ್ಲರನ್ನೂ ಸರಳತೆಯಿಂದ ಕಾಣುತ್ತಾನೆ. ಈ ಮೇಧಾವಿಯು ಸದಾ ನಮ್ಮನ್ನು ಮಕ್ಕಳಂತೆಯೇ ಪಾಲಿಸುತ್ತಾನೆ. ಧರ್ಮಜನ ಸಂಸರ್ಗದಿಂದಾಗಿ ಭೀಮಾರ್ಜುನರೇ ಮೊದಲಾದ ಯಾರೂ ಜನರಿಗೆ ಅಪ್ರಿಯವಾದುದನ್ನು ಮಾಡುವುದಿಲ್ಲ. ಈ ಐವರು ಕೌರವರೂ ಮೃದುಸ್ವಭಾವದವರೊಂದಿಗೆ ಮೃದುವಾಗಿಯೂ ದ್ವೇಷಿಗಳಿಗೆ ವಿಷಸರ್ಪಗಳಂತೆಯೂ ವ್ಯವಹರಿಸುತ್ತಾರೆ. ಈ ವೀರ್ಯವಂತ ಮಹಾತ್ಮರು ಪ್ರಜೆಗಳ ಹಿತದಲ್ಲಿಯೇ ನಿರತರಾಗಿದ್ದಾರೆ. ಕುಂತಿಯಾಗಲೀ, ಪಾಂಚಾಲಿಯಾಗಲೀ, ಉಲೂಪಿಯಾಗಲೀ, ಸಾತ್ವತೀ ಸುಭದ್ರೆಯಾಗಲೀ ಈ ಜನರೊಂದಿಗೆ ಎಂದೂ ಪ್ರತಿಕೂಲವಾಗಿ ನಡೆದುಕೊಳ್ಳುವವರಲ್ಲ. ನೀನು ಮಾಡಿಟ್ಟ ಈ ಸ್ನೇಹವನ್ನು ಯುಧಿಷ್ಠಿರನು ಬೆಳೆಸಿದ್ದಾನೆ. ನಗರ-ಗ್ರಾಮೀಣ ಪ್ರದೇಶದ ಜನರು ಇದನ್ನು ಎಂದೂ ಅಲ್ಲಗಳೆಯುವುದಿಲ್ಲ. ಮಹಾರಥ ಕುಂತೀಪುತ್ರರು ಧರ್ಮಪರಾಯಣರಾಗಿದ್ದುಕೊಂಡು ಅಧರ್ಮಿಷ್ಠ ಜನರನ್ನೂ ಕೂಡ ಚೆನ್ನಾಗಿ ಪಾಲಿಸುತ್ತಾರೆ. ಯುಧಿಷ್ಠಿರನ ವಿಷಯದಲ್ಲಿ ನಿನ್ನ ಈ ಮಾನಸಿಕ ದುಃಖವನ್ನು

ಕಳೆದುಕೊಂಡು ಧಾರ್ಮಿಕ ಕಾರ್ಯಗಳನ್ನು ಮಾಡು. ನಿನಗೆ ನಮಸ್ಕಾರವು !”

ಅವನ ಆ ಧಾರ್ಮಿಕ ಗುಣಸಂಪನ್ನ ಮಾತನ್ನು ಕೇಳಿ ಎಲ್ಲ ಜನರೂ “ಸಾಧು ! ಸಾಧು !” ಎಂದು ಹೇಳಿ ಅನುಮೋದಿಸಿದರು. ಧೃತರಾಷ್ಟ್ರನೂ ಕೂಡ ಆ ಮಾತನ್ನು ಪುನಃ ಪುನಃ ಗೌರವಿಸಿ, ಎಲ್ಲ ಪ್ರಜಾಜನರನ್ನೂ ಮೆಲ್ಲನೇ ಬೀಳ್ಕೊಟ್ಟನು. ಆ ಸಮಯದಲ್ಲಿ ರಾಜನನ್ನು ಅವರು ಪೂಜಿಸಿದರು. ಮಂಗಳ ದೃಷ್ಟಿಯಿಂದ ನೋಡಿದರು. ಅವನೂ ಕೂಡ ಕೈಮುಗಿದು ಆ ಜನರನ್ನು ಗೌರವಿಸಿದನು. ಅನಂತರ ನೃಪನು ಗಾಂಧಾರಿಯ ಸಹಿತ ಭವನವನ್ನು ಪ್ರವೇಶಿಸಿದನು.

## ಧೃತರಾಷ್ಟ್ರನು ಶ್ರಾದ್ಧಗಳನ್ನು ಮಾಡಲು ಬಯಸಿದಾಗ ಭೀಮಸೇನನು ವಿರೋಧಿಸಿದುದು

ರಾತ್ರಿಯು ಕಳೆದು ಬೆಳಗಾದೊಡನೆಯೇ ಅಂಬಿಕಾಸುತ ಧೃತರಾಷ್ಟ್ರನು ವಿದುರನನ್ನು ಯುಧಿಷ್ಠಿರನ ಅರಮನೆಗೆ ಕಳುಹಿಸಿದನು. ಸರ್ವಬುದ್ಧಿಮತರಲ್ಲಿ ಶ್ರೇಷ್ಠ ಮಹಾತೇಜಸ್ವಿ ವಿದುರನು ಅಚ್ಯುತ ಈಶ್ವರ ಯುಧಿಷ್ಠಿರನಲ್ಲಿಗೆ ಹೋಗಿ ಅವನಿಗೆ ರಾಜವಚನವನ್ನು ತಿಳಿಸಿದನು.

> “ಮಹಾರಾಜ! ವನವಾಸದ ದೀಕ್ಷೆಯನ್ನು ತೊಟ್ಟಿರುವ ಧೃತರಾಷ್ಟ್ರನು ಬರುವ ಕಾರ್ತೀಕ ಹುಣ್ಣಿಮೆಯಂದು ವನಕ್ಕೆ ಹೊರಡಲಿದ್ದಾನೆ. ಅವನು ನಿನ್ನಿಂದ ಸ್ವಲ್ಪ ಧನವನ್ನು ಅಪೇಕ್ಷಿಸುತ್ತಿದ್ದಾನೆ. ಮಹಾತ್ಮ ಗಾಂಗೇಯ, ದ್ರೋಣ, ಸೋಮದತ್ತ, ಧೀಮತ ಬಾಹ್ಲೀಕ, ಮತ್ತು ಹತರಾದ ತನ್ನ ಎಲ್ಲ ಪುತ್ರರು ಮತ್ತು ಸುಹೃದಯರಿಗಾಗಿ ಮತ್ತು ನೀನು ಸಮ್ಮತಿಸುವೆಯಾದರೆ ನೀಚ ಸೈಂಧವನಿಗೂ ಅವನು ಶ್ರಾದ್ಧಮಾಡಲು ಇಚ್ಛಿಸಿದ್ದಾನೆ.”

ವಿದುರನ ಈ ಮಾತನ್ನು ಕೇಳಿ ಯುಧಿಷ್ಠಿರ ಮತ್ತು ಗುಡಾಕೇಶರು ಹೃಷ್ಟರಾಗಿ ಗೌರವಿಸಿದರು. ಆದರೆ ದೃಢಕ್ರೋಧನಾದ ಮಹಾತೇಜಸ್ವೀ ಭೀಮನು ಮಾತ್ರ ದುರ್ಯೋಧನನ ಅಪರಾಧಗಳನ್ನು ಸ್ಮರಿಸಿಕೊಳ್ಳುತ್ತಾ ವಿದುರನ ಆ ಮಾತುಗಳನ್ನು ಸ್ವೀಕರಿಸಲಿಲ್ಲ. ಭೀಮಸೇನನ ಅಭಿಪ್ರಾಯವನ್ನು ತಿಳಿದ ಫಲ್ಗುನ ಕಿರೀಟಿಯು ಭೀಮನಿಗೆ ನಮಸ್ಕರಿಸಿ ಈ ಮಾತನ್ನಾಡಿದನು:

> “ಭೀಮ! ವೃದ್ಧ ಪಿತ ರಾಜನು ವನವಾಸದ ದೀಕ್ಷೆಯನ್ನು ತೊಟ್ಟಿದ್ದಾನೆ. ಸರ್ವ ಸುಹೃದಯರಿಗೆ ಶ್ರಾದ್ಧಸಂಬಂಧವಾಗಿ ದಾನಮಾಡಲು ಬಯಸಿದ್ದಾನೆ. ನೀನು ಗೆದ್ದಿರುವ ವಿತ್ತವನ್ನು

ಕೌರವ ಧೃತರಾಷ್ಟ್ರನು ಭೀಷ್ಮಾದಿಗಳ ಪರವಾಗಿ ದಾನಮಾಡಲು ಬಯಸಿದ್ದಾನೆ. ಅದಕ್ಕೆ ನೀನು ಅನುಮತಿಯನ್ನು ನೀಡಬೇಕು. ಹಿಂದೆ ನಾವು ಯಾವ ಧೃತರಾಷ್ಟ್ರನನ್ನು ಯಾಚಿಸಿದ್ದೆವೋ ಅವನೇ ಇಂದು ಸೌಭಾಗ್ಯವಶಾತ್ ನಮ್ಮನ್ನು ಯಾಚಿಸುತ್ತಿದ್ದಾನೆ! ಕಾಲದ ವೈಪರಿತ್ಯವನ್ನು ನೋಡು! ಇಡೀ ಭೂಮಿಯ ಒಡೆಯನಾಗಿದ್ದ ಆ ನರಾಧಿಪನು ಇಂದು ಶತ್ರುಗಳಿಂದ ತನ್ನವರೆಲ್ಲರನ್ನೂ ಕಳೆದುಕೊಂಡು ಅನಾಥನಾಗಿ ಅರಣ್ಯಕ್ಕೆ ಹೋಗಲು ಬಯಸಿದ್ದಾನೆ. ದಾನಮಾಡುತ್ತಿದ್ದೇನೆ ಎನ್ನುವುದು ಮಾತ್ರ ನಿನಗೆ ಕಾಣಲಿ. ಅನ್ಯಥಾ ನಾವು ಅಪಯಶಸ್ಸನ್ನು ಗಳಿಸುತ್ತೇವೆ ಮತ್ತು ಅದೊಂದು ಅಧರ್ಮವೂ ಎನಿಸಿಕೊಳ್ಳುತ್ತದೆ. ನಮ್ಮ ಹಿರಿಯಣ್ಣ ಈ ಈಶ್ವರ ರಾಜನಿಂದ ನೀನು ಕಲಿತುಕೋ! ದಾನಮಾಡುವುದು ನಿನಗೆ ಯೋಗ್ಯವಾಗಿದೆ. ಕೊಡದೇ ಇರುವುದಲ್ಲ!” ಹೀಗೆ ಹೇಳಿದ ಕೌಂತೇಯನನ್ನು ಧರ್ಮರಾಜನು ಪ್ರಶಂಸಿಸಿದನು.

ಭೀಮಸೇನನಾದರೋ ಕ್ರೋಧದಿಂದ ಈ ಮಾತುಗಳನ್ನಾಡಿದನು:

“ಫಲ್ಗುನ! ಭೀಷ್ಮ, ಸೋಮದತ್ತ, ನೃಪತಿ ಭೂರಿಶ್ರವ,

ರಾಜರ್ಷಿ ಬಾಹ್ಲೀಕ, ಮಹಾತ್ಮ ದ್ರೋಣ ಮತ್ತು ಇತರ ಸುಹೃದಯರ ಪ್ರೇತಕಾರ್ಯಗಳನ್ನು ನಾವೇ ಮಾಡೋಣ! ಕುಂತಿಯು ಕರ್ಣನ ಸಲುವಾಗಿ ಪಿಂಡದಾನ ಮಾಡುತ್ತಾಳೆ. ಇವರಿಗೆ ಕೌರವ ನೃಪನು ಶ್ರಾದ್ಧಗಳನ್ನು ಮಾಡದಿರಲಿ! ನಮ್ಮ ಶತ್ರುಗಳು ಸುಖವನ್ನು ಅನುಭವಿಸಬಾರದೆಂದು ನನ್ನ ಬುದ್ಧಿಯು ಹೇಳುತ್ತಿದೆ. ಭೂಮಿಯಲ್ಲಿರುವ ಸರ್ವವನ್ನೂ ನಾಶಗೊಳಿಸಿದ ಕುಲಘಾತಕ ದುರ್ಯೋಧನಾದಿ ಎಲ್ಲ ಶತ್ರುಗಳೂ ಕಷ್ಟಕ್ಕಿಂತಲೂ ಕಷ್ಟದ ನರಕಗಳನ್ನು ಪಡೆಯಲಿ! ದ್ರೌಪದಿಯ ಶೋಕವನ್ನು ಹೆಚ್ಚಿಸಿದ ಆ ಹನ್ನೆರಡು ವರ್ಷಗಳ ವನವಾಸ ಮತ್ತು ಅಜ್ಞಾತವಾಸದ ವೈರವನ್ನು ಇಂದು ಹೇಗೆ ತಾನೇ ನೀನು ಮರೆತುಬಿಟ್ಟಿರುವೆ? ಆಗ ಧೃತರಾಷ್ಟ್ರನ ಮೇಲಿನ ನಿನ್ನ ಈ ಸ್ನೇಹಭಾವವು ಕಾಣುತ್ತಿರಲಿಲ್ಲವಲ್ಲ? ಅವರು ನಿನ್ನ ಆಭರಣಗಳೆಲ್ಲವನ್ನೂ ಅಪಹರಿಸಿ, ಕೃಷ್ಣಾಜಿನವನ್ನು ಹೊದಿಸಿ ಪಾಂಚಾಲಪುತ್ರಿಯೊಂದಿಗೆ ರಾಜನನ್ನು ಅನುಸರಿಸಿ ಕಾಡಿಗೆ ಹೋಗುವಂತೆ ಮಾಡಿದ್ದರು. ಆಗ ದ್ರೋಣ, ಭೀಷ್ಮ, ಸೋಮದತ್ತರು ಎಲ್ಲಿದ್ದರು? ಹದಿಮೂರು ವರ್ಷಗಳು ವನದಲ್ಲಿ ವನ್ಯಪದಾರ್ಥಗಳನ್ನು

ತಿಂದು ಜೀವಿಸುತ್ತಿದ್ದಾಗ ನಿಮ್ಮ ಈ ಜ್ಯೇಷ್ಠ ತಂದೆಯು ನಮ್ಮನ್ನು ತಂದೆಯಂತೆ ಕಂಡಿರಲೇ ಇಲ್ಲ! ಇದೇ ಕುಲಪಾಂಸಕ ದುರ್ನಡತೆಯ ಧೃತರಾಷ್ಟ್ರನು ದ್ಯೂತದಲ್ಲಿ ಯಾರು ಗೆದ್ದರು ಎಂದು ವಿದುರನನ್ನು ಪ್ರಶ್ನಿಸುತ್ತಿದ್ದುದು ನಿನಗೆ ಮರೆತು ಹೋಗಿದೆಯೇ?"

ಹೀಗೆ ಹೇಳುತ್ತಿದ್ದ ತಮ್ಮನನ್ನು ಗದರಿಸುತ್ತಾ ರಾಜಾ ಕುಂತೀಪುತ್ರ ಯುಧಿಷ್ಠಿರನು

"ಸಾಕು! ಸುಮ್ಮನಿರು!"

ಎಂದು ಹೇಳಿದನು. ಅರ್ಜುನನು ಹೇಳಿದನು:

"ಭೀಮ! ನನಗಿಂತಲೂ ಹಿರಿಯವನಾಗಿರುವ ನೀನು ನನಗೆ ಗುರುವು. ನಿನ್ನ ಮುಂದೆ ಹೆಚ್ಚು ಮಾತನಾಡಲು ಬಯಸುವುದಿಲ್ಲ. ರಾಜರ್ಷಿ ಧೃತರಾಷ್ಟ್ರನು ಸರ್ವಥಾ ಗೌರವಕ್ಕೆ ಯೋಗ್ಯನಾಗಿದ್ದಾನೆ! ಆರ್ಯಮರ್ಯಾದೆಯನ್ನು ಮೀರದಿರುವ ಪುರುಷಶ್ರೇಷ್ಠ ಸತ್ಪುರುಷರು ಇತರರ ಅಪರಾಧಗಳನ್ನು ಎಂದೂ ಸ್ಮರಿಸುವುದಿಲ್ಲ. ಉತ್ತಮ ಕರ್ಮಗಳನ್ನು ಮಾತ್ರ ಸ್ಮರಿಸಿಕೊಳ್ಳುತ್ತಾರೆ. ಕ್ಷತ್ತ! ಕೌರವ

ಪಾರ್ಥಿವನಲ್ಲಿ ನನ್ನ ಈ ಮಾತನ್ನು ಹೇಳು! ಅವನು ಪುತ್ರರ ಶ್ರಾದ್ಧಕ್ಕಾಗಿ ಎಷ್ಟು ಧನವನ್ನು ಅಪೇಕ್ಷಿಸುವನೋ ಅಷ್ಟನ್ನೂ ನಾನು ಕೊಡುತ್ತೇನೆ. ಭೀಷ್ಮಾದಿ ಸರ್ವ ಸುಹೃದಯರ ಮತ್ತು ಉಪಕಾರಿಗಳ ಶ್ರಾದ್ಧಕ್ಕಾಗಿ ನನ್ನ ಕೋಶದಿಂದ ಕೊಡುತ್ತೇನೆ. ಇದಕ್ಕಾಗಿ ಭೀಮನ ಮನಸ್ಸನ್ನು ಕೆಡಿಸುವುದು ಬೇಡ!"

ಹೀಗೆ ಹೇಳಲು ಧರ್ಮರಾಜನು ಅರ್ಜುನನನ್ನು ಪ್ರಶಂಸಿಸಿದನು. ಭೀಮಸೇನನು ಕಡೆಗಣ್ಣಿನಿಂದ ಧನಂಜಯನನ್ನು ನೋಡಿದನು. ಅನಂತರ ಯುಧಿಷ್ಠಿರನು ವಿದುರನಿಗೆ ಇಂತೆಂದನು:

"ಆ ನೃಪತಿಯು ಭೀಮಸೇನನ ಮೇಲೆ ಕೋಪಿಸಿಕೊಳ್ಳಬಾರದು. ಏಕೆಂದರೆ ಭೀಮಸೇನನು ಅರಣ್ಯದಲ್ಲಿ ಮಂಜು, ಮಳೆ, ಬಿಸಿಲು ಮೊದಲಾದವುಗಳಿಂದ ಬಹುವಿಧದ ಕಷ್ಟ-ದುಃಖಗಳನ್ನು ಅನುಭವಿಸಿದ್ದಾನೆ. ಧೀಮಂತನಾದ ನಿನಗೆ ಇದು ತಿಳಿದೇ ಇದೆ. ಆದರೆ ನೀನು ರಾಜ ಭರತರ್ಷಭನಿಗೆ ನನ್ನ ಈ ಮಾತನ್ನು ಹೇಳು. ಅವನಿಗೆ ಏನು ಬೇಕೋ ಅವೆಲ್ಲವನ್ನೂ ನನ್ನ ಅರಮನೆಯ ಬೊಕ್ಕಸದಿಂದ ತೆಗೆದುಕೊಳ್ಳಲಿ! ತುಂಬಾ ದುಃಖಿತನಾಗಿ ಮಾತ್ಸರ್ಯಭಾವವನ್ನು ತೋರಿಸುತ್ತಿರುವ ಈ ಭೀಮನ

ಮಾತುಗಳನ್ನು ಆ ರಾಜನು ಮನಸ್ಸಿಗೆ ತೆಗೆದುಕೊಳ್ಳಬಾರದು. ಇದನ್ನು ನೀನು ರಾಜನಿಗೆ ಹೇಳಬೇಕು. ನನ್ನ ಮತ್ತು ಅರ್ಜುನನ ಅರಮನೆಗಳಲ್ಲಿರುವ ಧನವೆಲ್ಲವಕ್ಕೂ ಆ ಪಾರ್ಥಿವ ಮಹಾರಾಜನೇ ಸ್ವಾಮಿ ಎಂದು ಹೇಳಬೇಕು. ರಾಜನು ವಿಪ್ರರಿಗಾಗಿ ಇಷ್ಟಬಂದಷ್ಟು ಖರ್ಚು ಮಾಡಲಿ, ದಾನನೀಡಲಿ. ಇಂದು ಅವನು ಮಕ್ಕಳ ಮತ್ತು ಸುಹೃದಯರ ಋಣದಿಂದ ಮುಕ್ತನಾಗಲಿ! ನನ್ನ ಈ ಶರೀರ ಮತ್ತು ಧನವು ನಿನಗೋಸ್ಕರವಾಗಿವೆ ಎನ್ನುವುದರಲ್ಲಿ ಸಂಶಯವೇ ಬೇಡ! ಕ್ಷತ್ತ! ಇದನ್ನು ರಾಜನಿಗೆ ತಿಳಿಸು!”

ರಾಜನು ಹೀಗೆ ಹೇಳಲು ಬುದ್ಧಿಸತ್ತಮ ವಿದುರನು ಧೃತರಾಷ್ಟ್ರನ ಬಳಿಸಾರಿ ಮಹಾ ಅರ್ಥವತ್ತಾದ ಈ ಮಾತನ್ನಾಡಿದನು:

“ನಿನ್ನ ಮಾತನ್ನು ಸಂಪೂರ್ಣವಾಗಿ ರಾಜಾ ಯುಧಿಷ್ಠಿರನಿಗೆ ಹೇಳಿದೆನು. ನಿನ್ನ ಮಾತನ್ನು ಕೇಳಿದ ಆ ಮಹಾದ್ಯುತಿಯು ನಿನ್ನನ್ನು ಬಹಳವಾಗಿ ಪ್ರಶಂಸಿಸಿದನು. ಮಹಾತೇಜಸ್ವಿ ಬೀಭತ್ಸುವು ತನ್ನ ಅರಮನೆ ಮತ್ತು ಅರಮನೆಯಲ್ಲಿರುವ ಎಲ್ಲ ಸಂಪತ್ತನ್ನೂ, ತನ್ನ ಪ್ರಾಣವನ್ನು ಕೂಡ ನಿನ್ನ ಸೇವೆಗಾಗಿ ಸಮರ್ಪಿಸಿದ್ದಾನೆ. ನಿನ್ನ ಮಗ ಧರ್ಮರಾಜನೂ ಕೂಡ ರಾಜ್ಯ,

ಪ್ರಾಣ, ಧನ ಮತ್ತು ಅವನಲ್ಲಿ ಏನೆಲ್ಲ ಇವೆಯೋ ಎಲ್ಲವನ್ನೂ ನಿನಗೆ ಒಪ್ಪಿಸಿದ್ದಾನೆ. ಮಹಾಬಾಹು ಭೀಮನಾದರೋ ಅಗಣಿತವಾಗಿದ್ದ ಸರ್ವ ದುಃಖಗಳನ್ನೂ ಸ್ಮರಿಸಿಕೊಂಡು ನಿಟ್ಟುಸಿರು ಬಿಡುತ್ತಾ ಬಹಳ ಕಷ್ಟದಿಂದ ರಾಜನ ಈ ನಿರ್ಧಾರವನ್ನು ಅನುಮೋದಿಸಿದನು. ಧರ್ಮಶೀಲ ರಾಜಾ ಯುಧಿಷ್ಠಿರನೂ ಮತ್ತು ಹಾಗೆಯೇ ತಮ್ಮ ಬೀಭತ್ಸುವೂ ಆ ಮಾಹಾಬಾಹುವನ್ನು ಸಮಾಧಾನಪಡಿಸಿ ಅವನಲ್ಲಿ ನಿನ್ನ ಕುರಿತು ಸೌಹಾರ್ದತೆಯನ್ನು ಸ್ಥಾಪಿಸಿದ್ದಾರೆ. ಆ ವೈರವನ್ನು ಸ್ಮರಿಸಿಕೊಳ್ಳುತ್ತಿರುವ ಭೀಮನು ನಿನ್ನೊಡನೆ ಅನ್ಯಾಯವಾಗಿ ವರ್ತಿಸಿದುದಕ್ಕಾಗಿ ನೀನು ಅವನ ಮೇಲೆ ಸಿಟ್ಟಾಗಬಾರದು ಎಂದೂ ಧರ್ಮರಾಜನು ಹೇಳಿ ಕಳುಹಿಸಿದ್ದಾನೆ. ಪ್ರಾಯಶಃ ಕ್ಷತ್ರಿಯರ ಧರ್ಮವೇ ಹೀಗಿದ್ದಿರಬಹುದು. ವೃಕೋದರನು ಯುದ್ಧದಲ್ಲಿ ಸದಾ ಕ್ಷತ್ರಿಯ ಧರ್ಮವನ್ನೇ ಆಚರಿಸಿದವನು. ನಾನು ಮತ್ತು ಅರ್ಜುನರು ಪುನಃ ಪುನಃ ಕೇಳಿಕೊಳ್ಳುತ್ತಿದ್ದೇವೆ. ವೃಕೋದರನು ಮಾಡಿದುದನ್ನು ಕ್ಷಮಿಸಿಬಿಡು. ನೀನೇ ನಮಗೆ ಪ್ರಭುವು. ನಿನಗಿಷ್ಟವಿದ್ದಷ್ಟು ವಿತ್ತವನ್ನು ದಾನಮಾಡು. ನಮ್ಮ ಈ ರಾಜ್ಯ-ಪ್ರಾಣಗಳಿಗೆ ನೀನೇ ಈಶ್ವರನಾಗಿರುವೆ! ಮಕ್ಕಳ

ಶ್ರಾದ್ಧದ ಸಲುವಾಗಿ ಬ್ರಾಹ್ಮಣರಿಗೆ ಅಗ್ರಹಾರಗಳನ್ನೂ, ರತ್ನಗಳನ್ನೂ, ಗೋವುಗಳನ್ನೂ, ದಾಸಿ-ದಾಸರನ್ನೂ, ಆಡು-ಕುರಿಗಳನ್ನೂ ದಾನಮಾಡಲಿ! ಕುರುಶ್ರೇಷ್ಠನು ಬ್ರಾಹ್ಮಣರನ್ನು ಕರೆ-ಕರೆದು ದಾನಮಾಡಲಿ. ವಿದುರ! ನೀನು ನೃಪನ ಆಜ್ಞೆಯಂತೆ ದೀನ-ಅಂಧ-ಕೃಪಣರಿಗೆ ಅಲ್ಲಲ್ಲಿ ಅನೇಕ ಅನ್ನ-ರಸ-ಪಾನೀಯಗಳ ಶಿಬಿರಗಳನ್ನು ನಿರ್ಮಿಸು. ಹಸುಗಳಿಗೆ ನೀರು ಕುಡಿಯಲು ನೀರಿನ ತೊಟ್ಟಿಗಳನ್ನು ನಿರ್ಮಿಸು ಮತ್ತು ವಿವಿಧ ಪುಣ್ಯಕರ್ಮಗಳನ್ನು ನಿಯೋಜಿಸು. ಹೀಗೆ ನನಗೆ ರಾಜಾ ಮತ್ತು ಪಾರ್ಥ ಧನಂಜಯರು ಹೇಳಿದರು. ಇದರ ನಂತರದ ಕಾರ್ಯವನ್ನು ನೀನು ನಡೆಸಿಕೊಡಬೇಕು!”

ವಿದುರನು ಹೀಗೆ ಹೇಳಲು ಧೃತರಾಷ್ಟ್ರನು ಪಾಂಡವರನ್ನು ಪ್ರಶಂಸಿಸಿದನು. ಕಾರ್ತೀಕ ಮಾಸದಲ್ಲಿ ಮಹಾದಾನವನ್ನು ಮಾಡಲು ನಿಶ್ಚಯಿಸಿದನು.

## ಧೃತರಾಷ್ಟ್ರನು ನಡೆಸಿದ ಶ್ರಾದ್ಧಯಜ್ಞ

ವಿದುರನು ಹೀಗೆ ಹೇಳಲು ಜನಾಧಿಪ ಧೃತರಾಷ್ಟ್ರನು ರಾಜ ಮತ್ತು ಜಿಷ್ಣುವಿನ ಕೃತ್ಯಗಳಿಂದ ಅತ್ಯಂತ ಪ್ರಸನ್ನನಾದನು. ಅನಂತರ ಅವನು

ಭೀಷ್ಮನ ಮತ್ತು ತನ್ನ ಮಕ್ಕಳು, ಸುಹೃದಯರ ಶ್ರಾದ್ಧದ ಸಲುವಾಗಿ ಸಹಸ್ರಾರು ಯೋಗ್ಯ ಬ್ರಾಹ್ಮಣರನ್ನೂ ಋಷಿಸತ್ತಮರನ್ನೂ ಆಮಂತ್ರಿಸಿದನು. ಅನ್ನ-ಪಾನಾದಿಗಳು, ಯಾನಗಳು, ಹೊದಿಕೆಗಳು, ಸುವರ್ಣ-ಮಣಿ-ರತ್ನಗಳು, ದಾಸ-ದಾಸಿಯರು, ಕಂಬಳಿ-ಜಿನಗಳ ಹೊದಿಕೆಗಳು, ರತ್ನಗಳು, ಗ್ರಾಮಗಳು, ಕ್ಷೇತ್ರಗಳು, ಆಡು-ಕುರಿಗಳು, ಅಲಂಕರಿಸಲ್ಪಟ್ಟ ಆನೆ-ಕುದುರೆಗಳು, ಸುಂದರ ರಾಜಕನ್ಯೆಯರು ಇವುಗಳೆಲ್ಲವನ್ನೂ ನೃಪಸತ್ತಮನು ದ್ರೋಣ, ಭೀಷ್ಮ, ಸೋಮದತ್ತ, ಬಾಹ್ಲೀಕ, ದುರ್ಯೋಧನ ಮತ್ತು ಅವನ ಅನುಜರು, ಜಯದ್ರಥನೇ ಮೊದಲಾದ ಸುಹೃದಯರು ಇವರನ್ನು ಉದ್ದೇಶಿಸಿ ಪ್ರತ್ಯೇಕ ಪ್ರತ್ಯೇಕವಾಗಿ ಬ್ರಾಹ್ಮಣರಿಗೆ ದಾನಮಾಡಿದನು. ಯುಧಿಷ್ಠಿರನ ಅಭಿಪ್ರಾಯದಂತೆ ಆ ಶ್ರಾದ್ಧಯಜ್ಞವು ಅನೇಕ ಗೋಧನ ದಕ್ಷಿಣೆಗಳಿಂದ ಅನೇಕ ಧನರತ್ನಗಳಿಂದ ಸುಶೋಭಿಸುತ್ತಿತ್ತು. ಯುಧಿಷ್ಠಿರನ ಶಾಸನದಂತೆ ಅನೇಕ ಗಣಕ-ಲೇಖಕ ಪುರುಷರು ನಿರಂತರವಾಗಿ ನೃಪನನ್ನು ಈ ರೀತಿ ಕೇಳುತ್ತಿದ್ದರು: “ಇವರಿಗೆ ಏನನ್ನು ದಾನಮಾಡಬೇಕು ಎಂದು ಆಜ್ಞಾಪಿಸು! ಎಲ್ಲ ವಸ್ತುಗಳೂ ಇಲ್ಲಿ ಸಿದ್ಧವಾಗಿವೆ. ಯಾವುದನ್ನು ಬೇಕಾದರೂ ಕೊಡಬಹುದು!”

ಧೀಮಂತ ಕುಂತೀಪುತ್ರನ ವಚನದಂತೆ ರಾಜನು ಆಗ ನೂರು

ನಾಣ್ಯಗಳನ್ನು ಕೊಡಲು ಹೇಳಿದರೆ ಗಣಕರು ಸಾವಿರ ನಾಣ್ಯಗಳನ್ನು ಕೊಡುತ್ತಿದ್ದರು. ಮೋಡವು ಮಳೆಸುರಿಸಿ ಭೂಮಿಯನ್ನು ತೃಪ್ತಿಗೊಳಿಸುವಂತೆ ಮೋಡದ ರೂಪದಲ್ಲಿದ್ದ ಧೃತರಾಷ್ಟ್ರನು ಭೂಮಿಯ ಮೇಲೆ ಧನದ ಮಳೆಯನ್ನೇ ಸುರಿಸಿ ವಿಪ್ರರನ್ನು ತೃಪ್ತಿಗೊಳಿಸಿದನು. ಅನಂತರ ಪಾರ್ಥಿವ ಮಹೀಪತಿಯು ಸರ್ವ ವರ್ಣದವರನ್ನೂ ಅನ್ನ-ಪಾನ-ರಸಗಳ ಪ್ರವಾಹದಲ್ಲಿ ತೇಲಿಸಿಬಿಟ್ಟನು. ವಸ್ತ್ರ-ರತ್ನಗಳ ರಾಶಿಗಳು ಅಲೆಗಳಂತೆಯೂ, ಮೃದಂಗದ ಸ್ವರಗಳು ಭೋರ್ಗರೆಯಂತೆಯೂ, ಗೋವು-ಅಶ್ವಗಳು ಮೊಸಳೆಗಳಂತೆಯೂ, ನಾರಿಯರು ರತ್ನಗಳಂತೆಯೂ, ಗ್ರಾಮ-ಅಗ್ರಹಾರಗಳು ದ್ವೀಪಗಳಂತೆಯೂ, ಮಣಿ-ಚಿನ್ನಗಳು ನೀರಿನಂತೆಯೂ ತುಂಬಿದ್ದ ಆ ಧೃತರಾಷ್ಟ್ರನ ದಯಾಸಾಗರದಲ್ಲಿ ಜಗತ್ತೇ ತೇಲುತ್ತಿತ್ತು. ಹೀಗೆ ಮಹರಾಜನು ತನ್ನ ಪುತ್ರ-ಪೌತ್ರರಿಗೂ, ಪಿತೃಗಳಿಗೂ ಹಾಗೆಯೇ ತನಗೂ ಮತ್ತು ಗಾಂಧಾರಿಗೂ ಔರ್ಧ್ವದೇಹಿಕ ಕರ್ಮಗಳನ್ನು ನೆರವೇರಿಸಿದನು. ಅನೇಕ ದಾನಗಳನ್ನು ಕೊಟ್ಟು ಆಯಾಸಗೊಂಡ ಆ ಕುರೂದ್ವಹನು ದಾನಯಜ್ಞವನ್ನು ಮುಗಿಸಿದನು. ಹೀಗೆ ಆ ರಾಜಾ ಕೌರವ್ಯನು ಬಹಳ ಅನ್ನ-ರಸ-ದಕ್ಷಿಣೆಗಳಿಂದ ಕೂಡಿದ್ದ, ನಟ-ನರ್ತಕರ ಕಲೆಗಳಿಂದ ಕೂಡಿದ್ದ ಆ ದಾನಮಹೋತ್ಸವವನ್ನು ನಡೆಸಿದನು. ರಾಜಾ

ಅಂಬಿಕಾಸುತನು ಈ ರೀತಿ ಹತ್ತುದಿನಗಳು ದಾನಗಳನ್ನಿತ್ತು ಪುತ್ರ-ಪೌತ್ರರ ಋಣಗಳಿಂದ ಮುಕ್ತನಾದನು.

## ಧೃತರಾಷ್ಟ್ರನ ವನಗಮನ

ಮರುದಿನ ಬೆಳಿಗ್ಗೆ ಅಂಬಿಕಾಸುತ ಧೃತರಾಷ್ಟ್ರನು ವನವಾಸಕ್ಕೆ ಹೊರಡಲು ಸಿದ್ಧನಾಗಿ ವೀರ ಪಾಂಡವರನ್ನು ಕರೆಯಿಸಿದನು. ಗಾಂಧಾರಿಯ ಸಹಿತನಾಗಿ ಆ ಧೀಮಂತನು ಯಥಾವಿಧಿಯಾಗಿ ಅವರನ್ನು ಅಭಿನಂದಿಸಿ, ವೇದಪಾರಗ ಬ್ರಾಹ್ಮಣರಿಂದ ಕಾರ್ತೀಕದ ಹುಣ್ಣಿಮೆಯಂದು ಇಷ್ಟಿಯನ್ನು ನೆರವೇರಿಸಿದನು. ಅಗ್ನಿಹೋತ್ರವನ್ನು ಮುಂದೆಮಾಡಿಕೊಂಡು, ವಲ್ಕಲ-ಜಿನವಸ್ತ್ರಗಳನ್ನು ಧರಿಸಿ, ಸೊಸೆಯರಿಂದ ಪರಿವೃತನಾಗಿ ರಾಜನು ತನ್ನ ಭವನದಿಂದ ಹೊರಟನು. ವಿಚಿತ್ರವೀರ್ಯನ ಮಗ ನೃಪತಿಯು ಹೊರಟ ಆ ಸಮಯದಲ್ಲಿ ಕೌರವ-ಪಾಂಡವರ ಸ್ತ್ರೀಯರ ಮತ್ತು ಕೌರವ ರಾಜ ವಂಶಜರ ಆರ್ತನಾದಗಳು ಎಲ್ಲ ಕಡೆಗಳಿಂದಲೂ ಕೇಳಿ ಬರುತ್ತಿದ್ದವು. ಅನಂತರ ನರೇಂದ್ರನು ಸುಮನೋಹರ ಅರಳಿನಿಂದಲೂ ವಿಚಿತ್ರ ಪುಷ್ಪಗಳಿಂದಲೂ ತನ್ನ ಅರಮನೆಯನ್ನು ಪೂಜಿಸಿ, ಸೇವಕವರ್ಗದ ಜನರೆಲ್ಲರನ್ನು ಸತ್ಕರಿಸಿ, ಎಲ್ಲವನ್ನೂ ಬಿಟ್ಟು ಹೊರಟನು. ಆಗ ರಾಜಾ

ಯುಧಿಷ್ಠಿರನು ಕೈಮುಗಿದು ನಡುಗುತ್ತಾ ಕಣ್ಣೀರಿನಿಂದ ಗಂಟಲು ಕಟ್ಟಿದವನಾಗಿ “ಮಹಾರಾಜ! ಎಲ್ಲಿಗೆ ಹೋಗುತ್ತಿರುವೆ?” ಎಂದು ಜೋರಾಗಿ ಕೂಗಿಕೊಳ್ಳುತ್ತಾ ಭೂಮಿಯ ಮೇಲೆ ಬಿದ್ದನು. ಆಗ ತೀವ್ರ ದುಃಖದಿಂದ ಪರಿತಪಿಸುತ್ತಿದ್ದ ಭಾರತಾಗ್ರ್ಯ ಅರ್ಜುನನು ಪುನಃ ಪುನಃ ನಿಟ್ಟುಸಿರು ಬಿಡುತ್ತಾ ಯುಧಿಷ್ಠಿರನಿಗೆ “ನೀನು ಹೀಗೆ ಅಧೀರನಾಗಬಾರದು!” ಎಂದು ಹೇಳುತ್ತಾ ತಾನೂ ಎದೆಗುಂದಿದನು. ವೃಕೋದರ, ಫಲ್ಗುನ, ವೀರ ಮಾದ್ರೀಪುತ್ರರು, ವಿದುರ, ಸಂಜಯ, ಯುಯುತ್ಸು, ಮತ್ತು ಧೌಮ್ಯನೊಡನೆ ವಿಪ್ರ ಗೌತಮ ಕೃಪರು ಬಾಷ್ಪಗದ್ಗದ ಕಂಠಗಳಿಂದ ಕೂಡಿದವರಾಗಿ ರಾಜನನ್ನು ಅನುಸರಿಸಿ ಹೋದರು. ಕುಂತಿಯು ಕಣ್ಣುಗಳನ್ನು ಕಟ್ಟಿಕೊಂಡಿದ್ದ ಗಾಂಧಾರಿಯ ಎಡತೋಳನ್ನು ತನ್ನ ಹೆಗಲ ಮೇಲೆ ಇಟ್ಟುಕೊಂಡು ಹೋಗುತ್ತಿದ್ದಳು. ರಾಜಾ ಧೃತರಾಷ್ಟ್ರನು ಗಾಂಧಾರಿಯ ಹೆಗಲಿನ ಮೇಲೆ ಕೈಯನ್ನಿಟ್ಟು ನಿಶ್ಚಿಂತನಾಗಿ ಹೋಗುತ್ತಿದ್ದನು. ಹಾಗೆಯೇ ದ್ರೌಪದೀ ಕೃಷ್ಣೆ, ಯಾದವೀ ಸುಭದ್ರೆ, ಮಗುವನ್ನೆತ್ತಿಕೊಂಡಿದ್ದ ಕೌರವೀ ಉತ್ತರೆ, ಚಿತ್ರಾಂಗದಾ ಮತ್ತು ಇತರ ಸ್ತ್ರೀಯರು ಎಲ್ಲರೂ ಒಟ್ಟಾಗಿ ರಾಜ ಧೃತರಾಷ್ಟ್ರನೊಡನೆ ಹೋಗುತ್ತಿದ್ದರು. ಆಗ ಅವರೆಲ್ಲರ ರೋದನವು ದುಃಖದಲ್ಲಿರುವ ಕಡಲಹದ್ದುಗಳ ಕೂಗಿನಂತೆ ಕೇಳಿಬರುತ್ತಿತ್ತು. ಅದನ್ನು ಕೇಳಿ ಬ್ರಾಹ್ಮಣ-

ಕ್ಷತ್ರಿಯ-ವೈಶ್ಯ-ಶೂದ್ರ ನಾರಿಯರು ಅಲ್ಲಿಗೆ ಎಲ್ಲಕಡೆಗಳಿಂದ ಬಂದು ಸೇರಿದರು. ಹಿಂದೆ ದ್ಯೂತದ ಸಮಯದಲ್ಲಿ ಕೌರವರ ಸಭೆಯಿಂದ ಪಾಂಡವರು ಹೊರಟಿದ್ದಾಗ ಹೇಗೋ ಹಾಗೆ ಧೃತರಾಷ್ಟ್ರನು ಹೊರಡುವಾಗಲೂ ಕೂಡ ಹಸ್ತಿನಾಪುರದ ಪೌರವರ್ಗವು ಅತೀವ ದುಃಖಿತಗೊಂಡಿತ್ತು. ಯಾವ ರಮಣೀಯರು ಸೂರ್ಯ-ಚಂದ್ರರನ್ನು ನೋಡಲೂ ಕೂಡ ಹೊರಗೆ ಬರುತ್ತಿರಲಿಲ್ಲವೋ ಅಂಥವರೆಲ್ಲರೂ ಕೌರವೇಂದ್ರನು ಮಹಾವನಕ್ಕೆ ಹೊರಡುವಾಗ ಶೋಕಾರ್ತರಾಗಿ ರಾಜಬೀದಿಗೆ ಬಂದರು.

## ಕುಂತೀವಾಕ್ಯ

ಆಗ ಪ್ರಾಸಾದಗಳಿಂದಲೂ ಉಪ್ಪರಿಗೆಗಳಿಂದಲೂ ಸ್ತ್ರೀ-ಪುರುಷರ ಮಹಾರೋದನವು ಕೇಳಿಬರುತ್ತಿತ್ತು. ಆ ಧೀಮಾನ್ ರಾಜನು ನರ-ನಾರಿಯರ ಗುಂಪಿನ ಮಧ್ಯದಲ್ಲಿ ಕೈಮುಗಿದುಕೊಂಡು ನಡುಗುತ್ತಾ ಕಷ್ಟದಿಂದ ಮುಂದೆ ಸಾಗುತ್ತಿದ್ದನು. ವರ್ಧಮಾನದ್ವಾರದ ಮೂಲಕ ಹಸ್ತಿನಾಪುರದ ಹೊರ ಹೊರಟು ಅವನು ಆ ಜನಸಮೂಹವನ್ನು ತನ್ನ ಹಿಂದೆ ಬರಬಾರದಂತೆ ಮತ್ತೆ ಮತ್ತೆ ತಡೆಯುತ್ತಿದ್ದನು. ವಿದುರನೂ ಗಾವಲ್ಗಣಿ ಮಹಾಮಂತ್ರಿ ಸೂತ ಸಂಜಯನೂ ರಾಜನ ಜೊತೆಯಲ್ಲಿ

ಹೋಗಲು ನಿಶ್ಚಯಿಸಿದರು. ಮಹೀಪಾಲ ಧೃತರಾಷ್ಟ್ರನು ಕೃಪ ಮತ್ತು ಮಹಾರಥ ಯುಯುತ್ಸುವನ್ನು ಹಿಂದಿರುಗುವಂತೆ ಮಾಡಿ ಯುಧಿಷ್ಠಿರನಿಗೆ ಒಪ್ಪಿಸಿದನು. ಪುರಜನರು ಹಿಂದಿರುಗಿದ ನಂತರ ರಾಜಾ ಯುಧಿಷ್ಠಿರನು ಅಂತಃಪುರದ ಸ್ತ್ರೀಯರು ಹಿಂದಿರುಗಲು ಧೃತರಾಷ್ಟ್ರನ ಅನುಮತಿಯನ್ನು ಕೇಳಿದನು. ಅವನು ತಾಯಿ ಕುಂತಿಯ ಬಳಿಸಾರಿ

> "ನಾನು ರಾಜನನ್ನು ಇನ್ನೂ ಸ್ವಲ್ಪ ದೂರ ಅನುಸರಿಸಿ ಹೋಗುತ್ತೇನೆ. ನೀನು ಹಿಂದಿರುಗಬೇಕು. ರಾಣಿಯೇ! ಸೊಸೆಯರೊಂದಿಗೆ ನೀನು ನಗರಕ್ಕೆ ಹಿಂದಿರುಗಬೇಕು. ಧರ್ಮಾತ್ಮ ಧೃತರಾಷ್ಟ್ರನು ತಪಸ್ಸಿನ ನಿಶ್ಚಯವನ್ನು ಮಾಡಿಕೊಂಡು ಹೋಗುತ್ತಿದ್ದಾನೆ."

ಧರ್ಮರಾಜನು ಹೀಗೆ ಹೇಳಲು ಕಂಬನಿದುಂಬಿದ ಕಣ್ಣುಗಳಿಂದ ವ್ಯಾಕುಲಳಾಗಿ ಕುಂತಿಯು ಗಾಂಧಾರಿಯನ್ನು ಹಿಡಿದುಕೊಂಡು ಮುಂದುವರೆಯುತ್ತಲೇ ಇದ್ದಳು.

> "ಮಹಾರಾಜ! ಸಹದೇವನ ವಿಷಯದಲ್ಲಿ ನೀನು ಎಂದೂ ಅಪ್ರಸನ್ನನಾಗಬೇಡ! ಇವನು ನನ್ನಲ್ಲಿ ಮತ್ತು ನಿನ್ನಲ್ಲಿ ನಿತ್ಯವೂ ಅನುರಕ್ತನಾಗಿರುವವನು. ಯುದ್ಧದಿಂದ ಎಂದೂ

ಪಲಾಯನಮಾಡದೇ ಇದ್ದ ಕರ್ಣನನ್ನು ಸತತವೂ ಸ್ಮರಿಸಿಕೊಳ್ಳುತ್ತಿರು. ನನ್ನ ದುಷ್ಪ್ರಜ್ಞೆಯಿಂದಾಗಿ ಆ ವೀರನು ಯುದ್ಧದಲ್ಲಿ ಮಡಿದನು. ಸೂರ್ಯಪುತ್ರ ಕರ್ಣನನ್ನು ನೋಡದೆಯೂ ನನ್ನ ಹೃದಯವು ನೂರು ಚೂರುಗಳಾಗಿ ಒಡೆಯುತ್ತಿಲ್ಲವೆಂದರೆ ನನ್ನ ಈ ಹೃದಯವು ಉಕ್ಕಿನದೇ ಆಗಿರಬೇಕು! ಎಲ್ಲವೂ ಹೀಗೆಯೇ ಆಗಬೇಕೆಂದಿದ್ದಾಗ ನಾನೇನು ಮಾಡಲು ಶಕ್ಯವಿದೆ? ಸೂರ್ಯಜನನ್ನು ಮೊದಲು ನಿಮಗೆ ಪರಿಚಯಮಾಡಿಸಿಕೊಡದೇ ಇದ್ದುದು ನನ್ನ ದೋಷವೇ ಸರಿ! ನಿನ್ನ ತಮ್ಮಂದಿರೊಡನೆ ನಿನ್ನ ಅಗ್ರಜನಿಗಾಗಿ ಸದಾ ದಾನಗಳನ್ನು ನೀಡುತ್ತಿರು! ದ್ರೌಪದಿಯ ವಿಷಯದಲ್ಲಿಯೂ ನೀನು ನಿತ್ಯವೂ ಪ್ರಿಯವಾದುದನ್ನೇ ಮಾಡುತ್ತಿರಬೇಕು. ಭೀಮಾರ್ಜುನರನ್ನೂ ನಕುಲನನ್ನೂ ಚೆನ್ನಾಗಿ ನೋಡಿಕೊಳ್ಳುತ್ತಿರಬೇಕು. ಇಂದಿನಿಂದ ಕುರುವಂಶದ ಪಾಲನೆಯ ಭಾರವು ಸಂಪೂರ್ಣವಾಗಿ ನಿನ್ನ ಮೇಲೆಯೇ ಬಿದ್ದಿದೆ. ನಾನಾದರೋ ವನದಲ್ಲಿ ಅತ್ತೆ-ಮಾವಂದಿರ ಸೇವೆಯನ್ನು ಮಾಡಿಕೊಂಡಿರುತ್ತೇನೆ. ಗಾಂಧಾರಿಯ ಸಹಿತ ಕೊಳಕು-ಧೂಳುಗಳಿಂದ ತುಂಬಿದ ತಾಪಸಿಯಂತೆ

ವಾಸಿಸುತ್ತೇನೆ.”

ಅವಳು ಹೀಗೆ ಹೇಳಲು ಯುಧಿಷ್ಠಿರನು ಸಹೋದರರೊಡನೆ ತೀವ್ರ ದುಃಖಿತನಾದನು ಮತ್ತು ಸ್ವಲ್ಪ ಹೊತ್ತು ಅವನ ಬಾಯಿಂದ ಮಾತುಗಳೇ ಹೊರಬರಲಿಲ್ಲ. ಒಂದು ಮುಹೂರ್ತಕಾಲ ಯೋಚಿಸಿ ಯುಧಿಷ್ಠಿರನು ದೀನ-ಚಿಂತಾ-ಶೋಕಪರಾಯಣನಾಗಿ ತಾಯಿಗೆ ಹೇಳಿದನು:

“ನೀನೇಕೆ ಹೀಗೆ ವರ್ತಿಸುತ್ತಿರುವೆ? ಹೀಗೆ ನೀನು ಮಾತನಾಡಬಾರದು. ನಿನಗೆ ನಾನು ಅನುಮತಿಯನ್ನು ಕೊಡುವುದಿಲ್ಲ. ಪ್ರಸನ್ನಳಾಗಬೇಕು. ಹಿಂದೆ ವಿದುಲೆಯ ಮಾತುಗಳನ್ನು ಉದಾಹರಿಸಿ ನಮ್ಮಲ್ಲಿ ಉತ್ಸಾಹವನ್ನು ತುಂಬಿದ್ದೆ. ಇಂದು ನಮ್ಮನ್ನು ತ್ಯಜಿಸುವುದು ಸರಿಯಲ್ಲ! ನರರ್ಷಭ ವಾಸುದೇವನ ಮೂಲಕ ನಮಗೆ ಹೇಳಿ ಕಳುಕಳುಹಿಸಿದ ನಿನ್ನ ಬುದ್ಧಿಯಂತೆಯೇ ನಾನು ಪೃಥಿವೀಪಾಲರನ್ನು ಸಂಹರಿಸಿ ಈ ರಾಜ್ಯವನ್ನು ಪಡೆದುಕೊಂಡೆನು. ಅಂದು ನಿನಗಿದ್ದ ಬುದ್ಧಿಯೂ ಮತ್ತು ನನಗೆ ಹೇಳಿದ ಮಾತುಗಳೂ ಇಂದು ಎಲ್ಲಿಗೆ ಹೋದವು? ಕ್ಷತ್ರಧರ್ಮದಲ್ಲಿಯೇ ಇರುವಂತೆ ನಮಗೆ ಹೇಳಿ ಈಗ ನೀನು

ಕ್ಷತ್ರಧರ್ಮದಿಂದ ಜಾರಿಕೊಳ್ಳಲು ಬಯಸುತ್ತಿರುವೆಯಲ್ಲ! ನಮ್ಮನ್ನೂ, ರಾಜ್ಯವನ್ನೂ, ಈ ನಿನ್ನ ಯಶಸ್ವಿನೀ ಸೊಸೆಯನ್ನೂ ತೊರೆದು ಶೂನ್ಯ ವನದಲ್ಲಿ ನೀನು ಹೇಗೆ ತಾನೇ ವಾಸಿಸುವೆ? ಅಮ್ಮಾ! ನಮ್ಮ ಮೇಲೆ ಕರುಣೆ ತೋರು!"

ಹೀಗೆ ಮಗನ ಆ ಬಾಷ್ಪಗದ್ಗದ ಮಾತನ್ನು ಕೇಳುತ್ತಲೂ ಕಣ್ಣೀರುತುಂಬಿದ ಕುಂತಿಯು ಮುಂದೆ ಸಾಗುತ್ತಲೇ ಇದ್ದಳು. ಆಗ ಅವಳಿಗೆ ಭೀಮನು ಹೇಳಿದನು:

"ಕುಂತಿ! ಪುತ್ರರು ಜಯಿಸಿದ ಈ ರಾಜ್ಯವನ್ನು ನೀನು ಭೋಗಿಸಬೇಕು. ರಾಜಧರ್ಮವನ್ನು ಪಾಲಿಸುವ ಕಾಲವು ಒದಗಿರುವಾಗ ನಿನಗೆ ಎಲ್ಲಿಂದ ಈ ಬುದ್ಧಿಯು ಬಂದಿತು? ಮೊದಲು ನಮ್ಮಿಂದ ನೀನು ಏಕೆ ಈ ಭೂಮಿಕ್ಷಯವನ್ನು ಮಾಡಿಸಿದೆ? ಯಾವ ಕಾರಣಕ್ಕಾಗಿ ನೀನು ನಮ್ಮನ್ನು ಪರಿತ್ಯಜಿಸಿ ವನಕ್ಕೆ ಹೋಗಲು ಇಚ್ಛಿಸಿರುವೆ? ವನವಾಸವೇ ನಿನಗೆ ಇಷ್ಟವಾಗಿದ್ದಿದ್ದರೆ ಬಾಲಕರಾಗಿದ್ದ ನಮ್ಮನ್ನೂ ಮತ್ತು ದುಃಖಶೋಕಸಮಾವಿಷ್ಟರಾಗಿದ್ದ ಮಾದ್ರೀಪುತ್ರರನ್ನೂ ನೀನು ವನದಿಂದ ನಗರಕ್ಕೆ ಏಕೆ ಕರೆದುಕೊಂಡು ಬಂದೆ? ಪ್ರಸನ್ನಳಾಗು! ನೀನು ಇಂದು ವನಕ್ಕೆ ಹೋಗಬೇಡ!

ಯುಧಿಷ್ಠಿರ ಮತ್ತು ಪಾರ್ಥನ ಬಲದಿಂದ ಗೆಲ್ಲಲ್ಪಟ್ಟಿರುವ ಈ ಸಂಪತ್ತನ್ನು ಭೋಗಿಸು!"

ವನವಾಸದ ಕುರಿತು ದೃಢವಾಗಿ ನಿಶ್ಚಯಿಸಿದ್ದ ಅವಳು ಪುತ್ರರು ಬಹುವಿಧದಲ್ಲಿ ವಿಲಪಿಸುತ್ತಿದ್ದರೂ ಅವರ ಮಾತಿನಂತೆ ಮಾಡಲಿಲ್ಲ. ವನವಾಸಕ್ಕೆ ಹೋಗುತ್ತಿರುವ ಅತ್ತೆಯ ಹಿಂದೆ ವಿಷಣ್ಣವದನಳಾದ ದ್ರೌಪದಿಯೂ ಸುಭದ್ರೆಯೊಡನೆ ರೋದಿಸುತ್ತಾ ಹೋಗುತ್ತಲೇ ಇದ್ದಳು. ರೋದಿಸುತ್ತಿದ್ದ ತನ್ನ ಎಲ್ಲ ಮಕ್ಕಳನ್ನೂ ಪುನಃ ಪುನಃ ನೋಡುತ್ತಿದ್ದರೂ ಆ ಮಹಾಪ್ರಾಜ್ಞೆ ಕುಂತಿಯು ವನವಾಸದ ದೃಢನಿಶ್ಚಯವನ್ನು ಮಾಡಿದವಳಾಗಿ ಮುಂದೆ ಮುಂದೆ ಸಾಗುತ್ತಲೇ ಇದ್ದಳು. ಪಾಂಡವರಾದರೋ ಅಂತಃಪುರದ ಸ್ತ್ರೀಯರು ಮತ್ತು ಸೇವಕರೊಂದಿಗೆ ಅವಳನ್ನು ಹಿಂಬಾಲಿಸುತ್ತಲೇ ಇದ್ದರು. ಆಗ ಕುಂತಿಯು ಕಣ್ಣೀರನ್ನು ಒರೆಸಿಕೊಳ್ಳುತ್ತಾ ಮಕ್ಕಳಿಗೆ ಈ ಮಾತುಗಳನ್ನಾಡಿದಳು:

"ನೃಪ! ಮಹಾಬಾಹೋ! ನೀನು ಹೇಳಿದುದು ಸರಿಯಾಗಿಯೇ ಇದೆ! ಹಿಂದೆ ನೀವು ಎದೆಗುಂದಿದ್ದಾಗ ನಾನು ನಿಮ್ಮನ್ನು ಯುದ್ಧಕ್ಕೆ ಪ್ರೋತ್ಸಾಹಿಸಿದ್ದೆನು. ದ್ಯೂತದಿಂದ ರಾಜ್ಯ-ಸುಖಗಳನ್ನು ಅಪಹರಿಸಲ್ಪಟ್ಟು ನೀವು ಜ್ಞಾತಿಬಾಂಧವರಿಂದಲೂ ತಿರಸ್ಕೃತರಾಗಿದ್ದಾಗ ನಾನು

ನಿಮ್ಮನ್ನು ಯುದ್ಧಕ್ಕೆ ಪ್ರೋತ್ಸಾಹಿಸಿದ್ದೆನು. ಪಾಂಡುವಿನ ಸಂತತಿಯು ನಾಶವಾಗದೇ ಇರುವುದು ಮತ್ತು ನಿಮ್ಮ ಯಶಸ್ಸು ಕುಂದದೇ ಇರುವುದು ಹೇಗೆ ಎಂದು ಯೋಚಿಸಿ ನಾವು ನಿಮ್ಮನ್ನು ಪ್ರೋತ್ಸಾಹಿಸಿದೆನು. ನೀವೆಲ್ಲರೂ ಇಂದ್ರನ ಸಮನಾದವರು. ಪರಾಕ್ರಮದಲ್ಲಿ ದೇವತೆಗಳ ಸಮಾನರು. ನೀವು ಜೀವಿಕೆಗಾಗಿ ಇನ್ನೊಬ್ಬರ ಮುಖನೋಡಬಾರದು ಎಂದು ನಾನು ಹಾಗೆ ಮಾಡಿದೆನು. ಧರ್ಮಭೃತರಲ್ಲಿ ಶ್ರೇಷ್ಠನಾದ ಮತ್ತು ಇಂದ್ರನ ಸಮನಾಗಿರುವ ನೀನು ಹೇಗೆ ಪುನಃ ವನದಲ್ಲಿ ದುಃಖಿಯಾಗಿರುವೆ ಎಂದು ನಾನು ನಿಮ್ಮನ್ನು ಪ್ರೋತ್ಸಾಹಿಸಿದೆನು. ಸಾವಿರ ಆನೆಗಳ ಬಲವುಳ್ಳ, ವಿಕ್ರಮ-ಪೌರುಷಗಳಲ್ಲಿ ಖ್ಯಾತನಾದ ಈ ಭೀಮನು ನಾಶನಾಗಬಾರದೆಂದು ನಾನು ನಿಮ್ಮನ್ನು ಪ್ರೋತ್ಸಾಹಿಸಿದೆನು. ಹಾಗೆಯೇ ಭೀಮಸೇನನ ಅನುಜನಾದ, ವಾಸವನಂತಿರುವ ಈ ವಿಜಯ ಅರ್ಜುನನೂ ಎದೆಗುಂದಬಾರದೆಂದು ನಾನು ಪ್ರೋತ್ಸಾಹಿಸಿದೆನು. ಗುರುಸೇವೆಯನ್ನೇ ಮಾಡಿಕೊಂಡುಬಂದಿರುವ ಈ ನಕುಲ-ಸಹದೇವರೂ ಕೂಡ ಹಸಿವೆಯಿಂದ ಎದೆಗುಂದಬಾರದೆಂದು ನಾನು ನಿಮ್ಮನ್ನು

ಪ್ರೋತ್ಸಾಹಿಸಿದೆನು. ಎತ್ತರ ದೇಹವುಳ್ಳ ಈ ಶ್ಯಾಮಲವರ್ಣೆ, ಆಯತಲೋಚನೆ ಶ್ರೀಮತಿ ದ್ರೌಪದಿಯು ಪುನಃ ಸಭಾತಲದಲ್ಲಿ ವೃಥಾ ಕಷ್ಟವನ್ನನುಭವಿಸಬಾರದೆಂದು ನಾನು ಹಾಗೆ ಮಾಡಿದೆನು. ನೀವೆಲ್ಲರೂ ನೋಡುತ್ತಿದ್ದಂತೆಯೇ ಬಾಳೆಯ ಮರದಂತೆ ತರತರನೆ ನಡುಗುತ್ತಿದ್ದ ರಜಸ್ವಲೆಯಾಗಿದ್ದ ಶುಭಲಕ್ಷಣಯುಕ್ತಳಾಗಿದ್ದ, ದ್ಯೂತದಲ್ಲಿ ಪಣವಾಗಿಡಲ್ಪಟ್ಟು ಪರಾಜಿತಳಾಗಿದ್ದ ದ್ರೌಪದಿಯನ್ನು ಯಾವಾಗ ದುಃಶಾಸನನು ಮೌಢ್ಯದಿಂದ ದಾಸಿಯಂತೆ ತುಂಬಿದ ಸಭೆಗೆ ಎಳೆದು ತಂದನೋ – ಆಗಲೇ ನನಗೆ ಈ ವಂಶವು ವಿನಾಶವಾಗುವುದೆಂದು ತಿಳಿದಿತ್ತು. ನನ್ನ ಮಾವನೇ ಮೊದಲಾದ ಕುರುಗಳು ಅಲ್ಲಿ ಉಪಸ್ಥಿತರಿದ್ದರು. ಆದರೆ ಅವರ್ಯಾರೂ ಅವಳ ರಕ್ಷಣೆಗೆ ಬರದಿದ್ದಾಗ ಅವಳು ಹೆಣ್ಣು ಕಡಲಹದ್ದಿನಂತೆ ಗೋಳಾಡುತ್ತಿದ್ದಳು. ಬುದ್ಧಿಗೆಟ್ಟಿದ್ದ ಪಾಪಿಷ್ಠ ದುಃಶಾಸನನು ಯಾವಾಗ ಅವಳ ತಲೆಗೂದಲನ್ನು ಹಿಡಿದು ಎಳೆದು ತಂದನೋ ಆಗ ನಾನು ದುಃಖದಿಂದ ಮೂರ್ಛಿತಳಾಗಿದ್ದೆ! ನಿಮ್ಮ ತೇಜಸ್ಸನ್ನು ವೃದ್ಧಿಗೊಳಿಸಲು ನಾನು ವಿದುಲೆಯ ವಾಕ್ಯಗಳ ಮೂಲಕ ನಿಮ್ಮನ್ನು ಯುದ್ಧಕ್ಕೆ

ಪ್ರೋತ್ಸಾಹಿಸಿದೆನು. ಮಕ್ಕಳೇ! ಇದನ್ನು ಅರ್ಥಮಾಡಿಕೊಳ್ಳಿ! ನಿಮ್ಮಂಥಹ ಮಕ್ಕಳನ್ನು ಪಡೆದೂ ಪಾಂಡುವಿನ ಈ ರಾಜವಂಶವು ನಾಶವಾಗಬಾರದೆಂದು ನಾನು ನಿಮ್ಮನ್ನು ಯುದ್ಧಕ್ಕೆ ಪ್ರೋತ್ಸಾಹಿಸಿದೆನು. ಯಾರಿಂದ ವಂಶವು ನಾಶವಾಗುವುದೋ ಅವನ ಪುತ್ರ-ಪೌತ್ರರು ಯಾರೂ ಪುಣ್ಯಲೋಕಗಳನ್ನು ಹೊಂದುವುದಿಲ್ಲ. ಹಿಂದೆ ನಾನು ನನ್ನ ಪತಿಯ ರಾಜ್ಯಫಲವನ್ನು ವಿಪುಲವಾಗಿ ಭೋಗಿಸಿದ್ದೇನೆ. ಯಥಾವಿಧಿಯಾಗಿ ಮಹಾದಾನಗಳನ್ನು ನೀಡಿದ್ದೇನೆ ಮತ್ತು ಸೋಮವನ್ನೂ ಕುಡಿದಿದ್ದೇನೆ. ನಾನು ನನ್ನ ಸ್ವಾರ್ಥಫಲಕ್ಕಾಗಿ ವಾಸುದೇವನ ಮೂಲಕ ವಿದುಲೆಯ ಆ ಪ್ರಲಾಪದ ಮಾತುಗಳನ್ನು ಹೇಳಿ ಕಳುಹಿಸಿರಲಿಲ್ಲ. ನಿಮ್ಮನ್ನು ಆ ಕಷ್ಟದಿಂದ ಪಾರುಮಾಡುವುದಕ್ಕಾಗಿಯೇ ಹಾಗೆ ಮಾಡಿದೆನು. ನಾನು ಮಕ್ಕಳು ಗೆದ್ದ ರಾಜ್ಯಫಲವನ್ನು ಬಯಸುವುದಿಲ್ಲ. ತಪಸ್ಸಿನ ಮೂಲಕ ನಾನು ನನ್ನ ಪತಿಯು ಸೇರಿದ ಪುಣ್ಯಲೋಕಗಳನ್ನು ಬಯಸುತ್ತೇನೆ. ವನವಾಸೀ ಅತ್ತೆ-ಮಾವಂದಿರ ಶುಶ್ರೂಷೆಯನ್ನು ಮಾಡುತ್ತಾ ತಪಸ್ಸಿನಿಂದ ನನ್ನ ಈ ಶರೀರವನ್ನು ಶೋಷಿಸುತ್ತೇನೆ. ಭೀಮಸೇನಾದಿಗಳೊಂದಿಗೆ

ಹಿಂದಿರುಗು! ನಿನ್ನ ಬುದ್ಧಿಯು ಯಾವಾಗಲೂ ಧರ್ಮದಲ್ಲಿಯೇ ಸ್ಥಿರವಾಗಿರಲಿ ಮತ್ತು ನಿನ್ನ ಮನಸ್ಸೂ ವಿಶಾಲವಾಗಿರಲಿ!”

ಕುಂತಿಯ ಆ ಮಾತನ್ನು ಕೇಳಿ ರಾಜಸತ್ತಮ ಪಾಂಡವನು ನಾಚಿಕೆಗೊಂಡು ಪಾಂಚಾಲೀ ಮತ್ತು ಅನಘ ತಮ್ಮಂದಿರೊಡನೆ ಹಿಂದಿರುಗಿದನು. ಹಾಗೆ ಕುಂತಿಯು ಹೊರಟಾಗ ಅಂತಃಪುರದ ಸ್ತ್ರೀಯರೆಲ್ಲರ ಗಟ್ಟಿ ರೋದನವು ಕೇಳಿಬಂದಿತು. ಆಗ ಪಾಂಡವರು ರಾಜನಿಗೆ ಪ್ರದಕ್ಷಿಣೆ ಮಾಡಿ ನಮಸ್ಕರಿಸಿ ಹಿಂದಿರುಗಿದರು. ಪೃಥೆಯು ಮಾತ್ರ ಹಿಂದಿರುಗಲಿಲ್ಲ. ಆಗ ಮಹಾರಾಜ ಅಂಬಿಕಾಸುತ ಧೃತರಾಷ್ಟ್ರನು ಗಾಂಧಾರೀ ಮತ್ತು ವಿದುರರ ಕೈಹಿಡಿದು ಹೇಳಿದನು:

“ಯುಧಿಷ್ಠಿರನ ಜನನಿ ದೇವೀ ಸಾಧ್ವಿಯು ಹಿಂದಿರುಗಲಿ. ಯುಧಿಷ್ಠಿರನು ಹೇಳಿದುದೆಲ್ಲವೂ ಸತ್ಯವೇ ಸರಿ! ಮಹಾಫಲವುಳ್ಳ ಈ ಮಹಾ ಪುತ್ರೈಶ್ವರ್ಯ ಮತ್ತು ಪುತ್ರರನ್ನು ತೊರೆದು ಮೂಢರಂತೆ ಯಾರು ತಾನೇ ದುರ್ಗಮ ವನಕ್ಕೆ ತೆರಳುತ್ತಾರೆ? ರಾಜ್ಯದಲ್ಲಿದ್ದುಕೊಂಡೇ ತಪಸ್ಸನ್ನು ತಪಿಸಬಹುದು, ದಾನಗಳನ್ನು ನೀಡಬಹುದು ಮತ್ತು ವ್ರತಗಳನ್ನು ಆಚರಿಸಲು ಇವಳಿಗೆ ಶಕ್ಯವಾಗುತ್ತದೆ. ನನ್ನ ಮಾತನ್ನು ಕೇಳಿರಿ. ಗಾಂಧಾರೀ! ಸೊಸೆ ಕುಂತಿಯ

ಶುಶ್ರೂಷಣೆಯಿಂದ ನಾನು ಪರಿತುಷ್ಟನಾಗಿದ್ದೇನೆ.
ಆದುದರಿಂದ ನೀನು ಅವಳಿಗೆ ಹಿಂದಿರುಗಲು
ಅನುಮತಿಯನ್ನು ನೀಡಬೇಕು!"

ಇದನ್ನು ಕೇಳಿ ಸೌಬಲೇಯಿಯು ರಾಜನ ಮಾತನ್ನು ಕುಂತಿಗೆ ಹೇಳಿದಳು. ರಾಜನ ಮಾತುಗಳೆಲ್ಲವನ್ನು ಮಾತ್ರವಲ್ಲದೇ ವಿಶೇಷವಾಗಿ ತನ್ನ ಮಾತನ್ನೂ ಅವಳಿಗೆ ತಿಳಿಸಿದಳು. ಆದರೆ ವನವಾಸದ ದೃಢನಿಶ್ಚಯವನ್ನು ಮಾಡಿದ್ದ ಆ ದೇವೀ ಧರ್ಮಪರ ಸತಿ ಕುಂತಿಯನ್ನು ಹಿಂದಿರುಗುವಂತೆ ಮಾಡಲು ಅವಳಿಗೂ ಶಕ್ಯವಾಗಲಿಲ್ಲ. ಅವಳ ನಿಶ್ಚಯವು ಸ್ಥಿರವಾಗಿರುವುದನ್ನು ತಿಳಿದು ಕುರುಶ್ರೇಷ್ಠರು ನಿರಾಶರಾಗಿ ಹಿಂದಿರುಗುತ್ತಿರುವುದನ್ನು ನೋಡಿ ಕುರುಸ್ತ್ರೀಯರು ರೋದಿಸಿದರು. ಸರ್ವ ಪಾರ್ಥರೂ ಮತ್ತು ಅಂತಃಪುರದವರೂ ಹಿಂದಿರುಗಿದ ನಂತರ ಮಹಾಪ್ರಾಜ್ಞ ರಾಜಾ ಧೃತರಾಷ್ಟ್ರನು ವನಕ್ಕೆ ಹೋದನು. ಪಾಂಡವರೂ ಕೂಡ ದುಃಖಶೋಕಪರಾಯಣರಾಗಿ ದೀನರಾಗಿ ಸ್ತ್ರೀಗಳೆಲ್ಲರ ಸಹಿತ ಯಾನಗಳಲ್ಲಿ ಪುರವನ್ನು ಪ್ರವೇಶಿಸಿದರು. ಹಸ್ತಿನಾಪುರ ನಗರದ ಸ್ತ್ರೀ-ವೃದ್ಧ-ಕುಮಾರಕರೆಲ್ಲರಿಗೂ ಹರ್ಷವೇ ಇಲ್ಲದಂತಾಯಿತು. ಉತ್ಸವಾದಿಗಳು ನಡೆಯಲಿಲ್ಲ. ಎಲ್ಲರೂ ನಿರುತ್ಸಾಹರಾಗಿದ್ದರು. ಕುಂತಿಯಿಲ್ಲದೇ ಪಾಂಡವರು ಹಸುವಿಲ್ಲದ ಕರುಗಳಂತೆ ಅತ್ಯಂತ



ದುಃಖಾರ್ತರಾಗಿದ್ದರು.

ಧೃತರಾಷ್ಟ್ರನಾದರೋ ಆ ದಿನ ಬಹಳ ದೂರ ನಡೆದು ಭಾಗೀರಥೀತೀರದಲ್ಲಿ ನಿವಾಸವನ್ನು ಮಾಡಿದನು. ಅಲ್ಲಲ್ಲಿ ಇದ್ದ ದ್ವಿಜಶ್ರೇಷ್ಠ ತಪೋಧನರು ಮತ್ತು ವೇದಪಾರಂಗತರು ಪ್ರತಿಷ್ಠಾಪಿಸಿದ್ದ ಅಗ್ನಿಗಳು ಪ್ರಕಾಶಮಾನವಾಗಿ ಕಾಣುತ್ತಿದ್ದವು. ವೃದ್ಧ ನರಾಧಿಪನು ಅಲ್ಲಿಯೇ ಅಗ್ನಿಯನ್ನು ಪ್ರತಿಷ್ಠಾಪಿಸಿದನು. ರಾಜನು ವಿಧಿವತ್ತಾಗಿ ಮೂರು ಅಗ್ನಿಗಳಲ್ಲಿ ಆಹುತಿಗಳನ್ನಿತ್ತು ಉಪಾಸನೆ ಮಾಡಿದನು. ಸಂಧ್ಯಾಗತ ಸಹಸ್ರಾಂಶು ಸೂರ್ಯನನ್ನೂ ಉಪಾಸಿಸಿದನು. ವಿದುರ ಮತ್ತು ಸಂಜಯರು ಕುಶಗಳಿಂದ ರಾಜನ ಹಾಸಿಗೆಯನ್ನೂ, ಕುರುವೀರನ ಹತ್ತಿರದಲ್ಲಿಯೇ ಗಾಂಧಾರಿಯ ಹಾಸಿಗೆಯನ್ನೂ ಮಾಡಿದರು. ಗಾಂಧಾರಿಯ ಪಕ್ಕದಲ್ಲಿಯೇ ಕುಶದ ಹಾಸಿಗೆಯ ಮೇಲೆ ಯುಧಿಷ್ಠಿರನ ಜನನಿ ಸಾಧುವ್ರತೇ ಕುಂತಿಯು ಮಲಗಿದಳು. ಅವರಿಗೆ ಕೇಳಿಸುವಷ್ಟು ದೂರದಲ್ಲಿಯೇ ವಿದುರಾದಿಗಳು, ಯಾಜಕರು, ಮತ್ತು ಅನುಯಾಯಿಗಳಾಗಿ ಬಂದ ದ್ವಿಜರು ಸ್ಥಳವಿದ್ದ ಹಾಗೆ ಮಲಗಿಕೊಂಡರು. ಸ್ವಾಧ್ಯಾಯದಲ್ಲಿ ನಿರತರಾಗಿದ ಬ್ರಾಹ್ಮಣರಿಂದ ಮತ್ತು ಪ್ರಜ್ವಲಿಸುತ್ತಿದ್ದ ಪಾವಕಗಳಿಂದ ಅ ರಜನಿಯು ಅವರಿಗೆ ಬ್ರಾಹ್ಮೀ ರಾತ್ರಿಯಂತೆ ಸಂತೋಷವನ್ನುಂಟು ಮಾಡಿತು.

ರಾತ್ರಿಯು ಕಳೆಯಲು ಪೂರ್ವಾಹ್ಣಿಕ ಕ್ರಿಯೆಗಳನ್ನು ಪೂರೈಸಿ ವಿಧಿವತ್ತಾಗಿ ಅಗ್ನಿಗಳಲ್ಲಿ ಹೋಮಮಾಡಿ, ಎಲ್ಲರೂ ಯಥಾಕ್ರಮವಾಗಿ ಪ್ರಯಾಣ ಬೆಳೆಸಿದರು. ಉಪವಾಸವ್ರತನಿಷ್ಠರಾಗಿದ್ದ ಅವರು ಉತ್ತರಾಭಿಮುಖವಾಗಿ ಹೊರಟರು. ಶೋಕ ಪಡುತ್ತಿದ್ದ ನಗರ-ಗ್ರಾಮೀಣ ಜನರನ್ನು ನೋಡಿ ಶೋಕಿಸುತ್ತಿದ್ದ ಅವರಿಗೆ ಆ ಮೊದಲನೆಯ ದಿನವು ಅತಿದುಃಖಕರವಾಗಿತ್ತು.

## ಧೃತರಾಷ್ಟ್ರಾದಿಗಳು ಶತಯೂಪನ ಆಶ್ರಮಕ್ಕೆ ತೆರಳಿದುದು

ಅನಂತರ ವಿದುರನ ಅಭಿಪ್ರಾಯದಂತೆ ರಾಜಾ ಧೃತರಾಷ್ಟ್ರನು ಭಾಗೀರಥೀ ತೀರದಲ್ಲಿ ಪುಣ್ಯಜನರಿಗೆ ಉಚಿತವಾದ ನಿವಾಸವನ್ನು ಮಾಡಿಸಿಕೊಂಡನು. ಅಲ್ಲಿಗೆ ಅನೇಕ ಬ್ರಾಹ್ಮಣ-ಕ್ಷತ್ರಿಯ-ವೈಶ್ಯ-ಶೂದ್ರ ರಾಷ್ಟ್ರವಾಸೀ ಗಣಗಳು ಬಂದು ಸೇರಿದವು. ಅವರಿಂದ ಪರಿವೃತನಾಗಿದ್ದ ರಾಜನು ಸಮಯೋಚಿತ ಮಾತುಕಥೆಗಳಿಂದ ಅವರನ್ನು ಅಭಿನಂದಿಸಿ, ವಿಧಿವತ್ತಾಗಿ ಪ್ರತಿಪೂಜೆಗೊಳಗೊಂಡು ಶಿಷ್ಯರೊಂದಿಗೆ ಅವರಿಗೆ ಅನುಮತಿಯನ್ನಿತ್ತನು.
ಸಾಯಂಕಾಲವಾಗುತ್ತಲೇ ಮಹೀಪಾಲ ಮತ್ತು ಯಶಸ್ವಿನೀ ಗಾಂಧಾರಿಯರು ಗಂಗೆಯಲ್ಲಿ ಇಳಿದು ವಿಧಿವತ್ತಾಗಿ ಸ್ನಾನಾದಿಗಳನ್ನು

ಮಾಡಿದರು. ಹಾಗೆಯೇ ವಿದುರಾದಿ ಅನ್ಯ ಪುರುಷರೂ ಪ್ರತ್ಯೇಕ ಪ್ರತ್ಯೇಕ ತೀರ್ಥಗಳಲ್ಲಿ ಮುಳುಗಿ ಸಂಧ್ಯಾಕ್ರಿಯೆಗಳನ್ನು ಪೂರೈಸಿದರು. ಶೌಚಗಳನ್ನು ಪೂರೈಸಿದ ವೃದ್ಧ ಮಾವ ಮತ್ತು ಗಾಂಧಾರಿಯರನ್ನು ಕುಂತಿಭೋಜನ ಮಗಳು ಪೃಥೆಯು ಗಂಗಾತೀರಕ್ಕೆ ಕರೆತಂದಳು. ಅಲ್ಲಿ ಯಾಜಕರು ಮಾಡಿದ್ದ ವೇದಿಯಲ್ಲಿ ರಾಜ ಸತ್ಯಸಂಗರ ನೃಪತಿಯು ಹೋಮಮಾಡಿದನು. ಅನಂತರ ಆ ಸಂಯತೇಂದ್ರಿಯ ನೃಪತಿಯು ನಿಯಮಬದ್ಧನಾಗಿದ್ದುಕೊಂಡು ಭಾಗೀರಥೀ ತೀರದಿಂದ ಕುರುಕ್ಷೇತ್ರಕ್ಕೆ ಹೋದನು. ಅಲ್ಲಿಗೆ ಹೋಗಿ ಧೀಮಾನ್ ಪಾರ್ಥಿವನು ಮನೀಷೀ ರಾಜರ್ಷಿ ಶತಯೂಪನ ಆಶ್ರಮವನ್ನು ತಲುಪಿದನು. ಆ ಪರಂತಪನು ಕೇಕಯರ ಮಹಾರಾಜನಾಗಿದ್ದನು. ಮಗನಿಗೆ ಮನುಜೈಶ್ವರ್ಯಗಳನ್ನು ಒಪ್ಪಿಸಿ ವನವನ್ನು ಪ್ರವೇಶಿಸಿದ್ದನು. ಅವನೊಡನೆ ರಾಜನು ವ್ಯಾಸನ ಆಶ್ರಮಕ್ಕೆ ಹೋದನು.

ಅಲ್ಲಿ ವ್ಯಾಸನು ಕುರೂದ್ವಹನನ್ನು ವಿಧಿವತ್ತಾಗಿ ಸ್ವಾಗತಿಸಿದನು. ರಾಜಾ ಕೌರವನಂದನನು ಅಲ್ಲಿ ದೀಕ್ಷೆಯನ್ನು ಪಡೆದು ಶತಯೂಪನ ಆಶ್ರಮದಲ್ಲಿ ನಿವಾಸ ಮಾಡಿದನು. ಆಗ ವ್ಯಾಸನ ಅನುಮತಿಯಂತೆ ಮಹಾಮತಿ ಶತಯೂಪನು ರಾಜನಿಗೆ ಆರಣ್ಯಕದ ಎಲ್ಲ ವಿಧಿಗಳನ್ನೂ ತಿಳಿಸಿದನು. ಹೀಗೆ ಮಹಾಮನಸ್ವಿ ರಾಜಾ ಧೃತರಾಷ್ಟ್ರನು ಅವುಗಳನ್ನು

ಅನುಚರಿಸುತ್ತಾ ತನ್ನನ್ನು ತಾನೇ ತಪಸ್ಸಿನಲ್ಲಿ ತೊಡಗಿಸಿಕೊಂಡನು. ಹಾಗೆಯೇ ವಲ್ಕಲ-ಜಿನವಸ್ತ್ರಗಳನ್ನು ಧರಿಸಿದ್ದ ದೇವೀ ಗಾಂಧಾರಿಯು ಕುಂತಿಯೊಡನೆ ಸಮಾನವ್ರತಗಳನ್ನು ಆಚರಿಸುತ್ತಿದ್ದಳು. ಕರ್ಮ-ಮನಸ್ಸು-ಮಾತು-ಕಣ್ಣುಗಳಿಂದ ಇಂದ್ರಿಯಗ್ರಾಮಗಳನ್ನು ನಿಗ್ರಹಿಸಿಕೊಂಡು ಅವರು ಪರಮ ತಪಸ್ಸಿನಲ್ಲಿ ನಿರತರಾಗಿದ್ದರು.

ಮಾಂಸಗಳು ಒಣಗಿ ಕೇವಲ ಅಸ್ಥಿಭೂತನಾಗಿ, ಜಟಾಧಾರಿಯಾಗಿ ವಲ್ಕಲ-ಜಿನವಸ್ತ್ರಗಳನ್ನು ಉಟ್ಟು ಮಹರ್ಷಿಗಳಂತೆಯೇ ತೀವ್ರ ತಪಸ್ಸನ್ನು ಮಾಡುತ್ತಿದ್ದ ಆ ಪಾರ್ಥಿವನು ದೋಷಗಳೆಲ್ಲವನ್ನೂ ಕಳೆದುಕೊಂಡನು. ಧರ್ಮಾರ್ಥಗಳನ್ನು ತಿಳಿದಿದ್ದ ಮಹಾಮತಿ ಘೋರತಪಸ್ವೀ ಜಿತಾತ್ಮ ವಿದುರನೂ ಕೂಡ ಕೃಶನಾಗಿ, ವಲ್ಕಲ-ಚೀರವಸ್ತ್ರಗಳನ್ನುಟ್ಟು, ಸಂಜಯನೊಡನೆ ನೃಪತಿ ಮತ್ತು ಅವನ ಪತ್ನಿಯ ಸೇವೆಯನ್ನು ಮಾಡುತ್ತಿದ್ದನು.

ಆಗ ಅಲ್ಲಿಗೆ ರಾಜನನ್ನು ಕಾಣಲು ಮುನಿಶ್ರೇಷ್ಠ ನಾರದ-ಪರ್ವತರೂ, ಮಹಾತಪಸ್ವೀ ದೇವಲನೂ, ಶಿಷ್ಯರೊಂದಿಗೆ ದ್ವೈಪಾಯನನೂ, ಅನ್ಯ ಮನೀಷೀ ಸಿದ್ಧರೂ, ಪರಮ ಧಾರ್ಮಿಕ ವೃದ್ಧ ರಾಜರ್ಷಿ ಶತಯೂಪನೂ ಆಗಮಿಸಿದರು. ಕುಂತಿಯು ಅವರನ್ನು ಯಥಾವಿಧಿಯಾಗಿ ಪೂಜಿಸಿದಳು. ಆ ತಾಪಸರೂ ಕೂಡು ಅವಳ

ಪರಿಚರ್ಯೆಯಿಂದ ತೃಪ್ತರಾದರು. ಅಲ್ಲಿ ಆ ಪರಮಋಷಿಗಳು ಧಾರ್ಮಿಕ ವಿಷಯಗಳ ಕುರಿತು ಮಾತನಾಡುತ್ತಾ ಮಹಾತ್ಮ ಜನಾಧಿಪ ಧೃತರಾಷ್ಟ್ರನನ್ನು ರಮಿಸುತ್ತಿದ್ದರು. ಆ ಮಾತುಕಥೆಯ ಮಧ್ಯದಲ್ಲಿ ಎಲ್ಲದರ ಪ್ರತ್ಯಕ್ಷದರ್ಶಿಯಾದ ದೇವರ್ಷಿ ನಾರದನು ಈ ಕಥೆಯನ್ನು ಹೇಳಲು ಉಪಕ್ರಮಿಸಿದನು:

"ಹಿಂದೆ ಶತಯೂಪನ ಪಿತಾಮಹ ಪ್ರಜಾಪತಿಯಂತಿದ್ದ ಮತ್ತು ಭಯವೇನೆಂಬುದನ್ನೇ ತಿಳಿಯದಿದ್ದ ಸಹಸ್ರಚಿತ್ಯ ಎಂಬ ಹೆಸರಿನ ರಾಜನಿದ್ದನು. ಧರ್ಮಾತ್ಮ ನೃಪ ಸಹಸ್ರಚಿತ್ಯನು ರಾಜ್ಯವನ್ನು ತನ್ನ ಪರಮಧಾರ್ಮಿಕ ಜ್ಯೇಷ್ಠ ಪುತ್ರನಿಗೆ ಒಪ್ಪಿಸಿ ವನವನ್ನು ಪ್ರವೇಶಿಸಿದನು. ಆ ಮಹಾಮನಸ್ವಿ ನರಾಧಿಪನು ದೀಪ್ತ ತಪಸ್ಸನ್ನು ಪೂರೈಸಿ ಪುರಂದರನ ಸಂಸ್ಥಾನವನ್ನು ಪಡೆದನು. ರಾಜನ್! ತಪಸ್ಸಿನಿಂದ ಪಾಪಗಳನ್ನು ಸುಟ್ಟ ಆ ರಾಜನನ್ನು ನಾನು ಈ ಮೊದಲು ಅನೇಕ ಬಾರಿ ಮಹೇಂದ್ರಸದನದಲ್ಲಿ ನೋಡಿದ್ದೇನೆ. ಹಾಗೆಯೇ ಭಗದತ್ತನ ಪಿತಾಮಹ ರಾಜಾ ಶೈಲಾಲಯ ನೃಪನು ತಪೋಬಲದಿಂದಲೇ ಮಹೇಂದ್ರಸದನಕ್ಕೆ ಹೋಗಿದ್ದಾನೆ. ಹಾಗೆಯೇ ವಜ್ರಧರನಿಗೆ ಸಮನಾಗಿದ್ದ ಪೃಷಧ್ರ ಎಂಬ ರಾಜ

ನೃಪನೂ ಕೂಡ ತಪಸ್ಸಿನಿಂದ ಸ್ವರ್ಗಲೋಕವನ್ನು ಪಡೆದನು. ಇದೇ ಅರಣ್ಯದಲ್ಲಿ ಮಾಂಧಾತನ ಮಗ ನೃಪ ಪುರುಕುತ್ಸನೂ ಕೂಡ ಮಹಾ ಸಿದ್ಧಿಯನ್ನು ಪಡೆದನು. ನದಿಗಳಲ್ಲಿ ಶ್ರೇಷ್ಠಳಾದ ನರ್ಮದೆಯು ಅವನ ಪತ್ನಿಯಾಗಿದ್ದಳು. ಆ ನೃಪತಿಯು ಇದೇ ಅರಣ್ಯದಲ್ಲಿ ತಪಸ್ಸನ್ನು ತಪಿಸಿ ಸ್ವರ್ಗಕ್ಕೆ ಹೋದನು. ಶಶಲೋಮ ಎಂಬ ಹೆಸರಿನ ಪರಮಧಾರ್ಮಿಕ ರಾಜನಿದ್ದನು. ಅವನೂ ಕೂಡ ಇದೇ ವನದಲ್ಲಿ ತಪಸ್ಸನ್ನು ತಪಿಸಿ ಸ್ವರ್ಗವನ್ನು ಪಡೆದುಕೊಂಡನು. ದ್ವೈಪಾಯನನ ಪ್ರಸಾದದಿಂದ ನೀನೂ ಕೂಡ ಈ ತಪೋವನಕ್ಕೆ ಬಂದಿರುವೆ. ನೀನು ಕಷ್ಟಕರ ಹೆಚ್ಚಿನ ಸಿದ್ಧಿಯನ್ನು ಪಡೆದು ಮೇಲೆ ಹೋಗುತ್ತೀಯೆ! ನೀನೂ ಕೂಡ ತಪಸ್ಸಿನ ಅಂತ್ಯದಲ್ಲಿ ಶ್ರೀಯಿಂದ ಆವೃತನಾಗಿ ಗಾಂಧಾರಿಯ ಸಹಿತ ಆ ಮಹಾತ್ಮರು ಹೋದ ಗತಿಯಲ್ಲಿಯೇ ಹೋಗುತ್ತೀಯೆ. ಬಲಹಂತು ಇಂದ್ರನ ಸಮೀಪದಲ್ಲಿರುವ ಪಾಂಡುವು ನಿತ್ಯವೂ ನಿನ್ನನ್ನು ಸ್ಮರಿಸಿಕೊಳ್ಳುತ್ತಾನೆ. ಮಹೀಪಾಲ! ಅವನು ಸದೈವ ನಿನಗೆ ಶ್ರೇಯಸ್ಸನ್ನುಂಟುಮಾಡಲು ನಿರತನಾಗಿದ್ದಾನೆ. ನಿನ್ನ ಸೊಸೆ ಯಶಸ್ವಿನೀ ಕುಂತಿಯು ನಿನ್ನ ಮತ್ತು ಗಾಂಧಾರಿಯರ

ಶುಶ್ರೂಷೆಯಿಂದಾಗಿ ತನ್ನ ಪತಿಯ ಲೋಕಕ್ಕೇ ಹೋಗುತ್ತಾಳೆ. ಯುಧಿಷ್ಠಿರನ ಜನನಿಯು ಅನುಸರಿಸುತ್ತಿರುವುದೇ ಸನಾತನ ಧರ್ಮವಾಗಿದೆ. ದಿವ್ಯದೃಷ್ಟಿಯಿಂದ ನಾನು ಇದನ್ನು ಕಂಡಿದ್ದೇನೆ. ವಿದುರನು ಮಹಾತ್ಮ ಯುಧಿಷ್ಠಿರನನ್ನು ಪ್ರವೇಶಿಸುವನು. ಧ್ಯಾನಮಾಡುತ್ತಿದ್ದಾಗ ಸಂಜಯನು ಪವಿತ್ರ ಸ್ವರ್ಗವನ್ನು ಪಡೆಯುತ್ತಾನೆ."

ಇದನ್ನು ಕೇಳಿ ಮಹಾತ್ಮಾ ಕೌರವೇಂದ್ರನು ಪತ್ನಿಯೊಡನೆ ಸುಪ್ರೀತನಾದನು. ನಾರದನ ವಾಕ್ಯವನ್ನು ಕೇಳಿ ವಿದ್ವಾನ್ ಧೃತರಾಷ್ಟ್ರನು ನಾರದನಿಗೆ ಅತುಲ ಪೂಜೆಯನ್ನೂ ಮಾಡಿದನು. ಹಾಗೆಯೇ ವಿಪ್ರಸಂಘಗಳೆಲ್ಲವೂ ನಾರದನನ್ನು ಅತೀವವಾಗಿ ಪೂಜಿಸಿದವು. ರಾಜ ಧೃತರಾಷ್ಟ್ರನು ಸಂತೋಷಗೊಂಡಿದ್ದುದನ್ನು ನೋಡಿ ಅವರೂ ಕೂಡ ಪುನಃ ಪುನಃ ನಾರದನನ್ನು ಶ್ಲಾಘಿಸಿದರು.

## ಶತಯೂಪಪ್ರಶ್ನ

ನಾರದನ ಆ ಮಾತನ್ನು ದ್ವಿಜೋತ್ತಮರು ಪ್ರಶಂಸಿಸುತ್ತಿರಲು ರಾಜರ್ಷಿ ಶತಯೂಪನಾದರೋ ನಾರದನಿಗೆ ಹೇಳಿದನು:

"ಮಹಾದ್ಯುತೇ! ನೀನು ಕುರುರಾಜನ, ನನ್ನ ಮತ್ತು ಸರ್ವ

ಜನರ ಶ್ರದ್ಧೆಯನ್ನು ವರ್ಧಿಸಿರುವೆ! ನೃಪ ಧೃತರಾಷ್ಟ್ರನ ಕುರಿತು ನನ್ನ ಒಂದು ಪ್ರಶ್ನೆಯಿದೆ. ಅದನ್ನು ಹೇಳುತ್ತೇನೆ. ಕೇಳು. ನಿನ್ನ ದಿವ್ಯ ದೃಷ್ಟಿಯಿಂದ ಸರ್ವವೃತ್ತಾಂತಗಳ ತತ್ತ್ವಗಳನ್ನೂ ತಿಳಿದಿರುವೆ! ಮನುಷ್ಯರು ಪಡೆಯುವ ವಿವಿಧ ಗತಿಗಳನ್ನು ನೀನು ಕಂಡಿರುವೆ! ಮಹೇಂದ್ರನ ಲೋಕದಲ್ಲಿ ಈ ಲೋಕದ ಯಾವ ಯಾವ ನೃಪತಿಗಳಿರುವರೆನ್ನುವುದನ್ನು ಹೇಳಿದ್ದೀಯೆ! ಈ ಕ್ಷಿತಿಪತಿ ಧೃತರಾಷ್ಟ್ರನಿಗೆ ಯಾವ ಸ್ಥಾನಗಳಿವೆ ಎನ್ನುವುದನ್ನು ಕೇಳಲು ಬಯಸುತ್ತೇನೆ. ಇವನಿಗೆ ಯಾವ ರೀತಿಯ ಲೋಕಗಳು ಯಾವಾಗ ದೊರೆಯುತ್ತವೆ ಎನ್ನುವುದನ್ನು ಕೇಳುವ ನನಗೆ ಹೇಳಬೇಕು."

ಹೀಗೆ ಕೇಳಲು ದಿವ್ಯದರ್ಶೀ ಮಹಾತಪಸ್ವಿ ನಾರದನು ಆ ಸತ್ಪುರುಷರ ಮಧ್ಯೆ ಸರ್ವರ ಮನಸ್ಸಿಗೂ ಹಿತವಾಗುವ ಈ ಮಾತನ್ನಾಡಿದನು:

"ರಾಜರ್ಷೇ! ನನ್ನ ಇಚ್ಛೆಯಂತೆಯೇ ಸಂಚರಿಸುತ್ತಿರುವಾಗ ಶಕ್ರಸದನಕ್ಕೆ ಹೋಗಿ ಅಲ್ಲಿ ಶಚೀಪತಿ ಶಕ್ರನನ್ನೂ ನರಾಧಿಪ ಪಾಂಡುವನ್ನೂ ನಾನು ನೋಡಿದ್ದೇನೆ. ಅಲ್ಲಿಯೇ ಈ ಧೃತರಾಷ್ಟ್ರನ ಕುರಿತು ಮಾತುಕಥೆಗಳು ನಡೆದವು. ಈ ನೃಪನು ತಪಿಸುತ್ತಿರುವ ದುಶ್ಚರ ತಪಸ್ಸಿನ ವಿಷಯವೂ ಅಲ್ಲಿ

ಬಂದಿತ್ತು. ಅಲ್ಲಿ ಶಕ್ರನು ಹೇಳಿದ ಈ ಮಾತನ್ನು ನಾನು ಕೇಳಿದೆ. ಈ ರಾಜನ ಪರಮಾಯುಷ್ಯದಲ್ಲಿ ಇನ್ನು ಮೂರು ವರ್ಷಗಳು ಮಾತ್ರವೇ ಉಳಿದಿದೆ. ಅನಂತರ ಈ ರಾಜರಾಜರಿಂದ ಪೂಜಿತನಾದ ನೃಪ ಧೃತರಾಷ್ಟ್ರನು ಗಾಂಧಾರಿಯ ಸಹಿತ ಕುಬೇರಭವನಕ್ಕೆ ಹೋಗುತ್ತಾನೆ. ತಪಸ್ಸಿನಿಂದ ತನ್ನ ಪಾಪಗಳನ್ನು ಸುಟ್ಟು ಈ ಋಷಿಪುತ್ರನು ದಿವ್ಯಾಭರಣಭೂಷಿತನಾಗಿ ಮನಸ್ಸಿಗೆ ಬಂದಲ್ಲಿಗೆ ಚಲಿಸಬಲ್ಲ ವಿಮಾನದಲ್ಲಿ ಹೋಗುತ್ತಾನೆ. ಇವನು ದೇವ-ಗಂಧರ್ವ-ರಾಕ್ಷಸರ ಲೋಕಗಳನ್ನು ಸ್ವಚ್ಛಂದವಾಗಿ ಸಂಚರಿಸುತ್ತಾನೆ. ಇದು ನೀನು ಕೇಳಿದ ಪ್ರಶ್ನೆಗೆ ಉತ್ತರವಾಗಿದೆ. ನೀವು ಶ್ರುತಧನರೂ ತಪಸ್ಸಿನಿಂದ ಪಾಪಗಳನ್ನೂ ಸುಟ್ಟವರೂ ಆಗಿದ್ದೀರಿ. ಆದುದರಿಂದಲೇ ನಿಮಗೆ ನಾನು ಪ್ರೀತಿಯಿಂದ ಈ ಮಹಾ ದೇವಗುಹ್ಯವನ್ನು ಹೇಳಿದ್ದೇನೆ.”

ದೇವರ್ಷಿಯ ಆ ಮಧುರ ವಚನವನ್ನು ಕೇಳಿ ಸರ್ವ ಪಾರ್ಥಿವರೂ ಸುಮನಸ್ಕರಾಗಿ ಸಂತೋಷಗೊಂಡರು. ಹೀಗೆ ಮನೀಷಿ ವಿಪ್ರರು ಮಾತುಗಳಿಂದ ಧೃತರಾಷ್ಟ್ರನನ್ನು ಸಂತೋಷಗೊಳಿಸಿ ಅವನ ಅನುಮತಿಯನ್ನು ಪಡೆದು ಸಿದ್ಧರ ಗತಿಯನ್ನು ಆಶ್ರಯಿಸಿದವರಾಗಿ

ಇಚ್ಛೆಬಂದಲ್ಲಿಗೆ ಹೊರಟುಹೋದರು.

# ಪುತ್ರದರ್ಶನ

## ಪಾಂಡವಶೋಕ

ಕೌರವೇಂದ್ರನು ವನಕ್ಕೆ ತೆರಳಿದ ನಂತರ ಪಾಂಡವರು ಮಾತೃಶೋಕದಿಂದ ಪೀಡಿತರಾಗಿ ದುಃಖಶೋಕಗಳಿಂದ ಪರಿತಪಿಸಿದರು. ಹಾಗೆಯೇ ಪೌರಜನರೆಲ್ಲರೂ ಜನಾಧಿಪನ ಕುರಿತು ಶೋಕಿಸುತ್ತಿದ್ದರು. ರಾಜನ ಕುರಿತು ಬ್ರಾಹ್ಮಣರು ಅಲ್ಲಲ್ಲಿ ಈ ರೀತಿ ಮಾತನಾಡಿಕೊಳ್ಳುತ್ತಿದ್ದರು:

> "ವೃದ್ಧ ರಾಜನು ನಿರ್ಜನ ವನದಲ್ಲಿ ಹೇಗೆ ತಾನೇ ವಾಸಿಸುತ್ತಾನೆ? ಮಹಾಭಾಗೆ ಗಾಂಧಾರಿಯೂ ಪೃಥೆ ಕುಂತಿಯೂ ಹೇಗೆ ಜೀವಿಸುತ್ತಿದ್ದಾರೆ? ಸುಖಾರ್ಹನೂ ಮಕ್ಕಳನ್ನು ಕಳೆದುಕೊಂಡವನೂ ಆದ ಆ ಪ್ರಜ್ಞಾಚಕ್ಷು ರಾಜರ್ಷಿಯು ಆ ಮಹಾವನದಲ್ಲಿ ಸುಖವಿಲ್ಲದೇ ಯಾವ ಅವಸ್ಥೆಯಲ್ಲಿರಬಹುದು? ರಾಜ್ಯಶ್ರಿಯನ್ನು ಪರಿತ್ಯಜಿಸಿ

> ಕುಂತಿಯು ಪುತ್ರರನ್ನು ನೋಡಲಿಕ್ಕಾಗದ ವನವಾಸವನ್ನು ಬಯಸಿ ದುಷ್ಕರ ಕಾರ್ಯವನ್ನೇ ಎಸಗಿದ್ದಾಳೆ! ಅಣ್ಣನ ಶುಶ್ರೂಷೆ ಮಾಡುತ್ತಿರುವ ಆತ್ಮವಾನ್ ವಿದುರ ಮತ್ತು ಅನ್ನವನ್ನಿತ್ತ ಒಡೆಯನನ್ನೇ ಅನುಸರಿಸುತ್ತಿರುವ ಧೀಮಾನ್ ಗಾವಲ್ಗಣಿ ಸಂಜಯರು ಯಾವ ಅವಸ್ಥೆಯಲ್ಲಿರಬಹುದು?”

ಹೀಗೆ ಬಾಲಕರಿಂದ ಹಿಡಿದು ಮುದುಕರವರೆಗಿನ ಪೌರರು ಚಿಂತೆ ಶೋಕಗಳಿಂದ ಪೀಡಿತರಾಗಿ ಅಲ್ಲಲ್ಲಿ ಪರಸ್ಪರರೊಡನೆ ಮಾತನಾಡಿಕೊಳ್ಳುತ್ತಿದ್ದರು. ಪಾಂಡವರೆಲ್ಲರು ಕೂಡ ಅತ್ಯಂತ ಶೋಕಪರಾಯಣರಾಗಿದ್ದರು. ವೃದ್ಧ ತಾಯಿಯ ಕುರಿತು ಶೋಕಿಸುತ್ತಿದ್ದ ಅವರಿಗೆ ತಾಯಿಯನ್ನು, ಹಾಗೆಯೇ ಪುತ್ರರನ್ನು ಕಳೆದುಕೊಂಡ ವೃದ್ಧ ದೊಡ್ಡಪ್ಪನನ್ನು, ಮಹಾಭಾಗೆ ಗಾಂಧಾರಿಯನ್ನು ಮತ್ತು ಮಹಾಮತಿ ವಿದುರನನ್ನು ಕಾಣದೇ ಹಸ್ತಿನಾಪುರದಲ್ಲಿ ಬಹಳ ಸಮಯ ಇರಲು ಸಾಧ್ಯವಾಗಲಿಲ್ಲ. ಬಹಳ ಚಿಂತೆಗೊಳಗಾಗಿದ್ದ ಅವರು ರಾಜ್ಯದಲ್ಲಿಯಾಗಲೀ, ಸ್ತ್ರೀಯರಲ್ಲಾಗಲೀ ಮತ್ತು ವೇದಾಧ್ಯಯನದಲ್ಲಾಗಲೀ ಸಂತೋಷಪಡುತ್ತಿರಲಿಲ್ಲ. ಘೋರ ಜ್ಞಾತಿವಧೆಯಿಂದಾಗಿ ಪರಮ ವೇದನೆಯನ್ನು ಅನುಭವಿಸುತ್ತಿರುವ ನರಾಧಿಪನನ್ನು ಪುನಃ ಪುನಃ ಸ್ಮರಿಸಿಕೊಳ್ಳುತ್ತಿದ್ದರು. ಹಾಗೆಯೇ

ರಣಮಧ್ಯದಲ್ಲಿ ಬಾಲಕ ಅಭಿಮನ್ಯುವಿನ ವಿನಾಶ, ಸಂಗ್ರಾಮದಿಂದ ಪಲಾಯನ ಮಾಡದಿದ್ದ ಮಹಾಬಾಹು ಕರ್ಣನ ವಿನಾಶ, ದ್ರೌಪದೇಯರು ಮತ್ತು ಅನ್ಯ ಸುಹೃದಯರ ವಧೆ ಇವುಗಳನ್ನು ಸ್ಮರಿಸಿಕೊಳ್ಳುತ್ತಿದ್ದ ಆ ವೀರರ ಮನಸ್ಸು ಸಂತೋಷದಿಂದಿರಲಿಲ್ಲ. ಭೂಮಿಯ ಪ್ರವೀರರು ಹತರಾದುದುದರ ಮತ್ತು ಸಂಪತ್ತು ನಾಶವಾದುದರ ಕುರಿತು ಸದೈವ ಚಿಂತಿಸುತ್ತಿದ್ದ ಅವರಿಗೆ ನಿದ್ರೆಯೂ ಬರುತ್ತಿರಲಿಲ್ಲ. ಪುತ್ರರನ್ನು ಕಳೆದುಕೊಂಡಿದ್ದ ದ್ರೌಪದೀ ಮತ್ತು ಸುಭದ್ರಾ ದೇವಿಯರು ಕೂಡ ಅಪ್ರಸನ್ನರಾಗಿ ಹರ್ಷಶೂನ್ಯರಾಗಿದ್ದರು. ಆಗ ನಿನ್ನ ಪೂರ್ವಪಿತಾಮಹರು ವೈರಾಟಿ ಉತ್ತರೆಯನ್ನೂ ಮತ್ತು ನಿನ್ನ ತಂದೆ ಪರಿಕ್ಷಿತನನ್ನೂ ನೋಡಿಕೊಂಡು ತಮ್ಮ ಪ್ರಾಣಗಳನ್ನು ಧಾರಣೆಮಾಡಿಕೊಂಡಿದ್ದರು.

ಹೀಗೆ ಆ ಮಾತೃನಂದನ ಪಾಂಡವರು ತಾಯಿಯನ್ನು ಸ್ಮರಿಸಿಕೊಂಡು ಬಹಳ ದುಃಖಿತರಾದರು. ಹಿಂದೆ ರಾಜಕಾರ್ಯಗಳಲ್ಲಿ ನಿತ್ಯವೂ ಆಸಕ್ತಿಯನ್ನಿಟ್ಟುಕೊಂಡಿದ್ದ ಅವರು ರಾಜ್ಯದ ಎಲ್ಲ ರಾಜಕಾರ್ಯಗಳನ್ನು ಮಾಡುತ್ತಿರಲಿಲ್ಲ. ಶೋಕದಿಂದ ಆವಿಷ್ಟರಾಗಿರವರೋ ಎನ್ನುವಂತೆ ಯಾವುದರಿಂದಲೂ ಅವರು ಸಂತೋಷಗೊಳ್ಳುತ್ತಿರಲಿಲ್ಲ. ಇತರರನ್ನು ಗೌರವಿಸುತ್ತ ಕೂಡ ಅವರು ಸಂಭಾಷಣೆಯಲ್ಲಿ ತೊಡಗುತ್ತಿರಲಿಲ್ಲ.

ದುರ್ಧರ್ಷರೂ ಸಾಗರದಂತೆ ಗಂಭೀರರೂ ಆಗಿದ್ದ ಆ ವೀರರು ಶೋಕದಿಂದ ಪೀಡಿತರಾಗಿ ಬುದ್ಧಿಯನ್ನೇ ಕಳೆದುಕೊಂಡಿರುವರೋ ಎನ್ನುವಂತೆ ತೋರುತ್ತಿದ್ದರು. ಜನನಿಯನ್ನು ಸ್ಮರಿಸಿಕೊಳ್ಳುತ್ತಾ ಆ ಕುರುನಂದನರು ಚಿಂತಿಸುತ್ತಿದ್ದರು:

> “ಕೃಶಳಾದ ಪೃಥೆಯು ಆ ವೃದ್ಧ ದಂಪತಿಗಳ ಸೇವೆಯನ್ನು ಹೇಗೆ ತಾನೇ ಮಾಡಬಲ್ಲಳು? ಪುತ್ರರನ್ನು ಕಳೆದುಕೊಂಡು ನಿರಾಶ್ರಯನಾದ ಆ ಮಹೀಪಾಲನು ಪತ್ನಿಯ ಸಹಿತ ಏಕಾಂಗಿಯಾಗಿ ಆ ಕ್ರೂರ ಮೃಗಗಳಿರುವ ವನದಲ್ಲಿ ಹೇಗೆ ವಾಸಿಸುತ್ತಿದ್ದಾನೆ? ಬಾಂಧವರನ್ನು ಕಳೆದುಕೊಂಡ ಆ ದೇವೀ ಮಹಾಭಾಗೆ ಗಾಂಧಾರಿಯೂ ಕೂಡ ನಿರ್ಜನ ವನದಲ್ಲಿ ಹೇಗೆ ತಾನೇ ಆ ವೃದ್ಧ ಪತಿಯನ್ನು ಅನುಸರಿಸಿ ಹೋಗುತ್ತಿದ್ದಾಳೆ?”

## ಪಾಂಡವರು ಧೃತರಾಷ್ಟ್ರನ ಆಶ್ರಮಕ್ಕೆ ಹೋದುದು

ಹೀಗೆ ಅವರ ಕುರಿತು ಮಾತನಾಡಿಕೊಳ್ಳುತ್ತಿರುವಾಗ ಉತ್ಸುಕತೆಯಿಂದ ಧೃತರಾಷ್ಟ್ರನನ್ನು ನೋಡಲು ಹೋಗುವ ಮನಸ್ಸುಮಾಡಿದರು. ಸಹದೇವನಾದರೋ ರಾಜನಿಗೆ ಬಗ್ಗಿ ನಮಸ್ಕರಿಸಿ ಹೇಳಿದನು:

> “ಅಯ್ಯಾ! ನೀನು ಅರಣ್ಯಕ್ಕೆ ಹೋಗಲು ಬಯಸಿದುದನ್ನು

ಕಂಡು ನನಗೆ ಸಂತೋಷವಾಗುತ್ತಿದೆ. ನಿನ್ನ ಮೇಲಿನ ಗೌರವದಿಂದಾಗಿ ನಾನೇ ಇದನ್ನು ಪ್ರಸ್ತಾವಿಸಲು ಶಕ್ಯನಾಗಿರಲಿಲ್ಲ. ಆದರೆ ಅದೃಷ್ಟವಶಾತ್ ವನಕ್ಕೆ ಹೋಗುವ ವಿಚಾರವನ್ನು ನೀನೇ ಪ್ರತಾವಿಸಿರುವೆ! ತಪಸ್ವಿನಿಯಂತೆ ಜೀವಿಸುತ್ತಿರುವ, ಜಟಾಧಾರಿ, ತಾಪಸೀ, ಕುಶ-ಕಾಶಗಳ ಆಸನ-ಹಾಸಿಗೆಗಳಿಂದ ಗಾಯಗೊಂಡಿರುವ ಆ ವೃದ್ಧ ಕುಂತಿಯನ್ನು ನಾನು ನೋಡಬಲ್ಲೆನೆಂದರೆ ಅದೊಂದು ಅದೃಷ್ಟವೇ ಸರಿ! ಪ್ರಾಸಾದ-ಉಪ್ಪರಿಗೆಗಳಲ್ಲಿಯೇ ಅತ್ಯಂತ ಸುಖಭಾಗಿನಿಯಾಗಿ ಬೆಳೆದು ಈಗ ಬಳಲಿರುವ ಮತ್ತು ಅತ್ಯಂತ ದುಃಖಿತಳಾಗಿರುವ ಆ ಜನನಿಯನ್ನು ನಾನು ಯಾವಾಗ ಕಾಣುತ್ತೇನೆ? ರಾಜಸುತೆ ಕುಂತಿಯು ಅಸುಖಿಯಾಗಿ ಜೀವಿಸುತ್ತಿದ್ದಾಳೆ ಎಂದರೆ ಮನುಷ್ಯರ ಸ್ಥಿತಿಗತಿಗಳು ಅನಿತ್ಯವಾದವುಗಳು ಎಂದಲ್ಲವೇ?”

ಸಹದೇವನ ಮಾತನ್ನು ಕೇಳಿ ದ್ರೌಪದಿಯು ರಾಜನಿಗೆ ನಮಸ್ಕರಿಸಿ ಹೇಳಿದಳು:

“ನರಾಧಿಪ! ಆ ದೇವೀ ಪೃಥೆಯನ್ನು ಎಂದು ನೋಡುತ್ತೇನೆ? ಅವಳು ಜೀವಿತಳಾಗಿರುವಳಲ್ಲವೇ? ಅವಳು

ಜೀವಂತಳಾಗಿದ್ದರೆ ನನಗೆ ತುಂಬಾ ಸಂತೋಷವಾಗುತ್ತದೆ. ನಿನ್ನ ಬುದ್ಧಿಯು ನಿತ್ಯವೂ ಹೀಗೆಯೇ ಇರಲಿ! ನಿನ್ನ ಮನಸ್ಸು ಧರ್ಮದಲ್ಲಿಯೇ ರಮಿಸಲಿ! ಇಂದು ನೀನು ನಮಗೆ ಶ್ರೇಯಸ್ಸಿಗೆ ಭಾಗಿಗಳನ್ನಾಗಿ ಮಾಡುತ್ತಿರುವೆ! ಕುಂತಿ, ಗಾಂಧಾರಿ ಮತ್ತು ಮಾವನನ್ನು ಕಾಣಲು ಕಾತರರಾಗಿ ಈ ಎಲ್ಲ ಸೊಸೆಯಂದಿರೂ ತುದಿಗಾಲ ಮೇಲೆ ನಿಂತಿದ್ದಾರೆಂದು ತಿಳಿ!"

ಪಾಂಚಾಲಿಯು ಹೀಗೆ ಹೇಳಲು ನೃಪನು ಸೇನಾಧ್ಯಕ್ಷರೆಲ್ಲರನ್ನು ಕರೆದು ಹೀಗೆ ಹೇಳಿದನು:

"ರಥ-ಕುಂಜರಗಳಿಂದ ಸಮೃದ್ಧವಾದ ನನ್ನ ಸೇನೆಯನ್ನು ಹೊರಡಿಸಿ! ವನದಲ್ಲಿರುವ ಮಹೀಪತಿ ಧೃತರಾಷ್ಟ್ರನನ್ನು ನೋಡಲು ಬಯಸುತ್ತೇನೆ!" ಸ್ತ್ರೀ-ಅಧ್ಯಕ್ಷರಿಗೆ ರಾಜನು ಹೇಳಿದನು: "ಸಹಸ್ರಾರು ವಿವಿಧ ವಾಹನಗಳನ್ನೂ ಪಲ್ಲಕ್ಕಿಗಳೆಲ್ಲವನ್ನೂ ಸಜ್ಜುಗೊಳಿಸಿರಿ! ಬಂಡಿಗಳು, ಅಂಗಡಿಗಳು, ಶಿಲ್ಪಿಗಳು ಮತ್ತು ಕೋಶಪಾಲರು ಕುರುಕ್ಷೇತ್ರದಲ್ಲಿರುವ ಆಶ್ರಮಕ್ಕೆ ಹೊರಡಲಿ! ಪಾರ್ಥಿವನನ್ನು ನೋಡಲು ಬಯಸುವ ಪೌರಜನರೂ ಕೂಡ ಎಲ್ಲ ಸುವಿಧಗಳೊಂದಿಗೆ ಸುರಕ್ಷಿತರಾಗಿ ಹೊರಡಲಿ! ಅಡಿಗೆಗೆ

ಬೇಕಾದ ವಸ್ತುಗಳನ್ನೂ, ಎಲ್ಲ ವಿಧದ ಭಕ್ಷ್ಯ-ಭೋಜ್ಯಗಳೆಲ್ಲವನ್ನೂ ನನ್ನ ಬಂಡಿಗಳಲ್ಲಿ ತುಂಬಿಕೊಂಡು ಅಡುಗೆ ಮಾಡುವವರೂ ಹೊರಡಿರಿ! ತಡೆಮಾಡದೇ ನಾಳೆಯೇ ಬೆಳಿಗ್ಗೆ ಹೊರಡುವಂತೆ ಘೋಷಿಸಿರಿ! ಮಾರ್ಗದಲ್ಲಿ ವಿವಿಧ ಶಿಬಿರಗಳನ್ನೂ ಇಂದೇ ನಿರ್ಮಿಸಿರಿ!" ಹೀಗೆ ಆಜ್ಞಾಪಿಸಿ ರಾಜಾ ಪಾಂಡವನು ಸಹೋದರರೊಂದಿಗೆ ಸ್ತ್ರೀಯರು ಮಕ್ಕಳನ್ನು ಮುಂದಿಟ್ಟುಕೊಂಡು ಮರುದಿನ ಬೆಳಗಾಗುತ್ತಲೇ ಹೊರಟನು. ಪುರದಿಂದ ಹೊರಟು ಐದು ದಿನಗಳು ಅಲ್ಲಿಯೇ ಕಾಯುತ್ತಿದ್ದು ಎಲ್ಲರೂ ಬಂದು ಸೇರಿದನಂತರ ನೃಪತಿಯು ವನದ ಕಡೆ ಪ್ರಯಾಣಬೆಳೆಸಿದನು.

ಅನಂತರ ಭರತಸತ್ತಮನು ಲೋಕಪಾಲರ ಸಮನಾದ ಅರ್ಜುನಪ್ರಮುಖರ ರಕ್ಷಣೆಯಲ್ಲಿದ್ದ ಸೇನೆಯನ್ನು ಆಜ್ಞಾಪಿಸಿದನು. "ರಥಗಳನ್ನು ಹೂಡಿ! ಹೂಡಿ!" ಎಂಬ ಸಂತೋಷದ ಕೂಗುಗಳೂ, ಕುದುರೆ ಸವಾರರ "ಸಿದ್ಧರಾಗಿ! ಸಿದ್ಧರಾಗಿ!" ಎನ್ನುವ ಕೂಗೂ ಜೋರಾಗಿ ಕೇಳಿಬಂದಿತು. ಕೆಲವರು ಪಲ್ಲಕ್ಕಿಗಳಲ್ಲಿ ಹೊರಟರೆ ಕೆಲವರು ಮನೋವೇಗದ ಕುದುರೆಗಳನ್ನೇರಿದರು. ಇನ್ನು ಕೆಲವರು ನಗರಾಕಾರದ, ಅಗ್ನಿಯಂತೆ ಬೆಳಗುತ್ತಿರುವ ರಥಗಳಲ್ಲಿ ಹೊರಟರು. ಅನ್ಯರು ಆನೆಗಳನ್ನು

ಸವಾರಿಮಾಡಿದರೆ, ಉಗುರು ಮತ್ತು ಪ್ರಾಸಗಳೊಡನೆ ಯುದ್ಧಮಾಡುವ ಯೋಧರು ಪದಾತಿಗಳಾಗಿ ಹೊರಟರು. ಕುರುರಾಜ ಧೃತರಾಷ್ಟ್ರನನ್ನು ಕಾಣಲು ಬಯಸಿದ ಪುರ-ಗ್ರಾಮೀಣ ಪ್ರಜೆಗಳು ಬಹುವಿಧದ ಯಾನಗಳಲ್ಲಿ ಹೊರಟರು. ರಾಜನ ವಚನದಂತೆ ಆಚಾರ್ಯ ಸೇನಾನೀ ಗೌತಮ ಕೃಪನೂ ಸೇನೆಯನ್ನು ತೆಗೆದುಕೊಂಡು ಧೃತರಾಷ್ಟ್ರನ ಆಶ್ರಮದ ಕಡೆ ಪ್ರಯಾಣಿಸಿದನು. ಆಗ ಕುರುನಂದನ ಶ್ರೀಮಾನ್ ಕುರುರಾಜ ಯುಧಿಷ್ಠಿರನು ದ್ವಿಜರಿಂದ ಆವೃತನಾಗಿ, ಅನೇಕ ಸೂತ-ಮಾಗಧ-ವಂದಿಗಳ ಸ್ತುತಿಗಳೊಡನೆ, ನೆತ್ತಿಯ ಮೇಲೆ ಬೆಳಗುತ್ತಿದ್ದ ಬಿಳಿಯ ಛತ್ರದಡಿಯಲ್ಲಿ, ಮಹಾ ರಥಸೇನೆಯೊಡನೆ ಹೊರಟನು. ಮಾರುತಾತ್ಮಜ ಭೀಮಕರ್ಮಿ ವೃಕೋದರನು ಯಂತ್ರಾಯುಧಗಳಿಂದ ಸಜ್ಜಾಗಿದ್ದ ಪರ್ವತೋಪಮ ಗಜಸೇನೆಯೊಂದಿಗೆ ಹೊರಟನು. ತಾಯಿಗೆ ಪ್ರಿಯರಾಗಿದ್ದ ಮಾದ್ರೀಪುತ್ರರೂ ಕೂಡ ಕವಚ-ಧ್ವಜಗಳಿಂದ ಸನ್ನದ್ಧ ಅಶ್ವಾರೋಹಿಗಳ ಸೇನೆಗಳೊಂದಿಗೆ ಹೊರಟರು. ಮಹಾತೇಜಸ್ವೀ ಅರ್ಜುನನು ಶ್ವೇತವರ್ಣದ ಕುದುರೆಗಳನ್ನು ಕಟ್ಟಿದ್ದ ಆದಿತ್ಯವರ್ಚಸ ರಥದಲ್ಲಿ ಕುಳಿತು ನೃಪ ಯುಧಿಷ್ಠಿರನನ್ನು ಹಿಂಬಾಲಿಸಿದನು. ಪಲ್ಲಕ್ಕಿಗಳಲ್ಲಿ ಕುಳಿತಿದ್ದ ದ್ರೌಪದಿಯೇ ಮೊದಲಾದ ಸ್ತ್ರೀಗಣಗಳೂ, ಸ್ತ್ರೀ ಅಧ್ಯಕ್ಷರ ರಕ್ಷಣೆಯಲ್ಲಿ, ಅಮಿತ ಸಂಪತ್ತನ್ನು

ದಾನಮಾಡುತ್ತಾ ಹೊರಟರು. ಮನುಷ್ಯರು, ಆನೆಗಳು ಮತ್ತು ಕುದುರೆಗಳಿಂದ ಸಮೃದ್ಧವಾಗಿದ್ದ ಮತ್ತು ವೇಣುವೀಣಾನಿನಾದಗಳಿಂದ ತುಂಬಿದ್ದ ಆ ಪಾಂಡವ ಸೇನೆಯು ಶೋಭಿಸುತ್ತಿತ್ತು. ರಮ್ಯ ನದೀತೀರಗಳಲ್ಲಿ ಮತ್ತು ಸರೋವರಗಳಲ್ಲಿ ತಂಗುತ್ತಾ ಕ್ರಮೇಣವಾಗಿ ಆ ಕುರುಪುಂಗವರು ಪ್ರಯಾಣಬೆಳೆಸಿದರು. ಯುಧಿಷ್ಠಿರನ ವಚನದಂತೆ ಮಹಾತೇಜಸ್ವೀ ಯುಯುತ್ಸು ಮತ್ತು ಪುರೋಹಿತ ಧೌಮ್ಯರು ರಾಜಧಾನಿಯ ರಕ್ಷಣೆಯಲ್ಲಿದ್ದರು.

ರಾಜ ಯುಧಿಷ್ಠಿರನು ಕ್ರಮೇಣವಾಗಿ ಪರಮಪಾವನೀ ಯಮುನಾ ನದಿಯನ್ನು ದಾಟಿ ಕುರುಕ್ಷೇತ್ರವನ್ನು ತಲುಪಿದನು.  ದೂರದಿಂದಲೇ ಅವನು ರಾಜರ್ಷಿ ಶತಯೂಪನ ಮತ್ತು ಕೌರವ್ಯ ಧೃತರಾಷ್ಟ್ರರ ಆಶ್ರಮವನ್ನು ಕಂಡನು. ಆಗ ಆ ಎಲ್ಲ ಜನರೂ ಸಂತೋಷಗೊಂಡು ಮಹಾನಾದಗೈಯುತ್ತಾ ಆಶ್ರಮಪದವನ್ನು ಪ್ರವೇಶಿಸಿದರು. ಪಾಂಡವರು ದೂರದಲ್ಲಿಯೇ ಇಳಿದು ವಿನಯದಿಂದ ಕಾಲ್ನಡುಗೆಯಲ್ಲಿಯೇ ನರಪತಿಯ ಆಶ್ರಮದ ಕಡೆ ನಡೆದರು. ಸರ್ವ ಪೌರಜನರೂ, ರಾಷ್ಟ್ರ ನಿವಾಸಿಗಳೂ, ಕುರುಮುಖ್ಯ ಸ್ತ್ರೀಯರೂ ಕೂಡ ಪದಾತಿಗಳಾಗಿಯೇ ಆಶ್ರಮವನ್ನು ಪ್ರವೇಶಿಸಿದರು. ಅನಂತರ ಆ ಪಾಂಡವರು ನಿರ್ಜನವಾಗಿದ್ದ, ಮೃಗಗಣಗಳಿಂದ ತುಂಬಿದ್ದ, ಬಾಳೆಯ

ತೋಟದಿಂದ ಶೋಭಿಸುತ್ತಿದ್ದ ಧೃತರಾಷ್ಟ್ರನ ಆಶ್ರಮವನ್ನು ತಲುಪಿದರು. ಆಗ ಅಲ್ಲಿಗೆ ಆಗಮಿಸಿದ್ದ ಪಾಂಡವರನ್ನು ನೋಡಲು ಕುತೂಹಲದಿಂದ ಕೂಡಿದ್ದ ವಿವಿಧ ವ್ರತಗಳಲ್ಲಿ ನಿರತರಾಗಿದ್ದ ತಾಪಸರು ಬಂದು ಸೇರಿದರು. ಅವರನ್ನು ಕೌರವವಂಶಧಾರಕನಾದ ರಾಜಾ ಯುಧಿಷ್ಠಿರನು ಕಂಬನಿದುಂಬಿದವನಾಗಿ – "ನಮ್ಮ ಜ್ಯೇಷ್ಠ ಪಿತನು ಎಲ್ಲಿಗೆ ಹೋಗಿದ್ದಾನೆ?" ಎಂದು ಪ್ರಶ್ನಿಸಿದನು. ಹಾಗೆ ಕೇಳಲು ಅವರು "ಪ್ರಭೋ! ಅವನು ಸ್ನಾನಕ್ಕೆಂದು, ಮತ್ತು ಹೂವು-ನೀರನ್ನು ತರಲು ಯಮುನಾ ನದಿಗೆ ಹೋಗಿದ್ದಾನೆ" ಎಂದರು.

ಅವರು ಹೇಳಿದ ಮಾರ್ಗದಲ್ಲಿಯೇ ಮುಂದುವರೆಯಲು ಪಾಂಡವರು ಅನತಿದೂರದಲ್ಲಿಯೇ ಕಾಲ್ನಡುಗೆಯಲ್ಲಿ ಬರುತ್ತಿದ್ದ ಧೃತರಾಷ್ಟ್ರಾದಿ ಎಲ್ಲರನ್ನೂ ಕಂಡರು. ತಂದೆಯನ್ನು ಕಾಣುವ ಬಯಕೆಯಿಂದ ಅವರು ಬಹಳ ಶೀಘ್ರವಾಗಿ ಮುಂದುವರೆದರು. ಸಹದೇವನಾದರೋ ಬಹಳ ವೇಗವಾಗಿ ಓಡಿ ಹೋಗಿ ಪೃಥೆಯ ಕಾಲುಗಳನ್ನು ಹಿಡುದುಕೊಂಡು ಜೋರಾಗಿ ಅಳತೊಡಗಿದನು. ಕುಂತಿಯೂ ಕೂಡ ಕಂಬನಿದುಂಬಿದ ಕಣ್ಣುಗಳಿಂದ ತನ್ನ ಪ್ರಿಯ ಸುತನನ್ನು ನೋಡಿದಳು. ಮಗನನ್ನು ಮೇಲಕ್ಕೆತ್ತಿ ಬಾಹುಗಳಿಂದ ಬಿಗಿದಪ್ಪಿ ಕುಂತಿಯು ಸಹದೇವನು ಬಂದಿರುವುದನ್ನು ಗಾಂಧಾರಿಗೂ ತಿಳಿಸಿದಳು. ಹತ್ತಿರದಲ್ಲಿಯೇ ಇದ್ದ

ರಾಜ ಯುಧಿಷ್ಠಿರ, ಭೀಮಸೇನ, ಅರ್ಜುನ ಮತ್ತು ನಕುಲರನ್ನು ನೋಡಿ ಪೃಥೆಯು ತ್ವರೆಮಾಡಿ ಮುಂದೆಬಂದಳು. ಪುತ್ರರನ್ನು ಕಳೆದುಕೊಂಡ ಆ ದಂಪತಿಗಳನ್ನು ಎಳೆದುಕೊಂಡು ಮುಂದೆ ಮುಂದೆ ಬರುತ್ತಿದ್ದ ಅವಳನ್ನು ನೋಡಿ ಪಾಂಡವರು ಭೂಮಿಯ ಮೇಲೆಯೇ ಅಡ್ಡಬಿದ್ದರು. ಮಹಾಮನಸ್ವಿ ಮೇಧಾವೀ ಪ್ರಭು ರಾಜಾ ಧೃತರಾಷ್ಟ್ರನು ಸ್ವರಗಳಿಂದ ಮತ್ತು ಸ್ಪರ್ಶದಿಂದ ಪ್ರತಿಯೊಬ್ಬರನ್ನೂ ಗುರುತಿಸಿ ಸಮಾಧಾನಗೊಳಿಸಿದನು.

ಆಗ ಆ ಮಹಾತ್ಮರು ಕಣ್ಣೀರು ಸುರಿಸುತ್ತಾ ಗಾಂಧಾರೀ ಸಹಿತನಾದ ನೃಪನಿಗೂ ಮತ್ತು ತಾಯಿಗೂ ಯಥಾವಿಧಿಯಾಗಿ ನಮಸ್ಕರಿಸಿದರು. ತಾಯಿಯಿಂದ ಸಮಾಧಾನಗೊಳಿಸಲ್ಪಟ್ಟ ಪಾಂಡವರು ಪುನಃ ಚೇತರಿಸಿಕೊಂಡು ನೀರಿನ ಎಲ್ಲ ಕೊಡಗಳನ್ನೂ ಸ್ವಯಂ ತಾವೇ ಎತ್ತಿಕೊಂಡರು. ಅನಂತರ ನರಸಿಂಹರ ನಾರಿಯರು, ಯೋಧಜನರು, ಪೌರ-ಜಾನಪದ ಜನರು ನರಾಧಿಪ ಧೃತರಾಷ್ಟ್ರನನ್ನು ಸಂದರ್ಶಿಸಿದರು. ಯುಧಿಷ್ಠಿರನು ಅವರೆಲ್ಲರನ್ನೂ ನಾಮ-ಗೋತ್ರಗಳನ್ನು ಹೇಳಿ ಪರಿಚಯ ಮಾಡಿಕೊಟ್ಟ ನಂತರ ನರಪತಿ ಧೃತರಾಷ್ಟ್ರನು ಅವರನ್ನು ಅಭಿನಂದಿಸಿದನು. ಪುರಜನರಿಂದ ಪರಿವೃತನಾದ ರಾಜನು ಆನಂದ ಭಾಷ್ಪಗಳನ್ನು ಸುರಿಸುತ್ತಾ ತಾನು ಹಿಂದಿನಂತೆಯೇ

ಹಸ್ತಿನಾಪುರದ ಅರಮನೆಯಲ್ಲಿರುವನೋ ಎಂದು ಭಾವಿಸಿದನು. ಕೃಷ್ಣೆಯೇ ಮೊದಲಾದ ಸೊಸೆಯಂದಿರೂ ಕೂಡ ಕುಂತಿ-ಗಾಂಧಾರಿಯರ ಸಹಿತ ಪಾರ್ಥಿವನನ್ನು ಅಭಿನಂದಿಸಲು ಪ್ರತಿಯಾಗಿ ಅವನೂ ಅವರನ್ನು ಅಭಿನಂದಿಸಿದನು. ಅನಂತರ ಅವನು ಸಿದ್ಧ-ಚಾರಣರಿಂದ ಸಂಸೇವಿತವಾಗಿದ್ದ ತನ್ನ ಆಶ್ರಮಕ್ಕೆ ಹೋದನು. ಪ್ರೇಕ್ಷಕರಿಂದ ತುಂಬಿಹೋಗಿದ್ದ ಆ ಆಶ್ರಮವು ಆಗ ನಕ್ಷತ್ರಗಳಿಂದ ತುಂಬಿದ ಆಕಾಶದಂತೆ ಕಾಣುತ್ತಿತ್ತು.

## ಪಾಂಡವವರ್ಣನ

ಆ ಆಶ್ರಮದಲ್ಲಿ ರಾಜಾ ಧೃತರಾಷ್ಟ್ರನು ಸುಂದರ ಕಮಲಗಳಂತಹ ಕಣ್ಣುಗಳುಳ್ಳ ನರವ್ಯಾಘ್ರ ಸಹೋದರರೊಂದಿಗೆ ಕುಳಿತುಕೊಂಡನು. ಮಹಾಭಾಗ ತಾಪಸರು ಕೂಡ ಪೃಥುವಕ್ಷಸ ಕುರುಪತಿಯ ಪುತ್ರರಾದ ಪಾಂಡವರನ್ನು ನೋಡಲು ನಾನಾದೇಶಗಳಿಂದ ಬಂದು ಸೇರಿದ್ದರು. ಅವರು –

> “ಇವರಲ್ಲಿ ಯುಧಿಷ್ಠಿರನು ಯಾರು? ಭೀಮಾರ್ಜುನ-ಯಮಳರು ಯಾರು ಮತ್ತು ಯಶಸ್ವಿನೀ ದ್ರೌಪದಿಯು ಯಾರು ಎಂದು ತಿಳಿಯಲು ಬಯಸುತ್ತೇವೆ” – ಎಂದು ಕೇಳಿಕೊಂಡರು.

ಆಗ ಸೂತ ಸಂಜಯನು ಅವರಿಗೆ ದ್ರೌಪದಿ ಮತ್ತು ಸರ್ವ ಕುರುಸ್ತ್ರೀಯರನ್ನೂ ಸೇರಿಸಿ ಎಲ್ಲರ ಹೆಸರುಗಳನ್ನು ಹೇಳುತ್ತಾ ಪರಿಚಯ ಮಾಡಿಕೊಟ್ಟನು.

> "ಶುದ್ಧ ಚಿನ್ನದಂತೆ ಗೌರಾಂಗನಾಗಿರುವ, ಮಹಾಸಿಂಹದಂತೆ ಬೆಳೆದ ಶರೀರವುಳ್ಳ, ತೀಕ್ಷ್ಣವಾದ ಮೂಗಿರುವ, ವಿಶಾಲವಾಗಿಯೂ, ತೀಕ್ಷ್ಣವಾಗಿಯೂ ಮತ್ತು ಕೆಂಪಾಗಿಯೂ ಇರುವ ಕಣ್ಣುಗಳುಳ್ಳ ಇವನೇ ಕುರುರಾಜ ಯುಧಿಷ್ಠಿರನು! ಮದಿಸಿದ ಗಜರಾಜನ ನಡುಗೆಯುಳ್ಳ, ಪುಟಕ್ಕೆ ಹಾಕಿದ ಚಿನ್ನದಂತೆ ಶುದ್ಧ ಗೌರವರ್ಣದ, ವಿಶಾಲವಾದ ಮತ್ತು ದಷ್ಟಪುಷ್ಟವಾದ ಹೆಗಲುಗಳುಳ್ಳ, ದಪ್ಪವಾಗಿಯೂ ನೀಳವಾಗಿಯೂ ಇರುವ ತೋಳುಗಳುಳ್ಳ ಇವನೇ ವೃಕೋದರನು. ಇವನನ್ನು ಚೆನ್ನಾಗಿ ನೋಡಿರಿ! ಇವನ ಪಕ್ಕದಲ್ಲಿಯೇ ಇರುವ ಶ್ಯಾಮಲ ವರ್ಣದ, ಯುವಕ, ಗಜಗಣಗಳ ಪತಿ ಸಲಗದಂತೆ ಪ್ರಕಾಶಿಸುತ್ತಿರುವ, ಸಿಂಹದ ಹೆಗಲಿನಂತೆ ವಿಸ್ತಾರವಾದ ಹೆಗಲುಳ್ಳ, ಗಜಕ್ರೀಡೆಯಂಥಹ ನಡುಗೆಯುಳ್ಳ, ಕಮಲದಂತೆ ವಿಶಾಲ ಕಣ್ಣುಗಳುಳ್ಳ ಮಹಾಧನುಷ್ಮಂತನಾದ ಇವನೇ ವೀರ ಅರ್ಜುನ! ಕುಂತಿಯ

ಸಮೀಪದಲ್ಲಿ ಕುಳಿತಿರುವ, ವಿಷ್ಣು-ಮಹೇಂದ್ರ ಸದೃಶರಾದ, ಪುರುಷೋತ್ತಮರೀರ್ವರು, ಅವಳೀ ಮಕ್ಕಳಾದ ಇವರೇ ನಕುಲ ಸಹದೇವರು. ಮನುಷ್ಯಲೋಕದಲ್ಲಿ ರೂಪದಲ್ಲಾಗಲೀ, ಬಲದಲ್ಲಾಗಲೀ ಅಥವಾ ಶೀಲದಲ್ಲಾಗಲೀ ಇವರಿಗೆ ಸಮನಾದವರು ಬೇರೆ ಯಾರೂ ಇಲ್ಲ! ಮಧ್ಯ ವಯಸ್ಸಿನ ಈ ಪದ್ಮದಳಾಯತಾಕ್ಷೀ, ನೀಲಕಮಲದ ಕಾಂತಿಯಂಥ ಶ್ಯಾಮಲ ವರ್ಣದವಳು, ದೇವತೆಗಳಿಗೂ ದೇವಿಯಂತಿರುವ, ಮೂರ್ತಿಮತ್ತಾಗಿ ಬಂದಿರುವ ಲಕ್ಷ್ಮಿಯಂತೆ ನಿಂತಿರುವ ಇವಳೇ ಕೃಷ್ಣೆ ದ್ರೌಪದೀ. ಅವಳ ಪಕ್ಕದಲ್ಲಿ ಸ್ತ್ರೀಯರ ಮಧ್ಯದಲ್ಲಿ ಕುಳಿತಿರುವ, ಚಿನ್ನಕ್ಕೂ ಹೆಚ್ಚಿನ ಕಾಂತಿಯುಳ್ಳ, ಮೂರ್ತಿಮತ್ತಾಗಿ ಬಂದಿರುವ ಗೌರಿಯಂತೆಯೇ ಇರುವ, ಅವಳೇ ಅಪ್ರತಿಮ ಚಕ್ರಾಯುಧ ಕೃಷ್ಣನ ತಂಗಿ ಸುಭದ್ರೆ. ಬೆಳೆದ ನೀಲಕಮಲದ ಹಾರದ ಬಣ್ಣದಂತೆ ಶ್ಯಾಮಲವರ್ಣವುಳ್ಳ ಇವಳು – ಶ್ರೀ ಕೃಷ್ಣನೊಡನೆ ಸಾರಥ್ಯದ ಕೌಶಲ್ಯದಲ್ಲಿ ಸದಾ ಸ್ಪರ್ಧಿಸುತ್ತಿದ್ದ ಮತ್ತು ದುರ್ಯೋಧನನ ಸೇನಾ ನಾಯಕನಾಗಿದ್ದ ಶಲ್ಯನ ತಂಗಿ ಮತ್ತು ಭೀಮಸೇನನ ಶ್ರೇಷ್ಠ ಭಾರ್ಯೆಯು. ಸಂಪಿಗೆ ಹೂವಿನ ಮಾಲೆಯಂತೆ

ಗೌರವರ್ಣವುಳ್ಳ, ಮಗಧಾಧಿಪನೆಂದು ಖ್ಯಾತನಾದ ಜರಾಸಂಧನ ಮಗಳು ಇವಳು ಮಾದ್ರಿಯ ಕಡೆಯ ಮಗ ಸಹದೇವನ ಭಾರ್ಯೆ. ಅವಳ ಸಮೀಪದಲ್ಲಿ ನೆಲದ ಮೇಲೆ ಕುಳಿತುಕೊಂಡಿರುವ, ಇಂದೀವರದಂತೆ ಶ್ಯಾಮಲ ವರ್ಣದ ಶರೀರವುಳ್ಳ, ಕಮಲಾಯತಾಕ್ಷಿಯು ಜ್ಯೇಷ್ಠ ಮಾದ್ರೀ ಸುತ ನಕುಲನ ಭಾರ್ಯೆಯು. ಪುಟಕ್ಕೆ ಹಾಕಿದ ಚಿನ್ನದಂತೆ ಗೌರವರ್ಣವುಳ್ಳ, ಮಗನೊಂದಿಗಿರುವ ಇವಳು ರಾಜ ವಿರಾಟನ ಮಗಳು ಮತ್ತು ವಿರಥನಾಗಿದ್ದಾಗ ರಥಸ್ಥರಾಗಿದ್ದ ದ್ರೋಣಾದಿಗಳು ರಣದಲ್ಲಿ ಸಂಹರಿಸಿದ ಆ ಅಭಿಮನ್ಯುವಿನ ಭಾರ್ಯೆಯು. ಬಿಳಿಯ ಉತ್ತರೀಯವನ್ನು ಹೊದೆದಿರುವ ಮತ್ತು ಬೈತಲೆಗಳಲ್ಲಿ ಕುಂಕುಮಗಳಿಲ್ಲದಿರುವ ಇವರು ನರರಾಜ ದುರ್ಯೋಧನನ ಮತ್ತು ಅವನ ತಮ್ಮಂದಿರ ಪತ್ನಿಯರು. ವೃದ್ಧ ರಾಜನ ನೂರಕ್ಕು ಹೆಚ್ಚಿನ ಸಂಖ್ಯೆಯ ಈ ಸೊಸೆಯಂದಿರು ನರವೀರರಾದ ಪತಿ-ಪುತ್ರರನ್ನು ಕಳೆದುಕೊಂಡಿದ್ದಾರೆ. ಬ್ರಾಹ್ಮಣರೇ! ನೀವುಗಳೆಲ್ಲ ಕೇಳಿದುದಕ್ಕೆ ನಾನು ಮುಖ್ಯರಾದವರ ಪರಿಚಯ ಮಾಡಿಕೊಟ್ಟಿದ್ದೇನೆ. ಈ ಎಲ್ಲ ನರೇಂದ್ರಪತ್ನಿಯರೂ ವಿಶುದ್ಧಸತ್ತ್ವರು."

ಸರ್ವ ತಾಪಸರು ಹೊರಟುಹೋದ ನಂತರ ಕುರುವೃದ್ಧವರ್ಯ ರಾಜನು ಸೇರಿರುವ ನರದೇವಪುತ್ರರೆಲ್ಲರ ಕುಶಲವನ್ನು ಪ್ರಶ್ನಿಸಿದನು. ಯೋಧರು ಆಶ್ರಮಮಂಡಲದ ಗಡಿಯಲ್ಲಿಯೇ ವಾಹನಗಳನ್ನು ಬಿಚ್ಚಿ ಅಲ್ಲಿಯೇ ಸ್ತ್ರೀ-ವೃದ್ಧ-ಬಾಲಕರಿಗೆ ಉಳಿಯಲು ವ್ಯವಸ್ಥೆಮಾಡಿದರು. ಆಗ ಧೃತರಾಷ್ಟ್ರನು ಯಥಾರ್ಹವಾಗಿ ಕುಶಲ ಪ್ರಶ್ನೆಗಳನ್ನು ಕೇಳಿದನು.

## ವಿದುರಸಾಯುಜ್ಯ

ಧೃತರಾಷ್ಟ್ರನು ಹೇಳಿದನು:

“ಯುಧಿಷ್ಠಿರ! ಮಗೂ! ಪುರಜನಪದರೊಡನೆಯೂ, ಎಲ್ಲ ತಮ್ಮಂದಿರೊಡನೆಯೂ ನೀನು ಕುಶಲನಾಗಿದ್ದೀಯೆ ತಾನೇ? ನಿನ್ನನ್ನೇ ಆಶ್ರಯಿಸಿರುವ ಸಚಿವರೂ, ಸೇವಕ ವರ್ಗದವರೂ, ಗುರುಗಳೂ ನಿರಾಮಯರಾಗಿರುವರು ತಾನೇ? ರಾಜರ್ಷಿಗಳು ನಡೆದುಕೊಂಡು ಬಂದಿರುವ ಪುರಾತನ ವೃತ್ತಿಯಂತೆಯೇ ನಡೆದುಕೊಳ್ಳುತ್ತಿದ್ದೀಯೆ ತಾನೆ? ನ್ಯಾಯಮಾರ್ಗವನ್ನು ಉಲ್ಲಂಘಿಸದೇ ನಿನ್ನ ಕೋಶವು ತುಂಬುತ್ತಿದೆ ತಾನೇ? ಶತ್ರುಗಳು, ಮಿತ್ರರು ಮತ್ತು ಮಧ್ಯಸ್ಥರೊಡನೆ ಯಥಾಯೋಗ್ಯವಾಗಿ ವ್ಯವಹರಿಸುತ್ತಿರುವೆ ತಾನೇ?

ಅಗ್ರಹಾರಾದಿಗಳಿಂದ ಬ್ರಾಹ್ಮಣರನ್ನು ಯಥೋಚಿತವಾಗಿ ನೋಡಿಕೊಳ್ಳುತ್ತಿರುವೆ ತಾನೇ? ನಿನ್ನ ಶೀಲದಿಂದ ಶತ್ರುಗಳು, ಗುರುಗಳು, ಪೌರರು, ಸೇವಕರು ಮತ್ತು ಸ್ವಜನರೂ ತೃಪ್ತಿಯಿಂದಿರುವರು ತಾನೇ? ಶ್ರದ್ಧಾವಂತನಾಗಿ ಪಿತೃದೇವತೆಗಳನ್ನು ಯಾಜಿಸುತ್ತಿದ್ದೀಯೆ ತಾನೇ? ಅತಿಥಿಗಳನ್ನು ಅನ್ನ-ಪಾನಗಳಿಂದ ಅರ್ಚಿಸುತ್ತಿದ್ದೀಯೆ ತಾನೇ? ನಿನ್ನ ರಾಜ್ಯದಲ್ಲಿ ವಿಪ್ರರೂ, ಕ್ಷತ್ರಿಯರೂ, ವೈಶ್ಯವರ್ಗದವರೂ, ಶೂದ್ರರೂ ಮತ್ತು ಕುಟುಂಬಿಗಳೂ ತಮ್ಮ ತಮ್ಮ ಕರ್ಮಗಳಲ್ಲಿ ನಿರತರಾಗಿದ್ದಾರೆ ತಾನೇ? ನಿನ್ನ ರಾಜ್ಯದಲ್ಲಿ ಸ್ತ್ರೀಯರು, ಬಾಲಕರು, ಮತ್ತು ವೃದ್ಧರು ಶೋಕಿಸುತ್ತಿಲ್ಲ ಮತ್ತು ಬೇಡಿ ಜೀವಿಸುತ್ತಿಲ್ಲ ತಾನೇ? ನಿನ್ನ ಮನೆಯಲ್ಲಿ ಸೊಸೆ, ಪತ್ನೀ, ತಂಗಿ, ಮಗಳು – ಇವರೆಲ್ಲರೂ ಪೂಜಿಸಲ್ಪಡುತ್ತಿದ್ದಾರೆ ತಾನೇ? ನಮ್ಮ ಈ ರಾಜರ್ಷಿವಂಶವು ನಿನ್ನನ್ನು ಮಹೀಪತಿಯನ್ನಾಗಿ ಪಡೆದು ಯಥೋಚಿತವಾಗಿ ಯಶಸ್ಸನ್ನು ಕಳೆದುಕೊಳ್ಳುತ್ತಿಲ್ಲ ತಾನೇ?”

ಈ ಕುಶಲಪ್ರಶ್ನೆಸಂಯುಕ್ತವಾದ ಕುಶಲ ವಾಕ್ಯಗಳಿಗೆ ನ್ಯಾಯವಿದು ಯುಧಿಷ್ಠಿರನು ಉತ್ತರಿಸಿದನು:

“ರಾಜನ್! ನಿನ್ನ ತಪಸ್ಸು ವೃದ್ಧಿಯಾಗುತ್ತಿದೆಯೇ? ನಿನಗೆ ಬೇಗನೇ ಆಯಾಸವಾಗುತ್ತಿಲ್ಲ ತಾನೇ? ನಮ್ಮ ಜನನಿಯು ಆಯಾಸವಿಲ್ಲದೇ ಶುಶ್ರುಷೆಮಾಡುತ್ತಿದ್ದಾಳೆ ತಾನೇ? ಹಾಗಿದ್ದರೆ ಅವಳ ವನವಾಸವು ಸಫಲವಾದಂತೆ. ಘೋರತಪಸ್ಸಿನಲ್ಲಿ ನಿರತಳಾಗಿರುವ ಈ ನನ್ನ ದೊಡ್ಡಮ್ಮ ದೇವೀ ಗಾಂಧಾರಿಯು ಛಳಿಗಾಳಿಯಿಂದಲೂ, ನಡೆದ ಆಯಾಸದಿಂದಲೂ ಪೀಡಿತಳಾಗಿ ದುಃಖಿಸುತ್ತಿಲ್ಲ ತಾನೇ? ಕ್ಷತ್ರಧರ್ಮಪರಾಯಣರಾಗಿ ಹತರಾದ ಮಹಾವೀರ್ಯ ಪುತ್ರರನ್ನು ಸ್ಮರಿಸಿಕೊಂಡು ಅಪರಾಧಿಗಳಾದ ನಮ್ಮ ವಿಷಯದಲ್ಲಿ ಸದಾ ಅನಿಷ್ಟವನ್ನು ಚಿಂತಿಸುತ್ತಿಲ್ಲ ತಾನೇ? ವಿದುರನು ಎಲ್ಲಿದ್ದಾನೆ? ಅವನನ್ನು ನಾವು ಇಲ್ಲಿ ಕಾಣುತ್ತಿಲ್ಲವಲ್ಲ! ಈ ಸಂಜಯನು ಕುಶಲಿಯಾಗಿ ತಪೋನಿರತನಾಗಿದ್ದಾನೆ ತಾನೇ?”

ಹೀಗೆ ಹೇಳಲು ಧೃತರಾಷ್ಟ್ರನು ಜನಾಧಿಪ ಯುಧಿಷ್ಠಿರನಿಗೆ ಉತ್ತರಿಸಿದನು:

“ಪುತ್ರ! ಘೋರ ತಪಸ್ಸಿನಲ್ಲಿ ನಿರತನಾಗಿರುವ ವಿದುರನು ಕುಶಲಿಯಾಗಿದ್ದಾನೆ. ನಿರಾಹಾರನಾಗಿ, ಕೇವಲ ಗಾಳಿಯನ್ನೇ

ಸೇವಿಸುತ್ತಾ ಅವನು ಕೃಶನಾಗಿದ್ದಾನೆ. ಅವನ ನರ-ನಾಡಿಗಳು ಕಾಣುತ್ತಿವೆ. ಈ ಶೂನ್ಯ ಕಾನನದಲ್ಲಿ ಅವನು ಯಾವಾಗಲಾದರೊಮ್ಮೆ ಕೆಲವು ವಿಪ್ರರಿಗೆ ಕಾಣಿಸಿಕೊಳ್ಳುತ್ತಾನೆ."

ಅವನು ಹೀಗೆ ಹೇಳುತ್ತಿರುವಾಗಲೇ ಜಟಾಧಾರಿಯಾಗಿದ್ದ, ಮುಖವು ಸುಕ್ಕಿಹೋಗಿದ್ದ, ಕೃಶನಾಗಿದ್ದ, ದಿಗಂಬರನಾಗಿದ್ದ, ಕೊಳಕಾದ ಅಂಗಾಂಗಗಳಿಂದ ಕೂಡಿದ್ದ ಕ್ಷತ್ತ ವಿದುರನು ದೂರದಲ್ಲಿ ನಿಂತಿರುವುದನ್ನು ಮಹೀಪತಿ ಯುಧಿಷ್ಠಿರನಿಗೆ ತಿಳಿಸಲಾಯಿತು. ಆದರೆ ವಿದುರನು ಆಶ್ರಮದ ಕಡೆ ಒಮ್ಮೆ ತಿರುಗಿ ನೋಡಿ ಒಡನೆಯೇ ಹಿಂದಕ್ಕೆ ಹೊರಟುಬಿಟ್ಟನು.  ಕೂಡಲೇ ನೃಪತಿ ಯುಧಿಷ್ಠಿರನು ಏಕಾಕಿಯಾಗಿ ಅವನನ್ನು ಹಿಂಬಾಲಿಸಿ ಹೋದನು. ಘೋರ ವನವನ್ನು ಹೊಕ್ಕಿದ್ದ ವಿದುರನು ಅವನಿಗೆ ಒಮ್ಮೆ ಕಾಣುತ್ತಿದ್ದರೆ ಇನ್ನೊಮ್ಮೆ ಕಾಣುತ್ತಿರಲಿಲ್ಲ.

"ಭೋ ಭೋ ವಿದುರ! ನಾನು ನಿನ್ನ ಪ್ರಿಯ ರಾಜ ಯುಧಿಷ್ಠಿರ!"

ಎಂದು ಕೂಗಿಕೊಳ್ಳುತ್ತಾ ಪ್ರಯತ್ನಪಟ್ಟು ಆ ನರಪತಿಯು ವಿದುರನ ಹಿಂದೆ ಓಡಿದನು.

ಹೀಗೆ ಹಿಂಬಾಲಿಸಲ್ಪಟ್ಟ ವಿದುರನು ಕಾಡಿನ ಏಕಾಂತ ಸ್ಥಳವೊಂದರಲ್ಲಿ ಒಂದು ಮರಕ್ಕೆ ಒರಗಿ ನಿಂತುಕೊಂಡನು. ಅತ್ಯಂತ ಕ್ಷೀಣನಾಗಿ ಹೋಗಿದ್ದ, ಆಕೃತಿಯಲ್ಲಿ ಮಾತ್ರ ವಿದುರನಂತಿದ್ದ ಆ ಮಹಾಬುದ್ಧಿಯನ್ನು ಮಹಾಬುದ್ಧಿ ರಾಜಾ ಯುಧಿಷ್ಠಿರನು ಗುರುತಿಸಿದನು. ವಿದುರನಿಗೆ ಕೇಳುವಷ್ಟು ದೂರದಲ್ಲಿ ಅವನ ಎದುರಿಗೇ ನಿಂತು ರಾಜನು ಸಂಜ್ಞೆಮಾಡುತ್ತಾ “ನಾನು ಯುಧಿಷ್ಠಿರ!” ಎಂದು ಹೇಳಿದನು. ಅನಂತರ ವಿದುರನು ಎವೆಯಿಕ್ಕದೇ ರಾಜನನ್ನೇ ನೋಡುತ್ತಾ ಅವನ ದೃಷ್ಟಿಯಲ್ಲಿ ತನ್ನ ದೃಷ್ಟಿಯನ್ನು ಸೇರಿಸಿದನು. ಧೀಮಾನ್ ವಿದುರನು ಯುಧಿಷ್ಠಿರನ ಶರೀರದಲ್ಲಿ ತನ್ನ ಶರೀರವನ್ನು, ಪ್ರಾಣದಲ್ಲಿ ತನ್ನ ಪ್ರಾಣಗಳನ್ನು ಮತ್ತು ಇಂದ್ರಿಯಗಳಲ್ಲಿ ಇಂದ್ರಿಯಗಳನ್ನು ಇರಿಸಿ ಪ್ರವೇಶಿಸಿದನು. ವಿದುರನು ಯೋಗಬಲವನ್ನಾಶ್ರಯಿಸಿ ಧರ್ಮರಾಜನ ತೇಜಸ್ಸಿನಂತೆ ಪ್ರಜ್ವಲಿಸುತ್ತಿರುವನೋ ಎನ್ನುವಂತೆ ನೃಪತಿಯ ದೇಹವನ್ನು ಪ್ರವೇಶಿಸಿದನು. ವಿದುರನ ಶರೀರವು ಮಾತ್ರ ಅಲ್ಲಿಯೇ ಮರವನ್ನು ಎರಗಿ ನಿಂತಿರುವುದನ್ನು, ಕಣ್ಣುಗಳು ಸ್ತಬ್ಧವಾಗಿರುವುದನ್ನು ಆದರೆ ಚೇತನವು ಹೊರಟುಹೋಗಿರುವುದನ್ನು ರಾಜನು ನೋಡಿದನು. ಆಗ

ತನ್ನ



ಬಹುಗುಣವಂತನಾದಂತೆಯೂ ಭಾವಿಸಿಕೊಂಡನು. ವಿದ್ಯಾವಾನ್ ಪಾಂಡವ ಧರ್ಮರಾಜನು ತನ್ನ ಪುರಾತನ ಆತ್ಮವನ್ನೂ, ಮಹಾತೇಜಸ್ಸನ್ನೂ, ಯೋಗಧರ್ಮವನ್ನೂ ಮತ್ತು ಮಹಾತೇಜಸ್ವಿ ವ್ಯಾಸನು ಹೇಳಿದುದನ್ನೂ ಸ್ಮರಿಸಿಕೊಂಡನು. ಆಗ ಧರ್ಮರಾಜನಾದರೋ ಅಲ್ಲಿಯೇ ಅವನ ದಹನ ಸಂಸ್ಕಾರವನ್ನು ಮಾಡಲು ವಿಚಾರಿಸುತ್ತಿರುವಾಗ ಅಶರೀರ ವಾಣಿಯೊಂದು ನುಡಿಯಿತು:

> “ಭೋ ಭೋ ರಾಜನ್! ವಿದುರನ ಶರೀರವನ್ನು ಸುಡಬೇಡ! ಯತಿಧರ್ಮವನ್ನು ಪಾಲಿಸುತ್ತಿದ್ದವನ ಕಲೇವರವನ್ನು ಸುಡದಿರುವುದು ಸನಾತನ ಧರ್ಮವಾಗಿದೆ. ಭವಿಷ್ಯದಲ್ಲಿ ಇವನು ಸಂತಾನಕ ಎಂಬ ಹೆಸರಿನ ಲೋಕಗಳನ್ನು ಪಡೆಯುತ್ತಾನೆ. ಇವನಿಗಾಗಿ ಶೋಕಿಸಲೂ ಕೂಡದು!”

ಇದನ್ನು ಕೇಳಿದ ಧರ್ಮರಾಜನು ಪುನಃ ಹಿಂದಿರುಗಿ ಬಂದು ರಾಜ ವೈಚಿತ್ರವೀರ್ಯನಿಗೆ ನಡೆದುದೆಲ್ಲವನ್ನೂ ನಿವೇದಿಸಿದನು. ಆಗ ರಾಜ ಧೃತರಾಷ್ಟ್ರ, ಸರ್ವ ಜನರೂ, ಭೀಮಸೇನಾದಿಗಳೂ ಪರಮ ವಿಸ್ಮಿತರಾದರು. ಅದನ್ನು ಕೇಳಿ ಪ್ರೀತನಾದ ರಾಜನು ಧರ್ಮಜನಿಗೆ

> “ಜಲ-ಮೂಲ-ಫಲಗಳನ್ನು ನನ್ನಿಂದ ನೀನು ಸ್ವೀಕರಿಸಬೇಕು!

ರಾಜನ್! ತಾನು ಏನನ್ನು ತಿನ್ನುತ್ತಾನೋ ಅದರಿಂದಲೇ ಮನುಷ್ಯನು ಅತಿಥಿಯನ್ನು ಸತ್ಕರಿಸಬೇಕು ಎಂದು ಹೇಳುತ್ತಾರೆ”

ಎಂದು ಹೇಳಿದನು. ಇದಕ್ಕೆ ಹಾಗೆಯೇ ಆಗಲೆಂದು ನೃಪನಿಗೆ ಹೇಳಿ ಧರ್ಮಾತ್ಮಜನು ರಾಜನು ಕೊಟ್ಟ ಫಲಮೂಲಗಳನ್ನು ಅನುಜರೊಂದಿಗೆ ಭುಂಜಿಸಿದನು. ಫಲ-ಮೂಲ-ಜಲಗಳನ್ನು ಸೇವಿಸಿ ಅವರು ಎಲ್ಲರೂ ಮರದ ಬುಡದಲ್ಲಿಯೇ ಆ ರಾತ್ರಿಯನ್ನು ಕಳೆದರು.

## ವ್ಯಾಸಾಗಮನ

ಹೀಗೆ ಆ ಆಶ್ರಮದಲ್ಲಿದ್ದ ಆ ಪುಣ್ಯಕರ್ಮಿಗಳು ನಕ್ಷತ್ರಸಂಪನ್ನವಾದ ಮಂಗಳಕರ ರಾತ್ರಿಯನ್ನು ಸುಖವಾಗಿ ಕಳೆದರು. ಅಲ್ಲಲ್ಲಿ ಅವರ ನಡುವೆ ಧರ್ಮಾರ್ಥಲಕ್ಷಣಯುಕ್ತವಾದ, ವಿಚಿತ್ರ ಪದಸಂಚಾರಗಳುಳ್ಳ, ನಾನಾ ಶೃತಿಗಳಿಂದ ಕೂಡಿದ ಸಂಭಾಷಣೆಗಳು ನಡೆಯುತ್ತಿದ್ದವು. ಪಾಂಡವರಾದರೋ ಬಹುಮೂಲ್ಯ ಹಾಸಿಗೆಗಳನ್ನು ಪರಿತ್ಯಜಿಸಿ ತಾಯಿಯೊಡನೆ ನೆಲದ ಮೇಲೆಯೇ ಮಲಗಿಕೊಂಡರು. ಮಹಾಮನಸ್ವೀ ರಾಜಾ ಧೃತರಾಷ್ಟ್ರನು ಯಾವ ಆಹಾರವನ್ನು ಉಂಡನೋ ಅದನ್ನೇ ಪಾಂಡವರೂ ಸೇವಿಸಿ ರಾತ್ರಿಯನ್ನು ಕಳೆದರು. ರಾತ್ರಿಯನ್ನು ಕಳೆದು,

ಪೂರ್ವಾಹ್ನಿಕ ಕ್ರಿಯೆಗಳನ್ನು ಪೂರೈಸಿ ಕೌಂತೇಯ ಯುಧಿಷ್ಠಿರನು, ಧೃತರಾಷ್ಟ್ರನ ಅನುಜ್ಞೆಯನ್ನು ಪಡೆದು, ತಮ್ಮಂದಿರೊಡನೆ, ಅಂತಃಪುರದ ಪರಿವಾರದವರೊಡನೆ, ಸೇವಕರು ಮತ್ತು ಪುರೋಹಿತರೊಂದಿಗೆ ಅನಾಯಾಸವಾಗಿ ಅಲ್ಲಲ್ಲಿದ್ದ ಆಶ್ರಮ ಮಂಡಲಗಳನ್ನು ನೋಡಿದನು. ಅಲ್ಲಿ ಅವರು ಅಗ್ನಿಗಳು ಪ್ರಜ್ವಲಿಸುತ್ತಿದ್ದ ವೇದಿಗಳನ್ನೂ, ಸ್ನಾನಮಾಡಿ ಅಗ್ನಿಯಲ್ಲಿ ಆಹುತಿಗಳನ್ನು ನೀಡಲು ಕುಳಿತುಕೊಂಡಿದ್ದ ಮುನಿಗಳನ್ನೂ, ನೋಡಿದರು. ವನ್ಯಪುಷ್ಪಗಳ ಗೊಂಚಲುಗಳಿಂದಲೂ, ತುಪ್ಪದ ಆಹುತಿಯಿಂದಾಗಿ ಮೇಲೆದ್ದ ಹೋಮಧೂಮಗಳಿಂದಲೂ, ಮುನಿಗಣಗಳಿಂದಲೂ ಕೂಡಿದ್ದ ಅವುಗಳು ಬ್ರಾಹ್ಮೀ ಕಾಂತಿಯಿಂದ ಬೆಳಗುತ್ತಿದ್ದವು. ಅಲ್ಲಲ್ಲಿ ಮೃಗಗಳ ಗುಂಪುಗಳು ಯಾವುದೇ ಉದ್ವಿಗ್ನತೆಯೂ ಇಲ್ಲದೇ ಸೇರಿಕೊಂಡಿದ್ದವು. ಪಕ್ಷಿಗಣಗಳು ಶಂಕೆಗಳಿಲ್ಲದೇ ಕಲಕಲನಿನಾದಗಳನ್ನು ಮಾಡುತ್ತಿದ್ದವು. ನವಿಲುಗಳ ಕೇಕಾರವಗಳಿಂದಲೂ, ಜಾತಕಪಕ್ಷಿಗಳ ಅವ್ಯಕ್ತ ಮಧುರ ಧ್ವನಿಗಳಿಂದಲೂ, ಕೋಗಿಲೆಗಳ ಇಂಪಾದ ಶುಭಕರ ಕೂಗುಗಳಿಂದಲೂ, ಅಲ್ಲಲ್ಲಿ ಕೇಳಿಬರುತ್ತಿದ್ದ ದ್ವಿಜರ ವೇದಘೋಷಗಳಿಂದಲೂ ಆ ಆಶ್ರಮಮಂಡಲವು ಅಲಂಕೃತವಾಗಿತ್ತು. ಫಲಮೂಲಗಳನ್ನೇ ಸೇವಿಸುತ್ತಿದ್ದ ಅನೇಕ ಮಹಾಪುರುಷರಿಂದ ಅದು ಶೋಭಿಸುತ್ತಿತ್ತು.

ಅನಂತರ ಮಹೀಪತೀ ರಾಜಾ ಯುಧಿಷ್ಠಿರನು ತಾಪಸರಿಗಾಗಿ ತಂದಿದ್ದ ಕಾಂಚನ ಕಲಶಗಳನ್ನೂ, ತಾಮ್ರದ ಕಲಶಗಳನ್ನೂ, ಮೃಗಚರ್ಮಗಳನ್ನೂ, ಕಂಬಳಿಗಳನ್ನೂ, ಸ್ರುಕ್-ಸ್ರುವಗಳನ್ನೂ, ಕಮಂಡಲುಗಳನ್ನೂ, ಸ್ಥಾಲಿಗಳನ್ನೂ, ಮಣ್ಣಿನ ಪಾತ್ರೆಗಳನ್ನೂ, ಮತ್ತು ಯಾರಿಗೆ ಯಾವುದು ಇಷ್ಟವಾಗಿದೆಯೂ ಅವುಗಳನ್ನೂ ಕೊಟ್ಟನು. ಹೀಗೆ ರಾಜಾ ಧರ್ಮಾತ್ಮ ಮಹೀಪತಿ ಯುಧಿಷ್ಠಿರನು ಆಶ್ರಮಮಂಡಲದಲ್ಲಿ ತಿರುಗಾಡಿ ಆ ಎಲ್ಲ ವಸ್ತುಗಳನ್ನೂ ಧನವನ್ನೂ ಹಂಚಿ, ಧೃತರಾಷ್ಟ್ರನ ಆಶ್ರಮಕ್ಕೆ ಹಿಂದಿರುಗಿದನು. ಅಲ್ಲಿ ಆಹ್ನೀಕಗಳನ್ನು ಪೂರೈಸಿ ಗಾಂಧಾರಿಯೊಡನೆ ಕುಳಿತಿದ್ದ ಅವ್ಯಗ್ರ ರಾಜಾ ಮನೀಷೀ ಧೃತರಾಷ್ಟ್ರನನ್ನು ಕಂಡನು. ಅನತಿದೂರದಲ್ಲಿಯೇ ಶಿಷ್ಯೆಯಂತೆ ಕೈಮುಗಿದು ನಿಂದಿದ್ದ ಆ ಸತತ ಧರ್ಮಚಾರಿಣೀ ತಾಯಿ ಕುಂತಿಯನ್ನೂ ಅವನು ನೋಡಿದನು. ರಾಜನಿಗೆ ತನ್ನ ಹೆಸರನ್ನು ಹೇಳಿ ನಮಸ್ಕರಿಸಿ, ಕುಳಿತುಕೋ ಎಂದು ಆಜ್ಞೆಯಿತ್ತನಂತರ ಯುಧಿಷ್ಠಿರನು ದರ್ಭಾಸನದ ಮೇಲೆ ಕುಳಿತುಕೊಂಡನು. ಭೀಮಸೇನಾದಿ ಪಾಂಡವರೂ ಕೂಡ ಆ ಕೌರವರ್ಷಭನನ್ನು ವಂದಿಸಿ, ಪಾರ್ಥಿವನ ಆಜ್ಞೆಯನ್ನು ಪಡೆದು ಒಟ್ಟಾಗಿ ಕುಳಿತುಕೊಂಡರು. ಕುರುರಾಜ ಧೃತರಾಷ್ಟ್ರನ ಅನುಜ್ಞೆ ಪಡೆದು ಪಾಂಡವರು ವಿವಿಧ ಅನ್ನ-ಪಾನಗಳನ್ನು ಸೇವಿಸುತ್ತಾ

ವಿಶ್ರಮಿಸುತ್ತಿದ್ದರು. ಹೀಗೆ ಅವರು ವನದಲ್ಲಿ ಸೈನ್ಯ-ಸ್ತ್ರೀಯರೊಂದಿಗೆ ಒಂದು ತಿಂಗಳು ವಾಸಿಸಿದರು.

ಹೀಗೆ ಅವರಿಂದ ಪರಿವೃತನಾದ ರಾಜ ಕೌರವನು ದೇವತೆಗಳಿಂದ ಸುತ್ತುವರೆಯಲ್ಪಟ್ಟ ಬೃಹಸ್ಪತಿಯಂತೆ ಬೆಳಗುತ್ತಿರುವ ಬ್ರಾಹ್ಮೀ ಕಾಂತಿಯಿಂದ ಕಂಗೊಳಿಸುತ್ತಿದ್ದನು. ಹೀಗೆ ಅವರು ಕುಳಿತುಕೊಂಡಿರಲು ಅಲ್ಲಿಗೆ ಕುರುಕ್ಷೇತ್ರನಿವಾಸಿಗಳಾಗಿದ್ದ ಶತಯೂಪನೇ ಮೊದಲಾದ ಮಹರ್ಷಿಗಳು ಬಂದು ಸೇರಿದರು. ದೇವರ್ಷಿಗಣ ಪೂಜಿತನಾದ ಮಹಾತೇಜಸ್ವಿ ವಿಪ್ರ ಭಗವಾನ್ ವ್ಯಾಸನೂ ಕೂಡ ತನ್ನ ಶಿಷ್ಯರಿಂದೊಡಗೂಡಿ ನೃಪನಿಗೆ ಕಾಣಿಸಿಕೊಂಡನು. ಆಗ ರಾಜಾ ಕೌರವ್ಯ, ವೀರ್ಯವಾನ್ ಕುಂತೀಪುತ್ರ, ಮತ್ತು ಭೀಮಸೇನಾದಿಗಳು ಮೇಲೆದ್ದು ಅವನನ್ನು ಪೂಜಿಸಿದರು. ಶತಯೂಪಾದಿಗಳಿಂದ ಸುತ್ತುವರೆಯಲ್ಪಟ್ಟು ಆಗಮಿಸಿದ ವ್ಯಾಸನು ಮಹೀಪಾಲ ಧೃತರಾಷ್ಟ್ರನಿಗೆ ಕುಳಿತುಕೊಳ್ಳಲು ಹೇಳಿದನು. ಅನಂತರ ದರ್ಭೆಯನ್ನು ಹಾಸಿ ಕೃಷ್ಣಾಜಿನವನ್ನು ಹೊದಿಸಿ, ತನಗಾಗಿಯೇ ಹೊಸದಾಗಿ ಸಿದ್ಧಪಡಿಸಿದ ಶ್ರೇಷ್ಠ ಕುಶಾಸನದಲ್ಲಿ ವ್ಯಾಸನು ಕುಳಿತುಕೊಂಡನು. ವಿಪುಲ ತೇಜಸ್ವಿಗಳಾಗಿದ್ದ ಆ ದ್ವಿಜಶ್ರೇಷ್ಠರೆಲ್ಲರೂ ದ್ವೈಪಾಯನನ ಅನುಮತಿಯನ್ನು ಪಡೆದು ಅವನ ಸುತ್ತಲೂ ಕುಳಿತುಕೊಂಡರು. ನೃಪನ

ಸನ್ನಿಧಿಯಲ್ಲಿ ಅವರೆಲ್ಲರೂ ವ್ಯಾಸನನ್ನು ಸುತ್ತುವರೆದು ಮಾತನಾಡುತ್ತಿರಲು ಇತರ ಮಹಾತಪಸ್ವಿ ಮುನಿಗಳಾದ ನಾರದ, ಪರ್ವತ, ದೇವಲರೂ, ವಿಶ್ವಾವಸು, ತುಂಬುರು ಮತ್ತು ಚಿತ್ರಸೇನರೂ ಅಲ್ಲಿಗೆ ಆಗಮಿಸಿದರು. ಧೃತರಾಷ್ಟ್ರನಿಂದ ಅನುಜ್ಞಾತನಾದ ಕುರುರಾಜಾ ಯುಧಿಷ್ಠಿರನು ಮಹಾಮನಸ್ಕರಾದ ಅವರೆಲ್ಲರನ್ನೂ ಯಥಾನ್ಯಾಯವಾಗಿ ಪೂಜಿಸಿದನು. ಯುಧಿಷ್ಠಿರನಿಂದ ಪೂಜೆಗಳನ್ನು ಸ್ವೀಕರಿಸಿ ಅವರೆಲ್ಲರೂ ಶ್ರೇಷ್ಠ ನವಿಲುಗರಿಗಳಿಂದ ಮಾಡಲ್ಪಟ್ಟ ಪುಣ್ಯ ಆಸನಗಳಲ್ಲಿ ಕುಳಿತುಕೊಂಡರು. ಹಾಗೆ ಅವರು ಅಲ್ಲಿ ಕುಳಿತುಕೊಳ್ಳಲು ಮಹಾಮತಿ ರಾಜಾ ಕುರೂದ್ವಹ ಧೃತರಾಷ್ಟ್ರನು ಪಾಂಡುಪುತ್ರರಿಂದ ಪರಿವೃತನಾಗಿ ಕುಳಿತುಕೊಂಡನು. ಗಾಂಧಾರೀ, ಕುಂತೀ, ದ್ರೌಪದೀ, ಸಾತ್ವತೀ ಸುಭದ್ರೆ ಹಾಗೂ ಅನ್ಯ ಸ್ತ್ರೀಯರೂ ಕೂಡ ಒಟ್ಟಿಗೇ ಅಲ್ಲಲ್ಲಿ ಕುಳಿತುಕೊಂಡರು. ಅಲ್ಲಿ ಧರ್ಮಿಷ್ಠರಾದ ಋಷಿಗಳ ಮತ್ತು ದೇವಾಸುರರ ಮಿಶ್ರಿತ ಪುರಾಣಕಥೆಗಳು ನಡೆದವು. ಆಗ ಕಥೆಗಳ ಅಂತ್ಯದಲ್ಲಿ ಮಾತನಾಡುವವರಲ್ಲಿ ಶ್ರೇಷ್ಠ ಮಹಾತೇಜಸ್ವಿ ಸರ್ವವೇದವಿದರಲ್ಲಿ ಶ್ರೇಷ್ಠ ವ್ಯಾಸನು ಪ್ರಜ್ಞಾಚಕ್ಷು ರಾಜಾ ಧೃತರಾಷ್ಟ್ರನಿಗೆ ಪ್ರೀತಿಪೂರ್ವಕವಾದ ಈ ಮಾತುಗಳನ್ನಾಡಿದನು:

“ಮಹಾಬಾಹೋ! ಧೃತರಾಷ್ಟ್ರ! ನಿನ್ನ ತಪಸ್ಸು ವರ್ಧಿಸುತ್ತಿದೆ

ತಾನೆ? ವನವಾಸದಲ್ಲಿ ನಿನ್ನ ಮನಸ್ಸು ಸಂತೋಷಗೊಂಡಿದೆ ತಾನೆ? ಪುತ್ರವಿನಾಶದಿಂದ ಉಂಟಾದ ಶೋಕವು ನಿನ್ನ ಹೃದಯದಲ್ಲಿ ಉಳಿದುಕೊಂಡಿಲ್ಲ ತಾನೆ? ನಿನ್ನಲ್ಲಿರುವ ಸರ್ವ ಜ್ಞಾನಗಳೂ ನಿನಗೆ ಪ್ರಸನ್ನತೆಯನ್ನು ನೀಡುತ್ತಿವೆ ತಾನೆ? ಬುದ್ಧಿಯನ್ನು ದೃಢವಾಗಿರಿಸಿಕೊಂಡು ಅರಣ್ಯವಾಸದ ವಿಧಿಯನ್ನು ಪೂರೈಸುತ್ತಿರುವೆ ತಾನೆ? ಸೊಸೆ ಗಾಂಧಾರಿಯು ಶೋಕವನ್ನು ಅನುಭವಿಸುತ್ತಿಲ್ಲ ತಾನೆ? ಮಹಾಪ್ರಾಜ್ಞೆ, ಬುದ್ಧಿಮತೀ, ಧರ್ಮಾರ್ಥದರ್ಶಿನೀ, ಹುಟ್ಟು-ಸಾವುಗಳ ತತ್ತ್ವಗಳನ್ನು ತಿಳಿದುಕೊಂಡಿರುವ ಆ ದೇವಿಯು ಶೋಕಿಸುತ್ತಿಲ್ಲ ತಾನೇ? ಗುರುಶುಶ್ರೂಷಣೆಯಲ್ಲಿಯೇ ನಿರತಳಾಗಿದ್ದ ಮತ್ತು ತನ್ನ ರಾಜ್ಯವನ್ನು ತ್ಯಜಿಸಿರುವ ಕುಂತಿಯು ಅಹಂಕಾರವಿಲ್ಲದೇ ನಿನ್ನ ಶುಶ್ರೂಷೆಗೈಯುತ್ತಿರುವಳು ತಾನೇ? ರಾಜಾ ಧರ್ಮಸುತನನ್ನು ನೀನು ಪ್ರೀತಿಯಿಂದ ಅಭಿನಂದಿಸುತ್ತೀಯೆ ತಾನೆ? ಭೀಮ-ಅರ್ಜುನ-ಯಮಳರನ್ನು ಕೂಡ ನೀನು ಸಾಂತ್ವನಗೊಳಿಸಿದ್ದೀಯೆ ತಾನೆ? ಇವರನ್ನು ನೋಡಿ ನಿನಗೆ ಸಂತೋಷವಾಯಿತು ತಾನೆ? ನಿನ್ನ ಮನಸ್ಸು ನಿರ್ಮಲಗೊಂಡಿದೆ ತಾನೆ? ಜ್ಞಾನವನ್ನು ಪಡೆದು ನೀನು

ಶುದ್ಧಭಾವನಾಗಿರುವೆ ತಾನೇ? ನಿರ್ವೈರ್ಯತೆ, ಸತ್ಯ ಮತ್ತು ದ್ರೋಹಬಗೆಯದೇ ಇರುವುದು ಈ ಮೂರು ಸರ್ವಭೂತಗಳಿಗೂ ಶ್ರೇಷ್ಠವೆಂದು ತಿಳಿದುಕೋ! ವನದಲ್ಲಿ ಸಿಗುವ ಆಹಾರವನ್ನು ಸೇವಿಸುವ ಅಥವಾ ಮುನಿಗಳಂತೆ ಜೀವಿಸುವ ಈ ವನವಾಸದಿಂದ ನೀನು ಪರಿತಪಿಸುತ್ತಿಲ್ಲ ತಾನೇ? ಮಹಾತ್ಮ ವಿದುರನು ಯಾವ ಮಹಾ ಧರ್ಮದ ವಿಧಿಯಿಂದ ಹೊರಟುಹೋದನೆನ್ನುವುದು ನನಗೆ ತಿಳಿದಿದೆ. ಮಾಂಡವ್ಯನ ಶಾಪದಿಂದಾಗಿ ಧರ್ಮನೇ ಆ ಮಹಾಬುದ್ಧಿ, ಮಹಾಯೋಗೀ, ಮಹಾತ್ಮ, ಮಹಾಮನ ವಿದುರನಾಗಿದ್ದನೆಂದು ತಿಳಿ. ದೇವತೆಗಳ ಬೃಹಸ್ಪತಿಯಾಗಲೀ ಅಥವಾ ಅಸುರರ ಶುಕ್ರನಾಗಲೀ ಆ ಪುರುಷರ್ಷಭ ವಿದುರನಷ್ಟು ಬುದ್ಧಿಸಂಪನ್ನರಾಗಿಲ್ಲ. ಬಹಳ ಕಾಲದಿಂದ ಸಂಪಾದಿಸಿ ಇಟ್ಟುಕೊಂಡಿದ್ದ ತಪೋಬಲವನ್ನು ವ್ಯಯಿಸಿ ಋಷಿಮಾಂಡವ್ಯನು ಸನಾತನ ಧರ್ಮನಿಗೆ ಶಾಪವನ್ನಿತ್ತು ಪರಾಭವಗೊಳಿಸಿದ್ದನು. ಹಿಂದೆ ಬ್ರಹ್ಮನ ನಿಯೋಗದಿಂದ ಮತ್ತು ತನ್ನದೇ ಬಲದಿಂದ ಆ ಸುಮಹಾಮತಿ ಧರ್ಮನು ವಿಚಿತ್ರವೀರ್ಯನ ಕ್ಷೇತ್ರದಲ್ಲಿ ನನ್ನ ಮಗನಾಗಿ ಜನಿಸಿದನು.

ನಿನ್ನ ತಮ್ಮನು ಸನಾತನ ದೇವದೇವ ಧರ್ಮನಾಗಿದ್ದನು. ಧರ್ಮವನ್ನು ಧಾರಣೆಮಾಡಿ ಯಾವಾಗಲೂ ಧರ್ಮದ ವಿಷಯದಲ್ಲಿಯೇ ಯೋಚಿಸುತ್ತಿದ್ದ ಅವನನ್ನು ವಿದ್ವಾಂಸರು ಧರ್ಮನೆಂದೇ ತಿಳಿದಿದ್ದರು. ಆ ಸನಾತನ ಧರ್ಮನು ಸತ್ಯ, ದಮ, ನಿಯಮ, ಅಹಿಂಸೆ, ದಾನ ಮತ್ತು ತಪಸ್ಸುಗಳಿಂದ ವೃದ್ಧಿಸುತ್ತಾನೆ. ಯಾರ ಯೋಗಬಲದಿಂದ ಕುರುರಾಜ ಯುಧಿಷ್ಠಿರನು ಹುಟ್ಟಿದನೋ ಅವನೇ ಆ ಅಮಿತಬುದ್ಧಿ ಧರ್ಮನೆಂದು ತಿಳಿಯಬೇಕು. ಹೇಗೆ ಅಗ್ನಿ-ವಾಯು-ಜಲ-ಪೃಥ್ವೀ-ಆಕಾಶಗಳು ಇಹ-ಪರಗಳೆರಡರಲ್ಲಿಯೂ ಇರುತ್ತವೆಯೋ ಹಾಗೆ ಧರ್ಮನು ಎರಡೂ ಲೋಕಗಳಲ್ಲಿ ವ್ಯಾಪ್ತನಾಗಿದ್ದಾನೆ. ಎಲ್ಲಕಡೆ ಹೋಗಬಲ್ಲ ಮತ್ತು ಚರಾಚರಗಳೆಲ್ಲವನ್ನೂ ವ್ಯಾಪಿಸಿರುವ ಆ ದೇವದೇವ ಧರ್ಮನು ಪಾಪಗಳು ಸುಟ್ಟುಹೋದ ಸಿದ್ಧರಿಗೆ ಕಾಣಿಸುತ್ತಾನೆ. ಧರ್ಮನೇ ವಿದುರನು. ವಿದುರನೇ ಈ ಪಾಂಡವನು. ನಿನ್ನ ಮುಂದೆ ಸೇವಕನಂತೆ ನಿಂತಿರುವ ಈ ಪಾಂಡವನೇ ಅವನು. ಮಹಾಯೋಗಬಲಾನ್ವಿತನಾದ ನಿನ್ನ ಆ ಬುದ್ಧಿಸತ್ತಮ ತಮ್ಮನು ತನ್ನ ಆತ್ಮವನ್ನು ಅದೃಷ್ಟವಶಾತ್ ಈ ಮಹಾತ್ಮ

ಕೌಂತೇಯನಲ್ಲಿ ಪ್ರವೇಶಿಸಿದ್ದಾನೆ. ನಿನಗೂ ಕೂಡ ಬೇಗನೇ ಶ್ರೇಯಸ್ಸುಂಟಾಗುವಂತೆ ಮಾಡುತ್ತೇನೆ. ನಿನ್ನ ಸಂಶಯವನ್ನು ದೂರಗೊಳಿಸಲೆಂದೇ ನಾನು ಇಲ್ಲಿಗೆ ಬಂದಿದ್ದೇನೆಂದು ತಿಳಿ. ಲೋಕದ ಯಾವ ಮಹರ್ಷಿಗಳೂ ಈ ಹಿಂದೆ ಮಾಡಿರದಂತಹ ಕರ್ಮವನ್ನು ಮಾಡಲಿದ್ದೇನೆ. ಆಶ್ಚರ್ಯಭೂತವಾದ ನನ್ನ ತಪಸ್ಸಿನ ಫಲವನ್ನು ತೋರಿಸಿಕೊಡುತ್ತೇನೆ. ಅಮಾನುಷವಾದ ಏನನ್ನು ಪಡೆಯಲು ಬಯಸುತ್ತೀಯೆ? ಅಥವಾ ಏನನ್ನು ನೋಡಲು, ಸ್ಪೃಷ್ಟಿಸಲು ಮತ್ತು ಕೇಳಲು ಬಯಸುತ್ತೀಯೆ? ಹೇಳು. ಅದನ್ನೇ ನಾನು ಮಾಡಿ ತೋರಿಸುತ್ತೇನೆ!

ರಾಜೇಂದ್ರ! ನಿನ್ನ ಪುತ್ರರ ಕರ್ಮಗಳ ಕುರಿತಾದ ಶೋಕಿಸಿ ಸುಡುತ್ತಿರುವ ನಿನ್ನ ಹೃದಯದಲ್ಲಿ ಅಡಗಿಕೊಂಡಿರುವುದನ್ನು ನಾನು ತಿಳಿದುಕೊಂಡಿದ್ದೇನೆ. ಹಾಗೆಯೇ ಗಾಂಧಾರಿಯ ಹೃದಯದಲ್ಲಿ ನೆಲೆಸಿರುವ ದುಃಖವೇನಿದೆಯೋ, ಕುಂತಿ ಮತ್ತು ದ್ರೌಪದಿಯರ ಹೃದಯದಲ್ಲಿರುವ ದುಃಖವನ್ನೂ, ಕೃಷ್ಣನ ತಂಗಿ ಸುಭದ್ರೆಯು ಸಹಿಸಿಕೊಂಡಿರುವ ಪುತ್ರವಿನಾಶದಿಂದುಂಟಾದ ತೀವ್ರ ದುಃಖವನ್ನೂ ನಾನು

ತಿಳಿದುಕೊಂಡಿರುವೆನು. ವಾಸ್ತವವಾಗಿ ಎಲ್ಲರೂ ಇಲ್ಲಿ ಬಂದು ಸೇರಿರುವರೆಂದೇ ನಿನ್ನಲ್ಲಿರುವ ಸಂಶಯವನ್ನು ನಿವಾರಿಸುವ ಸಲುವಾಗಿಯೇ ನಾನು ಇಲ್ಲಿಗೆ ಬಂದಿದ್ದೇನೆ. ಬಹುಕಾಲದಿಂದ ಸಂಗ್ರಹಿಸಿ ಇಟ್ಟುಕೊಂಡಿರುವ ನನ್ನ ತಪಸ್ಸಿನ ವೀರ್ಯವನ್ನು ಇಂದು ಈ ಎಲ್ಲ ದೇವಗಂಧರ್ವರೂ ಮಹರ್ಷಿಗಳೂ ನೋಡಲಿ! ಹೇಳು! ನಿನ್ನ ಯಾವ ಕಾಮನೆಯನ್ನು ನಡೆಯಿಸಿಕೊಡಲಿ? ನಾನೀಗ ವರವನ್ನು ಕೊಡಲು ಉತ್ಸುಕನಾಗಿದ್ದೇನೆ. ನನ್ನ ತಪಸ್ಸಿನ ಬಲವನ್ನು ನೋಡು!"

ಅಮಿತಬುದ್ಧಿ ವ್ಯಾಸನು ಹೀಗೆ ಹೇಳಲು ರಾಜೇಂದ್ರ ಧೃತರಾಷ್ಟ್ರನು ಒಂದು ಕ್ಷಣ ಯೋಚಿಸಿ ಈ ಮಾತನ್ನಾಡಲು ಪ್ರಾರಂಭಿಸಿದನು:

"ನಿಮ್ಮಂಥಹ ಸಾಧುಗಳೊಡನೆ ನನ್ನ ಸಮಾಗಮವಾಯಿತೆಂದರೆ ನನ್ನ ಜೀವಿತವು ಸಫಲವಾಯಿತೆಂದೇ! ಧನ್ಯನಾಗಿದ್ದೇನೆ. ಅನುಗೃಹೀತನಾಗಿದ್ದೇನೆ! ತಪೋಧನರೇ! ಬ್ರಹ್ಮಕಲ್ಪರಾದ ನಿಮ್ಮೊಡನೆ ಸಮಾಗಮವಾಗಿರುವುದರಿಂದಲೇ ನನಗೆ ಇಷ್ಟವಾದ ಈ ಸ್ಥಿತಿಯನ್ನು ಪಡೆದಿದ್ದೇನೆ. ನಿಮ್ಮ ದರ್ಶನಮಾತ್ರದಿಂದಲೇ ನಾನು

ಪವಿತ್ರನಾಗಿರುವೆನೆನ್ನುವುದರಲ್ಲಿ ಸಂಶಯವಿಲ್ಲ. ನನಗೆ ಪರಲೋಕದ ಯಾವ ಭಯವೂ ಇಲ್ಲವಾಗಿದೆ. ಆದರೆ ಅತ್ಯಂತ ದುರ್ಬುದ್ಧಿಯಾಗಿದ್ದ, ಮೂಢ ದುರ್ಯೋಧನನ ಅನ್ಯಾಯದಿಂದ ನನ್ನ ಎಲ್ಲ ಮಕ್ಕಳೂ ಹತರಾದರೆನ್ನುವುದನ್ನು ಸ್ಮರಿಸಿಕೊಂಡು ನಿತ್ಯವೂ ನನ್ನ ಮನಸ್ಸು ನೋಯುತ್ತದೆ. ಪಾಪಬುದ್ಧಿಯ ಅವನು ಪಾಪಿಗಳಲ್ಲದ ಪಾಂಡವರನ್ನು ಮೋಸಗೊಳಿಸಿ, ಬಹುಬೇಗ ಸೈನಿಕರು-ವಾಹನಗಳೊಂದಿಗೆ ಇಡೀ ಪೃಥ್ವಿಯನ್ನೇ ನಾಶಗೊಳಿಸಿಬಿಟ್ಟನು. ನಾನಾ ಜನಪದಗಳ ಒಡೆಯರು ಮಹಾತ್ಮ ರಾಜರು ಎಲ್ಲರೂ ನನ್ನ ಮಗನಿಗಾಗಿ ಬಂದು ಎಲ್ಲರೂ ಮೃತ್ಯುವಶರಾದರು. ಆ ಶೂರರು ಪುತ್ರರನ್ನು, ಪತ್ನಿಯರನ್ನು ಮತ್ತು ಮನಸ್ಸಿಗೆ ಅತ್ಯಂತ ಪ್ರಿಯವಾದ ಪ್ರಾಣಗಳನ್ನೂ ತೊರೆದು ಪ್ರೇತರಾಜನ ನಿವೇಶನವನ್ನು ಸೇರಿಬಿಟ್ಟರು. ಮಿತ್ರನಿಗಾಗಿ ಯುದ್ಧದಲ್ಲಿ ಹತರಾದ ಅವರ ಗತಿಯೇನಾಗಿರಬಹುದು? ಹಾಗೆಯೇ ಯುದ್ಧದಲ್ಲಿ ಹತರಾದ ನನ್ನ ಪುತ್ರ-ಪೌತ್ರರ ಗತಿಯೇನಾಗಿರಬಹುದು? ಮಹಾಬಲ ಶಾಂತನವ ಬೀಷ್ಮ ಮತ್ತು ದ್ವಿಜಸತ್ತಮ ವೃದ್ಧ ದ್ರೋಣರನ್ನು ಸಾವಿಗೀಡುಮಾಡಿ

ನನ್ನ ಮನಸ್ಸಿಗೆ ಸತತವೂ ನೋವಾಗುತ್ತಿದೆ. ಭೂಮಿ-ರಾಜ್ಯಗಳನ್ನು ಬಯಸಿದ್ದ ನನ್ನ ಮೂಢ ಪುತ್ರನ ಪಾಪದಿಂದಾಗಿ ಸುಹೃದಯರೊಂದಿಗೆ ದ್ವೇಷಕಟ್ಟಿಕೊಂಡು ಬೆಳಗುತ್ತಿದ್ದ ಈ ಕುಲವು ನಾಶವಾಗಿಬಿಟ್ಟಿತು. ಇವೆಲ್ಲವನ್ನೂ ಸ್ಮರಿಸಿಕೊಂಡು ಹಗಲು-ರಾತ್ರಿ ಚಿಂತಾಗ್ನಿಯಿಂದ ಬೆಂದುಹೋಗುತ್ತಿರುವ ದುಃಖಶೋಕಗಳಿಂದ ಪೀಡಿತನಾಗಿರುವ ನನಗೆ ಶಾಂತಿಯೇ ಇಲ್ಲವಾಗಿದೆ. ತಂದೆಯೇ! ಹೀಗೆ ಚಿಂತಿಸುತ್ತಿರುವ ನನಗೆ ನೆಲೆಯೇ ಇಲ್ಲದಂತಾಗಿದೆ!"

ರಾಜರ್ಷಿಯ ವಿಧವಿಧವಾದ ಆ ಪರಿವೇದನೆಯನ್ನು ಕೇಳಿ ಗಾಂಧಾರಿಯ ಶೋಕವೂ ನವೀಕೃತವಾಯಿತು. ಹಾಗೆಯೇ ಕುಂತಿ, ದ್ರುಪದಪುತ್ರಿ, ಸುಭದ್ರೆ, ಮತ್ತು ಕೌರವನ ಸುಂದರ ಸೊಸೆಯಂದಿರ ದುಃಖವೂ ನವೀಕೃತವಾಯಿತು. ಕಣ್ಣುಗಳಿಗೆ ಬಟ್ಟೆಯನ್ನು ಕಟ್ಟಿಕೊಂಡಿದ್ದ ದೇವೀ ಗಾಂಧಾರಿಯು ಪುತ್ರಶೋಕದ ಆವೇಶದಿಂದ ಎದ್ದು ನಿಂತು ಕೈಮುಗಿದು ತನ್ನ ಮಾವ ವ್ಯಾಸನಿಗೆ ಹೇಳಿದಳು:

"ವಿಭೋ! ಮುನಿಪುಂಗವ! ಈ ರಾಜನು ಪುತ್ರರನ್ನು ಕಳೆದುಕೊಂಡು ಶೋಕಿಸುತ್ತಾ ಹದಿನಾರು ವರ್ಷಗಳು

ಕಳೆದುಹೋದವು. ಆದರೂ ಅವನಿಗೆ ಶಾಂತಿಯಿಲ್ಲದಾಗಿದೆ. ಪುತ್ರಶೋಕದಿಂದ ಸಮಾವಿಷ್ಟನಾಗಿ ಈ ಭೂಮಿಪ ಧೃತರಾಷ್ಟ್ರನು ಇಡೀ ರಾತ್ರಿ ನಿಟ್ಟುಸಿರು ಬಿಡುತ್ತಲೇ ಇರುತ್ತಾನೆ. ನಿದ್ರೆಯನ್ನೇ ಮಾಡುವುದಿಲ್ಲ. ನಿನ್ನ ತಪೋಬಲದಿಂದ ಅನ್ಯ ಸರ್ವ ಲೋಕಗಳನ್ನೇ ಸೃಷ್ಟಿಸಲು ಸಮರ್ಥನಾಗಿರುವೆ. ಇನ್ನು ಬೇರೆಯೇ ಲೋಕಕ್ಕೆ ಹೋಗಿರುವ ಮಕ್ಕಳನ್ನು ರಾಜನಿಗೆ ತೋರಿಸುವುದು ಯಾವ ಮಹಾ ದೊಡ್ಡ ವಿಷಯ? ಸೊಸೆಯಂದಿರಲ್ಲಿಯೇ ಅತ್ಯಂತ ಪ್ರಿಯಸೊಸೆಯಾಗಿರುವ ಸಾಧ್ವೀ ದ್ರೌಪದೀ ಕೃಷ್ಣೆಯೂ ಇಲ್ಲಿ ಮಕ್ಕಳು-ಬಾಂಧವರನ್ನು ಕಳೆದುಕೊಂಡು ಅತೀವವಾಗಿ ಶೋಕಿಸುತ್ತಿದ್ದಾಳೆ. ಹಾಗೆಯೇ ಕೃಷ್ಣನ ತಂಗಿ, ಭದ್ರಭಾಷಿಣೀ ಭಾಮಿನೀ ಸುಭದ್ರೆಯೂ ಕೂಡ ಸೌಭದ್ರನ ವಧೆಯಿಂದ ಸಂತಪ್ತಳಾಗಿ ತುಂಬಾ ಶೋಕಿಸುತ್ತಿದ್ದಾಳೆ. ಪರಮದುಃಖಿತಳಾಗಿರುವ ಭೂರಿಶ್ರವಸನ ಈ ಭಾರ್ಯೆಯೂ ಕೂಡ ಪತಿಯ ವ್ಯಸನಶೋಕಾರ್ತಳಾಗಿ ನಿದ್ದೆಮಾಡುತ್ತಿಲ್ಲ! ಮಾವ ಧೀಮಾನ್ ಕುರೂದ್ವಹ ಬಾಹ್ಲೀಕನೂ ಮತ್ತು ತಂದೆಯೊಂದಿಗೆ ಸೋಮದತ್ತನೂ ಮಹಾರಣದಲ್ಲಿ

ಹತರಾದರು. ರಣಾಂಗಣದಲ್ಲಿ ನಿನ್ನ ಪುತ್ರನ ನೂರು ಮಕ್ಕಳು - ಶ್ರೀಮಂತರೂ, ಮಹಾಬುದ್ಧಿಯುಳ್ಳವರೂ, ಸಂಗ್ರಾಮದಲ್ಲಿ ಪಲಾಯನಮಾಡದಿಲ್ಲದಿದ್ದವರೂ ಆಗಿದ್ದವರು - ಹತರಾದರು. ಶೋಕದಿಂದ ಪೀಡಿತರಾದ, ಆ ನೂರು ಭಾರ್ಯೆಯರೂ ಇಲ್ಲಿದ್ದಾರೆ. ಇವರೆಲ್ಲರೂ ನನ್ನ ಮತ್ತು ರಾಜನ ದುಃಖವನ್ನು ಪುನಃ ಪುನಃ ಹೆಚ್ಚಾಗಿಸುತ್ತಿದ್ದಾರೆ. ಮಹಾ ಉದ್ವೇಗದಿಂದ ಕೂಡಿದ ಅವರು ನನ್ನ ಸುತ್ತಲೂ ಕುಳಿತುಕೊಂಡಿದ್ದಾರೆ. ಶೂರರೂ ಮಹಾತ್ಮರೂ ಆಗಿದ್ದ ಸೋಮದತ್ತನೇ ಮೊದಲಾದ ನನ್ನ ಮಾವಂದಿರು ಯಾವ ಗತಿಯನ್ನು ಪಡೆದುಕೊಂಡಿದ್ದಾರೆ? ನಿನ್ನ ಅನುಗ್ರಹದಿಂದ ಈ ಮಹೀಪತಿಯೂ, ನಾನೂ ಮತ್ತು ನಿನ್ನ ಸೊಸೆಯಾದ ಈ ಕುಂತಿಯೂ ವಿಶೋಕರಾಗುವಂತೆ ಮಾಡಿರಿ!"

ಗಾಂಧಾರಿಯೂ ಈ ರೀತಿ ಮಾತನಾಡುತ್ತಿದ್ದಾಗ ವ್ರತಗಳಿಂದ ಕೃಶಳಾಗಿದ್ದ ಕುಂತಿಯು ಆದಿತ್ಯನಿಂದ ಹುಟ್ಟಿದ್ದ ತನ್ನ ಆ ಮಗನನ್ನು ಸ್ಮರಿಸಿಕೊಂಡು ಮುಖವನ್ನು ಮುಚ್ಚಿಕೊಂಡಳು. ದೂರದಲ್ಲಿರುವುದನ್ನು ಕೇಳಲೂ ಮತ್ತು ನೋಡಲೂ ಸಮರ್ಥನಾಗಿದ್ದ ಆ ವರದ ಋಷಿ ವ್ಯಾಸನು ಸವ್ಯಸಾಚಿಯ ತಾಯಿ ಆ ದೇವಿಯು ದುಃಖಿತಳಾಗಿದ್ದುದ್ದನು

ಗಮನಿಸಿದನು. ಆಗ ವ್ಯಾಸನು ಅವಳಿಗೆ ಹೀಗೆ ಹೇಳಿದನು:

> "ಮಹಾಪ್ರಾಜ್ಞೆ! ನೀನು ನನ್ನಿಂದ ಯಾವ ಕಾರ್ಯವನ್ನು ಬಯಸುತ್ತೀಯೆ ಅದನ್ನು ಹೇಳು. ನಿನ್ನ ಮನಸ್ಸಿನಲ್ಲಿರುವುದನ್ನು ಇದ್ದಹಾಗೆ ಹೇಳು!"

ಆಗ ಕುಂತಿಯು ತನ್ನ ಮಾವನಿಗೆ ಶಿರಬಾಗಿ ನಮಸ್ಕರಿಸಿ, ನಾಚಿಕೆಯಿಂದ ಮುಖಕುಂದಿದವಳಾಗಿ, ಹಿಂದೆ ನಡೆದುಹೋಗಿದ್ದುದರ ಕುರಿತು ಈ ಮಾತುಗಳನ್ನಾಡಿದಳು:

> "ಭಗವನ್! ನೀನು ನನ್ನ ಮಾವ! ದೇವತೆಗಳಿಗೂ ದೇವತೆಯಾಗಿದ್ದೀಯೆ. ನನ್ನ ಪಾಲಿಗೆ ದೇವಾತಿದೇವನಾಗಿದ್ದೀಯೆ. ನನ್ನ ಈ ಸತ್ಯದ ಮಾತನ್ನು ಕೇಳು! ತಪಸ್ವಿಯೂ ಕೋಪಿಷ್ಟನೂ ಆಗಿದ್ದ ದುರ್ವಾಸನೆಂಬ ಹೆಸರಿನ ವಿಪ್ರನು ನನ್ನ ತಂದೆಯಲ್ಲಿಗೆ ಭಿಕ್ಷೆಯನ್ನು ಸೇವಿಸಲು ಆಗಮಿಸಿದ್ದಾಗ ನಾನು ಅವನನ್ನು ಸೇವೆಗಳಿಂದ ತೃಪ್ತಿಗೊಳಿಸಿದ್ದೆನು. ಆಗ ನಾನು ಶೌಚಾಚಾರಗಳನ್ನು ಪಾಲಿಸುತ್ತಾ, ಯಾವುದೇ ಅಪರಾಧಗಳನ್ನೂ ಎಸಗದೇ ಶುದ್ಧವಾದ ಮನಸ್ಸಿನಿಂದ, ಅತ್ಯಂತ ಕೋಪಗೊಳ್ಳುವ

ಸನ್ನಿವೇಶಗಳು ಬಂದರೂ ಕೋಪಗೊಳ್ಳದೇ ಅವನ ಸೇವೆಗೈದೆನು. ನನ್ನ ಮೇಲೆ ಪ್ರೀತನಾದ ಅವನು ವರವನ್ನು ನೀಡುತ್ತಾ "ನನ್ನಿಂದ ಇದನ್ನು ನೀನು ಅವಶ್ಯವಾಗಿಯೂ ಪಡೆದುಕೊಳ್ಳಬೇಕು!" ಎಂದು ಹೇಳಿದನು. ಆಗ ನಾನು ಶಾಪಭಯದಿಂದ ಆ ವಿಪ್ರನಿಗೆ ಹಾಗೆಯೇ ಆಗಲಿ ಎಂದು ಪುನಃ ಹೇಳಿದೆನು. ಆ ದ್ವಿಜನು ಪುನಃ ನನ್ನಲ್ಲಿ ಹೇಳಿದನು: "ಭದ್ರೇ! ನೀನು ಧರ್ಮನಿಗೆ ಜನನಿಯಾಗುವೆ! ನೀನು ಯಾವ ದೇವತೆಗಳನ್ನು ಆಹ್ವಾನಿಸುವೆಯೋ ಅವರು ನಿನ್ನ ವಶರಾಗಿ ಬರುತ್ತಾರೆ!" ಹೀಗೆ ಹೇಳಿ ಆ ವಿಪ್ರನು ಅಂತರ್ಧಾನನಾದನು. ಆಗ ನಾನು ವಿಸ್ಮಿತಳಾದೆನು. ಎಲ್ಲ ಅವಸ್ಥೆಗಳಲ್ಲಿಯೂ ಅವನ ಆ ಮಾತು ನನ್ನ ನೆನಪಿನಿಂದ ನಾಶವಾಗುತ್ತಿರಲಿಲ್ಲ. ಒಮ್ಮೆ ನಾನು ಮಹಡಿಯ ಮೇಲಿದ್ದಾಗ ಉದಯಿಸುತ್ತಿರುವ ರವಿಯನ್ನೇ ನೋಡುತ್ತಿದ್ದೆನು. ಆಗ ಆ ಋಷಿಯ ಮಾತನ್ನು ಸ್ಮರಿಸಿಕೊಂಡು ದಿವಾಕರನನ್ನು ಬಯಸಿದೆನು. ಆಗ ನಾನು ಇನ್ನೂ ಬಾಲಭಾವದಲ್ಲಿದ್ದೆನು. ದೋಷಗಳನ್ನು ತಿಳಿದುಕೊಳ್ಳುವ ಹಾಗಿರಲಿಲ್ಲ. ಕೂಡ ಸಹಸ್ರಾಂಶು ದೇವನು ನನ್ನ ಸಮೀಪಕ್ಕೆ ಬಂದೇಬಿಟ್ಟನು. ಅವನು ತನ್ನ ದೇಹವನ್ನು

ಗಗನದಲ್ಲೊಂದು ಮತ್ತು ಭೂಮಿಯಲ್ಲೊಂದು ಹೀಗೆ ಎರಡನ್ನಾಗಿ ಮಾಡಿಕೊಂಡಿದ್ದನು. ಒಂದರಿಂದ ಲೋಕಗಳನ್ನು ಸುಡುತ್ತಿದ್ದವನು ತನ್ನ ಎರಡನೆಯ ರೂಪದಿಂದ ನನ್ನ ಬಳಿ ಬಂದನು. ತರತರನೆ ನಡುಗುತ್ತಿದ್ದ ನನಗೆ ಅವನು "ವರವನ್ನು ಕೇಳಿಕೋ!" ಎಂದನು. ಆದರೆ ನಾನು ಅವನಿಗೆ ಶಿರಬಾಗಿ ನಮಸ್ಕರಿಸಿ "ಹೋಗಬೇಕು!" ಎಂದು ಕೇಳಿಕೊಂಡೆನು. ಆಗ ತಿಗ್ಮಾಂಶುವು ನನಗೆ ಹೇಳಿದನು: "ವೃಥಾ ಆಹ್ವಾನವನ್ನು ನಾನು ಕ್ಷಮಿಸುವುದಿಲ್ಲ! ನಿನ್ನನ್ನೂ ಮತ್ತು ನಿನಗೆ ಈ ವರವನ್ನಿತ್ತ ಆ ವಿಪ್ರನನ್ನೂ ಸುಟ್ಟುಬಿಡುತ್ತೇನೆ!" ಅನಪರಾಧಿಯಾದ ಆ ವಿಪ್ರನನ್ನು ರಕ್ಷಿಸಲೋಸುಗ ನಾನು ಅವನಿಗೆ "ದೇವ! ನನಗೆ ನಿನ್ನ ಸಮನಾದ ಮಗನಾಗಲಿ!" ಎಂದು ಹೇಳಿದೆನು. ಆಗ ಭಾನುಮಂತನು ನನ್ನನ್ನು ಮೋಹಗೊಳಿಸಿ ತೇಜಸ್ಸಿನಿಂದ ನನ್ನನ್ನು ಪ್ರವೇಶಿಸಿದನು. "ನಿನಗೊಬ್ಬ ಮಗನಾಗುವನು!" ಎಂದು ಹೇಳಿ ಆಕಾಶಕ್ಕೆ ಹೊರಟುಹೋದನು. ಈ ವೃತ್ತಾಂತವನ್ನು ತಂದೆಯಿಂದ ರಕ್ಷಿಸಲೋಸುಗ ನಾನು ಭವನದ ಒಳಗೆಯೇ ಇದ್ದುಬಿಟ್ಟೆನು. ಗುಟ್ಟಿನಲ್ಲಿ ಹುಟ್ಟಿದ ನನ್ನ ಮಗ ಕರ್ಣ ಬಾಲಕನನ್ನು ನೀರಿನಲ್ಲಿ ಬಿಟ್ಟುಬಿಟ್ಟೆನು. ಆ

ಋಷಿಯು ನನಗೆ ಹೇಗೆ ಹೇಳಿದ್ದನೋ ಹಾಗೆ ದೇವನ ಪ್ರಸಾದದಿಂದ ಪುನಃ ನಾನು ಕನ್ಯೆಯಾಗಿಯೇ ಉಳಿದುಕೊಂಡೆನು. ಮೂರ್ಖಳಾದ ನಾನು ಕರ್ಣನು ನನ್ನ ಮಗನೆಂದು ತಿಳಿದಿದ್ದರೂ ಅವನನ್ನು ಉಪೇಕ್ಷಿಸಿಬಿಟ್ಟೆನು. ಅದು ನನ್ನನ್ನು ಸುಡುತ್ತಿದೆ. ನಿನಗೆ ಇದೆಲ್ಲವೂ ಚೆನ್ನಾಗಿಯೇ ತಿಳಿದಿದೆ. ನಾನು ಮಾಡಿದ ಕಾರ್ಯವು ಪಾಪಕರವೋ-ಪುಣ್ಯಕರವೋ - ನಡೆದಹಾಗಿ ನಿನಗೆ ಹೇಳಿದ್ದೇನೆ. ಭಗವನ್! ನನ್ನ ಈ ಭಯವನ್ನು ನೀಗಿಸಬೇಕು! ರಾಜನ ಹೃದಯದಲ್ಲಿರುವುದನ್ನೂ ನೀನು ತಿಳಿದುಕೊಂಡಿರುವೆ. ಅದೂ ಕೂಡ ಇಂದೇ ಈಡೇರುವಂತೆ ಮಾಡು!"

ಅವಳು ಹೀಗೆ ಹೇಳಲು ವೇದವಿದರಲ್ಲಿ ಶ್ರೇಷ್ಠ ವ್ಯಾಸನು ಇಂತೆಂದನುಃ

"ಸಾಧು! ಇವೆಲ್ಲವೂ ಸರಿಯಾಗಿಯೇ ಇವೆ. ಇವು ಹಾಗೆಯೇ ಆಗಬೇಕಾಗಿದ್ದಿತ್ತು. ಇದರಲ್ಲಿ ನಿನ್ನ ಅಪರಾಧವೇನೂ ಇಲ್ಲ. ಆಗ ನೀನು ಕನ್ಯಾಭಾವದಲ್ಲಿದ್ದೆ. ದೇವತೆಗಳು ಸಿದ್ಧಿಗಳ ಐಶ್ವರ್ಯವಂತರು. ಇತರರ ಶರೀರಗಳನ್ನು ಪ್ರವೇಶಿಸಬಲ್ಲರು. ಸಂಕಲ್ಪ, ವಚನ, ದೃಷ್ಟಿ, ಸ್ಪರ್ಷ ಮತ್ತು ಸಮಾಗಮ - ಈ ಐದು ವಿಧಗಳಲ್ಲಿ ಮಕ್ಕಳನ್ನು ಹುಟ್ಟಿಸುವ ದೇವಸಂಘಗಳಿವೆ.

ಮನುಷ್ಯಧರ್ಮವು ದೇವಧರ್ಮದೊಡನೆ ಸೇರುವುದಿಲ್ಲ. ಕುಂತಿ! ಇದನ್ನು ಅರ್ಥಮಾಡಿಕೊಂಡು ನಿನ್ನ ಮಾನಸಿಕ ಜ್ವರವನ್ನು ಕಳೆದುಕೋ! ಬಲವಂತರ ಎಲ್ಲವೂ ಒಳ್ಳೆಯದೇ! ಬಲವಂತರ ಎಲ್ಲವೂ ಶುಚಿಯಾದುದೇ! ಬಲವಂತರು ಮಾಡಿದ ಎಲ್ಲವೂ ಧರ್ಮ! ಮತ್ತು ಎಲ್ಲವೂ ಬಲವಂತರದ್ದೇ ಆಗಿರುತ್ತದೆ!

ಭದ್ರೇ ಗಾಂಧಾರೀ! ಇಂದು ರಾತ್ರಿ ನೀನು ನಿನ್ನ ಮಕ್ಕಳನ್ನೂ, ಸಹೋದರರರನ್ನೂ, ಮಿತ್ರರನ್ನೂ ನೋಡುತ್ತೀಯೆ! ನಿನ್ನ ಸೊಸೆಯಂದಿರೂ ಕೂಡ ತಮ್ಮ ಪತಿಗಳೊಂದಿಗೆ ಮಲಗಿ ಎದ್ದು ಬಂದವರಂತೆ ಕಾಣುತ್ತಾರೆ. ಕುಂತಿಯು ಕರ್ಣನನ್ನು ನೋಡುತ್ತಾಳೆ. ಯಾದವೀ ಸುಭದ್ರೆಯು ಅಭಿಮನ್ಯುವನ್ನು ನೋಡುತ್ತಾಳೆ. ದ್ರೌಪದಿಯು ಐವರು ಪುತ್ರರನ್ನೂ, ತಂದೆಯನ್ನೂ ಮತ್ತು ಸಹೋದರರರನ್ನೂ ನೋಡುತ್ತಾಳೆ. ರಾಜ ಧೃತರಾಷ್ಟ್ರ, ನೀನು ಮತ್ತು ಪೃಥೆಯು ನನ್ನನ್ನು ಕೇಳುವ ಮೊದಲೇ ಇದನ್ನು ಮಾಡಿ ತೋರಿಸಬೇಕೆಂದು ನನ್ನ ಮನಸ್ಸಿನಲ್ಲಿದ್ದಿತ್ತು. ಆ ಮಹಾತ್ಮರ ಕುರಿತಾಗಿ ನೀನು ಶೋಕಿಸಬಾರದು. ಅವರೆಲ್ಲ ನರರ್ಷಭರೂ

ಕ್ಷತ್ರಧರ್ಮಪರಾಯಣರಾಗಿದ್ದರು, ಮತ್ತು ಅವರ ಧರ್ಮಕ್ಕನುಸಾರವಾಗಿಯೇ ನಿಧನ ಹೊಂದಿದರು. ಸುರರ ಕಾರ್ಯವಾದ ಅದು ಅವಶ್ಯವಾಗಿಯೂ ಹಾಗೆಯೇ ಆಗಬೇಕಿತ್ತು. ಅವರೆಲ್ಲರೂ ದೇವತೆಗಳ ಅಂಶಗಳಿಂದ ಭೂಮಿಯಮೇಲೆ ಅವತರಿಸಿದ್ದರು. ಕುರುಕ್ಷೇತ್ರದ ರಣಭೂಮಿಯಲ್ಲಿ ನಿಧನ ಹೊಂದಿದ ಇವರು ಗಂಧರ್ವರೂ, ಅಪ್ಸರೆಯರೂ, ಪಿಶಾಚರೂ, ಗುಹ್ಯರೂ, ರಾಕ್ಷಸರೂ, ಹಾಗೆಯೇ ಪುಣ್ಯಜನರಾದ ಸಿದ್ಧರೂ, ದೇವರ್ಷಿಗಳೂ, ದೇವತೆಗಳೂ, ದಾನವರೂ, ಮತ್ತು ಹಾಗೆಯೇ ಅಮಲ ಬ್ರಹ್ಮರ್ಷಿಗಳೂ ಆಗಿದ್ದರು. ಧೃತರಾಷ್ಟ್ರನೆಂದು ಖ್ಯಾತಿಹೊಂದಿದ್ದ ಯಾವ ಧೀಮಾನ್ ಗಂಧರ್ವರಾಜನಿದ್ದನೋ ಅವನೇ ಮನುಷ್ಯಲೋಕದಲ್ಲಿ ನಿನ್ನ ಪತಿ ಧೃತರಾಷ್ಟ್ರನಾಗಿದ್ದಾನೆ. ಪಾಂಡುವು ಅತ್ಯಂತ ವಿಶಿಷ್ಠವಾದ ಚ್ಯುತಿಯಿಲ್ಲದ ಮರುದ್ಗಣವೆಂದು ತಿಳಿ. ಕ್ಷತ್ತ ವಿದುರ ಮತ್ತು ಈ ರಾಜಾ ಯುಧಿಷ್ಠಿರನು ಧರ್ಮನ ಅಂಶಗಳಾಗಿದ್ದಾರೆ. ದುರ್ಯೋಧನನು ಕಲಿಯೆಂದೂ ಶಕುನಿಯು ದ್ವಾಪರನೆಂದೂ ತಿಳಿ. ದುಃಶಾಸನಾದಿಗಳು

ರಾಕ್ಷಸರೆಂದು ತಿಳಿ. ಬಲವಂತ ಅರಿಂದಮ ಭೀಮಸೇನನು ಮರುದ್ಗಣಗಳಿಂದ, ಈ ಪಾರ್ಥ ಧನಂಜಯನು ಋಷಿ ನರನೆಂದೂ, ಹೃಷೀಕೇಶನು ನಾರಯಣನೆಂದೂ, ಮತ್ತು ಈ ಇಬ್ಬರು ಅವಳಿಮಕ್ಕಳು ಅಶ್ವಿನಿಯರ ಅಂಶಜರೆಂದೂ ತಿಳಿ. ವೈರವನ್ನು ಹುಟ್ಟಿಸಲು ಮತ್ತು ಸಂಘರ್ಷವನ್ನುಂಟುಮಾಡಲು ಜನಿಸಿದ್ದ ಕರ್ಣನು ತನ್ನ ದೇಹವನ್ನೇ ಎರಡನ್ನಾಗಿಸಿಕೊಂಡ, ಸುಡುವವರಲ್ಲಿ ಶ್ರೇಷ್ಠನಾದ, ಲೋಕಗಳನ್ನು ಸುಡುತ್ತಿರುವ ಆದಿತ್ಯನೆಂದು ತಿಳಿ. ಷಡ್ಮಹಾರಥರಿಂದ ಹತನಾದ ಪಾಂಡವರ ಮಗ ಸೌಭದ್ರನು ಯೋಗದಿಂದ ಎರಡಾಗಿ ಇಲ್ಲಿಗೆ ಬಂದ ಸೋಮನೆಂದು ತಿಳಿ. ದ್ರೌಪದಿಯೊಡನೆ ಅಗ್ನಿಯಿಂದ ಹುಟ್ಟಿದ ಧೃಷ್ಟದ್ಯುಮ್ನನು ಅಗ್ನಿಯ ಶುಭ ಅಂಶದವನು ಮತ್ತು ಶಿಖಂಡಿಯು ರಾಕ್ಷಸನಾಗಿದ್ದನೆಂದು ತಿಳಿ. ದ್ರೋಣನು ಬೃಹಸ್ಪತಿಯ ಅಂಶವೆಂದೂ ದ್ರೌಣಿ ಅಶ್ವತ್ಥಾಮನು ರುದ್ರಜನೆಂದೂ ತಿಳಿ. ಗಾಂಗೇಯ ಭೀಷ್ಮನು ಮಾನುಷತ್ವವನ್ನು ಪಡೆದ ವಸುವೆಂದು ತಿಳಿ. ಹೀಗೆ ಈ ದೇವತೆಗಳು ಮಾನುಷತ್ವವನ್ನು ಪಡೆದು ಕಾರ್ಯಗಳು ಮುಗಿದನಂತರ ಪುನಃ ಸ್ವರ್ಗಕ್ಕೆ ತೆರಳಿದ್ದಾರೆ. ಪರಲೋಕದ ಭಯದಿಂದಾಗಿ

ನಿಮ್ಮೆಲ್ಲರ ಹೃದಯದಲ್ಲಿ ಬಹುಕಾಲ ನೆಲೆಸಿರುವ ದುಃಖವನ್ನು ಇಂದು ನಾನು ದೂರೀಕರಿಸುತ್ತೇನೆ. ನೀವೆಲ್ಲರೂ ಭಾಗೀರಥೀ ನದಿಯ ಕಡೆ ಹೊರಡಬೇಕು. ಅಲ್ಲಿ ನಾನು ರಣಾಂಗಣದಲ್ಲಿ ಮಡಿದ ಅವರೆಲ್ಲರನ್ನೂ ಅನ್ಯರನ್ನೂ ತೋರಿಸುತ್ತೇನೆ."

ವ್ಯಾಸನ ಈ ಮಾತನ್ನು ಕೇಳಿ ಸರ್ವ ಜನಸ್ತೋಮವೂ ಮಹಾ ಸಿಂಹನಾದದೊಡನೆ ಗಂಗಾಭಿಮುಖವಾಗಿ ಹೊರಟಿತು. ಪಾಂಡವರೊಂದಿಗೆ ಮತ್ತು ಅಮಾತ್ಯರೊಂದಿಗೆ ಧೃತರಾಷ್ಟ್ರನೂ, ಅಲ್ಲಿ ಸೇರಿದ್ದ ಮುನಿಶಾರ್ದೂಲರೂ ಗಂಧರ್ವರನ್ನೂ ಕೂಡಿಕೊಂಡು ಹೊರಟರು. ಕ್ರಮೇಣ ಆ ಜನಸಾಗರವು ಗಂಗೆಯನ್ನು ಸೇರಿ ಅಲ್ಲಿ ಎಲ್ಲರೂ ಯಥಾಪ್ರೀತಿಯಾಗಿ ಯಥಾಸುಖವಾಗಿ ಬೀಡುಬಿಟ್ಟಿತು. ಧೀಮಂತ ರಾಜಾ ಯುಧಿಷ್ಠಿರನು ಪಾಂಡವರೊಡನೆ, ತನ್ನ ಅನುಯಾಯಿಗಳಿಂದೊಡಗೂಡಿ, ಸ್ತ್ರೀಯರು ಮತ್ತು ವೃದ್ಧರನ್ನು ಮುಂದಿರಿಸಿಕೊಂಡು ಇಷ್ಟ ಪ್ರದೇಶದಲ್ಲಿ ಬೀಡುಬಿಟ್ಟನು. ಮೃತರಾಗಿದ್ದ ನೃಪರನ್ನು ನೋಡಲು ರಾತ್ರಿಯನ್ನೇ ಕಾಯುತ್ತಿದ್ದ ಅವರಿಗೆ ಆ ಒಂದು ಹಗಲೂ ಕೂಡ ನೂರು ವರ್ಷಗಳಂತೆ ಕಳೆದವು. ಬಳಿಕ ರವಿಯು ಪುಣ್ಯಗಿರಿಶ್ರೇಷ್ಠನನ್ನು ಸೇರಿದ ನಂತರ ಅವರೆಲ್ಲರೂ ಸ್ನಾನಮಾಡಿ ಸಂಧ್ಯಾವಂದನಾದಿ ಕರ್ಮಗಳನ್ನೆಸಗಿದರು.

## ದುರ್ಯೋಧನಾದಿಗಳ ದರ್ಶನ

ರಾತ್ರಿಯಾಗಲು ಅಲ್ಲಿ ಬಂದು ಸೇರಿದ್ದ ಎಲ್ಲರೂ ಆಹ್ನಿಕಕ್ರಿಯೆಗಳನ್ನು ಪೂರೈಸಿ ವ್ಯಾಸನ ಬಳಿ ಹೋದರು. ಧರ್ಮಾತ್ಮ ಧೃತರಾಷ್ಟ್ರನಾದರೋ ಪಾಂಡವರೊಡನೆ ಶುದ್ಧ ಏಕಮನಸ್ಸಿನಿಂದ ಋಷಿಯ ಬಳಿ ಕುಳಿತುಕೊಂಡನು. ಗಾಂಧಾರಿಯೂ ಕೂಡ ಎಲ್ಲ ನಾರಿಯರೊಡನೆ ಕುಳಿತುಕೊಂಡಳು. ಪೌರಜನಪದ ಜನರೂ ಕೂಡ ಎಲ್ಲರೂ ವಯಸ್ಸಿಗೆ ತಕ್ಕಂತೆ ಕುಳಿತುಕೊಂಡರು. ಆಗ ಮಹಾತೇಜಸ್ವೀ ಮಹಾಮುನಿ ವ್ಯಾಸನು ಪುಣ್ಯ ಭಾಗೀರಥೀ ಜಲದಲ್ಲಿ ಮಿಂದು ಸರ್ವಲೋಕಗಳಿಂದ ಪಾಂಡವರ ಮತ್ತು ಕೌರವರ ಕಡೆಯ ಎಲ್ಲ ಯೋಧರನ್ನೂ, ನಾನಾದೇಶನಿವಾಸಿಗಳಾಗಿದ್ದ ಮಹಾಭಾಗ ರಾಜರನ್ನೂ ಆಹ್ವಾನಿಸಿದನು.  ಆಗ ನೀರಿನ ಕೆಳಗಿನಿಂದ ಹಿಂದೆ ಕುರುಪಾಂಡವಸೇನೆಗಳಲ್ಲಿ ಹೇಗೋ ಹಾಗೆ ತುಮುಲ ಶಬ್ಧವು ಕೇಳಿಬಂದಿತು. ಆಗ ನೀರಿನಿಂದ ಮೇಲಕ್ಕೆ ಭೀಷ್ಮ-ದ್ರೋಣರನ್ನು ಮುಂದಿಟ್ಟುಕೊಂಡು ಎಲ್ಲ ಪಾರ್ಥಿವರೂ, ಸೇನೆಗಳೊಂದಿಗೆ, ಸಹಸ್ರಾರು ಸಂಖ್ಯೆಗಳಲ್ಲಿ ಮೇಲೆದ್ದರು. ಸೈನಿಕರು ಮತ್ತು ಪುತ್ರರೊಂದಿಗೆ ವಿರಾಟ-ದ್ರುಪದರು, ದ್ರೌಪದೇಯರು, ಸೌಭದ್ರ, ರಾಕ್ಷಸ ಘಟೋತ್ಕಚ, ಕರ್ಣ-ದುರ್ಯೋಧನರು, ಮಹಾರಥ ಶಕುನಿ, ದುಃಶಾಸನನೇ ಮೊದಲಾದ



ಧೃತರಾಷ್ಟ್ರನ ಮಹಾರಥ ಪುತ್ರರು, ಜರಾಸಂಧನ ಮಗ, ಭಗದತ್ತ, ಪಾರ್ಥಿವ ಜಲಸಂಧ, ಭೂರಿಶ್ರವ, ಶಲ, ಶಲ್ಯ, ಸಹೋದರರೊಂದಿಗೆ ವೃಷಸೇನ, ರಾಜಪುತ್ರ ಲಕ್ಷ್ಮಣ, ಧೃಷ್ಟದ್ಯುಮ್ನನ ಮಗ, ಶಿಖಂಡಿಯ ಎಲ್ಲ ಮಕ್ಕಳೂ, ಅನುಜನೊಂದಿಗೆ ಧೃಷ್ಟಕೇತು, ಅಚಲ, ವೃಷಕ, ರಾಕ್ಷಸ ಅಲಾಯುಧ, ಬಾಹ್ಲೀಕ, ಸೋಮದತ್ತ, ರಾಜ ಚೇಕಿತಾನ - ಇವರು ಮತ್ತು ಇಲ್ಲಿ ಹೇಳಿರದ ಇನ್ನೂ ಅನೇಕ ಅನ್ಯರು ಎಲ್ಲರೂ ಬೆಳಗುತ್ತಿರುವ ದೇಹಗಳಿಂದ ನೀರಿನ ಒಳಗಿಂದ ಮೇಲೆದ್ದರು. ಯಾವ ವೀರನ ಯಾವ ವೇಷ, ಧ್ವಜ, ವಾಹನವಿದ್ದಿತ್ತೋ ಅದೇ ರೀತಿಯಲ್ಲಿ ಆ ನರಾಧಿಪರು ಕಾಣಿಸಿಕೊಂಡರು. ಎಲ್ಲರೂ ದಿವ್ಯಾಂಬರಗಳನ್ನು ಧರಿಸಿದ್ದರು. ಎಲ್ಲರೂ ಹೊಳೆಯುವ ಕುಂಡಲಗಳನ್ನು ಧರಿಸಿದ್ದರು. ಎಲ್ಲರೂ ವೈರಗಳಿಲ್ಲದೇ, ನಿರಹಂಕಾರರಾಗಿ, ಕ್ರೋಧ-ಅಸೂಯೆಗಳನ್ನು ಕಳೆದುಕೊಂಡಿದ್ದರು. ಗಂಧರ್ವರು ಅವರ ಗುಣಗಾನಮಾಡುತ್ತಿದ್ದರು. ಬಂದಿಗಳು ಅವರನ್ನು ಸ್ತುತಿಸುತ್ತಿದ್ದರು. ದಿವ್ಯಮಾಲೆ-ವಸ್ತ್ರಗಳನ್ನು ಧರಿಸಿದ್ದ ಅಪ್ಸರೆಯರ ಗಣಗಳು ಅವರನ್ನು ಸುತ್ತುವರೆದಿದ್ದರು. ಆಗ ಸತ್ಯವತೀ ಪುತ್ರ ಮುನಿಯು ಪ್ರೀತನಾಗಿ ತನ್ನ ತಪೋಬಲದಿಂದ ಧೃತರಾಷ್ಟ್ರನಿಗೆ ದಿವ್ಯದೃಷ್ಟಿಯನ್ನಿತ್ತನು. ದಿವ್ಯಜ್ಞಾನಬಲವಿದ್ದಿದ್ದ ಯಶಸ್ವಿನೀ ಗಾಂಧಾರಿಯು ರಣದಲ್ಲಿ ಹತರಾಗಿದ್ದ ಆ ಪುತ್ರರನ್ನೂ ಅನ್ಯ

ಎಲ್ಲರನ್ನೂ ನೋಡಿದಳು. ಪರಮಾದ್ಭುತವೂ, ಅಚಿಂತ್ಯವೂ, ರೋಮಾಂಚಕಾರಿಯೂ ಆಗಿದ್ದ ಅದನ್ನು ಸರ್ವಜನರೂ ಕಣ್ಣುರೆಪ್ಪೆಗಳನ್ನೂ ಬಡಿಯದೇ ವಿಸ್ಮಿತರಾಗಿ ನೋಡಿದರು. ಹರ್ಷೋದ್ಗಾರಗೈಯುತ್ತಿದ್ದ ನರನಾರಿಯರಿಂದ ಕೂಡಿದ್ದ ಆ ಉಗ್ರ ಮಹೋತ್ಸವವು ತೆರೆಯ ಮೇಲಿನ ಚಿತ್ರದಂತೆಯೇ ಕಾಣಿಸುತ್ತಿತ್ತು. ಧೃತರಾಷ್ಟ್ರನಾದರೋ ಆ ಮುನಿಯ ಅನುಗ್ರಹದಿಂದ ಪಡೆದ ದಿವ್ಯದೃಷ್ಟಿಯಿಂದ ಅವರೆಲ್ಲರನ್ನೂ ನೋಡಿ ಅತ್ಯಂತ ಮುದಿತನಾದನು.

ಆಗ ಬ್ರಹ್ಮರ್ಷಿಯು ವಿಹಿಸಿದ ಶುಭ ವಿಧಿಯ ಪ್ರಕಾರ ಆ ಭರತಶ್ರೇಷ್ಠರೆಲ್ಲರೂ ದೇವಲೋಕದ ಅವರರಂತೆ ಕ್ರೋಧ-ಮಾತ್ಸರ್ಯಗಳನ್ನು ತೊರೆದು, ದುಃಖಗಳಿಲ್ಲದೇ, ಪರಸ್ಪರರೊಡನೆ ಕಲೆತರು. ಮಗನು ತಂದೆ-ತಾಯಿಯರೊಂದಿಗೂ, ಪತ್ನಿಯು ಪತಿಯೊಂದಿಗೂ, ಸಹೋದರನು ಸಹೋದರನೊಂದಿಗೂ ಮತ್ತು ಮಿತ್ರನು ಮಿತ್ರನೊಡನೆಯೂ ಕಲೆತರು. ಪಾಂಡವರು ಮಹೇಷ್ವಾಸ ಕರ್ಣನನ್ನೂ, ಸೌಭದ್ರನನ್ನು, ದ್ರೌಪದೇಯರೆಲ್ಲರನ್ನೂ ಅತ್ಯಂತ ಹರ್ಷದಿಂದ ಕಲೆತರು. ಕರ್ಣನೊಡನೆ ಪಾಂಡವರೂ ಮತ್ತು ಪೃಥಿವೀಪಾಲರು ಅನ್ಯೋನ್ಯರನ್ನೂ ಭೇಟಿಮಾಡಿ ಸೌಹಾರ್ದತೆಯಿಂದಿದ್ದರು. ಋಷಿಯ ಅನುಗ್ರಹದಿಂದ ಅನ್ಯ ಕ್ಷತ್ರಿಯರೂ

ಕೋಪವನ್ನು ಕಳೆದುಕೊಂಡು, ಶತ್ರುಭಾವವನ್ನು ಬಿಟ್ಟು ಸೌಹಾರ್ದತೆಯಿಂದ ವರ್ತಿಸಿದರು. ಹೀಗೆ ಕುರು ಪುರುಷವ್ಯಾಘ್ರ ಪುತ್ರರೂ ಅನ್ಯ ಮಾನವರೂ ಹಿರಿಯರು ಮತ್ತು ಬಂಧವರೊಂದಿಗೆ ಸೇರಿ ಕಲೆತರು. ಆ ನೃಪರು ಇಡೀ ರಾತ್ರಿಯನ್ನು ಒಂದಾಗಿ ಪ್ರೀತಮನಸ್ಕರಾಗಿ ವಿಹರಿಸುತ್ತಾ ತಾವು ಸ್ವರ್ಗದ ಸದಸ್ಯರೋ ಎನ್ನುವಂತೆ ಸಂತೋಷದಿಂದ ಕಳೆದರು. ಆ ಯೋಧರು ಪರಸ್ಪರರನ್ನು ಸೇರಿದಾಗ ಅಲ್ಲಿ ಶೋಕವಾಗಲೀ, ಭಯವಾಗಲೀ, ಕಷ್ಟವಾಗಲೀ, ಅಸಂತೋಷವಾಗಲೀ, ಅಪಯಶಸ್ಸಾಗಲೀ ಉಂಟಾಗಲಿಲ್ಲ. ನಾರಿಯರು ಅಲ್ಲಿ ದುಃಖವನ್ನು ತೊರೆದು ತಂದೆಗಳೊಂದಿಗೂ, ಸಹೋದರರೊಂದಿಗೂ, ಪತಿಗಳೊಂದಿಗೂ, ಮಕ್ಕಳೊಂದಿಗೂ ಕಲೆತು ಅತ್ಯಂತ ಸಂತೋಷವನ್ನು ಅನುಭವಿಸಿದರು. ಈ ರೀತಿ ಆ ವೀರರೂ ಮತ್ತು ಅವರ ಪತ್ನಿಯರೂ ಒಂದು ರಾತ್ರಿ ವಿಹರಿಸಿ, ರಾತ್ರಿಕಳೆದ ಕೂಡಲೇ ಅನ್ಯೋನ್ಯರನ್ನು ಆಲಂಗಿಸಿ, ಬೀಳ್ಕೊಂಡು ಎಲ್ಲಿಂದ ಬಂದಿದ್ದರೋ ಅಲ್ಲಿಗೆ ಹೊರಟು ಹೋದರು. ಆಗ ಮುನಿಪುಂಗವನು ಆ ಲೋಕಗಳನ್ನು ವಿಸರ್ಜಿಸಿದನು. ಎಲ್ಲರೂ ನೋಡುತ್ತಿದ್ದಂತೆಯೇ ಕ್ಷಣದಲ್ಲಿಯೇ ಅವರು ಅಂತರ್ಧಾನರಾದರು. ಆ ಮಹಾತ್ಮನು ಪುಣ್ಯ ತ್ರಿಪಥಗಾ ನಧಿಯಲ್ಲಿ ರಥ-ಧ್ವಜ-ಅಶ್ವಗಳೊಂದಿಗೆ ಅವರನ್ನು

ಅವರವರ ಸ್ಥಾನಗಳಿಗೆ ಕಳುಹಿಸಿಕೊಟ್ಟನು. ಕೆಲವರು ದೇವಲೋಕಕ್ಕೆ ಹೋದರೆ ಇನ್ನು ಕೆಲವರು ಬ್ರಹ್ಮಸದನಕ್ಕೆ ಹೋದರು. ಕೆಲವರು ವರುಣಲೋಕವನ್ನೂ ಇನ್ನು ಕೆಲವರು ಕುಬೇರನ ಲೋಕವನ್ನೂ ಸೇರಿದರು. ಹಾಗೆಯೇ ಕೆಲವು ರಾಜರು ವೈವಸ್ವತ ಲೋಕವನ್ನೂ, ಇನ್ನು ಕೆಲವರು ರಾಕ್ಷಸ, ಪಿಶಾಚ ಮತ್ತು ಉತ್ತರ ಕುರುಲೋಕಕ್ಕೂ ಹೊರಟುಹೋದರು. ಅಮರರೊಂದಿಗೆ ವಾಹನ-ಅನುಯಾಯಿಗಳೊಂದಿಗೆ ಬಂದಿದ್ದ ಆ ಮಹಾತ್ಮರೆಲ್ಲರೂ ಹೀಗೆ ವಿಚಿತ್ರ ಗತಿಗಳನ್ನು ಪಡೆದರು.

ಅವರೆಲ್ಲರೂ ಹೊರಟು ಹೋದನಂತರ ನದಿಯಲ್ಲಿ ನಿಂತಿದ್ದ ಸದಾ ಕುರುಗಳ ಹಿತವನ್ನೇ ಮಾಡುತ್ತಿದ್ದ ಆ ಮಹಾತೇಜಸ್ವಿ ಧರ್ಮಶೀಲ ಮಹಾಮುನಿಯು ಪತಿಗಳನ್ನು ಕಳೆದುಕೊಂಡಿದ್ದ ಕ್ಷತ್ರಿಯ ಸ್ತ್ರೀಯರಿಗೆ ಹೇಳಿದನು:

> "ಪರಮಸ್ತ್ರೀಯರೇ! ನಿಮ್ಮಲ್ಲಿ ಯಾರು ಯಾರು ನಿಮ್ಮ ನಿಮ್ಮ ಗಂಡಂದಿರು ಹೋಗಿರುವ ಲೋಕಗಳಿಗೆ ಹೋಗಲು ಇಚ್ಛಿಸುವಿರೋ ಅವರು ಆಲಸ್ಯವನ್ನು ತೊರೆದು ಬೇಗನೇ ಗಂಗಾನದಿಯಲ್ಲಿ ಮುಳುಗಿರಿ!"

ಅವನ ಆ ಮಾತನ್ನು ಕೇಳಿ ಶ್ರದ್ಧೆಯನ್ನಿಟ್ಟಿದ್ದ ವರಾಂಗನೆಯರು ಮಾವನ ಅನುಮತಿಯನ್ನು ಪಡೆದು ಜಾಹ್ನವೀ ನದಿಯನ್ನು ಪ್ರವೇಶಿಸಿದರು. ಮಾನುಷ ದೇಹಗಳನ್ನು ತೊರೆದು ಆ ಸಾಧ್ವಿಯರೆಲ್ಲರೂ ತಮ್ಮ ತಮ್ಮ ಪತಿಯರೊಂದಿಗೆ ಹೊರಟುಹೋದರು. ಹೀಗೆ ಕ್ರಮೇಣವಾಗಿ ಆ ಎಲ್ಲ ಶೀಲವಂತ ಕುಲಸ್ತ್ರೀಯರು ನೀರಿನಲ್ಲಿ ಮುಳುಗಿ ಮುಕ್ತರಾಗಿ ತಮ್ಮ ತಮ್ಮ ಪತಿಗಳ ಲೋಕಗಳಿಗೆ ಹೊರಟುಹೋದರು. ಅವರ ಪತಿಗಳಂತೆಯೇ ಆ ಶೀಲಸತ್ವಸಂಪನ್ನ ಸ್ತ್ರೀಯರು ದಿವ್ಯರೂಪಗಳನ್ನು ಧರಿಸಿ, ದಿವ್ಯಾಭರಣಭೂಷಿತರಾಗಿ, ದಿವ್ಯ ಮಾಲ್ಯಾಂಬರಗಳನ್ನು ಧರಿಸಿ ಸರ್ವಗುಣಗಳಿಂದ ಯುಕ್ತರಾಗಿ, ಆಯಾಸವನ್ನು ಕಳೆದುಕೊಂಡು ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರು. ವರದ ಧರ್ಮವತ್ಸಲನು ಆ ಸಮಯದಲ್ಲಿ ಯಾರ ಯಾರ ಬಯಕೆಯು ಯಾವುದಿತ್ತೋ ಅವೆಲ್ಲವನ್ನೂ ಪೂರೈಸಿಕೊಟ್ಟು ಬೇಕಾದ ಲೋಕಗಳನ್ನು ಸೃಷ್ಟಿಸಿದನು. ನರದೇವರ ಪುನರಾಗಮನದ ಕುರಿತು ಕೇಳಿದ ಮನುಷ್ಯರೂ ಅನ್ಯ ದೇಹಗಳಲ್ಲಿ ಹೋದವರೂ ಮುದಿತರಾದರು.

## <u>ಯುಧಿಷ್ಠಿರನು ಹಸ್ತಿನಾಪುರಕ್ಕೆ ಹಿಂದಿರುಗಿದುದು</u>

ಆ ಮಹದಾಶ್ಚರ್ಯಕರವಾದ ಪುತ್ರರ ಪುನಃ ದರ್ಶನವನ್ನು ಕಂಡ

ರಾಜರ್ಷಿ ಧೃತರಾಷ್ಟ್ರನು ಶೋಕವನ್ನು ಕಳೆದುಕೊಂಡು ಪುನಃ ಆಶ್ರಮಕ್ಕೆ ಆಗಮಿಸಿದನು. ಇತರ ಜನರೂ, ಪರಮಋಷಿಗಳೆಲ್ಲರೂ, ಧೃತರಾಷ್ಟ್ರನ ಅಪ್ಪಣೆಯನ್ನು ಪಡೆದು ಇಷ್ಟಬಂದಲ್ಲಿಗೆ ಹೊರಟುಹೋದರು. ಮಹಾತ್ಮ ಪಾಂಡವರು ಪತ್ನಿಯರೊಂದಿಗೆ ಮತ್ತು ಉಳಿದಿದ್ದ ಅಲ್ಪ ಸೈನಿಕರೊಂದಿಗೆ ಮಹೀಪತಿ ಧೃತರಾಷ್ಟ್ರನನ್ನು ಅನುಸರಿಸಿ ಹೋದರು. ಆಶ್ರಮಕ್ಕೆ ಬಂದ ಧೀಮಾನ್ ಬ್ರಹ್ಮರ್ಷಿ ಲೋಕಪೂಜಿತ ಮುನಿ ಸತ್ಯವತೀಪುತ್ರನು ಧೃತರಾಷ್ಟ್ರನಿಗೆ ಇಂತೆಂದನು:

"ಧೃತರಾಷ್ಟ್ರ ! ಕೇಳು. ಪುಣ್ಯಕರ್ಮಿಗಳೂ ಜ್ಞಾನವೃದ್ಧರೂ ಆದ ಋಷಿಗಳಿಂದ ನೀನು ಕೇಳಿರುವೆ. ಶ್ರದ್ಧಾವಂತ ಕುಲವೃದ್ಧರಿಂದಲೂ ವೇದ-ವೇದಾಂಗಗಳನ್ನು ತಿಳಿದವರಿಂದಲೂ, ವಿವಿಧ ಕಥೆಗಳನ್ನು ಹೇಳುವ ಧರ್ಮಜ್ಞರಿಂದಲೂ ಅನೇಕ ವಿಷಯಗಳನ್ನು ತಿಳಿದುಕೊಂಡಿರುವೆ. ಇನ್ನಾದರೂ ನೀನು ಮನಸ್ಸನ್ನು ಶೋಕದಲ್ಲಿರಿಸಿಕೊಳ್ಳಬೇಡ. ದೈವಿಕವಾದ ಆಗುಹೋಗುಗಳ ವಿಷಯಕ್ಕಾಗಿ ವಿದ್ವಾಂಸನು ದುಃಖಿಸುವುದಿಲ್ಲ. ದೇವದರ್ಶನ ನಾರದನಿಂದ ನೀನು ದೇವರಹಸ್ಯವನ್ನು ಕೇಳಿರುವೆ.

ಇವರೆಲ್ಲರೂ ಕ್ಷತ್ರಧರ್ಮದಿಂದ ಶಸ್ತ್ರಪೂತರಾಗಿ ಶುಭಗತಿಗಳನ್ನು ಹೊಂದಿರುತ್ತಾರೆ. ನೀನು ನೋಡಿದಂತೆ ನಿನ್ನ ಪುತ್ರರು ಸ್ವರ್ಗದಲ್ಲಿ ಸ್ವೇಚ್ಛಾವಿಹಾರಿಗಳಾಗಿದ್ದಾರೆ. ಈ ಧೀಮಾನ್ ಯುಧಿಷ್ಠಿರನಾದರೋ ಎಲ್ಲ ಸಹೋದರರೂ, ಪತ್ನಿಯರೂ ಮತ್ತು ಸುಹೃದಯರೊಂದಿಗೆ ನಿನ್ನನ್ನೇ ಸೇವಿಸುತ್ತಿದ್ದಾನೆ. ಅವನು ಈ ವನದಲ್ಲಿ ವಾಸಿಸುತ್ತಾ ಒಂದು ತಿಂಗಳಿಗೂ ಹೆಚ್ಚಾಗಿಹೋಯಿತು. ಸ್ವರಾಜ್ಯವನ್ನು ಆಳಲು ಅವನನ್ನು ಕಳುಹಿಸಿಕೊಡು. ರಾಜ್ಯವು ಯಾವಾಗಲೂ ಬಹುಶತ್ರುಗಳಿಂದ ಕೂಡಿರುವುದು, ಆದುದರಿಂದ ಅದನ್ನು ಯಾವಾಗಲೂ ಪ್ರಯತ್ನಪೂರ್ವಕವಾಗಿ ರಕ್ಷಿಸಬೇಕು!"

ಅಮಿತಬುದ್ಧಿ ವ್ಯಾಸನು ಹೀಗೆ ಹೇಳಲು ರಾಜಾ ವಾಗ್ಮೀ ಕೌರವನು ಯುಧಿಷ್ಠಿರನನ್ನು ಕರೆಯಿಸಿ, ಈ ಮಾತುಗಳನ್ನಾಡಿದನು.

"ಅಜಾತಶತ್ರೋ! ನಿನಗೆ ಮಂಗಳವಾಗಲಿ! ಸಹೋದರರರೊಂದಿಗೆ ನನ್ನ ಈ ಮಾತನ್ನು ಕೇಳು. ನಿನ್ನ ಅನುಗ್ರಹದಿಂದ ಈಗ ಶೋಕವು ನಮ್ಮನ್ನು ಬಾಧಿಸುತ್ತಿಲ್ಲ. ಪುತ್ರ! ಹಿಂದೆ ನಾವು ಹಸ್ತಿನಾಪುರದಲ್ಲಿ ನಿನ್ನೊಡನೆ ಹೇಗೆ ರಮಿಸುತ್ತಿದ್ದೆವೋ ಹಾಗೆಯೇ ಇಲ್ಲಿಯೂ ಕೂಡ

ಸಂತೋಷದಿಂದ ಇದ್ದೇವೆ. ನನ್ನೊಡನೆ ಪ್ರೀತಿಯಿಂದ ಇದ್ದುಕೊಂಡು ನನ್ನ ರಕ್ಷಕನಾಗಿದ್ದೀಯೆ. ಪುತ್ರರಿಂದ ಪಡೆಯಬೇಕಾದ ಫಲವನ್ನು ನಾನು ಸಂಪೂರ್ಣವಾಗಿ ನಿನ್ನಿಂದ ಪಡೆದಿರುತ್ತೇನೆ. ಈ ವಿಷಯದಲ್ಲಿ ನನಗೆ ಅತ್ಯಂತ ಪ್ರೀತಿಯುಂಟಾಗಿದೆ. ನಿನ್ನಲ್ಲಿ ನನಗೆ ಸ್ವಲ್ಪವೂ ಕೋಪವಿಲ್ಲ. ಪುತ್ರ! ಆದುದರಿಂದ ನೀನು ತಡಮಾಡದೇ ಹಸ್ತಿನಾಪುರಕ್ಕೆ ಪ್ರಯಾಣಮಾಡು. ನಿನ್ನನ್ನು ನೋಡಿಕೊಂಡೇ ಇದ್ದರೆ ನನ್ನ ತಪಸ್ಸು ಹಾಳಾಗಿಬಿಡುತ್ತದೆ. ತಪೋಯುಕ್ತವಾದ ಈ ಶರೀರವು ನಿನ್ನನ್ನು ನೋಡಿ ಪುನಃ ನನ್ನ ಗಮನವನ್ನು ತನ್ನತ್ತ ಸೆಳೆದಿದೆ. ನಿನ್ನ ತಾಯಿಯರಾದ ಗಾಂಧಾರಿ-ಕುಂತಿಯರೂ ಕೂಡ ನನ್ನಂತೆಯೇ ವ್ರತಾನುಷ್ಠಾನಗಳಲ್ಲಿ ತೊಡಗಿ ಒಣಗಿದ ತರಗೆಲೆಗಳನ್ನು ತಿನ್ನುತ್ತಾ ಜೀವನ್ನು ಧಾರಣೆಮಾಡಿಕೊಂಡಿದ್ದರು. ಅವರು ಇನ್ನು ಬಹುಕಾಲ ಬದುಕಿರಲಾರರು. ನಿನ್ನ ಸಮಾಗಮದಿಂದ ಮತ್ತು ವ್ಯಾಸನ ತಪೋವೀರ್ಯದಿಂದ ಬೇರೆ ಲೋಕಗಳಿಗೆ ಹೋಗಿರುವ ದುರ್ಯೋಧನಾದಿಗಳನ್ನು ನೋಡಿಯಾಯಿತು. ಇದರಿಂದ ನನ್ನ ಜೀವನವು ಸಾರ್ಥಕವಾಯಿತು. ಈಗ ನಾನು ಉಗ್ರ

ತಪಸ್ಸಿನಲ್ಲಿ ತೊಡಗುತ್ತೇನೆ. ಇದಕ್ಕೆ ನೀನು ಅನುಮತಿಯನ್ನು ನೀಡಬೇಕು! ಇಂದು ಪಿತೃಗಳಿಗೆ ಪಿಂಡಪ್ರದಾನವೂ ಕುಲದ ಕೀರ್ತಿಯೂ ನಿನ್ನಲ್ಲಿಯೇ ನೆಲೆಸಿವೆ. ಇಂದು ಅಥವಾ ನಾಳೆ ನೀನು ಹಸ್ತಿನಾಪುರಕ್ಕೆ ಪ್ರಯಾಣಬೆಳೆಸು. ತಡಮಾಡಬೇಡ. ನೀನು ಅನೇಕ ಪ್ರಕಾರವಾದ ರಾಜನೀತಿಗಳನ್ನು ಕೇಳಿ ತಿಳಿದುಕೊಂಡಿರುವೆ. ನಿನಗೆ ಉಪದೇಶಮಾಡಲು ನನಗೇನೂ ಕಾಣುತ್ತಿಲ್ಲ. ನೀನು ನನಗೆ ಬಹಳ ಉಪಕಾರವನ್ನೆಸಗಿರುವೆ!"

ಹೀಗೆ ಹೇಳಿದ ರಾಜನಿಗೆ ನೃಪ ಯುಧಿಷ್ಠಿರನು ಹೇಳಿದನು:

"ಧರ್ಮಜ್ಞ! ನಿರಪರಾಧಿಯಾದ ನನ್ನನ್ನು ಪರಿತ್ಯಜಿಸುವುದು ಸರಿಯಲ್ಲ! ಬೇಕಾದರೆ ನನ್ನ ಎಲ್ಲ ಸಹೋದರರೂ ಅನುಚರರೊಂದಿಗೆ ಹಸ್ತಿನಾಪುರಕ್ಕೆ ಹೊರಟುಹೋಗಲಿ. ನಾನು ಮಾತ್ರ ವ್ರತನಿಷ್ಠನಾಗಿದ್ದು ನಿನ್ನ ಮತು ತಾಯಂದಿರ ಸೇವೆಯನ್ನು ಮಾಡಿಕೊಂಡಿರುತ್ತೇನೆ."

ಗಾಂಧಾರಿಯು ಅವನಿಗೆ ಹೇಳಿದಳು:

"ಪುತ್ರ! ನೀನು ಹೀಗೆ ಹೇಳಬಾರದು. ನನ್ನ ಮಾತನ್ನು ಕೇಳು. ಕುರುಕುಲ ಮತ್ತು ನನ್ನ ಮಾವನ ಪಿಂಡಪ್ರದಾನ ಇವೆಲ್ಲವುಗಳ

ಜವಾಬ್ದಾರಿಯೂ ಈಗ ನಿನ್ನದಾಗಿವೆ. ಇಲ್ಲಿಯವರೆಗೆ ನಮ್ಮನ್ನು ಪೂಜಿಸಿದ್ದು ಪರ್ಯಾಪ್ತವಾಯಿತು. ಈಗ ಹೊರಡು. ರಾಜನು ಹೇಳಿದ ಕಾರ್ಯವನ್ನು ಮಾಡು. ತಂದೆಯ ವಚನವನ್ನು ನೀನು ಪಾಲಿಸಬೇಕು!"

ಗಾಂಧಾರಿಯು ಹೀಗೆ ಹೇಳಲು ಸ್ನೇಹಭಾವದಿಂದ ಕಣ್ಣೀರನ್ನು ಸುರಿಸುತ್ತಾ ರೋದಿಸುವ ಧ್ವನಿಯಲ್ಲಿ ಯುಧಿಷ್ಠಿರನು ಕುಂತಿಗೆ ಹೇಳಿದನು:

"ರಾಜನೂ ಯಶಸ್ವಿನೀ ಗಾಂಧಾರಿಯೂ ನನ್ನ ದೂರಮಾಡಿದ್ದಾರೆ. ನನ್ನ ಚಿತ್ತವು ನಿನ್ನಲ್ಲಿಯೇ ಬದ್ಧವಾಗಿದೆ. ದುಃಖಿತನಾಗಿ ನಾನು ಹೇಗೆ ಹೋಗಲಿ? ಧರ್ಮಚಾರಿಣೀ! ನಿನ್ನ ತಪಸ್ಸಿನಲ್ಲಿ ವಿಘ್ನವನ್ನು ತರಲು ಬಯಸುವುದಿಲ್ಲ. ಏಕೆಂದರೆ ತಪಸ್ಸೇ ಹೆಚ್ಚಿನದು. ತಪಸ್ಸಿಗಿಂತ ದೊಡ್ಡದು ಬೇರೆ ಯಾವುದೂ ಇಲ್ಲ. ಹಿಂದಿನಂತೆ ನನಗೆ ರಾಜ್ಯದಲ್ಲಿಯೂ ಮನಸ್ಸಿಲ್ಲವಾಗಿದೆ. ನನ್ನ ಮನಸ್ಸು ಸರ್ವಥಾ ತಪಸ್ಸಿನಲ್ಲಿಯೇ ಅನುರಕ್ತವಾಗಿದೆ. ಈ ಭೂಮಿಯಲ್ಲವೂ ನನಗೆ ಶೂನ್ಯವಾಗಿಯೇ ತೋರುತ್ತಿದೆ. ನನಗೆ ಯಾವುದೇ ರೀತಿಯ ಸಂತೋಷವನ್ನೂ ನೀಡುತ್ತಿಲ್ಲ. ಬಾಂಧವರೆಲ್ಲರೂ ನಾಶಹೊಂದಿದರು. ಹಿಂದಿನಂತೆ ನಾವು ಬಲಶಾಲಿಗಳೂ ಆಗಿ

ಉಳಿದಿಲ್ಲ. ಪಾಂಚಾಲರು ಸಂಪೂರ್ಣವಾಗಿ ನಾಶಹೊಂದಿದ್ದಾರೆ. ಅವರ ಕನ್ಯೆಯರು ಮಾತ್ರ ಉಳಿದುಕೊಂಡಿದ್ದಾರೆ. ಅವರ ಕುಲವನ್ನು ಉದ್ಧರಿಸುವ ಒಬ್ಬನನ್ನೂ ನಾನು ಕಾಣುತ್ತಿಲ್ಲ. ಅವರೆಲ್ಲರೂ ಯುದ್ಧದಲ್ಲಿ ದ್ರೋಣನೊಬ್ಬನಿಂದಲೇ ಭಸ್ಮೀಭೂತರಾದರು. ಅಳಿದುಳಿದವರನ್ನು ದ್ರೋಣಪುತ್ರನು ರಾತ್ರಿಯಲ್ಲಿ ಸಂಹರಿಸಿದನು. ನಮ್ಮ ಸಂಬಂಧಿಗಳಾದ ಚೇದಿದೇಶದವರೂ ಮತ್ಸ್ಯದೇಶದವರೂ ಹಿಂದಿನಂತೆ ಈಗ ಇಲ್ಲ. ವಾಸುದೇವನ ಪರಿಗ್ರಹದಿಂದ ಕೇಲ್ವಲ ವೃಷ್ಣಿವಂಶವು ಸುರಕ್ಷಿತವಾಗಿದೆ. ಅವರನ್ನು ನೋಡಿ ಧರ್ಮ-ಅರ್ಥಗಳನ್ನು ಸ್ಥಾಪಿಸಲು ಬಯಸುತ್ತೇನೆ. ಬೇರೆ ಯಾವ ಕಾರಣದಿಂದಲೂ ಅಲ್ಲ. ಅಮ್ಮ ! ನೀನು ನಮ್ಮನ್ನು ಮಂಗಳದೃಷ್ಟಿಯಿಂದ ಕಾಣು. ಮುಂದೆ ನಿನ್ನ ದರ್ಶನವು ದುರ್ಲಭವೇ ಸರಿ. ಏಕೆಂದರೆ ರಾಜನು ಈಗ ತೀವ್ರ ತಪಸ್ಸನ್ನು ಆರಂಭಿಸುತ್ತಿದ್ದಾನೆ."

ಇದನ್ನು ಕೇಳಿದ ಯೋಧರ ನಾಯಕ ಮಹಾಬಾಹು ಸಹದೇವನು ವ್ಯಾಕುಲದಿಂದ ಕಣ್ಣೀರುಸುರಿಸುತ್ತಾ ಯುಧಿಷ್ಠಿರನಿಗೆ ಈ ಮಾತನ್ನಾಡಿದನು:

"ಪಾರ್ಥಿವರ್ಷಭ! ತಾಯಿಯನ್ನು ಬಿಟ್ಟುಹೋಗಲು ನನಗೆ ಉತ್ಸಾಹವಿಲ್ಲ. ನೀನು ಬೇಗನೆ ಹೊರಟುಹೋಗು. ನಾನು ವನದಲ್ಲಿ ತಪಸ್ಸನ್ನು ತಪಿಸುತ್ತೇನೆ. ನಾನು ಇಲ್ಲಿಯೇ ತಪಸ್ಸನ್ನಾಚರಿಸಿಕೊಂಡು ರಾಜ ಮತ್ತು ತಾಯಂದಿರಿಬ್ಬರ ಪಾದಶುಶ್ರೂಷಣೆಯಲ್ಲಿ ನಿರತನಾಗಿ ನನ್ನ ಶರೀರವನ್ನು ಶೋಷಿಸುತ್ತೇನೆ!"

ಆಗ ಕುಂತಿಯು ಆ ಮಹಾಭುಜನನ್ನು ಆಲಂಗಿಸಿ ಹೇಳಿದಳು:

"ಪುತ್ರ! ನೀನು ಹೋಗಬೇಕು. ಹಾಗೆ ಹೇಳಬೇಡ! ನನ್ನ ಮಾತಿನಂತೆ ಮಾಡು! ಪುತ್ರರೇ! ನಿಮ್ಮ ಪ್ರಯಾಣವು ಮಂಗಳಮಯವಾಗಲಿ. ನೀವು ಸ್ವಸ್ಥರಾಗಿರಿ! ನೀವೆಲ್ಲರೂ ಇಲ್ಲಿ ಇದ್ದರೆ ನಮ್ಮ ತಪಸ್ಸಿಗೆ ಭಂಗವಾಗುತ್ತದೆ. ನಿನ್ನ ಸ್ನೇಹಪಾಶದ ಬಂಧನಕ್ಕೆ ಸಿಲುಕಿ ನಾನು ಶ್ರೇಷ್ಠ ತಪಸ್ಸಿನಿಂದ ವಂಚಿತಳಾದೇನು. ಆದುದರಿಂದ ಪುತ್ರಕ! ನೀನೂ ಹೊರಟುಹೋಗು. ವ್ಯರ್ಥ ಕಾಲಕಳೆಯಬೇಡ!"

ಹೀಗೆ ಕುಂತಿಯು ಅನೇಕ ಪ್ರಕಾರವಾಗಿ ಸಮಾಧಾನವನ್ನು ಹೇಳಿ ಸಹದೇವನ, ಅದರಲ್ಲಿಯೂ ವಿಶೇಷವಾಗಿ ಯುಧಿಷ್ಠಿರನ ಮನಸ್ಸನ್ನು,

ಹಸ್ತಿನಾವತಿಗೆ ತೆರಳುವಂತೆ ಮಾಡಿದಳು. ತಾಯಿಯಿಂದ ಅನುಜ್ಞಾತರಾದ ಕುರುಪುಂಗವರು ರಾಜಾ ಕುರುಶ್ರೇಷ್ಠನನ್ನು ಅಭಿವಂದಿಸಿ ಅವನಿಂದ ಬೀಳ್ಕೊಂಡರು.

> "ರಾಜನ್! ನಿನ್ನ ಶುಭ ಆಶೀರ್ವಾದಗಳಿಂದ ಆನಂದಿತರಾಗಿ ನಾವು ಹೋಗುತ್ತಿದ್ದೇವೆ. ನಿನ್ನ ಅಪ್ಪಣೆಯಾದರೆ ಬೇಸರವಿಲ್ಲದೇ ನಾವು ಹೋಗುತ್ತೇವೆ."

ಮಹಾತ್ಮ ಧರ್ಮರಾಜನು ಹೀಗೆ ಹೇಳಲು ರಾಜರ್ಷಿ ಧೃತರಾಷ್ಟ್ರನು ಯುಧಿಷ್ಠಿರನಿಗೆ ಜಯ-ಆಶೀರ್ವಚನಗಳನ್ನಿತ್ತು ಹೊರಡಲು ಅನುಮತಿಯನ್ನಿತ್ತನು. ಪಾರ್ಥಿವ ಧೃತರಾಷ್ಟ್ರನು ಬಲಿಗಳಲ್ಲಿ ಶ್ರೇಷ್ಠ ಭೀಮನನ್ನು ಸಂತವಿಸಿದನು. ಉತ್ತಮ ಮೇಧಾವಿಯೂ ವೀರ್ಯವಾನನೂ ಆದ ಭೀಮನೂ ಕೂಡ ಅವನ ಸಾಂತ್ವನವನ್ನು ಸ್ವೀಕರಿಸಿದನು. ಕೌರವ್ಯ ಧೃತರಾಷ್ಟ್ರನು ಅರ್ಜುನ ಮತ್ತು ಪುರುಷರ್ಷಭ ಯಮಳರನ್ನೂ ಬಿಗಿದಪ್ಪಿ ಅಭಿನಂದಿಸಿ ಹೊರಡಲು ಅನುಮತಿಯನ್ನಿತ್ತನು. ಗಾಂಧಾರಿಯ ಪಾದಗಳಿಗೆ ವಂದಿಸಿ ಅವರು ಅವಳ ಅನುಜ್ಞೆಯನ್ನೂ ಪಡೆದುಕೊಂಡರು. ಕುಂತಿಯು ನೃಪ ಯುಧಿಷ್ಠಿರನನ್ನು ಆಲಂಗಿಸಿ ಆಘ್ರಾಣಿಸಿದಳು. ಹಾಲುಕುಡಿಯುವ ಕರುವನ್ನು ಹಿಂದಕ್ಕೆ ಸೆಳೆದಂತೆಲ್ಲಾ ಅದು ಪುನಃ ಪುನಃ ತಾಯಿಯ ಕಡೆ

ನೋಡುವಂತೆ ಪಾಂಡವರೆಲ್ಲರೂ ಪುನಃ ಪುನಃ ಅವರನ್ನೇ ನೋಡುತ್ತಾ ಧೃತರಾಷ್ಟ್ರ, ಗಾಂಧಾರೀ ಮತ್ತು ಕುಂತಿಯರಿಗೆ ಪ್ರದಕ್ಷಿಣ ನಮಸ್ಕಾರಗಳನ್ನು ಮಾಡಿದರು. ಹಾಗೆಯೇ ಸಾಧ್ವೀ ದ್ರೌಪದೀ ಮತ್ತು ಕೌರವ ನಾರಿಯರೆಲ್ಲರೂ ನ್ಯಾಯವತ್ತಾಗಿ ಮಾವನಿಗೆ ನಮಸ್ಕರಿಸಿದರು. ಆ ಅನಿಂದಿತೆಯರು ಅತ್ತೆಯರಿಬ್ಬರನ್ನೂ ಆಲಂಗಿಸಿ ಅಭಿನಂದಿಸಿ, ಮಾಡಬೇಕಾದ ಕರ್ತವ್ಯಗಳನ್ನು ಕೇಳಿ ತಿಳಿದುಕೊಂಡು ಅವರ ಅನುಮತಿಯನ್ನು ಪಡೆದು, ಗಂಡಂದಿರೊಡನೆ ಹಸ್ತಿನಾಪುರಕ್ಕೆ ಹೊರಟರು.

ಆಗ ಕುದುರೆಗಳನ್ನು ರಥಗಳಿಗೆ ಕಟ್ಟಿ ಎನ್ನುವ ಸೂತರ ನಿನಾದವೂ, ಒಂಟೆಗಳ ಕೂಗೂ, ಕುದುರೆಗಳ ಹೇಷಾರವವೂ ಕೇಳಿಬಂದಿತು. ಅನಂತರ ರಾಜಾ ಯುಧಿಷ್ಠಿರನು ಪತ್ನಿಯರೊಂದಿಗೆ, ಸೈನಿಕರೊಡನೆ ಮತ್ತು ಬಾಂಧವರನ್ನೊಡಗೂಡಿ ಪುನಃ ಹಸ್ತಿನಾಪುರ ನಗರಕ್ಕೆ ಆಗಮಿಸಿದನು.

# ದಾವಾಗ್ನಿಯಲ್ಲಿ ಧೃತರಾಷ್ಟ್ರಾದಿಗಳ ದಹನ

## ಹಸ್ತಿನಾಪುರಕ್ಕೆ ನಾರದನ ಆಗಮನ

ಪಾಂಡವರು ಹಿಂದಿರುಗಿ ಎರಡು ವರ್ಷಗಳಾದನಂತರ ದೇವರ್ಷಿ ನಾರದನು ರಾಜ ಯುಧಿಷ್ಠಿರನಲ್ಲಿಗೆ ಆಗಮಿಸಿದನು. ಕುರುರಾಜ ಯುಧಿಷ್ಠಿರನು ಅವನನ್ನು ಅರ್ಚಿಸಿದನು. ವಿಶ್ರಮಿಸಿಕೊಂಡು ಆಸನದಲ್ಲಿ ಕುಳಿತಿದ್ದ ನಾರದನಿಗೆ ವಾಗ್ಮಿಶ್ರೇಷ್ಠ ಯುಧಿಷ್ಠಿರನು ಹೇಳಿದನು:

> "ವಿಪ್ರ! ಬಹುದಿನಗಳ ನಂತರ ನಿಮ್ಮ ಆಗಮನವನ್ನು ನಾನು ಕಾಣುತ್ತಿದ್ದೇನೆ. ನೀವು ಕುಶಲರಾಗಿದ್ದೀರಿ ತಾನೆ? ಎಲ್ಲವೂ ಶುಭವಾಗಿದೆಯಲ್ಲವೇ? ಇಲ್ಲಿ ಬರುವ ಮೊದಲು ಯಾವ ಪ್ರದೇಶಗಳನ್ನು ನೋಡಿದ್ದಿರಿ? ನಿಮಗೆ ನಾನು ಯಾವ ಕಾರ್ಯವನ್ನು ಮಾಡಲಿ? ದ್ವಿಜಮುಖ್ಯ! ಅದನ್ನು ಹೇಳಿ. ಏಕೆಂದರೆ ನೀವು ನಮಗೆ ಅತ್ಯಂತ ಪ್ರಿಯರಾದ ಅತಿಥಿಗಳು!"

ನಾರದನು ಹೇಳಿದನು:

> "ರಾಜನ್! ನಿನ್ನನ್ನು ನೋಡಿ ಬಹಳ ಸಮಯವಾಯಿತೆಂದೇ ತಪೋವನದಿಂದ ನಾನು ಬಂದೆನು. ಬರುವಾಗ ತೀರ್ಥಗಳನ್ನೂ ಗಂಗೆಯನ್ನೂ ನೋಡಿದೆನು.

ಯುಧಿಷ್ಠಿರನು ಹೇಳಿದನು:

"ಗಂಗಾತೀರ ನಿವಾಸಿ ಪುರುಷರು ಮಹಾತ್ಮ ಧೃತರಾಷ್ಟ್ರನು ಅಲ್ಲಿ ಪರಮ ತಪಸ್ಸಿನಲ್ಲಿ ನಿರತನಾಗಿರುವನೆಂದು ಹೇಳುತ್ತಾರೆ. ನೀವೇನಾದರೂ ಅಲ್ಲಿ ಆ ಕುರೂದ್ವಹನನ್ನು ಕಂಡಿರೇ? ಧೃತರಾಷ್ಟ್ರ, ಗಾಂಧಾರೀ, ಪೃಥೆ, ಮತ್ತು ಸೂತಪುತ್ರ ಸಂಜಯರು ಕುಶಲರಾಗಿರುವರೆ? ಭಗವನ್! ಇಂದು ನನ್ನ ತಂದೆ ಆ ಪಾರ್ಥಿವನು ಹೇಗಿದ್ದಾನೆ? ನೀವು ಆ ನೃಪನನ್ನು ಕಂಡಿದ್ದರೆ ಅವನ ಕುರಿತು ಕೇಳಲು ಬಯಸುತ್ತೇನೆ."

ನಾರದನು ಹೇಳಿದನು:

"ಮಹಾರಾಜ! ಆ ತಪೋವನದಲ್ಲಿ ನಾನು ನೋಡಿದುದನ್ನು ಮತ್ತು ಕೇಳಿದುದನ್ನು ಎಲ್ಲವನ್ನೂ ಯಥಾವತ್ತಾಗಿ ಸ್ಥಿರಚಿತ್ತನಾಗಿ ಕೇಳು! ನೀವು ವನವಾಸದಿಂದ ಹಿಂದಿರುಗಿದ ನಂತರ ನಿನ್ನ ತಂದೆ ಧೀಮಾನ್ ನೃಪನು ಗಂಧಾರೀ, ತಮ್ಮನ ಪತ್ನಿ ಕುಂತಿ, ಸೂತ ಸಂಜಯ, ಯಾಜಕರು ಮತ್ತು ಅಗ್ನಿಹೋತ್ರಗಳೊಂದಿಗೆ ಕುರುಕ್ಷೇತ್ರದಿಂದ ಗಂಗಾದ್ವಾರಕ್ಕೆ ಹೋದನು. ಅಲ್ಲಿ ತಪೋಧನ ಮುನಿಯಾದ ನಿನ್ನ ತಂದೆಯು ಮರದ

ಚೂರುಗಳನ್ನು ಬಾಯಿಯಲ್ಲಿಟ್ಟುಕೊಂಡು ಗಾಳಿಯನ್ನೇ ಆಹಾರವನ್ನಾಗಿ ಸೇವಿಸುತ್ತಾ ತೀವ್ರವಾದ ತಪಸ್ಸನ್ನು ಆಚರಿಸಿದನು. ಚರ್ಮ ಮತ್ತು ಮೂಳೆಗಳು ಮಾತ್ರ ಉಳಿದಿದ್ದ ಆ ಮಹಾತಪಸ್ವಿ ನೃಪನು ವನದಲ್ಲಿ ಸರ್ವ ಮುನಿಗಳಿಂದಲೂ ಗೌರವಿಸಲ್ಪಟ್ಟಿದ್ದನು. ಹಾಗೆ ಆರು ತಿಂಗಳುಗಳು ಕಳೆದವು. ಗಾಂಧಾರಿಯು ನೀರನ್ನು ಮಾತ್ರ ಸೇವಿಸುತ್ತಿದ್ದಳು. ಕುಂತಿಯು ತಿಂಗಳಿಗೊಮ್ಮೆ ಆಹಾರವನ್ನು ತೆಗೆದುಕೊಳ್ಳುತ್ತಿದ್ದಳು. ಸಂಜಯನು ಆರುಹೊತ್ತಿಗೊಮ್ಮೆ (ಪ್ರತಿ ಎರಡನೆಯ ರಾತ್ರಿಗೊಮ್ಮೆ) ಆಹಾರ ಸೇವನೆ ಮಾಡುತ್ತಿದ್ದನು. ಯಾಜಕರು ಅಗ್ನಿಯಲ್ಲಿ ವಿಧಿವತ್ತಾಗಿ ಹೋಮಮಾಡುತ್ತಿದ್ದರು. ನೃಪ ಧೃತರಾಷ್ಟ್ರನು ಆ ವನದಲ್ಲಿ ಕೆಲವೊಮ್ಮೆ ಕಾಣಿಸಿಕೊಳ್ಳುತ್ತಿದ್ದನು. ಇನ್ನು ಕೆಲವೊಮ್ಮೆ ಅದೃಶ್ಯನಾಗಿಬಿಡುತ್ತಿದ್ದನು. ಹೀಗೆ ನೆಲೆಯಿಲ್ಲದೇ ಆ ರಾಜನು ವನದಲ್ಲಿ ಸುತ್ತಾಡುತ್ತಿದ್ದನು. ಆ ದೇವಿಯರಿಬ್ಬರೂ ಸಂಜಯನೊಂದಿಗೆ ಅವನನ್ನೇ ಅನುಸರಿಸಿ ಹೋಗುತ್ತಿದ್ದರು. ಹಳ್ಳತಿಟ್ಟುಗಳಲ್ಲಿ ಸಂಜಯನು ನೃಪತಿಯನ್ನು ಕೊಂಡೊಯ್ಯುತ್ತಿದ್ದನು. ಅನಿಂದಿತೆ ಪೃಥೆಯು ಗಾಂಧಾರಿಯ

ಕಣ್ಣಾಗಿದ್ದಳು. ಗಂಗಾತೀರದಲ್ಲಿರುವಾಗ ಒಮ್ಮೆ ಆ ಧೀಮಾನ್ ನೃಪಸತ್ತಮನು ಗಂಗೆಯಲ್ಲಿ ಮಿಂದು ಆಶ್ರಮದ ಕಡೆ ಹೋಗುತ್ತಿದ್ದನು. ಆಗ ಭಿರುಗಾಳಿಯು ಬೀಸಿ ಮಹಾ ಕಾಡ್ಗಿಚ್ಚು ಹತ್ತಿಕೊಂಡಿತು. ಅದು ವನದಲ್ಲಿದ್ದ ಎಲ್ಲವನ್ನೂ ಸುಟ್ಟು ಭಸ್ಮಮಾಡಿತು. ಆ ದಾವಾಗ್ನಿಯು ವನದಲ್ಲಿದ್ದ ಮೃಗಸಮೂಹಗಳನ್ನೂ, ಸರ್ಪಗಳನ್ನೂ ಭಸ್ಮಮಾಡಿತು. ಆನೆಗಳ ಹಿಂಡುಗಳು ನೀರಿನಲ್ಲಿ ಆಶ್ರಯವನ್ನು ಪಡೆಯುತ್ತಿದ್ದವು. ವನವು ಹತ್ತಿಕೊಂಡು ಉರಿಯುತ್ತಿರುವ ಆ ಮಹಾ ಸಂಕಟವಾದಾಗ ನಿರಾಹಾರಿಯಾಗಿದ್ದ ರಾಜನ ಪ್ರಾಣಶಕ್ತಿಯು ಕುಂದಿಹೋಗಿದ್ದು ಏನನ್ನೂ ಮಾಡಲಿಕ್ಕಾಗದೇ ಹೋದನು. ತುಂಬಾ ಕೃಶರಾಗಿದ್ದ ನಿನ್ನ ಇಬ್ಬರು ತಾಯಂದಿರು ಕೂಡ ಆ ದಾವಾಗ್ನಿಯಿಂದ ತಪ್ಪಿಸಿಕೊಂಡು ಹೋಗಲು ಅಸಮರ್ಥರಾದರು. ಬೆಂಕಿಯು ತನ್ನ ಹತ್ತಿರ ಬರುತ್ತಿರುವುದನ್ನು ಕಂಡು ನೃಪತಿಯು ಸೂತ ಸಂಜಯನಿಗೆ ಇಂತೆಂದನು: "ಸಂಜಯ! ಹೋಗು! ಅಗ್ನಿಯು ನಿನ್ನನ್ನು ಸುಡದಿರುವಲ್ಲಿಗೆ ಎಲ್ಲಿಯಾದರೂ ಹೋಗು! ನಾವು ಇಲ್ಲಿ ಅಗ್ನಿಯಲ್ಲಿ ಸೇರಿ ಪರಮ ಗತಿಯನ್ನು ಸೇರುತ್ತೇವೆ!" ಅತ್ಯಂತ

ಉದ್ವಿಗ್ನನಾಗಿದ್ದ ಮಾತುಗಾರರರಲ್ಲಿ ಶ್ರೇಷ್ಠ ಸಂಜಯನು ಅವನಿಗೆ ಉತ್ತರಿಸಿದನು: "ರಾಜನ್! ವೃಥಾ ಅಗ್ನಿಯಲ್ಲಿ ಸುಟ್ಟು ಮೃತ್ಯುವನ್ನು ಪಡೆಯುವುದು ನಿನಗೆ ಅನಿಷ್ಟವಾದುದು. ಆದರೆ ಅಗ್ನಿಯಿಂದ ತಪ್ಪಿಸಿಕೊಳ್ಳುವ ಯಾವ ಉಪಾಯವನ್ನೂ ಕಾಣುತ್ತಿಲ್ಲ. ಮುಂದೆ ಏನನ್ನು ಮಾಡಬೇಕೆಂದು ನೀನು ಹೇಳಬೇಕು!" ಸಂಜಯನು ಹೀಗೆ ಹೇಳಲು ರಾಜನು ಪುನಃ ಹೇಳಿದನು: "ಸ್ವ-ಇಚ್ಛೆಯಿಂದಲೇ ಮನೆಯಿಂದ ಹೊರಹೊರಟ ನಮಗೆ ಈ ಮೃತ್ಯುವು ಅನಿಷ್ಟವೆನಿಸುವುದಿಲ್ಲ. ಜಲ-ಅಗ್ನಿ-ವಾಯು ಅಥವಾ ಉಪವಾಸ ಇವು ತಾಪಸಿಗಳಿಗೆ ಪ್ರಶಸ್ತವಾದವುಗಳು. ಆದುದರಿಂದ ಸಂಜಯ ನೀನು ಹೊರಟುಹೋಗು! ತಡಮಾಡಬೇಡ!" ಸಂಜಯನಿಗೆ ಹೀಗೆ ಹೇಳಿ ರಾಜನು ಮನಸ್ಸನ್ನು ಏಕಾಗ್ರಗೊಳಿಸಿ ಕುಂತಿ ಮತ್ತು ಗಾಂಧಾರಿಯರೊಡನೆ ಪೂರ್ವಾಭಿಮುಖವಾಗಿ ಕುಳಿತುಕೊಂಡನು. ಅದನ್ನು ನೋಡಿ ಮೇಧಾವೀ ಸಂಜಯನು ಅವರಿಗೆ ಪ್ರದಕ್ಷಿಣೆ ಮಾಡಿ "ಪ್ರಭೋ! ಮನಸ್ಸನ್ನು ಆತ್ಮನಲ್ಲಿ ಸಂಯೋಜಿಸು!" ಎಂದು ಹೇಳಿದನು. ಅವನ ಮಾತಿನಂತೆ ಋಷಿಪುತ್ರ ಮನೀಷೀ ರಾಜಾ ಧೃತರಾಷ್ಟ್ರನು

ಇಂದ್ರಿಯಗಳನ್ನು ನಿರೋಧಿಸಿ ಮನಸ್ಸನ್ನು ಆತ್ಮನಲ್ಲಿ ಲೀನಗೊಳಿಸಿ ಕಟ್ಟಿಗೆಯಂತೆ ನಿಶ್ಚೇಷ್ಟನಾದನು. ಮಹಾಭಾಗೆ ಗಾಂಧಾರಿ, ನಿನ್ನ ಜನನಿ ಪೃಥೆ ಮತ್ತು ನಿನ್ನ ತಂದೆ ರಾಜನೂ ಕೂಡ ದಾವಾಗ್ನಿಯಲ್ಲಿ ಒಂದಾದರು. ಮಹಾಮಾತ್ರ ಸಂಜಯನಾದರೋ ದಾವಾಗ್ನಿಯಿಂದ ತಪ್ಪಿಸಿಕೊಂಡನು. ತಾಪಸರಿಂದ ಸುತ್ತುವರೆದು ಕುಳಿತಿದ್ದ ಅವನನ್ನು ನಾನು ಗಂಗಾಕೂಲದಲ್ಲಿ ನೋಡಿದೆನು. ತೇಜಸ್ವಿ ಸೂತ ಸಂಜಯನು ಇವೆಲ್ಲವನ್ನೂ ಅವರಿಗೆ ತಿಳಿಸಿ ಹೇಳಿ ಹಿಮವತ್ಪರ್ವತಕ್ಕೆ ಹೊರಟುಹೋದನು. ಹೀಗೆ ಮಹಾಮನಸ್ವಿ ಕುರುರಾಜ, ಗಾಂಧಾರೀ ಮತ್ತು ನಿನ್ನ ಜನನಿ ಪೃಥೆಯರು ನಿಧನಹೊಂದಿದರು. ನಾನು ಅರಣ್ಯದಲ್ಲಿ ಸಂಚರಿಸುತ್ತಿರುವಾಗ ಆಕಸ್ಮಿಕವಾಗಿ ರಾಜನ ಮತ್ತು ಆ ಇಬ್ಬರು ದೇವಿಯರ ಕಳೇಬರಗಳನ್ನು ನೋಡಿದೆನು. ಆಗ ಆ ತಪೋವನದಲ್ಲಿದ್ದ ತಪೋಧನರು ಅಲ್ಲಿಗೆ ಆಗಮಿಸಿದರು. ರಾಜನ ಕುರಿತು ಕೇಳಿದ ಆ ನಿಷ್ಠಾವಂತರು ಅವನ ಮರಣದ ಕುರಿತು ಶೋಕಿಸಲಿಲ್ಲ. ಅಲ್ಲಿಯೇ ನಾನು ರಾಜ ಮತ್ತು ಇಬ್ಬರು ದೇವಿಯರ ಕುರಿತು ಎಲ್ಲವನ್ನೂ ಕೇಳಿದೆನು. ಆ ರಾಜ, ಗಾಂಧಾರೀ ಮತ್ತು ನಿನ್ನ

ಜನನಿಯರು ಸ್ವಯಂ ತಾವೇ ಅಗ್ನಿಯಲ್ಲಿ ಸೇರಿಕೊಂಡಿದುದರಿಂದ ಅವರ ಕುರಿತು ನೀನು ಶೋಕಿಸಬಾರದು."

ಧೃತರಾಷ್ಟ್ರನ ನಿರ್ಯಾಣದ ಕುರಿತು ಕೇಳಿ ಆ ಎಲ್ಲ ಮಹಾತ್ಮ ಪಾಂಡವರಿಗೂ ಮಹಾಶೋಕವುಂಟಾಯಿತು. ರಾಜನ ಮರಣವಾರ್ತೆಯನ್ನು ಕೇಳಿ ಅಂತಃಪುರದಲ್ಲಿ ಮತ್ತು ಪೌರಜನರಲ್ಲಿ ಮಹಾ ಆರ್ತನಾದವುಂಟಾಯಿತು. ಅತ್ಯಂತ ದುಃಖಿತನಾದ ರಾಜಾ ಯುಧಿಷ್ಠಿರನು ತನ್ನ ತಾಯಿಯನ್ನು ಸ್ಮರಿಸಿಕೊಂಡು ಬಾಹುಗಳೆರಡನ್ನೂ ಮೇಲಕ್ಕೆತ್ತಿ "ಅಯ್ಯೋ! ನನಗೆ ಧಿಕ್ಕಾರವಿರಲಿ!" ಎಂದು ಕೂಗಿಕೊಳ್ಳುತ್ತಾ ರೋದಿಸಿದನು. ಭೀಮಸೇನನೇ ಮೊದಲಾದ ಎಲ್ಲ ಸಹೋದರರೂ ರೋದಿಸಿದರು. ಪೃಥೆಯು ಮರಣಹೊಂದಿದನ್ನು ಕೇಳಿ ಅಂತಃಪುರದಲ್ಲಿಯೂ ಮಹಾ ರೋದನವು ಕೇಳಿಬಂದಿತು. ಪುತ್ರರನ್ನು ಕಳೆದುಕೊಂಡ ವೃದ್ಧ ನರಾಧಿಪ ಮತ್ತು ತಪಸ್ವಿನೀ ಗಾಂಧಾರಿಯ ಕುರಿತು ಎಲ್ಲರೂ ಶೋಕಿಸಿದರು.

## ಯುಧಿಷ್ಠಿರ ಶೋಕ

ಸ್ವಲ್ಪ ಹೊತ್ತು ಕಳೆದನಂತರ ಶೋಕಶಬ್ಧವು ಕಡಿಮೆಯಾಗಲು

ಧರ್ಮರಾಜನು ಧೈರ್ಯದಿಂದ ಕಣ್ಣೀರನ್ನು ತಡೆಹಿಡಿದು ಈ ರೀತಿ ಹೇಳಿದನು:

"ಬಂಧುಗಳಾದ ನಾವು ಇದ್ದರೂ ಉಗ್ರತಪಸ್ಸಿನಲ್ಲಿ ನಿರತನಾಗಿದ್ದ ಆ ಮಹಾತ್ಮನ ನಿಧನವು ಅನಾಥನ ರೀತಿಯಲ್ಲಿ ಆಗಿಹೋಯಿತು! ವೈಚಿತ್ರವೀರ್ಯನು ಈ ರೀತಿ ಕಾಡ್ಗಿಚ್ಚಿನಲ್ಲಿ ಸುಟ್ಟುಹೋದನೆಂದರೆ ಮನುಷ್ಯನ ಗತಿಯನ್ನು ತಿಳಿದುಕೊಳ್ಳುವುದು ಕಷ್ಟಸಾಧ್ಯ ಎಂದು ನನ್ನ ಮತ. ನೂರು ಮಕ್ಕಳನ್ನು ಹೊಂದಿದ್ದ, ಸ್ವಯಂ ತಾನೇ ಹತ್ತು ಸಾವಿರ ಆನೆಗಳ ಬಲವುಳ್ಳವನಾಗಿದ್ದ ಆ ಶ್ರೀಮಾನ್ ರಾಜನು ಕಾಡ್ಗಿಚ್ಚಿನಿಂದ ಸುಟ್ಟುಹೋದನು! ಹಿಂದೆ ಯಾರಿಗೆ ಸುಂದರ ಸ್ತ್ರೀಯರು ತಾಳೇಗರಿಯ ಬೀಸಣಿಗೆಗಳಿಂದ ಗಾಳಿಯನ್ನು ಬೀಸುತ್ತಿದ್ದರೋ ಅವನು ಈಗ ಕಾಡ್ಗಿಚ್ಚಿಗೆ ಸಿಲುಕಿ ರಣಹದ್ದುಗಳು ರೆಕ್ಕೆಗಳಿಂದ ಗಾಳಿಯನ್ನು ಬೀಸುವಂತೆ ಆಗಿಹೋಯಿತು! ಮಲಗಿದ್ದಾಗ ಯಾವ ಪ್ರಭುವನ್ನು ಸೂತ-ಮಾಗಧ ಗುಂಪುಗಳು ಎಬ್ಬಿಸುತ್ತಿದ್ದವೋ ಆ ನೃಪತಿಯು ನನ್ನ ಪಾಪಕರ್ಮಗಳಿಂದಾಗಿ ನೆಲದಮೇಲೆ ಮಲಗಿಕೊಳ್ಳುವಂತಾಯಿತು! ಪುತ್ರರನ್ನು ಕಳೆದುಕೊಂಡ

ಯಶಸ್ವಿನೀ ಗಾಂಧಾರಿಯು ಕುರಿತು ನಾನು ಶೋಕಿಸುತ್ತಿಲ್ಲ. ಪತಿವ್ರತೆಯಾಗಿದ್ದ ಅವಳು ಪತಿಲೋಕವನ್ನು ಪಡೆದುಕೊಂಡಿದ್ದಾಳೆ. ಆದರೆ ಸಮೃದ್ಧವಾದ ಮತ್ತು ಉಜ್ವಲವಾದ ಪುತ್ರೈಶ್ವರವನ್ನು ತ್ಯಜಿಸಿ ವನವಾಸವನ್ನು ಬಯಸಿದ ಪೃಥೆಯ ಕುರಿತು ದುಃಖಿಸುತ್ತಿದ್ದೇನೆ. ನಮ್ಮ ಈ ರಾಜ್ಯಕ್ಕೆ ಧಿಕ್ಕಾರ! ಈ ಬಲಕ್ಕೆ ಧಿಕ್ಕಾರ! ಪರಾಕ್ರಮಕ್ಕೆ ಧಿಕ್ಕಾರ! ಕ್ಷತ್ರಧರ್ಮಕ್ಕೆ ಧಿಕ್ಕಾರ! ಜೀವಿತರಾಗಿರುವ ನಾವೂ ಮೃತರಾದಂತೆಯೇ! ರಾಜ್ಯವನ್ನು ತೊರೆದು ವನವಾಸವನ್ನು ಆಕೆಯು ಬಯಸಿದಳೆಂದರೆ ಕಾಲದ ಗತಿಯು ಅತ್ಯಂತ ಸೂಕ್ಷ್ಮವಾದುದಷ್ಟೇ! ಯುಧಿಷ್ಠಿರನ, ಭೀಮನ ಮತ್ತು ವಿಜಯನ ಜನನಿಯು ಅನಾಥೆಯಂತೆ ಹೇಗೆ ಸುಟ್ಟುಹೋದಳು ಎಂದು ಚಿಂತಿಸಿಯೇ ನಾನು ಮೂರ್ಛೆಗೊಳ್ಳುತ್ತಿದ್ದೇನೆ. ಖಾಂಡವದಲ್ಲಿ ಸವ್ಯಸಾಚಿಯು ಅಗ್ನಿಯನ್ನು ತೃಪ್ತಿಗೊಳಿಸಿದುದು ವ್ಯರ್ಥವಾಗಿ ಹೋಯಿತು. ಆ ಉಪಕಾರವನ್ನು ಸ್ಮರಿಸದೆಯೇ ಇದ್ದ ಅಗ್ನಿಯು ಕೃತಘ್ನನೆಂದು ನನಗನ್ನಿಸುತ್ತಿದೆ. ಬ್ರಾಹ್ಮಣನ ವೇಷಧರಿಸಿ ಭಿಕ್ಷಾರ್ಥಿಯಾಗಿ ಸವ್ಯಸಾಚಿಯ ಬಳಿಬಂದಿದ್ದ ಆ ಭಗವಂತನು ತಾಯಿಯನ್ನು

ಸುಟ್ಟನೆಂದರೆ ಆ ಅಗ್ನಿಗೆ ಧಿಕ್ಕಾರ! ಪಾರ್ಥನ ವಿಶ್ರುತ ಸತ್ಯಸಂಧತೆಗೂ ಧಿಕ್ಕಾರ! ಪೃಥಿವೀಪತಿಯು ವೃಥಾ ಅಗ್ನಿಯಲ್ಲಿ ಸಮಾವೇಶನಾದನೆಂದರೆ ಇದಕ್ಕಿಂತಲೂ ಕಷ್ಟತರವಾದುದು ಬೇರೆ ಏನೂ ನನಗೆ ತೋಚುತ್ತಿಲ್ಲ. ತಪಸ್ವಿಯೂ ರಾಜರ್ಷಿಯೂ ಆಗಿದ್ದುಕೊಂಡು ಈ ಭೂಮಿಯನ್ನೇ ಆಳಿದ ಆ ಕೌರವನಿಗೆ ಈ ವಿಧದ ಮೃತ್ಯುವು ಹೇಗಾಯಿತು? ಮಂತ್ರಪೂತವಾದ ಅವನ ಮೂರು ಅಗ್ನಿಗಳು ಜೊತೆಯಲ್ಲಿದ್ದಿದ್ದರೂ ನನ್ನ ತಂದೆಯು ವೃಥಾ ಮಹಾವನದ ಕಾಡ್ಗಿಚ್ಚಿಗೆ ಸೇರಿ ನಿಧನ ಹೊಂದಿದನು! ಕೃಶಳಾಗಿ ನರನಾಡಿಗಳನ್ನು ಮಾತ್ರವೇ ಹೊಂದಿದ್ದ ಪೃಥೆಯು ಮಹಾಭಯದಿಂದ "ಹಾ ಮಗೂ! ಹಾ ಧರ್ಮರಾಜ!" ಎಂದು ಕೂಗಿಕೊಂಡಿರಬಹುದೆಂದು ನನಗನ್ನಿಸುತ್ತಿದೆ. "ಭೀಮ! ಕಾಪಾಡು!" ಎಂದು ಭಯದಿಂದ ಕೂಗಿಕೊಳ್ಳುತ್ತಾ ಅರಣ್ಯದಲ್ಲೆಲ್ಲಾ ಎದ್ದು-ಬಿದ್ದು ಒದ್ದಾಡುತ್ತಿದ್ದ ನನ್ನ ತಾಯಿಯನ್ನು ದಾವಾಗ್ನಿಯು ಸುಟ್ಟು ಭಸ್ಮಮಾಡಿರಬಹುದು! ಅವಳಿಗೆ ಪ್ರಿಯನಾಗಿದ್ದ, ಪುತ್ರರಲ್ಲಿಯೇ ಅಧಿಕನಾಗಿದ್ದ ವೀರ ಮಾದ್ರವತೀಸುತ ಸಹದೇವನೂ ಕೂಡ ಅವಳನ್ನು ಆ

ಆಪತ್ತಿನಿಂದ ಬಿಡಿಸಲಾಗಲಿಲ್ಲ!"

ಅವನ ಆ ಮಾತುಗಳನ್ನು ಕೇಳಿ ಪಂಚ ಪಾಂಡವರೆಲ್ಲರೂ ದುಃಖಾರ್ತರಾಗಿ ಪರಸ್ಪರರನ್ನು ಆಲಂಗಿಸಿಕೊಂಡು ಯುಗಕ್ಷಯದಲ್ಲಿ ಪೀಡೆಗೊಳಗಾಗುವ ಭೂತಗಳಂತೆ ಗೋಳಾಡಿದರು. ಗಟ್ಟಿಯಾಗಿ ರೋದಿಸುತ್ತಿದ್ದ ಆ ಪುರುಷೇಂದ್ರರ ಅಳುವಿನ ಧ್ವನಿಯು ಪ್ರಾಸಾದದ ಆವರಣವೆಲ್ಲವನ್ನೂ ತುಂಬಿಕೊಂಡು ಹೊರಹೋಗಲಾರದೇ ಭೂಮ್ಯಂತರಿಕ್ಷಗಳಲ್ಲಿ ಪ್ರತಿಧ್ವನಿಸಿತು.

## ಧೃತರಾಷ್ಟ್ರ ಶ್ರಾದ್ಧ ಕರಣ

ನಾರದನು ಹೇಳಿದನು:

"ಭಾರತ! ನೃಪತಿ ವೈಚಿತ್ರವೀರ್ಯನು ಅಲ್ಲಿ ವೃಥಾ ಕಾಡ್ಗಿಚ್ಚಿನಲ್ಲಿ ಸುಟ್ಟುಹೋಗಲಿಲ್ಲ. ಅಲ್ಲಿ ನಾನು ಕೇಳಿದುದನ್ನು ಹೇಳುತ್ತೇನೆ. ಕೇಳು. ವಾಯುವನ್ನೇ ಆಹಾರವನ್ನಾಗಿ ಸೇವಿಸುತ್ತಿದ್ದ ಆ ಧೀಮತ ಧೃತರಾಷ್ಟ್ರನು ವನವನ್ನು ಪ್ರವೇಶಿಸುವಾಗ ತನ್ನ ಅಗ್ನಿಯಲ್ಲಿ ಇಷ್ಟಿಯನ್ನು ಮಾಡಿಸಿ ವಿಸರ್ಜಿಸಿದನೆಂದು ನಾನು ಕೇಳಿದ್ದೇನೆ. ಯಾಜಕರು ಆ ಅಗ್ನಿಯನ್ನು ನಿರ್ಜನ ವನದಲ್ಲಿ ವಿಸರ್ಜಿಸಿ, ಇಷ್ಟಬಂದಲ್ಲಿಗೆ

ಹೊರಟುಹೋಗಿದ್ದರು. ಅದೇ ಅಗ್ನಿಯು ಆಗ ಗಾಳಿಗೆ ಸಿಲುಕಿ ಕಾಡ್ಗಿಚ್ಚಾಗಿ ಆ ವನದಲ್ಲಿ ಪಸರಿಸಿಕೊಂಡಿತು ಎಂದು ನನಗೆ ತಾಪಸರು ಹೇಳಿದರು. ನಾನು ಈ ಮೊದಲೇ ಹೇಳಿದಂತೆ ಜಾಹ್ನವೀ ತೀರದಲ್ಲಿ ರಾಜಾ ಧೃತರಾಷ್ಟ್ರನು ಸ್ವ-ಇಚ್ಛೆಯಿಂದ ಅದೇ ಅಗ್ನಿಯಲ್ಲಿ ಸಮಾಯುಕ್ತನಾದನು. ಹೀಗೆ ಭಾಗೀರಥೀ ತೀರದಲ್ಲಿ ನಾನು ಕಂಡ ಮುನಿಗಳು ನನ್ನಲ್ಲಿ ಹೇಳಿಕೊಂಡರು. ಹೀಗೆ ರಾಜಾ ಧೃತರಾಷ್ಟ್ರನು ತನ್ನದೇ ಅಗ್ನಿಯಲ್ಲಿ ಸಮಾಯುಕ್ತನಾದನು. ರಾಜನು ಪರಮ ಗತಿಯನ್ನು ಹೊಂದಿದ್ದಾನೆ. ಅದರ ಕುರಿತು ನೀನು ಶೋಕಿಸಬೇಡ! ನಿನ್ನ ಜನನಿಯೂ ಕೂಡ ಗುರುಶುಶ್ರೂಷೆಗಳಿಂದ ಮಹಾ ಸಿದ್ಧಿಯನ್ನೇ ಪಡೆದಿದ್ದಾಳೆ ಎನ್ನುವುದರಲ್ಲಿ ನನಗೆ ಸಂಶಯವಿಲ್ಲ. ಸಹೋದರರೊಡಗೂಡಿ ನೀನು ಅವರೆಲ್ಲರ ಉದಕಕ್ರಿಯೆಗಳನ್ನು ಮಾಡಬೇಕಾಗಿದೆ. ಇದನ್ನು ಈಗಲೇ ಮಾಡುವವನಾಗು!"

ಆಗ ಪಾಂಡವರ ಧುರಂಧರ ಪೃಥಿವೀಪಾಲ ಯುಧಿಷ್ಠಿರನು ತನ್ನ ಸಹೋದರರೊಂದಿಗೆ ಹಸ್ತಿನಾಪುರದ ಹೊರ ಹೊರಟನು. ರಾಜಭಕ್ತಿಯಿಂದ ಪ್ರೇರಿತರಾದ ಗ್ರಾಮೀಣ-ಪೌರ ಜನರೂ ಕೂಡ

ಒಂದೇ ವಸ್ತ್ರವನ್ನು ಸುತ್ತಿಕೊಂಡು ಗಂಗೆಯ ಮುಖವಾಗಿ ಹೊರಟರು. ಆ ಕುರುಪುಂಗವರೆಲ್ಲರೂ ನದಿಯನ್ನು ಸೇರಿ ಯುಯುತ್ಸುವನ್ನು ಮುಂದೆಮಾಡಿಕೊಂಡು ಮಹಾತ್ಮ ಧೃತರಾಷ್ಟ್ರನಿಗೆ ತರ್ಪಣವನ್ನಿತ್ತರು. ವಿಧಿವತ್ತಾಗಿ ನಾಮ-ಗೋತ್ರಗಳನ್ನು ಹೇಳಿಕೊಂಡು ಗಾಂಧಾರಿಗೂ ಪೃಥೆಗೂ ತರ್ಪಣಗಳನ್ನಿತ್ತರು. ಶೌಚಕಾರ್ಯದಲ್ಲಿ ನಿರತರಾಗಿ ಅವರು ನಗರದ ಹೊರಗಡೆಯೇ ಉಳಿದುಕೊಂಡರು. ಅನಂತರ ನೃಪನು ವಿಧಿವಿಧಾನಗಳನ್ನು ತಿಳಿದಿದ್ದ ಆಪ್ತರನ್ನು ಕುರುಶ್ರೇಷ್ಠ ಧೃತರಾಷ್ಟ್ರನು ಸುಟ್ಟುಹೋಗಿದ್ದ ಗಂಗಾದ್ವಾರದ ಸ್ಥಳಕ್ಕೆ ಕಳುಹಿಸಿಕೊಟ್ಟನು. ಅಲ್ಲಿಯೇ ಗಂಗಾದ್ವಾರದಲ್ಲಿ ಅವರ ಅಪರಕ್ರಿಯೆಗಳನ್ನು ಮಾಡಲು ಶಾಸನವನ್ನಿತ್ತನು. ಮಹೀಪತಿಯು ಆ ಪುರುಷರಿಗೆ ದಾನನೀಡಲು ಪದಾರ್ಥಗಳನ್ನಿತ್ತನು. ಹನ್ನೆರಡನೆಯ ದಿನ ಅವರ ಶೌಚಕರ್ಮಗಳನ್ನೂ ಶ್ರಾದ್ಧಗಳನ್ನೂ ಮುಗಿಸಿ ಪಾಂಡವ ನರಾಧಿಪನು ವಿಧಿವತ್ತಾಗಿ ದಕ್ಷಿಣೆಗಳನ್ನಿತ್ತನು. ತೇಜಸ್ವೀ ರಾಜಾ ಪೃಥಿವೀಪತಿಯು ಧೃತರಾಷ್ಟ್ರ, ಗಾಂಧಾರೀ ಮತ್ತು ಪೃಥೆಯರನ್ನು ಪ್ರತ್ಯೇಕ-ಪ್ರತ್ಯೇಕವಾಗಿ ಉದ್ದೇಶಿಸಿ ಅವರವರ ಹೆಸರುಗಳನ್ನು ಹೇಳಿಕೊಳ್ಳುತ್ತಾ ಚಿನ್ನ, ಬೆಳ್ಳಿ, ಹಾಸಿಗೆಗಳು ಮತ್ತು ಅನುತ್ತಮ ಮಹಾಧನವನ್ನು ದಾನವನ್ನಾಗಿತ್ತನು. ಯಾವ ದ್ವಿಜನು ಏನನ್ನು ಬಯಸಿದನೋ ಅವನ್ನು - ಶಯನ, ಭೋಜನ,

ವಾಹನ, ಮಣಿ-ರತ್ನ-ಧನ, ಹೊದಿಕೆಗಳು, ಭೋಗಗಳು, ದಾಸೀ-ಪರಿಚಾರಕರು - ಇವನ್ನು ರಾಜ ಮಹೀಪತಿಯು ತನ್ನ ಇಬ್ಬರು ತಾಯಿಯರ ಸಲುವಾಗಿ ದಾನಮಾಡಿದನು. ಧೀಮಾನ್ ಪೃಥಿವೀಪಾಲನು ಅನೇಕ ಶ್ರಾದ್ಧ-ದಾನಗಳನ್ನು ಮಾಡಿ ಪುನಃ ಹಸ್ತಿನಾಪುರ ನಗರವನ್ನು ಪ್ರವೇಶಿಸಿದನು.

ರಾಜನ ವಚನದಂತೆ ಹೋಗಿದ್ದ ಪುರುಷರು ಧೃತರಾಷ್ಟ್ರ-ಗಾಂಧಾರೀ-ಕುಂತಿಯರ ಅಸ್ಥಿಗಳನ್ನು ಸಂಗ್ರಹಿಸಿಕೊಂಡು ಪುನಃ ಅಲ್ಲಿಗೆ ಆಗಮಿಸಿದರು. ವಿವಿಧ ಮಾಲೆ-ಗಂಧಗಳಿಂದ ಯಥಾವಿಧಿಯಾಗಿ ಪೂಜಿಸಿ ಅವರು ಆ ಅಸ್ಥಿಗಳನ್ನು ಗಂಗೆಯಲ್ಲಿ ವಿಸರ್ಜಿಸಿ ಮಹೀಪತಿಗೆ ವರದಿಮಾಡಿದರು. ಧರ್ಮಾತ್ಮ ರಾಜಾ ಯುಧಿಷ್ಠಿರನನ್ನು ಸಮಾಧಾನಗೊಳಿಸಿ ಪರಮ ಋಷಿ ನಾರದನು ಇಷ್ಟಬಂದ ಕಡೆ ಹೊರಟುಹೋದನು.

ಈ ರೀತಿ ಸಂಗ್ರಾಮದಲ್ಲಿ ಪುತ್ರರನ್ನು ಕಳೆದುಕೊಂಡಿದ್ದ ಧೀಮಂತ ಧೃತರಾಷ್ಟ್ರನು ಸದಾ ಮಕ್ಕಳ, ಸಂಬಂಧಿಗಳ, ಮಿತ್ರರ, ಸಹೋದರರ ಮತ್ತು ಸ್ವಜನರ ಸಲುವಾಗಿ ದಾನಗಳನ್ನು ನೀಡುತ್ತಾ ಹಸ್ತಿನಾಪುರದಲ್ಲಿ ಹದಿನೈದು ವರ್ಷಗಳನ್ನೂ ವನವಾಸದಲ್ಲಿ ಮೂರು ವರ್ಷಗಳನ್ನು ಕಳೆದಿದ್ದನು. ನೃಪತಿ ಯುಧಿಷ್ಠಿರನಾದರೋ ಜ್ಞಾತಿ-ಬಾಂಧವರನ್ನು

ಕಳಿದುಕೊಂಡು ಅಷ್ಟೊಂದು ಸಂತೋಷದಿಂದಿರದಿದ್ದರೂ ರಾಜ್ಯಾಡಳಿತವನ್ನು ಮಾಡುತ್ತಿದ್ದನು.

# ಮೌಸಲ ಪರ್ವ




## ಯಾದವರ ವಿನಾಶ; ಕೃಷ್ಣಾವತಾರ ಸಮಾಪ್ತಿ

### ಯುಧಿಷ್ಠಿರನಿಗೆ ಉತ್ಪಾತದರ್ಶನ

ಮಹಾಭಾರತ ಯುದ್ಧವು ಮುಗಿದು ಮೂವತ್ತಾರನೆಯ ವರ್ಷವು ಬರಲು ಕೌರವನಂದನ ಯುಧಿಷ್ಠಿರನು ವಿಪರೀತ ನಿಮಿತ್ತಗಳನ್ನು ಕಂಡನು. ಕಲ್ಲು ಮರಳುಗಳೊಂದಿಗೆ ಬಿರುಸಾದ ಒಣ ಗಾಳಿಯು ಎಲ್ಲ ಕಡೆಗಳಿಂದ ಬೀಸತೊಡಗಿತು. ಪಕ್ಷಿಗಳು ಅಪ್ರದಕ್ಷಿಣೆಯಾಗಿ ಸುತ್ತತೊಡಗಿದವು. ಮಹಾನದಿಗಳು ವಿರುದ್ಧ ದಿಕ್ಕಿನಲ್ಲಿ ಹರಿಯತೊಡಗಿದವು. ದಿಕ್ಕುಗಳಲ್ಲಿ ಸದಾ ಮುಸುಕು ಕವಿದಿತ್ತು. ಬೆಂಕಿಯ ಉಂಡೆಗಳನ್ನು ಸುರಿಸುತ್ತಾ ಉಲ್ಕೆಗಳು ಗಗನದಿಂದ ಭೂಮಿಯ ಮೇಲೆ ಬಿದ್ದವು. ಸೂರ್ಯಮಂಡಲವು ಯಾವಾಗಲೂ ಧೂಳಿನಿಂದ ಮುಸುಕಿದಂತೆ ತೋರುತ್ತಿತ್ತು. ನಿತ್ಯವೂ ಉದಯಕಾಲದಲ್ಲಿ ಸೂರ್ಯನು ಮಂದರಶ್ಮಿಯಾಗಿಯೂ, ತಲೆಗಳಿಲ್ಲದ ಶರೀರಗಳಿಂದ ಮುಚ್ಚಲ್ಪಟ್ಟಂತೆಯೂ ಕಾಣುತ್ತಿದ್ದನು. ಚಂದ್ರ-ಸೂರ್ಯರ ಸುತ್ತಲೂ ದಾರುಣವಾದ ಮೂರು ಬಣ್ಣದ ಮಂಡಲಗಳು ತೋರುತ್ತಿದ್ದವು – ಹೊರ ಆವರಣವು ಕಪ್ಪುಬಣ್ಣದ ಒರಟು ಮಂಡಲ, ಮತ್ತು ಒಳಗಿನ ಮಂಡಲಗಳು ಭಸ್ಮ ಮತ್ತು ಕೆಂಪುಬಣ್ಣದ್ದಾಗಿದ್ದವು. ಇವುಗಳು ಮತ್ತು ಇನ್ನೂ ಅನೇಕ ಭಯಸೂಚಕ, ಹೃದಯದಲ್ಲಿ ಉದ್ವೇಗವನ್ನುಂಟುಮಾಡುವ ಉತ್ಪಾತಗಳು ದಿನ ದಿನವೂ ಕಾಣುತ್ತಿದ್ದವು.

ಅದೇ ಸಮಯದಲ್ಲಿ ಕುರುರಾಜ ಯುಧಿಷ್ಠಿರನು ವೃಷ್ಣಿಚಕ್ರವು ಮುಸಲಗಳಿಂದ ಕದನವಾಡಿದುದನ್ನು ಕೇಳಿದನು. ವಾಸುದೇವ ಮತ್ತು ರಾಮರೂ ಮುಕ್ತರಾದುದನ್ನು ಕೇಳಿ ಪಾಂಡವನು ತನ್ನ ಸಹೋದರರನ್ನು ಕರೆಯಿಸಿ

"ಈಗ ನಾವು ಏನು ಮಾಡಬೇಕು?"

ಎಂದು ಕೇಳಿದನು. ಬ್ರಹ್ಮದಂಡದ ಬಲದಿಂದ ಉತ್ಕರ್ಷಿತರಾಗಿ ವೃಷ್ಣಿಗಳು ಪರಸ್ಪರರನ್ನು ಆಕ್ರಮಣಿಸಿ ವಿನಷ್ಟರಾದರು ಎಂದು ಕೇಳಿ ಪಾಂಡವರು ವ್ಯಥಿತರಾದರು. ಶಾಂಙ್ಗೃಧನ್ವಿ ವಾಸುದೇವನು ನಿಧನನಾಗಿ ವಿನಾಶಹೊಂದಿದನು ಎಂಬ ಸಮಾಚಾರವನ್ನು, ಸಮುದ್ರವೇ ಒಣಗಿಹೋಯಿತೆನ್ನುವುದನ್ನು ಹೇಗೋ ಹಾಗೆ ಆ ವೀರರು ನಂಬಲೇ ಇಲ್ಲ. ಆ ಮೌಸಲ ಯುದ್ಧದ ಕುರಿತು ಕೇಳಿ ವಿಷಣ್ಣರಾಗಿ, ಸಂಕಲ್ಪಗಳನ್ನೇ ಕಳೆದುಕೊಂಡು ಪಾಂಡವರು ಅಲ್ಲಿ ಕುಳಿತುಕೊಂಡರು.

## ಮುನಿಶಾಪದಿಂದ ಮುಸಲ ಪ್ರಸವ

ಯುದ್ಧವು ಕಳೆದ ಮೂವತ್ತಾರನೆಯ ವರ್ಷದಲ್ಲಿ ವೃಷ್ಣಿಗಳಿಗೆ ಮಹಾ ಕಂಟಕವುಂಟಾಯಿತು. ದ್ವಾರಕೆಗೆ ಬಂದಿದ್ದ ವಿಶ್ವಾಮಿತ್ರ, ಕಣ್ವ, ಮತ್ತು ತಪೋಧನ ನಾರದರನ್ನು ಸಾರಣ ಪ್ರಮುಖ ವೀರರು ಕಂಡರು.



ದೈವದಂಡದಿಂದ ಪೀಡಿತರಾದ ಅವರು ಸಾಂಬನಿಗೆ ಸ್ತ್ರೀಯ ವೇಷಧರಿಸಿ ಆಗಮಿಸಿರುವವರ ಎದಿರು ಕರೆದುಕೊಂಡು ಹೋಗಿ ಹೇಳಿದರು:

> “ಇವಳು ಪುತ್ರನನ್ನು ಬಯಸುವ ಅಮಿತತೇಜಸ್ವಿ ಬಭ್ರುವಿನ ಪತ್ನಿ. ಋಷಿಗಳೇ! ಇವಳು ಏನನ್ನು ಹುಟ್ಟಿಸುತ್ತಾಳೆ ಎನ್ನುವುದು ನಿಮಗೆ ತಿಳಿದಿದ್ದರೆ ಸತ್ಯವನ್ನು ಹೇಳಿ!”

ಅವರು ಹೀಗೆ ಹೇಳಲು ಆ ವಂಚನೆಯಿಂದ ಋಷಿಗಳು ಕುಪಿತರಾದರು. ಅವರು ಈ ಉತ್ತರವಿತ್ತರು:

> “ವೃಷ್ಣಿ-ಅಂಧಕರ ವಿನಾಶಕ್ಕಾಗಿ ವಾಸುದೇವನ ಮಗ ಈ ಸಾಂಬನು ಲೋಹದ ಘೋರ ಮುಸಲಕ್ಕೆ ಜನ್ಮನೀಡುತ್ತಾನೆ! ಬಲರಾಮ-ಕೃಷ್ಣರನ್ನು ಬಿಟ್ಟು ನೀವು ಇದನ್ನೇ ಬಳಸಿ ಕೆಟ್ಟ ನಡತೆಯ, ದುಷ್ಟ, ಕೋಪಿಷ್ಟ ವೃಷ್ಣಿಕುಲವೆಲ್ಲವನ್ನೂ ಸಂಪೂರ್ಣವಾಗಿ ನಾಶಗೊಳಿಸುತ್ತೀರಿ! ಶ್ರೀಮಾನ್ ಹಲಾಯುಧನು ದೇಹವನ್ನು ತ್ಯಜಿಸಿ ಸಮುದ್ರವನ್ನು ಸೇರುವನು. ಜರಾ ಎನ್ನುವವನು ನೆಲದ ಮೇಲೆ ಮಲಗಿದ್ದ ಮಹಾತ್ಮ ಕೃಷ್ಣನನ್ನು ಹೊಡೆದುರುಳಿಸುತ್ತಾನೆ!”

ಆ ದುರಾತ್ಮರಿಂದ ವಂಚಿತರಾದ ಆ ಮುನಿಗಳು ಹೀಗೆ ಹೇಳಿ ಕ್ರೋಧದಿಂದ ಕೆಂಪಾಗಿದ್ದ ಕಣ್ಣುಗಳಿಂದ ಪರಸ್ಪರರನ್ನು ನೋಡಿದರು. ಹಾಗೆ ಹೇಳಿ ಮುನಿಗಳು ಕೇಶವನಿದ್ದಲ್ಲಿಗೆ ಹೋದರು. ಅವರಿಂದ ಕೇಳಿದುದನ್ನು ಮಧುಸೂದನನು ವೃಷ್ಣಿಗಳಿಗೆ ಹೇಳಿದನು. ಅಂತ್ಯವು ಬಂದಿದೆಯೆಂದು ತಿಳಿದಿದ್ದ ಆ ಮತಿವಂತನು

“ಇದು ಹಾಗೆಯೇ ಆಗುತ್ತದೆ!”

ಎಂದನು. ಹೀಗೆ ಹೇಳಿ ಜಗತ್ಪ್ರಭು ಹೃಷೀಕೇಶನು ನಡೆಯುವಂಥಹುದನ್ನು ಬದಲಾಯಿಸಲು ಬಯಸದೇ ಪುನಃ ತನ್ನ ಸದನವನ್ನು ಪ್ರವೇಶಿಸಿದನು.

ಮಾರನೆಯ ದಿನ ಸಾಂಬನು ವೃಷ್ಣಿ-ಅಂಧಕರ ವಿನಾಶಕ್ಕೆ ಕಾರಣವಾಗುವ ರಾಕ್ಷಸ ಕಿಂಕರನಂತೆ ದೊಡ್ಡದಾಗಿದ್ದ ಮುಸಲವನ್ನು ಹೆತ್ತನು. ಶಾಪದಿಂದಾಗಿ ಆ ಘೋರ ಮುಸಲವು ಹುಟ್ಟಿದುದನ್ನು ತಿಳಿದ ರಾಜ ಆಹುಕನು ದುಃಖಿತನಾದನು. ಅದನ್ನು ಸೂಕ್ಷ್ಮ ಚೂರ್ಣವನ್ನಾಗಿ ತಳೆಯಿಸಿ ಸಮುದ್ರದಲ್ಲಿ ಹಾಕಿಸಿದನು. ಅನಂತರ ಆಹುಕನ ವಚನದಂತೆ ಈ ಕಠೋರ ರಾಜಶಾಸನವನ್ನು ನಗರದಲ್ಲೆಲ್ಲಾ ಘೋಷಿಸಲಾಯಿತು:

“ಇಂದಿನಿಂದ ಸರ್ವ ನಗರವಾಸಿಗಳಿಗೂ ವೃಷ್ಣಿ-ಅಂಧಕರ ಎಲ್ಲ ಮನೆಗಳಲ್ಲಿಯೂ ಸುರಾಪಾನವನ್ನು ನಿಷೇಧಿಸಲಾಗಿದೆ! ಯಾರಾದರೂ ಇಂತಹ ಮಾದಕ ಪಾನೀಯವನ್ನು ತಯಾರಿಸಿದ್ದುದು ತಿಳಿದುಬಂದರೆ ಅವನನ್ನು ಅವನ ಬಾಂಧವರೊಂದಿಗೆ ಶೂಲಕ್ಕೇರಿಸಲಾಗುವುದು!”

ಅನಂತರ ಆ ಮಹಾತ್ಮ ರಾಜನ ಶಾಸನವನ್ನು ತಿಳಿದ ನರರೆಲ್ಲರೂ ರಾಜನ ಭಯದಿಂದ ಅದೇ ನಿಯಮದಂತೆ ನಡೆದುಕೊಂಡರು.

## ಯಾದವರಲ್ಲಿ ಉತ್ಪಾತದರ್ಶನ

ಹೀಗೆ ವೃಷ್ಣಿ-ಅಂಧಕರು ಒಂದಾಗಿ ಪ್ರಯತ್ನಿಸುತ್ತಿದ್ದರೂ ಕಾಲಪುರುಷನು ನಿತ್ಯವೂ ಅವರೆಲ್ಲರ ಮನೆಗಳಿಗೆ ತಿರುಗುತ್ತಿದ್ದನು. ಕಪ್ಪಾಗಿದ್ದ, ವಿಕಟ, ಬೋಳುಮಂಡೆಯ, ಕಪ್ಪು-ಕಿತ್ತಳೆ ಬಣ್ಣಗಳ ಪುರುಷನು ವೃಷ್ಣಿಗಳ ಮನೆಗಳನ್ನು ಹೊಕ್ಕಿ ನೋಡಿ, ಪುನಃ ಎಲ್ಲಿಯೋ ಅದೃಶ್ಯನಾಗುತ್ತಿದ್ದನು. ಪ್ರತಿದಿನವೂ ವೃಷ್ಣಿ-ಅಂಧಕರ ವಿನಾಶವನ್ನು ಸೂಚಿಸುವ ರೋಮಾಂಚಕ ದಾರುಣ ಭಿರುಗಾಳಿಯು ಬೀಸುತ್ತಿತ್ತು. ಬೀದಿಗಳು ದೊಡ್ಡ ದೊಡ್ಡ ಇಲಿಗಳಿಂದ ತುಂಬಿಹೋಗಿದ್ದವು. ವೃಷ್ಣಿಗಳ ಮನೆಗಳಲ್ಲಿ ಮಡಿಕೆಗಳು ತಾವಾಗಿಯೇ

ಒಡೆಯತೊಡಗಿದವು. ಸಾರಂಗ ಪಕ್ಷಿಗಳ ಚೀಚೀ ಕೂಗುಗಳು ಹಗಲಾಗಲೀ ರಾತ್ರಿಯಾಗಲೀ ಕೊನೆಯಿಲ್ಲದೇ ಕೇಳಿಬರುತ್ತಿದ್ದವು. ಸಾರಸ ಪಕ್ಷಿಗಳು ಗೂಬೆಗಳಂತೆ ಕೂಗುತ್ತಿದ್ದವು ಮತ್ತು ಆಡುಗಳು ನರಿಗಳಂತೆ ಕೂಗತೊಡಗಿದವು. ಕಾಲಚೋದಿತ ಕೆಂಪು ಕಾಲುಗಳಿದ್ದ ಬಿಳಿಯ ಪಕ್ಷಿಗಳು ಕಂಡುಬಂದವು ಮತ್ತು ವೃಷ್ಣಿ-ಅಂಧಕರ ಮನೆಗಳ ಮೇಲೆ ಪಾರಿವಾಳಗಳು ಹಾರಾಡುತ್ತಿದ್ದವು. ಗೋವುಗಳು ಕತ್ತೆಗಳಿಗೂ, ಕುದುರೆಗಳು ಆನೆಗಳಿಗೂ, ನಾಯಿಗಳು ಬೆಕ್ಕುಗಳಿಗೂ, ಮತ್ತು ಮುಂಗುಸಿಗಳು ಇಲಿಗಳಿಗೂ ಜನ್ಮವಿತ್ತವು. ವೃಷ್ಣಿಗಳು ಪಾಪಕರ್ಮಗಳನ್ನು ಮಾಡಲು ನಾಚುತ್ತಿರಲಿಲ್ಲ. ಬ್ರಾಹ್ಮಣರನ್ನೂ, ಪಿತೃಗಳನ್ನೂ, ದೇವತೆಗಳನ್ನೂ ದ್ವೇಷಿಸತೊಡಗಿದರು. ಬಲರಾಮ-ಕೃಷ್ಣರನ್ನು ಬಿಟ್ಟು ಉಳಿದ ಹಿರಿಯರನ್ನು ಅವಹೇಳನ ಮಾಡತೊಡಗಿದರು. ಪತ್ನಿಯರು ತಮ್ಮ ಪತಿಗಳಿಗೂ, ಪತಿಗಳು ತಮ್ಮ ಪತ್ನಿಯರಿಗೂ ಮೋಸಮಾಡತೊಡಗಿದರು. ಅಗ್ನಿಯು ಎಡಗಡೆಯೇ ವಾಲಿಕೊಂಡು ಪ್ರಜ್ವಲಿಸುತ್ತಿದ್ದನು ಮತ್ತು ನೀಲಿ-ಕೆಂಪು-ಬಿಳಿಯ ಕಿಡಿಗಳನ್ನು ಮತ್ತೆ ಮತ್ತೆ ಕಾರುತ್ತಿದ್ದನು. ನಿತ್ಯವೂ ಉದಯ-ಅಸ್ತಮಾನಗಳ ಸಮಯದಲ್ಲಿ ನಗರದ ಮೇಲೆ ಸೂರ್ಯನ ಸುತ್ತಲೂ ಶಿರಗಳಿಲ್ಲದ ಕಬಂಧಗಳ ಆಕಾರಗಳು ಕಾಣುತ್ತಿದ್ದವು. ಅತೀವ

ಸುಸಂಸ್ಕೃತವಾಗಿ ತಯಾರಿಸಿದ ಆಹಾರಗಳನ್ನು ತಿನ್ನಬೇಕು ಎನ್ನುವಾಗ ಅದರಲ್ಲಿ ಕ್ರಿಮಿಗಳು ಕಂಡುಬರುತ್ತಿದ್ದವು! ಪುಣ್ಯಾಹ ವಾಚನ ಮಾಡುವಾಗ ಮತ್ತು ಮಹಾತ್ಮರು ಜಪಿಸುವಾಗ ಯಾರೋ ಓಡಿಹೋಗುತ್ತಿರುವುದು ಕೇಳಿಬರುತ್ತಿತ್ತು, ಆದರೆ ಯಾರೂ ಓಡಿಹೋಗುತ್ತಿರುವವರು ಕಾಣುತ್ತಿರಲಿಲ್ಲ. ನಕ್ಷತ್ರಗಳು ಮತ್ತು ಗ್ರಹಗಳು ಪುನಃ ಪುನಃ ಪರಸ್ಪರರೊಡನೆ ಸಂಘರ್ಷಿಸುವುದನ್ನು ಎಲ್ಲರೂ ನೋಡುತ್ತಿದ್ದರು. ಆದರೆ ತಮ್ಮದೇ ಜನ್ಮಕುಂಡಲಿಗಳು ಯಾರಿಗೂ ಕಾಣುತ್ತಿರಲಿಲ್ಲ. ಪಾಂಚಜನ್ಯವನ್ನು ಊದಿದಾಗ ವೃಷ್ಣಿ ಮತ್ತು ಅಂಧಕರ ಮನೆಗಳಲ್ಲಿ ಅದರ ಧ್ವನಿಯು ಕತ್ತೆಗಳ ಕಿರುಚಾಟದಂತೆ ಪ್ರತಿಧ್ವನಿಸಿ ಕೇಳುತ್ತಿತ್ತು.

ಇದನ್ನು ನೋಡಿ ಹೃಷೀಕೇಶನು ಕಾಲಪಲ್ಲಟವು ಬಂದೊದಗಿದೆಯೆಂದು ತಿಳಿದನು. ತ್ರಯೋದಶಿಯಂದೇ ಅಮವಾಸ್ಯೆಯು ಬಂದಿರುವುದನ್ನು ನೋಡಿ ಅವನು ಹೀಗೆ ಅಂದುಕೊಂಡನು:

> "ಪುನಃ ರಾಹುವು ಚತುರ್ದಶಿಯನ್ನು ಅಮವಾಸ್ಯೆಯನ್ನಾಗಿ ಮಾಡಿದ್ದಾನೆ. ಅಂದು ಈ ರೀತಿಯಾದಾಗ ಭಾರತ ಯುದ್ಧವು ನಡೆಯಿತು. ಇಂದು ನಮ್ಮೆಲ್ಲರ ವಿನಾಶವಾಗಲು ಈ ರೀತಿಯಾಗುತ್ತಿದೆ."

ಇದನ್ನು ವಿಮರ್ಶಿಸಿ ಮತ್ತು ಕಾಲದ ಕುರಿತು ಚಿಂತಿಸಿ ಜನಾರ್ದನ ಕೇಶಿಸೂದನನು ಯುದ್ಧಮುಗಿದು ಮೂವತ್ತಾರನೆಯ ವರ್ಷವು ಕಾಲಿಡುತ್ತಿದೆ ಮತ್ತು ಬಾಂಧವರನ್ನು ಕಳೆದುಕೊಂಡು ಪುತ್ರ ಶೋಕದಿಂದ ಸಂತಪ್ತಳಾಗಿದ್ದ ಗಾಂಧಾರಿಯು ಯಾವ ಶಾಪವನ್ನು ಶಪಿಸಿದ್ದಳೋ ಅದು ಈಗ ನಿಜವಾಗುತ್ತದೆ ಎಂದು ಅಭಿಪ್ರಾಯಪಟ್ಟನು.

> "ಹಿಂದೆ ಸೇನೆಯಗಳ ವ್ಯೂಹವನ್ನು ರಚಿಸುತ್ತಿದ್ದಾಗ ಯುಧಿಷ್ಠಿರನು ಕಂಡ ದಾರುಣ ಉತ್ಪಾತಗಳು ಈಗ ಪುನಃ ತೋರಿಸಿಕೊಳ್ಳುತ್ತಿವೆ!"

ಹೀಗೆ ಹೇಳಿ ಅರಿಂದಮ ವಾಸುದೇವನು ಅದನ್ನು ಸತ್ಯವಾಗಿಸಲು ಬಯಸಿ ತೀರ್ಥಯಾತ್ರೆಗೆ ಆಜ್ಞಾಪಿಸಿದನು.

ಕೇಶವನ ಶಾಸನದಂತೆ ಪುರುಷರು

> "ಪುರುಷರ್ಷಭರೇ! ಸಮುದ್ರತೀರಕ್ಕೆ ತೀರ್ಥಯಾತ್ರೆಗೆ ನಡೆಯಿರಿ!"

ಎಂದು ಘೋಷಿಸಿದರು.

## ವೃಷ್ಣಿ-ಅಂಧಕರ ವಿನಾಶ

ದ್ವಾರಕೆಯಲ್ಲಿ ಓಡಾಡಿಕೊಂಡಿದ್ದ ಕಪ್ಪು ಬಣ್ಣದ ಬಿಳಿಯ ಹಲ್ಲುಗಳ ಸ್ತ್ರೀಯೊಬ್ಬಳು ರಾತ್ರಿವೇಳೆಯಲ್ಲಿ ನಗುತ್ತಾ ಸ್ತ್ರೀಯರ ಸ್ವಪ್ನದಲ್ಲಿ ಅವರ ವಸ್ತುಗಳನ್ನು ಕದಿಯುತ್ತಿದ್ದಳು. ಭಯಾನಕ ರಾಕ್ಷಸರು ಅಲಂಕಾರಗಳನ್ನೂ, ಚತ್ರ-ಧ್ವಜ-ಕವಚಗಳನ್ನೂ ಅಪಹರಿಸಿಕೊಂಡು ಹೋಗುವುದು ಕಾಣುತ್ತಿತ್ತು. ಕೃಷ್ಣನಿಗೆ ಅಗ್ನಿಯು ಕೊಟ್ಟಿದ್ದ ಲೋಹದ ವಜ್ರನಾಭ ಚಕ್ರವು ವೃಷ್ಣಿಗಳು ನೋಡುತ್ತಿದ್ದಂತೆಯೇ ಆಕಾಶಕ್ಕೆ ಹಾರಿಹೋಯಿತು. ದಾರುಕನು ನೋಡುತ್ತಿದ್ದಂತೆಯೇ ಸಿದ್ಧಗೊಳಿಸಿದ್ದ ಆದಿತ್ಯ ವರ್ಣದ ದಿವ್ಯ ರಥವನ್ನು ಕುದುರೆಗಳು ಅಪಹರಿಸಿಕೊಂಡು ಹೋದವು. ಮನೋವೇಗದಲ್ಲಿ ಹೋಗಬಲ್ಲ ಆ ನಾಲ್ಕು ಮುಖ್ಯ ಕುದುರೆಗಳು ಸಾಗರದ ಮೇಲೆಯೇ ಓಡಿ ಹೊರಟು ಹೋದವು. ಬಲರಾಮ ಮತ್ತು ಜನಾರ್ದನರು ಪೂಜಿಸುತ್ತಿದ್ದ ಆ ಎರಡು ಮಹಾಧ್ವಜಗಳನ್ನು – ತಾಲ ಮತ್ತು ಗರುಡ ಧ್ವಜಗಳನ್ನು –

"ನೀವೂ ತೀರ್ಥಯಾತ್ರೆಗೆ ಹೋಗಬೇಕು"

ಎಂದು ಹಗಲೂ ರಾತ್ರಿಯೂ ಜೋರಾಗಿ ಕೂಗಿಕೊಳ್ಳುತ್ತಿದ್ದ ಅಪ್ಸರೆಯರು ಅಪಹರಿಸಿಕೊಂಡು ಹೋದರು.

ಆಗ ವೃಷ್ಣಿ-ಅಂಧಕ ಮಹಾರಥ ನರರ್ಷಭರು ಮತ್ತು ಅವರ ಸ್ತ್ರೀಯರು ತೀರ್ಥಯಾತ್ರೆಗೆ ಹೋಗಲು ನಿಶ್ಚಯಿಸಿದರು. ಅನಂತರ ಅಂಧಕ-ವೃಷ್ಣಿಗಳು ಅನೇಕ ವಿಧದ ಭೋಜನಗಳನ್ನೂ, ಭಕ್ಷ್ಯಗಳನ್ನೂ, ಪಾನೀಯಗಳನ್ನೂ ಮತ್ತು ಅನೇಕ ಮಾಂಸ ಪದಾರ್ಥಗಳನ್ನೂ ತಯಾರಿಸಿದರು. ಅತಿಯಾಗಿ ಕುಡಿಯಬಲ್ಲ ಆ ತಿಗ್ಮತೇಜಸ್ವಿಗಳು ಶ್ರೀಮಂತಿಕೆಯಿಂದ ರಥ-ಕುದುರೆ-ಆನೆಗಳ ಮೇಲೆ ಕುಳಿತು ನಗರದಿಂದ ಹೊರ ಹೊರಟರು. ಪ್ರಭಾಸ ಕ್ಷೇತ್ರಕ್ಕೆ ಬಂದು ಅಲ್ಲಿ ತಮಗಾಗಿಯೇ ನಿರ್ಮಿಸಿಕೊಂಡಿದ್ದ ಮನೆಗಳಲ್ಲಿ ಯಾದವರು ತಮ್ಮ ಭಕ್ಷ್ಯ-ಪಾನೀಯಗಳು ಮತ್ತು ಪತ್ನಿಯರೊಂದಿಗೆ ಬೀಡುಬಿಟ್ಟರು. ಅವರು ಸಮುದ್ರತೀರದಲ್ಲಿ ಬೀಡು ಬಿಟ್ಟಿದ್ದಾರೆಂದು ಕೇಳಿದ ಯೋಗವಿದು ಅರ್ಥವಿಶಾರದ ಉದ್ಧವನು ಅವರನ್ನು ಬೀಳ್ಕೊಡಲು ಅಲ್ಲಿಗೆ ಹೋದನು. ಅಲ್ಲಿಂದ ಕೈಮುಗಿದುಕೊಂಡು ಹೊರಟ ಆ ಮಹಾತ್ಮನನ್ನು ಅಭಿವಂದಿಸಿದ ಹರಿಯು ವೃಷ್ಣಿಗಳ ವಿನಾಶವಾಗುತ್ತದೆಯೆಂದು ತಿಳಿದಿದ್ದರೂ ಅದನ್ನು ತಡೆಯಲಿಲ್ಲ. ಕಾಲವು ಮುಗಿದುಹೋದ ವೃಷ್ಣಿ-ಅಂಧಕ ಮಹಾರಥರು ಭೂಮ್ಯಾಕಾಶಗಳನ್ನು ತನ್ನ ತೇಜಸ್ಸಿನಿಂದ ತುಂಬಿಕೊಳ್ಳುತ್ತಾ ಹೋಗುತ್ತಿದ್ದ ಉದ್ಧವನನ್ನು ನೋಡಿದರು. ಆ ಮಹಾತ್ಮರು ಬ್ರಾಹ್ಮಣರಿಗಾಗಿ ಸಿದ್ಧಪಡಿಸಿದ್ದ ಆಹಾರವನ್ನು

ಸುರೆಯೊಂದಿಗೆ ಕಲಸಿ ಅಲ್ಲಿದ್ದ ಮಂಗಗಳಿಗೆ ತಿನ್ನಿಸಿದರು. ಆಗ ಪ್ರಭಾಸದಲ್ಲಿ ಆ ಮಹಾತೇಜಸ್ವಿಗಳ ಅತಿದೊಡ್ಡ ಸುರಾಪಾನ ಕೂಟವು ಪ್ರಾರಂಭವಾಯಿತು. ನೂರಾರು ತೂರ್ಯಗಳು ಮೊಳಗಿದವು, ನಾಟಕ-ನರ್ತನಗಳು ನಡೆಯುತ್ತಿದ್ದವು. ಕೃಷ್ಣನ ಸನ್ನಿಧಿಯಲ್ಲಿ ಬಲರಾಮನು ಕುಡಿಯ ತೊಡಗಿದನು, ಮತ್ತು ಅವನೊಡನೆ ಕೃತವರ್ಮ, ಯುಯುಧಾನ ಸಾತ್ಯಕಿ, ಗದ, ಬಭ್ರುಗಳೂ ಕುಡಿಯ ತೊಡಗಿದರು.

ಆಗ ಆ ಪರಿಷತ್ತಿನಲ್ಲಿ ಅಮಲೇರಿದ್ದ ಯುಯುಧಾನನು ಕೃತವರ್ಮನನ್ನು ಹೀಯಾಳಿಸಿ ನಗುತ್ತಾ ಹೀಗೆ ಹೇಳಿದನು:

> “ಮೃತರಂತೆ ಮಲಗಿದ್ದವರನ್ನು ಸಂಹರಿಸಿದ ಯಾರು ತಾನೇ ತನ್ನನ್ನು ಕ್ಷತ್ರಿಯನೆಂದು ಕರೆದುಕೊಳ್ಳುತ್ತಾನೆ? ಹಾರ್ದಿಕ್ಯ! ನಿನ್ನ ಆ ಕೃತ್ಯವನ್ನು ಯಾದವರು ಎಂದೂ ಕ್ಷಮಿಸುವುದಿಲ್ಲ!”

ಯುಯುಧಾನನು ಹೀಗೆ ಹೇಳಲು ರಥಿಗಳಲ್ಲಿ ಶ್ರೇಷ್ಠ ಪ್ರದ್ಯುಮ್ನನು ಅವನ ಮಾತನ್ನು ಗೌರವಿಸಿದನು ಮತ್ತು ಹಾರ್ದಿಕ್ಯನನ್ನು ಅಪಮಾನಿಸಿದನು. ಆಗ ಪರಮ ಸಂಕ್ರುದ್ಧನಾದ ಕೃತವರ್ಮನು ತನ್ನ ಎಡಗೈಯನ್ನು ಚಾಚಿ ತೋರಿಸಿ ಹೀಯಾಳಿಸುತ್ತಾ ಹೇಳಿದನು:

> “ವೀರನಾದವನು ಹೇಗೆ ತಾನೇ ಯುದ್ಧದಲ್ಲಿ ಬಾಹುಗಳು

ಕತ್ತರಿಸಲ್ಪಟ್ಟು ಪ್ರಾಯೋಪವೇಶಮಾಡಿದ್ದ ಭೂರಿಶ್ರವನನ್ನು ಹಿಂಸಾತ್ಮಕವಾಗಿ ಕೊಂದು ಕೆಳಗುರುಳಿಸಿದನು?”

ಅವನ ಈ ಮಾತನ್ನು ಕೇಳಿ ಪರವೀರಹ ಕೇಶವನು ತೀವ್ರ ರೋಷದಿಂದ ಕೋಪದೃಷ್ಟಿಯಲ್ಲಿ ಅವನನ್ನು ನೋಡಿದನು. ಆಗ ಸಾತ್ಯಕಿಯು ಮಧುಸೂದನನಿಗೆ ಸತ್ರಾಜಿತನ ಸ್ಯಮಂತಕ ಮಣಿಯ ಪ್ರಕರಣದಲ್ಲಿ ಕೃತವರ್ಮನು ನಡೆದುಕೊಂಡ ರೀತಿಯ ಕುರಿತು ನಡೆದುದನ್ನು ನೆನಪಿಸಿಕೊಟ್ಟನು.

ಅದನ್ನು ಕೇಳಿ ಕುಪಿತಳಾದ ಸತ್ಯಭಾಮೆಯು ರೋದಿಸುತ್ತ ಬಂದು ಕೇಶವನ ತೊಡೆಯ ಮೇಲೆ ಕುಳಿತುಕೊಂಡು ಕೃತವರ್ಮನ ಮೇಲೆ ಜನಾರ್ದನನ ಕೋಪವನ್ನು ಇನ್ನೂ ಹೆಚ್ಚಿಸಿದಳು. ಆಗ ಸಾತ್ಯಕಿಯು ಕ್ರೋಧದಿಂದ ಮೇಲೆದ್ದು ಹೀಗೆ ಹೇಳಿದನು:

“ಆ ರಾತ್ರಿ ಪಾಪಿ ದ್ರೋಣಪುತ್ರನ ಸಹಾಯದಿಂದ ಮಲಗಿದ್ದವರನ್ನು ಸಂಹರಿಸಿದ ಈ ದುರಾತ್ಮ ಕೃತವರ್ಮನನ್ನು ಆ ಐವರು ದ್ರೌಪದೇಯರ ಮತ್ತು ಧೃಷ್ಟದ್ಯುಮ್ನ-ಶಿಖಂಡಿಯರ ಪದವಿಗೆ ಕಳುಹಿಸುತ್ತೇನೆಂದು ಸತ್ಯ ಶಪಥಮಾಡುತ್ತೇನೆ! ಸತ್ಯಭಾಮಾ! ಇಂದು ಇವನ

ಯಶಸ್ಸು ಮತ್ತು ಆಯಸ್ಸು ಮುಗಿದುಹೋಯಿತು!"

ಹೀಗೆ ಹೇಳಿ ಕ್ರುದ್ಧ ಸಾತ್ಯಕಿಯು ಖಡ್ಗದಿಂದ ಕೇಶವನ ಸಮೀಪದಲ್ಲಿದ್ದ ಕೃತವರ್ಮನನ್ನು ಆಕ್ರಮಣಿಸಿ ಅವನ ಶಿರವನ್ನು ಕತ್ತರಿಸಿದನು.

ಹಾಗೆಯೇ ಸುತ್ತಲಿದ್ದ ಇತರರನ್ನೂ ಸಂಹರಿಸುತ್ತಿದ್ದ ಯುಯುಧಾನನನ್ನು ತಡೆಯಲು ಹೃಷೀಕೇಶನು ಧಾವಿಸಿದನು. ಆಗ ಕಾಲಪಲ್ಲಟದಿಂದ ಪ್ರಚೋದಿತ ಭೋಜ-ಅಂಧಕರೆಲ್ಲರೂ ಒಂದಾಗಿ ಶೈನೇಯ ಸಾತ್ಯಕಿಯನ್ನು ಸುತ್ತುವರೆದರು. ಕ್ರುದ್ಧರಾದ ಅವರು ಸಾತ್ಯಕಿಯ ಮೇಲೆ ಬೀಳುತ್ತಿರುವುದನ್ನು ನೋಡಿಯೂ ಮಹಾತೇಜಸ್ವಿ ಜನಾರ್ದನನು ಕಾಲದ ಬದಲಾವಣೆಯನ್ನು ತಿಳಿದು ಕ್ರೋಧಿತನಾಗಲಿಲ್ಲ. ಪಾನಮದದಿಂದ ಆವಿಷ್ಟರಾಗಿದ್ದ ಅವರು ಕೋಪದಿಂದ ಪ್ರಚೋದಿತರಾಗಿ ಯುಯುಧಾನನನ್ನು ಎಂಜಲು ಆಹಾರಗಳಿದ್ದ ಪಾತ್ರೆಗಳಿಂದಲೇ ಹೊಡೆಯತೊಡಗಿದರು. ಶೈನೇಯನನ್ನು ಹಾಗೆ ಹೊಡೆಯುತ್ತಿರಲು ಕ್ರುದ್ಧನಾದ ರುಕ್ಮಿಣೀನಂದನ ಪ್ರದ್ಯುಮ್ನನು ಓಡಿ ಬಂದು ಶೈನಿಯ ಮಗ ಸಾತ್ಯಕಿಯನ್ನು ಬಿಡಿಸಲು ಪ್ರಯತ್ನಿಸಿದನು. ಸಾತ್ಯಕಿ-ಪ್ರದ್ಯುಮ್ನರಿಬ್ಬರೂ ಒಂದಾಗಿ ಭೋಜ-ಅಂಧಕರೊಂದಿಗೆ ಸೆಣೆಸಾಡಿದರು. ಆದರೆ ಅನೇಕರಿದ್ದ ಭೋಜ-ಅಂಧಕರು ಅವರಿಬ್ಬರನ್ನೂ, ಕೃಷ್ಣನು ನೋಡುತ್ತಿದ್ದಂತೆಯೇ, ಸಂಹರಿಸಿದರು.



ಶೈನೇಯನೂ ತನ್ನ ಮಗನೂ ಹತರಾದುದನ್ನು ನೋಡಿದ ಯದುನಂದನ ಕೇಶವನು ಕೋಪದಿಂದ ಒಂದು ಮುಷ್ಟಿ ಎರಕ ಹುಲ್ಲನ್ನು ಹಿಡಿದುಕೊಂಡನು. ಅದು ಲೋಹಮಯವಾದ ವಜ್ರದಂಥಹ ಘೋರ ಮುಸಲವಾಯಿತು. ಅದರಿಂದ ಕೃಷ್ಣನು ತನ್ನ ಎದುರಿದ್ದ ಅನ್ಯರೆಲ್ಲರನ್ನೂ ಸಂಹರಿಸಿದನು. ಅನಂತರ ಅಂಧಕರು, ಭೋಜರು, ಶೈನೇಯರು, ಮತ್ತು ವೃಷ್ಣಿಗಳು ಕಾಲಚೋದಿತರಾಗಿ ಮುಸಲಗಳಿಂದ ಅನ್ಯೋನ್ಯರನ್ನು ಆಕ್ರಮಣಿಸಿ ಸಂಹರಿಸಿದರು.

ಅವರಲ್ಲಿ ರೋಷದಿಂದ ಯಾರು ಆ ಎರಕದ ಹುಲ್ಲನ್ನು ಹಿಡಿದರೋ ಅವರ ಕೈಯಲ್ಲೆಲ್ಲಾ ಆ ಹುಲ್ಲು ವಜ್ರಾಯುಧದಂತೆ ಕಾಣುತ್ತಿತ್ತು. ಹುಲ್ಲೂ ಮುಸಲವಾದುದು ಕಂಡುಬಂದಿತೆಂದರೆ ಅದೆಲ್ಲವೂ ಆ ಋಷಿಗಳ ಶಾಪದಿಂದ ಆಯಿತೆಂದು ತಿಳಿದುಕೋ. ಆ ಹುಲ್ಲನ್ನು ಎಸೆದಾಗಲೆಲ್ಲ ಅದು ವಜ್ರದಂಥಹ ಗಟ್ಟಿಯಾದ ಮುಸಲ ರೂಪವನ್ನು ತಾಳುತ್ತಿತ್ತು. ಮಗನು ತಂದೆಯನ್ನೂ, ತಂದೆಯು ಮಗನನ್ನೂ ಮತ್ತರಾಗಿ ಪರಸ್ಪರರನ್ನು ಹೊಡೆದು ಉರುಳಿಸಿದರು. ಬೆಂಕಿಯಲ್ಲಿ ಬೀಳುವ ಪತಂಗಗಳಂತೆ ಕುಕುರ-ಅಂಧಕರು ಕೆಳಗುರುಳಿದರು. ಅಲ್ಲಿ ವಧಿಸಲ್ಪಡುತ್ತಿದ್ದ ಯಾರೂ ಪಲಾಯನದ ಕುರಿತು ಯೋಚಿಸಲಿಲ್ಲ. ಕಾಲದ ತಿರುವನ್ನು ನೋಡಿ ತಿಳಿದುಕೊಂಡ ಮಹಾಬಾಹು

ಮಧುಸೂದನನು ಮುಸಲವನ್ನು ತಿರುಗಿಸುತ್ತಾ ನಿಂತನು. ಸಾಂಬ, ಚಾರುದೇಷ್ಣ, ಪ್ರದ್ಯುಮ್ನ ಮತ್ತು ಅನಿರುದ್ಧರು ಹತರಾದುದನ್ನು ನೋಡಿ ಮಾಧವನು ಕುಪಿತನಾದನು. ಗದನೂ ಮಲಗಿದ್ದುದನ್ನು ನೋಡಿ ತುಂಬಾ ಕೋಪಸಮನ್ವಿತನಾದ ಶಾಂಙ್ರ್ಯಚಕ್ರಗದಾಧರನು ಎಲ್ಲರನ್ನೂ ನಿಃಶೇಷರನ್ನಾಗಿ ಮಾಡಿದನು. ಅವರನ್ನು ಸಂಹರಿಸುತ್ತಿದ್ದ ಆ ಮಹಾತೇಜಸ್ವಿ ದಾಶಾರ್ಹನನ್ನು ಪರಪುರಂಜಯ ಬಭ್ರು ಮತ್ತು ದಾರುಕರು ನೋಡಿ ಹೀಗೆಂದರು:

> "ಭಗವನ್! ನೀನು ಹೆಚ್ಚಾಗಿ ಎಲ್ಲರನ್ನೂ ಸಂಹರಿಸಿದ್ದೀಯೆ! ಈಗ ಬಲರಾಮನು ಹಿಡಿದ ದಾರಿಯಲ್ಲಿಯೇ ನಡೆದು ಅವನಿದ್ದಲ್ಲಿಗೆ ಹೋಗೋಣ!"

## ರಾಮ-ಕೃಷ್ಣಾವತಾರ ಸಮಾಪ್ತಿ

ಅನಂತರ ದಾರುಕ, ಬಭ್ರು ಮತ್ತು ಕೇಶವರು ಬಲರಾಮನ ಹೆಜ್ಜೆಯ ಗುರುತನ್ನೇ ಹಿಡಿದುಕೊಂಡು ಹೊರಟರು. ಅವರು ಅಲ್ಲಿ ಒಂದು ವೃಕ್ಷದಡಿಯಲ್ಲಿ ಚಿಂತಾಮಗ್ನನಾಗಿ ನಿಂತಿರುವ ಅನಂತವೀರ್ಯ ರಾಮನನ್ನು ಕಂಡರು. ಅವನ ಬಳಿಹೋದನಂತರ ಮಹಾನುಭಾವ ಕೃಷ್ಣನು ದಾರುಕನಿಗೆ ಆಜ್ಞಾಪಿಸಿದನು:

“ಶೀಘ್ರವೇ ಕುರುಗಳಲ್ಲಿಗೆ ಹೋಗಿ ಯದುಗಳ ವಧೆಯನ್ನೂ ಈ ಮಹಾ ಅಂತ್ಯವನ್ನೂ ಪಾರ್ಥನಿಗೆ ತಿಳಿಸು. ಬ್ರಾಹ್ಮಣರ ಶಾಪದಿಂದ ಯಾದವರು ಮೃತರಾದುದನ್ನು ಕೇಳಿ ಕೂಡಲೇ ಅರ್ಜುನನು ಇಲ್ಲಿಗೆ ಬರಲಿ!” ಇದನ್ನು ಕೇಳಿದ ದಾರುಕನು ಚೇತನವನ್ನೇ ಕಳೆದುಕೊಂಡಂಥವನಾಗಿ ರಥದಲ್ಲಿ ಕುರುಗಳ ಕಡೆ ನಡೆದನು. ದಾರುಕನು ಹೊರಟುಹೋಗಲು ಕೇಶವನು ಹತ್ತಿರದಲ್ಲಿದ್ದ ಬಭ್ರುವನ್ನು ನೋಡಿ ಹೇಳಿದನು: “ನೀನು ಶೀಘ್ರವಾಗಿ ಹೋಗಿ ಸ್ತ್ರೀಯರನ್ನು ರಕ್ಷಿಸು. ವಿತ್ತಲೋಭದಿಂದ ದಸ್ಯುಗಳು ಅವರನ್ನು ಹಿಂಸಿಸದಿರಲಿ!” ಕೇಶವನ ನಿರ್ದೇಶನದಂತೆ ಆ ಬಾಂಧವರ ವಧೆಯಿಂದ ಆರ್ದಿತನಾಗಿದ್ದ ಮತ್ತು ಕುಡಿದು ಅಮಲೇರಿದ್ದ ಬಭ್ರುವು ಹೊರಟನು. ಕೇಶವನ ಸನ್ನಿಧಿಯಿಂದ ಅವನು ಹೊರಟಿದ್ದಷ್ಟೇ ಒಮ್ಮೆಲೇ ಆ ಗುಂಪಿನಿಂದ ಯಾರೋ ಎಸೆದ ಮುಸುಲವೊಂದು ಅವನಿಗೆ ಹೊಡೆದು ಬ್ರಾಹ್ಮಣರ ಶಾಪಕ್ಕೆ ಗುರಿಯಾಗಿದ್ದ ಬಭೃವೂ ಮರಣಹೊಂದಿದನು. ಬಭ್ರುವು ಹತನಾದುದನ್ನು ನೋಡಿ ಕೃಷ್ಣನು ಅಗ್ರಜ ಅಣ್ಣನಿಗೆ ಹೀಗೆಂದನು: “ರಾಮ! ಸ್ತ್ರೀಯರನ್ನು ಯಾರಾದರೂ ನಮ್ಮ

ಬಾಂಧವರಿಗೆ ಒಪ್ಪಿಸಿ ಬರುವವರೆಗೂ ಇಲ್ಲಿಯೇ ನನ್ನ ಪ್ರತೀಕ್ಷೆಯಿಂದಿರು!”

ಅನಂತರ ದ್ವಾರಕಾಪುರಿಯನ್ನು ಪ್ರವೇಶಿಸಿ ಜನಾರ್ದನನು ತನ್ನ ತಂದೆಗೆ ಹೇಳಿದನು:

“ಧನಂಜಯನ ಆಗಮನವನ್ನು ಪ್ರತೀಕ್ಷಿಸುತ್ತಾ ನೀನು ನಮ್ಮ ಸ್ತ್ರೀಯರನ್ನು ರಕ್ಷಿಸಬೇಕು! ಬಲರಾಮನು ವನದಲ್ಲಿ ನನಗಾಗಿ ಕಾಯುತ್ತಿದ್ದಾನೆ. ನಾನು ಅವನನ್ನು ಸೇರುತ್ತೇನೆ. ನಾನು ಇಲ್ಲಿ ಯದುಗಳ ಈ ನಿಧನವನ್ನೂ ಹಿಂದೆ ಕುರುಪುಂಗವ ರಾಜರ ನಿಧನವನ್ನೂ ನೋಡಿದೆ. ಯಾದವರಿಲ್ಲದ ಈ ಪುರಿಯನ್ನು ನಾನು ಇಂದು ನೋಡಲು ಶಕ್ಯನಿಲ್ಲ. ರಾಮನೊಂದಿಗೆ ವನವನ್ನು ಸೇರಿ ತಪಸ್ಸನ್ನಾಚರಿಸುತ್ತೇನೆ!”

ಹೀಗೆ ಹೇಳಿ ಶಿರಸಾ ಅವನ ಪಾದಗಳನ್ನು ಸ್ಪರ್ಶಿಸಿ ನಮಸ್ಕರಿಸಿ ಕೃಷ್ಣನು ತ್ವರೆಮಾಡಿ ಹೊರಟುಹೋದನು. ಆಗ ಪುರದಲ್ಲಿದ್ದ ಸ್ತ್ರೀ-ಕುಮಾರರ ಮಹಾ ಕೂಗು ಕೇಳಿಬಂದಿತು. ರೋದಿಸುತ್ತಿರುವ ಸ್ತ್ರೀಯರ ಶಬ್ಧವನ್ನು ಕೇಳಿ ಕೇಶವನು ಅವರನ್ನು ಹಿಂದಿರುಗಲು ಹೇಳಿದನು.

“ಈ ಪುರಕ್ಕೆ ಸವ್ಯಸಾಚಿಯು ಬರುತ್ತಾನೆ ಮತ್ತು ಆ ನರಾಗ್ರ್ಯನು

ನಿಮ್ಮನ್ನು ದುಃಖದಿಂದ ಬಿಡುಗಡೆಗೊಳಿಸುತ್ತಾನೆ.”

ಅನಂತರ ಕೇಶವನು ಹೋಗಿ ವನದ ಪಕ್ಕದಲ್ಲಿ ಏಕಾಂಗಿಯಾಗಿ ಯೋಚನಾಮಗ್ನನಾಗಿ ನಿಂತಿದ್ದ ಬಲರಾಮನನ್ನು ನೋಡಿದನು. ಯೋಗಯುಕ್ತನಾಗಿದ್ದ ಅವನ ಮುಖದಿಂದ ಮಹಾನಾಗವೊಂದು ಹೊರಬರುತ್ತಿರುವುದನ್ನು ಅವನು ನೋಡಿದನು. ಅವನು ನೋಡುತ್ತಿದ್ದಂತೆಯೇ ಶ್ವೇತವರ್ಣದ ಆ ಮಹಾ ಸರ್ಪವು ಸಮುದ್ರದ ಕಡೆ ಹರಿದು ಹೋಯಿತು. ಆ ದೇಹವನ್ನು ಬಿಟ್ಟು ಹೊರಬಂದ ಪರ್ವತದಷ್ಟೇ ಎತ್ತರ ಹೆಡೆಯನ್ನು ಎತ್ತಿದ್ದ ಆ ಸಾವಿರ ಹೆಡೆಗಳ, ಕೆಂಪು ಬಾಯಿಯ ನಾಗವನ್ನು ದಿವ್ಯ ಪುಣ್ಯ ನದಿಗಳೊಡನೆ ಸಮುದ್ರವು ಸ್ವಾಗತಿಸಿತು. ಕಾರ್ಕೋಟಕ, ವಾಸುಕಿ, ತಕ್ಷಕ, ಪೃಥುಶ್ರವಾ, ವರುಣ, ಕುಂಜರ, ಮಿಶ್ರೀ, ಶಂಖ, ಕುಮುದ, ಪುಂಡರೀಕ, ಹಾಗೆಯೇ ಮಹಾತ್ಮ ನಾಗ ಧೃತರಾಷ್ಟ್ರ, ಹ್ರಾದ, ಕ್ರಾಥ, ಉಗ್ರತೇಜಸ್ವಿ ಶಿತಿಕಂಠ, ಮತ್ತು ಸ್ವಯಂ ರಾಜಾ ವರುಣನು ಮೇಲೆದ್ದು ಅವನನ್ನು ಅಭಿನಂದಿಸಿ ಸ್ವಾಗತಿಸಿ ಅರ್ಘ್ಯಪಾದ್ಯಗಳಿಂದ ಪೂಜಿಸಿದರು.

ಅಣ್ಣನು ಹೊರಟುಹೋಗಲು ದಿವ್ಯದೃಷ್ಟಿಯೆಲ್ಲವೂ ಹೊರಟುಹೋಯಿತೆಂದು ತಿಳಿದು ವಾಸುದೇವನು ಶೂನ್ಯ ವನದಲ್ಲಿ ಚಿಂತಿಸುತ್ತಾ ತಿರುಗಾಡುತ್ತಿದ್ದನು. ಅನಂತರ, ಆ ಅಗ್ರ್ಯತೇಜಸ್ವಿಯು



ಭೂಮಿಯ ಮೇಲೆ ಮಲಗಿಕೊಂಡನು. ಎಲ್ಲವೂ ಹೀಗೆಯೇ ಆಗುತ್ತದೆ ಎಂದು ಅವನಿಗೆ ಮೊದಲೇ ತಿಳಿದಿತ್ತು. ಹಿಂದೆ ಗಾಂಧಾರಿಯು ಹೇಳಿದ ಮಾತುಗಳನ್ನೂ, ದುರ್ವಾಸನು ಎಂಜಲು ಪಾಯಸವನ್ನು ಮೈಗೆ ಹಚ್ಚಿಕೊಳ್ಳಲು ಹೇಳಿದುದನ್ನೂ ಕೃಷ್ಣನು ನೆನಪಿಸಿಕೊಂಡನು. ಅಂಧಕ-ವೃಷ್ಣಿಗಳ ವಿನಾಶ ಮತ್ತು ಕುರುಕ್ಷಯದ ಕುರಿತು ಚಿಂತಿಸುತ್ತಿದ್ದ ಆ ಮಹಾನುಭಾವನು ಸಂಕ್ರಮಣ ಕಾಲವು ಬಂದಿತೆಂದು ತಿಳಿದು ಇಂದ್ರಿಯಗಳನ್ನು ನಿಯಂತ್ರಿಸಿಕೊಂಡನು. ಇಂದ್ರಿಯಗಳು, ಮಾತು, ಮತ್ತು ಮನಸ್ಸುಗಳನ್ನು ನಿಯಂತ್ರಿಸಿಕೊಂಡು ಮಹಾಯೋಗದಲ್ಲಿ ಕೃಷ್ಣನು ಮಲಗಿಕೊಂಡನು. ಆಗ ಉಗ್ರ ಬೇಟೆಗಾರ ಜರನು ಜಿಂಕೆಯನ್ನು ಅರಸುತ್ತಾ ಅಲ್ಲಿಗೆ ಬಂದನು. ಯೋಗಯುಕ್ತನಾಗಿ ಮಲಗಿದ್ದ ಕೇಶವನನ್ನು ಜಿಂಕೆಯೆಂದು ಶಂಕಿಸಿದ ಆ ಬೇಟೆಗಾರ ಜರನು ತಿಳಿಯದೆ ಸಾಯಕದಿಂದ ಅವನ ಪಾದದ ಹಿಮ್ಮಡಿಗೆ ಹೊಡೆದು, ತಾನು ಹೊಡೆದ ಬೇಟೆಯನ್ನು ಹಿಡಿಯಲು ತ್ವರೆಮಾಡಿ ಮುಂದೆ ಹೋದನು. ಅಲ್ಲಿ ಆ ಲುಬ್ಧಕನು ಪೀತಾಂಬರವನ್ನು ಧರಿಸಿದ್ದ ಅನೇಕ ಬಾಹುಗಳನ್ನು ಹೊಂದಿದ್ದ ಯೋಗಯುಕ್ತ ಪುರುಷನನ್ನು ಕಂಡನು. ಮಹಾ ಅಪರಾಧವನ್ನೆಸಗಿದೆನೆಂದು ತಿಳಿದು ಆರ್ತರೂಪನಾದ ಅವನು ಕೃಷ್ಣನ ಪಾದಗಳನ್ನು ಶಿರಸಾ ಸಮಸ್ಕರಿಸಿ ಹಿಡಿದುಕೊಂಡನು.



ಅವನನ್ನು ಸಮಾಧಾನಪಡಿಸಿ ಮಹಾತ್ಮ ಕೃಷ್ಣನು ತನ್ನ ಕಾಂತಿಯಿಂದ ಭೂಮ್ಯಾಕಾಶಗಳನ್ನು ಬೆಳಗಿಸುತ್ತಾ ಮೇಲೇರಿದನು. ಸ್ವರ್ಗವನ್ನು ಸೇರಿದ ಅವನನ್ನು ವಾಸವ ಇಂದ್ರ, ಅಶ್ವಿನೀ ದೇವತೆಗಳು, ರುದ್ರ-ಆದಿತ್ಯರು, ವಸವರು, ವಿಶ್ವೇದೇವರು, ಮುನಿಗಳು, ಸಿದ್ಧರು,

ಗಂಧರ್ವಮುಖ್ಯರು ಮತ್ತು ಜೊತೆಗೆ ಅಪ್ಸರೆಯರು ಸ್ವಾಗತಿಸಿದರು. ಅನಂತರ ಆ ಉಗ್ರತೇಜಸ್ವೀ, ಎಲ್ಲವಕ್ಕೂ ಮೂಲನೂ ಅಂತ್ಯನೂ ಆದ, ಯೋಗಾಚಾರ್ಯ ಭಗವಾನ್ ನಾರಾಯಣನು ತನ್ನ ಕಾಂತಿಯಿಂದ ಭೂಮ್ಯಾಕಾಶಗಳನ್ನು ಬೆಳಗಿಸುತ್ತಾ ತನ್ನ ಮಹಾತ್ಮ ಅಪ್ರಮೇಯ ಸ್ಥಾನವನ್ನು ಅಲಂಕರಿಸಿದನು.  ಅಲ್ಲಿ ಕೃಷ್ಣನು ದೇವ-ಋಷಿಗಳು ಮತ್ತು ಚಾರಣರೊಂದಿಗೆ ಸೇರಿದನು. ಗಂಧರ್ವಾಗ್ರರೂ, ಶ್ರೇಷ್ಠ ಅಪ್ಸರೆಯರೂ, ಸಿದ್ಧರೂ, ಸಾಧ್ಯರೂ ಅವನಿಗೆ ತಲೆಬಾಗಿ ಪೂಜಿಸಿದರು. ದೇವತೆಗಳು ಆನಂದದಿಂದ ಅವನನ್ನು ಸ್ವಾಗತಿಸಿದರು. ಮುನಿಶ್ರೇಷ್ಠರು ವೇದಮಂತ್ರಗಳಿಂದ ಆ ಈಶನನ್ನು ಅರ್ಚಿಸಿದರು. ಗಂಧರ್ವರು ಅವನನ್ನು ಸ್ತುತಿಸಿ, ಪೂಜಿಸಿದರು. ಇಂದ್ರನೂ ಕೂಡ ಪ್ರೀತಿಯಿಂದ ಅವನನ್ನು ಅಭಿನಂದಿಸಿದನು.

## ಅರ್ಜುನಾಗಮನ

ದಾರುಕನೂ ಕೂಡ ಕುರುಗಳಲ್ಲಿಗೆ ಹೋಗಿ ಮಹಾರಥ ಪಾರ್ಥರನ್ನು ಕಂಡು ವೃಷ್ಣಿಗಳು ಮೌಸಲಗಳಿಂದ ಅನ್ಯೋನ್ಯರನ್ನು ಸಂಹರಿಸಿದುದನ್ನು ಹೇಳಿದನು. ಭೋಜ-ಕುಕುರ-ಅಂಧಕರೊಂದಿಗೆ ವಾರ್ಷ್ಣೇಯರ ವಿನಾಶವನ್ನು ಕೇಳಿದ ಪಾಂಡವರು ಶೋಕಸಂತಪ್ತರಾಗಿ ವಿತ್ರಸ್ತ

ಮನಸ್ಸುಳ್ಳವರಾದರು. ಅನಂತರ ಕೇಶವನ ಪ್ರಿಯಸಖ ಅರ್ಜುನನು ಅವರಿಂದ ಬೀಳ್ಕೊಂಡು,

"ಇದು ಹೀಗಲ್ಲ!"

ಎಂದು ಹೇಳುತ್ತಾ ತನ್ನ ಸೋದರಮಾವನನ್ನು ನೋಡಲು ಹೊರಟನು. ಆ ವೀರನು ದಾರುಕನೊಂದಿಗೆ ವೃಷ್ಣಿನಿಲಯಕ್ಕೆ ಹೋಗಿ ಅಲ್ಲಿ ಪತಿಯನ್ನು ಕಳೆದುಕೊಂಡ ಸ್ತ್ರೀಯಂತಿದ್ದ ದ್ವಾರಕೆಯನ್ನು ನೋಡಿದನು. ಹಿಂದೆ ಲೋಕನಾಥನೇ ಯಾರ ನಾಥನಾಗಿದ್ದನೋ ಆ ಅನಾಥರು ನಾಥ ಪಾರ್ಥನನ್ನು ಕಂಡು ಜೋರಾಗಿ ರೋದಿಸಿದರು. ಅರ್ಜುನನು ಬಂದುದನ್ನು ನೋಡಿ ವಾಸುದೇವನ ಕೈಹಿಡಿದಿದ್ದ ಹದಿನಾರು ಸಾವಿರ ಸ್ತ್ರೀಯರು ಜೋರಾಗಿ ಕೂಗಿಕೊಂಡು ರೋದಿಸಿದರು. ಅವರನ್ನು ನೋಡುತ್ತಲೇ ಕೌರವ್ಯ ಅರ್ಜುನನು ಕಣ್ಣೀರು ತುಂಬಿದವನಾಗಿ ಕೃಷ್ಣನಿಂದಲೂ ಪುತ್ರರಿಂದಲೂ ವಿಹೀನರಾದ ಅವರನ್ನು ನೋಡಲೂ ಅಶಕ್ತನಾದನು.

ವೃಷ್ಣಿ-ಅಂಧಕರೇ ನೀರಾಗಿದ್ದ, ಕುದುರೆಗಳು ಮೀನಾಗಿದ್ದ, ರಥಗಳು ತೆಪ್ಪದಂತಿದ್ದ, ವಾದ್ಯ-ರಥಘೋಷಗಳೇ ಅಲೆಗಳಂತಿದ್ದ, ಮನೆ-ಉದ್ಯಾನವನಗಳೇ ತೀರ್ಥ-ಮಡುಗಳಂತಿದ್ದ, ರತ್ನ-ಹವಳಗಳೇ

ಪಾಚಿಯಂತಿದ್ದ, ವಜ್ರದ ಕೋಟೆಗಳೇ ಮಾಲೆಗಳಂತಿದ್ದ, ರಥಬೀದಿಗಳೇ ಸುಳಿಗಳಂತಿದ್ದ, ಚತ್ವಾರಗಳೇ ಸರೋವರಗಳಂತಿದ್ದ, ರಾಮ-ಕೃಷ್ಣರೇ ಮಹಾ ಮೊಸಳೆಗಳಂತಿದ್ದ ದ್ವಾರಕಾ ಎನ್ನುವ ನದಿಯು ಈಗ ಕಾಲನ ಪಾಶಕ್ಕೆ ಸಿಲುಕಿದ ಘೋರ ವೈತರಣೀ ನದಿಯಂತೆ ತೋರುತ್ತಿತ್ತು. ವೃಷ್ಣಿಪುಂಗವರಿಂದ ವಿಹೀನವಾಗಿ, ಕಾಂತಿಯನ್ನು ಕಳೆದುಕೊಂಡು, ಆನಂದವಿಲ್ಲದೇ ಇದ್ದ ದ್ವಾರಕಾ ಪುರಿಯು ಧೀಮಾನ್ ಅರ್ಜುನನಿಗೆ ಶಿಶಿರ ಋತುವಿನಲ್ಲಿರುವ ಕಮಲದ ಹೂವಿನಂತೆ ತೋರಿತು. ಅಂಥಹ ದ್ವಾರಕೆಯನ್ನೂ ಕೃಷ್ಣನ ಮಡದಿಯರನ್ನೂ ನೋಡಿದ ಪಾರ್ಥನು ಜೋರಾಗಿ ಅಳುತ್ತಾ ಕಣ್ಣೀರು ಸುರಿಸಿ ನೆಲದ ಮೇಲೆ ಬಿದ್ದನು.

ಆಗ ಸತ್ರಾಜಿತನ ಮಗಳು ಸತ್ಯಭಾಮೆ ಮತ್ತು ರುಕ್ಮಿಣಿಯರು ಕೂಡ ಕೆಳಗೆ ಬಿದ್ದು ಧನಂಜಯನನ್ನು ಸುತ್ತುವರೆದು ರೋದಿಸತೊಡಗಿದರು. ಅನಂತರ ಅವನನ್ನು ಎಬ್ಬಿಸಿ ಕಾಂಚನಪೀಠದಲ್ಲಿ ಕುಳ್ಳಿರಿಸಿ, ಆ ಮಹಾತ್ಮನನ್ನು ಸುತ್ತುವರೆದು ಅವನೊಡನೆ ಹೇಳಿಕೊಂಡರು. ಗೋವಿಂದನನ್ನು ಸಂಸ್ತುತಿಸಿ ಅವರೊಂದಿಗೆ ಮಾತನಾಡಿ ಆ ಸ್ತ್ರೀಯರನ್ನು ಸಮಾಧಾನಪಡಿಸಿ ಪಾಂಡವನು ತನ್ನ ಸೋದರಮಾವನನ್ನು ನೋಡಲು ಹೋದನು.

## ವಸುದೇವ ವಿಲಾಪ

ಕುರುಪುಂಗವನು ಪುತ್ರಶೋಕದಿಂದ ಸಂತಪ್ತನಾಗಿ ಮಲಗಿದ್ದ ಮಹಾತ್ಮ ವೀರ ಅನಕದುಂದುಭಿ ವಸುದೇವನನ್ನು ಕಂಡನು. ಕಣ್ಣುಗಳು ಕಣ್ಣೀರಿನಿಂದ ತುಂಬಿ ವಸುದೇವನಿಗಿಂತಲೂ ಹೆಚ್ಚು ಆರ್ತನಾಗಿದ್ದ ಆ ವಿಶಾಲ ಎದೆಯ ಮಹಾಭುಜ ಪಾರ್ಥನು ಆರ್ತನಾಗಿದ್ದ ವಸುದೇವನ ಪಾದಗಳನ್ನು ಹಿಡಿದು ನಮಸ್ಕರಿಸಿದನು. ಆ ಮಹಾಭುಜ ವೃದ್ಧನು ಅರ್ಜುನನನ್ನು ಬಾಹುಗಳಿಂದ ಆಲಂಗಿಸಿದನು ಮತ್ತು ಪುತ್ರರು, ಸಹೋದರರು, ಮೊಮ್ಮಕ್ಕಳು, ಹೆಣ್ಣುಮಕ್ಕಳ ಮಕ್ಕಳು, ಮತ್ತು ಸಖರು ಎಲ್ಲರನ್ನೂ ನೆನಪಿಸಿಕೊಂಡು ತುಂಬಾ ವಿಹ್ವಲನಾಗಿ ವಿಲಪಿಸಿದನು.

ವಸುದೇವನು ಹೇಳಿದನು:

> “ಅರ್ಜುನ! ನೂರಾರು ಭೂಮಿಪಾಲರನ್ನೂ ದೈತ್ಯರನ್ನೂ ಯಾರು ಜಯಿಸಿದ್ದರೋ ಅವರನ್ನು ನೋಡದೇ ಇನ್ನೂ ಜೀವಿಸಿದ್ದೇನೆ! ನನಗೆ ಮರಣವೇ ಇಲ್ಲವೆನಿಸುತ್ತದೆ! ನಿನ್ನ ಪ್ರಿಯಶಿಷ್ಯರಾಗಿದ್ದ, ನಿನ್ನ ಗೌರವಕ್ಕೆ ಪಾತ್ರರಾಗಿದ್ದ ಆ ಇಬ್ಬರ ದುರ್ವರ್ತನೆಯಿಂದಾಗಿ ವೃಷ್ಣಿಗಳು ನಿಧನರಾದರು! ಅವರಿಬ್ಬರು ವೃಷ್ಣಿಪ್ರವೀರರನ್ನೂ ಅತಿರಥರೆಂದು

ಮನ್ನಿಸುತ್ತಿದ್ದೆವು. ಅದರ ಕುರಿತು ಪ್ರದ್ಯುಮ್ನ, ಯುಯುಧಾನ, ನೀನು ಮತ್ತು ನನ್ನ ಪುತ್ರ ಕೃಷ್ಣರು ಯಾವಾಗಲೂ ಹೇಳಿಕೊಂಡು ಕೊಚ್ಚಿಕೊಳ್ಳುತ್ತಿದ್ದಿರಿ! ಅವರಿಬ್ಬರೂ ವೃಷ್ಣಿನಾಶದ ಮುಖಗಳಾದರು. ನಾನು ಶೈನೇಯನನ್ನಾಗಲೀ, ಹಾರ್ದಿಕ್ಯನನ್ನಾಗಲೀ, ಅಕ್ರೂರನನ್ನಾಗಲೀ, ರೌಕ್ಮಿಣೇಯನನ್ನಾಗಲೀ ನಿಂದಿಸುವುದಿಲ್ಲ. ಇದಕ್ಕೆ ಆ ಶಾಪವೇ ಕಾರಣ! ಕೇಶಿನಿ ಮತ್ತು ಕಂಸರನ್ನು ಜಯಿಸಿದ, ಬಲಗರ್ವಿತ ಚೈದ್ಯನನ್ನು ಸಂಹರಿಸಿದ, ನೈಷಾದಿ ಏಕಲವ್ಯ, ಕಾಲಿಂಗ, ಮಾಗಧರು, ಗಾಂಧಾರರು, ಕಾಶಿರಾಜ ಮತ್ತು ಮರುಭೂಮಿಯ ಪಾರ್ಥಿವರನ್ನು, ಪೂರ್ವದಿಕ್ಕಿನ, ದಕ್ಷಿಣದಿಕ್ಕಿನ ಮತ್ತು ಪರ್ವತಗಳಲ್ಲಿನ ನೃಪರನ್ನು ಗೆದ್ದ ಆ ಜಗತ್ಪ್ರಭು ಮಧುಸೂದನನು ಯದುಗಳ ಈ ವಿನಾಶವನ್ನು ಉಪೇಕ್ಷಿಸಿದನು! ಪುತ್ರರು, ಪೌತ್ರರು, ಸಹೋದರರು ಮತ್ತು ಸಖರು ಹತರಾಗಿ ಮಲಗಿದುದನ್ನು ನೋಡಿ ಅವನು ನನಗೆ ಹೀಗೆ ಹೇಳಿದನು: “ಪುರುಷರ್ಷಭ! ಇಂದು ಕುಲದ ಅಂತ್ಯವಾಯಿತು. ಬೀಭತ್ಸುವು ಈ ದ್ವಾರವತೀ ಪುರಕ್ಕೆ ಬರುತ್ತಾನೆ. ಅವನಿಗೆ ಇಲ್ಲಿ ನಡೆದ ವೃಷ್ಣಿಗಳ ಮಹಾವಿನಾಶದ

ಕುರಿತು ಹೇಳು. ಯದುಗಳ ಈ ವಿನಾಶದ ಕುರಿತು ಕೇಳಿದ ಕೂಡಲೇ ಬೇಗನೇ ಆ ಮಹಾತೇಜಸ್ವಿಯು ಬರುತ್ತಾನೆ. ಅದರ ಕುರಿತು ವಿಚಾರಿಸುವ ಅವಶ್ಯಕತೆಯಿಲ್ಲ. ನಾನೇ ಅರ್ಜುನನೆಂದೂ ಅರ್ಜುನನು ನಾನೆಂದೂ ತಿಳಿದುಕೋ! ಅವನು ಏನು ಮಾಡಬೇಕೆಂದು ಹೇಳುತ್ತಾನೋ ಅದನ್ನೇ ನೀನು ಮಾಡಬೇಕು. ಪಾಂಡವನು ಸ್ತ್ರೀಯರನ್ನೂ ಬಾಲಕರನ್ನು ರಕ್ಷಿಸುತ್ತಾನೆ. ಕಾಲಬಂದಾಗ ಬೀಭತ್ಸುವು ನಿನ್ನ ಔರ್ಧ್ವದೇಹಿಕವನ್ನೂ ಮಾಡುತ್ತಾನೆ. ಧನಂಜಯನು ಹೊರಟುಹೋದ ಕೂಡಲೇ ಈ ನಗರಿಯು, ಕೋಟೆ-ಕೊತ್ತಲಗಳೊಂದಿಗೆ ಸಮುದ್ರದಲ್ಲಿ ಮುಳುಗಿಹೋಗುತ್ತದೆ. ನಾನಾದರೋ ಧೀಮಂತ ರಾಮನೊಂದಿಗೆ ಯಾವುದೋ ಪುಣ್ಯ ಪ್ರದೇಶದಲ್ಲಿ ನಿಯಮವನ್ನಾಚರಿಸಿ ಕಾಲವನ್ನು ಕಾಯುತ್ತೇನೆ.” ಹೀಗೆ ಹೇಳಿ ಅಚಿಂತ್ಯಪರಾಕ್ರಮಿ ಪ್ರಭುವು ಬಾಲಕರೊಂದಿಗೆ ನನ್ನನ್ನು ಬಿಟ್ಟು ಇಷ್ಟಬಂದಲ್ಲಿಗೆ ಹೊರಟುಹೋದನು. ನಾನು ಆ ನಿನ್ನ ಇಬ್ಬರು ಭ್ರಾತೃಗಳ ಮತ್ತು ಘೋರ ಕುಲವಧೆಯ ಕುರಿತು ಚಿಂತಿಸುತ್ತಾ ಶೋಕಕರ್ಶಿತನಾಗಿ ಆಹಾರವನ್ನು ತ್ಯಜಿಸಿದ್ದೇನೆ. ನಾನು

ಏನನ್ನೂ ತಿನ್ನುವುದಿಲ್ಲ. ಬದುಕಿಯೂ ಇರುವುದಿಲ್ಲ. ಒಳ್ಳೆಯದಾಯಿತು. ನೀನು ಇಲ್ಲಿಗೆ ಬಂದೆ. ಕೃಷ್ಣನು ಏನೆಲ್ಲ ಹೇಳಿದ್ದನೋ ಅದನ್ನು ಸಂಪೂರ್ಣವಾಗಿ ಮಾಡು! ಈ ರಾಜ್ಯ, ಸ್ತ್ರೀಯರು, ಮತ್ತು ರತ್ನಗಳೆಲ್ಲವೂ ಈಗ ನಿನ್ನದೇ! ನಾನು ಈ ಇಷ್ಟ ಪ್ರಾಣಗಳನ್ನು ತ್ಯಜಿಸುತ್ತೇನೆ!”

## ವಸುದೇವ ನಿಧನ; ವಜ್ರಾಭಿಷೇಕ

ದೀನಮನಸ್ಕನಾದ ಸೋದರಮಾವನು ಹೀಗೆ ಹೇಳಲು ಪರಂತಪ ಬೀಭತ್ಸುವು ದುರ್ಮನಸ್ಸಿನಿಂದ ವಸುದೇವನಿಗೆ ಹೇಳಿದನು:

“ಮಾವ! ವೃಷ್ಣಿಪ್ರವೀರರು ಮತ್ತು ಮಧುಗಳಿಂದ ವಿಹೀನವಾದ ಈ ಭೂಮಿಯನ್ನು ಹೆಚ್ಚು ಕಾಲ ನೋಡಲು ಶಕ್ತನಿಲ್ಲ. ರಾಜಾ ಯುಧಿಷ್ಠಿರ, ಭೀಮಸೇನ, ಪಾಂಡವ ಸಹದೇವ, ನಕುಲ ಮತ್ತು ಯಾಜ್ಞಸೇನೀ ಈ ನಾವು ಆರು ಮಂದಿ ಒಂದೇ ಮನಸ್ಸುಳ್ಳವರು. ರಾಜನೂ ಕಾಲಾವತೀತನಾಗುವ ಸಮಯವು ಬಂದಿದೆಯೆನ್ನುವುದು ನಿಶ್ಚಯವೆನಿಸುತ್ತದೆ. ಕಾಲವನ್ನು ಅರಿತವರಲ್ಲಿ ಶ್ರೇಷ್ಠನಾದ ನಿನಗೆ ಬಂದಿರುವ ಕಾಲದ ಕುರಿತು ತಿಳಿದೇ ಇದೆ. ವೃಷ್ಣಿ

ಸ್ತ್ರೀಯರನ್ನೂ, ಬಾಲ-ವೃದ್ಧರನ್ನೂ ನಾನು ಇಂದ್ರಪ್ರಸ್ಥಕ್ಕೆ ಕರೆದುಕೊಂಡು ಹೋಗುತ್ತೇನೆ."

ಹೀಗೆ ಹೇಳಿ ಧನಂಜಯನು ದಾರುಕನಿಗೆ

"ಕೂಡಲೇ ವೃಷ್ಣಿವೀರರ ಅಮಾತ್ಯರನ್ನು ಕಾಣಲು ಬಯಸುತ್ತೇನೆ"

ಎಂದನು. ಹೀಗೆ ಹೇಳಿ ಮಹಾರಥರ ಕುರಿತು ಶೋಕಿಸುತ್ತಾ ಆ ಶೂರ ಅರ್ಜುನನು ಯಾದವರ ಸುಧರ್ಮ ಸಭೆಯನ್ನು ಪ್ರವೇಶಿಸಿದನು. ಅವನು ಆಸನ ಗ್ರಹಣ ಮಾಡಲು ಅವನ ಸುತ್ತಲೂ ಪ್ರಜೆಗಳು, ಬ್ರಾಹ್ಮಣರು, ಮಂತ್ರಿಗಳು ಮತ್ತು ವರ್ತಕರು ಕುಳಿತುಕೊಂಡರು. ಒಡೆಯರಿಗಾಗಿ ಚೇತನವನ್ನೇ ಕಳೆದುಕೊಂಡು ದೀನಮನಸ್ಕರಾಗಿದ್ದ ಅವರೆಲ್ಲರಿಗೆ ಸ್ವಯಂ ದೀನನಾಗಿದ್ದ ಪಾರ್ಥನು ಈ ಮಾತನ್ನಾಡಿದನು:

"ಸ್ವಯಂ ನಾನೇ ವೃಷ್ಣಿ-ಅಂಧಕ ಜನರನ್ನು ಇಂದ್ರಪ್ರಸ್ಥಕ್ಕೆ ಕೊಂಡೊಯ್ಯುತ್ತೇನೆ. ಈ ನಗರವೆಲ್ಲವನ್ನೂ ಸಮುದ್ರವು ಮುಳುಗಿಸಲಿಕ್ಕಿದೆ. ರಥಗಳನ್ನೂ, ವಿವಿಧರತ್ನಗಳನ್ನೂ ಸಜ್ಜುಗೊಳಿಸಿ. ಈ ವಜ್ರನು ಇಂದ್ರಪ್ರಸ್ಥದಲ್ಲಿ ನಿಮ್ಮೆಲ್ಲರ ರಾಜನಾಗುತ್ತಾನೆ. ಇಂದಿನಿಂದ ಏಳನೇ ದಿವಸದಂದು ವಿಮಲ

ರವಿಯು ಉದಯಿಸುವಾಗ ನಾವೆಲ್ಲರೂ ಇಲ್ಲಿಂದ
ಹೊರಡೋಣ! ಸಜ್ಜುಗೊಳಿಸಿ! ತಡಮಾಡಬೇಡಿ!”

ಅಕ್ಲಿಷ್ಟಕರ್ಮಿ ಪಾರ್ಥನು ಹೀಗೆ ಹೇಳಲು ಪೌರರು ತಮ್ಮದೇ ಏಳ್ಗೆಗಾಗಿ ಉತ್ಸಾಹದಿಂದ ತಯಾರಿ ನಡೆಸಿದರು. ಆ ರಾತ್ರಿಯನ್ನು ಪಾರ್ಥನು ಕೇಶವನ ಮನೆಯಲ್ಲಿ ಕಳೆದನು. ಅಲ್ಲಿ ಅವನು ಒಮ್ಮೆಲೇ ಶೋಕಮೋಹಗಳಲ್ಲಿ ಮುಳುಗಿಹೋದನು. ಮರುದಿನ ಬೆಳಿಗ್ಗೆ ಪ್ರತಾಪವಾನ್ ಮಹಾತೇಜಸ್ವಿ ಶೌರಿ ವಸುದೇವನು ತನ್ನನ್ನು ಯೋಗದಲ್ಲಿ ತೊಡಗಿಸಿಕೊಂಡು ಉತ್ತಮ ಗತಿಯನ್ನು ಹೊಂದಿದನು. ಆಗ ವಸುದೇವನ ಮನೆಯಲ್ಲಿ ಸ್ತ್ರೀಯರ ದಾರುಣ ಕೂಗು ಮತ್ತು ರೋದನಗಳ ಮಹಾ ಶಬ್ಧವು ಕೇಳಿಬಂದಿತು. ಆ ಎಲ್ಲ ಸ್ತ್ರೀಯರೂ ತಲೆಗೂದಲನ್ನು ಕೆದರಿಕೊಂಡು, ಆಭರಣ-ಹಾರಗಳನ್ನು ಕಳಚಿಕೊಂಡು, ಕೈಗಳಿಂದ ಎದೆಗಳನ್ನು ಹೊಡೆದುಕೊಳ್ಳುತ್ತಾ ದೀನರಾಗಿ ವಿಲಪಿಸುತ್ತಿದ್ದರು. ಸ್ತ್ರೀಶ್ರೇಷ್ಠರಾದ ದೇವಕೀ, ಭದ್ರಾ, ರೋಹಿಣೀ ಮತ್ತು ಮದಿರೆಯರು ಪತಿಯ ಚಿತೆಯನ್ನು ಏರುವ ಮನಸ್ಸುಮಾಡಿದರು. ಆಗ ಪಾರ್ಥನು ಮನುಷ್ಯರು ಎತ್ತಿಕೊಂಡು ಹೋಗುವ ಮಹುಮಾಲೆಗಳಿಂದ ಅಲಂಕೃತಗೊಂಡ ದೊಡ್ಡ ಯಾನದಲ್ಲಿ ಶೌರಿಯ ಮೃತಶರೀರವನ್ನು ಹೊರತರಿಸಿದನು.

ದುಃಖ ಶೋಕ ಸಮಾಹತರಾದ ದ್ವಾರಕಾವಾಸೀ ಪೌರರೆಲ್ಲರೂ ಅವನನ್ನು ಅನುಸರಿಸಿದರು. ಆ ಯಾನದ ಮುಂದೆ ಅಶ್ವಮೇಧದ ಚತ್ರ, ಉರಿಯುತ್ತಿರುವ ಅಗ್ನಿ, ಮತ್ತು ಯಾಜಕರು ನಡೆದರು. ಸಹಸ್ರಾರು ಸೊಸೆಯರು ಮತ್ತು ಸಹಸ್ರಾರು ಇತರ ಸ್ತ್ರೀಯರಿಂದ ಪರಿವೃತರಾಗಿ ಅಲಂಕೃತರಾದ ದೇವಿಯರು ಆ ವೀರನನ್ನು ಹಿಂಬಾಲಿಸಿ ಹೋದರು. ಜೀವಂತವಾಗಿರುವಾಗ ಆ ಮಹಾತ್ಮನಿಗೆ ಯಾವ ಪ್ರದೇಶವು ಪ್ರಿಯವಾಗಿತ್ತೋ ಅದೇ ಪ್ರದೇಶದಲ್ಲಿ ಸಂಕಲ್ಪಿಸಿ ಪಿತೃಮೇಧವನ್ನು ನೆರವೇರಿಸಿದರು. ಅವನ ನಾಲ್ವರು ವರಾಂಗನೆ ಪತ್ನಿಯರೂ ಚಿತಾಗ್ನಿಗತನಾದ ಆ ವೀರ ಶೂರಪುತ್ರನ ಚಿತೆಯನ್ನು ಏರಿ ಪತಿಯು ಹೋದ ಲೋಕವನ್ನು ಸೇರಿದರು. ಪಾಂಡುನಂದನನು ಹಿಂಬಾಲಿಸಿ ಹೋದ ಆ ನಾಲ್ವರು ಸ್ತ್ರೀಯರನ್ನೂ ಚಂದನ-ಗಂಧಗಳಿಂದ ದಹನಮಾಡಿದನು. ಆಗ ಅಗ್ನಿಯು ಸಮಿತ್ತನ್ನು ಸುಡುತ್ತಿರುವ ಶಬ್ಧ, ಸಾಮಗಾನದ ನಿರ್ಘೋಷ ಮತ್ತು ಮನುಷ್ಯರ ರೋದನಗಳು ಮಾತ್ರ ಕೇಳಿಬರುತ್ತಿದ್ದವು. ಅನಂತರ ವಜ್ರನ ನಾಯಕತ್ವದಲ್ಲಿ ವೃಷ್ಣಿವೀರ ಕುಮಾರರು ಮತ್ತು ಸ್ತ್ರೀಯರು ಎಲ್ಲರೂ ಮಹಾತ್ಮ ವಸುದೇವನಿಗೆ ತರ್ಪಣ ಕ್ರಿಯೆಗಳನ್ನು ನಡೆಸಿದರು.

ಧರ್ಮದಿಂದ ಲುಪ್ತನಾಗದ ಫಲ್ಗುನನು ಆ ಧರ್ಮಕಾರ್ಯವನ್ನು ಎಸಗಿ

ವೃಷ್ಣಿಯರು ನಾಶವಾದ ಸ್ಥಳಕ್ಕೆ ಹೋದನು. ಕದನದಲ್ಲಿ ಹತರಾಗಿ ಬಿದ್ದಿದ್ದ ಅವರನ್ನು ನೋಡಿ ಕೌರವ್ಯನು ತುಂಬಾ ದುಃಖಿತನಾದನು. ಸಮಯಕ್ಕೆ ತಕ್ಕ ಕಾರ್ಯವನ್ನೆಸಗಲು ಅನುವಾದನು. ಹಿರಿಯರಿಂದ ಮೊದಲ್ಗೊಂಡು ಆ ಬ್ರಾಹ್ಮಣ ಶಾಪದಿಂದ ಉದ್ಭವಿಸಿದ್ದ ಎರಕಗಳಿಂದ ಹತರಾದ ಅವರೆಲ್ಲರ ಕ್ರಿಯೆಗಳನ್ನೂ ನಡೆಸಿದನು. ಅನಂತರ ರಾಮ ಮತ್ತು ವಾಸುದೇವ ಇಬ್ಬರ ಶರೀರಗಳನ್ನೂ ಹುಡುಕಿಸಿ ಆಪ್ತಜನರಿಂದ ದಹನಸಂಸ್ಕಾರವನ್ನು ಮಾಡಿಸಿದನು. ಅವರ ಪ್ರೇತಕಾರ್ಯಗಳನ್ನು ವಿಧಿವತ್ತಾಗಿ ಪೂರೈಸಿ ಸತ್ವರ ಪಾಂಡವನು ಏಳನೆಯ ದಿವಸ ರಥವನ್ನೇರಿ ಹೊರಟನು. ಕುದುರೆಗಳು, ಎತ್ತುಗಳು, ಮತ್ತು ಕತ್ತೆಗಳನ್ನು ಹೂಡಿದ ರಥಗಳ ಮೇಲೆ ಶೋಕಕರ್ಶಿತ ವೃಷ್ಣಿವೀರರ ಸ್ತ್ರೀಯರು ರೋದಿಸುತ್ತಾ ಪಾಂಡುಪುತ್ರ ಮಹಾತ್ಮ ಧನಂಜಯನನ್ನು ಅನುಸರಿಸಿ ಹೋದರು. ಪಾರ್ಥನ ಆಜ್ಞೆಯಂತೆ ವೀರರನ್ನು ಕಳೆದುಕೊಂಡ ವೃಷ್ಣಿ-ಅಂಧಕರ ಸೇವಕರು, ಅಶ್ವಾರೋಹಿಗಳು, ರಥಾರೂಢರು, ವೃದ್ಧ-ಬಾಲಕ ಪೌರಜನರು ಎಲ್ಲರೂ ಸ್ತ್ರೀಯರನ್ನು ಸುತ್ತುವರೆದು ನಡೆದರು. ಪರ್ವತದಂತಿದ್ದ ಆನೆಗಳನ್ನೇರಿ, ಪಾದರಕ್ಷಕರೊಂದಿಗೆ ಗಜಾರೋಹಿಗಳೂ ಮೀಸಲು ಪಡೆಗಳೂ ನಡೆದವು. ಅಂಧಕ-ವೃಷ್ಣಿಯರ ಮಕ್ಕಳೆಲ್ಲರೂ, ಶ್ರೀಮಂತ

ಬ್ರಾಹ್ಮಣ-ಕ್ಷತ್ರಿಯ-ವೈಶ್ಯ- ಶೂದ್ರರೂ ಪಾರ್ಥನನ್ನು ಅನುಸರಿಸಿ ಹೋದರು. ವಾಸುದೇವನ ಹದಿನಾರು ಸಾವಿರ ಪತ್ನಿಯರು ಧೀಮತ ಕೃಷ್ಣನ ಮೊಮ್ಮಗ ವಜ್ರನನ್ನು ಮುಂದಿರಿಸಿಕೊಂಡು ಹೋದರು. ನಾಥರನ್ನು ಕಳೆದುಕೊಂಡ ಅನೇಕ ಸಾವಿರ, ಅನೇಕ ಕೋಟಿ, ಅನೇಕ ಅರ್ಬುದ ಭೋಜ-ವೃಷ್ಣಿ-ಅಂಧಕ ಸ್ತ್ರೀಯರು ಹಿಂಬಾಲಿಸಿ ಹೋದರು. ಮಹಾ ಸಾಗರದಂತಿದ್ದ ಆ ವೃಷ್ಣಿಚಕ್ರವನ್ನೂ, ಮಹಾ ಸಂಪತ್ತನ್ನೂ ರಥಿಗಳಲ್ಲಿ ಶ್ರೇಷ್ಠ, ಪರಪುರಂಜಯ ಪಾರ್ಥನು ಕರೆದುಕೊಂಡು ಹೋದನು. ಆ ಜನರು ಹೊರಟುಹೋದ ಕೂಡಲೇ ಮಕರಾಲಯ ಸಾಗರವು ರತ್ನಗಳಿಂದ ತುಂಬಿದ್ದ ದ್ವಾರಕೆಯನ್ನು ತನ್ನ ನೀರಿನಿಂದ ಮುಳುಗಿಸಿತು.

ಆ ಅದ್ಭುತವನ್ನು ನೋಡಿದ ದ್ವಾರಕಾಪುರವಾಸೀ ಜನರು ಅಯ್ಯೋ ದೈವವೇ ಎನ್ನುತ್ತಾ ಜೋರುಜೋರಾಗಿ ಮುಂದುವರೆದರು. ಧನಂಜಯನು ಕಾನನಗಳಲ್ಲಿ, ರಮ್ಯ ಪರ್ವತಗಳಲ್ಲಿ ಮತ್ತು ನದೀ ತೀರಗಳಲ್ಲಿ ತಂಗುತ್ತಾ ವೃಷ್ಣಿಸ್ತ್ರೀಯರನ್ನು ಕರೆದುಕೊಂಡು ಹೋದನು. ಐದು ನದಿಗಳ ಪ್ರದೇಶವನ್ನು ತಲುಪಿ ಧೀಮಾನ್ ಪ್ರಭು ಅರ್ಜುನನು ಗೋಪಶುಗಳು ಮತ್ತು ಧನ ಸಮೃದ್ಧವಾಗಿದ್ದ ಆ ಪ್ರದೇಶದಲ್ಲಿ ಬೀಡುಬಿಟ್ಟನು. ಪತಿಗಳನ್ನು ಕಳೆದುಕೊಂಡ ಸ್ತ್ರೀಯರನ್ನು

ಪಾರ್ಥನೊಬ್ಬನೇ ಕರೆದುಕೊಂಡು ಹೋಗುತ್ತಿದ್ದಾನೆನ್ನುವುದನ್ನು ನೋಡಿ ದಸ್ಯುಗಳಿಗೆ ಲೋಭವುಂಟಾಯಿತು. ಆಗ ಲೋಭದಿಂದ ಬುದ್ಧಿಯನ್ನೇ ಕಳೆದುಕೊಂಡು ಅಶುಭರಂತೆ ಕಾಣುತ್ತಿದ್ದ ಆ ಪಾಪಕರ್ಮಿ ಅಭೀರರು ಒಂದಾಗಿ ಸಮಾಲೋಚನೆಮಾಡಿದರು:

> "ಈ ಯೋಧ ಅರ್ಜುನನೊಬ್ಬನೇ ಗಂಡಸರನ್ನು ಕಳೆದುಕೊಂಡಿರುವ ವೃದ್ಧಬಾಲರನ್ನು ಕರೆದುಕೊಂಡು, ನಮ್ಮ ಈ ಪ್ರದೇಶವನ್ನು ದಾಟಿ, ಹೋಗುತ್ತಿದ್ದಾನೆ! ಅವನಲ್ಲಿದ್ದ ಯೋಧರೂ ಕೂಡ ತಮ್ಮ ತೇಜಸ್ಸನ್ನು ಕಳೆದುಕೊಂಡಿದ್ದಾರೆ!"

ಆಗ ದಂಡಗಳನ್ನು ಹಿಡಿದ ಸಹಸ್ರಾರು ದರೋಡೆಕೋರ ದಸ್ಯುಗಳು ವೃಷ್ಣಿಗಳ ಜನರನ್ನು ಅಕ್ರಮಣಿಸಿದರು. ಕಾಲದ ಬದಲಾವಣೆಯಿಂದ ಪ್ರೇರಿತರಾದ ಅವರು ಮಹಾಸಿಂಹನಾದದೊಂದಿಗೆ ಓಡಿಬಂದು, ದರೋಡೆ ಮಾಡುವ ಸಲುವಾಗಿ, ಸಾಮಾನ್ಯ ಜನರ ಆ ಗುಂಪಿನ ಮೇಲೆ ಎರಗಿದರು. ಕೂಡಲೇ ಮಹಾಬಾಹು ಕೌಂತೇಯ ಅರ್ಜುನನು ತನ್ನ ಅನುಯಾಯಿಗಳೊಂದಿಗೆ ಹಿಂದಿರುಗಿ ನಗುತ್ತಾ ಅವರಿಗೆ ಹೇಳಿದನು:

> "ಅಧರ್ಮಜ್ಞರೇ! ಸಾವನ್ನು ಬಯಸದಿದ್ದರೆ ಹಿಂದೆ ಸರಿಯಿರಿ! ನನ್ನ ಈ ಶರಗಳಿಂದ ಗಾಯಗೊಂಡು ಶೋಕದಿಂದ

ಹತರಾಗಬೇಡಿ!"

ವೀರ ಅರ್ಜುನನು ಹಾಗೆ ಹೇಳಿದರೂ ಅವನ ಮಾತನ್ನು ಅನಾದರಿಸಿ, ಅವನು ಪುನಃ ಪುನಃ ತಡೆಯುತ್ತಿದ್ದರೂ, ಆ ಮೂಢಜನರು ಆಕ್ರಮಣಿಸಿದರು.

ಆಗ ಅರ್ಜುನನು ಅಜರವಾಗಿದ್ದ ದಿವ್ಯ ಮಹಾಧನುಸ್ಸು ಗಾಂಡೀವಕ್ಕೆ ಶಿಂಜಿನಿಯನ್ನು ಬಿಗಿಯಲು ಪ್ರಯತ್ನಿಸಿದರೂ ಅದು ಅವನಿಗೆ ಸಾಧ್ಯವಾಗಲಿಲ್ಲ. ಆ ತುಮುಲ ಸಂಭ್ರಮದಲ್ಲಿ ಕಷ್ಟಪಟ್ಟು ಶಿಂಜಿನಿಯನ್ನು ಬಿಗಿದು ಅವನು ಅಸ್ತ್ರಗಳ ಕುರಿತು ಯೋಚಿಸಲು, ಅವುಗಳ್ಯಾವುವೂ ಅವನ ಸ್ಮರಣೆಗೆ ಬರಲಿಲ್ಲ. ಯುದ್ಧದ ಸಮಯದಲ್ಲಿದ್ದ ಅವನ ಆ ಮಹಾ ಭುಜವೀರ್ಯವು ಮತ್ತು ದಿವ್ಯ ಮಹಾಸ್ತ್ರಗಳು ಅಸಫಲವಾಗಲು ಅರ್ಜುನನಿಗೆ ನಾಚಿಕೆಯಾಯಿತು. ಆನೆ-ಕುದುರೆ-ರಥಗಳನ್ನೇರಿದ್ದ ವೃಷ್ಣಿಯೋಧರು ಎಲ್ಲರೂ ಬಲಾತ್ಕಾರವಾಗಿ ಅಪಹರಿಸುತ್ತಿದ್ದ ಅವರನ್ನು ತಡೆಯಲು ಶಕ್ಯರಾಗಲಿಲ್ಲ. ರಕ್ಷಿಸಲು ಅಲ್ಲಲ್ಲಿ ಅನೇಕ ಸ್ತ್ರೀಯರಿದ್ದರು ಮತ್ತು ಸಂಪತ್ತುಗಳಿತ್ತು. ಪಾರ್ಥನು ಆ ಜನರನ್ನು ರಕ್ಷಿಸಲು ಪ್ರಯತ್ನಿಸಿದನು. ಸರ್ವ ಯೋಧರು ನೋಡುತ್ತಿದ್ದಂತೆಯೇ ದಸ್ಯುಗಳು ಎಲ್ಲಕಡೆಗಳಿಂದ ಬಂದು ಆ ಉತ್ತಮ ಸ್ತ್ರೀಯರನ್ನು ಎಳೆದುಕೊಂಡು ಹೋದರು ಮತ್ತು

ಅನ್ಯರು ಭಯದಿಂದ ಎತ್ತಲೋ ಓಡಿ ಹೋದರು. ವೃಷ್ಣಿಸೇವಕರೊಡನೆ ಉದ್ವೇಗಗೊಂಡ ಪ್ರಭು ಪಾರ್ಥ ಧನಂಜಯನು ಗಾಂಡೀವದಿಂದ ಪ್ರಯೋಗಿಸಿದ ಶರಗಳಿಂದ ಆ ದಸ್ಯುಗಳನ್ನು ಸಂಹರಿಸಿದನು. ಆದರೆ ಕ್ಷಣದಲ್ಲಿಯೇ ಅವನಲ್ಲಿದ್ದ ಜಿಹ್ಮಗಗಳು ಮುಗಿದುಹೋದವು. ಮೊದಲು ಅಕ್ಷಯವಾಗಿದ್ದ ಆ ರಕ್ತವನ್ನು ಕುಡಿಯುವ ಶರಗಳು ಈಗ ಮುಗಿದುಹೋದವು. ಶರಗಳು ಮುಗಿದುಹೋಗಲು ದುಃಖಶೋಕಗಳಿಂದ ಸಮಾಹತನಾಗಿ ಪಾಕಶಾಸನಿಯು ತನ್ನ ಧನುಸ್ಸಿನ ತುದಿಯಿಂದಲೇ ದಸ್ಯುಗಳನ್ನು ವಧಿಸತೊಡಗಿದನು. ಆದರೆ ಪಾರ್ಥನು ನೋಡುತ್ತಿದ್ದಂತೆಯೇ ಮ್ಲೇಚ್ಛರು ವೃಷ್ಣಿ-ಅಂಧಕರ ಶ್ರೇಷ್ಠ ಸ್ತ್ರೀಯರನ್ನು ಎತ್ತಿಕೊಂಡು ಎಲ್ಲ ಕಡೆಗಳಲ್ಲಿ ಓಡಿ ಹೋದರು.

ಪ್ರಭು ಧನಂಜಯನಾದರೋ ಅದು ದೈವವೆಂದು ಮನಸಾ ಯೋಚಿಸಿದನು. ಪರಮ ದುಃಖ ಶೋಕ ಸಮಾವಿಷ್ಟನಾಗಿ ನಿಟ್ಟುಸಿರು ಬಿಟ್ಟನು. ಅಸ್ತ್ರಗಳ ವಿನಾಶ, ಬಾಹುವೀರ್ಯದ ಕುಂಠಿತ, ಧನುಸ್ಸಿನ ಅವಿಧೇಯತೆ ಮತ್ತು ಶರಗಳು ಮುಗಿದುಹೋದುದು ಇವುಗಳಿಂದ ವಿಮನಸ್ಕನಾದ ಪಾರ್ಥನು ಇದು ದೈವವೆಂದೇ ಆಲೋಚಿಸಿದನು. ಅನಂತರ ಅವನು

“ಎಲ್ಲವೂ ಹೋಯಿತು !”

ಎಂದು ಹೇಳಿ ಹಿಂದಿರುಗಿದನು. ಅನಂತರ ಆ ಮಹಾಮತಿಯು ಉಳಿದಿದ್ದ ಸ್ತ್ರೀಯರನ್ನೂ, ಅಪಹರಿಸಲ್ಪಡದೇ ಇದ್ದ ಸ್ವಲ್ಪ ರತ್ನಗಳನ್ನೂ ಕುರುಕ್ಷೇತ್ರಕ್ಕೆ ಬಂದು ಇಳಿಸಿದನು. ಅಪಹರಿಸಲ್ಪಡದೇ ಉಳಿದಿದ್ದ ವೃಷ್ಣಿ ಸ್ತ್ರೀಯರನ್ನು ಕರೆದುಕೊಂಡು ಬಂದು ಕೌರವ್ಯ ಧನಂಜಯನು ಅಲ್ಲಲ್ಲಿ ನೆಲೆಗೊಳಿಸಿದನು. ನರೋತ್ತಮ ಪಾರ್ಥನು ಅಪಹರಿಸದೆ ಉಳಿದಿದ್ದ ಭೋಜರಾಜನ ಸ್ತ್ರೀಯರನ್ನು ಹಾರ್ದಿಕ್ಯ ಕೃತವರ್ಮನ ಮಗನ ಜೊತೆಗೆ ಮಾರ್ತಿಕಾವತಕ್ಕೆ ಕಳುಹಿಸಿದನು. ಅನಂತರ ವೀರರಿಂದ ವಿಹೀನರಾಗಿದ್ದ ಎಲ್ಲ ವೃದ್ಧರನ್ನೂ, ಬಾಲಕರನ್ನೂ, ಮತ್ತು ಸ್ತ್ರೀಯರನ್ನೂ ಪಾಂಡವನು ಇಂದ್ರಪ್ರಸ್ಥದಲ್ಲಿ ವಾಸಿಸುವಂತೆ ಮಾಡಿದನು. ಸಾತ್ಯಕಿಯ ಪ್ರಿಯಪುತ್ರ ಯೌಯುಧಾನಿಯನ್ನು ವೃದ್ಧ-ಬಾಲಕರೊಂದಿಗೆ ಸರಸ್ವತೀ ತೀರದಲ್ಲಿ ಧರ್ಮಾತ್ಮ ಅರ್ಜುನನು ನೆಲೆಸುವಂತೆ ಮಾಡಿದನು. ಆ ಪರವೀರಹನು ಇಂದ್ರಪ್ರಸ್ಥವನ್ನು ವಜ್ರನಿಗೆ ಕೊಟ್ಟನು. ವಜ್ರನು ತಡೆಯಲು ಪ್ರಯತ್ನಿಸಿದರೂ ಅಕ್ರೂರನ ಪತ್ನಿಯರು ವನವನ್ನು ಸೇರಿದರು.

ರುಕ್ಮಿಣೀ, ಗಾಂಧಾರೀ, ಶೈಬ್ಯೆ, ಹೈಮವತೀ, ಮತ್ತು ದೇವೀ ಜಾಂಬವತಿಯರು ಅಗ್ನಿಪ್ರವೇಶ ಮಾಡಿದರು. ತಪಸ್ಸಿನ ನಿಶ್ಚಯವನ್ನು ಮಾಡಿದ ಸತ್ಯಭಾಮೆ ಮತ್ತು ಕೃಷ್ಣನ ಇತರ ಪತ್ನಿಯರು ವನವನ್ನು

ಪ್ರವೇಶಿಸಿದರು. ಪಾರ್ಥನನ್ನು ಅನುಸರಿಸಿ ಬಂದಿದ್ದ ದ್ವಾರಕಾವಾಸಿ ಪುರುಷರನ್ನು ಯಥಾರ್ಹವಾಗಿ ವಿಂಗಡಿಸಿ ಜಯನು ವಜ್ರನಿಗೆ ಒಪ್ಪಿಸಿದನು. ಸಮಯದೊಡನೆ ಬಂದಿದ್ದ ಆ ಎಲ್ಲ ಕಾರ್ಯಗಳನ್ನೂ ಪೂರೈಸಿ ಕಣ್ಣೀರುತುಂಬಿದ ಅರ್ಜುನನು ಆಶ್ರಮದಲ್ಲಿ ಕುಳಿತಿದ್ದ ಕೃಷ್ಣದ್ವೈಪಾಯನನನ್ನು ಕಂಡನು.

## ವ್ಯಾಸಾರ್ಜುನ ಸಮಾಗಮ

ಸತ್ಯವಾದಿ ಅರ್ಜುನನು ಆಶ್ರಮವನ್ನು ಪ್ರವೇಶಿಸಿ ಏಕಾಂತಲ್ಲಿ ಕುಳಿತಿದ್ದ ಮುನಿ ಸತ್ಯವತೀ ಸುತನನ್ನು ಸಂದರ್ಶಿಸಿದನು. ಕುಳಿತಿದ್ದ ಆ ಮಹಾವ್ರತ ಧರ್ಮಜ್ಞನ ಬಳಿಸಾರಿ

“ನಾನು ಅರ್ಜುನ!”

ಎಂದು ಹೇಳಿ ವಂದಿಸಿ ನಿಂತುಕೊಂಡನು. “ನಿನಗೆ ಸ್ವಾಗತ!” ಎಂದು ಮುನಿ ಸತ್ಯವತೀ ಸುತನು ಹೇಳಿ, ಪ್ರಸನ್ನಾತ್ಮನಾದ ಆ ಮಹಾಮುನಿಯು “ಕುಳಿತುಕೋ!” ಎಂದನು. ಮನಸ್ಸನ್ನೇ ಕಳೆದುಕೊಂಡಿದ್ದ, ಪುನಃ ಪುನಃ ನಿಟ್ಟುಸಿರು ಬಿಡುತ್ತಿದ್ದ, ನಿರ್ವಿಣ್ಣ ಮನಸ್ಕನಾಗಿದ್ದ ಪಾರ್ಥನನ್ನು ನೋಡಿ ವ್ಯಾಸನು ಇಂತೆಂದನು:



“ವೀರನಲ್ಲದವನಿಂದ ಗಾಯಗೊಂಡಿರುವೆಯೇ? ಅಥವಾ ಬ್ರಾಹ್ಮಣನನ್ನು ಕೊಂದೆಯೇ? ಅಥವಾ ಯುದ್ಧದಲ್ಲಿ ಪರಾಜಿತಗೊಂಡೆಯೇ? ನಿನ್ನ ಕಾಂತಿಯನ್ನು ಕಳೆದುಕೊಂಡಂತಿದೆ! ಭರತರ್ಷಭ! ಇದೇನಿದು! ನಿನ್ನನ್ನು ನಾನು ಗುರುತಿಸಲಾಗುತ್ತಿಲ್ಲ! ಅದನ್ನು ನಾನು ಕೇಳಬಹುದಾದರೆ ಬೇಗನೆ ಏನಾಯಿತೆಂದು ಹೇಳು!”

ಅರ್ಜುನನು ಹೇಳಿದನು:

“ಆ ಮೇಧವಪು, ಬೃಹತ್ ಕಮಲಲೋಚನ ಶ್ರೀಮಾನ್ ಕೃಷ್ಣನು ರಾಮನೊಂದಿಗೆ ದೇಹವನ್ನು ತೊರೆದು ದಿವಂಗತನಾಗಿದ್ದಾನೆ. ಬ್ರಹ್ಮಶಾಪದಿಂದ ಹುಟ್ಟಿದ ಮುಸಲಗಳಿಂದ ಪ್ರಭಾಸದಲ್ಲಿ ವೃಷ್ಣಿವೀರರ ರೋಮಾಂಚಕಾರೀ ವಿನಾಶವಾಯಿತು! ಬ್ರಹ್ಮನ್! ಆ ಶೂರ, ಮಹಾತ್ಮ, ಸಿಂಹದರ್ಪ ಮಹಾಬಲ ಭೋಜ-ವೃಷ್ಣಿ-ಅಂಧಕರು ಅನ್ಯೋನ್ಯರೊಡನೆ ಹೋರಾಡಿ ಹತರಾದರು. ಗದೆ-ಪರಿಘ-ಶಕ್ತಿಗಳನ್ನು ಸಹಿಸಬಲ್ಲ ಪರಿಘದಂತಹ ಬಾಹುಗಳಿದ್ದ ಅವರು ಎರಕ ಹುಲ್ಲುಗಳಿಂದ ಹತರಾದರು. ಕಾಲದ ಪಲ್ಲಟನವನ್ನು ನೋಡು! ಐನೂರು ಸಾವಿರ

ಬಾಹುಶಾಲಿಗಳು ಪರಸ್ಪರರೊಡನೆ ಹೋರಾಡಿ ನಿಧನ ಹೊಂದಿದರು. ಅಮಿತೌಜಸ ಯದುಗಳ ಮತ್ತು ಯಶಸ್ವಿ ಕೃಷ್ಣನ ವಿನಾಶವನ್ನು ಪುನಃ ಪುನಃ ಚಿಂತಿಸಿ ತಡೆದುಕೊಳ್ಳದಾಗಿದ್ದೇನೆ. ಸಮುದ್ರವು ಬತ್ತಿಹೋಯಿತೆಂದರೆ ಅಥವಾ ಪರ್ವತವು ಚಲಿಸಿತೆಂದರೆ, ಆಕಾಶವು ಬಿದ್ದಿತೆಂದರೆ ಮತ್ತು ಅಗ್ನಿಯು ಶೀತಲನಾದನೆಂದರೆ ಹೇಗೋ ಹಾಗೆ ಶಾಂಙ್ರ್ಯಧನ್ವಿಯು ವಿನಾಶನಾದನೆನ್ನುವುದನ್ನು ನಾನು ನಂಬುವುದಿಲ್ಲ. ಕೃಷ್ಣನಿಲ್ಲದ ಈ ಲೋಕದಲ್ಲಿ ನಾನಿರಲು ಬಯಸುವುದಿಲ್ಲ. ಇದಕ್ಕಿಂತಲೂ ಕಷ್ಟತರವಾದುದಿದೆ. ಅದನ್ನು ಕೇಳು. ಅದನ್ನು ಪುನಃ ಪುನಃ ಯೋಚಿಸಿ ನನ್ನ ಮನಸ್ಸು ಸೀಳಿಹೋಗುತ್ತಿದೆ. ನನ್ನ ಎದುರಿಗೇ ಐದು ನದಿಗಳ ಪ್ರದೇಶದಲ್ಲಿ ಅಭೀರರು ಸಹಸ್ರಾರು ವೃಷ್ಣಿಸ್ತ್ರೀಯರನ್ನು ಅನುಸರಿಸಿ ಬಂದು ಅವರನ್ನು ಅಪಹರಿಸಿಕೊಂಡು ಹೋದರು! ಧನುಸ್ಸನ್ನೆತ್ತಿ ನಾನು ಅವರನ್ನು ಸಂಪೂರ್ಣವಾಗಿ ನಾಶಮಾಡಬೇಕೆಂದಿರುವಾಗ ನನ್ನ ಭುಜಗಳಲ್ಲಿ ಹಿಂದೆ ಇದ್ದ ವೀರ್ಯವು ಆಗ ಇಲ್ಲವಾಯಿತು! ಅವರಿಂದ ಸುತ್ತುವರೆಯಲ್ಪಟ್ಟಿದ್ದಾಗ ಕ್ಷಣದಲ್ಲಿಯೇ ನನ್ನ ವಿವಿಧ ಅಸ್ತ್ರಗಳು

ಮರೆತು ಹೋದವು ಮತ್ತು ಶರಗಳೂ ಮುಗಿದು ಹೋದವು. ನನ್ನ ರಥದ ಮುಂದೆ ಹೋಗುತ್ತಾ ರಿಪುಸೈನ್ಯಗಳನ್ನು ಸುಡುತ್ತಿದ್ದ ಆ ಪುರುಷ, ಅಪ್ರಮೇಯಾತ್ಮಾ, ಶಂಖಚಕ್ರಗದಾಧರ, ಚತುರ್ಭುಜ, ಪೀತವಾಸ, ಶ್ಯಾಮ, ಪದ್ಮಾಯತೇಕ್ಷಣನನ್ನು ನಾನು ಕಾಣುತ್ತಿಲ್ಲ! ತನ್ನ ತೇಜಸ್ಸಿನಿಂದ ಮೊದಲೇ ಅವನು ಸುಟ್ಟಿದ್ದವರನ್ನು ನಂತರ ನನ್ನ ಶರಗಳನ್ನು ಗಾಂಡೀವದಿಂದ ಪ್ರಯೋಗಿಸಿ ವಿನಾಶಗೊಳಿಸುತ್ತಿದ್ದೆನು. ಅವನನ್ನು ನೋಡದೇ ನಾನು ನಿರಾಶನಾಗಿ ದುಃಖಿತನಾಗಿದ್ದೇನೆ. ನನ್ನ ಚೇತನವೇ ಉಡುಗಿಹೋಗಿ, ಶಾಂತಿಯು ದೊರೆಯದಾಗಿದೆ. ವೀರ ಜನಾರ್ದನನಿಲ್ಲದೇ ನಾನು ಜೀವಿಸಿರಲು ಬಯಸುವುದಿಲ್ಲ. ವಿಷ್ಣುವು ಹೊರಟುಹೋದನೆಂದು ಕೇಳುತ್ತಲೇ ನಾನೂ ಕೂಡ ದಿಕ್ಕುತೋಚದವನಾಗಿದ್ದೇನೆ. ನನ್ನ ಬಂಧುವೀರನನ್ನು ಕಳೆದುಕೊಂಡು ನಾನು ಶೂನ್ಯನಾಗಿ ಸುತ್ತುತ್ತಿದ್ದೇನೆ. ನನಗೆ ಶ್ರೇಯವಾದುದನ್ನು ಉಪದೇಶಿಸು!”

ವ್ಯಾಸನು ಹೇಳಿದನು:

“ಕುರುಶಾರ್ದೂಲ! ವೃಷ್ಣಿ-ಅಂಧಕ ಮಹಾರಥರು

ಬ್ರಾಹ್ಮಣರ ಶಾಪದಿಂದ ಸುಟ್ಟು ವಿನಾಶಹೊಂದಿದ್ದಾರೆ. ಅವರ ಕುರಿತು ಶೋಕಿಸಬೇಡ! ಅದು ಹಾಗೆಯೇ ಆಗಬೇಕಾಗಿತ್ತು. ಆ ಮಹಾತ್ಮರಿಗೆ ಹಾಗೆಯೇ ಆಗಬೇಕೆಂದು ವಿಧಿಯು ಕಲ್ಪಿಸಿತ್ತು. ಅದನ್ನು ತಡೆಯಬಲ್ಲವನಾಗಿದ್ದರೂ ಕೃಷ್ಣನು ಅದನ್ನು ಹಾಗೆಯೇ ಆಗಲು ಬಿಟ್ಟನು. ಏಕೆಂದರೆ ಸ್ಥಾವರ-ಜಂಗಮಗಳುಳ್ಳ ಈ ತ್ರೈಲೋಕ್ಯಗಳನ್ನೂ ಕೂಡ ಸಂಪೂರ್ಣವಾಗಿ ಬದಲಾಯಿಸಬಲ್ಲ ಕೃಷ್ಣನಿಗೆ ಮುನಿಗಳ ಶಾಪವು ಯಾವ ಲೆಖ್ಖದ್ದು? ನಿನ್ನ ಮೇಲಿನ ಸ್ನೇಹದಿಂದ ರಥದ ಮುಂದೆ ಹೋಗುತ್ತಿದ್ದ ಅವನು ಪುರಾಣ ಋಷಿ ಚಕ್ರಗದಾಧರ ಚತುರ್ಭುಜ ವಾಸುದೇವನು. ಭೂಮಿಯ ಭಾರವನ್ನು ಕಡಿಮೆ ಮಾಡಿ ಸರ್ವ ಜಗತ್ತನ್ನೂ ಬಿಡುಗಡೆಗೊಳಿಸಿ ಆ ಪೃಥುಲೋಚನನು ತನ್ನ ಉತ್ತಮ ಸ್ಥಾನವನ್ನು ಸೇರಿದ್ದಾನೆ. ನೀನಾದರೋ ಭೀಮ ಮತ್ತು ಯಮಳರ ಸಹಾಯದಿಂದ ದೇವತೆಗಳ ಮಹಾ ಕಾರ್ಯವನ್ನು ಮಾಡಿಕೊಟ್ಟಿದ್ದೀಯೆ. ನೀವು ಎಲ್ಲವನ್ನು ಸಾಧಿಸಿದ್ದೀರಿ ಮತ್ತು ಕೃತಕೃತ್ಯರಾಗಿದ್ದೀರಿ. ನೀವು ಹೊರಡುವ ಕಾಲವು ಬಂದೊದಗಿದೆಯೆಂದೂ ಅದೇ ನಿಮಗೆ ಶ್ರೇಯಸ್ಕರವೆಂದು

ನನ್ನ ಅಭಿಪ್ರಾಯ. ಬಲ, ಬುದ್ಧಿ, ತೇಜಸ್ಸು ಮತ್ತು ಸಾಧನೆಗಳು ಏಳಿಗೆಯ ಕಾಲದಲ್ಲಿ ಏಳ್ಗೆ ಹೊಂದುತ್ತವೆ ಮತ್ತು ಕಾಲ ವಿಪರ್ಯಾಸವಾದಾಗ ನಷ್ಟವಾಗುತ್ತವೆ. ಇರುವುದೆಲ್ಲವಕ್ಕೂ ಕಾಲವೇ ಮೂಲ. ಕಾಲವೇ ಸರ್ವಜಗತ್ತಿನ ಬೀಜ. ಕಾಲವೇ, ಬಯಸಿದಾಗ, ಪುನಃ ಎಲ್ಲವನ್ನೂ ಹಿಂದೆ ಸೆಳೆದುಕೊಳ್ಳುತ್ತದೆ. ಬಲವಂತನಾಗಿದ್ದವನು ಪುನಃ ದುರ್ಬಲನಾಗುತ್ತಾನೆ. ಒಡೆಯನಾಗಿದ್ದವನಿಗೆ ಪುನಃ ಇತರರು ಆಜ್ಞಾಪಿಸುತ್ತಾರೆ. ಮಾಡಬೇಕಾದುದನ್ನು ಮಾಡಿ ಮುಗಿಸಿದ ಅಸ್ತ್ರಗಳು ಇಂದು ಎಲ್ಲಿಂದ ಬಂದಿದ್ದವೋ ಅಲ್ಲಿಗೆ ಹೊರಟು ಹೋಗಿವೆ. ಮುಂದೆ ಕಾಲವು ಬಂದಾಗ ಪುನಃ ನಿನ್ನ ಕೈಗೆ ಅವು ಬರುತ್ತವೆ. ನೀವೂ ಕೂಡ ಕಾಲದ ಗತಿಯಲ್ಲಿ ಹೋಗುವುದು ಮುಖ್ಯ. ಇದರಲ್ಲಿಯೇ ನಿಮ್ಮ ಪರಮ ಶ್ರೇಯವಿದೆಯೆಂದು ನನಗನ್ನಿಸುತ್ತದೆ.”

ಅಮಿತತೇಜಸ್ವಿ ವ್ಯಾಸನ ಈ ಮಾತನ್ನು ಆಜ್ಞೆಯೆಂದು ಸ್ವೀಕರಿಸಿ ಅವನಿಂದ ಅಪ್ಪಣೆಪಡೆದು ಪಾರ್ಥನು ಹಸ್ತಿನಾಪುರಕ್ಕೆ ಬಂದನು. ಆ ವೀರನು ಪುರವನ್ನು ಪ್ರವೇಶಿಸಿ, ಯುಧಿಷ್ಠಿರನನ್ನು ಸಂದರ್ಶಿಸಿ, ಅವನಿಗೆ ವೃಷ್ಣಿ-ಅಂಧಕ ಜನರಿಗೆ ಆದುದೆಲ್ಲವನ್ನೂ ತಿಳಿಸಿದನು.

# ಮಹಾಪ್ರಸ್ಥಾನಿಕ ಪರ್ವ




## ಮಹಾಪ್ರಸ್ಥಾನ

### ಪಾಂಡವಪ್ರವ್ರಜನ

**ವೃಷ್ಣಿಗಳ ಮಹಾ ಕದನದ ಕುರಿತು ಕೇಳುತ್ತಲೇ ಕೌರವ ರಾಜ ಯುಧಿಷ್ಠಿರನು ಪ್ರಸ್ಥಾನದ ಕುರಿತು ನಿಶ್ಚಯಿಸಿ ಅರ್ಜುನನಿಗೆ**

ಇಂತೆಂದನು:

“ಮಹಾಮತೇ! ಕಾಲವು ಸರ್ವ ಭೂತಗಳನ್ನೂ ಬೇಯಿಸುತ್ತದೆ. ಕರ್ಮನ್ಯಾಸಮಾಡಬೇಕೆಂದು ನನಗನ್ನಿಸುತ್ತದೆ. ನೀನೂ ಕೂಡ ಇದರ ಕುರಿತು ಯೋಚಿಸಬೇಕಾಗಿದೆ.”

ಇದನ್ನು ಕೇಳಿದ ವೀರ್ಯವಾನ್ ಕೌಂತೇಯನು

“ಕಾಲವೇ ಕಾಲ!”

ಎಂದು ಹೇಳುತ್ತಾ ಜ್ಯೇಷ್ಠ ಭ್ರಾತರನ ಆ ಮಾತನ್ನು ಒಪ್ಪಿಕೊಂಡನು. ಅರ್ಜುನನ ಮತವನ್ನು ಅರಿತ ಭೀಮಸೇನ ಮತ್ತು ಯಮಳರು ಸವ್ಯಸಾಚಿಯು ಆಡಿದ ಆ ಮಾತನ್ನು ಒಪ್ಪಿಕೊಂಡರು. ಧರ್ಮಕಾಮನೆಯಿಂದ ಹೊರಟ ಯುಧಿಷ್ಠಿರನು ವೈಶ್ಯಾಪುತ್ರ ಯುಯುತ್ಸುವನ್ನು ಕರೆದು ಅವನಿಗೆ ರಾಜ್ಯವೆಲ್ಲವನ್ನೂ ಕೊಟ್ಟನು. ಸ್ವರಾಜ್ಯದಲ್ಲಿ ರಾಜ ಪರಿಕ್ಷಿತನನ್ನು ಅಭಿಷೇಕಿಸಿ, ದುಃಖಾರ್ತನಾದ ಪಾಂಡವಾಗ್ರಜ ರಾಜನು ಸುಭದ್ರೆಗೆ ಹೇಳಿದನು:

“ಈ ನಿನ್ನ ಮಗನ ಮಗನು ಕುರುರಾಜನಾಗುತ್ತಾನೆ. ಯದುಗಳಲ್ಲಿ ಕೊನೆಯವನಾಗಿ ಉಳಿದುಕೊಂಡಿರುವ ಈ ವಜ್ರನನ್ನೂ ರಾಜನನ್ನಾಗಿ ಮಾಡಿಯಾಗಿದೆ. ಪರಿಕ್ಷಿತನು

ಹಸ್ತಿನಾಪುರದಲ್ಲಿಯೂ ಯಾದವ ವಜ್ರನು
ಇಂದ್ರಪ್ರಸ್ಥದಲ್ಲಿಯೂ ರಾಜ್ಯವಾಳಲಿ. ರಾಜಾ ವಜ್ರನು ನಿನ್ನ
ರಕ್ಷಣೆಯಲ್ಲಿರಲಿ. ಅಧರ್ಮವೆಸಗುವ ಯೋಚನೆಯನ್ನೂ
ಮಾಡಬೇಡ!”

ಹೀಗೆ ಹೇಳಿ ಧರ್ಮಾತ್ಮ ಧರ್ಮರಾಜನು ತಾಯಿಯೊಂದಿಗೆ ಧೀಮತ ವಾಸುದೇವನ, ವೃದ್ಧ ಸೋದರ ಮಾವನ, ರಾಮಾದಿಗಳೆಲ್ಲರನ್ನೂ ಉದ್ದೇಶಿಸಿ ವಿಧಿವತ್ತಾಗಿ ಶುದ್ಧೋದಕಗಳಿಂದ ಶ್ರಾದ್ಧಗಳನ್ನು ನೆರವೇರಿಸಿದನು. ದ್ವಿಜಮುಖ್ಯರಿಗೆ ರತ್ನಗಳನ್ನೂ, ವಸ್ತ್ರಗಳನ್ನೂ, ಗ್ರಾಮಗಳನ್ನೂ, ಕುದುರೆ-ರಥಗಳನ್ನೂ, ಸ್ತ್ರೀಯರನ್ನೂ, ನೂರು ಸಾವಿರ ಗೋವುಗಳನ್ನೂ ದಾನಮಾಡಿದನು. ಆ ಭರತಸತ್ತಮನು ತನ್ನ ಗುರು ಕೃಪನನ್ನು ಧನ ಮತ್ತು ಮಾನ್ಯತೆಗಳಿಂದ ಪೂಜಿಸಿ ಅವನಿಗೆ ಪರಿಕ್ಷಿತನನ್ನು ಶಿಷ್ಯನನ್ನಾಗಿ ಒಪ್ಪಿಸಿದನು. ಅನಂತರ ಯುಧಿಷ್ಠಿರನು ತನ್ನ ಸರ್ವ ಪ್ರಜೆಗಳನ್ನೂ ಕರೆಯಿಸಿ ತಾನು ಮಾಡಲು ಹೊರಟಿರುವ ಎಲ್ಲದರ ಕುರಿತು ಹೇಳಿದನು. ಅವನ ಮಾತನ್ನು ಕೇಳಿದೊಡನೆಯೇ ಪೌರ ಮತ್ತು ಜಾನಪದ ಜನರು ತುಂಬಾ ಉದ್ವಿಗ್ನರಾಗಿ ಆ ಮಾತನ್ನು ಸ್ವೀಕರಿಸಲಿಲ್ಲ.

“ಹೀಗೆ ಮಾಡಬಾರದು! ಕಾಲದ ಪರ್ಯಾಯವನ್ನೂ

ಧರ್ಮವನ್ನೂ ತಿಳಿದ ಯಾವ ರಾಜನೂ ಹೀಗೆ
ಮಾಡುವುದಿಲ್ಲ!”

ಎಂದು ಅವರು ನರಾಧಿಪನಿಗೆ ಹೇಳಿದರು. ಆಗ ಧರ್ಮಾತ್ಮನು ಪೌರ ಜಾನಪದ ಜನರನ್ನು ಒಪ್ಪಿಸಿದನು. ಅನಂತರ ಸಹೋದರರು ಹೊರಡಲು ನಿಶ್ಚಯಿಸಿದರು.

ಆಗ ರಾಜಾ ಕೌರವ್ಯ ಧರ್ಮಪುತ್ರ ಯುಧಿಷ್ಠಿರನು ಅಂಗಗಳ ಮೇಲಿದ್ದ ಆಭರಣಗಳನ್ನು ತೆಗೆದಿಟ್ಟು ವಲ್ಕಲವಸ್ತ್ರವನ್ನು ಧರಿಸಿದನು.ಹಾಗೆಯೇ ಭೀಮಾರ್ಜುನರೂ, ಯಮಳರೂ, ಯಶಸ್ವಿನೀ ದ್ರೌಪದಿ ಎಲ್ಲರೂ ವಲ್ಕಲಗಳನ್ನು ಧರಿಸಿದರು. ವಿಧಿವತ್ತಾಗಿ ಅಂತ್ಯೇಷ್ಟಿಯನ್ನು ಮಾಡಿಸಿಕೊಂಡು ಆ ಅಗ್ನಿಗಳನ್ನು ನದಿಯಲ್ಲಿ ವಿಸರ್ಜಿಸಿ ನರಪುಂಗವರೆಲ್ಲರೂ ಹೊರಟರು. ಬಹುಕಾಲದ ಹಿಂದೆ ದ್ಯೂತದಲ್ಲಿ ಸೋತು ಹೋಗುತ್ತಿದ್ದಂತೆ ದ್ರೌಪದಿಯೊಡಗೂಡಿ ಹೊರಹೊರಟಿರುವ ಆ ನರರ್ಷಭರನ್ನು ನೋಡಿ ಸರ್ವ ಸ್ತ್ರೀಯರೂ ರೋದಿಸಿದರು. ಆದರೆ ವೃಷ್ಣಿಗಳ ವಿನಾಶವನ್ನು ಕಂಡು ಮತ್ತು ಯುಧಿಷ್ಠಿರನ ಮತವನ್ನು ಅರಿತು ಆ ಸರ್ವ ಭ್ರಾತೃಗಳು ಹೊರಟಿರುವ ವಿಷಯದಲ್ಲಿ ಅವರು ಹರ್ಷವನ್ನೂ ತಾಳಿದ್ದರು. ಐವರು ಸಹೋದರರು, ಆರನೆಯವಳಾಗಿ ಕೃಷ್ಣೆ, ಮತ್ತು ಏಳನೆಯದಾಗಿ ನಾಯಿಯೊಡನೆ ರಾಜನು

ಹಸ್ತಿನಾಪುರದಿಂದ ಹೊರಟನು. ಅಂತಃಪುರದವರೂ ಪೌರರೂ ಎಲ್ಲರೂ ಬಹಳ ದೂರ ಅವರನ್ನು ಅನುಸರಿಸಿದರು. ಅವರನ್ನು ಹಿಂದಿರುಗಿರೆಂದು ಹೇಳಲು ಯಾರೂ ಸಮರ್ಥರಾಗದೇ ನಗರವಾಸಿಗಳೆಲ್ಲರೂ ಹಿಂದಿರುಗಿದರು. ಕೃಪನೇ ಮೊದಲಾದವರು ಹಸ್ತಿನಾಪುರದಲ್ಲಿ ಯುಯುತ್ಸುವಿನ ಬಳಿ ಇದ್ದರು. ಭುಜಗಾತ್ಮಜೆ ಉಲೂಪಿಯು ಗಂಗೆಯನ್ನು ಪ್ರವೇಶಿಸಿದಳು. ಚಿತ್ರಾಂಗದೆಯು ಮಣಿಪೂರಪುರಕ್ಕೆ ಹೋದಳು. ಉಳಿದ ಅನ್ಯ ತಾಯಂದಿರು ಪರಿಕ್ಷಿತನನ್ನು ನೋಡಿಕೊಂಡರು.

ಮಹಾತ್ಮ ಪಾಂಡವರೂ ಯಶಸ್ವಿನೀ ದ್ರೌಪದಿಯೂ ಉಪವಾಸದಲ್ಲಿದ್ದುಕೊಂಡು ಪೂರ್ವಾಭಿಮುಖವಾಗಿ ಹೋದರು. ಯೋಗಯುಕ್ತರಾದ ಆ ಮಹಾತ್ಮರು ತ್ಯಾಗಧರ್ಮವನ್ನನುಸರಿಸಿ ಅನೇಕ ದೇಶ-ನದೀ-ಪರ್ವತಗಳನ್ನು ದಾಟಿದರು. ಎಲ್ಲರಿಗಿಂತ ಮುಂದೆ ಯುಧಿಷ್ಠಿರನು ಹೋಗುತ್ತಿದ್ದನು. ಅವನ ನಂತರ ಭೀಮ, ಅರ್ಜುನನು ಅವನ ನಂತರ ಮತ್ತು ಅವನ ಹಿಂದೆ ಯಥಾಕ್ರಮವಾಗಿ ಯಮಳರು ಹೋಗುತ್ತಿದ್ದರು. ಆರನೆಯವಳಾಗಿ ವರಾರೋಹೆ ಶ್ಯಾಮೆ ಪದ್ಮದಲೇಕ್ಷಣೆ ಸ್ತ್ರೀಶ್ರೇಷ್ಠೆ ದ್ರೌಪದಿಯು ಹೋಗುತ್ತಿದ್ದಳು. ಪಾಂಡವರು ವನಕ್ಕೆ ಹೊರಟಾಗ ಅವರನ್ನು ಹಿಂಬಾಲಿಸಿ ಒಂಟಿ ನಾಯಿಯೂ



ಹೊರಟಿತ್ತು. ಕ್ರಮೇಣವಾಗಿ ಆ ವೀರರು ಲೌಹಿತ್ಯವೆಂಬ ಸಮುದ್ರಕ್ಕೆ ಬಂದರು.

ಧನಂಜಯನು ತನ್ನ ಆ ದಿವ್ಯ ಧನುಸ್ಸು ಗಾಂಡೀವವನ್ನೂ ಎರಡು ಅಕ್ಷಯ ಭತ್ತಳಿಕೆಗಳನ್ನೂ ಬಿಟ್ಟಿರಲಿಲ್ಲ. ಆಗ ಅವರು ಪರ್ವತದಂತಹ ಪುರುಷಾಕೃತಿಯಲ್ಲಿ ಎದಿರು ಮಾರ್ಗಕ್ಕೆ ಅಡ್ಡಕಟ್ಟಿ ನಿಂತಿರುವ

ಅಗ್ನಿಯನ್ನು ನೋಡಿದರು. ಆಗ ದೇವ ಸಪ್ತಾರ್ಚಿಯು ಪಾಂಡವರಿಗೆ ಇದನ್ನು ಹೇಳಿದನು:

> "ವೀರ ಪಾಂಡುಸುತರೇ! ನನ್ನನ್ನು ಪಾವಕನೆಂದು ತಿಳಿಯಿರಿ! ಯುಧಿಷ್ಠಿರ ಮಹಾಬಾಹೋ! ಪರಂತಪ ಭೀಮಸೇನ! ಅರ್ಜುನ ಮತ್ತು ವೀರ ಅಶ್ವಿನೀಸುತರೇ! ನನ್ನ ಮಾತನ್ನು ಕೇಳಿ! ನಾನು ಅಗ್ನಿಯು! ಅರ್ಜುನ ಮತ್ತು ನಾರಾಯಣರ ಪ್ರಭಾವದಿಂದ ನಾನು ಖಾಂಡವವನ್ನು ದಹಿಸಿ ಭಸ್ಮಗೊಳಿಸಿದೆನು. ನಿನ್ನ ಈ ಭ್ರಾತಾ ಫಲ್ಗುನನು ಪರಮಾಯುಧ ಗಾಂಡಿವವನ್ನು ಇಲ್ಲಿಯೇ ಬಿಟ್ಟು ವನಕ್ಕೆ ತೆರಳಬೇಕು. ಅವನಿಗೆ ಇನ್ನು ಮುಂದೆ ಇದರ ಅವಶ್ಯಕತೆಯಿರುವುದಿಲ್ಲ. ಮಹಾತ್ಮ ಕೃಷ್ಣನಲ್ಲಿದ್ದ ಚಕ್ರರತ್ನವು ಆಗಲೇ ಹೊರಟು ಹೋಗಿ ಕಾಲಾಂತರದಲ್ಲಿ ಪುನಃ ಅವನ ಹಸ್ತವನ್ನು ಸೇರುತ್ತದೆ. ಹಿಂದೆ ಅರ್ಜುನನಿಗೋಸ್ಕರ ವರುಣನಿಂದ ನಾನು ಪಡೆದಿದ್ದ ಈ ಕಾರ್ಮುಕಶ್ರೇಷ್ಠ ಗಾಂಡೀವವನ್ನು ವರುಣನಿಗೆ ಹಿಂದಿರುಗಿಸಬೇಕಾಗಿದೆ."

ಆಗ ಅವನ ಸಹೋದರರೆಲ್ಲರೂ ಧನಂಜಯನನ್ನು ಒತ್ತಾಯಿಸಲು ಅವನು ಮಹಾ ಧನುಸ್ಸನ್ನೂ ಹಾಗೆಯೇ ಅಕ್ಷಯ ಭತ್ತಳಿಕೆಗಳನ್ನೂ



ನೀರಿನಲ್ಲಿ ಹಾಕಿದನು. ಆಗ ಅಗ್ನಿಯು ಅಲ್ಲಿಯೇ ಅಂತರ್ಧಾನನಾದನು. ಅನಂತರ ವೀರ ಪಾಂಡವರು ಅಲ್ಲಿಂದ ದಕ್ಷಿಣಾಭಿಮುಖರಾಗಿ ನಡೆದರು.

ಆ ಸಮುದ್ರದ ಉತ್ತರ ತೀರದಿಂದ ಹೊರಟು ಅವರು ಅದರ ದಕ್ಷಿಣ-ಪಶ್ಚಿಮ ದಿಕ್ಕಿನಲ್ಲಿ ಹೋದರು. ಅಲ್ಲಿಂದ ಪುನಃ ಪಶ್ಚಿಮ ದಿಕ್ಕಿಗೆ ತಿರುಗಿ ನಡೆದು ಅಲ್ಲಿ ಸಮುದ್ರದಲ್ಲಿ ಮುಳುಗಿಹೋಗಿದ್ದ ದ್ವಾರಕೆಯನ್ನು ನೋಡಿದರು. ಭೂಮಿಯನ್ನು ಪ್ರದಕ್ಷಿಣೆ ಮಾಡುತ್ತಿರುವಂತೆ ಆ ಯೋಗಧರ್ಮಿ ಭರತಸತ್ತಮರು ಪುನಃ ಉತ್ತರ ದಿಕ್ಕಿನಲ್ಲಿ ನಡೆದರು.

## ಭೀಮಾದಿಗಳ ಪತನ

ನಿಯತಾತ್ಮರೂ ಯೋಗಯುಕ್ತರೂ ಆಗಿ ಉತ್ತರ ದಿಕ್ಕಿನಲ್ಲಿ ಪ್ರಯಾಣಮಾಡುತ್ತಿದ್ದ ಅವರು ಮಹಾಗಿರಿ ಹಿಮಾಲಯವನ್ನು ಕಂಡರು. ಅದನ್ನೂ ಅತಿಕ್ರಮಿಸಿ ಹೋದ ಅವರು ಮರಳಿನ ಮರುಭೂಮಿಯೊಂದನ್ನು ನೋಡಿದರು. ಅದಕ್ಕಿಂತಲೂ ಆಚೆ ಮಹಾಶ್ಶೈಲ, ಪರ್ವತಶ್ರೇಷ್ಠ ಮೇರುವನ್ನು ನೋಡಿದರು. ಆ ಎಲ್ಲ ಯೋಗಧರ್ಮಿಗಳೂ ಹಾಗೆ ಶೀಘ್ರವಾಗಿ ಹೋಗುತ್ತಿರಲು, ಯೋಗಭ್ರಷ್ಟಳಾದ ಯಾಜ್ಞಸೇನಿಯು ಕೆಳಕ್ಕೆ ಬಿದ್ದಳು. ಹಾಗೆ ಕೆಳಕ್ಕೆ ಬಿದ್ದ

ಯಾಜ್ಞಸೇನಿಯನ್ನು ನೋಡಿ ಮಹಾಬಲ ಭೀಮಸೇನನು ಧರ್ಮರಾಜನಿಗೆ ಇಂತೆಂದನು:

> "ಪರಂತಪ! ರಾಜಪುತ್ರಿಯು ಎಂದೂ ಅಧರ್ಮದಿಂದ ನಡೆದುಕೊಂಡಿರಲಿಲ್ಲ. ರಾಜನ್! ಆದರೂ ಕೃಷ್ಣೆಯು ಏಕೆ ಬಿದ್ದಳು?"

ಯುಧಿಷ್ಠಿರನು ಹೇಳಿದನು:

> "ಧನಂಜಯನಲ್ಲಿ ವಿಶೇಷವಾಗಿ ಇವಳ ಪಕ್ಷಪಾತವಿತ್ತು. ಅದರ ಫಲವನ್ನೇ ಇಂದು ಅವಳು ಅನುಭವಿಸಿದ್ದಾಳೆ."

ಹೀಗೆ ಹೇಳಿ ಅವಳನ್ನು ನೋಡದೇ ಧರ್ಮಸುತ ನೃಪ ಧೀಮಾನ್ ಧರ್ಮಾತ್ಮ ಪುರುಷರ್ಷಭನು ಮನಸ್ಸನ್ನು ಕೇಂದ್ರೀಕರಿಸಿಟ್ಟುಕೊಂಡು ಮುಂದೆ ಹೋದನು. ಅನಂತರ ಧೀಮಾನ್ ಸಹದೇವನು ಮಹೀತಲದಲ್ಲಿ ಬಿದ್ದನು. ಅವನೂ ಬಿದ್ದುದನ್ನು ಕಂಡ ಭೀಮನು ರಾಜನಿಗೆ ಹೇಳಿದನು:

> "ಇವನು ಅಹಂಕಾರವಿಲ್ಲದೇ ನಮ್ಮೆಲ್ಲರ ಶುಶ್ರೂಷೆಮಾಡಿದನು. ಏಕೆ ಈ ಮಾದ್ರವತೀಪುತ್ರನು ಭೂಮಿಯ ಮೇಲೆ ಬಿದ್ದಿದ್ದಾನೆ?"

ಯುಧಿಷ್ಠಿರನು ಹೇಳಿದನು:

> “ಇವನು ತನಗೆ ಸಮಾನ ಪ್ರಾಜ್ಞನು ಬೇರೆ ಯಾರೂ ಇಲ್ಲವೆಂದು ಅಭಿಪ್ರಾಯಪಟ್ಟಿದ್ದನು. ಆ ದೋಷದಿಂದಲೇ ಈ ನೃಪತಾತ್ಮಜನು ಬಿದ್ದಿದ್ದಾನೆ.”

ಹೀಗೆ ಹೇಳಿ ಸಹದೇವನನ್ನು ಅಲ್ಲಿಯೇ ಬಿಟ್ಟು ಸಹೋದರರು ಮತ್ತು ನಾಯಿಯೊಂದಿಗೆ ಕೌಂತೇಯ ಯುಧಿಷ್ಠಿರನು ಮುಂದುವರೆದನು. ಕೃಷ್ಣೆ ಮತ್ತು ಪಾಂಡವ ಸಹದೇವರು ಬಿದ್ದುದನ್ನು ನೋಡಿ ಆರ್ತನಾದ ಬಂಧುಪ್ರಿಯ ಶೂರ ನಕುಲನೂ ಬಿದ್ದನು. ಆ ಸುಂದರ ವೀರ ನಕುಲನು ಬೀಳಲು ಭೀಮನು ಪುನಃ ರಾಜನಿಗೆ ಹೇಳಿದನು:

> “ಈ ಭ್ರಾತನು ಧರ್ಮಾತ್ಮನಾಗಿದ್ದು ಧರ್ಮದಿಂದ ಸ್ವಲ್ಪವೂ ಚ್ಯುತನಾಗಿರಲಿಲ್ಲ. ಹೇಳಿದ್ದನ್ನು ಮಾಡುತ್ತಿದ್ದನು. ಲೋಕದಲ್ಲಿ ಅಪ್ರತಿಮ ರೂಪವಂತನಾಗಿದ್ದನು. ಅಂಥಹ ನಕುಲನು ಭೂಮಿಯ ಮೇಲೆ ಬಿದ್ದಿದ್ದಾನೆ.”

ಭೀಮಸೇನನು ಹೀಗೆ ಹೇಳಲು ಧರ್ಮಾತ್ಮ ಸರ್ವಬುದ್ಧಿವಂತರಲ್ಲಿ ಶ್ರೇಷ್ಠ ಯುಧಿಷ್ಠಿರನು ನಕುಲನ ಕುರಿತು ಹೀಗೆ ಉತ್ತರಿಸಿದನು:

> “ರೂಪದಲ್ಲಿ ತನ್ನ ಸಮನಾಗಿರುವವರು ಯಾರೂ

ಇಲ್ಲವೆಂದೂ, ರೂಪದಲ್ಲಿ ತಾನೊಬ್ಬನೇ ಅಧಿಕನೆಂದೂ ಇವನ ನಂಬಿಕೆಯಾಗಿತ್ತು. ಆದುದರಿಂದ ನಕುಲನು ಬಿದ್ದಿದ್ದಾನೆ. ಬಾ ವೃಕೋದರ! ಯಾರಿಗೆ ಏನು ವಿಧಿವಿಹಿತವಾಗಿದೆಯೋ ಅದನ್ನು ಅವನು ಅವಶ್ಯವಾಗಿ ಪಡೆಯುತ್ತಾನೆ!"

ಅವರು ಕೆಳಗೆ ಬಿದ್ದುದನ್ನು ನೋಡಿ ಪಾಂಡವ ಶ್ವೇತವಾಹನ ಪರವೀರಹ ಅರ್ಜುನನೂ ಶೋಕಸಂತಪ್ತನಾಗಿ ಕೆಳಗೆ ಬಿದ್ದನು. ಆ ಶಕ್ರತೇಜಸ್ವಿ ದುರಾಧರ್ಷ ಪುರುಷವ್ಯಾಘ್ರನೂ ಸತ್ತು ಬೀಳಲು ಭೀಮನು ರಾಜನಿಗೆ ಹೇಳಿದನು:

"ಈ ಮಹಾತ್ಮನೂ ಅನೃತವಾಡಿದುದು ನನ್ನ ನೆನಪಿಗೆ ಬರುತ್ತಿಲ್ಲ. ಅವನು ಏಕೆ ಈ ರೀತಿಯ ವಿಕಾರನಾಗಿ ಭೂಮಿಯಮೇಲೆ ಬಿದ್ದನು?"

ಯುಧಿಷ್ಠಿರನು ಹೇಳಿದನು:

""ಒಂದೇ ದಿನದಲ್ಲಿ ನಾನು ಶತ್ರುಗಳನ್ನು ಜಯಿಸುತ್ತೇನೆ!" ಎಂದು ಅರ್ಜುನನು ಹೇಳಿದ್ದನು. ಆ ಶೂರಮಾನಿನಿಯು ಹಾಗೆ ಮಾಡದೇ ಇದ್ದುದರಿಂದ ಈಗ ಬಿದ್ದಿದ್ದಾನೆ. ಫಲ್ಗುನನು ಧನುರ್ಧಾರಿಗಳೆಲ್ಲರನ್ನೂ ಕೀಳಾಗಿ ಕಾಣುತ್ತಿದ್ದನು.

> ವೃದ್ಧಿಯನ್ನು ಬಯಸಿದವನು ತಾನು ಹೇಳಿದಂತೆ ಮಾಡಬೇಕಾಗುತ್ತದೆ.”

ಹೀಗೆ ಹೇಳಿ ರಾಜನು ಮುಂದುವರೆಯಲು ಭೀಮನೂ ಕೆಳಗೆ ಬಿದ್ದನು. ಕೆಳಗೆ ಬಿದ್ದ ಭೀಮನು ಧರ್ಮರಾಜ ಯುಧಿಷ್ಠಿರನಿಗೆ ಹೇಳಿದನು:

> “ರಾಜನ್! ನಿನ್ನ ಪ್ರಿಯನಾದ ನಾನೂ ಬಿದ್ದಿದ್ದೇನೆ. ನಿನಗೆ ತಿಳಿದಿದ್ದರೆ ಯಾವ ಕಾರಣದಿಂದ ನಾನು ಬಿದ್ದೆ ಎನ್ನುವುದನ್ನೂ ಹೇಳು!”

ಯುಧಿಷ್ಠಿರನು ಹೇಳಿದನು:

> “ನೀನು ತುಂಬಾ ತಿನ್ನುತ್ತಿದ್ದೆ ಮತ್ತು ನಿನ್ನ ಶಕ್ತಿಯ ಕುರಿತು ಕೊಚ್ಚಿಕೊಳ್ಳುತ್ತಿದ್ದೆ. ಇತರರನ್ನು ಕೀಳಾಗಿ ಕಾಣುತ್ತಿದ್ದೆ. ಇದರಿಂದಾಗಿ ನೀನು ಭೂಮಿಯಲ್ಲಿ ಬಿದ್ದಿದ್ದೀಯೆ!”

ಹೀಗೆ ಹೇಳಿ ಆ ಮಹಾಬಾಹುವು ತಿರುಗಿ ನೋಡದೇ ಮುಂದುವರೆದನು. ನಾನು ಮೊದಲೇ ಬಹಳವಾಗಿ ಹೇಳಿದ್ದಂತೆ ಈಗ ಆ ನಾಯಿಯೊಂದೇ ಅವನನ್ನು ಅನುಸರಿಸಿ ಹೋಗುತ್ತಿತ್ತು.

## ಇಂದ್ರ-ಯುಧಿಷ್ಠಿರ ಸಂವಾದ

ಆಗ ತನ್ನ ರಥದಿಂದ ಭೂಮಿ-ಆಕಾಶ ಎಲ್ಲವನ್ನೂ ಮೊಳಗಿಸುತ್ತ ಶಕ್ರನು ಆಗಮಿಸಿ ಪಾರ್ಥನಿಗೆ

> "ಮೇಲೇರು!"

ಎಂದನು. ಸಹೋದರರು ಬಿದ್ದುದನ್ನು ನೋಡಿ ಧರ್ಮರಾಜ ಯುಧಿಷ್ಠಿರನು ಶೋಕಸಂತಪ್ತನಾಗಿ ಸಹಸ್ರಾಕ್ಷನಿಗೆ ಈ ಮಾತನ್ನಾಡಿದನು:

> "ನನ್ನ ಸಹೋದರರು ಅಲ್ಲಿ ಬಿದ್ದಿದ್ದಾರೆ. ಅವರೂ ಕೂಡ ನನ್ನೊಡನೆ ಬರಲಿ. ಸುರೇಶ್ವರ! ಭ್ರಾತೃಗಳನ್ನು ಬಿಟ್ಟು ಸ್ವರ್ಗಕ್ಕೆ ಬರಲು ನಾನು ಬಯಸುವುದಿಲ್ಲ! ಸುಕುಮಾರೀ, ಸುಖಕ್ಕೆ ಅರ್ಹಳಾದ ರಾಜಪುತ್ರಿಯೂ ಕೂಡ ನಮ್ಮೊಡನೆ ಬರುವಂತಾಗಲೆಂದು ನೀನು ಅನುಮತಿಯನ್ನು ನೀಡಬೇಕು!"

ಇಂದ್ರನು ಹೇಳಿದನು:

> "ಮಗನೇ! ಮೊದಲೇ ಸ್ವರ್ಗಕ್ಕೆ ಹೋಗಿರುವ ಕೃಷ್ಣೆಯ ಸಹಿತ ಭ್ರಾತೃಗಳೆಲ್ಲರನ್ನೂ ನೀನು ನೋಡುವೆ. ದುಃಖಿಸಬೇಡ! ಅವರು ಮನುಷ್ಯದೇಹವನ್ನು ಇಲ್ಲಿಯೇ ಇಟ್ಟು ಹೋಗಿದ್ದಾರೆ. ನೀನು ನಿನ್ನ ಈ ಶರೀರದಿಂದಲೇ ಸ್ವರ್ಗಕ್ಕೆ ಹೋಗುತ್ತೀಯೆ. ಅದರಲ್ಲಿ ಸಂಶಯವಿಲ್ಲ!"



ಯುಧಿಷ್ಠಿರನು ಹೇಳಿದನು:

“ಭೂತಭವ್ಯೇಶ! ಈ ನಾಯಿಯು ನಿತ್ಯವೂ ನನ್ನ ಭಕ್ತನಾಗಿದ್ದಿತು. ಅದೂ ಕೂಡ ನನ್ನೊಡನೆ ಬರಲಿ. ಅದರ ಮೇಲೆ ನನಗೆ ದಯಾಭಾವವುಂಟಾಗಿದೆ!”

ಇಂದ್ರನು ಹೇಳಿದನು:

“ರಾಜನ್! ಇಂದು ನೀನು ನನ್ನ ಸಮನಾಗಿ ಅಮರತ್ವವನ್ನೂ, ಶ್ರೀಯನ್ನೂ, ವಿಶಾಲ ಬೃಹತ್ಕೀರ್ತಿಯನ್ನೂ ಸ್ವರ್ಗಸುಖಗಳನ್ನೂ ಪಡೆದಿದ್ದೀಯೆ. ಈ ನಾಯಿಯನ್ನು ತೊರೆ. ಇದರಲ್ಲಿ ಅಹಿಂಸೆಯೇನೂ ಇಲ್ಲ!”

ಯುಧಷ್ಠಿರನು ಹೇಳಿದನು:

“ಸಹಸ್ರನೇತ್ರ! ಆರ್ಯ! ಆರ್ಯನಾದವನಿಗೆ ಅನಾರ್ಯ ಕೃತ್ಯವನ್ನು ಮಾಡುವುದು ದುಷ್ಕರವಾದುದು, ಅಶಕ್ಯವಾದುದು. ಭಕ್ತಜನರನ್ನು ತೊರೆದು ನಾನು ಶ್ರೀಯನ್ನು ಸಂಪಾದಿಸುವಂತಾಗದಿರಲಿ!”

ಇಂದ್ರನು ಹೇಳಿದನು:

“ಧರ್ಮರಾಜ! ನಾಯಿಯ ಒಡೆಯರಿಗೆ ಸ್ವರ್ಗಲೋಕದಲ್ಲಿ ಸ್ಥಾನವಿಲ್ಲ. ಅವರ ಇಷ್ಟಿ-ಯಾಗಗಳ ಪುಣ್ಯಗಳನ್ನು ಕ್ರೋಧವಶ ರಾಕ್ಷಸರು ಅಪಹರಿಸುತ್ತಾರೆ. ಆದುದರಿಂದ ವಿಚಾರಿಸಿ ಕಾರ್ಯಮಾಡು. ನಾಯಿಯನ್ನು ಇಲ್ಲಿಯೇ ಬಿಟ್ಟುಬಿಡು. ಅದರಲ್ಲಿ ಅಹಿಂಸೆಯೇನೂ ಇಲ್ಲ.”

ಯುಧಿಷ್ಠಿರನು ಹೇಳಿದನು:

“ಭಕ್ತರನ್ನು ತ್ಯಜಿಸುವುದು ಅತ್ಯಂತ ಪಾಪವೆಂದು ಹೇಳುತ್ತಾರೆ. ಲೋಕದಲ್ಲಿ ಆ ಪಾಪವು ಬ್ರಹ್ಮವಧೆಯನ್ನು ಮಾಡಿದುದಕ್ಕೆ ಸಮಾನ. ಆದುದರಿಂದ ನನ್ನ ಸುಖಕ್ಕಾಗಿ ಇಂದು ಇದನ್ನು ನಾನು ತ್ಯಜಿಸುವುದಿಲ್ಲ!”

ಇಂದ್ರನು ಹೇಳಿದನು:

“ನಾಯಿಯು ನೋಡಿದ ದಾನ, ಯಜ್ಞ ಮತ್ತು ಆಹುತಿಗಳನ್ನು ಕ್ರೋಧವಶ ರಾಕ್ಷಸರು ಅಪಹರಿಸುತ್ತಾರೆ. ಆದುದರಿಂದ ಈ ನಾಯಿಯನ್ನು ತ್ಯಜಿಸು. ನಾಯಿಯನ್ನು ತ್ಯಜಿಸಿದರೆ ನಿನಗೆ ದೇವಲೋಕವು ದೊರೆಯುತ್ತದೆ. ವೀರ! ಸಹೋದರರನ್ನೂ ಪತ್ನಿ ಕೃಷ್ಣೆಯನ್ನೂ ಇಲ್ಲಿ ಬಿಟ್ಟು ನಿನ್ನದೇ ಕರ್ಮಗಳಿಂದ

ಲೋಕಗಳನ್ನು ಪಡೆದಿದ್ದೀಯೆ. ಈ ನಾಯಿಯನ್ನೇಕೆ ನೀನು ತ್ಯಜಿಸುತ್ತಿಲ್ಲ? ಸರ್ವವನ್ನೂ ತ್ಯಾಗಮಾಡಿರುವ ನೀನು ಈ ವಿಷಯದಲ್ಲಿ ಏಕೆ ಮೋಹಗೊಳ್ಳುತ್ತಿದ್ದೀಯೆ?"

ಯುಧಿಷ್ಠಿರನು ಹೇಳಿದನು:

"ಮೃತರಾದ ಮನುಷ್ಯರೊಡನೆ ಸ್ನೇಹವಾಗಲೀ ದ್ವೇಶವಾಗಲೀ ಇರಲಾರದು ಎನ್ನುವುದು ಲೋಕಗಳ ನಿಷ್ಠೆ. ಅವರನ್ನು ಜೀವಗೊಳಿಸಲೂ ನಾನು ಶಕ್ಯನಾಗಿರಲಿಲ್ಲ. ಆದುದರಿಂದ ನಾನು ಅವರನ್ನು ತೊರೆದೆ. ಅವರು ಜೀವಿತವಿರುವಾಗ ಎಂದೂ ನಾನು ಅವರನ್ನು ತೊರೆದಿರಲಿಲ್ಲ! ಶರಣಾಗತನಾದವನನ್ನು ಅವನ ಶತ್ರುವಿಗೆ ಒಪ್ಪಿಸುವುದು, ಸ್ತ್ರೀಯನ್ನು ವಧಿಸುವುದು, ಬ್ರಾಹ್ಮಣನದ್ದನ್ನು ಅಪಹರಿಸುವುದು, ಮತ್ತು ಮಿತ್ರದ್ರೋಹ ಈ ನಾಲ್ಕೂ ಭಕ್ತತ್ಯಾಗಕ್ಕೆ ಸಮವೆಂದು ನನ್ನ ಅಭಿಪ್ರಾಯ!"

ಧರ್ಮರಾಜನ ಆ ಮಾತನ್ನು ಕೇಳಿ ನಾಯಿಯ ರೂಪದಲ್ಲಿದ್ದ ಧರ್ಮ ಭಗವಾನನು ಪ್ರೀತಿಯುಕ್ತನಾಗಿ ಮಧುರವಾಕ್ಯಗಳಿಂದ ಅವನನ್ನು ಪ್ರಶಂಸಿಸುತ್ತಾ ಹೇಳಿದನು:



“ರಾಜೇಂದ್ರ! ತಂದೆಯಂತೆ ಉತ್ತಮ ನಡತೆ, ಬುದ್ಧಿ ಮತ್ತು ಸರ್ವಭೂತಗಳ ಮೇಲೆ ಅನುಕ್ರೋಶದಿಂದ ಕೂಡಿರುವ ನಿನ್ನ ಜನ್ಮವು ಉತ್ತಮವಾದುದು! ಹಿಂದೆ ದ್ವೈತವನದಲ್ಲಿ ನೀರಿಗಾಗಿ ನಿನ್ನ ಪರಾಕ್ರಾಂತ ಸಹೋದರರು ಹತರಾದಾಗ

> ನಾನು ನಿನ್ನನ್ನು ಪರೀಕ್ಷಿಸಿದ್ದೆ. ಮಾತೆಯರಲ್ಲಿ ಸಾಮ್ಯತೆಯನ್ನು ಬಯಸಿದ ನೀನು ನಿನ್ನ ಇಬ್ಬರು ಸಹೋದರರು ಭೀಮಾರ್ಜುನರನ್ನು ಬಿಟ್ಟು ನಕುಲನು ಜೀವಿತನಾಗಲಿ ಎಂದು ಬಯಸಿದೆ. ಈ ನಾಯಿಯು ಭಕ್ತನೆಂದು ನೀನು ದೇವರಥವನ್ನು ತೊರೆದೆ. ಆದುದರಿಂದ ಸ್ವರ್ಗದಲ್ಲಿ ಯಾರೂ ನಿನ್ನ ತುಲ್ಯರಾದವರು ಇಲ್ಲ! ಆದುದರಿಂದ ನೀನು ನಿನ್ನದೇ ಶರೀರದಲ್ಲಿ ಅಕ್ಷಯ ಲೋಕಗಳನ್ನೂ ದಿವ್ಯ ಅನುತ್ತಮ ಗತಿಯನ್ನೂ ಹೊಂದುತ್ತೀಯೆ."

ಅನಂತರ ಧರ್ಮ, ಶಕ್ರ, ಮರುತರು, ಅಶ್ವಿನಿಯರು, ದೇವತೆಗಳು, ಮತ್ತು ದೇವರ್ಷಿಗಳು ಪಾಂಡವನನ್ನು ರಥಕ್ಕೇರಿಸಿದರು. ಬೇಕಾದಲ್ಲಿ ಹೋಗ ಬಲ್ಲ ಆ ಸಿದ್ಧರೆಲ್ಲರೂ ತಮ್ಮ ತಮ್ಮ ವಿಮಾನಗಳಲ್ಲಿ ಪ್ರಯಾಣಿಸಿದರು. ಅವರೆಲ್ಲರೂ ಶುದ್ಧರೂ, ಪುಣ್ಯರೂ ಆಗಿದ್ದರು ಮತ್ತು ಪುಣ್ಯ ಮಾತು, ಯೋಚನೆ ಮತ್ತು ಕರ್ಮಗಳುಳ್ಳವರಾಗಿದ್ದರು. ಕುರುಕುಲೋದ್ವಹ ರಾಜನು ಆ ರಥದಲ್ಲಿ ಕುಳಿತು ತನ್ನ ತೇಜಸ್ಸಿನಿಂದ ಆಕಾಶ-ಪೃಥ್ವಿಗಳನ್ನು ಬೆಳಗಿಸುತ್ತಾ ಶೀಘ್ರವಾಗಿ ಮೇಲೆ ಹೋದನು. ಆಗ ದೇವತೆಗಳ ಮಧ್ಯದಲ್ಲಿದ್ದ ಸರ್ವಲೋಕಗಳನ್ನು ತಿಳಿದಿರುವ ಮಹಾವಾದೀ ಮಹಾತಪಸ್ವೀ ನಾರದನು ಉಚ್ಛಸ್ವರದಲ್ಲಿ ಈ

ಮಾತನ್ನಾಡಿದನು:

> “ಈ ಕುರುರಾಜನು ಈ ಮೊದಲು ಇಲ್ಲಿಗೆ ಆಗಮಿಸಿದ್ದ ಅ ಎಲ್ಲ ರಾಜರ್ಷಿಗಳ ಕೀರ್ತಿಯನ್ನು ಮರೆಸಿದ್ದಾನೆ. ತನ್ನ ನಡತೆಯಿಂದ ಸಂಪಾದಿಸಿದ ತೇಜಸ್ಸು ಮತ್ತು ಯಶಸ್ಸಿನಿಂದ ಇವನು ಲೋಕಗಳನ್ನೇ ತುಂಬಿಸಿಬಿಟ್ಟಿದ್ದಾನೆ. ಪಾಂಡವನಲ್ಲದೇ ಬೇರೆ ಯಾರೂ ಸ್ವಶರೀರದಿಂದ ಇವೆಲ್ಲವನ್ನೂ ಸಂಪಾದಿಸಿದುದನ್ನು ನಾನು ಕೇಳಿಲ್ಲ!”

ನಾರದನ ಮಾತನ್ನು ಕೇಳಿ ಧರ್ಮಾತ್ಮ ರಾಜನು ದೇವತೆಗಳಿಗೂ ಮತ್ತು ತನ್ನ ಪಕ್ಷದಲ್ಲಿದ್ದ ಪಾರ್ಥಿವರಿಗೂ ವಂದಿಸಿ ಹೀಗೆ ಹೇಳಿದನು:

> “ಶುಭವಾಗಿರಲಿ ಅಥವಾ ಪಾಪದ್ದಾಗಿರಲಿ ಇಂದು ನಾನು ನನ್ನ ಸಹೋದರರು ಎಲ್ಲಿದ್ದಾರೋ ಅದೇ ಲೋಕವನ್ನು ಪಡೆಯಲು ಇಚ್ಛಿಸುತ್ತೇನೆ. ಬೇರಾವ ಲೋಕವನ್ನೂ ಬಯಸುವುದಿಲ್ಲ!”

ರಾಜನ ಮಾತನ್ನು ಕೇಳಿ ದೇವರಾಜ ಪುರಂದರನು ಈ ದಯಾಯುಕ್ತ ಮಾತುಗಳನ್ನು ಯುಧಿಷ್ಠಿರನಿಗೆ ಹೇಳಿದನು:

> “ರಾಜನ್! ನಿನ್ನ ಕರ್ಮಗಳಿಂದ ಗಳಿಸಿರುವ ಈ ಶುಭ

ಸ್ಥಾನಗಳಲ್ಲಿ ವಾಸಿಸು. ಈಗಲೂ ಕೂಡ ಮಾನುಷ್ಯಕ ಸ್ನೇಹದಿಂದ ಸೆಳೆಯಲ್ಪಡುತ್ತಿದ್ದೀಯೆ! ಬೇರೆ ಯಾವ ಪುರುಷನೂ ಎಂದೂ ಗಳಿಸಿರದ ಪರಮ ಸಿದ್ಧಿಯನ್ನು ನೀನು ಗಳಿಸಿರುವೆ. ಕುರುನಂದನ! ನಿನ್ನ ಭ್ರಾತರಿಗೆ ಈ ಸ್ಥಾನವು ದೊರಕಿಲ್ಲ! ಈಗಲೂ ಮಾನುಷ ಭಾವವು ನಿನ್ನನ್ನು ಸ್ಪರ್ಶಿಸುತ್ತಿವೆ. ಇದು ಸ್ವರ್ಗ! ದೇವರ್ಷಿಗಳ ಮತ್ತು ಸಿದ್ಧರ ಆಲಯವಾದ ಈ ತ್ರಿದಿವವನ್ನು ನೋಡು!"

ದೇವತೆಗಳ ಈಶ್ವರ ಇಂದ್ರನು ಹೀಗೆ ಹೇಳುತ್ತಿದ್ದರೂ ಯುಧಿಷ್ಠಿರನು ಪುನಃ ಈ ಬುದ್ಧಿಪೂರ್ವಕ ಮಾತನ್ನಾಡಿದನು:

"ದೈತ್ಯಸಂಹಾರೀ! ಅವರಿಲ್ಲದೇ ನನಗೆ ಇಲ್ಲಿ ವಾಸಿಸಲು ಉತ್ಸಾಹವಿಲ್ಲ! ನನ್ನ ಸಹೋದರರು ಎಲ್ಲಿಗೆ ಹೋಗಿದ್ದಾರೋ ಮತ್ತು ಶ್ಯಾಮೆ, ಬುದ್ಧಿಸತ್ತ್ವಗುಣಾನ್ವಿತೆ, ಸ್ತ್ರೀಯರಲ್ಲಿ ಶ್ರೇಷ್ಠೆ, ನನ್ನ ಪ್ರಿಯೆ ದ್ರೌಪದಿಯು ಎಲ್ಲಿದ್ದಾಳೋ ಅಲ್ಲಿಗೆ ಹೋಗಲು ಬಯಸುತ್ತೇನೆ."

# ಸ್ವರ್ಗಾರೋಹಣ ಪರ್ವ




# ಸ್ವರ್ಗದಲ್ಲಿ ಯುಧಿಷ್ಠಿರಾದಿಗಳು

## ಸ್ವರ್ಗದಲ್ಲಿ ನಾರದವಾಕ್ಯ

ಧರ್ಮರಾಜ ಯುಧಿಷ್ಠಿರನು ತ್ರಿವಿಷ್ಟಪ ಸ್ವರ್ಗವನ್ನು ತಲುಪಿ ಅಲ್ಲಿ

ದುರ್ಯೋಧನನು ರಾಜಕಳೆಯಿಂದ, ಆದಿತ್ಯನಂತೆ ಪ್ರಕಾಶಿಸುತ್ತಾ ವೀರನ ವಿಜೃಂಭಣೆಯಿಂದ, ಪುಣ್ಯಕರ್ಮಿ ಸಾಧ್ಯರು ಮತ್ತು ದೇವತೆಗಳೊಂದಿಗೆ ಆಸನದಲ್ಲಿ ಕುಳಿತಿರುವುದನ್ನು ನೋಡಿದನು. ಅಲ್ಲಿ ದುರ್ಯೋಧನನನ್ನು ನೋಡಿ ಸಹಿಸಿಕೊಳ್ಳಲಾರದೇ ಯುಧಿಷ್ಠಿರನು ಸುಯೋಧನನು ಕಂಡೊಡನೆಯೇ ತಿರುಗಿ ಜೋರಾದ ಧ್ವನಿಯಲ್ಲಿ ಕೂಗಿ ಹೇಳಿದನು:

> “ನಾನು ದುರ್ಯೋಧನನೊಂದಿಗೆ ಈ ಲೋಕಗಳನ್ನು ಅನುಭವಿಸಲು ಬಯಸುವುದಿಲ್ಲ. ಮುಂದಾಲೋಚನೆಯಿಲ್ಲದ ಈ ಲುಬ್ಧನು ಮಾಡಿದ ಕರ್ಮಗಳಿಂದಾಗಿ ಭೂಮಿಯ ಸರ್ವ ಸುಹೃದಯರೂ ಬಾಂಧವರೂ ನಮ್ಮಿಂದ ಹಿಂಸೆಗೊಳಪಟ್ಟು ಹತರಾದರು. ಇವನಿಂದಾಗಿಯೇ ಹಿಂದೆ ನಾವು ಮಹಾವನದಲ್ಲಿ ಅನೇಕ ಕಷ್ಟಗಳನ್ನು ಅನುಭವಿಸಿದೆವು. ಇವನಿಂದಾಗಿ ನಮ್ಮ ಸುಂದರ ಪತ್ನಿ ಧರ್ಮಚಾರಿಣೀ ಪಾಂಚಾಲಿ ದ್ರೌಪದಿಯೂ ಕೂಡ ಸಭಾಮಧ್ಯದಲ್ಲಿ ಗುರುಸನ್ನಿಧಿಯಲ್ಲಿ ಕಷ್ಟಗಳಿಗೀಡಾದಳು. ದೇವತೆಗಳೇ! ನಿಮಗೆ ಮಂಗಳವಾಗಲಿ! ನಾನು ಸುಯೋಧನನನ್ನು ನೋಡಲು ಬಯಸುವುದಿಲ್ಲ. ನನ್ನ ಸಹೋದರರಿರುವಲ್ಲಿಗೆ ಹೋಗಲು

ಬಯಸುತ್ತೇನೆ.”

“ಹಾಗೆ ಹೇಳಬೇಡ!” ಎಂದು ನಾರದನು ನಗುತ್ತಾ ಹೇಳಿದನು.

“ರಾಜೇಂದ್ರ! ಈಗ ನಿನ್ನ ನಿವಾಸಸ್ಥಾನವಾದ ಈ ಸ್ವರ್ಗದಲ್ಲಿ ವಿರುದ್ಧವು ನಾಶವಾಗುತ್ತದೆ. ಯುಧಿಷ್ಠಿರ! ನೀನು ದುರ್ಯೋಧನನ ಕುರಿತು ಅಂಥಹ ಮಾತುಗಳನ್ನಾಡಬಾರದು. ನನ್ನ ಮಾತನ್ನು ಕೇಳು. ಇಲ್ಲಿ ರಾಜಾ ದುರ್ಯೋಧನನು ತ್ರಿದಶರೊಂದಿಗೆ ಮತ್ತು ಸ್ವರ್ಗವಾಸೀ ಇತರ ಸಾಧು ರಾಜಪ್ರವರರೊಂದಿಗೆ ಗೌರವಿಸಲ್ಪಡುತ್ತಾನೆ. ಯುದ್ಧದಲ್ಲಿ ತನ್ನ ದೇಹವನ್ನು ಆಹುತಿಯನ್ನಾಗಿತ್ತು ಅವನು ವೀರಲೋಕಗತಿಯನ್ನು ಪಡೆದನು. ಹಾಗೆಯೇ ಯುದ್ಧದಲ್ಲಿ ಸಮಾಹಿತರಾಗಿದ್ದ ಎಲ್ಲರೂ ಸುರಸಮರಾಗಿದ್ದಾರೆ. ಮಹಾಭಯವೊದಗಿದಾಗಲೂ ನಿರ್ಭಯನಾಗಿ ಕ್ಷತ್ರಧರ್ಮವನ್ನು ಪಾಲಿಸಿದ ಆ ಪೃಥಿವೀಪತಿಯು ಈ ಸ್ಥಾನವನ್ನು ಪಡೆದಿದ್ದಾನೆ. ಮಗನೇ! ದ್ಯೂತದಿಂದುಂಟಾದವುಗಳನ್ನು ನಿನ್ನ ಮನಸ್ಸಿಗೆ ತೆಗೆದುಕೊಳ್ಳಬಾರದು. ದ್ರೌಪದಿಗುಂಟಾದ ಪರಿಕ್ಲೇಶಗಳ ಕುರಿತೂ ನೀನು ಚಿಂತಿಸಬಾರದು. ದ್ಯೂತದ ಕಾರಣದಿಂದಾಗಿ

ಸಂಗ್ರಾಮದಲ್ಲಿ ಮತ್ತು ಇತರ ಸಂದರ್ಭಗಳಲ್ಲಿ ಆದ ಪರಿಕ್ಲೇಶಗಳನ್ನು ಇಲ್ಲಿ ನೀನು ಮರೆತುಬಿಡಬೇಕು. ಯಥಾನ್ಯಾಯವಾಗಿ ರಾಜಾ ದುರ್ಯೋಧನನನ್ನು ಭೇಟಿಮಾಡು. ಇದು ಸ್ವರ್ಗ; ಇಲ್ಲಿ ವೈರಿಗಳ್ಯಾರೂ ಇಲ್ಲ."

ನಾರದನು ಹೀಗೆ ಹೇಳಲು ಮೇಧಾವೀ ಕುರುರಾಜ ಯುಧಿಷ್ಠಿರನು ತನ್ನ ತಮ್ಮಂದಿರ ಕುರಿತು ಪ್ರಶ್ನಿಸುತ್ತಾ ಇಂತೆಂದನು:

"ಯಾರ ಕೃತ್ಯದಿಂದಾಗಿ  ಭೂಮಿಯ ರಾಜರೆಲ್ಲರೂ ತಮ್ಮ ಆನೆ-ರಥಗಳೊಂದಿಗೆ ನಷ್ಟರಾಗಿ ಹೋದರೋ ಮತ್ತು ನಾವು ವೈರ-ಸೇಡುಗಳ ಸಿಟ್ಟಿನಿಂದ ಸುಡುತ್ತಿದ್ದೆವೋ ಆ ಅಧರ್ಮಿ, ಪಾಪಿ ಮತ್ತು ತನ್ನ ಸುಹೃದಯರನ್ನು ನೋಯಿಸಿದ ದುರ್ಯೋಧನನೇ ಸನಾತನ ವೀರಲೋಕಗಳಿಗೆ ಬಂದಿದ್ದಾನೆಂದರೆ ವೀರ-ಮಹಾತ್ಮ-ಮಹಾವ್ರತ-ಸತ್ಯಪ್ರತಿಜ್ಞ-ಸತ್ಯವಾದಿ-ಲೋಕಶೂರರಾದ ನನ್ನ ತಮ್ಮಂದಿರು ಎಲ್ಲಿದ್ದಾರೆ? ಈಗ ಅವರಿಗೆ ಯಾವ ಲೋಕಗಳು ದೊರಕಿವೆ? ಅವುಗಳನ್ನು ನೋಡಲು ಬಯಸುತ್ತೇನೆ. ಕ್ಷತ್ರಧರ್ಮದಂತೆ ಶಸ್ತ್ರಗಳಿಂದ ಮೃತ್ಯುವನ್ನು ಪಡೆದ ಮಹಾತ್ಮ ಕೌಂತೇಯ ಸತ್ಯಸಂಗರ ಕರ್ಣ, ಧೃಷ್ಟದ್ಯುಮ್ನ, ಸಾತ್ಯಕಿ ಮತ್ತು ಧೃಷ್ಟದ್ಯುಮ್ನನ

ಮಕ್ಕಳನ್ನು ನೋಡಲು ಬಯಸುತ್ತೇನೆ. ಬ್ರಹ್ಮನ್! ನಾರದ! ಅವರು ಎಲ್ಲಿದ್ದಾರೆ? ಇಲ್ಲಿ ಕಾಣುತ್ತಿಲ್ಲವಲ್ಲ! ವಿರಾಟ, ದ್ರುಪದ, ಧೃಷ್ಟಕೇತು, ಪಾಂಚಲ್ಯ ಶಿಖಂಡಿ, ಎಲ್ಲ ದ್ರೌಪದೇಯರು, ಮತ್ತು ದುರ್ಧರ್ಷ ಅಭಿಮನ್ಯು ಇವರನ್ನು ನೋಡಲು ಬಯಸುತ್ತೇನೆ."

## ದೇವದೂತ ವಿಸರ್ಜನ

ಯುಧಿಷ್ಠಿರನು ಹೇಳಿದನು:

"ವಿಬುಧರೇ! ನಾನು ಇಲ್ಲಿ ಅಮಿತೌಜಸ ರಾಧೇಯ ಮತ್ತು ಮಹಾತ್ಮ ಯುಧಾಮನ್ಯು-ಉತ್ತಮೌಜಸ ಸಹೋದರರನ್ನೂ ಕಾಣುತ್ತಿಲ್ಲ! ನನಗೋಸ್ಕರವಾಗಿ ರಣವೆಂಬ ಅಗ್ನಿಯಲ್ಲಿ ತಮ್ಮ ಶರೀರಗಳನ್ನು ಆಹುತಿಯನ್ನಾಗಿತ್ತು ರಣದಲ್ಲಿ ಹತರಾದ, ವಿಕ್ರಮದಲ್ಲಿ ಶಾರ್ದೂಲಸಮರಾಗಿದ್ದ ಆ ಎಲ್ಲ ಮಹಾರಥ ರಾಜರು ಮತ್ತು ರಾಜಪುತ್ರರು ಎಲ್ಲಿದ್ದಾರೆ? ಆ ಪುರುಷಸತ್ತಮರೂ ಈ ಲೋಕವನ್ನು ಗೆದ್ದಿರಬೇಕಲ್ಲವೇ? ದೇವತೆಗಳೇ! ಒಂದುವೇಳೆ ಆ ಎಲ್ಲ ಮಹಾರಥರೂ ಈ ಲೋಕವನ್ನೇ ಪಡೆದಿದ್ದಾರೆ ಎಂದರೆ ಆ ಮಹಾತ್ಮರೊಂದಿಗೆ

ನಾನೂ ಕೂಡ ಇಲ್ಲಿಯೇ ಇರುತ್ತೇನೆಂದು ತಿಳಿಯಿರಿ. ಆದರೆ ಆ ನೃಪರು ಈ ಅಕ್ಷಯ ಶುಭ ಲೋಕವನ್ನು ಪಡೆಯಲಿಲ್ಲವೆಂದಾದರೆ ನನ್ನ ಬಂಧು-ಬಾಂಧವರಿಲ್ಲದ ಈ ಲೋಕದಲ್ಲಿ ನಾನು ವಾಸಿಸುವುದಿಲ್ಲ. ತರ್ಪಣವನ್ನು ಕೊಡುವ ಸಮಯದಲ್ಲಿ "ಕರ್ಣನಿಗೂ ತರ್ಪಣವನ್ನು ಕೊಡು!" ಎಂಬ ನನ್ನ ತಾಯಿಯ ಮಾತನ್ನು ಕೇಳಿದಾಗಲಿಂದ ನಾನು ಪರಿತಪಿಸುತ್ತಿದ್ದೇನೆ. ಸುರರೇ! ಆ ಅಮಿತೌಜಸನ ಪಾದಗಳು ಮಾತೆಯ ಪಾದಗಳಂತಿದ್ದುದನ್ನು ನೋಡಿಯೂ ಕೂಡ ನಾನು ಆ ಪರಬಲಾರ್ದನ ಕರ್ಣನನ್ನು ಅನುಸರಿಸಲಿಲ್ಲ ಎಂದು ಪುನಃ ಪುನಃ ಪರಿತಪಿಸುತ್ತಿದ್ದೇನೆ. ಕರ್ಣನು ನಮ್ಮ ಜೊತೆಗಿದ್ದಿದ್ದರೆ ಯುದ್ಧದಲ್ಲಿ ಶಕ್ರನೂ ಕೂಡ ನಮ್ಮನ್ನು ಜಯಿಸಲಾಗುತ್ತಿರಲಿಲ್ಲ! ಯಾರೆಂದು ತಿಳಿಯದೇ ನಾನು ಸವ್ಯಸಾಚಿಯಿಂದ ಕೊಲ್ಲಿಸಿದ ಆ ಸೂರ್ಯಜನು ಎಲ್ಲಿಯೇ ಇರಲಿ ಅವನನ್ನು ನೋಡಲು ಬಯಸುತ್ತೇನೆ. ನನ್ನ ಪ್ರಾಣಕ್ಕಿಂತಲೂ ಪ್ರಿಯನಾದ ಆ ಭೀಮವಿಕ್ರಾಂತ ಭೀಮನನ್ನು, ಇಂದ್ರನಂತಿದ್ದ ಅರ್ಜುನನನ್ನೂ, ಯಮರಂತಿದ್ದ ಯಮಳರನ್ನೂ, ಮತ್ತು ಧರ್ಮಚಾರಿಣೀ ಪಾಂಚಾಲಿಯನ್ನೂ

ನೋಡಲು ಬಯಸುತ್ತೇನೆ. ನಾನು ಇಲ್ಲಿ ಉಳಿಯಲು ಇಚ್ಛಿಸುವುದಿಲ್ಲ; ನಾನು ನಿಮಗೆ ಸತ್ಯವನ್ನೇ ಹೇಳುತ್ತಿದ್ದೇನೆ. ನಾನೇನು ಭ್ರಾತೃವಿಹೀನನಾಗಿದ್ದೇನೆಯೇ? ಅವರಿರುವುದೇ ನನಗೆ ಸ್ವರ್ಗ; ಇದು ನನ್ನ ಸ್ವರ್ಗವೆಂದು ಅನ್ನಿಸುವುದಿಲ್ಲ!”

ದೇವತೆಗಳು ಹೇಳಿದರು:

“ಪುತ್ರ! ಅಲ್ಲಿಗೇ ಹೋಗಲು ನಿನಗೆ ಶ್ರದ್ಧೆಯಿದ್ದರೆ ಹೋಗು! ದೇವರಾಜನ ಶಾಸನದಂತೆ ನಾವು ನಿನಗೆ ಪ್ರಿಯವಾಗುವ ರೀತಿಯಲ್ಲಿಯೇ ವರ್ತಿಸುತ್ತೇವೆ.”

ಹೀಗೆ ಹೇಳಿ ದೇವತೆಗಳು

“ಯುಧಿಷ್ಠಿರನಿಗೆ ಅವನ ಸುಹೃದಯರನ್ನು ತೋರಿಸು!” ಎಂದು ದೇವದೂತನಿಗೆ ಆದೇಶವನ್ನಿತ್ತರು. ಅನಂತರ ರಾಜಾ ಕುಂತೀಸುತನು ದೇವದೂತನೊಂದಿಗೆ ಆ ಪುರುಷರ್ಷಭರಿರುವಲ್ಲಿಗೆ ಹೋದನು. ಪಾಪಕರ್ಮಿಗಳು ಹೋಗುವ ಆ ದುರ್ಗಮ ಅಶುಭ ಮಾರ್ಗದಲ್ಲಿ ಮುಂದೆ ದೇವದೂತನೂ ಹಿಂದಿನಿಂದ ರಾಜ ಯುಧಿಷ್ಠಿರನೂ ಹೋದರು. ಪಾಪಕೃತರಿಂದ ತುಂಬಿ ದುರ್ಗಂಧವನ್ನು



ಸೂಸುತ್ತಿದ್ದ ಆ ಪ್ರದೇಶವನ್ನು ಘೋರ ಕತ್ತಲೆಯು ಆವರಿಸಿತ್ತು. ಪಾಚಿ-ಕಳೆಗಳಿರುವಲ್ಲಿ ಕೂದಲುಗಳಿದ್ದವು; ಕೆಸರಿರುವಲ್ಲಿ ರಕ್ತ-ಮಾಂಸಗಳಿದ್ದವು. ಝೊಯ್ಯೆಂದು ಕಡಿಯಲು ಬರುತ್ತಿದ್ದ ನೊಣ-ಸೊಳ್ಳೆ ಮತ್ತು ಇತರ ಕೀಟಗಳು ಎಲ್ಲಕಡೆಗಳಿಂದಲೂ ಬಂದು ಮುತ್ತಿಗೆ ಹಾಕುತ್ತಿದ್ದವು. ಎಲುಬು ಮತ್ತು ಕೂದಲುಗಳ ರಾಶಿಗಳ ಮೇಲೆ ಕೃಮಿ-ಕೀಟಗಳು ತುಂಬಿಹೋಗಿದ್ದವು. ಉರಿಯುತ್ತಿರುವ ಬೆಂಕಿಯು ಎಲ್ಲ ಕಡೆಗಳಿಂದ ಬೇಲಿಯ ರೂಪದಂತೆ ಸುತ್ತುವರೆದಿತ್ತು. ಕಾಗೆಗಳು ಮತ್ತು ಹದ್ದುಗಳು ಅಲ್ಲಿ ತುಂಬಿಹೋಗಿದ್ದವು. ಕೆಲವಕ್ಕೆ ಉಕ್ಕಿನಂತಹ ಕೊಕ್ಕುಗಳಿದ್ದವು. ಕೆಲವೊಕ್ಕೆ ಸೂಜಿಯಂತಹ ತೀಕ್ಷ್ಣ ಕೊಕ್ಕುಗಳಿದ್ದವು. ವಿಂದ್ಯಪರ್ವತದಷ್ಟು ದೊಡ್ಡದಾಗಿದ್ದ ಪ್ರೇತಗಳಿದ್ದವು. ಕೊಬ್ಬು ಮತ್ತು ರಕ್ತಗಳಿಂದ ಲೇಪಿತ ತುಂಡಾದ ಬಾಹುಗಳು, ತೊಡೆಗಳು, ಕೈಗಳು, ಕತ್ತರಿಸಲ್ಪಟ್ಟ ಹೊಟ್ಟೆಗಳು ಮತ್ತು ಕಾಲುಗಳು ಅಲ್ಲಲ್ಲಿ ಚೆಲ್ಲಿ ಬಿದ್ದಿದ್ದವು. ರೋಮಗಳನ್ನು ನಿಮಿರುವಂಥಹ ಕೀಟ-ದುರ್ಗಂಧಗಳಿಂದ ಕೂಡಿದ್ದ ಆ ಅಮಂಗಳಕರ ದಾರಿಯ ಮಧ್ಯೆ ಧರ್ಮಾತ್ಮ ರಾಜನು ಯೋಚಿಸುತ್ತಾ ಮುಂದುವರೆದನು. ಅಲ್ಲಿ ಅವನು

ಕುದಿಯುತ್ತಿರುವ ನೀರಿನಿಂದ ತುಂಬಿದ ದಾಟಲಸಾಧ್ಯ ನದಿಯನ್ನೂ, ತೀಕ್ಷ್ಣ ಖಡ್ಗಗಳಂತಿರುವ ಎಲೆಗಳುಳ್ಳ ವೃಕ್ಷಗಳ ವನವನ್ನೂ ನೋಡಿದನು. ಎಲ್ಲ ಕಡೆಗಳಲ್ಲಿ ಸುಡುತ್ತಿರುವ ಮರಳುರಾಶಿಯನ್ನೂ, ಕಬ್ಬಿಣದ ಬಂಡೆಗಳನ್ನೂ, ಕುದಿಯುತ್ತಿರುವ ಎಣ್ಣೆಯಿಂದ ತುಂಬಿದ್ದ ಲೋಹದ ಕೊಪ್ಪರಿಗೆಗಳನ್ನೂ, ಮುಟ್ಟಲು ಅಸಾಧ್ಯವಾದ ತೀಕ್ಷ್ಣ ಮುಳ್ಳುಗಳಿದ್ದ ಶಾಲ್ಮಲೀವನವನ್ನೂ, ಪಾಪಕರ್ಮಿಗಳ ಯಾತನೆಯನ್ನೂ ಕೌಂತೇಯನು ನೋಡಿದನು.

ಆ ದುರ್ಗಂಧವನ್ನು ನೋಡಿ ಅವನು ದೇವದೂತನಿಗೆ ಹೇಳಿದನು: “ಈ ರೀತಿಯ ಮಾರ್ಗದಲ್ಲಿ ನಾವು ಇನ್ನೂ ಎಷ್ಟು ದೂರ ಹೋಗಬೇಕು? ನನ್ನ ಆ ಸಹೋದರರು ಎಲ್ಲಿದ್ದಾರೆ ಎಂದು ನನಗೆ ಹೇಳಬೇಕು. ದೇವತೆಗಳ ಈ ಪ್ರದೇಶವು ಯಾವುದು ಎನ್ನುವುದನ್ನೂ ತಿಳಿಯಲು ಬಯಸುತ್ತೇನೆ!”

ಧರ್ಮರಾಜನಾಡಿದ ಮಾತನ್ನು ಕೇಳಿ ದೇವದೂತನು ಹಿಂದೆ ತಿರುಗಿ ಹೇಳಿದನು: “ಇಲ್ಲಿಗೇ ನೀನು ಬರಬೇಕಾಗಿದ್ದುದು! ನಾನೀಗ ಹಿಂದಿರುಗಬೇಕು. ದಿವೌಕಸರು ನನಗೆ ಹೀಗೆಂದೇ ಹೇಳಿದ್ದರು. ರಾಜೇಂದ್ರ! ಒಂದು ವೇಳೆ ನೀನು ಬಳಲಿದ್ದರೆ ನನ್ನೊಡನೆ ನೀನೂ

ಬರಬಹುದು!”

ವಾಸನೆಯಿಂದ ಮೂರ್ಛಿತನಾಗಿ ನಿರ್ವಿಣ್ಣನಾಗಿದ್ದ ಯುಧಿಷ್ಠಿರನು ಹಿಂದಿರುಗಲು ನಿರ್ಧರಿಸಿ ಹಿಂದಕ್ಕೆ ತಿರುಗಿದನು. ದುಃಖಶೋಕಸಮನ್ವಿತನಾದ ಆ ಧರ್ಮಾತ್ಮನು ಹಿಂದೆ ತಿರುಗುತ್ತಲೇ ಎಲ್ಲ ಕಡೆಗಳಿಂದ ದೀನಧ್ವನಿಯಲ್ಲಿ ತನ್ನನ್ನು ಉದ್ದೇಶಿಸಿ ಕೂಗಿ ಕರೆಯುವುದನ್ನು ಕೇಳಿದನು.

> “ಭೋ! ಭೋ! ಧರ್ಮಜ! ರಾಜರ್ಷೇ! ಪುಣ್ಯವಂತ ಪಾಂಡವ! ನಮ್ಮ ಅನುಗ್ರಹಾರ್ಥವಾಗಿ ಒಂದು ಕ್ಷಣಕಾಲ ನಿಲ್ಲು! ನಿನ್ನೊಂದಿಗೆ ಪುಣ್ಯಗಂಧವುಳ್ಳ ಗಾಳಿಯು ಇಲ್ಲಿ ಬೀಸತೊಡಗಿದೆ. ನಿನ್ನ ಆ ಸುವಾಸನೆಯಿಂದ ನಮಗೆ ಸುಖವೆನಿಸುತ್ತಿದೆ! ಇನ್ನೂ ಸ್ವಲ್ಪಸಮಯ ಇಲ್ಲಿ ನಿಲ್ಲು. ಅಷ್ಟು ಸಮಯ ನಿನ್ನನ್ನು ನೋಡಿ ನಾವು ಸುಖವನ್ನು ಅನುಭವಿಸುತ್ತೇವೆ. ಸ್ವಲ್ಪಹೊತ್ತು ಇಲ್ಲಿಯೇ ಇರು. ನೀನಿಲ್ಲಿದ್ದರೆ ಈ ಯಾತನೆಗಳು ನಮ್ಮನ್ನು ಬಾಧಿಸುವುದಿಲ್ಲ!”

ಆ ಸ್ಥಳದ ಎಲ್ಲ ಕಡೆಗಳಿಂದ ಈ ರೀತಿಯ ದೈನ್ಯ-ವೇದನೆಗಳಿಂದ ತುಂಬಿದ ಬಹುವಿಧದ ಮಾತುಗಳನ್ನು ಅವನು ಕೇಳಿದನು. ದೀನರಾಗಿ

ಕೂಗುತ್ತಿದ್ದ ಅವರ ಆ ಮಾತುಗಳನ್ನು ಕೇಳಿ ದಯಾವಂತ ಯುಧಿಷ್ಠಿರನು "ಅಯ್ಯೋ ಕಷ್ಟವೇ!" ಎಂದು ಹೇಳಿ ಅಲ್ಲಿಯೇ ನಿಂತಕೊಂಡನು. ಆ ಸ್ವರಗಳನ್ನು ಹಿಂದೆ ಕೂಡ ಪುನಃ ಪುನಃ ಕೇಳಿದ್ದರೂ ದುಃಖದಿಂದ ಬಳಲಿದ್ದವರ ಆ ಧ್ವನಿಗಳು ಯಾರದ್ದೆಂದು ಪಾಂಡವನಿಗೆ ಗುರುತಿಸಲಾಗಲಿಲ್ಲ. ಹಾಗೆ ಯಾರು ಮಾತನಾಡುತ್ತಿದ್ದಾರೆಂದು ತಿಳಿಯದ ಧರ್ಮಪುತ್ರ ಯುಧಿಷ್ಠಿರನು "ನೀವು ಯಾರು ಮತ್ತು ಇಲ್ಲಿ ಏಕೆ ಇದ್ದೀರಿ?" ಎಂದು ಕೇಳಿದನು. ಅನಂತರ ಎಲ್ಲ ಕಡೆಗಳಿಂದ ಎಲ್ಲರೂ "ನಾನು ಕರ್ಣ!" "ನಾನು ಭೀಮಸೇನ!" "ನಾನು ಅರ್ಜುನ!" "ನಾನು ನಕುಲ, ಸಹದೇವ!" "ನಾನು ಧೃಷ್ಟದ್ಯುಮ್ನ, ದ್ರೌಪದೀ, ದ್ರೌಪದೇಯರು!" ಇವೇ ಮುಂತಾಗಿ ಕೂಗುತ್ತಿರುವುದನ್ನು ಅವನು ಕೇಳಿದನು.

ಅಂತಹ ಪ್ರದೇಶದಲ್ಲಿ ಅವರ ಆ ಮಾತುಗಳನ್ನು ಕೇಳಿ ರಾಜನು ತನ್ನಲ್ಲಿಯೇ ವಿಮರ್ಶಿಸಿದನು:

> "ದೈವವು ಹೀಗೇಕೆ ಮಾಡಿತು? ಮಹಾತ್ಮರಾದ ಈ ಕರ್ಣನಾಗಲೀ, ಸುಮಧ್ಯಮೆ ಪಾಂಚಾಲೀ ದ್ರೌಪದಿಯಾಗಲೀ ಯಾವ ಕಲುಷ ಕರ್ಮಗಳನ್ನು ಮಾಡಿದ್ದಾರೆಂದು ಪಾಪಗಂಧದಿಂದ ಕೂಡಿರುವ ಈ ದಾರುಣ ಸ್ಥಳದಲ್ಲಿದ್ದಾರೆ?

ಈ ಎಲ್ಲ ಪುಣ್ಯಕರ್ಮಿಗಳೂ ಮಾಡಿದ ಪಾಪಕರ್ಮಗಳ್ಯಾವುವೂ ನನಗೆ ಗೊತ್ತಿಲ್ಲ! ಧೃತರಾಷ್ಟ್ರ ಪುತ್ರ ಪಾಪಿ ರಾಜಾ ಸುಯೋಧನನು ಏನು ಮಾಡಿದನೆಂದು ತನ್ನ ಅನುಯಾಯಿಗಳೆಲ್ಲರೊಂದಿಗೆ ಸಂಪತ್ತು-ಸಂತೋಷಗಳಿಂದ ಮೆರೆಯುತ್ತಿದ್ದಾನೆ? ಇಂದ್ರನೋ ಎನ್ನುವಂತೆ ಲಕ್ಷ್ಮೀವಂತನಾಗಿ ಅವನು ಅಲ್ಲಿ ಪರಮಪೂಜಿತನಾಗಿದ್ದಾನೆ. ಸರ್ವಧರ್ಮವಿದ, ಶೂರ, ಸತ್ಯ, ಆಗಮಪರಾಯಣ, ಕ್ಷಾತ್ರಧರ್ಮಪರಾಯಣ, ಪ್ರಾಜ್ಞ, ಭೂರಿದಕ್ಷಿಣೆಗಳನ್ನಿತ್ತು ಯಾಗನಡೆಸಿದ ನಾವು ಈ ನರಕದಲ್ಲಿದ್ದೇವೆಂದರೆ ಇದೆಂತಹ ವಿಕಾರ? ನಾನೇನು ಸ್ವಪ್ನವನ್ನು ಕಾಣುತ್ತಿದ್ದೇನೆಯೇ ಅಥವಾ ಎಚ್ಚರವಾಗಿಯೇ ಇದ್ದೇನೆಯೇ? ಎಚ್ಚರದಿಂದಿರುವೆನೆಂದು ಅನಿಸಿದರೂ ಚೇತನವು ಉಡುಗಿಹೋದಂತಾಗಿದೆ. ಇಂದು ನಾನು ಹುಚ್ಚನಾಗಿಬಿಟ್ಟಿದ್ದೇನೆಯೇ? ಅಯ್ಯೋ! ಈ ಚಿತ್ತವಿಕಾರವೇ!”

ದುಃಖಶೋಕಸಮಾವಿಷ್ಟನಾದ, ಚಿಂತೆಯಿಂದ ವ್ಯಾಕುಲಿತನಾಗಿದ್ದ ರಾಜಾ ಯುಧಿಷ್ಠಿರನು ಈ ರೀತಿ ಬಹುವಿಧಗಳಲ್ಲಿ ವಿಮರ್ಶಿಸಿದನು. ಕೂಡಲೇ ತೀವ್ರ ಕ್ರೋಧಿತನಾಗಿ ನೃಪ ಧರ್ಮಸುತ ಯುಧಿಷ್ಠಿರನು ದೇವತೆಗಳನ್ನೂ, ಧರ್ಮನನ್ನೂ ಹಳಿದನು. ತೀವ್ರ ದುರ್ಗಂಧದಿಂದ

ಸಂತಪ್ತನಾದ ಅವನು ದೇವದೂತನಿಗೆ ಹೇಳಿದನು:

> “ದೂತ! ನಿನ್ನನ್ನು ಕಳುಹಿಸಿದವರ ಬಳಿ ನೀನು ಹೋಗು! ನಾನು ಅಲ್ಲಿಗೆ ಬರುವುದಿಲ್ಲ. ಇಲ್ಲಿಯೇ ಉಳಿದುಕೊಂಡಿದ್ದೇನೆಂದು ಅವರಿಗೆ ಹೇಳು. ನಾನು ಇಲ್ಲಿ ಇರುವುದರಿಂದ ನನ್ನ ಸಹೋದರರು ಸುಖವನ್ನನುಭವಿಸುತ್ತಿದ್ದಾರೆ!”

ಧೀಮಂತ ಪಾಂಡುಪುತ್ರನು ಹೀಗೆ ಹೇಳಲು ದೂತನು ದೇವರಾಜ ಶತ್ರಕ್ರತುವಿರುವಲ್ಲಿಗೆ ಹೋದನು. ಧರ್ಮಪುತ್ರನು ಹೇಳಿದ್ದಂತೆ ಧರ್ಮರಾಜನ ಇಂಗಿತವೆಲ್ಲವನ್ನೂ ಅವನಿಗೆ ನಿವೇದಿಸಿದನು.

## ಯುಧಿಷ್ಠಿರ ಸ್ವರ್ಗಾರೋಹಣ

ಪಾರ್ಥ ಧರ್ಮರಾಜ ಯುಧಿಷ್ಠಿರನು ಅಲ್ಲಿ ಒಂದು ಕ್ಷಣಮಾತ್ರ ನಿಂತಿದ್ದಷ್ಟೇ ಶಕ್ರನನ್ನು ಮುಂದಿರಿಸಿಕೊಂಡ ದೇವತೆಗಳು ಅಲ್ಲಿಗೆ ಆಗಮಿಸಿದರು. ಸ್ವಯಂ ಧರ್ಮನು ದೇಹಧಾರಿಯಾಗಿ ರಾಜನನ್ನು ನೋಡಲು ಕುರುರಾಜ ಯುಧಿಷ್ಠಿರನು ಎಲ್ಲಿದ್ದನೋ ಅಲ್ಲಿಗೆ ಆಗಮಿಸಿದನು. ಆ ಪುಣ್ಯ ಜನ್ಮ-ಕರ್ಮಗಳ ದೇವತೆಗಳು ಅಲ್ಲಿಗೆ ಆಗಮಿಸುತ್ತಲೇ ಅವರ ಹೊಳೆಯುತ್ತಿರುವ ದೇಹಗಳಿಂದಾಗಿ ಅಲ್ಲಿದ್ದ

ಕತ್ತಲೆಯು ಹೊರಟುಹೋಯಿತು. ಪಾಪಕರ್ಮಿಗಳ ಯಾತನೆಗಳೂ, ವೈತರಣೀ ನದಿಯೂ, ಮುಳ್ಳಿನ ಮರಗಳೂ ಅಲ್ಲಿಂದ ಅದೃಶ್ಯವಾದವು. ಅಲ್ಲಿ ಸುತ್ತಲೂ ಇದ್ದಿದ್ದ ಭಯಾನಕ ಲೋಹದ ಕೊಪ್ಪರಿಗೆಗಳೂ, ಭಯಾನಕ ಶಿಲೆಗಳೂ, ವಿಕೃತ ಶರೀರಗಳೂ ದೃಶ್ಯಗಳೂ ಅದೃಶ್ಯವಾದುದನ್ನು ರಾಜಾ ಕೌಂತೇಯನು ನೋಡಿದನು. ಕೂಡಲೇ ತಂಪಾದ ಮಂಗಳಕರ ಪುಣ್ಯಸುವಾಸನೆಯುಳ್ಳ ಶೀತಲ ಗಾಳಿಯು ಅಲ್ಲಿ ಬಂದ ದೇವತೆಗಳ ಕಡೆಯಿಂದ ಬೀಸತೊಡಗಿತು. ಮಹಾತೇಜಸ್ವಿ ರಾಜಾ ಧರ್ಮಪುತ್ರನು ಎಲ್ಲಿ ನಿಂತಿದ್ದನೋ ಅಲ್ಲಿಗೆ ಶಕ್ರನೊಂದಿಗೆ ವಾಯು, ವಸವರು, ಅಶ್ವಿನರು, ಸಾಧ್ಯರು, ರುದ್ರರು, ಆದಿತ್ಯರು, ಅನ್ಯ ದೇವತೆಗಳು, ಸಿದ್ಧರು, ಮತ್ತು ಪರಮ ಋಷಿಗಳೆಲ್ಲರೂ ಬಂದು ಸೇರಿದರು. ಆಗ ಪರಮ ಕಾಂತಿಯುಕ್ತ ಸುರಪತಿ ಶಕ್ರನು ಯುಧಿಷ್ಠಿರನಿಗೆ ಈ ಸಾಂತ್ವಪೂರ್ವಕ ಮಾತುಗಳನ್ನಾಡಿದನು:

> “ಯುಧಿಷ್ಠಿರ! ಮಹಾಬಾಹೋ! ಇಲ್ಲಿ ಬಾ! ಎಲ್ಲವೂ ಮುಗಿಯಿತು! ನಿನಗೆ ಸಿದ್ಧಿಯು ಪ್ರಾಪ್ತವಾಯಿತು. ಅಕ್ಷಯ ಲೋಕಗಳೂ ನಿನ್ನದಾಗಿವೆ! ನೀನು ಸಿಟ್ಟಾಗಬಾರದು! ನನ್ನ ಮಾತನ್ನು ಕೇಳು! ಮಗೂ! ಎಲ್ಲ ರಾಜರೂ ನರಕವನ್ನು ನೋಡುವುದು ಅವಶ್ಯಕವಾಗಿದೆ! ಶುಭ ಮತ್ತು ಅಶುಭ

ಕರ್ಮಗಳೆಂಬ ಎರಡು ರಾಶಿಗಳಿರುತ್ತವೆ. ಮೊದಲು ಸುಕೃತಗಳ ಪುಣ್ಯಗಳನ್ನು ಭೋಗಿಸುವವರು ಅನಂತರ ನರಕವನ್ನು ಕಾಣುತ್ತಾರೆ. ಆದರೆ ಮೊದಲೇ ನರಕವನ್ನು ಅನುಭವಿಸಿದವರು ಅನಂತರ ಸ್ವರ್ಗವನ್ನು ಸೇರುತ್ತಾರೆ. ತುಂಬಾ ಪಾಪಕರ್ಮಗಳನ್ನು ಮಾಡಿರುವವನು ಮೊದಲು ಸ್ವರ್ಗವನ್ನು ಅನುಭವಿಸುತ್ತಾನೆ. ನಿನ್ನ ಶ್ರೇಯಸ್ಸನ್ನು ಬಯಸಿದ ನಾನೇ ನೀನು ಇಲ್ಲಿಗೆ ಬರುವಂತೆ ಮಾಡಿದೆ. ಅವನ ಮಗನ ವಿಷಯದಲ್ಲಿ ನೀನು ದ್ರೋಣನೊಂದಿಗೆ ಮೋಸದಲ್ಲಿ ನಡೆದುಕೊಂಡೆ. ಆದುದರಿಂದ ಈ ನರಕವನ್ನು ನೋಡಿ ನೀನೂ ಕೂಡ ಮೋಸಹೋದೆ! ನಿನ್ನಂತೆಯೇ ಭೀಮ, ಪಾರ್ಥ, ಯಮಳರು ಮತ್ತು ದ್ರೌಪದೀ ಕೃಷ್ಣೆ ಇವರುಗಳು ಕೂಡ ಮೋಸದ ನರಕಕ್ಕೆ ಹೋಗಿದ್ದರು. ಬಾ! ರಣದಲ್ಲಿ ಹತರಾದ ನಿನ್ನ ಪಕ್ಷದ ಪಾರ್ಥಿವರೆಲ್ಲರೂ ಪಾಪಗಳಿಂದ ಮುಕ್ತರಾಗಿ ಸ್ವರ್ಗವನ್ನು ಸೇರಿರುವುದನ್ನು ನೋಡು! ಯಾರಿಗಾಗಿ ನೀನು ಪರಿತಪಿಸುತ್ತಿದ್ದೆಯೋ ಆ ಮಹೇಷ್ವಾಸ, ಸರ್ವಶಸ್ತ್ರಧಾರಿಗಳಲ್ಲಿ ಶ್ರೇಷ್ಠ ಕರ್ಣನು ಪರಮ ಸಿದ್ಧಿಯನ್ನು ಹೊಂದಿದ್ದಾನೆ. ಸ್ವಸ್ಥಾನದಲ್ಲಿ ಕುಳಿತಿರುವ ಆ ಪುರುಷವ್ಯಾಘ್ರ

ಆದಿತ್ಯತನಯನನ್ನು ನೋಡಿ ಶೋಕವನ್ನು ತೊರೆ! ನಿನ್ನ ಇತರ ಸಹೋದರರೂ ನಿನ್ನ ಪಕ್ಷದಲ್ಲಿದ್ದ ಪಾರ್ಥಿವರೂ ತಮ್ಮ ತಮ್ಮ ಸ್ಥಾನಗಳನ್ನು ಪಡೆದು ಕುಳಿತಿರುವುದನ್ನು ನೋಡಿ ನಿನ್ನ ಮಾನಸಿಕ ಜ್ವರವನ್ನು ತೊರೆ! ಮೊದಲೇ ನರಕವನ್ನು ಅನುಭವಿಸಿದ ನೀನು ಈ ನಂತರ ಶೋಕವನ್ನು ತೊರೆದು ನಿರಾಮಯನಾಗಿ ನನ್ನೊಡನೆ ವಿಹರಿಸು! ಪಾಂಡವ! ತಪಸ್ಸು, ದಾನ ಮತ್ತು ಪುಣ್ಯ ಕರ್ಮಗಳಿಂದ ಸ್ವಯಂ ನೀನೇ ಜಯಿಸಿರುವ ಫಲವನ್ನು ಭೋಗಿಸು. ಶುಭ್ರವಸ್ತ್ರಗಳನ್ನುಟ್ಟ ದೇವಗಂಧರ್ವರು, ದಿವ್ಯ ಅಪ್ಸರೆಯರು ದಿವಿಯಲ್ಲಿ ಇಂದು ಕಲ್ಯಾಣನಾದ ನಿನ್ನನ್ನು ಸೇವಿಸುತ್ತಾರೆ! ರಾಜಸೂಯ ಯಾಗದಿಂದ ಪಡೆದ ಮತ್ತು ಅಶ್ವಮೇಧದಿಂದ ವೃದ್ಧಿಯಾದ ಮಹಾಲೋಕಗಳನ್ನೂ ತಪಸ್ಸಿನ ಮಹಾಫಲವನ್ನೂ ಭೋಗಿಸು! ನಿನ್ನ ಲೋಕವು ಇತರ ರಾಜರ ಲೋಕಗಳಿಗಿಂತ ಮೇಲಿದೆ. ಹರಿಶ್ಚಂದ್ರನಿಗೆ ಸಮನಾದ ಲೋಕದಲ್ಲಿ ನೀನು ವಿಹರಿಸುತ್ತೀಯೆ! ಎಲ್ಲಿ ರಾಜರ್ಷಿ ಮಾಂಧಾತನಿರುವನೋ, ಎಲ್ಲಿ ರಾಜಾ ಭಗೀರಥನಿರುವನೋ, ಎಲ್ಲಿ ದುಷ್ಯಂತನ ಮಗ ಭರತನಿರುವನೋ ಅಲ್ಲಿ ನೀನು ವಿಹರಿಸುತ್ತೀಯೆ! ಇಗೋ

ಮೂರುಲೋಕಗಳನ್ನೂ ಪಾವನಗೊಳಿಸುವ ಪುಣ್ಯ ದೇವನದಿ ಆಕಾಶಗಂಗೆಯಿದು! ಅಲ್ಲಿ ಸ್ನಾನಮಾಡಿ ನಿನ್ನದೇ ಲೋಕಕ್ಕೆ ನೀನು ಹೋಗುವೆ! ಅಲ್ಲಿ ಸ್ನಾನಮಾಡಿದರೆ ನಿನ್ನ ಮನುಷ್ಯ ಭಾವವು ಹೊರಟುಹೋಗುತ್ತದೆ. ಶೋಕವನ್ನು ಕಳೆದುಕೊಂಡು, ನಿರಾಯಾಸನಾಗಿ, ವೈರದಿಂದ ಬಿಡುಗಡೆಯೂ ಆಗುತ್ತದೆ."

ಕೌರವೇಂದ್ರ ಯುಧಿಷ್ಠಿರನಿಗೆ ದೇವೇಂದ್ರನು ಹೀಗೆ ಹೇಳಲು ಮೂರ್ತಿಮತ್ತಾಗಿದ್ದ ಸಾಕ್ಷಾತ್ ಧರ್ಮನು ತನ್ನ ಮಗನಿಗೆ ಇಂತೆಂದನು:

"ರಾಜನ್! ಮಹಾಪ್ರಾಜ್ಞ! ಮಗನೇ! ನಿನಗೆ ನನ್ನ ಮೇಲಿರುವ ಭಕ್ತಿ, ಸತ್ಯ ವಾಕ್ಯ, ಕ್ಷಮೆ ಮತ್ತು ದಮಗಳಿಂದ ನಾನು ಪ್ರೀತನಾಗಿದ್ದೇನೆ. ಇದು ನಾನು ನಡೆಸಿದ ನಿನ್ನ ಮೂರನೆಯ ಪರೀಕ್ಷೆಯಾಗಿತ್ತು. ಎಷ್ಟೇ ಪ್ರಯತ್ನಪಟ್ಟರೂ ನಿನ್ನ ಸ್ವಭಾವದಿಂದ ವಿಚಲಿತನನ್ನಾಗಿಸಲು ನನಗೆ ಸಾಧ್ಯವಾಗಲಿಲ್ಲ! ಮೊಟ್ಟಮೊದಲನೆಯದಾಗಿ ನೀನು ದ್ವೈತವನದ ಬಳಿಯಲ್ಲಿ ಅರಣಿಯನ್ನು ಹುಡುಕುತ್ತಿದ್ದಾಗ ನಿನ್ನನ್ನು ಪರೀಕ್ಷಿಸಿದ್ದೆ ಮತ್ತು ನೀನು ಅದರಲ್ಲಿ ಉತ್ತೀರ್ಣನಾಗಿದ್ದೆ. ದ್ರೌಪದಿ ಮತ್ತು ನಿನ್ನ ಸೋದರರು ಅಲ್ಲಿ ವಿನಾಶರಾದಾಗ ನಾಯಿಯ ರೂಪವನ್ನು

ಧರಿಸಿ ನಾನು ಪುನಃ ನಿನ್ನನ್ನು ಪರೀಕ್ಷಿಸಿದೆ. ಸಹೋದರರಿಗಾಗಿ ಇಲ್ಲಿ ನೀನು ನಿಲ್ಲಲು ಬಯಸಿದ ಇದು ಮೂರನೆಯ ಪರೀಕ್ಷೆಯಾಗಿತ್ತು. ಈಗ ನೀನು ವಿಶುದ್ಧನೂ, ಸುಖಿಯೂ, ಪಾಪಗಳನ್ನು ಕಳೆದುಕೊಂಡವನೂ ಆಗಿರುವೆ! ನಿನ್ನ ಈ ಸಹೋದರರು ನರಕದಲ್ಲಿಲ್ಲ. ಇದೊಂದು ಮಹೇಂದ್ರ ದೇವರಾಜನು ಆಯೋಜಿಸಿದ ಮಾಯೆಯಾಗಿತ್ತು. ಮಗೂ! ಎಲ್ಲ ರಾಜರೂ ಅವಶ್ಯಕವಾಗಿ ನರಕವನ್ನು ನೋಡಲೇಬೇಕು. ಆದುದರಿಂದ ನೀನು ಮುಹೂರ್ತಕಾಲ ಈ ಮಹಾದುಃಖವನ್ನು ಅನುಭವಿಸಬೇಕಾಯಿತು. ಸವ್ಯಸಾಚಿಯಾಗಲೀ, ಭೀಮನಾಗಲೀ, ಪುರುಷರ್ಷಭ ಯಮಳರಾಗಲೀ, ಸತ್ಯವಾಗ್ಮಿ ಶೂರ ಕರ್ಣನಾಗಲೀ ದೀರ್ಘಕಾಲ ನರಕಕ್ಕೆ ಅರ್ಹರಾದವರಲ್ಲ. ರಾಜಪುತ್ರಿ ಕೃಷ್ಣೆಯೂ ಕೂಡ ನರಕಾರ್ಹಳಲ್ಲ. ಭರತಶ್ರೇಷ್ಠ! ಇಲ್ಲಿ ಬಾ! ತ್ರಿಲೋಕಗಳಲ್ಲಿ ಹರಿಯುವ ಗಂಗೆಯನ್ನು ನೋಡು!”

ಅವನು ಹೀಗೆ ಹೇಳಲು ಆ ರಾಜರ್ಷಿಯು ಧರ್ಮ ಮತ್ತು ಸರ್ವ ದೇವತೆಗಳೊಂದಿಗೆ ಋಷಿಗಳು ಸಂಸ್ತುತಿಸುವ ಪಾವನೀ ಪುಣ್ಯೆ ದೇವನದಿ ಗಂಗೆಯಿದ್ದಲ್ಲಿಗೆ ಹೋದನು. ಅಲ್ಲಿ ಮುಳುಗಿ ರಾಜನು ತನ್ನ

ಮಾನುಷೀ ಶರೀರವನ್ನು ತ್ಯಜಿಸಿದನು. ಆ ಜಲದಲ್ಲಿ ಮುಳುಗಿ ಧರ್ಮರಾಜ ಯುಧಿಷ್ಠಿರನು ದಿವ್ಯ ಶರೀರನಾಗಿ ವೈರವಿಲ್ಲದವನಾಗಿ, ಸಂತಾಪಗಳನ್ನು ಕಳೆದುಕೊಂಡನು. ಅನಂತರ ಧೀಮಂತ ಕುರುರಾಜ ಯುಧಿಷ್ಠಿರನು ಧರ್ಮನ ಸಹಿತ, ದೇವತೆಗಳಿಂದ ಸುತ್ತುವರೆಯಲ್ಪಟ್ಟು, ಸ್ತುತಿಸುತ್ತಿದ್ದ ಮಹರ್ಷಿಗಳೊಂದಿಗೆ ಹೊರಟನು.

ಅನಂತರ ರಾಜಾ ಯುಧಿಷ್ಠಿರನು ದೇವತೆಗಳು ಮತ್ತು ಋಷಿ-ಮರುದ್ಗಣಗಳಿಂದ ಪೂಜ್ಯನಾಗಿ ಆ ಕುರುಪುಂಗವರು ಇದ್ದಲ್ಲಿಗೆ ಬಂದನು. ಅಲ್ಲಿ ಅವನು ಬ್ರಾಹ್ಮೀ ತೇಜಸ್ಸಿನ ದೇಹವನ್ನು ಧರಿಸಿದ್ದ ಗೋವಿಂದನನ್ನು ನೋಡಿದನು. ಅವನು ಹಿಂದೆ ನೋಡಿದ್ದ ರೂಪದಲ್ಲಿಯೇ ಇದ್ದುದರಿಂದ ಗುರುತಿಸಲ್ಪಟ್ಟನು. ಅವನು ತನ್ನದೇ ದೇಹದ ಕಾಂತಿಯಿಂದ ಬೆಳಗುತ್ತಿದ್ದನು. ಚಕ್ರವೇ ಮೊದಲಾದ ಘೋರ ದಿವ್ಯ ಆಯುಧಗಳು ಪುರುಷಸ್ವರೂಪದಲ್ಲಿ ಅವನ ಸೇವೆಗೈಯುತ್ತಿದ್ದವು. ವೀರ ಸುವರ್ಚಸ ಫಲ್ಗುನನು ಅವನ ಸೇವೆಯಲ್ಲಿ ನಿಂತಿದ್ದನು. ಆ ಪ್ರದೇಶದ ಇನ್ನೊಂದು ಕಡೆಯಲ್ಲಿ ಕುರುನಂದನನು ದ್ವಾದಶ ಆದಿತ್ಯರ ಸಹಿತ ಕುಳಿತಿದ್ದ ಶಸ್ತ್ರಧಾರಿಗಳಲ್ಲಿ ಶ್ರೇಷ್ಠ ಕರ್ಣನನ್ನು ಕಂಡನು. ಆ ಪ್ರದೇಶದ ಇನ್ನೊಂದು ಕಡೆಯಲ್ಲಿ ಮರುದ್ಗಣಗಳಿಂದ ಆವೃತನಾಗಿ ತನ್ನದೇ ಶರೀರವನ್ನು ಧರಿಸಿದ್ದ ಪ್ರಭು ಭೀಮಸೇನನನ್ನು ನೋಡಿದನು.

ಹಾಗೆಯೇ ಅಶ್ವಿನಿಯರ ಸ್ಥಾನದಲ್ಲಿ ತಮ್ಮದೇ ತೇಜಸ್ಸಿನಿಂದ ಬೆಳಗುತ್ತಿರುವ ನಕುಲ-ಸಹದೇವರನ್ನೂ ಕುರುನಂದನನು ನೋಡಿದನು. ಹಾಗೆಯೇ ಅವನು ಕಮಲದ ಹೂವುಗಳ ಮಾಲೆಯನ್ನು ಧರಿಸಿ, ತನ್ನ ದೇಹದ ಸೂರ್ಯತೇಜಸ್ಸಿನಿಂದ ಸ್ವರ್ಗವನ್ನೇ ಬೆಳಗಿಸುತ್ತ ನಿಂತಿರುವ ಪಾಂಚಾಲಿಯನ್ನೂ ನೋಡಿದನು.

ಕೂಡಲೇ ಅವಳ ಕುರಿತು ತಿಳಿಯಲು ಬಯಸಿದ ರಾಜಾ ಯುಧಿಷ್ಠಿರನಿಗೆ ದೇವರಾಜ ಭಗವಾನ್ ಇಂದ್ರನು ಹೇಳತೊಡಗಿದನು: "ಯುಧಿಷ್ಠಿರ! ನಿನಗೋಸ್ಕರವಾಗಿ ಈ ಶ್ರೀಯು ಅಯೋನಿಜೆ, ಲೋಕಕಾಂತೆ, ಪುಣ್ಯಗಂಧೀ ದ್ರೌಪದಿಯ ರೂಪವನ್ನು ತಾಳಿ ಮನುಷ್ಯಲೋಕಕ್ಕೆ ಹೋಗಿದ್ದಳು. ದ್ರುಪದನ ಕುಲದಲ್ಲಿ ಹುಟ್ಟಿ ನಿಮ್ಮೆಲ್ಲರನ್ನು ಅವಲಂಬಿಸಿದ್ದ ನಿಮ್ಮೆಲ್ಲರ ಪ್ರೀತಿಗಾಗಿ ಇದ್ದ ಇವಳನ್ನು ಶೂಲಪಾಣಿಯೇ ನಿರ್ಮಿಸಿದ್ದನು. ಈ ಐವರು ಪಾವಕ ಪ್ರಭೆಗಳುಳ್ಳ ಗಂಧರ್ವರು ಅಮಿತ ತೇಜಸ್ವಿ ನಿಮ್ಮಿಂದ ದ್ರೌಪದಿಯಲ್ಲಿ ಹುಟ್ಟಿದ ಮಕ್ಕಳು. ಈ ಗಂಧರ್ವರಾಜನನ್ನು ನೋಡು! ಇವನು ನಿನ್ನ ತಂದೆಯ ಅಣ್ಣ ಮನೀಷಿ ಧೃತರಾಷ್ಟ್ರನೆಂದು ತಿಳಿ. ಇವನು ನಿನ್ನ ಮೊದಲೇ ಹುಟ್ಟಿದ ಕೌಂತೇಯ, ಅಣ್ಣ. ಪಾವಕನಂತೆ ಬೆಳಗುತ್ತಿದ್ದ ಈ ಅಗ್ರಜ ಶ್ರೇಷ್ಠ ಸೂರ್ಯಪುತ್ರನು ರಾಧೇಯನೆಂದು ವಿಖ್ಯಾತನಾಗಿದ್ದನು.

ಆದಿತ್ಯನೊಂದಿಗೆ ಹೋಗುತ್ತಿರುವ ಇವನನ್ನು ನೋಡು! ಈಗ ದೇವತೆಗಳ, ವಸುಗಳ ಮತ್ತು ಮರುತ್ ಗಣಗಳಲ್ಲಿ ಕುಳಿತಿರುವ ಸಾತ್ಯಕಿಯೇ ಮೊದಲಾದ ವೀರರನ್ನೂ, ಮಹಾರಥ ಭೋಜರನ್ನೂ, ವೃಷ್ಣಿ-ಅಂಧಕ ಮಹಾರಥರನ್ನೂ ನೋಡು! ಸೋಮನೊಂದಿಗೆ ನಿಶಾಕರನಂತೆ ಬೆಳಗುತ್ತಿರುವ ಅಪರಾಜಿತ ಸೌಭದ್ರ ಮಹೇಷ್ವಾಸ ಅಭಿಮನ್ಯುವನ್ನು ನೋಡು! ಇಗೋ ಇವನು ಸದಾ ವಿಮಾನದಲ್ಲಿ ಕುಂತೀ ಮಾದ್ರಿಯರೊಡನೆ ನನ್ನಲ್ಲಿಗೆ ಬರುವ ನಿನ್ನ ತಂದೆ ಮಹೇಷ್ವಾಸ ಪಾಂಡು! ವಸುಗಳೊಂದಿಗಿರುವ ಶಾಂತನವ ನೃಪ ಭೀಷ್ಮನನ್ನು ನೋಡು! ಬೃಹಸ್ಪತಿಯ ಪಕ್ಕದಲ್ಲಿರುವವನು ನಿನ್ನ ಗುರು ದ್ರೋಣನೆನ್ನುವುದನ್ನು ತಿಳಿದುಕೋ! ನಿನ್ನ ಪರವಾಗಿ ಯುದ್ಧಮಾಡಿದ ಇನ್ನೂ ಇತರ ಮಹೀಪಾಲರು ಗಂಧರ್ವರು, ಯಕ್ಷರು ಮತ್ತು ಪುಣ್ಯಜನರೊಂದಿಗೆ ಸೇರಿದ್ದಾರೆ. ಇನ್ನೂ ಕೆಲವು ನರಸತ್ತಮರು ದೇಹವನ್ನು ತೊರೆದು ಪುಣ್ಯ ಮಾತು-ಯೋಚನೆ ಮತ್ತು ಕರ್ಮಗಳಿಂದ ದೊರೆಯುವ ಗುಹ್ಯಕರ ಲೋಕವನ್ನು ಸೇರಿದ್ದಾರೆ.”

ಎಲ್ಲರ ಕರ್ಮಗಳೂ ಅಂತ್ಯವಾಗುವವೇ! ದೇವತೆಗಳ ಈ ರಹಸ್ಯದ ಕುರಿತು ದಿವ್ಯಚಕ್ಷುಷಿ, ಅಗಾಧಬುದ್ಧಿ, ಸರ್ವಜ್ಞ, ಸರ್ವಕರ್ಮಗಳ ಮಾರ್ಗವನ್ನು ತಿಳಿದ ಪಾರಶರ್ಯ ವ್ಯಾಸನು ಹೇಳಿದ್ದನು. ಮಹಾದ್ಯುತಿ

ಭೀಷ್ಮನು ವಸುವಿನ ಮಹಾತೇಜಸ್ಸನ್ನೇ ಪಡೆದನು. ಆದುದರಿಂದ ಆಗ ಎಂಟು ವಸುಗಳು ಕಾಣಿಸಿಕೊಂಡರು. ದ್ರೋಣನು ಅಂಗಿರಸರಲ್ಲಿ ಶ್ರೇಷ್ಠ ಬೃಹಸ್ಪತಿಯನ್ನು ಪ್ರವೇಶಿಸಿದನು. ಹಾರ್ದಿಕ್ಯ ಕೃತವರ್ಮನು ಮರುದ್ಗಣಗಳನ್ನು ಸೇರಿದನು. ಪ್ರದ್ಯುಮ್ನನು ಎಲ್ಲಿಂದ ಬಂದಿದ್ದನೋ ಆ ಸನತ್ಕುಮಾರನನ್ನು ಪ್ರವೇಶಿಸಿದನು. ಧೃತರಾಷ್ಟ್ರನು ಧನೇಶ ಕುಬೇರನ ದುರಾಸದ ಲೋಕವನ್ನು ಪಡೆದನು. ಧೃತರಾಷ್ಟ್ರನೊಂದಿಗೆ ಯಶಸ್ವಿನೀ ಗಾಂಧಾರಿಯೂ ಹೋದಳು. ಇಬ್ಬರು ಪತ್ನಿಯರೊಂದಿಗೆ ಪಾಂಡುವು ಮಹೇಂದ್ರನ ಸದನಕ್ಕೆ ಹೋದನು. ವಿರಾಟ-ದ್ರುಪದರು, ಪಾರ್ಥಿವ ಧೃಷ್ಟಕೇತು, ನಿಶಠ, ಅಕ್ರೂರ, ಸಾಂಬ, ಭಾನು, ಕಂಪ, ವಿಡೂರಥ, ಭೂರಿಶ್ರವ, ಶಲ, ಪೃಥಿವೀಪತಿ ಭೂರಿ, ಉಗ್ರಸೇನ, ಕಂಸ, ವೀರ್ಯವಾನ್ ವಸುದೇವ, ಉತ್ತರ, ಜೊತೆಗೆ ಅವನ ಸಹೋದರ ನರಪುಂಗವ ಶಂಖ ಈ ನರಸತ್ತಮರು ವಿಶ್ವೇ ದೇವತೆಗಳನ್ನು ಪ್ರವೇಶಿಸಿದರು. ವರ್ಚಾ ಎಂಬ ಹೆಸರಿನ ಮಹಾತೇಜಸ್ವೀ ಪ್ರತಾಪವಾನ್ ಸೋಮಪುತ್ರನು ನರಸಿಂಹ ಫಲ್ಗುನನ ಮಗ ಅಭಿಮನ್ಯುವಾಗಿದ್ದನು. ಬೇರಾವ ಪುರುಷನೂ ಮಾಡಿರದಂಥಹ ಯುದ್ಧವನ್ನು ಕ್ಷತ್ರಧರ್ಮದಂತೆ ಮಾಡಿ ಆ ಧರ್ಮಾತ್ಮ ಮಹಾರಥನು ಕರ್ಮಫಲಗಳು ಅಂತ್ಯವಾಗಲು ಸೋಮನನ್ನು ಪ್ರವೇಶಿಸಿದನು.

ಕರ್ಣನು ತಂದೆ ರವಿಯನ್ನು ಪ್ರವೇಶಿಸಿದನು. ಶಕುನಿಯು ದ್ವಾಪರನನ್ನೂ ಧೃಷ್ಟದ್ಯುಮ್ನನು ಅಗ್ನಿಯನ್ನೂ ಪ್ರವೇಶಿಸಿದರು. ಧೃತರಾಷ್ಟ್ರನ ಮಕ್ಕಳೆಲ್ಲರೂ ಬಲೋತ್ಕಟ ದುಷ್ಟ ರಾಕ್ಷಸರಾಗಿದ್ದರು. ಶಸ್ತ್ರಗಳಿಂದ ಪೂತರೂ, ಮಹಾತ್ಮರೂ, ಉತ್ತಮರೂ ಆಗಿ ಅವರು ಸ್ವರ್ಗಕ್ಕೆ ತೆರಳಿದರು. ಭಗವಾನ್ ಅನಂತ ದೇವನು ಪಿತಾಮಹನ ನಿಯೋಗದಂತೆ ತನ್ನ ಯೋಗದಿಂದ ಭೂಮಿಯನ್ನು ಹೊರಲು ರಸಾತಲವನ್ನು ಪ್ರವೇಶಿಸಿದನು. ವಾಸುದೇವನು ಕೈಹಿಡಿದಿದ್ದ ಹದಿನಾರು ಸಾವಿರ ಸ್ತ್ರೀಯರು ಸರಸ್ವತಿಯಲ್ಲಿ ಮುಳುಗಿ ಕಾಲಾಂತರದಲ್ಲಿ ಅಪ್ಸರೆಯರಾಗಿ ವಾಸುದೇವನ ಬಳಿಸೇರಿದರು. ಆ ಮಹಾಯುದ್ಧದಲ್ಲಿ ಹತರಾದ ಘಟೋತ್ಕಚನೇ ಮೊದಲಾದ ಮಹಾರಥ ವೀರರೆಲ್ಲರೂ ದೇವತೆಗಳೂ ಯಕ್ಷರೂ ಆದರು. ದುರ್ಯೋಧನನ ಸಹಾಯಕರಾಗಿದ್ದ ಆ ಪುರುಷರ್ಷಭರು ರಾಕ್ಷಸರಾಗಿದ್ದರೆಂದು ಹೇಳುತ್ತಾರೆ. ಅವರೆಲ್ಲರೂ ಕೂಡ ಕ್ರಮೇಣವಾಗಿ ಉತ್ತಮ ಲೋಕಗಳನ್ನು ಪಡೆದು ಮಹೇಂದ್ರ, ಧೀಮಂತ ಕುಬೇರ ಮತ್ತು ವರುಣನ ಭವನ-ಲೋಕಗಳನ್ನು ಪ್ರವೇಶಿಸಿದರು.

## ಮಹಾಭಾರತ ಕಥಾಸಮಾಪ್ತಿ

ಹೀಗೆ ವೈಶಂಪಾಯನನು ಜನಮೇಜಯನಿಗೆ ಕುರು-ಪಾಂಡವರ ಸಮಗ್ರ ಚರಿತ್ರೆಯನ್ನು ವಿಸ್ತಾರವಾಗಿ ಹೇಳಿ ಮುಗಿಸಿದನು.

ಸರ್ಪಯಜ್ಞದ ಕರ್ಮಗಳ ಮಧ್ಯೆ ದ್ವಿಜಶ್ರೇಷ್ಠ ವೈಶಂಪಾಯನನಿಂದ ಇದನ್ನು ಕೇಳಿದ ರಾಜಾ ಜನಮೇಜಯನು ಬಹಳ ವಿಸ್ಮಿತನಾದನು. ಅನಂತರ ಯಾಜಕರು ಅವನ ಆ ಕರ್ಮವನ್ನು ಮಾಡಿ ಪೂರೈಸಿದರು. ಸರ್ಪಗಳನ್ನು ಉಳಿಸಿ ಆಸ್ತೀಕನೂ ಪ್ರೀತನಾದನು. ಆಗ ಅವನು ಅಲ್ಲಿದ್ದ ಸರ್ವ ದ್ವಿಜಾತಿಯವರಿಗೆ ದಕ್ಷಿಣೆಗಳಿಂದ ತೃಪ್ತಿಗೊಳಿಸಿದನು. ರಾಜನಿಂದ ಪೂಜಿತರಾದ ಅವರು ಎಲ್ಲಿಂದ ಬಂದಿದ್ದರೋ ಅಲ್ಲಿಗೆ ಹೊರಟು ಹೋದರು. ಆ ವಿಪ್ರರನ್ನು ಬೀಳ್ಕೊಟ್ಟು ರಾಜಾ ಜನಮೇಜಯನೂ ಕೂಡ ತಕ್ಷಶಿಲೆಯಿಂದ ಪುನಃ ಹಸ್ತಿನಾಪುರಕ್ಕೆ ಹಿಂದಿರುಗಿದನು.

ಜನಮೇಜಯನ ಸರ್ಪಸತ್ರದಲ್ಲಿ ವ್ಯಾಸನ ಆಜ್ಞೆಯಂತೆ ವೈಶಂಪಾಯನನು ಹೇಳಿದ್ದ ಎಲ್ಲವನ್ನೂ ನೈಮಿಷಾರಣ್ಯದಲ್ಲಿ ಶೌನಕಾದಿ ಮುನಿಗಳಿಗೆ ಸೂತ ಪುರಾಣಿಕ ಉಗ್ರಶ್ರವನು ಹೇಳಿ ಮುಗಿಸಿದನು.

ಇತಿಹಾಸವೆಂದು ಕರೆಯಲ್ಪಡುವ ಈ ಪುಣ್ಯ ಉತ್ತಮ ಕೃತಿಯನ್ನು ನಿಯತನೂ ಸತ್ಯವಾದಿಯೂ ಆದ ಸರ್ವಜ್ಞ, ವಿಧಿಜ್ಞ, ಧರ್ಮಜ್ಞ, ಸಾಧು,

ಅತೀಂದ್ರಿಯ, ಶುಚಿ, ತಪಸ್ವಿ, ಭಾವಿತಾತ್ಮ, ಮುನಿ ಕೃಷ್ಣನು ರಚಿಸಿದನು. ಸಿದ್ಧೈಶ್ವರ್ಯಗಳಿಂದ ಕೂಡಿದ, ಸಾಂಖ್ಯಯೋಗದ ಜ್ಞಾನಿ, ಅನೇಕತಂತ್ರಗಳ ಆ ಜ್ಞಾನಿಯು ಲೋಕದಲ್ಲಿ ಮಹಾತ್ಮ ಪಾಂಡವರ ಮತ್ತು ಭೂರಿದ್ರವಿಣ ತೇಜಸ್ವೀ ಅನ್ಯ ಕ್ಷತ್ರಿಯರ ಕೀರ್ತಿಯನ್ನು ಪ್ರಥಿತಗೊಳಿಸಿದನು. ಇದನ್ನು ಸದಾ ಪರ್ವ-ಪರ್ವಗಳಲ್ಲಿ ಹೇಳುವ ವಿದ್ವಾಂಸನು ಪಾಪಗಳನ್ನು ತೊಳೆದು ಪೂತಾತ್ಮನಾಗಿ ಸ್ವರ್ಗವನ್ನು ಪಡೆದು ನಂತರ ಬ್ರಹ್ಮನನ್ನು ಸೇರುತ್ತಾನೆ. ಶ್ರಾದ್ಧದಲ್ಲಿ ಇದನ್ನು, ಅಥವಾ ಕೊನೆಯದಾಗಿ ಶ್ಲೋಕದ ಕಾಲುಭಾಗವನ್ನಾದರೂ ಬ್ರಾಹ್ಮಣರಿಗೆ ಹೇಳಿ ಕೇಳಿಸಿದರೆ ನೀಡಿದ ಅನ್ನಪಾನಗಳು ಅಕ್ಷಯವಾಗಿ ಪಿತೃಗಳನ್ನು ಸೇರುತ್ತವೆ. ಸಾಯಂಕಾಲ ಈ ಮಹಾಭಾರತವನ್ನು ಹೇಳಿದರೆ ಹಗಲಿನಲ್ಲಿ ಮಾಡಿದ ಮಾನಸಿಕ ಅಥವಾ ಇಂದ್ರಿಯಗಳಿಂದ ಮಾಡಿದ ಪಾಪಗಳಿಂದ ಮುಕ್ತನಾಗುತ್ತಾನೆ. ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳ ಕುರಿತು ಇದರಲ್ಲಿರುವವು ಬೇರೆಕಡೆಯೂ ಇವೆ. ಆದರೆ ಇಲ್ಲಿ ಇಲ್ಲದೇ ಇರುವುದು ಬೇರೆಲ್ಲಿಯೂ ಇಲ್ಲ. ವೃದ್ಧಿಯನ್ನು ಬಯಸುವ ರಾಜರೂ, ರಾಜಸುತರೂ, ಗರ್ಭಿಣಿ ಸ್ತ್ರೀಯರೂ ಜಯವೆಂಬ ಹೆಸರಿನ ಈ ಇತಿಹಾಸವನ್ನು ಕೇಳಬೇಕು. ಸ್ವರ್ಗವನ್ನು ಬಯಸಿದವರಿಗೆ ಸ್ವರ್ಗವು ದೊರಕುತ್ತದೆ. ಜಯವನ್ನು ಬಯಸಿದವರಿಗೆ

ಜಯವು ಲಭಿಸುತ್ತದೆ. ಗರ್ಭಿಣಿಯರಿಗೆ ಪುತ್ರನಾಗಲೀ ಅಥವಾ ಬಹುಭಾಗ್ಯವಂತ ಕನ್ಯೆಯರಾಗಲೀ ದೊರೆಯುತ್ತಾರೆ. ಧರ್ಮದ ಕಾಮನೆಯಿಂದಾಗಿ ಪ್ರಭು ಕೃಷ್ಣದ್ವೈಪಾಯನನು ಮೊದಲು ಇರದಿದ್ದ ಈ ಭಾರತವನ್ನು ಮೂರು ವರ್ಷಗಳ ಕಾಲ ನಿರಂತರವಾಗಿ ರಚಿಸಿದನು. ಅನಂತರ ನಾರದನು ಇದನ್ನು ದೇವತೆಗಳಿಗೆ, ಅಸಿತ ದೇವಲನು ಪಿತೃಗಳಿಗೆ, ಶುಕನು ಯಕ್ಷ-ರಾಕ್ಷಸರಿಗೆ ಮತ್ತು ವೈಶಂಪಾಯನನು ಮನುಷ್ಯರಿಗೆ ಹೇಳಿದರು.

ಮಹಾ ಅರ್ಥವುಳ್ಳ ವೇದಸಮ್ಮಿತವಾದ ಈ ಪುಣ್ಯ ಇತಿಹಾಸವನ್ನು ಬ್ರಾಹ್ಮಣರೇ ಮೊದಲಾದ ಮೂರು ವರ್ಣದವರಿಗೆ ಹೇಳಬೇಕು. ಅಂಥಹ ಮನುಷ್ಯನು ಪಾಪದಿಂದ ಮುಕ್ತನಾಗಿ ಕೀರ್ತಿಯನ್ನು ಪಡೆಯುತ್ತಾನಲ್ಲದೇ ಪರಮ ಸಿದ್ಧಿಯನ್ನು ಪಡೆಯುತ್ತಾನೆ ಎನ್ನುವುದರಲ್ಲಿ ಸಂಶಯವೇ ಇಲ್ಲ. ಶ್ರದ್ಧಾವಂತನಾಗಿ ಭಾರತದ ಶ್ಲೋಕದ ಕಾಲುಭಾಗವನ್ನಾದರೂ ಅಧ್ಯಯನ ಮಾಡಿ ಅರ್ಥಮಾಡಿಕೊಂಡರೆ ಆ ಪುಣ್ಯವು ಅವನ ಸರ್ವ ಪಾಪಗಳೂ ಉಳಿಯದಂತೆ ತೊಳೆದು ಶುದ್ಧೀಕರಿಸುತ್ತದೆ.

ಹಿಂದೆ ಮಹರ್ಷಿ ಭಗವಾನ್ ವ್ಯಾಸನು ಈ ಕೃತಿಯನ್ನು ಈ ನಾಲ್ಕು ಶ್ಲೋಕಗಳೊಂದಿಗೆ ತನ್ನ ಮಗ ಭಗವಾನ್ ಶುಕನಿಗೆ ಕಲಿಸಿದ್ದನು: “ಈ

ಸಂಸಾರದಲ್ಲಿ ಸಹಸ್ರಾರು ಮಾತಾಪಿತೃಗಳೂ, ನೂರಾರು ಪತ್ನಿ-ಪುತ್ರರೂ ಆಗಿಹೋಗಿದ್ದಾರೆ ಮತ್ತು ಮುಂದೆ ಕೂಡ ಆಗುತ್ತಾರೆ. ಸಹಸ್ರಾರು ಹರ್ಷವನ್ನು ಕೊಡುವ ಮತ್ತು ನೂರಾರು ಭಯವನ್ನು ಕೊಡುವ ಸಂದರ್ಭಗಳು ಪ್ರತಿದಿನ ಮೂಢನನ್ನು ಕಾಡುತ್ತಿರುತ್ತವೆ. ಆದರೆ ಪಂಡಿತನನ್ನಲ್ಲ. ಬಾಹುಗಳನ್ನು ಮೇಲೆತ್ತಿ ಹೀಗೆ ಕೂಗಿಕೊಳ್ಳುತ್ತಿರುವ ನನ್ನನ್ನು ಯಾರೂ ಕೇಳುತ್ತಿಲ್ಲ:

> "ಅರ್ಥ-ಕಾಮಗಳು ಧರ್ಮದಿಂದಲೇ ದೊರೆಯುತ್ತವೆ. ಆದರೂ ಧರ್ಮದಿಂದ ಏಕೆ ನಡೆದುಕೊಳ್ಳಬಾರದು? ಕಾಮಕ್ಕಾಗಲೀ, ಭಯದಿಂದಾಗಲೀ, ಲೋಭದಿಂದಾಗಲೀ, ಜೀವವನ್ನು ಉಳಿಸಿಕೊಳ್ಳಲಿಕ್ಕೂ ಕೂಡ ಧರ್ಮವನ್ನು ತ್ಯಜಿಸಬಾರದು. ಧರ್ಮವು ಯಾವಾಗಲೂ ಇರುವಂಥಹುದು; ಸುಖ-ದುಃಖಗಳು ಯಾವಾಗಲೂ ಇರುವಂಥವುಗಳಲ್ಲ. ಜೀವವು ನಿತ್ಯ; ಯಾವುದರ ಮೂಲಕ ಅದು ಜೀವಿಸುತ್ತದೆಯೋ ಆ ದೇಹವು ಅನಿತ್ಯವಾದುದು."

ಬೆಳಿಗ್ಗೆ ಎದ್ದು ಈ ಭಾರತ ಸಾವಿತ್ರಿಯನ್ನು ಯಾರು ಓದುತ್ತಾರೋ ಅವರು ಸಂಪೂರ್ಣ ಭಾರತವನ್ನು ಓದಿದುರ ಫಲವನ್ನು ಪಡೆದು ಪರಬ್ರಹ್ಮನನ್ನು ಸೇರುತ್ತಾರೆ. ಭಗವಾನ್ ಸಮುದ್ರ ಮತ್ತು ಹಿಮವಾನ್

ಗಿರಿಗಳೆರಡನ್ನೂ ಹೇಗೆ ರತ್ನನಿಧಿಗಳೆಂದು ಹೇಳುತ್ತಾರೆಯೋ ಹಾಗೆ ಭಾರತವನ್ನೂ ರತ್ನನಿಧಿಯೆಂದು ಹೇಳುತ್ತಾರೆ. ಮಹಾಭಾರತವನ್ನು ಸಮಾಹಿತನಾಗಿ ಓದುವವನು ಪರಮ ಸಿದ್ಧಿಯನ್ನು ಪಡೆಯುತ್ತಾನೆ ಎನ್ನುವುದರಲ್ಲಿ ಸಂಶಯವೇ ಇಲ್ಲ. ದ್ವೈಪಾಯನನ ತುಟಿಗಳಿಂದ ಹೊರಬಂದ ಈ ಅಪ್ರಮೇಯ ಕೃತಿಯು ಪುಣ್ಯ, ಪವಿತ್ರ, ಮಂಗಳಕರ ಮತ್ತು ಪಾಪಗಳನ್ನು ಓಡಿಸುತ್ತದೆ. ಇಂಥಹ ಭಾರತವನ್ನು ಓದುವಾಗ ಕೇಳಿದವನು ಪುಷ್ಕರ ತೀರ್ಥದಲ್ಲಿ ಸ್ನಾನಮಾಡುವ ಅವಶ್ಯಕತೆಯಾದರೂ ಏನಿದೆ?